ಅಜ್ಞಾತ ವಿರಚಿತ

ಸಿದ್ಧಾಂತ ಶಿಖಾಮಣಿ ವ್ಯಾಖ್ಯೆ

ಪರಿಷ್ಕರಣಕಾರರು

ಜಿ.ಜಿ. ಮಂಜುನಾಥನ್

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು
ಬಾಳೆಹೊನ್ನೂರು - ೫೭೭ ೧೧೨

ಅಜ್ಞಾತ ವಿರಚಿತ

ಸಿದ್ಧಾಂತ ಶಿಖಾಮಣಿ ವ್ಯಾಖ್ಯೆ

ಪರಿಷ್ಕರಣಕಾರರು
ಜಿ.ಜಿ. ಮಂಜುನಾಥನ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

SIDDHANTA SHIKHAMANI- with commentary of Ajnata.
Edited by **G.G. Manjunathan.**
Published by **Kannada Sahitya Parishat**
Pampamahakavi Road, Chamarajapet, Bangalore-560 018.
Pages : xvi + ii + 292; Price : **Rs. 50-00. 2000**

ಮೊದಲನೆಯ ಮುದ್ರಣ : ೨೦೦೦

ಬೆಲೆ : ರೂ. ಐವತ್ತು

ಮುದ್ರಣ
ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮



ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮
ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು
ಬಾಳೆಹೊನ್ನೂರು - ೫೭೭ ೧೧೨



ಶುಭಾಶೀರ್ವಾದ ಸಂದೇಶ

ಮಾನವ ಜೀವನದ ವಿಕಾಸಕ್ಕೆ ಧರ್ಮ ಭದ್ರಬುನಾದಿ. ಧರ್ಮದ ತಳಹದಿಯ ಮೇಲೆ ನಿರ್ಮಾಣಗೊಂಡ ಸಮಾಜ ಉನ್ನತಿಗೆ ಕಾರಣವಾಗುತ್ತದೆ. ಸಾಹಿತ್ಯ ಮತ್ತು ಸಂಸ್ಕೃತಿ ಧರ್ಮದ ಎರಡು ಕಣ್ಣುಗಳು ಇದ್ದಂತೆ.

ಆಚಾರ್ಯರ ಸಾಹಿತ್ಯ ಬೆಟ್ಟದಷ್ಟು ಇದ್ದರೂ ಕೃಷಿ ಇಲ್ಲದೇ ಜನಮನಮುಟ್ಟಲಿಲ್ಲ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಇಡೀ ಮಾನವ ಬದುಕಿಗೆ ಅನ್ವಯವಾಗುವ ವಿಶಾಲ ಸಂದೇಶವನ್ನು ಕೊಟ್ಟಿದ್ದಾರೆ. ಅಹಿಂಸಾದಿ ಧ್ಯಾನ ಪರ್ಯಂತರ ದಶಧರ್ಮ ಸೂತ್ರ ನಿರೂಪಿಸಿ ಮನುಕುಲದ ಏಳಿಗೆಗೆ ಅವಿರತ ಶ್ರಮಿಸಿದ್ದಾರೆ. ಅವರ ಆ ಒಲವು-ನಿಲವು ಎಂದೆಂದೂ ಮರೆಯಲಾಗದು.

ಆಚಾರ್ಯರು ಧಾರ್ಮಿಕ ಸತ್ಕ್ರಾಂತಿಯ ಜೊತೆಗೆ ಸಾಮಾಜಿಕ ಕ್ರಾಂತಿಯನ್ನು ಸಹ ಮಾಡಿದ್ದು ಉಲ್ಲೇಖನೀಯ. ಕಾಲಗರ್ಭದಲ್ಲಿ ಕೆಲವು ಸತ್ಯಸಂಗತಿಗಳು ಪ್ರಸಾರಗೊಳ್ಳದೇ ಇರುವುದರಿಂದ ನಾವಿಂದು ಆತಂಕಪಡಬೇಕಾಗಿದೆ. ಆಚಾರ್ಯರ ಸಾಹಿತ್ಯವನ್ನು ಸಂಶೋಧಿಸಿದಷ್ಟು ಹೊಸಹೊಸ ವಿಚಾರಗಳು ಕಂಡುಬರುತ್ತವೆ.

ವೀರಾಗಮದ ನಂತರ ಮತ್ತೊಂದು ಸಂಶೋಧಿತ ಕೃತಿ ಹೊರಬರುತ್ತಿದೆ. ಅದುವೆ "ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆ". ಇದೊಂದು ಅಮೂಲ್ಯ ಕೃತಿ. ಶ್ರೀ ಜಗದ್ಗುರು ರೇಣುಕರು ಅಗಸ್ತ್ಯರಿಗೆ ನಿರೂಪಿಸಿದ ಪಾವನ ಕೃತಿ. ಈ ಕೃತಿಯನ್ನು ಕುರಿತು ಅಜ್ಞಾತ ವ್ಯಾಖ್ಯಾನಕಾರ ೧೬ನೆಯ ಶತಮಾನದಲ್ಲಿ ಅಮೂಲ್ಯವಾದ ಹಾಗೂ ಅರ್ಥಪೂರ್ಣವಾದ ವ್ಯಾಖ್ಯೆಯನ್ನು ಬರೆದಿದ್ದು ಸ್ಮರಣೀಯ. ಇದರಲ್ಲಿ ಉತ್ತಮವಾದ ಅಂಶಗಳು ಇರುವುದನ್ನು ಕಣ್ಣಾರೆ ಕಾಣಬಹುದು. ಶ್ರೀ ಜಗದ್ಗುರು ರಂಭಾಪುರಿ ಪೀಠದಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಈ ಹಿಂದೆ ಒಂದು ಲಕ್ಷ ರೂಪಾಯಿ ನಿಧಿ ಇಟ್ಟಿದ್ದರ ಪ್ರತಿಫಲವೇ ಈ ಕೃತಿಯಾಗಿದೆ. ಮೈಸೂರಿನ ಶ್ರೀ ಜಿ. ಜಿ. ಮಂಜುನಾಥನ್ ಇವರು ಸಂಶೋಧಿಸಿ ಆಚಾರ್ಯ ಸಾಹಿತ್ಯ ಬೆಳವಣಿಗೆಗೆ ಪ್ರೇರಕಶಕ್ತಿಯಾಗಿ ಶ್ರಮಿಸಿದ್ದಾರೆ. ಅವರನ್ನು ಎಂದಿಗೂ ಪೀಠ ಮರೆಯುವಂತಿಲ್ಲ. ಈ ಅತ್ಯುತ್ತಮ ಕೃತಿ ಪ್ರಕಟನೆಗಾಗಿ ನಿರಂತರ ಶ್ರಮಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಎನ್. ಬಸವಾರಾಧ್ಯರವರ ಸೇವೆ ಸ್ಮರಣೀಯ. ಅವರ ಅಧಿಕಾರಾವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಳೆದು ಬಲಗೊಳ್ಳಲಿ. ನಮ್ಮ ಈ ದತ್ತಿ ನಿಧಿಯಿಂದ ಪ್ರತಿ ವರ್ಷವೂ ಒಂದೊಂದು ಆಚಾರ್ಯ ಕೃತಿ ರತ್ನಗಳು ಸಂಶೋಧನೆಗೊಂಡು ಹೊರಬರುವಂತಾಗಲಿ. ಇದೊಂದು ಸಂಶೋಧನ ಕೃತಿ. ಇದನ್ನು ಸಂಪೂರ್ಣವಾಗಿ ಓದಿ ಜನತೆ ಆಚಾರ್ಯರ ಚಿಂತನ ಮತ್ತು ಪ್ರಾಚೀನತೆಯನ್ನು ತಿಳಿಯಲಿ. ಇದನ್ನು ವಿಹಂಗಮದೃಷ್ಟಿಯಿಂದ ಅವಲೋಕನ ಮಾಡಿದ ಪೀಠ ಈ ಸಂದೇಶವನ್ನು ದಯಪಾಲಿಸಿದೆ.

ಪರಮದಯಾಳು ಶ್ರೀಪಾರ್ವತಿ ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಂಪಾದಕರಿಗೂ ಪರಿಷತ್ತಿನ ಅಧ್ಯಕ್ಷರಿಗೂ ಹಾಗೂ ಓದುಗ ಎಲ್ಲಾ ಧರ್ಮಾಭಿಮಾನಿಗಳಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಇತ್ಯನಂತಶಿವಾಶಿಷಃ

ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ, ಮಹತ್ವ ಪೂರ್ಣವಾದ ಗ್ರಂಥಗಳನ್ನು ಕುರಿತು ಬಂದಿರುವ ಟೀಕುಗಳನ್ನು ಕೂಡ ಪ್ರಕಟಿಸುತ್ತ ಬಂದಿದೆ. ಹೀಗೆ ಪ್ರಕಟಿಸಿರುವ ಅನೇಕ ಕೃತಿಗಳಲ್ಲಿ ಸಿದ್ಧಾಂತ ಶಿಖಾಮಣಿಯನ್ನು ಕುರಿತು ವ್ಯಾಖ್ಯೆಗಳೂ ಸೇರಿವೆ.

ಸಿದ್ಧಾಂತಶಿಖಾಮಣಿಯ ಕರ್ತೃ, ಕಾಲ, ದೇಶಗಳ ಬಗೆಗೆ ಸಾಕಷ್ಟು ದೀರ್ಘವಾದ ಚರ್ಚೆ ನಡೆದಿದೆ, ಇನ್ನೂ ನಡೆಯುತ್ತಿದೆ. ಇಷ್ಟೊಂದು ವ್ಯಾಪಕವಾದ ಚರ್ಚೆ ವಾಗ್ವಾದಗಳಿಗೆ ಕಾರಣವಾಗಬಹುದಾದ ಈ ಗ್ರಂಥ ಮಹತ್ವವಾದದ್ದೆಂಬುದರಲ್ಲಿ ಅನುಮಾನವಿಲ್ಲ. ವೀರಶೈವರ ಆಚಾರ ಸಂಹಿತೆಯಾದ ಈ ಕೃತಿಯನ್ನು ಕುರಿತು ಅನೇಕ ವಿದ್ವಾಂಸರು ತಮ್ಮ ದೃಷ್ಟಿಕೋನದಿಂದ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ತುಂಬಾ ಅಪರೂಪವಾದ ವ್ಯಾಖ್ಯಾನವನ್ನು ರಚಿಸಿದ ಕರ್ತೃ ಯಾರೆಂದು ಹೇಳಲಾಗದ ಈ ಕೃತಿಯೂ ಕೂಡ ಸಿದ್ಧಾಂತಶಿಖಾಮಣಿಯ ಅಭ್ಯಾಸಕ್ಕೆ ನೆರವಾಗಬಲ್ಲುದೆಂದು ನಾನು ಭಾವಿಸಿದ್ದೇನೆ.

ಉಜ್ಜನೀಶ ವಿರಚಿತ ವ್ಯಾಖ್ಯೆಯನ್ನು ಸಂಪಾದಿಸಿ ಪರಿಷ್ಕರಿಸಿಕೊಟ್ಟ ಸನ್ಮಿತ್ರರಾದ ಶ್ರೀ ಜಿ. ಜಿ. ಮಂಜುನಾಥನ್ ಅವರೇ ಈ ಕೃತಿಯನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಅವರ ಅಪಾರವಾದ ಶ್ರಮ ಮತ್ತು ವಿದ್ವತ್ತುಗಳಿಂದ ಈ ಕೆಲಸ ಸಾಧ್ಯವಾಗಿದೆ. ಶ್ರೀಯುತರನ್ನು ನಾನು ಮನಸಾ ಅಭಿನಂದಿಸುತ್ತೇನೆ.

ಈ ಕೃತಿಯ ಪ್ರಕಟನೆಗೆ ಕಾರಣವಾದವರು ಶ್ರೀ ಮದ್ರಂಭಾಪುರೀ ವೀರಸಿಂಹಾನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು. ಅವರು ಉದಾರವಾಗಿ ದೇಣಿಗೆಯಾಗಿ ಕೊಟ್ಟಿರುವ ಒಂದು ಲಕ್ಷ ರೂಪಾಯಿ ಹಣದಲ್ಲಿ ಬರುವ ಬಡ್ಡಿಯಿಂದ ಈ ಕೃತಿಯ ಮುದ್ರಣ ಸಾಧ್ಯವಾಗಿದೆ. ಶ್ರೀ ಜಗದ್ಗುರುಗಳ ಸಾಹಿತ್ಯ ಸೇವೆಯನ್ನು ನಾನು ಅಭಿಮಾನದಿಂದ ಸ್ಮರಿಸುತ್ತೇನೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಮತ್ತು ಪ್ರಕಟನಾ ಸಮಿತಿಗೆ ನನ್ನ ಕೃತಜ್ಞತೆಗಳು

ಶ್ರೀ ಎಸ್. ಬಸವಾರಾಧ್ಯ
ಅಧ್ಯಕ್ಷರು

ಪೀಠಿಕೆ

ಶ್ರೀವೇದಾಗಮ ವೀರಶೈವ ಸರಣಿಂ ಶ್ರೀಷಟ್ಸ್ಥಲೋದ್ಯನ್ಮಣಿಂ
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯ ಚಿಂತಾಮಣಿಂ
ಶ್ರೀಸಿದ್ಧಾಂತಶಿಖಾಮಣಿಂ ಲಿಖಯಿತಾ ಯಸ್ತಂ ಲಿಖಿಯಿತ್ವಾ ಪರಾನ್
ಶ್ರುತ್ವಾ ಶ್ರಾವಯಿತಾ ಸಯಾತಿ ವಿಮಲಾಂಭುಕ್ತಿಂಚ ಮುಕ್ತಿಂ ಪರಾಮ್ ॥

ಸಿದ್ಧಾಂತಶಿಖಾಮಣಿ ವೀರಶೈವಧರ್ಮದ ನೀಲನಕಾಶೆ (Blue Print) ಯಾಗಿದ್ದು ಮೇಲಿನ ಅಗ್ಗಳಿಕೆಗೆ ಪಾತ್ರವಾಗಿದೆ. ಕರ್ನಾಟಕದಲ್ಲಿ ಪ್ರಾದುರ್ಭಾವಗೊಂಡ ಶಕ್ತಿವಿಶಿಷ್ಟಾದ್ವೈತ ಧರ್ಮವನ್ನು ಆಸೇತು ಹಿಮಾಚಾಲ ಪರಿಚಯಿಸಿದ ಕೀರ್ತಿ ಇದಕ್ಕಿದೆ. ಅತ್ಯಂತ ಜನಪ್ರಿಯವಾದ ಈ ಕೃತಿಗೆ ಅನೇಕ ಟೀಕೆಗಳು ರಚಿತವಾಗಿವೆ. ೧೭-೪-೧೯೯೮ರಂದು ಪಂಚಪೀಠಾಧಿಪತಿಗಳ ಸಮ್ಮುಖದಲ್ಲಿ ಹೊನ್ನಾಳಿಯ ಹಿರೇಕಲ್ಮಠದ ಶ್ರೀ ಷ॥ ಬ್ರ॥ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಗುರುಪೀಠಾರೋಹಣ ರಜತಮಹೋತ್ಸವ ಸಂದರ್ಭದಲ್ಲಿ ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆ ಬಿಡುಗಡೆಯಾಯಿತು. ಆ ಸಂದರ್ಭದಲ್ಲಿ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಬಾಳೆಹೊನ್ನೂರು ಅವರು ಪ್ರಸ್ತುತ ಪ್ರಕಟವಾಗುತ್ತಿರುವ ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯನ್ನು ಪ್ರಕಟಿಸಲು ಅಪ್ಪಣೆಕೊಟ್ಟು ಹರಸಿದರು. ಅದರಂತೆ ಈ ಕೃತಿ ಪ್ರಕಟವಾಗುತ್ತಿದೆ. ಅವರ ಶ್ರೀಪಾದಗಳಿಗೆ ಚಿರಋಣಿ.

ಸಂಧ್ಯಾವಂದನೆಗೆ ಸಹಸ್ರ ಪಾಠ ಎನ್ನುವ ಒಂದು ಮಾತಿದೆ, ಕಡೆಯ ಪಕ್ಷ ನಾಮ ಗೋತ್ರ ಸೂತ್ರಗಳಾದರೂ ಸಂಧ್ಯಾವಂದನೆಯ ಸಂದರ್ಭದಲ್ಲಿ ಬದಲಾಗುತ್ತ ಹೋಗುವುದರಿಂದ ಈ ಮಾತಿಗೆ ಸಾರ್ಥಕತೆಯಿದೆ. ಹಾಗೆಯೇ ಸಿದ್ಧಾಂತ ಶಿಖಾಮಣಿಯ ಪಾಠಭೇದಗಳಿಗೂ ಈ ಮಾತನ್ನು ಅನ್ವಯಿಸಬಹುದಾಗಿದೆ. ಸಂಸ್ಕೃತ ಭಾಷೆಯನ್ನು ಬಲ್ಲ ವಿದ್ವಾಂಸರು ಸಿದ್ಧಾಂತಶಿಖಾಮಣಿಯ ಪಾಠಭೇದಗಳನ್ನು ತಿದ್ದಿರುವುದುಂಟು. ಈ ಕೃತಿಯ ಸರಿಯಾದ ಪಾಠನಿರ್ಣಯದ ಅವಶ್ಯಕತೆ ಇನ್ನೂ ಇದೆ. ಈ ಮಹತ್ಕಾರ್ಯಕ್ಕೆ ಅನುಕೂಲವಾಗುವ ಸಲುವಾಗಿ ಇದುವರೆಗೆ ಸಿದ್ಧಾಂತಶಿಖಾಮಣಿಗೆ ಲಭ್ಯವಿರುವ ಪಾಠಭೇದಗಳನ್ನು, ಅವುಗಳನ್ನು ಆಶ್ರಯಿಸಿದ ಟೀಕು, ವ್ಯಾಖ್ಯಾನಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗುತ್ತಿದೆ.

ಅಜ್ಞಾತ ವಿರಚಿತ ಸಿದ್ಧಾಂತಶಿಖಾಮಣಿಯ ವೈಶಿಷ್ಟ್ಯವನ್ನು ಹೀಗೆ ಗುರುತಿಸಬಹುದಾಗಿದೆ-

ವ್ಯಾಖ್ಯಾನಕಾರ ಪ್ರತಿಯೊಂದು ಶ್ಲೋಕಕ್ಕೂ ಶಬ್ದಶಃ ಅರ್ಥವನ್ನು ಕೊಟ್ಟಿದ್ದಾನೆ. ಅದಕ್ಕೆ ಮೊದಲು ಸೂತ್ರರೂಪದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾನೆ ಉದಾಹರಣೆಗೆ-

ಸೂ।। ಸ್ಮೃತಿಗಳಲ್ಲಿ ಜೀವನು ಸತ್ಯಜ್ಞಾನ ಸ್ವರೂಪನೂ ನಿರ್ಲೇಪನೂ ಕೂಟಸ್ಥನೂ ನಿತ್ಯಮುಕ್ತನೂ ಪಾಪಪುಣ್ಯರಹಿತನೂ ಎಂದು ಮರಳಿ ನಿರೂಪಿಸಲ್ಪಡುವುದರಿಂ ನಿಶ್ಚೈಸಲ್ಪಟ್ಟ ಜೀವನಿಗೆ ಸಂಸಾರವೆ ಇಲ್ಲ. ಅದರಿಂದ ಮೊದಲು ಹೇಳಿದ ಪಿಂಡಶಬ್ದವಾಚ್ಯನಾದ ಜೀವನಿಗೆ ಶಿವಭಕ್ತಿಯಿಂದ ಪಾಪಕ್ಷಯವಾಗೆ ಸಂಸಾರನಿವೃತ್ತಿಯಹುದೆಂಬುದೆ ಯುಕ್ತವು ಈ ಶಂಕೆಯನು ಪರಿಹರಿಸಲೋಸ್ಕರವಾಗಿ ನಿತ್ಯಮುಕ್ತ ನಿರ್ಲೇಪನಾದರೂ ಜೀವನಿಗೆ ಸಂಸಾರಪ್ರಾಪ್ತಿಯು ರಜ್ಜುವಿನಲ್ಲಿಯ ಸರ್ಪ ಕನ್ನಡಿಯಲ್ಲಿ ಮುಖಭೇದ ಪ್ರಾಪ್ತಿಯಂತೆ ಸಂಭವಿಸುವುದೆಂದು ಹೇಳಲೋಸ್ಕರವಾಗಿ ಜೀವವನು ಪಾರಮಾರ್ಥಿಕ ಸ್ವರೂಪನು ಹೇಳುತಿರ್ದಪಂ-

ಏಕಏವ ಶಿವಸಾಕ್ಷಾಚ್ಚಿದಾನಂದ ಮಯೋ ವಿಭುಃ
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ

ಚಿದಾನಂದಮಯಃ - ಜ್ಞಾನಾನಂದ ಸ್ವರೂಪನಾದ, ಸಾಕ್ಷಾತ್ - ಪ್ರತ್ಯಕ್ಷ ಸ್ವರೂಪನಾದ, ವಿಭುಃ - ಸ್ವತಂತ್ರನಾದ, ನಿರ್ವಿಕಲ್ಪಃ - ಭೇದರಹಿತನಾದ, ನಿರಾಕಾರಃ - ಆಕಾರಶೂನ್ಯನಾದ, ನಿರ್ಗುಣಂ - ಗುಣರಹಿತನಾದ, ನಿಃಪ್ರಪಂಚಕಃ - ಪ್ರಪಂಚಸಂಬಂಧ ರಹಿತನಾದ, ಶಿವಃ - ಶಿವನು, ಏಕಏವ - ಒಬ್ಬನೆ ಪ್ರಕಾಶಾತ್ಮನಾಗಿರುತ್ತಿಹನು ।।೫-೩೪।।

ಕೆಲವು ಸಂದರ್ಭಗಳಲ್ಲಿ ವ್ಯಾಖ್ಯಾನಕಾರ ಶ್ಲೋಕ ಟೀಕು ಆದಮೇಲೆ ತಾತ್ಪರ್ಯವನ್ನು ಹೇಳಿದ್ದಾನೆ. ಆ ಸಂದರ್ಭದಲ್ಲಿ ವಿವರವಾಗಿ ಚರ್ಚಿಸಿ ಮತಾಂತರವನ್ನು ಕೂಡ ಹೇಳಿರುವುದುಂಟು-

ಕುತ ಸಂಶಬ್ದೇ ತಾತ್ಪರ್ಯ ಅಹಂ ಮನುಷ್ಯಂ, ಅಹಂ ಸ್ಥೂಲಃ, ಅಹಂ ವೃದ್ಧಃ - ನಾನು ಮನುಷ್ಯನು, ನಾನು ಸ್ಥೂಲನು, ನಾನು ವೃದ್ಧನು ಎಂಬಾಗ ನಾನು ಎಂಬಾತ್ಮನು ತಾನಾದ ಕಾರಣ ತನಗೂ ದೇಹಕ್ಕೂ ಭೇದ ತೋರದ ಕಾರಣ ಶಾಸ್ತ್ರಿಗಳಿಗೂ ಲೌಕಿಕರಿಗೂ ಸಮ್ಮತ. ಅಲ್ಲಿ ವಿವಾದವಿಲ್ಲ. ಮನುಷ್ಯನೆಂಬಾಗ - ಮನುಷ್ಯ ಜಾತಿಯು, ಸ್ಥೂಲನು ಎಂಬಾಗ ಸ್ಥೌಲ್ಯವು, ವೃದ್ಧನು ಎಂಬಾಗ ಜರೆಯು ದೇಹ ಧರ್ಮವೆಂಬುದು ಲೋಕಸಮ್ಮತ. ಅಲ್ಲಿಯೂ ವಿವಾದವಿಲ್ಲ. ಅದರಿಂ ದೇಹವೆಯಾತ್ಮನೂ ದೇಹದಿಂದ ಭಿನ್ನನಲ್ಲವೆಂದು ಹೇಳುವುದು ತತ್ಪರಿಹಾರಮ್ ಎಂತನೆ ಶರೀರವೆಯಾತ್ಮನಾದರೆ ಸುಷುಪ್ತಿ ಕಾಲದಲ್ಲಿ ದೇಹವುಂಟಾದರೂ ವ್ಯವಹಾರವಿಲ್ಲದ ಕಾರಣ ದೇಹವ್ಯತಿರಿಕ್ತವಾದ ಆತ್ಮನುಂಟೆಂದು ಅಂಗೀಕರಿಸಬೇಕು. ತತ್‌ಕ್ಷಣದಲ್ಲಿ ಹುಟ್ಟಿದ ಬಾಲಕನು ಜನ್ಮಾಂತರದಲ್ಲಿ ಅನುಭವಿಸಿದಂಥಾ ಸ್ತನಪಾನವನು ಸ್ಮರಿಸಿ ಸ್ತನಪಾನದಲ್ಲಿ ಪ್ರವರ್ತಿಸುವುದರಿಂದ ಶರೀರ ವ್ಯತಿರಿಕ್ತವಾದ ಆತ್ಮನೆಂದು ಹೇಳಬೇಕು. ದೇಹವೇ ಆತ್ಮನಾದರೆ ಶರೀರವು ಇಲ್ಲಿಯೆ ಲಯವಹುದರಿಂದ ಪರಲೋಕಾರ್ಥವಾಗಿ ಸತ್ಕರ್ಮಾನುಷ್ಠಾನವಿಲ್ಲದೆ ಹೋಗಬೇಕು. ನನ್ನ ಪುತ್ರನು ನನ್ನ

ಪಶುವು ನನ್ನ ವಸ್ತುವೆಂಬ ಮರ್ಯಾದೆಯಲ್ಲಿ ನನ್ನ ಶರೀರವೆಂದು ತನಗಿದಿರಿಟ್ಟು ತೋರುವುದರಿಂದ ದೇಹಕ್ಕೂ ತನಗೂ ಭೇದವು ಪ್ರತ್ಯಕ್ಷವಾದ ಕಾರಣ ದೇಹದಿಂದ ಭಿನ್ನನಾದ ಆತ್ಮನೆಂದು ಹೇಳಬೇಕು. ಹಾಂಗಾದರೆ ಇಂದ್ರಿಯಗಳೆ ಆತ್ಮನಾಗಲಿ ಎಂಬ ಮತಾಂತರವನು ತೋರಿಸುತಿರ್ದಪಂ ॥೫-೫೫॥

ಮತ್ತಂ ಬೌದ್ಧರು ಮೀಮಾಂಸಕರು ತಾರ್ಕಿಕರು ಸಾಂಖ್ಯರು ಶೂನ್ಯವಾದಿ ಯುಕ್ತಾಂತರದಿಂದವು ಮೀಮಾಂಸಕ ತಾರ್ಕಿಕ ಸಾಂಖ್ಯಪಕ್ಷಂಗಳನು ದೂಷಿಸುತಿರ್ದಪಂ ॥ ೫-೫೬ ॥

ಹೀಗೆ ಮತಾಂತರಗಳನ್ನು ಈ ವ್ಯಾಖ್ಯಾನಕಾರ ಅಲ್ಲಲ್ಲಿ ತೋರಿಸಿದ್ದಾನೆ.

ತಾನು ಶಬ್ದಗಳಿಗೆ ಅರ್ಥಮಾಡಿರುವುದಕ್ಕೆ ಕೆಲವೆಡೆ ಆಧಾರಗಳನ್ನು ಒದಗಿಸಿದ್ದಾನೆ-

ಬ್ರೂಂ ವ್ಯಕ್ತಾಯಾಂವಾಚಿತಿಧಾತುಃ ೫-೧, ಸೂಶ್ರವಣೆ ೫-೨, ಹನಹಿಂಸಾಗತ್ಯಾಃ ೫-೪, ಶೇಷತ್ - ವಿಶೇಷಣೊ ೫-೭, ವಚಪರಿಭಾಷಣೆ ೫-೧೨, ದಿಶ ಅತಿಸರ್ಜನೆ ೫-೧೪, ರಮುಕ್ರೀಡಾಯಾಂ ೫-೧೫ ಮುಂತಾದ ಶಬ್ದಗಳನ್ನು ನೋಡಬಹುದು. ಉಳಿದ ಶಬ್ದಗಳಿಗೆ ಅನುಬಂಧ ೨ನ್ನು ಗಮನಿಸಬಹುದು. ಇದರಿಂದ ಈತನು ಒಳ್ಳೆಯ ನೈಘಂಟುಕಾರನೂ ಆಗಿದ್ದನೆಂದು ಭಾವಿಸಬಹುದು.

ವ್ಯಾಖ್ಯಾನ ಬರೆಯುವಲ್ಲಿ ಕೆಲವು ಆಕರಗಳನ್ನು ಈತ ತಿಳಿಸಿದ್ದಾನೆ. ಇದರಿಂದ ಈತನ ವಿದ್ವತ್ತೆ ಮತ್ತು ವ್ಯುತ್ಪತ್ತಿಗಳು ಕಂಡು ಬರುತ್ತವೆ. ಉದಾಹರಣೆಗೆ - ಶ್ರೀ ರುದ್ರಪ್ರಶ್ನದ ಒಂದು ಋಕ್ಕನು ಪ್ರಮಾಣವಾಗಿ ಹೇಳುತ್ತಿದ್ದಾನು ೬-೬೨, ರುದ್ರಾಧ್ಯಾಯ ೯-೭, ಜಾಬಾಲಿಕಾ ೧೦-೬, ಉಪನಿಷತ್ತುಗಳ ಉಲ್ಲೇಖ ೧೮-೬೯. ನಾಲ್ಕು ವೇದಗಳ ಮೂವತ್ತೆರಡು ಉಪನಿಷತ್ತುಗಳ ಉಲ್ಲೇಖ (೨೦-೮೫) ಮುಂತಾದುವನ್ನು ನೋಡಬಹುದಾಗಿದೆ.

ಹಸ್ತಪ್ರತಿ ವಿವರ

ಸಿದ್ಧಾಂತಶಿಖಾಮಣಿ ವ್ಯಾಖ್ಯೆಯ ಈ ಪರಿಷ್ಕರಣವನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿಭಂಡಾರದ ೪/೧ ಕಾಗದದ ಪ್ರತಿಯಿಂದ ಮಾಡಲಾಗಿದೆ. ಈ ಹಸ್ತಪ್ರತಿಯಲ್ಲಿ ೧-೮೭ ಪತ್ರಗಳಿವೆ. ಪ್ರತಿ ಪತ್ರ ೨೧ ಸೆಂಟಿಮೀಟರ್ ಅಗಲ ೨೯ ಸೆಂಟಿಮೀಟರ್ ಉದ್ದವಿದೆ. ಪ್ರತಿಪತ್ರದಲ್ಲಿ ಸುಮಾರು ೨೦ ಪಂಕ್ತಿ ಪ್ರತಿಪಂಕ್ತಿಯಲ್ಲಿ ಸುಮಾರು ೨೫ ಅಕ್ಷರಗಳಿವೆ. ೫ನೆಯ ಪರಿಚ್ಛೇದದಿಂದ ೨೦ನೆಯ ಪರಿಚ್ಛೇದ ಪೂರ್ತಿ ಸಿದ್ಧಾಂತಶಿಖಾಮಣಿ ಗ್ರಂಥವಿದೆ.

ಆದಿಯಲ್ಲಿ ಸಿದ್ಧಾಂತಶಿಖಾಮಣಿ ಬರವುದಕ್ಕೆ ಶುಭಮಸ್ತು ಶೋಭನಮಸ್ತು ನಿರ್ವಿಘ್ನಮಸ್ತೂ ॥ ಪ್ರಥಮ ಪೀಠಿಕೆ ಅಗಸ್ತ್ಯ ಮುನೀಶ್ವರನು ಮೋಕ್ಷ ಧರ್ಮಪ್ರಶ್ನೆಯನ್ನು ಮಾಡುತ್ತಿರಲಾಗಿ ಅನಂತರದಲ್ಲಿ ರೇಣುಕೇಶ್ವರ ನಿರ್ವಿಘ್ನದಲ್ಲಿ ಗ್ರಂಥ ಪರಿಸಮಾಪ್ತಿಯಾಗ ಬೇಕೆಂದು ಈ ಗ್ರಂಥವ ಪರೀಕ್ಷಿಸಿ ಕೇಳುವರುಗಳಿಗೆ ಆಯುರಾರೋಗ್ಯ ಐಶ್ವರ್ಯ

ಜ್ಞಾನವೃದ್ಧಿಯಾಗಬೇಕೆಂದು ಶಿಷ್ಟಾಚಾರ ಪ್ರಾಪ್ತನಾದ ಶೃತಿಪುರಾಣಾಗಮಮೇತಿ ಹಾಸಂಗಳಲ್ಲಿ ಪ್ರಸಿದ್ಧವಾದ ಯಿಷ್ಟ ದೇವತಾಧ್ಯಾನ ರೂಪವಾದ ಮಂಗಲವನಾ ಚರಿಸುತ್ತಿರ್ದಪಂ ಗ್ರಂಥಾ॥

ಅಥಾಗಸ್ತ್ಯವಚಃ ಶೃತ್ವೋ ರೇಣುಕಗಣನಾಯಕಃ
ಧ್ಯಾತ್ವಾ ಕ್ಷಣಂ ಮಹಾದೇವಂ ಸಾಂಬಾಮಹಸಮಾಹಿತಃ ॥ ಎಂದು ಪ್ರಾರಂಭವಾಗುತ್ತದೆ.

ಅಂತ್ಯದಲ್ಲಿ ಇತಿ ಶ್ರೀ ವೀರಶೈವ ಧರ್ಮ ನಿರ್ಣಯೆ ಶಿದ್ಧಾಂತಶಿಖಾಮಣೌ ಐಖ್ಯಸ್ಥಲ ವಿಷಯ ನವಲಿಂಗ ಸ್ಥಲ ಪ್ರಸಂಗೋನಾಮ ವಿಶಂತಿಪರಿಚ್ಛೇದಃ ಎಂದು ಗ್ರಂಥ ಪ್ರಮಾಣವನ್ನು ಹೇಳಿದೆ. ಅದನ್ನು ಅನುಬಂಧದಲ್ಲಿ ಕೊಟ್ಟಿದೆ.

ಈ ಹಸ್ತ ಪ್ರತಿಯಲ್ಲಿ ಲುಪ್ತಭಾಗಗಳಿದ್ದು ಅನೇಕ ಶ್ಲೋಕಗಳಿಲ್ಲ. ಅಷ್ಟಮೂರ್ತಿಸ್ಥಲ ೫೬ರಿಂದ ಶಿವಜಗನ್ಮಯ ಸ್ಥಲ ೬೫ರವರೆವಿಗೆ ಲುಪ್ತವಾಗಿದೆ. ಭಾವನಿಷ್ಪತ್ತಿ ಸ್ಥಲ ೪೩ರಿಂದ ಪಿಂಡಾಕಾಶಸ್ಥಲ ೫೮ ಶ್ಲೋಕಗಳು ಲುಪ್ತವಾಗಿವೆ. ಈ ಭಾಗಗಳನ್ನು ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ತುಂಬಿದೆ. ಕೆಲವು ಕಡೆ ಶ್ಲೋಕಗಳಿದ್ದು ಅವಕ್ಕೆ ಟೀಕು ಇಲ್ಲ ಮತ್ತೆ ಕೆಲವು ಕಡೆ ಟೀಕಿದ್ದು ಶ್ಲೋಕಗಳಿಲ್ಲ. ಅವನ್ನು ಆಯಾ ಸಂದರ್ಭದಲ್ಲಿ ಅಡಿಟಿಪ್ಪಣಿಯಲ್ಲಿ ತೋರಿಸಲಾಗಿದೆ. ಇದುವರೆಗಿನ ಪರಿಷ್ಕರಣಗಳಲ್ಲಿಲ್ಲದ ಹೊಸ ಶ್ಲೋಕಗಳಿವೆ ಉದಾಹರಣೆಗೆ ಭಾವಾಚಾರಸ್ಥಲವನ್ನು ನೋಡಬಹುದು. ಅವನ್ನು ಹಾಗೆಯೇ ಇಟ್ಟುಕೊಂಡಿದೆ.

ಒಟ್ಟಿನಲ್ಲಿ ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಬೇಕಾದಾಗ ಎದುರಾಗುವ ಕ್ಲೇಶಗಳನ್ನೆಲ್ಲ ಎದುರಿಸಿ ಪ್ರಸ್ತುತಪರಿಷ್ಕರಣವನ್ನು ತಂದಿದೆ. ವಿದ್ವಾಂಸರು ಹಂಸಕ್ಷೀರನ್ಯಾಯದಿಂದ ಈ ಪರಿಷ್ಕರಣವನ್ನು ಸ್ವಾಗತಿಸಬೇಕಾಗಿ ಕೋರಿಕೆ.

ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯನ್ನು ಪರಿಷ್ಕರಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಡಾ. ಸಾ. ಶಿ. ಮರುಳಯ್ಯನವರು ನನ್ನನ್ನು ನಿಯೋಜಿಸಿದರು. ಈ ಕೃತಿಯ ಪರಿಷ್ಕರಣವನ್ನು ಕೂಡ ಅವರೇ ನನಗೆ ನಿಯೋಜಿಸಿದರು. ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀಮಾನ್ ಎನ್. ಬಸವಾರಾಧ್ಯರು ಈ ಪರಿಷ್ಕರಣೆಯನ್ನು ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಈ ಮಹನೀಯರಿಗೂ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ॥ ಸಿ. ವೀರಣ್ಣ, ಡಾ॥ ಕೆ. ವಿ. ಚಂದ್ರಣ್ಣಗೌಡರಿಗೂ, ಗೌರವ ಕೋಶಾಧ್ಯಕ್ಷರಾದ ಶ್ರೀ ಬಿ. ಎನ್. ಸತ್ಯನಾರಾಯಣರಾವ್ ಅವರಿಗೂ ಹಾಗೂ ಪರಿಷತ್ತಿನ ಪ್ರಕಟಣಾ ಸಮಿತಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಶ್ರೀ ಕೆ. ಆರ್. ಶೇಷಗಿರಿಯವರು ಮತ್ತು ಶ್ರೀಮತಿ ಬಿ. ಎಂ. ಗೀತಾ ಮಲ್ಲಿಕಾರ್ಜುನ ಪ್ರಸನ್ನಾರಾಧ್ಯ ಅವರು ಈ ಗ್ರಂಥ ಪರಿಷ್ಕರಣೆಯ ಸಂದರ್ಭದಲ್ಲಿ ನೆರವು ನೀಡಿದ್ದಾರೆ. ಶ್ರೀಮತಿ ಕೆ. ನಾಗವೇಣಿ ಅವರು ಕರಡಚ್ಚು ತಿದ್ದುವಲ್ಲಿ ವಿಶೇಷವಾಗಿ ಸಹಕರಿಸಿದ್ದಾರೆ. ಬಿ.ಎಂ.ಶ್ರೀ. ಅಚ್ಚುಕೂಟದ ವ್ಯವಸ್ಥಾಪಕ ಶ್ರೀ ಎಸ್. ವಿ. ಮನ್ವಾಚಾರ್ ಅವರು ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಇವರೆಲ್ಲರಿಗೂ ವಂದನೆಗಳು.

ಅನುಬಂಧ

ಸಿದ್ಧಾಂತಶಿಖಾಮಣಿಯ ವ್ಯಾಖ್ಯಾಕಾರನಾದ ಗೋರಕೋಡು ಉಜ್ಜನೀಶ ಮತ್ತು ಶ್ರೀಧರಾಂಕರ ಕಾಲವನ್ನು ಕವಿಚರಿತೆಕಾರರ ಮತವನ್ನು ಒಪ್ಪಿ ಸು. ೧೫೫೦ ಎಂದು ಭಾವಿಸಲಾಗಿತ್ತು. ಮತ್ತೆ ಉಜ್ಜನೀಶನ ಕಾಲವನ್ನು ೧೫೨೩ ಎಂದು ಕೂಡ ತಿಳಿಯಲಾಗಿತ್ತು. ಸಿದ್ಧಾಂತಶಿಖಾಮಣಿಗೆ ವ್ಯಾಖ್ಯಾನವನ್ನು ಬರೆದ ಉಜ್ಜನೀಶನ ಬಗ್ಗೆ - "ಶ್ರೀಮದಭಿನ್ನ ಪ್ರಸನ್ನ ಶಾಂತೇಶ್ವರಾಪರಾವತಾರಾತ್ ಶ್ರೀಮದ್ಗೋರಕೋಡ ಮಲ್ಲಿಕಾರ್ಜುನಾಚಾರ್ಯ ಪ್ರಾಪ್ತ ಪ್ರಸಾದೇನ ಉಜ್ಜಯಿನೀಶಾಖ್ಯೇನ ವಿರಚಿತಾಯಾಂ ಕರ್ಣಾಟಭಾಷಾಟೀಕಾಯಾಂ ಐಕ್ಯಸ್ಥಲ ವಿಷಯೇ ನವಲಿಂಗ ಪ್ರಸಂಗೋನಾಮ ವಿಂಶತಿ ಪರಿಚ್ಛೇದಃ ಸಮಾಪ್ತಃ" ಎನ್ನುವ ವಿವರ ಸಿಗುತ್ತದೆ. ಅಂದರೆ ಶಿವತತ್ತ್ವ ಚಿಂತಾಮಣಿಯಲ್ಲಿ ಪ್ರಸ್ತಾವಿತನಾದ ಗೊರಕೋಡ ಬೊಪ್ಪಯ್ಯ ಮಲ್ಲಿಕಾರ್ಜುನನ ಗುರುವಾಗಿದ್ದನೆಂದು ನೀಲಕಂಠ ನಾಗನಾಥಾಚಾರ್ಯನ ವೀರಮಾಹೇಶ್ವರಾಚಾರ ಸಂಗ್ರಹಕ್ಕೆ ಕನ್ನಡಕ್ಕೆ ಟೀಕೆ ಬರೆದ ಶ್ರೀಧರಾಂಕನ ಒಕ್ಕಣೆಯಿಂದ ತಿಳಿದು ಬರುತ್ತಿದ್ದು ಹೀಗಿದೆ - ಷಟ್ಸ್ಥಲ ಬ್ರಹ್ಮವಾದಿ ವೀರಶೈವವಾಗಮ ಸುಧಾರ್ಣವ ಪೂರ್ಣಚಂದ್ರ ಕರ್ಣಾಟದೇಶಜ್ಞಾನಾಜ್ಞಾನ ನಿರ್ಹರಣಾರಾಧ್ಯವರ್ಯ ಗೊರಕೋಡ ಪುರವರಾಧೀಶ್ವರ ಬೊಪ್ಪಣದೇಶಿಕೇಂದ್ರ ತನೂಭವ ಮಲ್ಲಿಕಾರ್ಜುನಾಚಾರ್ಯನ ಆಜ್ಞಾನುಸಾರವಾಗಿ ರಚಿಸಿದಂತೆ ಹೇಳಿದ್ದಾನೆ. ಈ ಮಾತನ್ನು ಶ್ರೀಮದ್ಬೊಪ್ಪಣ ದೇಶಿಕೇಂದ್ರ ತನಯಂ ಸರ್ವಾಗಮಾರ್ಥೋದಯಃ ಸಾರಜ್ಞಃ ಶಿವಪಾದಪಂಕಜಲಸದ್ಭೃಂಗಃ ಪ್ರಕಾಶೀಕೃತಃ ವ್ಯಾಖ್ಯಾಂ ಸದ್ಗುರುಮಲ್ಲಿಕಾರ್ಜುನವಿಭುಃ ಶ್ರೀ ವೀರಮಾಹೇಶ್ವರಾಚಾರ್ಯಸ್ಯಾಸ್ತು ಶುಭಂತು ತಸ್ಯ ಸುಧಿಯಾಚ್ಛೀಧರಾಂಕೇಣ ॥೧॥ ಎನ್ನುವ ವೃತ್ತ ಕೂಡ ಸಮರ್ಥಿಸುತ್ತದೆ.

ಇದರಂತೆ ಭಾವಿಸುವುದಾದರೆ ಕ್ರಿ.ಶ. ೧೪೩೦ರಲ್ಲಿದ್ದ ಲಕ್ಕಣದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ ಪ್ರಸ್ತಾವಿತನಾಗಿರುವ ಗೊರಕೋಡು ಬೊಪ್ಪಯ್ಯ ದೇಶಿಕನ ಕಾಲವನ್ನು ಸು. ಕ್ರಿ.ಶ. ೧೪೦೦ ಎಂದು ಭಾವಿಸಬಹುದಾಗಿದೆ. ಇವನ ಶಿಷ್ಯ ಮಲ್ಲಿಕಾರ್ಜುನನ ಕಾಲವನ್ನು ಸು. ಕ್ರಿ.ಶ. ೧೪೩೦ ಎಂದು ಭಾವಿಸಬಹುದಾಗಿದೆ. ಬಹುಶಃ ಸಮಕಾಲೀನರಾದ ಶ್ರೀಧರಾಂಕ ಮತ್ತು ಉಜ್ಜನೀಶರ ಕಾಲವನ್ನು ಕ್ರಿ.ಶ. ೧೪೬೦ ಎಂದು ಭಾವಿಸಬಹುದಾಗಿದೆ.

ಇದುವರೆವಿಗೆ ಗೊರಕೋಡು ಉಜ್ಜನೀಶನ ಗುರುಪರಂಪರೆಯ ಎರಡು ತಲೆಮಾರನ್ನು ಗುರುತಿಸಲಾಯಿತು. ಇನ್ನು ಮುಂದೆ ಅವನ ಶಿಷ್ಯನನ್ನು ಗುರುತಿಸಬಹುದಾಗಿದೆ. ಧರ್ಮಸಂಪಾದನೆಯನ್ನು ಬರೆದ ಚಿಕ್ಕ ಮಲ್ಲಿಕಾರ್ಜುನನ -

ಕೃತಿವೆಸರಿದು ಧರ್ಮಸಂಪಾದನೆ
ಕೃತಿವೇಳ್ದವನಾರೆಂದೆನಲುಸುರುವೆ
ಪೃಥುವಿಗೆ ಗೊರಕೋಡುಜ್ಜಣರಾಧ್ಯರ ವಂಶೋದ್ಭವನೆನಿಪ
ಅತಿಶಯ ವೃಷಭನಹಳ್ಳಿಯಲಿಪ್ಪ
ನ್ನತ ಚಿಕ್ಕಮಲ್ಲಿಕಾರ್ಜುನ ಪೇಳ್ದೀ
ಕೃತಿಗೊಡೆಯನು ಕಾಗಿನೆಲೆಯ ಚಿಕ್ಕವೀರೇಶ್ವರನೂ ॥೧-೧೪॥

ಎನ್ನುವ ಪದ್ಯದ ಮೇಲೆ ಚಿಕ್ಕಮಲ್ಲಿಕಾರ್ಜುನನ ಗೊರಕೋಡುಜ್ಜುಣಾರಾಧ್ಯರ ಶಿಷ್ಯತ್ವವನ್ನು ಗುರುತಿಸಬಹುದಾಗಿದೆ. ಹಾಗಾಗಿ ಶ್ರೀಮಾನ್ ಎಚ್. ದೇವೀರಪ್ಪನವರು ನಿರ್ಣಯಿಸಿರುವ ಗೊರಕೋಡು ಉಜ್ಜನೀಶನ ಕಾಲವನ್ನು ಕ್ರಿ.ಶ. ಸು. ೧೪೬೦ ಎನ್ನುವುದನ್ನು ಒಪ್ಪಬಹುದಾಗಿದೆ.

ಇದುವರೆಗೆ ವಿವೇಚನೆ ಮಾಡಿದ ಶ್ರೀಮಾನ್ ಎಚ್. ದೇವೀರಪ್ಪನವರು, ಡಾ. ಎಸ್. ವಿದ್ಯಾಶಂಕರ ಮತ್ತು ಹು. ಕಾ. ಜಯದೇವ ಅವರು ಗೊರಕೋಡು ಉಜ್ಜನೀಶನ ಕೃತಿ ಸಿದ್ಧಾಂತಶಿಖಾಮಣಿಯ ವ್ಯಾಖ್ಯೆಯ ಪ್ರಸ್ತಾಪಮಾಡಿಲ್ಲ. ಅದನ್ನು ಸರಿಹೊಂದಿಸಕೊಳ್ಳಬೇಕಾಗಿದೆ. ಗೊರಕೋಡು ಗುರುಪರಂಪರೆಯ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗೆ ಅವಕಾಶವಿದೆ.

೧೨-೩-೨೦೦೦ **ಜಿ.ಜಿ. ಮಂಜುನಾಥನ್**
ಮೈಸೂರು

ಪರಿವಿಡಿ

ಸಪ್ತದಶಪರಿಚ್ಛೇದ

ಅಷ್ಟಾದಶಪರಿಚ್ಛೇದ

ಏಕೋನವಿಂಶತಿಪರಿಚ್ಛೇದ

ಪಂಚಮಪರಿಚ್ಛೇದ

ಸಿದ್ಧಾಂತಶಾಸ್ತ್ರಕಥನ

ಪ್ರಥಮಪೀಠಿಕೆ

ಅಗಸ್ತ್ಯ ಮುನೀಶ್ವರನು ಮೋಕ್ಷಧರ್ಮ ಪ್ರಶ್ನೆಯನ್ನು ಮಾಡುತ್ತಿರಲಾಗಿ ಅನಂತರದಲ್ಲಿ ರೇಣುಕೇಶ್ವರ ನಿರ್ವಿಘ್ನದಲ್ಲಿ ಗ್ರಂಥ ಪರಿಸಮಾಪ್ತಿಯಾಗಬೇಕೆಂದು ಈ ಗ್ರಂಥವ ಪರೀಕ್ಷಿಸಿ ಕೇಳುವರುಗಳಿಗೆ ಆಯುರಾರೋಗ್ಯ ಐಶ್ವರ್ಯ ಜ್ಞಾನ ವೃದ್ಧಿಯಾಗಬೇಕೆಂದು ಶಿಷ್ಟಾಚಾರ ಪ್ರಾಪ್ತನಾದ ಶೃತಿಪುರಾಣಾಗಮೇತಿಹಾಸಂಗಳಲ್ಲಿ ಪ್ರಸಿದ್ಧವಾದ ಇಷ್ಟ ದೇವತಾಧ್ಯಾನರೂಪವಾದ ಮಂಗಲವನಾಚರಿಸುತಿರ್ದಪಂ

ಅಥಾಗಸ್ತ್ಯವಚಶ್ಶೃತ್ವಾ ರೇಣುಕೋ ಗಣನಾಯಕಃ
ಧ್ಯಾತ್ವಾಕ್ಷಣಂ ಮಹಾದೇವಂ ಸಾಂಬಮಾಹ ಸಮಾಹಿತಃ

ಅಗಸ್ತ್ಯಮುನೀಶ್ವರನ ಪ್ರಶ್ನಾನಂತರದಲ್ಲಿ ಗಣನಾಯಕಃ - ಗಣೇಶ್ವರನಾಗಿರ್ದಂತಹ ರೇಣುಕೇಶ್ವರನು, ಅಗಸ್ತ್ಯವಚಃ - ಅಗಸ್ತ್ಯಮುನೀಶ್ವರನ ಪ್ರಶ್ನೆಯನ್ನು, ಶೃತ್ವಾ - ಕೇಳಿ, ಸಾಂಬಂ - ಉಮಾಸಮೇತನಾದ, ಮಹಾದೇವಂ - ಪರಮೇಶ್ವರನು, ಕ್ಷಣಂ - ಒಂದು ಕ್ಷಣಮಾತ್ರ ಪರ್ಯಂತವಾಗಿ, ಧ್ಯಾತ್ವಾ - ಧ್ಯಾನವ ಮಾಡಿ, ಸಮಾಹಿತಃ - ಏಕಾಗ್ರಚಿತ್ತನಾಗಿ, ಆಹಾ - ಉತ್ತರವ ಕೊಳ್ಳುತ್ತಿದ್ದಾನು. ಬ್ರೂಂ ವ್ಯಕ್ತಾಯಾಂ ವಾಚಿತಿಧಾತುಃ. ಅತಿ ರಹಸ್ಯವಾದ ವೀರಶೈವ ಸಿದ್ಧಾಂತಗ್ರಂಥವನು ಕೇಳಲೋಸ್ಕರ ಅಗಸ್ತ್ಯ ಮುನೀಶ್ವರನ ಚಿತ್ತಕ್ಕೆ ಸಂತೋಷವನ್ನೈದಿಸುತ್ತಿರ್ದಪಂ ॥೧॥

ಅಗಸ್ತ್ಯ ಮುನಿಶಾರ್ದೂಲ ಸಮಸ್ತಾಗಮ ಪಾರಗ
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣು ಸಾದರಂ

ಮುನಿ ಶಾರ್ದೂಲ ಮುನಿ ಶ್ರೇಷ್ಠನಾಗಿದ್ದಂತಹ, ಸಮಸ್ತಾಗಮ ಪಾರಗ - ಸರ್ವಾಗಮಂಗಳ ಕಡೆಯನ್ನೈದಿದಂಥಾ, ಎಲೆ ಅಗಸ್ತ್ಯನೆ - ಶಿವಜ್ಞಾನಕರಂ - ಶಿವಜ್ಞಾನವನು ಹುಟ್ಟಿಸುವಂತಹ, ಸಿದ್ಧಾಂತಂ - ಸಿದ್ಧಾಂತ ಗ್ರಂಥವನು, ವಕ್ಷ್ಯೇ - ಹೇಳಿಹನು, ಸಾದರಃ - ಪ್ರೀತಿಯಿಂದ ಶೃಣು - ಕೇಳು, ಸೂ- ಶ್ರವಣೆ - ಸೂ ತನ್ನ ಸಿದ್ಧಾಂತವನು ನಿರ್ಣಯಿಸಲೋಸ್ಕರವಾಗಿ ಸಿದ್ಧಾಂತ ಭೇದಗಳನ್ನು ಹೇಳುತ್ತಿರ್ದಪಂ ॥೨॥

ಅಗಸ್ತ್ಯಾ ಖಲು ಸಿದ್ಧಾಂತಾ ವಿಖ್ಯಾತಾ ರುಚಿ ಭೇದತಃ
ಭಿನ್ನಾಚಾರ ಸಮಾಯುಕ್ತಾ ಭಿನ್ನಾರ್ಥ ಪ್ರತಿಪಾದಕಾಃ

ಅಗಸ್ತ್ಯಾ - ಎಲೆ ಅಗಸ್ತ್ಯ ಮುನೀಶ್ವರನೆ, ಭಿನ್ನಾಚಾರ ಸಮಾಯುಕ್ತ - ಭಿನ್ನವಾದ ಆಚಾರಗಳಿಂದ ಕೂಡಲ್ಪಟ್ಟಂಥಾ - ಭಿನ್ನಾರ್ಥ ಪ್ರತಿಪಾದಕಾಃ - ಭಿನ್ನವಾದ ಅರ್ಥವನ್ನು ಹೇಳುವಂಥಾ, ಸಿದ್ಧಾಂತಃ ಸಾಂಖ್ಯಾ ಮೊದಲಾದ ಸಿದ್ಧಾಂತಗಳು, ರುಚಿ ಭೇದತಃ - ವಾದಿಗಳ ಮತಭೇದದಿಂದ, ವಿಖ್ಯಾತಃ - ಖಲುಲೋಕ ಪ್ರಸಿದ್ಧವಲಾ ॥೩॥

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ
ಏತಾನಿಮಾನ್ನಿಭೂತಾನಿ ನೋಪಹನ್ಯಾನಿಯುಕ್ತಿಭಿಃ

ಸಾಂಖ್ಯಂ - ಸಾಂಖ್ಯಶಾಸ್ತ್ರ, ಯೋಗಃ - ಯೋಗಶಾಸ್ತ್ರ, ಪಾಂಚರಾತ್ರಂ - ಪಾಂಚರಾತ್ರವು, ವೇದಾಃ - ವೇದಂಗಳು, ಪಾಶುಪತಂ - ಪಾಶುಪತಶಾಸ್ತ್ರವು, ಮಾನಭೂತಾನಿ - ಪ್ರಮಾಣಂಗಳಾಗಿರ್ದಂಥಾ, ಏತಾನಿ ಈ ಸಿದ್ಧಾಂತಗಳನು, ಕುಯುಕ್ತಿಭಿಃ - ಪಾಷಂಡರ ಯುಕ್ತಿಗಳಿಂದ, ನೋಪಪನ್ಯಾತ್ - ದೂಷಿಸಲಾಗದು, ಹನಹಿಂಸಾಗತ್ಯಃ ॥೪॥

ವೇದಾರ್ಥ ಸ್ವರೂಪವಾದ ಸಿದ್ಧಾಂತಕ್ಕೆ ಮುಖ್ಯತ್ವವನ್ನು ಹೇಳಲೋಸ್ಕರವಾಗಿ ವೇದಕ್ಕೆ ಪ್ರಾಧಾನ್ಯವನು ಹೇಳುತ್ತಿರ್ದಪಂ

ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ
ವೇದಾನುಸರಣಾದೇಷಾಂ ಪ್ರಾಮಾಣ್ಯಮಿತಿ ನಿಶ್ಚಿತಂ

ಮಹಾಮುನೇ - ಎಲೆ ಮುನೀಶ್ವರನೆ, ಸಾಂಖ್ಯಾದೀನಾಂ - ಸಾಂಖ್ಯ ಮೊದಲಾದ, ಸರ್ವೇಷಾಂ - ಪುರುಷ ಪ್ರಣೀತವಾದ ಸಮಸ್ತ ಶಾಸ್ತ್ರಂಗಳಿಗೆ, ವೇದಃ - ವೇದವು, ಪ್ರಧಾನಂ ಸರ್ವಜ್ಞನಾದ ಪರಮೇಶ್ವರ ಪ್ರಣೀತವಾದ ಕಾರಣ, ಪ್ರಧಾನವೆನಿಸುವುದು, ಏಷಾಂ - ಈ ಸಾಂಖ್ಯಾದಿಶಾಸ್ತ್ರಗಳಿಗೆ, ವೇದಾನುಸರಣಾ - ವೇದವನು ಅನುವರ್ತಿಸುವುದ ರಿಂದ, ಪ್ರಾಮಾಣ್ಯಮಿತಿ - ಪ್ರಮಾಣವೆಂದು, ನಿಶ್ಚಿತಂ - ಶಾಸ್ತ್ರಕಾರರಿಂದ ಶಾಸ್ತ್ರಂಗಳ ನಿರ್ಣಯಿಸಲ್ಪಟ್ಟಿತ್ತು ॥೫॥

ವೇದವನು ಅನುವರ್ತಿಸುವುದರಿಂದ ಪ್ರಮಾಣಾದ ಸಮಸ್ತಾಗಮಂಗಳೊಳಗೆ ಸಿದ್ಧಾಂತಕ್ಕೆ ಪ್ರಾಧಾನ್ಯವನು ಹೇಳುತ್ತಿರ್ದಪಂ

ಪಾಂಚರಾತ್ರಸ್ಯ ಸಾಂಖ್ಯಸ್ಯ ಯೋಗಸ್ಯ ಚ ತಥಾಮುನೇ
ವೇದೈಕದೇಶವರ್ತಿತ್ವಂ ಶೈವಂ ವೇದಮಯಂ ಮತಂ

ಮುನೇಃ - ಎಲೈ ಮುನೀಶ್ವರನೆ, ಪಾಂಚರಾತ್ರಸ್ಯ - ಪಾಂಚರಾತ್ರಕ್ಕೆ, ಸಾಂಖ್ಯಸ್ಯ - ಸಾಂಖ್ಯಶಾಸ್ತ್ರಕ್ಕೆ, ಯೋಗಸ್ಯಾ ಚ - ಯೋಗಕ್ಕೂ, ವೇದಕ್ಕೂ ವೇದೈಕದೇಶವರ್ತಿತ್ವಾತ್ - ವೇದೈಕದೇಶಾನುವರ್ತ್ತನವಲ್ಲದೆ, ಸಮಸ್ತವೇದಾರ್ಥ ಪ್ರತಿಪಾದಕತ್ವವಿಲ್ಲ. ತಥಾ - ಅದು ಕಾರಣ, ಶೈವಂ - ಶಿವಾಗಮವು, ವೇದಮಯಂ - ಸಮಸ್ತವೇದ ಸ್ವರೂಪವೆಂದು, ಮತಂ - ಸಮ್ಮತವು ॥೬॥

ವೇದೈಕದೇಶವರ್ತ್ತಿಭ್ಯಸ್ಸಾಂಖ್ಯಾದಿಭ್ಯೋಮಹಾಮುನೇ
ಸರ್ವವೇದಾನುಸಾರಿತ್ವಾತ್ ಚೈವ ತಂತ್ರಂ ವಿಶೇಷ್ಯತೇ

ಮಹಾಮುನೇ - ಎಲ್ಲೈ ಮುನೀಶ್ವರನೆ, ವೇದೈಕದೇಶವರ್ತಿಭ್ಯಃ - ವೇದದ ಏಕದೇಶದಲ್ಲಿರುತಿರ್ದಂಥಾ, ಸಾಂಖ್ಯಾದಿಭ್ಯಃ - ಸಾಂಖ್ಯ ಮೊದಲಾದ ಶಾಸ್ತ್ರಗಳಿಂದ ಸರ್ವವೇದಾನುಸಾರಿತ್ವಾತ್ - ಸಮಸ್ತ ವೇದಾರ್ಥದಲ್ಲಿ ವರ್ತಿಸುವುದರಿಂದ, ಶೈವತಂತ್ರಂ - ಶಿವಾಗಮವು, ವಿಶೇಷ್ಯತೇ - ವಿಶೇಷವೆನಿಸೂದು. ಶೇಷತ್ ವಿಶೇಷಣೊ ॥೭॥

ಶೈವತಂತ್ರವಧಿಕವಾದರೆ ಸಿದ್ಧಾಂತಗಳಿಗೇನಾಯಿತ್ತೆಂಬ ಶಂಕೆಯ ನೂಕಲೋಸ್ಕರ ಸಿದ್ಧಾಂತವೆ ಶೈವತಂತ್ರವೆಂದು ನಿರೂಪಿಸುತ್ತಿರ್ದಪಂ

ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ
ಸರ್ವವೇದಾರ್ಥರೂಪತ್ವಾತ್ ಪ್ರಾಮಾಣ್ಯಂ ವೇದವತ್ಸದಾ

ಶೈವತಂತ್ರಮಿತಿ - ಶೈವತಂತ್ರವೆಂದು, ಪ್ರೋಕ್ತಂ - ಹೇಳಲ್ಪಟ್ಟಂಥಾ, ಶಿವೋದಿತಂ - ಶಿವಪ್ರಣೀತವಾಗಿರ್ದಂಥಾ, ಸಿದ್ಧಾಥಾಖ್ಯಂ - ಸಿದ್ಧಾಂತವೆಂಬ ಹೆಸರನ್ನುಳ್ಳ ಗ್ರಂಥವು, ಸರ್ವವೇದಾರ್ಥರೂಪತ್ವಾತ್ - ಸಮಸ್ತವೇದಸ್ವರೂಪವಾದ ಕಾರಣ, ವೇದವತ್ ವೇದಮರ್ಯಾದೆಯಲ್ಲಿ, ಸದಾ - ಆವಾಗಲೂ, ಪ್ರಮಾಣಃ - ಪ್ರಮಾಣವು ॥೮॥

ಶೈವತಂತ್ರಗಳೊಳಗೆ ಸಿದ್ಧಾಂತಗ್ರಂಥಕ್ಕೆ ಆಧಿಕ್ಯವ ಹೇಳಲೋಸ್ಕರವಾಗಿ ಆಗಮಂಗಳ ವೇದಂಗಳನ್ನು ಹೇಳುತಿರ್ದಪಂ.

ಆಗಮಾಃ ಬಹುಧಾ ಪ್ರೋಕ್ತಾಶ್ಶಿವೇನ ಪರಮಾತ್ಮನಾ
ಶೈವಂ ಪಾಶುಪತಂ ಸೋಮಂ ಲಾಕುಲಂ ಚೇತಿ ಭೇದತಃ

ಪರಮಾತ್ಮನಾ - ಪರಬ್ರಹ್ಮ ಸ್ವರೂಪನಾಗಿರ್ದಂಥಾ, ಶಿವೇನ - ಶಿವನಿಂದ, ಬಹುಧಾ - ನಾನಾ ಪ್ರಕಾರವಾಗಿರ್ದ, ಆಗಮಾಃ - ಆಗಮಂಗಳು, ಪ್ರೋಕ್ತಾಃ - ಹೇಳಲ್ಪಟ್ಟವು. ಅವಾವವೆಂದರೆ ಶೈವಂ - ಶೈವವೆಂದು, ಪಾಶುಪತಂ - ಪಾಶುಪತವೆಂದು, ಸೋಮಂ - ಸೋಮವೆಂದು, ಲಾಕುಲಂಚ - ಲಾಕುಳವೆಂದು, ಇತಿಭೇದತಃ - ಈ ಪ್ರಕಾರದಿಂದ ನಾಲ್ಕು ಭೇದವು ॥೯॥

ತೇಷು ಶೈವಂ ಚತುರ್ಭೇದಂ ತಂತ್ರಂ ಸರ್ವವಿನಿಶ್ಚಿತಂ
ವಾಮಂ ಚ ದಕ್ಷಿಣಂ ಚೈವಾ ಮಿಶ್ರಂ ಸಿದ್ಧಾಂತಸೌಜ್ಞಕಂ

ತೇಷು - ಆ ಆಗಮಂಗಳೊಳಗೆ, ಶೈವ ತಂತ್ರಂ - ಶೈವತಂತ್ರವು, ವಾಮಂಚ - ವಾಮವೆಂದು, ದಕ್ಷಿಣಂ - ದಕ್ಷಿಣವೆಂದು, ಮಿಶ್ರಂ - ಮಿಶ್ರವೆಂದು, ಸಿದ್ಧಾಂತ ಸೌಜ್ಞಕಂ - ಸಿದ್ಧಾಂತವೆಂಬ ಹೆಸರನ್ನುಳ್ಳಂಥಾದ್ದು, ಚತುರ್ಭೇದಂ - ನಾಲ್ಕು ಭೇದವನುಳ್ಳಂಥಾದಾಗಿ, ಸರ್ವವಿನಿಶ್ಚಿತಃ - ಸಮಸ್ತರಿಂದ, ನಿಶ್ಚಿತಂ - ನಿಶ್ಚೈಸಲಾಗಿತ್ತು ॥೧೦॥

ಆ ನಾಲ್ಕು ಭೇದಗಳ ಸ್ವರೂಪವನು ಹೇಳುತಿರ್ದಪಂ

ಶಕ್ತಿ ಪ್ರಧಾನಂ ವಾಮಾಖ್ಯಂ ದಕ್ಷಿಣಂ ಭೈರವಾತ್ಮಕಂ
ಸಪ್ತಮಾತೃಪರಂ ಮಿಶ್ರಂ ಸಿದ್ಧಾಂತಂ ವೇದಸಮ್ಮತಂ

ಶಕ್ತಿ ಪ್ರಧಾನಂ - ಶಕ್ತಿಗಳನೆ ಪ್ರಧಾನವಾಗಿ ಪ್ರತಿಪಾದಿಸುವಂಥದ್ದು, ವಾಮಾಖ್ಯಂ - ವಾಮವೆನಿಸೂದೂ, ಭೈರವಾತ್ಮಕಂ - ಭೈರವನೆ ಪ್ರಧಾನವಾಗಿ ಪ್ರತಿಪಾದಿಸುವಂಥಾದು, ದಕ್ಷಿಣಂ - ದಕ್ಷಿಣ ತಂತ್ರವೆನಿಸುವುದು, ಸಪ್ತಮಾತೃ - ಏಳನೆ ಪರಿಚ್ಛೇದದಿಂದ, ಪರಂ - ಮೇಲೆ ಪ್ರತಿಪಾದಿಸಲ್ಪಟ್ಟಂಥಾ ಶಿವಪಂಚಾಕ್ಷರಾದಿಗಳು, ಮಿಶ್ರಂ - ಮಿಶ್ರವೆನಿಸುವುದು.

ವೇದಸಮ್ಮತಂ ಉಪನಿಷದ್ಭಾಗವರ್ಥವ ಪ್ರತಿಪಾದಿಸುವಂಥಾದ್ದು, ಸಿದ್ಧಾಂತಂ - ಸಿದ್ಧಾಂತವೆಂದು ಹೇಳಲ್ಪಡುವುದು ॥೧೧॥

ಸಿದ್ಧಾಂತ ವೇದ ಸಮ್ಮತವೆಂತಾಯಿತೆಂಬ ಶಂಕೆಯನು ಪರಿಹರಿಸಲೋಸ್ಕರ ನಿಮಿತ್ಯಂಗಳನು ಹೇಳುತಿರ್ದಪಂ

ವೇದಧರ್ಮಾಭಿದಾಯಿತ್ವಾತ್ಸಿದ್ಧಾಂತಾಖ್ಯಶ್ಶಿವಾಗಮಃ
ವೇದಬಾಹ್ಯ ವಿರೋಧಿತ್ವಾದ್ವೇದ ಸಮ್ಮತಮುಚ್ಯತೇ

ವೇದಧರ್ಮಾಭಿಧಾಯಿತ್ವಾತ್ - ವೇದದಲ್ಲಿ ಹೇಳಿದ ಧರ್ಮವನ್ನು ಹೇಳುವುದರಿಂದ, ಶಿವಾಗಮಃ - ಈ ಶಿವಾಗಮವು, ಸಿದ್ಧಾಂತಾಖ್ಯಾಃ - ಸಿದ್ಧಾಂತವೆಂದು ಹೇಳಲ್ಪಡುವುದು, ವೇದಬಾಹ್ಯ ವಿರೋಧಿತ್ವಾತ್ - ವೇದ ವಿರುದ್ಧವಾದ ಪಾಷಂಡ ಮತ ವಿರೋಧಿಯಾದ ಕಾರಣ, ವೇದಸಮ್ಮತಂ - ವೇದಸಮ್ಮತವೆಂದು, ಉಚ್ಯತೇ - ಹೇಳಲ್ಪಡುವುದು. ವಚಪರಿಭಾಷಣೆ ॥೧೨॥

ವೇದಕ್ಕೂ ಸಿದ್ಧಾಂತಕ್ಕೂ ಪ್ರಾಮಾಣ್ಯದಲ್ಲಿ ಭೇದವಿಲ್ಲವೆಂದು ಹೇಳುತಿರ್ದಪಂ

ವೇದಸಿದ್ಧಾಂತಯೋರೈಕ್ಯಮೇಕಾರ್ಥ ಪ್ರತಿಪಾದನಾತ್
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಸ್ಸದಾ

ವೇದಸಿದ್ಧಾಂತಯೋಃ - ವೇದಕ್ಕೂ ಸಿದ್ಧಾಂತಕ್ಕೂ, ಏಕಾರ್ಥಪ್ರತಿಪಾದನಾತ್ - ಒಂದರ್ಥ ಪ್ರತಿಪಾದಿಸುವುದರಿಂದ ಐಕ್ಯಂ, ಏಕತ್ವವಿಲ್ಲದೆ ಭೇದವಿಲ್ಲ, ತಥಾ - ಆದಕಾರಣ, ಮತಯೋಃ - ಈ ವೇದಾಂತಸಿದ್ಧಾಂತಗಳಿಗೆ, ಪ್ರಾಮಾಣ್ಯಂ - ಪ್ರಾಮಾಣ್ಯವು, ಸದೃಶಂ - ಸಮಾನವೆಂದು, ಪಂಡಿತೈಃ - ವಿದ್ವಾಂಸರುಗಳಿಂದ, ಜ್ಞೇಯಂ - ಅರಿಯಲು ಯೋಗ್ಯವು ॥೧೩॥

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ

ಸಿದ್ಧಾಂತಾಖ್ಯೇ - ಸಿದ್ಧಾಂತವೆಂಬ ಹೆಸರನುಳ್ಳ, ಶಿವೋದಿತೇ - ಶಿವನಿಂದ ಹೇಳಲ್ಪಟ್ಟ, ಕಾಮಿಕಾದ್ಯೇ - ಕಾಮಿಕ ಮೊದಲಾದ, ಮಹಾತಂತ್ರೇ - ದಿವ್ಯಾಗಮಂಗಳೆ, ಉತ್ತರೇಭಾಗೆ - ಮೇಲಣ ಭಾಗೆಯಲ್ಲಿ, ಪರಂ ಉತ್ಕಷ್ಟವಾದ, ವೀರಶೈವಮತಂ - ವೀರಶೈವ ಮತವು, ನಿರ್ದಿಷ್ಟಂ - ಹೇಳಲುಪಟ್ಟಿತು, ದಿಶಅತಿಸರ್ಜನೆ ॥೧೪॥

ವೀರಶೈವ ಶಬ್ದದ ಅರ್ಥವನು ಹೇಳುತಿರ್ದಪಂ

ವೀಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ

ಶಿವಜೀವೈಕ್ಯ ಬೋಧಿಕಾ - ಶಿವನಿಗೂ, ಜೀವನಿಗೂ ಏಕತ್ವವನು ಬೋಧಿಸುವ ವಿದ್ಯಾತತ್ವಜ್ಞಾನವು, ವೀಶಬ್ದೇನಾ - ವೀ ಎಂಬ ಶಬ್ದದಿಂದ ಉಚ್ಯತೇ - ಹೇಳಲ್ಪಡುವುದು.

ಏ ಶೈವಾಃ - ಆರು ಕೆಲವು ಶಿವಭಕ್ತರು, ತಸ್ಯಾಂ - ಅಂಥಾ ವಿದ್ಯೆಯಲ್ಲಿ, ರಮಂತೇ - ಪ್ರೀತಿಯುಳ್ಳಂಥ, ತೇ - ಅವರು, ವೀರಶೈವಾಸ್ತು - ವೀರಶೈವರೆಂದು, ಮತಾಃ - ಶೃತಿ ಸಮ್ಮತವು, ರಮುಕ್ರೀಡಾಯಾಂ ॥೧೫॥

ವೀರಶೈವ ಶಬ್ದಕ್ಕೆ ಪ್ರಕಾರಾಂತರದಿಂದ ಅರ್ಥವನು ಹೇಳುತಿರ್ದಪಂ

ವೇದಾಂತಜನ್ಯಂ ಯತ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ
ವಿದ್ಯಾಯಾಂ ರಮತೇ ತಸ್ಯಾಂ ವೀರಯಿತ್ಯಭಿಧೀಯ್ಯತೇ

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ
ತಸ್ಮಾದೇತೇ ಮಹಾಭಾಗಾಃ ವೀರಶೈವಯಿತಿ ಸ್ಮೃತಾಃ

ವೇದಾಂತ ಜನ್ಯಂ ಉಪನಿಷದ್ವಾಕ್ಯ ವಿಚಾರದಿಂದ ಹುಟ್ಟಲ್ಪಟ್ಟ, ಯತ್‌ಜ್ಞಾನಂ - ಆವುದಾನೊಂದು ಜ್ಞಾನವು, ವಿದ್ಯೇತಿ - ವಿದ್ಯೆಯೆಂದು, ಪರಿಕೀರ್ತ್ಯತೇ - ಹೇಳಲ್ಪಡುವುದು, ತಸ್ಯಾಂ ವಿದ್ಯಾಯಾಂ - ಆ ವಿದ್ಯೆಯಲ್ಲಿ, ರಮತೇ - ಕ್ರೀಡಿಸುವಂಥಾತನು, ವೀರ ಇತಿ - ವೀರನು ಎಂದು, ಅಭಿದೀಯತೇ - ಹೇಳಲ್ಪಡುವನು, ಶಿವರೂಪಾಯಾಂ - ಶಿವ ವಿಷಯವಾಗಿರ್ದಂಥಾ, ವಿದ್ಯಾಯಾಂ - ವಿದ್ಯೆಯಲ್ಲಿ, ವಿಶೇಷಾತ್ - ಮಿಗಿಲಾಗಿ, ಯತಃ - ಆವುದಾನೊಂದು ಕಾರಣವಾಗಿ, ರಮಣಂ - ಕ್ರೀಡಿಸುತಿರ್ದಾನು, ತಸ್ಮಾತ್ - ಅದು ಕಾರಣ, ಮಹಾಭಾಗಾಃ - ಉತ್ತಮವಾಗಿರ್ದ, ಏತೇ - ಇವರು, ವೀರಶೈವಯಿತಿ - ವೀರಶೈವರೆಂದು, ಸ್ಮೃತಾಃ - ಹೇಳಲ್ಪಟ್ಟರು, ಸ್ಮೃಚಿಂತಾಯಾಂ ॥೧೭॥

ವೀರಮಾಹೇಶ್ವರರೆಂಬ ಆರಕ್ಷರಕ್ಕೆ ಅರ್ಥವ ಹೇಳುತಿರ್ದಪಂ

ವಿದ್ಯಾಯಾಂ ರಮತೇಯಸ್ಮಾನ್ಮಾಯಾಂ ಹೇಯಾಂ ಶ್ವವದ್ರಹೇತ್
ಅನೇನೈವ ನಿರುಕ್ತೇನ ವೀರಮಾಹೇಶ್ವರ ಸ್ಮೃತಃ

ಯಸ್ಮಾತ್ - ಆವುದಾನೊಂದು ಕಾರಣವಾಗಿ, ವಿದ್ಯಾಯಾಂ - ಶಿವವಿಷಯವಾದ ಜ್ಞಾನದಲ್ಲಿ, ರಮತೇ - ರಮಿಸುತ್ತಿಹನು, ತಸ್ಮಾತ್ - ಅದುಕಾರಣವಾಗಿ, ಹೇಯಂ - ಬಿಡಲು ಯೋಗ್ಯವಾಗಿರ್ದ, ಮಾಯಾಂ - ಮಾಯೆಯನು, ಶ್ವವತ್ - ಶುನಕನೋಪಾದಿಯೆಂದರಿದು, ದಹೇತ್ - ಬಿಡುವುದು, ಅನೇನೈವನಿರುಕ್ತೇನ - ಹಿಂಗೆಂಬ ನಿರ್ವಚನದಿಂದ, ವೀರಮಾಹೇಶ್ವರಃ - ವೀರಮಾಹೇಶ್ವರರೆಂದು, ಸ್ಮೃತಃ - ಹೇಳಲ್ಪಡುವುದು ॥೧೮॥

ಶೈವ ಮಾಹೇಶ್ವರರುಗಳ ಭೇದವನು ಹೇಳುತಿರ್ದಪಂ

ಶೈವೈರ್ಮಾಹೇಶ್ವರೈಶ್ಚೈವ ಕಾರ್ಯ್ಯಮಂತರ್ಬಹಿಃ ಕ್ರಮಾತ್

ಶೈವೋ ಮಾಹೇಶ್ವರಶ್ಚೈತಿ ನಾತ್ಯಂತಮಿಹ ಭಿದ್ಯಂತೇ
ಯಥಾ ತಥಾ ನ ಭಿದ್ಯಂತೇ ಶೈವ ಮಾಹೇಶ್ವರ ಅಪಿ

ಶೈವೈಃ - ವೀರಶೈವರುಗಳಿಂದ, ಮಾಹೇಶ್ವರೈಃ - ಶುದ್ಧ ಶೈವರುಗಳಿಂದ, ಅಂತಃ - ಹೃದಯಕಮಲದಲ್ಲಿ, ಬಹಿಃ - ಬಾಹ್ಯಕರ ಪೀಠದಲ್ಲಿ, ಕ್ರಮಾತ್ - ತರುವಾಯಿಂದ, ಕಾರ್ಯಂ - ಶಿವಪೂಜಾಕಾರ್ಯವು ಮಾಡಬೇಕಾದುದು, ಶೈವಃ - ವೀರಶೈವನೆಂದು, ಮಾಹೇಶ್ವರಶ್ಚೇತಿ - ಶುದ್ಧಶೈವನೆಂದು, ಅತ್ಯಂತಂ - ವಿಶೇಷವಾಗಿ, ನಭಿದ್ಯತೆ - ಭೇದವಿಲ್ಲ. ಕ್ರಿಯಾಭೇದವಲ್ಲದೆ ವಸ್ತುಭೇದವಿಲ್ಲ ಎಂಬುದರ್ಥ, ಶೈವಾಃ - ವೀರಶೈವರೂ, ಮಾಹೇಶ್ವರಾ ಅಪಿ - ಶುದ್ಧಶೈವರಾಯಿತ್ತಾದರೂ, ಯಥಾನಭಿದ್ಯಂತೇ - ಹೇಂಗೆ ಭಿನ್ನರಲ್ಲ, ತಥಾ - ಆ ಪ್ರಕಾರವನು ಹೇಳಿಹೆನು ॥೧೯॥

ಶಿವಾಶ್ರಿತೇಷು ತೇಶ್ಶೈವಾ ಜ್ಞಾನಯಜ್ಞರತಾನರಾಃ
ಮಾಹೇಶ್ವರ ಸಮಾಖ್ಯಾತಾಃ ಕರ್ಮಯಜ್ಞರತಾಭುವಿ
ತಸ್ಮಾದಭ್ಯಂತರೇಕುರ್ಯ್ಯು ಶೈವಾಮಾಹೇಶ್ವರಾ ಬಹಿಃ

ಶಿವಾಶ್ರಿತೇಷು - ಶಿವಭಕ್ತರ ಮಧ್ಯದಲ್ಲಿ, ಯೇನರಾಃ - ಆರು ಕೆಲವು ಮನುಷ್ಯರು, ಜ್ಞಾನಯಜ್ಞರತಾಃ - ಧ್ಯಾನಪೂಜೆಯಲ್ಲಿ ತತ್ಪರರೂ, ತೇ - ಅವರು, ಶೈವಾಃ - ವೀರಶೈವರೆನಿಸುವರು, ಭುವಿ-ಭೂಮ್ಯಾದಿ ಪೀಠಂಗಳಲ್ಲಿ, ಕರ್ಮಯಜ್ಞರತಾಃ - ಕ್ರಿಯಾಭಜನೆಯಲ್ಲಿ ತತ್ಪರರಾಗಿದ್ದವರು, ಮಾಹೇಶ್ವರಾಃ - ಶುದ್ಧ ಶೈವರುಗಳೆಂದು, ಸಮಾಖ್ಯಾತಾಃ, ಹೇಳಲ್ಪಟ್ಟರು, ಖ್ಯಾಪ್ರಕಥನೆ. ತಸ್ಮಾತ್ -ಅದು ಕಾರಣ, ಅಭ್ಯಂತರೇ ಹೃದಯದಲ್ಲಿ, ಶೈವಾಃ - ವೀರಶೈವರು, ಕುರ್ಯ್ಯುಃ - ಪೂಜಿಸಬೇಕು, ಮಾಹೇಶ್ವರಾಃ ಶುದ್ಧಶೈವರು, ಬಹಿಃ - ಪೀಠದಲ್ಲಿ, ಕುರ್ಯ್ಯುಃ - ಪೂಜಿಸಬೇಕು ॥೨೦॥

ಶೈವ ಮಾಹೇಶ್ವರ ಭೇದವನು ಹೇಳಿ ಬಳಿಕ ಮೋಕ್ಷಾಧಿಕಾರಿಗಳಾದ ವೀರಶೈವರುಗಳು ಪ್ರವರ್ತಿಸುವ ಶಾಸ್ತ್ರವನ್ನು ನಿರೂಪಿಸುತಿರ್ದಪಂ

ಷಟ್ಸ್ಥಲನಿರೂಪಣ

ಶಾಸ್ತ್ರಂ ತು ವೀರಶೈವಾನಾಂ ಷಡ್ವಿಧಂ ಸ್ಥಲ ಭೇದತಃ
ಧರ್ಮಭೇದಸಮಾಯೋಗಾದಧಿಕಾರಿ ವಿಭೇದತಃ

ಶಾಸ್ತ್ರಂತು - ಈ ವೀರಶೈವಶಾಸ್ತ್ರವಾಯಿತ್ತಾದೊಡೆ, ಧರ್ಮಭೇದ ಸಮಾಯೋಗಾತ್ ಆಚಾರ ಭೇದ ಸಂಬಂಧದಿಂದಲು, ಅಧಿಕಾರಿ ವಿಭೇದತಃ - ಅಧಿಕಾರ ಭೇದದಿಂದಲೂ ಸ್ಥಲಭೇದತಃ - ಸ್ಥಲ ಭೇದಂಗಳು, ಷಡ್ವಿಧಂ - ಆರು ಪ್ರಕಾರವಾಗಿ, ವೀರಶೈವಾನಾಂ - ವೀರಶೈವರಿಂದನುಷ್ಠಿಸಲು ಯೋಗ್ಯರು ॥೨೨॥

ಈ ಶಾಸ್ತ್ರವು ಅಂಗಸ್ಥಲ ಲಿಂಗಸ್ಥಲವೆಂದು ಎರಡು ಭೇದವಾಗಿವರೊಳಗೆ ಅಂಗಸ್ಥಲ ಷಡ್ವಿಧ ಭೇದವನು ಉದ್ದೇಶಮಾತ್ರದಿಂ ನಿರೂಪಿಸುತಿರ್ದಪಂ.

ಆದೌ ಭಕ್ತಸ್ಥಲಂ ಪ್ರೋಕ್ತಂ ತತೋ ಮಾಹೇಶ್ವರ ಸ್ಥಲಂ
ಪ್ರಸಾದಿಸ್ಥಲಮನ್ಯತ್ತು ಪ್ರಾಣಲಿಂಗಿಸ್ಥಲಂ ಪರಂ
ಶರಣಸ್ಥಲಮಾಖ್ಯಾತಂ ಷಷ್ಠಮೈಕ್ಯಸ್ಥಲಂ ಮತಃ

ಆದೌ - ಮೊದಲಲ್ಲಿ, ಭಕ್ತಸ್ಥಲಂ - ಭಕ್ತಸ್ಥಲವು, ಪ್ರೋಕ್ತಂ - ಹೇಳಲ್ಪಟ್ಟಿತು, ತತಃ - ಅನಂತರದಲ್ಲಿ, ಮಾಹೇಶ್ವರ ಸ್ಥಲಂ - ಭಕ್ತಂಗೆ ಧರ್ಮಭೇದದಿಂದ ಮಾಹೇಶ್ವರನೆನಿಸುವವನದರಿಂದ ಭಕ್ತಸ್ಥಲದ ನಂತರದಲ್ಲಿ ಮಾಹೇಶ್ವರಸ್ಥಲವು ಹೇಳಲ್ಪಟ್ಟಿತು. ಪ್ರಸಾದಿ ಸ್ಥಲಂ - ಪ್ರಸಾದಿ ಸ್ಥಲವು, ಅನ್ಯತ್ - ಮೂರನೆಯ ಸ್ಥಲವು, ತಥಾ - ಆ ಪ್ರಕಾರದಲ್ಲಿ, ಪ್ರಾಣಲಿಂಗಿಸ್ಥಲಂ - ಪ್ರಾಣಲಿಂಗಿಸ್ಥಲವು ನಾಲ್ಕನೆಯದೆಂದು, ಪ್ರೋಕ್ತಂ - ಹೇಳಲ್ಪಟ್ಟಿತ್ತು. ಪರಂ - ಅದರಿಂದ ಮೇಲೆ, ಶರಣಸ್ಥಲಂ - ಶರಣ ಸ್ಥಲವು ಐದನೆಯದೆಂದು, ಪ್ರೋಕ್ತಂ - ಹೇಳಲ್ಪಟ್ಟಿತು. ಪರಂ - ಅದರಿಂದ ಮೇಲೆ, ಐಕ್ಯಸ್ಥಲಂ - ಐಕ್ಯಸ್ಥಲವು ಆರನೆಯದೆಂದು. ಆಖ್ಯಾತಂ - ಹೇಳಲ್ಪಟ್ಟಿತು, ಸಮ್ಮತಂ - ಸಮ್ಮತವೆಂದು, ಪ್ರೋಕ್ತಂ - ಹೇಳಲ್ಪಟ್ಟಿತು ॥೨೩॥

ವೀರಶೈವಾಸ್ತು ಷಡ್ಭೇದಾ ಸ್ಥಲಧರ್ಮ ವಿಭೇದತಃ
ಭಕ್ತಾದಿವ್ಯವಹಾರೇಣ ಪ್ರೋಚ್ಯಂತೇ ಶಾಸ್ತ್ರಪಾರಗೈಃ

ಸ್ಥಲಧರ್ಮ ವಿಭೇದತಃ - ಸ್ಥಲಧರ್ಮ ಭೇದದಿಂದ, ಷಡ್ಭೇದಾಃ - ಆರುಪ್ರಕಾರವಾದ, ವೀರಶೈವಾಃ - ವೀರಶೈವರು, ಭಕ್ತಾದಿವ್ಯವಹಾರೇಣ - ಭಕ್ತ ಮಾಹೇಶ್ವರರು ಮೊದಲಾದ ಭೇದದಿಂದ, ಶಾಸ್ತ್ರಪಾರಗೈಃ - ಶಾಸ್ತ್ರದ ಕಡೆಯ ಕಂಡವರುಗಳಿಂದ, ಪ್ರೋಚ್ಯಂತೇ - ಹೇಳಲ್ಪಡುವರು ॥೨೪॥

ಭಕ್ತಸ್ಥಲಭೇದವಿವರಣ

ಅಂಗಸ್ಥಲ - ೪೪

ಭಕ್ತಸ್ಥಲಂ ಪ್ರವಕ್ಷ್ಯಾಮಿ ಪ್ರಥಮಂ ಕಲಶೋದ್ಭವಾ
ತದವಾಂತರಭೇದಾಂಶ್ಚ ಸಮಾಹಿತಮನಾಃ ಶೃಣು

ಭೋ ಕಲಶೋದ್ಭವಾ - ಎಲೆ ಅಗಸ್ತ್ಯನೆ, ಪ್ರಥಮಂ - ಮೊದಲು, ಭಕ್ತಸ್ಥಲಂ - ಭಕ್ತಸ್ಥಲವನು, ತದವಾಂತರ ಭೇದಾಶ್ಚ - ಭಕ್ತಸ್ಥಲದ ಅವಾಂತರಸ್ಥಲದ ಭೇದಂಗಳನು, ಪ್ರವಕ್ಷ್ಯಾಮಿ - ಹೇಳಿಹೆನು, ಸಮಾಹಿತಮನಾಃ - ಏಕಾಗ್ರಚಿತ್ತನಾಗಿ, ಶೃಣು - ಕೇಳು ॥೨೫॥

ಭಕ್ತಸ್ಥಲಕೆ ಲಕ್ಷಣವ ಹೇಳುತಿರ್ದಪಂ

ಶಿವೇಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ
ತಸ್ಯಾನುಷ್ಠೇಯ ಧರ್ಮಾಣಾಮುಕ್ತಿರ್ಭಕ್ತ ಸ್ಥಲಂ ಮತಂ

ಯಸ್ಯ - ಆವನಾನೊರ್ವಂಗೆ ಶಿವೇಃ-ಶಿವನಲ್ಲಿ, ಭಕ್ತಿಃ - ಭಕ್ತಿಯು, ಸಮುತ್ಪನ್ನಾ-ಹುಟ್ಟುತ್ತಿಹುದು, ಅಸೌ-ಈತನು, ಭಕ್ತಃ - ಭಕ್ತನು, ಉಚ್ಯತೆ - ಹೇಳಲ್ಪಡುವನು ತಸ್ಯ-ಆತಂಗೆ, ಅನುಷ್ಠೇಯ ಧರ್ಮಾಣಾಂ - ಅನುಷ್ಠಿಸಲು ಯೋಗ್ಯವಾದ ಧರ್ಮಗಳಿಂದ, ಮುಕ್ತಿಃ - ಶಿವಸಾಯುಜ್ಯ ರೂಪ ಮುಕ್ತಿಯು, ಭಕ್ತಸ್ಥಲ - ಇದು ಭಕ್ತಸ್ಥಲವೆಂದು ಮತಂ - ಆಗಮ ಸಮ್ಮತವು ॥೨೬॥

ಭಕ್ತಸ್ಥಲದವಾಂತರ ಸ್ಥಲಗಳನ್ನುದ್ದೇಶಿಸುತ್ತಿರ್ದಪಂ

ಅವಾಂತರಸ್ಥಲಾನ್ಯತ್ರ ಪ್ರಾಹುಪಂಚದಶೋತ್ತಮಾಃ
ಪಿಂಡಂಚ ಪಿಂಡವಿಜ್ಞಾನಂ ಸಂಸಾರಗುಣಹೇಯತಾ

ದೀಕ್ಷಾಲಿಂಗಧೃತಿಶ್ಚೈವ ವಿಭೂತಿರಪಿಧಾರಣಂ
ರುದ್ರಾಕ್ಷಧಾರಣಂ ಚೈವ ಪಂಚಾಕ್ಷರಜಪಸ್ತಥಾ

ಭಕ್ತಮಾರ್ಗಕ್ರಿಯಾಚೈವ ಗುರೋರ್ಲಿಂಗಸ್ಯಚಾರ್ಚನಂ
ಜಂಗಮಸ್ಯ ತಥಾ ಹ್ಯೇಷಾಂ ಪ್ರಸಾದ ಸ್ವೀಕೃತುಸ್ತಥಾ

ಅತ್ರ ದಾನತ್ರಯಂ ಪ್ರೋಕ್ತಾ ಸೋಪಾಧಿ ನಿರುಪಾಧಿ ಚ
ಸಹಜಂ ಚೇತಿನಿರ್ದಿಷ್ಟಂ ಸಮಸ್ತಾಗಮಪಾರಗೈಃ

ಉತ್ತಮಾಃ - ಬಲ್ಲಂಥವರುಗಳು, ಅತ್ರ-ಈಭಕ್ತಸ್ಥಲದಲ್ಲಿ, ಪಂಚದಶಃ - ಹದಿನೈದು ಅವಾಂತರ ಸ್ಥಲಾನಿ - ಅವಾಂತರ ಸ್ಥಲಂಗಳನು, ಪ್ರಾಹುಃ - ಹೇಳುತ್ತಿರುವನು ಆವಾವವೆಂದೊಡೆ, ಪಿಂಡಂ ಚ - ಪಿಂಡಸ್ಥಲ, ಪಿಂಡವಿಜ್ಞಾನಂ - ಪಿಂಡಜ್ಞಾನಸ್ಥಲ, ಸಂಸಾರಗುಣ ಹೇಯತಾ - ಸಂಸಾರ ಹೇಯಸ್ಥಲ, ದೀಕ್ಷಾ - ಗುರು ಕರುಣಸ್ಥಲ, ಲಿಂಗಧೃತಿಶ್ಚೈವಾ - ಲಿಂಗಧಾರಣ ಸ್ಥಲ, ವಿಭೂತಿಧಾರಣಂ - ವಿಭೂತಿ ಧಾರಣಸ್ಥಲ, ರುದ್ರಾಕ್ಷಧಾರಣಂ - ರುದ್ರಾಕ್ಷಧಾರಣಸ್ಥಲ, ಪಂಚಾಕ್ಷರ ಜಪಂ - ಶಿವಪಂಚಾಕ್ಷರ ಜಪಸ್ಥಲ, ತಥಾ - ಹಾಗೆ, ಭಕ್ತಿಮಾರ್ಗಕ್ರಿಯಾಶ್ಚೈವಾ - ಶಿವಭಕ್ತಿ ಮಾರ್ಗಾಚಾರ ಸ್ಥಲ, ಗುರೋರ್ಲಿಂಗಸ್ಯಚಾರ್ಚನಂ, ಗುರೋಃ - ಗುರುವಿನ, ಲಿಂಗಸ್ಯ - ಲಿಂಗದ, ಅರ್ಚನಂ - ಪೂಜೆಯು, ಉಭಯಸ್ಥಲ, ಜಂಗಮಸ್ಯ - ಜಂಗಮದ ಪೂಜೆಯಂ ಕೂಡಿ ತ್ರಿವಿಧ ಸಂಪತ್ತುಸ್ಥಲ, ತಥಾ - ಹಾಂಗೆ, ಏಷಾಂ - ಈ ಗುರುಲಿಂಗ ಜಂಗಮದ ಪ್ರಸಾದ ಸ್ವೀಕಾರವು ಚತುರ್ವಿಧ ಸಾರಾಯ ಸ್ಥಲ, ಅತ್ರ - ಈ ಭಕ್ತಸ್ಥಲದಲ್ಲಿ ಸೋಪಾಧಿ ನಿರುಪಾಧಿಕಂ ಉಪಾಧಿಮಾಟಸ್ಥಲ ನಿರುಪಾದಿ ಮಾಟಸ್ಥಲ, ಸಹಜಂಚೇತಿ - ಸಹಜಮಾಟ ಸ್ಥಲವೆಂದು, ಧ್ಯಾನತ್ರಯಂ - ಮೂರು ಪ್ರಕಾರವಾದ ಭಕ್ತಸ್ಥಲವು, ಸಮಸ್ತಾಗಮ ಪಾರಗೈಃ - ಸರ್ವಾಗಮಂಗಳ ಕಡೆಗಂಡವರುಗಳಿಂದ, ನಿರ್ದಿಷ್ಟಂ - ಹೇಳಲ್ಪಟ್ಟಿತ್ತು ॥೩೦॥

ಏತಾನಿ ಶಿವಭಕ್ತಸ್ಯಾ ಕರ್ತವ್ಯಾನಿ ಪ್ರಯತ್ನತಃ

ಏತಾನಿ - ಈ ಸ್ಥಲಂಗಳು, ಶಿವಭಕ್ತಸ್ಯ - ಶಿವಭಕ್ತನಿಗೆ, ಪ್ರಯತ್ನತಃ - ಅವಶ್ಯವಾಗಿ, ಕರ್ತವ್ಯಾನಿ - ಬೇಕಾಗಿದ್ದಂಥ ॥೩೧॥

೧. ಪಿಂಡಸ್ಥಲ

ಪಿಂಡಸ್ಥಲಕೆ ಲಕ್ಷಣವನು ಹೇಳುತಿರ್ದಪಂ

ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ
ಶುದ್ಧಾಂತಃಕರಣೋದೇಹಿ ಪಿಂಡಶಬ್ದೇನ ಗೀಯತೇ

ಬಹುಜನ್ಮ ಕೃತೈಃ - ಅನೇಕ ಜನ್ಮಗಳಲ್ಲಿ ಮಾಡಿದ, ಪುಣ್ಯೈಃ - ಪುಣ್ಯಗಳಿಂದ, ಪಾಪಪಂಜರೇ - ಪಾಪಗಳ ಸಮೂಹವು, ಪ್ರಕ್ಷೀಣೇಸತಿ - ಕೆಡುತ್ತಿರಲಾಗಿ, ಶುದ್ಧಾಂತಃಕರಣಂ - ಶುದ್ಧಾಂತಕರಣನಾದ, ದೇಹಿ - ಜೀವನು. ಪಿಂಡಶಬ್ದೇನ - ಪಿಂಡವೆಂಬ ಹೆಸರಿಂದ, ಗೀಯತೇ - ಹೇಳಲ್ಪಡುವನು, ಕೈರ್ಗೈರೈಶಬ್ದೇ ॥೩೨॥

ಶಿವನ ಮಾಯೆಯಿಂದ ಹುಟ್ಟಿದ ಸಂಸಾರ ಪ್ರಪಂಚವು ಶಿವಭಕ್ತಿಯಿಂದ ಕೆಡುವುದೆಂದು ಸೂಚಿಸುತ್ತ ಪೂರ್ವಶ್ಲೋಕದಲ್ಲಿ ಹೇಳಿದ ಅರ್ಥವನೆ ಸ್ಪಷ್ಟವಾಗಿ ನಿರೂಪಿಸುತಿರ್ದಪಂ

ಶಿವಶಕ್ತಿಸಮುತ್ಪನ್ನೇ ಪ್ರಪಂಚೇಸ್ಮಿನ್ವಿಕಲ್ಪಿತೇ
ಪುಣ್ಯಾಧಿಕಃ ಕ್ಷೀಣಪಾಪಶ್ಶುದ್ಧಾತ್ಮಾ ಪಿಂಡನಾಮಕಃ

ಶಿವಶಕ್ತಿ ಸಮುತ್ಪನ್ನೇ - ಶಿವನ ಮಾಯೆಯಿಂದ ಹುಟ್ಟಿದ, ವಿಕಲ್ಪಿತೇನಾ - ಪ್ರಕಾರವಾದ, ಅಸ್ಮಿನ್ಪ್ರಪಂಚೇ - ಈ ಜಗತ್ಪ್ರಪಂಚದಲ್ಲಿ, ಪುಣ್ಯಾಧಿಕಃ - ಅನೇಕ ಪುಣ್ಯವನ್ನುಳ್ಳ, ಕ್ಷೀಣಪಾಪಂ - ಕೆಡಲ್ಪಟ್ಟ ಪಾಪವನ್ನುಳ್ಳ, ಶುದ್ಧಾತ್ಮ - ನಿರ್ಮಲ ಚಿತ್ತವನುಳ್ಳಾತನು, ಪಿಂಡನಾಮಕಃ - ಪಿಂಡವೆಂಬ ಹೆಸರನ್ನುಳ್ಳಾತನೂ ॥೩೩॥

ಸ್ಮತಿಗಳಲ್ಲಿ ಜೀವನು ಸತ್ಯಜ್ಞಾನ ಸ್ವರೂಪನೂ ನಿರ್ಲೇಪನೂ ಕೂಟಸ್ಥನೂ ನಿತ್ಯಮುಕ್ತನೂ ಪಾಪಪುಣ್ಯರಹಿತನೂ ಎಂದು ಮರಳಿ ನಿರೂಪಿಸಲ್ಪಡುವುದರಿಂ ನಿಶ್ಚೈಸಲ್ಪಟ್ಟ ಜೀವನಿಗೆ ಸಂಸಾರವೆ ಇಲ್ಲ, ಅದರಿಂದ ಮೊದಲು ಹೇಳಿದ ಪಿಂಡಶಬ್ದ ವಾಚ್ಯನಾದ ಜೀವನಿಗೆ ಶಿವಭಕ್ತಿಯಿಂದ ಪಾಪಕ್ಷಯವಾಗೆ ಸಂಸಾರ ನಿವೃತ್ತಿಯಹುದೆಂಬುದೆ ಯುಕ್ತವು ಈ ಶಂಕೆಯನು ಪರಿಹರಿಲೋಸ್ಕರವಾಗಿ ನಿತ್ಯಮುಕ್ತ ನಿರ್ಲೇಪನಾದರೂ ಜೀವನಿಗೆ ಸಂಸಾರ ಪ್ರಾಪ್ತಿಯು ರಜ್ಜುವಿನಲ್ಲಿಯ ಸರ್ಪ, ಕನ್ನಡಿಯಲ್ಲಿಯ ಮುಖಭೇದ ಪ್ರಾಪ್ತಿಯಂತೆ ಸಂಭವಿಸುವುದೆಂದು ಹೇಳಲೋಸ್ಕರವಾಗಿ ಜೀವವನು ಪಾರಮಾರ್ಥಿಕ ಸ್ವರೂಪನು ಹೇಳುತಿರ್ದಪಂ.

ಏಕ ಏವಶಿವಸ್ಸಾಕ್ಷಾಚ್ಚಿದಾನಂದಮಯೋವಿಭುಃ
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ

ಚಿದಾನಂದಮಯಃ - ಜ್ಞಾನಾನಂದ ಸ್ವರೂಪನಾದ, ಸಾಕ್ಷಾತ್ - ಪ್ರತ್ಯಕ್ಷ ಸ್ವರೂಪನಾದ, ವಿಭುಃ - ಸ್ವತಂತ್ರನಾದ, ನಿರ್ವಿಕಲ್ಪಃ - ಭೇದರಹಿತನಾದ, ನಿರಾಕಾರಃ - ಆಕಾರಶೂನ್ಯನಾದ, ನಿರ್ಗುಣಃ - ಗುಣರಹಿತನಾದ, ನಿಃ ಪ್ರಪಂಚಕಃ - ಪ್ರಪಂಚ ಸಂಬಂಧರಹಿತನಾದ, ಶಿವಃ - ಶಿವನು, ಏಕಏವಾ ಒಬ್ಬನೆ ಪ್ರಕಾಶಾತ್ಮನಾಗಿರುತ್ತಿಹನು ॥೩೪॥

ಜ್ಞಾನಾತ್ಮಕನಾದ ಶಿವನಲ್ಲಿ ಅಜ್ಞಾನ ಸಂಬಂಧದಿಂದ ಜಲಬುದ್ಬುದದಂತೆ ನಾನಾ ಪ್ರಕಾರವನುಳ್ಳ ಜೀವರೂ ಪ್ರಾದುರ್ಭವಿಸಿದರೆಂದು ಹೇಳುತಿರ್ದಪಂ

ಅನಾದ್ಯವಿದ್ಯಾಸಂಬಂಧಾತ್ತದಂಶೇ ಜೀವಸೌಜ್ಞಕಃ
ದೇವತಿರ್ಯಗ್ಮನುಷ್ಯಾದಿ ಜಾತಿಭೇದೇ ವ್ಯವಸ್ಥಿತಾಃ

ಅನಾದ್ಯ ವಿದ್ಯ ಸಂಬಂಧಾತ್ - ಅನಾದಿಯಾದ ಅಜ್ಞಾನ ಸಂಬಂಧದಿಂದ ತದಂಶಾಃ - ಘಟಾಂಶ ಮರ್ಯಾದೆಯಲ್ಲಿ ಈಶ್ವರನ ಅಂಶಗಳು, ದೇವತಿರ್ಯಗ್ಮನುಷ್ಯಾದಿ - ದೇವತೆಗಳು ತಿರ್ಯಕ್, ಪಶುಪಕ್ಷಿ ಮೃಗಂಗಳು, ಮನುಷ್ಯಾದಿ - ಮನುಷ್ಯ ಮೊದಲಾದ, ಜಾತಿಭೇದೇ - ಜಾತಿ ವಿಶೇಷಂಗಳಲ್ಲಿ, ವ್ಯವಸ್ಥಿತಾಃ - ಇರುತ್ತಿದ್ದಾತ್ಮರುಗಳು ಜೀವಸೌಜ್ಞಕಃ ಜೀವರೆಂಬ ಹೆಸರನ್ನುಳ್ಳವರು ॥೩೫॥

ಶಿವಾಂಶವಾಗಿಯೆ ಉದ್ಭವಿಸಿದಂಥಾ ಜೀವರು ದೇಹಾಭಿಮಾನಿಗಳಾಗಿರುತ್ತಿಹರು. ಈಶ್ವರನು ಆ ಜೀವರುಗಳ ಹೃದಯದಲ್ಲಿ ಅಂತರ್ಯಾಮಿಯಾಗಿ ಪ್ರಪಂಚ ಸಂಬಂಧವಿಲ್ಲದೆ ನಿರ್ಲೇಪನಾಗಿಹನೆಂದು ಹೇಳುತಿರ್ದಪಂ

ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಯಸ್ಥಿತಾಃ
ಚಂದ್ರಕಾಂತೇ ಯಥಾತೋಯಂ ಸೂರ್ಯಕಾಂತೇ ಯಥಾನಲಃ

ಬೀಜೇ ಯಥಾಂಕುರಸ್ಸಿದ್ಧಸ್ಥಥ್ಯಾऽತ್ಮನಿ ಶಿವಸ್ಥಿತಃ

ಮಾಯೀ-ಮಾಯಾವಿಯಾಗಿದ್ದಂಥಾ, ಮಾಹೇಶ್ವರಾಃ - ಶಿವನು, ತೇಷಾಂ - ಅವರುಗಳಿಗೆ, ಪ್ರೇರಕಃ - ಪ್ರೇರಕನಾಗಿ, ಹೃದಯಸ್ಥಿತಃ - ಅಂತರಂಗದಲ್ಲಿಹನು. ಅಲ್ಲಿ ದೃಷ್ಟಾಂತವನು ಹೇಳುತಿರ್ದಪಂ, ಚಂದ್ರಕಾಂತಾ - ಚಂದ್ರಕಾಂತದ ಶಿಲೆಯಲ್ಲಿ, ತೋಯಃ - ಉದಕವು, ಸೂರ್ಯಕಾಂತಾ - ಸೂರ್ಯಕಾಂತದ ಶಿಲೆಯಲ್ಲಿ, ಅನಲಃ - ಅಗ್ನಿಯು, ಬೀಜ - ಬೀಜದಲ್ಲಿ, ಅಂಕುರಂ - ಮೊಳಕೆಯು, ಯಥಾ - ಹಾಗೆ, ತಥಾ - ಆ ಮರ್ಯಾದೆಯಲ್ಲಿ, ಶಿವಂ - ಶಿವನು, ಆತ್ಮನಿ - ತನ್ನ ಸಂಬಂಧವಾದ ಜೀವರ ಹೃದಯದಲ್ಲಿ, ಸ್ಥಿತಃ - ಇರುತ್ತಿಹನು

ಜೀವೇಶ್ವರರಿಗೆ ಅಭೇದ ಘಟಿಸದೆ ಏನು ಕಾರಣವೆಂದಡೆ ಈಶ್ವರನು ನಿತ್ಯಮುಕ್ತನು, ಜೀವನು ಸಂಸಾರಿಯಾದ ಕಾರಣ ಈಶ್ವರನು ಪುಣ್ಯ ಪಾಪರಹಿತನು. ಜೀವನು ಅನಾದಿಭವಸಂಚಿತಕರ್ಮಸಂಬಂಧವನುಳ್ಳವನಾದ ಕಾರಣ ಈಶ್ವರನು ಪರಿಪೂರ್ಣನು. ಜೀವನು ಖಂಡಿತನಾದ ಕಾರಣ ಈಶ್ವರನು ಸರ್ವಕರ್ತೃ. ಜೀವನು ಕಿಂಚಿತ್ ಕರ್ತವಾದ ಕಾರಣ ಈಶ್ವರನು ಉಪಾಸ್ಯನು. ಜೀವನು ಪಾಶಕನಾದ ಕಾರಣ ಈಶ್ವರನು ಕೂಟಸ್ಥನು. ಜೀವನು ಷಡ್ಭಾವ ವಿಕಾರಿಯಾದ ಕಾರಣ, ಈಶ್ವರನು ಮಾಯಾವಿಜೀವನು. ಅಜ್ಞಾನಿಯಾದ ಕಾರಣ ಇವು ಮೊದಲಾದ ಅನೇಕ ವಿರುದ್ಧ ಧರ್ಮಗಳಿಂದ ತೇಜಸ್ತಿಮಿರಂಗಳ ಮರ್ಯಾದೆಯಲ್ಲಿ ದಹನ ತುಹಿನಂಗಳಂತೆ ಪರ್ವತ ಪರಮಾಣುಗಳೋಪಾದಿಯಲ್ಲಿ ಅತ್ಯಂತ ಭಿನ್ನವಾಗಿರ್ದಂಥಾ ಜೀವೇಶ್ವರರುಗಳಿಗೆ ಅಭಿನ್ನ ಘಟಿಸದು ಎಂಬ ಶಂಕೆಯನು ನಿರಾಕರಿಸಲೋಸುಗವಾಗಿ ಬಿಂಬ ಪ್ರತಿಬಿಂಬ ದೃಷ್ಟಾಂತದಿಂ ಹೇಳುತಿರ್ದಪಂ ॥೩೬॥

ಆತ್ಮತ್ವಮೀಶ್ವರತ್ವಂ ಚ ಬ್ರಹ್ಮಣ್ಯೇಕತ್ರ ಕಲ್ಪಿತಂ
ಬಿಂಬತ್ವಂ ಪ್ರತಿಬಿಂಬಿತ್ವಂ ಯಥಾ ಪೂಷಣಿ ಕಲ್ಪಿತಂ

ಪೂಷಣಿ - ಸೂರ್ಯನಲ್ಲಿ, ಬಿಂಬತ್ವಂ - ನೆಳಲಹತನವು, ಪ್ರತಿಬಿಂಬತ್ವಂ - ಪ್ರತಿಬಿಂಬಹತನವು, ಯಥಾ - ಹ್ಯಾಗೆ, ಕಲ್ಪಿತಂ - ಕಲ್ಪಿಸಲ್ಪಟ್ಟಿತ್ತು, ಒಬ್ಬ ಸೂರ್ಯನಲ್ಲಿ ಅಲ್ಪತ್ವ, ಮಹತ್ವ, ಆಕಾಶತ್ವ, ಜಲತ್ವ, ಕಂಪ, ಅಕಂಪ ಮೊದಲಾದನೇಕ ವಿರುದ್ಧ ಧರ್ಮಂಗಳು ಉಪಾಧಿ ಭೇದದಿಂದಲಾದ ವಿರುದ್ಧಂಗಳಲ್ಲದೆ ಪರಮಾರ್ಥವಲ್ಲ. ತಥಾ - ಆ ಪ್ರಕಾರದಲ್ಲಿ, ಆತ್ಮತ್ವಂ - ಜೀವತ್ವವು, ಈಶ್ವರತ್ವಂ - ಶಿವತ್ವವು, ಏಕತ್ರ ಬ್ರಹ್ಮಣಿ - ಅದ್ವಿತೀಯವಾದ ಬ್ರಹ್ಮದಲ್ಲಿ, ಕಲ್ಪಿತಂ - ಉಪಾಧಿ ಭೇದದಿಂದ ಕಲ್ಪಿಸಲ್ಪಟ್ಟಿತು ॥೩೭॥

ಅದ್ವಿತೀಯಬ್ರಹ್ಮದಲ್ಲಿ ಉಪಾಧಿಭೇದದಿಂದ ನಾನಾಭೇದ ಕಲ್ಪನೆಯನು ತೋರಿಸುತಿರ್ದಪಂ

ಗುಣತ್ರಯವಿಭೇದೇನ ಪರತತ್ವೇ ಚಿದಾತ್ಮನಿ
ಭೌಕ್ತೃತ್ವಂಚೈವ ಭೋಜ್ಯತ್ವಂ ಪ್ರೇರಕತ್ವಂ ಚ ಕಲ್ಪಿತಂ

ಚಿದಾತ್ಮನಿ - ಜ್ಞಾನಾತ್ಮಕನಾದ, ಪರತತ್ವೆ - ಪರಬ್ರಹ್ಮದಲ್ಲಿ, ಗುಣತ್ರಯ ವಿಭೇದೇನ ಸತ್ವ, ರಜ, ತಮಸ್ಸುಗಳೆಂಬ ಮಾಯಾಗುಣ ವಿಭೇದದಿಂದ, ಭೌಕ್ತೃತ್ವಂ - ಸುಖ ದುಃಖಾತ್ಮಕವಾದ ಕರ್ಮಫಲ, ಭೌಕ್ತೃತ್ವ ಭ್ರೂಜ್ಯತ್ವಂ - ಪಶು ಪುತ್ರಾದಿ ವಿಷಯದಲು, ಪ್ರೇರಕತ್ವಂಚ - ಅಂತರ್ಯಾಮಿಯಾಗಿ ಪ್ರೇರಿಸುವಂಥಾ ಈಶ್ವರತ್ವವೂ, ಕಲ್ಪಿತಂ - ಕಲ್ಪಿಸಟ್ಟಿತು ॥೩೮॥

ಆ ಮೂರು ಸ್ವರೂಪವನು ನಿರೂಪಿಸುತಿರ್ದಪಂ

ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ
ತದ್ವೈಷಮ್ಯಾತ್ಸಮುತ್ಪನ್ನಾ ತಸ್ಮಿನ್ವಸ್ತುತ್ರಯಾಭಿಧಾ

ಗುಣತ್ರಯಾತ್ಮಿಕಾ ಸತ್ವರಜಸ್ತಮೋಗುಣಾತ್ಮಕವಾಗಿರ್ದಂಥಾ, ಬ್ರಹ್ಮನಿಷ್ಠಾ ಪರಬ್ರಹ್ಮವನಾಶ್ರೈಸಿದಂಥಾ, ಸನಾತನೀ - ಕೇಡಿಲ್ಲದ, ಯಾಶಕ್ತಿಃ - ಆವುದಾನೊಂದು ಮಾಯಾಶಕ್ತಿಯುಂಟು. ತದ್ವೈಷಮ್ಯಾತ್ - ಆ ಮಾಯಾಶಕ್ತಿಯ ಗುಣತ್ರಯಂಗಳ ವಿಷಮತ್ವದಿಂದ, ತಸ್ಮಿನ್ವಸ್ತುತ್ರಯಾಭಿದಾ - ಆ ಮೂರುಪ್ರಕಾರವಾದ ಭೇದವು, ಸಮುತ್ಪನ್ನಾ - ಉದ್ಭವಿಸಿತ್ತು ॥೩೯॥

ಆ ಭೇದಂಗಳೊಳಗೆ

ಪರಸತ್ವಮಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ

ಕಿಂಚಿತ್ಸತ್ವರಜೋರೂಪಂ ಭೌಕ್ತೃಸಂಜ್ಞಕಮುಚ್ಯತೇ
ಅತ್ಯಂತತಾಮಸೋಪಾಧಿರ್ಭೋಜ್ಯಮಿತ್ಯತ್ರಭಿಧೀಯತೇ

ಪರಸತ್ವಮಯೋಪಾಧಿ - ಅತ್ಯಂತ ಸಾತ್ವಿಕ ಗುಣೋಪಾಧಿಯಿಂದ, ಬ್ರಹ್ಮಚೈತನ್ಯಂ - ಭೌಕ್ತೃಸಾಂಗತಂ - ಬ್ರಹ್ಮಚೈತನ್ಯವು, ಈಶ್ವರಃ - ಪ್ರೇರಕನಾದ ಪರಮೇಶ್ವರನೆಂದು, ಉಚ್ಯತೇ - ಹೇಳಲ್ಪಡುವುದು

ಕಿಂಚಿತ್ಸತ್ತ್ವರಜೋರೂಪಂ - ಕಿಂಚಿತ್ - ವಪ್ಪಚ್ಚಿ, ಸತ್ತ್ವ ರಜೋ ರೂಪಂ - ಸಾತ್ವಿಕ ರಜೋ ಗುಣಂಗಳ ಮಿಶ್ರೋಪಾಧಿಯಿಂದ ಪ್ರಾದುರ್ಭವಿಸಿದ ಜೀವನು ಭೌಕ್ತೃಸಾಂಗತಂ - ಭೌಕ್ತೃವೆಂಬ ಹೆಸರಿಂದ, ಉಚ್ಯತೆ - ಹೇಳಲ್ಪಡುವುದು. ಅತ್ಯಂತ ತಾಮಸೊಪಾಧಿಃ - ಮಿಗಿಲಾದ ತಮೋಗುಣೋಪಾಧಿಯಿಂದ ಹುಟ್ಟಿದಂತಹ ವಿಷಯ ಭೇದವು, ಭೋಜ್ಯಮಿತಿ - ಭೋಜ್ಯವೆಂದು, ಬುಧೈಃ - ವಿದ್ವಾಂಸರುಗಳಿಂದ, ಉಚ್ಯತೇ - ಹೇಳಲ್ಪಡುವುದು ॥೪೦॥

ಭೌಕ್ತಾದಿ ಭೇದವು ಕಲ್ಪಿತವೇಕೆ ಆಗಬೇಕು, ಪ್ರತಿಜ್ಞೆ ವಿಷಯಾನುಗುಣವಾಗಿ ಸತ್ಯವೇ ಆಗಲೆಂದು ಶಂಕಿಸಿ ಅಖಂಡವಾದ ಬ್ರಹ್ಮದಲ್ಲಿ ಭೇದವು ಕಲ್ಪಿತವಲ್ಲದೆ ಸತ್ಯವಲ್ಲೆಂದು ಪೇಳುತಿರ್ದಪಂ

ಭೌಕ್ತೃಭೋಜ್ಯಂ ಪ್ರೇರಯಿತ್ವಾ ವಸ್ತುತ್ರಯಮಿದಂ ಸ್ಮೃತಂ
ಅಖಂಡೇ ಬ್ರಹ್ಮಚೈತನ್ಯೇ ಕಲ್ಪಿತಂ ಗುಣಭೇದತಃ

ಭೌಕ್ತೃವು - ಭೌಕ್ತೃವು, ಭೋಜ್ಯಂ - ಭೋಜ್ಯವು ಪ್ರೇರಿಯಿತ್ವಾ - ಪ್ರೇರಕನೂ, ಇದಂ ವಸ್ತುತ್ರಯಂ - ಈ ಮೂರು ವಸ್ತುವು, ಅಖಂಡೇ - ಅದ್ವಿತೀಯವಾಗಿದ್ದಂತಹ. ಬ್ರಹ್ಮಚೈತನ್ಯೇ - ಬ್ರಹ್ಮಚೈತನ್ಯದಲ್ಲಿ, ಗುಣಭೇದತಃ - ಮಾಯಾಗುಣ ಭೇದದಿಂದ, ಕಲ್ಪಿತಂ - ಕಲ್ಪಿತವೆಂದು, ಸ್ಮೃತಂ - ನೆನೆಯಲ್ಪಡುವುದು ॥೪೧॥

ಈ ಮೂರು ಭೇದಂಗಳೊಳಗೆ ಶಿವನೆ ಪ್ರೇರಕನು, ಜೀವನೆ ಭೌಕ್ತೃವು ಜಡವಾದ ವಿಷಯವೆ ಭೋಜ್ಯವೆಂದು ಹೇಳುತಿರ್ದಪಂ

ಅತ್ರ ಪ್ರೇರಯಿತಾ ಶಂಭುಶ್ಶುದ್ಧೋಪಾಧಿರ್ಮಹೇಶ್ವರಃ
ಸಮ್ಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಸ್ಸ್ಮೃತಾಃ

ಭೋಜ್ಯಮವ್ಯಕ್ತಮಿತ್ಯುಕ್ತ್ವಂ ಶುದ್ಧತಾಮಸರೂಪಕಂ

ಅತ್ರ - ಈ ಮೂರು ಭೇದಗಳ ಮಧ್ಯದಲ್ಲಿ, ಶುದ್ಧೋಪಾಧಿಃ - ಶುದ್ಧೋಪಾಧಿಯನ್ನುಳ್ಳ, ಮಾಹೇಶ್ವರಂ - ಮಾಯಾವಿಯಾದ, ಶಂಭುಃ - ಶಿವನು, ಪ್ರೇರತ್ವಾಯಿ - ಪ್ರೇರಿಸುವಂತಹ ಪತಿಯು, ಸಮ್ಮಿಶ್ರೋಪಾಧಯಃ - ಅತಿಮಿಶ್ರೋಪಾಧಿಯನ್ನುಳ್ಳಂಥ, ಸರ್ವೇಭೌಕ್ತಾರಃ - ಸಮಸ್ತಜೀವರುಗಳು. ಪಶವಃ - ಪಶುಗಳೆಂದು, ಸ್ಮೃತಃ - ಹೇಳಲ್ಪಟ್ಟರು. ಶುದ್ಧತಾಮಸ ರೂಪಕಂ - ಬರಿಯ ತಮೋಗುಣ ಸ್ವರೂಪವಾಗಿದ್ದಂತಹ ಭೋಜ್ಯಂ - ವ್ಯೋಮಾದಿ ವಿಷಯವು, ಅವ್ಯಕ್ತಮಿತಿ - ಮಾಯಾ ಪಾಶವೆಂದು, ಉಕ್ತಂ - ಹೇಳಲ್ಪಟ್ಟಿತು. ಅವಕ್ಕೆ ನಿಮಿತ್ಯವನು ಹೇಳುತಿರ್ದಪಂ ॥೪೩॥

ಸರ್ವಜ್ಞಃ ಪ್ರೇರಕಶ್ಶಂಭುಃಕಿಂಚಜ್ಞೋಜೀವಮುಚ್ಯತೇ
ಅತ್ಯಂತಗೂಢಚೈತನ್ಯಾಂ ಜಡಮವ್ಯಕ್ತಮುಚ್ಯತೇ

ಶಂಭುಃ - ಶಿವನು, ಸರ್ವಜ್ಞಃ - ಸರ್ವಜ್ಞನಾದ ಕಾರಣ, ಪ್ರೇರಕಃ - ಪ್ರೇರಕನು, ಜೀವಃ - ಜೀವನು ಕಿಂಚಿಗ್ನನಾದ ಕಾರಣ ಭೌಕ್ತೃವೆಂದು, ಉಚ್ಯತೆ - ಹೇಳಲ್ಪಡುವನು.

ಅತ್ಯಂತ ಗೂಢಚೈತನ್ಯಂ - ಅಸ್ಪಷ್ಟವಾದ ಬ್ರಹ್ಮಚೈತನ್ಯವನ್ನುಳ್ಳದಾದ ಕಾರಣ, ಅವ್ಯಕ್ತಂ - ಅವ್ಯಕ್ತವೆನಿಸುವಂಥಾ, ಜಡಂ - ಜಡವಿಷಯವೆಂದು, ಉಚ್ಯತೇ - ಹೇಳಲ್ಪಡುವುದು ||೪೪||

ಬ್ರಹ್ಮ ಚೈತನ್ಯದಲ್ಲಿ ಉಪಾಧಿ ಭೇದದಿಂದ ಈಶ್ವರ ಜೀವಾದಿಭೇದಂಗಳು ಕಲ್ಪಿತವಾದರೆ ಈಶ್ವರನಿಗೆ ಸರ್ವಜ್ಞತ್ವವು - ಜೀವನಿಗೆ ಕಿಂಚಿಜ್ಞತ್ವವುಯೆಂದು ನಿಯಮವೇನು. ವ್ಯತ್ಯಾಸವಾಗಿ ಸರ್ವಜ್ಞತ್ವಂಗಳು ಇರಲಿ. ಇಬ್ಬರಿಗೂ ಸರ್ವಜ್ಞತ್ವವು ಕಿಂಚಿಗ್ಞತ್ವವು ಏನು ಕಾರಣವಾಗದು ಎಂಬ ಶಂಕೆಯನ್ನು ಉಪಾಧಿ ಸ್ವರೂಪವನು ಹೇಳುವ ವ್ಯಾಜದಿಂದ ನಿರಾಕರಿಸುತಿರ್ದಪಂ.

ಉಪಾಧಿಪುನರಾಖ್ಯಾತಶ್ಶುದ್ಧಾಶುದ್ಧವಿಭೇದತಃ

ಶುದ್ಧೋಪಾಧಿಃ ಪರಾಮಾಯಾ ಸ್ವಾಶ್ರಯಾ ಮೋಹಕಾರಿಣೀ
ಅಶುದ್ಧೋಪಾಧಿರಪ್ಯೇವಮವಿದ್ಯಾಶ್ರಯ ಮೋಹಿನೀ

ಶುದ್ಧಾಶುದ್ಧ ವಿಭೇದಕಃ - ಶುದ್ಧೋಪಾಧಿ ಅಶುದ್ಧೋಪಾಧಿಯೆಂಬ ಭೇದದಿಂದ ಉಪಾಧಿಃ - ಉಪಾಧಿಯು, ಪುನಃ - ಮರಳಿ, ಆಖ್ಯಾತಃ - ಹೇಳಲ್ಪಡುತ್ತಿದ್ದಿತು. ಅವರ ಸ್ವರೂಪವನು ಹೇಳುತ್ತಿದ್ದಾನು. ಸ್ವಾಶ್ರಯ ಮೋಹಕಾರಿಣಿ - ತನಗಾಶ್ರಯವಾಗಿದ್ದಂತಹ ಶಿವನನ್ನು ಮೋಹಿಸದೆ ಇದ್ದಂತಹ, ಪರಾ - ನಿರತಿಶಯವಾಗಿರ್ದಂತಹ, ಮಾಯಾ - ಈಶ್ವರ ಮಾಯೆಯು, ಶುದ್ಧೋಪಾಧಿಃ - ಕಾಮ ಕರ್ಮ ಸಂಸಾರ ಮೂಲದೋಷ ರಹಿತವಾದ ಕಾರಣ ಶುದ್ಧೋಪಾಧಿಯೆನಿಸುವುದು. ಆಶ್ರಯ ಮೋಹಿನಿ - ತನ್ನನ್ನಾಶ್ರಯಿಸಿದ ಜೀವನ ಮೋಹಿಸುವಂತಹ, ಅವಿದ್ಯಾಃ - ಅಜ್ಞಾನವು, ಅಶುದ್ಧೋಪಾಧಿಃ - ಕಾಮಕರ್ಮಾದಿಗಳಿಂದ ದೂಷಿತವಾದ ಕಾರಣ ಅಶುದ್ಧೋಪಾಧಿ ಎನಿಸುವುದು ||೪೫||

ಜೀವಬ್ರಹ್ಮಭೇದದ ಮರ್ಯಾದೆಯಲ್ಲಿ ಜೀವರಿಗೆ ಪರಸ್ಪರ ಭೇದವು ಅಜ್ಞಾನವಶದಿಂದಲ್ಲದೆ ವಸ್ತುಭೇದವಿಲ್ಲವೆಂದು ಹೇಳುತಿರ್ದಪಂ

ಅವಿದ್ಯಾಶಕ್ತಿ ಭೇದೇನ ಜೀವಾ ಬಹುವಿಧಾ ಸ್ಮೃತಾಃ
ಮಾಯಾಶಕ್ತಿವಶಾದೀಶೋ ನಾನಾ ಮೂರ್ತಿಧರಃ ಪ್ರಭುಃ

ಜೀವಾಃ - ಜೀವರು, ಅವಿದ್ಯಾಶಕ್ತಿ ಭೇದೇನಾ - ಅಜ್ಞಾನವಶದ ಭೇದದಿಂದ, ಬಹುವಿಧಾಃ - ಅನೇಕ ಪ್ರಕಾರವೆಂದು, ಸ್ಮೃತಾಃ - ಹೇಳಲ್ಪಟ್ಟರು. ಈಶ್ವರಃ - ಪರಮೇಶ್ವರನು, ಮಾಯಾಶಕ್ತಿವಶಾತ್ - ತನ್ನ ಮಾಯಾಶಕ್ತಿ ವಶದಿಂದ, ಪ್ರಭುಃ - ಕರ್ತೃವಾದ, ನಾನಾ ಮೂರ್ತಿಧರಃ - ಹಲವು ಪ್ರಕಾರವಾದ ಮೂರ್ತಿಗಳ ಧರಿಸುವನು ||೪೬||

ಮಾಯಾವಿದ್ಯೆಗಳೆಂಬ ಉಪಾಧಿಭೇದಂಗಳಿಂದ ಜೀವೇಶ್ವರಭೇದಂಗಳನು ತೋರಿಸಿ ಉಪಾಧಿಭೇದದಿಂದ ಉಂಟಾದ ಸರ್ವಜ್ಞತ್ವ ಕಿಂಚಿಗ್ಞತ್ವಾದಿ ಭೇದಂಗಳನ್ನು ಸ್ಪಷ್ಟವಾಗಿ ತೋರಿಸುತಿರ್ದಪಂ

ಸರ್ವಜ್ಞಸ್ಸರ್ವಕರ್ತ್ತಾಚ ನಿತ್ಯಮುಕ್ತೋ ಮಹೇಶ್ವರಂ
ಕಿಂಚಿತ್ಕರ್ತಾ ಚ ಕಿಂಚಜ್ಞೋ ಬದ್ಧೋನಾದಿಶರೀರವಾನ್

ಮಾಹೇಶ್ವರಃ - ಶಿವನು, ಸರ್ವಜ್ಞಃ - ಸರ್ವಜ್ಞನಾಗಿರ್ದಂಥಾತನು, ಸರ್ವಕರ್ತಾ - ಸರ್ವಜಗಕೆ ಕರ್ತೃವಾದಂಥ, ನಿತ್ಯಮುಕ್ತಾಃ - ಆವಾಗಲೂ ಸಂಸಾರ ಸಂಬಂಧವಿಲ್ಲದಾತನು. ಜೀವಃ - ಜೀವನು, ಕಿಂಚಿತ್ಕರ್ತೃ - ಕೆಲವು ಪ್ರಾಣಿಗಳಿಗೆ ಕರ್ತೃವಾದಾತನು, ಕಿಂಚಿಜ್ಞಃ - ಕಿಂಚಿಗ್ನನಾಗಿದ್ದಾತನು, ಬದ್ಧಃ - ಸಂಸಾರ ಬದ್ಧನು, ಅನಾದಿಶರೀರವಾನ್ - ಮಾಯಾ ಸಂಬಂಧವಾದ ಸ್ಥೂಲಸೂಕ್ಷ್ಮ ಶರೀರದಲ್ಲಿ ಅಭಿಮಾನವುಳ್ಳಾತನೂ ॥೪೭॥

ಕರ್ಮಂಗಳಿಲ್ಲದಿದ್ದರೂ ಅವಿದ್ಯೆಯಿಂದ ಕಲ್ಪಿತವಾದ ಕರ್ಮವಶದಿಂದ ಸಂಸಾರವುಂಟವುದೆಂದು ನಿರೂಪಿಸುತಿರ್ದಪಂ

ಅವಿದ್ಯಾಮೋಹಿತಾಜ್ಜೀವಾ ಬ್ರಹ್ಮೈಕ್ಯಜ್ಞಾನ ವರ್ಜಿತಾಃ
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುರೂಪಕಃ

ಅವಿದ್ಯಾ ಮೋಹಿತಾಃ - ಅಜ್ಞಾನದಿಂದ ಮೋಹಿಸಲ್ಪಟ್ಟಂಥಾ, ಬ್ರಹ್ಮೈಕ್ಯ ಜ್ಞಾನವರ್ಜಿತಾಃ - ಬ್ರಹ್ಮಾತ್ಮರು ಏಕತ್ವಜ್ಞಾನವಿಲ್ಲದೆ ಇದ್ದಂತಹ ಜೀವರುಗಳು, ನಿಜ ಕರ್ಮಾನು ರೂಪಕಃ - ತನ್ನ ಕರ್ಮಾನುಗುಣ್ಯವಾಗಿ, ಸಂಸಾರೇ - ಸಂಸಾರದಲ್ಲಿ, ಪರಿಭ್ರಮಂತಿ - ತಿರುಗುತ್ತವಿಹರು. ಭ್ರಮಅನವಸ್ಥಾನೆ ॥೪೮॥

ದೇವತಿರ್ಯಗ್ಮನುಷ್ಯಾದಿ ನಾನಾ ಯೋನಿ ವಿಭೇದತಃ
ಚಕ್ರನೇಮಿ ಕ್ರಮೇಣೈವ ಭ್ರಮಂತಿ ಹಿ ಶರೀರಿಣಃ

ದೇವತಿರ್ಯಗ್ಮನುಷ್ಯಾದಿ - ದೇವ - ದೇವತೆಗಳು, ತಿರ್ಯಕ್ - ಪಶುಪಕ್ಷಿ ಮೃಗಂಗಳು, ಮನುಷ್ಯಾದಿ - ಮಾನವರು ಮೊದಲಾಗಿರ್ದಂಥಾ, ನಾನಾ ಯೋನಿ ವಿಭೇದತಃ - ಅನೇಕ ಪ್ರಕಾರವಾದ ಯೋನಿಗಳಿಂದ, ಶರೀರಿಣಃ ಜೀವರುಗಳು. ಚಕ್ರನೇಮಿ ಕ್ರಮೇಣೈವ - ಕುಲಾಲ ಚಕ್ರದ ಮರ್ಯಾದೆಯಲ್ಲಿ, ಪರಿಭ್ರಮಂತಿ - ತಿರುಗುತ್ತಿಹರು ॥೪೯॥

ಈಶ್ವರನು ಸರ್ವಜ್ಞನು ಸರ್ವಕರ್ತೃವಾದರೆ ಕೆಲವರನು ಸುಖಿಗಳಾಗಿ, ಕೆಲವರನು ದುಃಖಿಗಳಾಗಿ, ಕೆಲವರನು ಉತ್ತಮರಾಗಿ, ಕೆಲವರನು ಅಧಮರಾಗಿ ಹುಟ್ಟಿಸುವುದರಿಂದ ರಾಗದ್ವೇಷಾದಿ ವೈಷಮ್ಯವು ಸಂಸಾರಿಗಳ ಮರ್ಯಾದೆಯಲ್ಲಿ ಈಶ್ವರನಿಗೆ ಬಪ್ಪುದು. ಪರಮ ಕೃಪಾಲತ್ವವಿಲ್ಲದೆ ಹೋಹುದೆಂಬ ಶಂಕೆಯನು ಕರ್ಮಾನುಗುಣ್ಯವಾಗಿ ಪ್ರಾಣಿಗಳಿಗೆ ಸುಖದುಃಖಾದಿಗಳನು ಹುಟ್ಟಿಸುವುದರಿಂದ ಈಶ್ವರನಿಗೆ ರಾಗದ್ವೇಷಾದಿ ವೈಷಮ್ಯವಿಲ್ಲವೆಂದು ಪರಿಹರಿಸುತಿರ್ದಪಂ

ಜಾತ್ಯಾಯುರ್ಭೋಗ ವೈಷಮ್ಯಕಾರಣಂ ಕರ್ಮ ಕೇವಲಂ
ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ

ಕೇವಲಂ ಕರ್ಮೇವ - ಬರಿಯ ಕರ್ಮವೆ, ಜಾತಿ - ಬ್ರಾಹ್ಮಣ್ಯಾದಿ ಜಾತಿಗೆ, ಆಯುಃ - ಆಯುಷ್ಯಕ್ಕೆ, ಭೋಗ - ಸುಖ ದುಃಖಾನುಭವ ಮೊದಲಾದ, ವೈಷಮ್ಯಾತ್ - ವಿಷಮತ್ವಕ್ಕೆ, ಕಾರಣಂ - ಕಾರಣವು, ಪರಮೇಶ್ವರಃ - ಶಿವನು, ಏತೇಷಾಃ ದೇಹಿನಾಂ - ಈ ಜೀವರುಗಳಿಗೆ, ಸಾಕ್ಷಿಃ - ತಟಸ್ಥನಾಗಿ, ಪ್ರೇರಕಃ - ಪ್ರೇರಿಸುವನು. ಈಶ್ವರನು ಸಾಕ್ಷಿಮಾತ್ರನಾದರೆ ಕರ್ಮವಶದಿಂದ ಜಗತ್ತು ಹುಟ್ಟಿತು. ಈಶ್ವರನಿಂದ ಪ್ರಯೋಜನವೇನುಂಟೆಂದು ಶಂಕಿಸಲಾಗದು. ಕಾರಣ ಶಕ್ತಿಯನು ಮೀರದೆ ಕಾರ್ಯವನು ಹುಟ್ಟಿಸುವ ಕರ್ತೃವುನಿಂದ ಪ್ರಯೋಜನವಿಲ್ಲದೆ ಹೋದರೆ. ಕಾರಣಾನುಕೂಲವಾಗಿ ಘಟವ ಮಾಡುವಂಥ ಕುಲಾಲನು ಘಟದಲ್ಲಿ ಕರ್ತೃವಲ್ಲದೆ ಹೋಗಬೇಕು. ಅದು ಕಾರಣ - ಕಾರಣ ಶಕ್ತಿಯನು ಮೀರದೆ ಕುಲಾಲನ ಮರ್ಯಾದೆಯಲ್ಲಿ ಸಹಕಾರಿಯನು. ಮೀರದೆ ಇರ್ದಂಥಾ ಈಶ್ವರನು ಜಗತ್ತಿಗೆ ಕಾರಣನಹುನೆಂಬುದು ತಾತ್ಪರ್ಯಂ ॥೫೦॥

ಸಾಕ್ಷಿಯಾಗಿ ಕರ್ತೃವಾಗಿದ್ದಂಥಾ ಈಶ್ವರನು ಸಂಸಾರಿಗಳಿಗೆ ವೇದೋಪದೇಶ ಮುಖದಿಂದ ಹಿತವ ಮಾಡುವನೆಂದು ಹೇಳುತಿರ್ದಪಂ

ಏತೇಷಾಂ ಭ್ರಮತಾಂ ನಿತ್ಯಂ ಕರ್ಮಯಂತ್ರ ನಿಯಂತ್ರಣೇ
ದೇಹಿನಾಂ ಪ್ರೇರಕಶ್ಶಂಭುರ್ಹಿತಮಾರ್ಗೋಪದೇಶಕಃ

ನಿಜಕರ್ಮನಿಯಂತ್ರಣೇ - ತಮ್ಮ ಕರ್ಮಗಳೆಂಬ ನಿಯಂತ್ರಣದಲ್ಲಿ, ಭ್ರಮತಾಂ - ತಿರುಗುತ್ತಿರುವಂಥಾ, ಏತೇಷಾಂ ದೇಹೀನಾಂ - ಈ ಪ್ರಾಣಿಗಳಿಗೆ, ಪ್ರೇರಕಃ - ಅಂತರ್ಯಾಮಿಯಾಗಿ, ಶಂಭುಃ - ಪರಮೇಶ್ವರನು, ನಿತ್ಯಂ - ಆವಾಗಲು ಹಿತಮಾರ್ಗೋಪದೇಶಿಕಃ - ಹಿತವಾದ ಮಾರ್ಗವನು ಉಪದೇಶಿಸುವನು. ಅದು ಕಾರಣ ಹಿತವ ಬಯಸುವವನು ಈಶ್ವರೋಪಾಸ್ತೆಯ ಮಾಡಬೇಕು ॥೫೧॥

ಈಶ್ವರೋಪಾಸ್ತೆಯನು ಆ ಉಪಾಸ್ತಿಯಿಂದಲಾಗುವ ಶಿವಪ್ರಸಾದವನು ಆ ಪ್ರಸಾದದಿಂದಲಾಗುವಂಥ ಮನಃಶುದ್ಧಿಯ ನಿರೂಪಿಸುತಿರ್ದಪಂ

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ
ಶಿವಪ್ರಸಾದಜ್ಜೀವೋಯಂ ಜಾಯತೇ ಶುದ್ಧಮಾನಸಾಃ

ಸ್ವಕರ್ಮಪರಿಪಾಕೇನ - ತನ್ನ ವರ್ಣಾಶ್ರಮಂಗಳಲ್ಲಿ ಧರ್ಮಗಳನು ಮಾಡಿ ಈಶ್ವರಂಗೆ ಸಮರ್ಪಿಸುವುದರಿಂದ, ಪ್ರಕ್ಷೀಣ ಮಲವಾಸನಃ - ಹೋಗಲು ಪಟ್ಟಪಾಪವಾಸನೆಯನ್ನುಳ್ಳಂಥಾ, ಅಯಂಜೀವಃ - ಈ ಜೀವನು, ಶಿವಪ್ರಸಾದಾತ್ - ಶಿವನ ಕೃಪೆಯಿಂದ, ಶುದ್ಧಮಾನಸಾಃ - ನಿರ್ಮಲ ಚಿತ್ತನಾಗಿ, ಜಾಯತೇ - ಹುಟ್ಟುವನು ॥೫೨॥

ನಿರ್ಮಲ ಕರ್ಮವನು ಮಾಡುವುದರಿಂದ ಮನಃಶುದ್ಧವಹುದು. ಅದರಿಂದ ಶಿವನಲ್ಲಿ ಭಕ್ತಿ ಹುಟ್ಟುವುದೆಂದು ಹೇಳುತಿರ್ದಪಂ.

ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ
ಜಾಯತೇ ಶಿವಕಾರುಣ್ಯಾತ್ಸ್ಫುಟಾ ಭಕ್ತಿರೈಶ್ವರೀ

ಶುದ್ಧಕರ್ಮ ವಿಪಾಕತಃ - ಪುಣ್ಯಕರ್ಮ ಪರಿಪಾಕದ ದೆಸೆಯಿಂದ, ಶುದ್ಧಾಂತಃಕರಣೇ - ನಿರ್ಮಲವಾದ ಚಿತ್ತವನ್ನುಳ್ಳಂಥಾ, ಜೀವೇ - ಜೀವನಲ್ಲಿ, ಶಿವಕಾರುಣ್ಯಾತ್ - ಶಿವನ ಕೃಪೆಯ ದೆಸೆಯಿಂದ, ಐಶ್ವರೀ - ಈಶ್ವರ ವಿಷಯವಾದ, ಸ್ಫುಟ - ರಹಸ್ಯವಾದ, ಭಕ್ತಿಃ - ಭಕ್ತಿಯು, ಜಾಯತೇ - ಹುಟ್ಟುವುದು. ಜನಿಪ್ರಾದುರ್ಭಾವೇ ॥೫೩॥

೨. ಪಿಂಡಜ್ಞಾನಸ್ಥಲ

ಪುಣ್ಯಾಧಿಕತ್ವದಿಂ ಪಾಪಕ್ಷಯವಾಗೆ ನಿರ್ಮಲಾಂತಃಕರಣ ಜೀವನೆ ಪಿಂಡ ಸೌಜ್ಞಿತನೆಂದು ಪೇಳ್ದು ಬಳಿಕ ಆತಂಗೆ ಶಿವಭಕ್ತಿಯಂ ನಿತ್ಯಾನಿತ್ಯ ವಿವೇಕಮಾಗಲಾತನೆ ಪಿಂಡಜ್ಞಾನಿಯೆಂದು ನಿರೂಪಿಸುತಿರ್ದಪಂ

ಜಂತುರಂತ್ಯಶರೀರೋಽಸೌ ಪಿಂಡಶಬ್ದಾಭಿಧೇಯಕಃ
ಶರೀರಾತ್ಮ ವಿವೇಕೇನ ಪಿಂಡಜ್ಞಾನೀತಿ ಕಥ್ಯತೆ

ಅಂತ್ಯಶರೀರಃ - ಸಂಸಾರದ ಕಡೆಯ ಶರೀರವನ್ನುಳ್ಳಂಥಾ, ಅಸೌಜಂತುಃ - ಈ ಜೀವನು, ಪಿಂಡಶಬ್ದಾಬಿಧೇಯಕಃ - ಪಿಂಡ ಶಬ್ದದಿಂದ ಹೇಳಲ್ಪಡುವನು, ಶರೀರಾತ್ಮ ವಿವೇಕೇನ - ದೇಹಾತ್ಮವಿಭಾಗ ಲಕ್ಷಣ ವಿವೇಕದಿಂದ, ಪಿಂಡಜ್ಞಾನೀತಿ - ಪಿಂಡಾಜ್ಞಾನೀ ಎಂದು, ಕಥ್ಯತೇ - ಹೇಳಲ್ಪಡುತ್ತಿಹನು. ಕಥಾ ವಾಕ್ಯ ಪ್ರಬಂಧನೆ ॥೫೪॥

ದೇಹಾತ್ಮವಿವೇಕವನು ತೋರಿಸಲೋಸ್ಕರವಾಗಿ ದೇಹವೆ ಆತ್ಮನೆಂಬ ಚಾರ್ವಾಕರ ಮತವನ್ನು ಮೊದಲು ತೋರಿಸುತಿರ್ದಪಂ

ಶರೀರಮೇವ ಚಾರ್ವಾಕೈರಾತ್ಮೇತಿ ಪರಿಕೀರ್ತ್ಯತೇ

ಚಾರ್ವಾಕೈಃ - ಚಾರ್ವಾಕರುಗಳಿಂದ ಶರೀರಮೇವ ಪೃಥುವ್ಯಾಪ್ತೇ ಜೋವಾಯುಗಳೆಂಬ ನಾಲ್ಕು ಭೂತಮಯವಾದ, ದೇಹವೇ - ಆತ್ಮನು. ಅದರಿಂದ ಭಿನ್ನವಾದ ಆತ್ಮನಿಲ್ಲವೆಂದು, ಪರಿಕೀರ್ತ್ಯತೆ - ಹೇಳಲ್ಪಡುವುದು. ಕುತಸಂ ಶಬ್ದೇ ತಾತ್ಪರ್ಯ. ಅಹಂಮನುಷ್ಯಃ ಅಹಂಸ್ಥೂಲಃ ಅಹಂ ವೃದ್ಧಃ - ನಾನು ಮನುಷ್ಯನು ನಾನು ಸ್ಥೂಲನು, ನಾನು ವೃದ್ಧನು ಎಂಬಾಗ ನಾನು ಎಂಬಾತ್ಮನು ತಾನಾದ ಕಾರಣ ತನಗೂ ದೇಹಕ್ಕೂ ಭೇದ ತೋರದ ಕಾರಣ ಶಾಸ್ತ್ರಿಗಳಿಗೂ ಲೌಕಿಕರಿಗೂ ಸಮ್ಮತ. ಅಲ್ಲಿ ವಿವಾದವಿಲ್ಲ. ಮನುಷ್ಯನೆಂಬಾಗ - ಮಾನುಷ್ಯಜಾತಿಯು, ಸ್ಥೂಲನು ಎಂಬಾಗ - ಸ್ಥೌಲ್ಯವು, ವೃದ್ಧನು ಎಂಬಾಗ - ಜರೆಯು, ದೇಹ ಧರ್ಮವೆಂಬುದು ಲೋಕ ಸಮ್ಮತ. ಅಲ್ಲಿಯೂ ವಿವಾದವಿಲ್ಲ. ಅದರಿಂ ದೇಹವೆಯಾತ್ಮನೂ ದೇಹದಿಂದ ಭಿನ್ನನಲ್ಲನೆಂದು ಹೇಳುವುದು ತತ್ಪರಿಹಾರಮ್ ಎಂತನೆ ಶರೀರವೆಯಾತ್ಮನಾದರೆ ಸುಷುಪ್ತಿ ಕಾಲದಲ್ಲಿ ದೇಹವುಂಟಾದರೂ

ವ್ಯವಹಾರವಿಲ್ಲವಾದ ಕಾರಣ ದೇಹ ವ್ಯತಿರಿಕ್ತವಾದ ಆತ್ಮನುಂಟೆಂದು ಅಂಗೀಕರಿಸಬೇಕು. ತತ್‌ಕ್ಷಣದಲ್ಲಿ ಹುಟ್ಟಿದ ಬಾಲಕನು ಜನ್ಮಾಂತರದಲ್ಲಿ ಅನುಭವಿಸಿದಂಥಾ ಸ್ತನಪಾನವನು ಸ್ಮರಿಸಿ ಸ್ತನಪಾನದಲ್ಲಿ ಪ್ರವರ್ತಿಸುವುದರಿಂದ ಶರೀರ ವ್ಯತಿರಿಕ್ತವಾದ ಆತ್ಮನೆಂದು ಹೇಳಬೇಕು. ದೇಹವೇ ಆತ್ಮನಾದರೆ ಶರೀರವು ಇಲ್ಲಿಯೆ ಲಯವಹುದರಿಂದ ಪರಲೋಕಾರ್ಥವಾಗಿ ಸತ್ಕರ್ಮಾನುಷ್ಠಾನವಿಲ್ಲದೆ ಹೋಗಬೇಕು. ನನ್ನ ಪುತ್ರನು ನನ್ನ ಪಶುವು ನನ್ನ ವಸ್ತುವೆಂಬ ಮರ್ಯಾದೆಯಲ್ಲಿ ನನ್ನ ಶರೀರವೆಂದು ತನಗಿದಿರಿಟ್ಟು ತೋರುವುದರಿಂದ ದೇಹಕ್ಕೂ ತನಗೂ ಭೇದವು ಪ್ರತ್ಯಕ್ಷವಾದ ಕಾರಣ ದೇಹದಿಂದ ಭಿನ್ನನಾದ ಆತ್ಮನೆಂದು ಹೇಳಬೇಕು. ಹಾಂಗಾದರೆ ಇಂದ್ರಿಯಗಳೆ ಆತ್ಮನಾಗಲಿ ಎಂಬ ಮತಾಂತರವನು ತೋರಿಸುತಿರ್ದಪಂ ।।೫೫।।

ಇಂದ್ರಿಯಾಣಾಂ ತಥಾಽತ್ಮತ್ವಮಪರೈಃ ಪರಿಭಾಷ್ಯತೇ

ಅಪರೈಃ - ಮತ್ತೆ ಕೆಲವು ಚಾರ್ವಾಕೈಕದೇಶಿಗಳಿಂದ, ಇಂದ್ರಿಯಾಣಾಂ - ಶ್ರೋತ್ರ ಮೊದಲಾದ ಇಂದ್ರಿಯಂಗಳಿಗೆ, ಆತ್ಮತ್ವಂ - ಆತ್ಮನಹತನವು, ಪರಿಭಾಷ್ಯತೆ - ಹೇಳಲ್ಪಟ್ಟಿತು.

ತಾತ್ಪರ್ಯ - ಶರೀರಾತ್ಮವಾದವನು ನಿರಾಕರಿಸಲಾಗಿ ಇಂದ್ರಿಯಾತ್ಮವಾದವನು ಈ ಮರ್ಯಾದೆಯಲ್ಲಿ ಸ್ಥಾಪಿಸುತ್ತಿಹರು. ಇಂದ್ರಿಯಂಗಳು ಆತ್ಮನೆಂಬಲ್ಲಿ ಪ್ರಮಾಣವಾವುದೆನೆ ಅಂಧೋಹಂ ಬಧಿರೋಹಂ ಮೂರ್ಖೋಹಂ ಎಂಬುದರಿಂದ ಅಂಧ್ಯ ಬಾಧೀರ್ಯ ಮೂಕತ್ವವೆಂಬ ಧರ್ಮವನ್ನುಳ್ಳ ಇಂದ್ರಿಯಗಳಿಗೂ ಅಹಂ ಎಂಬಂಥಾ ಆತ್ಮನಿಗೂ ಅಭೇದ ಬುದ್ಧಿಯೇ ಪ್ರಮಾಣ. ಇದೀಗ ಇಂದ್ರಿಯಾತ್ಮವಾದಿಗಳ ಮತವು ।।೫೬।।

ಮತ್ತೆ ಕೆಲಬರ ಮತವನು ಹೇಳುತಿರ್ದಪಂ

ಬುದ್ಧಿ ತತ್ವಾಗತೈಶ್ಚಾರ್ಥೈಃ ಬುದ್ಧಿರಾತ್ಮೇತಿ ಗೀಯ್ಯತೇ

ಇತರೈಃ - ಮತ್ತೆ ಕೆಲಬರಿಂದ, ಬುದ್ಧಿತತ್ವಗತೈಃ - ಬುದ್ಧ್ಯಾರೂಢವಾಗಿರ್ದಂಥಾ, ಅರ್ಥೈಃ - ಅರ್ಥಗಳಿಂದ, ಬುದ್ಧಿಃ - ಮನಸ್ಸು, ಆತ್ಮೇತಿ - ಆತ್ಮನೆಂದು, ಗೀಯ್ಯತೆ - ಹೇಳಲ್ಪಡುವುದು. ಅದರ ತಾತ್ಪರ್ಯವೇನೆಂದರೆ ಇಂದ್ರಿಯಂಗಳು ಆತ್ಮನಾದರೆ ಸ್ವಪ್ನಾವಸ್ಥೆಯಲ್ಲಿ ಇಂದ್ರಿಯಂಗಳು ಲೀನವಾದರೂ ಮನಸ್ಸಿನಿಂದ ಸರ್ವ ವ್ಯಾಪಾರಂಗಳು ಉಂಟಾದ ಕಾರಣ ಇಂದ್ರಿಯಾದನ್ಯವಾದ ಮನಸ್ಸನ್ನೇ ಆತ್ಮನೆಂದು ಹೇಳಬೇಕು. ಮನಸ್ಸು ಆತ್ಮನೆಂಬಲ್ಲಿ ಅಹಂಕಾಮಿ ಅಹಂಕರ್ತುವೆಂಬ ಕಾಮ ಸಂಕಲ್ಪಾದಿ ಧರ್ಮಂಗಳನ್ನುಳ್ಳ ಮನಸ್ಸು. ಆತ್ಮನು ಒಂದಾಗಿ ತೋರುವುದರಿಂದ ಮನಸ್ಸೇ ಆತ್ಮನೆಂದು ಹೇಳಬೇಕೋ ಮತ್ತಂ - ಬೌದ್ಧರು ಕ್ಷಣಿಕವಾಗಿದ್ದಂಥಾ ವಿಜ್ಞಾನವೆ ಆತ್ಮನೆಂದು ಹೇಳುತಿಹರು. ಅವರ ತಾತ್ಪರ್ಯವೆಂತೆನೆ ಸುಷುಪ್ತಿ ಸಮಯದಲ್ಲಿ ಮನಸ್ಸಿಗೆ ಪುದಿತತ್ ಎಂಬ ನಾಡಿಯಲ್ಲಿ ಲಯವಾದರೂ ಆತ್ಮಸದ್ಭಾವ ವ್ಯವಹಾರದಿಂದ ಮನೋವ್ಯತಿರಿಕ್ತನಾಗಿದ್ಧಂಥಾ ಕ್ಷಣಿಕ ವಿಜ್ಞಾನಾತ್ಮಕನು ಶೂನ್ಯವಾದಿಗಳು ಸುಷುಪ್ತಿ ಸಮಯದಲ್ಲಿ ಜ್ಞಾನಲೇಶವಿಲ್ಲದಿದ್ದರು

ಆತ್ಮವುಂಟೆಂಬ ವ್ಯವಹಾರದಿಂದ ಶೂನ್ಯವೆ ಆತ್ಮನೆಂದು ಹೇಳುತ್ತಿಹರು. ಮೀಮಾಂಸಕರು ತಾರ್ಕಿಕರು ಶರೀರೇಂದ್ರಿಯ ಮನೋವಿಜ್ಞಾನ ವ್ಯತಿರಿಕ್ತನಾಗಿದ್ದಂಥಾ ಕರ್ತೃಭೌಕ್ತೃ ಪ್ರಮಾರ್ಥವಾಗಿರ್ದಂಥಾ ಆ ಸ್ವಭಾವತಮಃ ಸಂಸಾರಿಯಾಗಿರ್ದಂಥಾ ಭಾವರೂಪನಾಗಿರ್ದ ನಿತ್ಯನಾಗಿರ್ದ ಸರ್ವದೇಶದಲ್ಲಿಯು ವ್ಯಾಪಕನಾಗಿರ್ದಂಥಾತನೆ ಆತ್ಮನೆಂದು ಹೇಳುತ್ತಿಹರು. ಸಾಂಖ್ಯರು ಕೇವಲ ಭೌಕ್ತೃವಲ್ಲದೆ ಕರ್ತೃವಲ್ಲದೆ ಇದ್ದಂಥಾತನೆ ಆತ್ಮನೆಂದು ಹೇಳುತಿಹರು ವೇದಾಂತಿಗಳು ಕರ್ತೃತ್ವ ಬುದ್ಧಿತತ್ವಗತವಾಗಿರ್ದಂಥಾದ್ದು ಆತ್ಮನಲ್ಲಿ ಭ್ರಾಂತಿಯಿಂದ ತೋರುವುದಲ್ಲದೆ ವಾಸ್ತವವಾಗಿಲ್ಲ ಅದುಕಾರಣ ಕೇವಲ ಸಚ್ಚಿದಾನಂದ ಸ್ವರೂಪವಾಗಿರ್ದಂಥ ನಿತ್ಯಶುದ್ಧನಾಗಿರ್ದಂಥ ನಿತ್ಯಮುಕ್ತನಾಗಿರ್ದ ಅನಾದಿ ನಿಧನನಾದ ಸಮಸ್ತ ಸಂಸಾರ ದೋಷವಿಲ್ಲದ ಸ್ವಯಂ ಜ್ಯೋತಿಸ್ವರೂಪನಾದ ಅಸಂಗಿಯಾದ ನಿರ್ಗುಣನಾದ ನಿರ್ವಿಕಾರಿಯಾದ ನಿರಂಶನಾದ ಪರಿಪೂರ್ಣನಾದ ಅದ್ವಿತೀಯನಾಗಿರ್ದಂಥಾ ಈಶ್ವರನ ಪ್ರತ್ಯಗಾತ್ಮನೆಂದು ಸಮಸ್ತ ಶೃತಿ ತಾತ್ಪರ್ಯವನು ವಿಚಾರಿಸಿ ನಿಶ್ಚೈಸುತ್ತಿಹರದೇ ಸತ್ಯ. ಉಳಿದ ಪಕ್ಷಗಳು ಪುರುಷರ ಉತ್ಪ್ರೇಕ್ಷೆಯಿಂದ ಕಲ್ಪಿತವಲ್ಲದೆ ಅವರಲ್ಲಿ ಮೂಲ ಪ್ರಮಾಣಂಗಳಿಲ್ಲ ಎಂದು ಶಾಸ್ತ್ರಗಳಲ್ಲಿ ನಿಶ್ಚೈಸಿ ಹೇಳಲ್ಪಟ್ಟಿತು ॥೫೭॥

ಈ ಮತಗಳೆಲ್ಲವನ್ನು ದೂಷಿಸಿದ ಕಡೆಯ ಪಕ್ಷವನು ಸಿದ್ಧಾಂತವನು ಮಾಡುತಿರ್ದಪಂ.

ಇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್
ಅಹಂ ಪ್ರತ್ಯಯವೇದ್ಯತ್ವಾದನುಭೂತ ಸ್ಮೃತೇರಪೀ

ಶರೀರೇಂದ್ರಿಯ ಬುದ್ಧಿಭ್ಯೋ ವ್ಯತಿರಿಕ್ತಸ್ಸನಾತನಃ
ಆತ್ಮಾಸ್ಮೀತಿ ವಿವೇಕೀಯಃ ಪಿಂಡಜ್ಞಾನೀ ಸಗೀಯ್ಯತೇ

ಇಂದ್ರಿಯಾಣಾಂ - ಇಂದ್ರಿಯಂಗಳಿಗೆ, ದೇಹಸ್ಯ - ಶರೀರಕ್ಕೆ, ಬುದ್ಧಿಃ - ಬುದ್ಧಿ ತತ್ತ್ವಕ್ಕೂ, ಆತ್ಮತಾ - ಆತ್ಮತ್ವವು, ನಹಿ - ಸರ್ವಥಾ ಇಲ್ಲವೆ ಅದೇಕೆಂದರೆ, ಅಹಂ ಪ್ರತ್ಯ ವೇದ್ಯತ್ವಾತ್ - ಅಹಂ ಎಂಬುದು ಜ್ಞಾನದಿಂದ ವಿಷಯವಾದ ಕಾರಣವಾತ್ಮನಲ್ಲ.

ತಾತ್ಪರ್ಯ: ಆತ್ಮನು ಚೈತನ್ಯ ಸ್ವರೂಪನಲ್ಲದೆ ಜ್ಞಾನಕ್ಕೆ ವಿಷಯುವಲ್ಲ ವಿಷಯನಾದುದುಂಟಾದರೆ ಘಟಾದಿಗಳ ಮರ್ಯಾದೆಯಲ್ಲಿ ಜಡವಹುದು. ಅದಕ್ಕೆ ಆತ್ಮತ್ವ ಘಟಿಸದು. ಈ ಯುಕ್ತಿಯಿಂದ ಮೀಮಾಂಸಕ, ತಾರ್ಕಿಕರ ಮತದ್ವಯುವೂ ದೂಷಿತವಾಯಿತು ॥೫೯॥

ವಿಜ್ಞಾನವಾದಿಗಳ ಮತವನು ಶೂನ್ಯವಾದಿಗಳ ಮತವನು ದೂಷಿಸುತಿರ್ದಪಂ, ಅನುಭೂತ ಶೃತೈರಪಿ - ಪೂರ್ವದಲ್ಲಿ ಅನುಭವಿಸುದಂಥದನು ಅನಂತರದಲ್ಲಿ ಸ್ಮರಿಸುವುದರಿಂದ ಕ್ಷಣಿಕ ವಿಜ್ಞಾನಕ್ಕೆ ಆತ್ಮತ್ವವು ಘಟಿಸದು. ಸುಷುಪ್ತಿ ಕಾಲದಲ್ಲಿ ಇಂದ್ರಿಯ ಮನೋವ್ಯಾಪಾರವಿಲ್ಲದೆ ಇದ್ದರೂ ಸ್ವಪ್ರಕಾಶವಾಗಿರ್ದ ತನ್ನ ಆನಂದ ಸ್ವರೂಪವನು

ಅನುಭವಿಸುತಿರ್ದ ಆತ್ಮಂ ಸುಖದಲ್ಲಿ ತಾನು ಮಲಗಿದೆನು ಎಂದು ಪ್ರತಿಸಂಧಾನವಹುದ ರಿಂದ ಪ್ರತಿಶೂನ್ಯಾ ಸ್ವರೂಪನಲ್ಲ. ಯುಕ್ತಾಂತರದಿಂದವು ಮೀಮಾಂಸಕ, ತಾರ್ಕಿಕ, ಸಾಂಖ್ಯ ಪಕ್ಷಂಗಳನು ದೂಷಿಸುತಿರ್ದಪಂ.

ಶರೀರೇಂದ್ರಿಯ ಬುದ್ಧಿಭ್ಯೋಃ - ದೇಹೇಂದ್ರಿಯ ಮನಸ್ಸುಗಳಿಂದ ವ್ಯತಿರಿಕ್ತಃ - ಭಿನ್ನನಾಗಿರ್ದಂಥಾ ಆತ್ಮನು, ಸನಾತನಃ - ಕೇಡಿಲ್ಲದಾತನು, ಕರ್ತೃ - ಭೋಕ್ತೃವಾದರೆ ಆತ್ಮನಿಗೆ ವಿಕಾರತ್ವವು, ಅನಿತ್ಯತ್ವವು, ಬರ್ಪುದು. ಶೂನ್ಯವಾದದಲ್ಲಿ ದೂಷಣಾಂತರವ ಹೇಳುತಿರ್ದಪಂ.

ಆತ್ಮನುಂಟೆಂದು ತೋರುವುದರಿಂದ ಶೂನ್ಯನಲ್ಲ. ಶೂನ್ಯನಾದರೆ ಆತ್ಮನಿಲ್ಲದೆ ಹೋಗಬೇಕು. ಅದು ಕಾರಣ ಆತ್ಮ ಶೂನ್ಯವಲ್ಲವೆಂಬ, ವಿವೇಕಿ - ಬಲ್ಲಾತನು, ಇಹ - ಈ ಸಿದ್ಧಾಂತ ಶಿಖಾಮಣಿಯಲ್ಲಿ, ಪಿಂಡಜ್ಞಾನೀತಿ - ಪಿಂಡಜ್ಞಾನಿಯೆಂದು, ಗೀಯ್ಯತೆ - ಹೇಳಲ್ಪಡುವನು ॥೬೦॥

ದೇಹ ವ್ಯತಿರಿಕ್ತವಾದ ಆತ್ಮನೆಂಬಲ್ಲಿ ಯುಕ್ತ್ಯಾಂತರ ಹೇಳುತಿರ್ದಪಂ.

ನಶ್ವರಾಣಿ ಶರೀರಾಣಿ ನಾನಾ ರೂಪಾಣಿ ಕರ್ಮಣಾ
ಆಶ್ರಿತೋ ನಿತ್ಯ ಏವಾಸೌವಿತಿ ಜಂತೋರ್ವಿವೇಕಿತಾ

ಶರೀರಾಣಿ - ದೇಹಂಗಳು, ನಶ್ವರಾಣಿ - ಅಸ್ಥಿರವಾದಂಥಾ, ಕರ್ಮಣಾ - ಕರ್ಮತಾರತಮ್ಯದಿಂದ, ನಾನಾರೂಪಾಣಿ - ಬ್ರಾಹ್ಮಣ್ಯಾದಿ ಜಾತಿಭೇದದಿಂದ ಅನೇಕ - ಬಗೆಯಾಗಿರ್ದಂಥಾ, ಆಶ್ರಿತಃ - ಆ ಶರೀರವನ್ನು ಆಶ್ರಯಿಸಿದಂಥಾ, ಅಸೌ - ಈ ಜೀವಾತ್ಮನು, ನಿತ್ಯಃ - ಕೇಡಿಲ್ಲದವನು. ಇತಿ - ಈ ಮರ್ಯಾದೆಯಲ್ಲಿ ತಿಳಿವಂಥಾ, ಜಂತೋಃ - ಜೀವನಿಗೆ, ವಿವೇಕತಾ - ವಿವೇಕವು. ದೇಹಾತ್ಮವಿವೇಕವೆನಿಸುವುದು ॥೬೧॥

ಜೀವನಿಗೂ ಈಶ್ವರನಿಗೂ ಪರಮಾರ್ಥವಾದ ಭೇದವಿಲ್ಲದಿದ್ದರೂ ಉಪಾಧಿತ ಭೇದವನು ಅವಲಂಬಿಸಿ ಜೀವನಿಂದ ಭಿನ್ನನಾಗಿದ್ದಂಥಾ ಸರ್ವಾಂತರ್ಯಾಮಿಯಾದ ಈಶ್ವರನುಂಟೆಂದು ಹೇಳುತಿರ್ದಪಂ.

ಶರೀರಾತ್ಪೃಥಗಾತ್ಮಾನಮಾತ್ಮಾನಂ ಪೃಥಗೀಶ್ವರಂ
ಪ್ರೇರಕಂ ಯೋ ವಿಜಾನಾತಿ ಪಿಂಡಜ್ಞಾನೀತಿ ಕಥ್ಯತೇ

ಆತ್ಮಾನಾಂ - ಜೀವವನ್ನು, ಶರೀರಾತ್ - ಶರೀರದ ದೆಸೆಯಿಂದ, ಪೃಥಕ್ - ಭಿನ್ನನೆಂದು ವಿಚಾರಿಸಿ, ಆತ್ಮನೆಂದು - ಆ ಆತ್ಮನ ದೆಸೆಯಿಂದ, ಈಶ್ವರಂ - ಪರಮೇಶ್ವರನನ್ನು, ಪೃಥಕ್ - ಭಿನ್ನನೆಂದು, ಪ್ರೇರಕಂ - ಅಂತರ್ಯಾಮಿ ಎಂದು, ಯಃ - ಆವಾತನು, ವಿಜಾನಾತಿ - ಅರಿವುತ್ತಿಹನು, ಸಃ - ಆತನು, ಪಿಂಡಜ್ಞಾನೀತಿ - ಪಿಂಡಜ್ಞಾನಿ ಎಂದು ಕಥ್ಯತೆ - ಹೇಳಲ್ಪಡುವನು ॥೬೨॥

ಸಂಸಾರಹೇಯಸ್ಥಲ

ಹಿಂದೆ ಹೇಳಿದ ಸತ್ಕರ್ಮಾನುಷ್ಠಾನದಿಂದ ನಿರ್ಮಲಾಂತಃಕರಣನಾದಾತನಿಗೆ ನಿತ್ಯಾನಿತ್ಯ ವಿವೇಕಂ ಹುಟ್ಟಿದ ನಂತರದಲ್ಲಿಯೂ ವಿವೇಕಿಗೆ ಸಂಸಾರದಲ್ಲಿ ವೈರಾಗ್ಯ ಹುಟ್ಟುವುದೆಂದು ಮೂರನೆಯ ಸ್ಥಲದಲ್ಲಿ ಪ್ರತಿಪಾದಿಸುತಿರ್ದಪಂ

ನಿರಸ್ತ ಹೃತ್ಕಲಂಕಸ್ಯ ನಿತ್ಯಾನಿತ್ಯ ವಿವೇಕಿನಃ
ಸಂಸಾರಹೇಯತಾ ಬುದ್ಧಿರ್ಜಾಯತೇ ವಾಸನಾಬಲಾತ್

ನಿರಸ್ತಹೃತ್ಕಲಂಕಸ್ಯ - ಸತ್ಕರ್ಮದಿಂದ ಕ್ಷೀಣವಾದ ಹೃದ್ಗತ ಪಾಪವನ್ನುಳ್ಳಂಥಾ, ನಿತ್ಯಾನಿತ್ಯ ವಿವೇಕಿನಃ - ಆತ್ಮಾನ್ಮೋರ್ವನೆ ನಿತ್ಯನು ದೇಹಾದಿ ಪ್ರಪಂಚೆಲ್ಲವು ಮಿಥ್ಯೆ ಎಂಬ ವಿವೇಕವನ್ನುಳ್ಳಂಥಾ ಮಹಾತ್ಮನಿಗೆ, ವಾಸನಾಬಲಾತ್ - ವಿವೇಕ ಸಂಸ್ಕಾರ ಬಲದಿಂದ, ಸಂಸಾರ ಹೇಯತಾಬುದ್ಧಿಃ - ಸಂಸಾರವನು ತ್ಯಜಿಸಬೇಕೆಂಬ ಬುದ್ಧಿಯು, ಜಾಯತೇ - ಹುಟ್ಟಿಸುತಿಹುದು ॥೬೩॥

ವಿರಕ್ತಿ ಸ್ವರೂಪವನು ನಿರೂಪಿಸುತಿರ್ದಪಂ

ಐಹಿಕೈಃಕ್ಷಣಿಕೈಃ ಸೌಖ್ಯೇಪುತ್ರದಾರಾದಿ ಸಂಭವೇ
ಕ್ಷಯಿತ್ವಾದೀಯ್ಯುತೇ ಸ್ವರ್ಗೇ ಕಸ್ಯವಾಂಛಾ ವಿವೇಕಿನಃ

ಪುತ್ರದಾರಾದಿ ಸಂಭವೇ - ಸ್ತ್ರೀ ಪುತ್ರಾದಿಗಳಿಂದ ಹುಟ್ಟಿದಂಥಾ, ಕ್ಷಣಿಕೈಃ - ನಾಶವನ್ನುಳ್ಳಂಥಾ, ಐಹಿಕೈಃ - ಭೂಲೋಕ ಸಂಬಂಧವಾಗಿರ್ದಂಥಾ, ಸೌಖ್ಯ - ಸಾರ್ವಭೌಮಾದಿ ಸುಖದಲ್ಲಿಯು, ಕ್ಷಯಿತ್ವಾದೀಯ್ಯುತೇ ಸ್ವರ್ಗೆ - ಕ್ಷಯಾದಿ ದೋಷಗಳಿಂದ ಕೂಡಲ್ಪಟ್ಟ ಸ್ವರ್ಗದಲ್ಲಿಯು, ವಿವೇಕಿನಃ - ವಿವೇಕಿಯಾಗಿರ್ದಂಥಾ, ಕಸ್ಯಾ - ಆವ ಪುರುಷನಿಗೆ, ವಾಂಛಾ - ಇಚ್ಛೆಯುಂಟಹುದು ॥೬೪॥

ಸಂಸಾರದಲ್ಲಿ ದೋಷಗಳನು ತೋರಿಸುತಿರ್ದಪಂ.

ಜಾತಸ್ಯನಿಯತೋ ಮೃತ್ಯುಸ್ತಥಾ ಜನ್ಮ ಮೃತಸ್ಯ ಚ
ಜಂತುರ್ಮರಣ ಜನ್ಮಾಭ್ಯಾಂ ಪರಿಭ್ರಮತಿ ಚಕ್ರವತ್

ಜಾತಸ್ಯ - ಹುಟ್ಟಿದಾತನಿಗೆ, ಮೃತ್ಯುಃ - ಮರಣವು, ನಿಯತಃ - ಅವಶ್ಯಕವಾಗಿಹುದು, ತಥಾ - ಆ ಮರ್ಯಾದೆಯಲ್ಲಿ, ಮೃತಸ್ಯಾ - ಮರಣವಾದವನಿಗೆ ಜನ್ಮ-ಜನನವು, ನಿಯತಃ - ಅವಶ್ಯಕವು, ಜಂತುಃ - ಪ್ರಾಣಿಯು, ಮರಣ ಜನ್ಮಾಭ್ಯಾಂ - ಸತ್ತು ಹುಟ್ಟುವುದರಿಂದ, ಚಕ್ರವತ್, ಕುಲಾಲ ಚಕ್ರದ ಮರ್ಯಾದೆಯಲ್ಲಿ, ಪರಿಭ್ರಮಂತಿ - ತಿರುಗುತ್ತಂ ಇಹನೂ, ಭ್ರಮು - ಅವಸ್ಥಾನೆ ॥೬೫॥

ಹುಟ್ಟಿದಾತನಿಗೆ ಮರಣವು ಅವಶ್ಯಕವೆಂಬುದನ್ನು ದೃಷ್ಟಾಂತದಿಂದ ವ್ಯಕ್ತೀಕರಿಸುತಿರ್ದಪಂ

ಮತ್ಸ್ಯ ಕೂರ್ಮ ವರಾಹಾಂಗೈ ನೃಸಿಂಹ ಮನುಜಾದಿಭಿಃ
ಜಾತೇನ ನಿಧನಂ ಪ್ರಾಪ್ತಂ ವಿಷ್ಣುನಾಽಪಿ ಮಹಾತ್ಮನಾ

ಮತ್ಸ್ಯಕೂರ್ಮವರಾಹಾಂಗೈಃ - ಮತ್ಸ್ಯ ಕೂರ್ಮ ವರಾಹ ಶರೀರಗಳಿಂದ, ನೃಸಿಂಹ ಮನುಜಾದಿಭಿಃ - ನಾರಸಿಂಹ ರಾಮಕೃಷ್ಣಾದ್ಯವತಾರಗಳಿಂದ, ಜಾತೇನ - ಹುಟ್ಟಿದಂಥಾ, ಮಹಾತ್ಮನ್ - ಉತ್ತಮನಾದ, ವಿಷ್ಣುನಾಪಿ - ಮಹಾವಿಷ್ಣುವಿನಿಂದಲೂ, ನಿಧನಂ - ಮರಣವು, ಪ್ರಾಪ್ತಂ - ಏಯ್ದಲ್ಪಟ್ಟಿತು. ಉಳಿದ ಮನುಷ್ಯರ ಪಾಡೇನು ಸಂಸಾರಿಗೆ ಒಂದು ಸ್ಥಲದಲ್ಲಿಯೂ ಸುಖವಿಲ್ಲ. ಬರಿಯ ದುಃಖಮಾತ್ರವೆಂದು ನಿರೂಪಿಸುತ್ತಿರ್ದಪಂ ॥೬೬॥

ಭೂತ್ವಾ ಕರ್ಮವಶಾ ಜಂತುರ್ಬ್ರಾಹ್ಮಣಾದಿಷು ಜಾತಿಷು
ತಾಪತ್ರಯಮಹಾವಹ್ನಿ ಸಂಘಾತದ್ದಹ್ಯತೇ ಭೃಶಂ

ಜಂತುಃ - ಜೀವನು, ಕರ್ಮವಶಾತ್ - ತನ್ನ ಕರ್ಮವಶದಿಂದ, ಬ್ರಾಹ್ಮಣಾದಿ ಜಾತಿಷು - ಬ್ರಾಹ್ಮಣ ಮೊದಲಾದ ಜಾತಿಗಳಲ್ಲಿ, ಭೂತ್ವಾ - ಹುಟ್ಟಿ, ತಾಪತ್ರಯ ಮಹಾವಹ್ನಿ ಸಂಪಾತಾತ್ - ಆಧ್ಯಾತ್ಮಿಕಾ ತಾಪತ್ರಯವೆಂಬ ಮಹಾಗ್ನಿಯಲ್ಲಿ ಬೀಳುವುದರ ದೆಸೆಯಿಂದ, ಭೃಶಂ - ವಿಶೇಷವಾಗಿ, ದಹ್ಯತೇ - ಬೇಯುತ್ತಿಹನು, ದಹಭಸ್ಮೀಕರಣೆ ॥೬೭॥

ಕರ್ಮಮೂಲೇನ ದುಃಖೇನ ಪೀಡ್ಯಮಾನಸ್ಯ ದೇಹಿನಃ
ಆಧ್ಯಾತ್ಮಿಕಾದಿನಾ ನಿತ್ಯಂ ಚ ಕುತ್ರ ವಿಶ್ರಾಂತಿರಿಷ್ಯತೇ

ಕರ್ಮಮೂಲೇನ - ಕರ್ಮ ನಿರ್ಮಿತವಾದಂಥಾ, ಆಧ್ಯಾತ್ಮಿಕಾದಿನಾ - ಆಧ್ಯಾತ್ಮಿಕಾ ಮೊದಲಾಗಿರ್ದಂಥಾ, ದುಃಖೇನ - ದುಃಖದಿಂದ, ಪೀಡ್ಯ ಮಾನಸ್ಯ - ಬಾಧಿಸಲ್ಪಡುತಿರ್ದಂಥಾ, ದೇಹಿನಃ - ಪ್ರಾಣಿಗೆ, ಕೃತ್ರ - ಆವ ಠಾವಿನಲ್ಲಿ, ವಿಶ್ರಾಂತಿಃ - ಸುಖವು, ಇಷ್ಯತೇ - ಸಂಬಂಧವಹುದು. ಆವೆಡೆಯಲ್ಲಿಯು ಸುಖವಿಲ್ಲವೆಂಬುದರ್ಥ. ಇಸು - ಇಚ್ಛಾಯಾಂ ॥೬೮॥

ಆಧ್ಯಾತ್ಮಿಕಾದಿ ತಾಪತ್ರಯವನು ವಿವರವಾಗಿ ತೋರಿಸುತಿರ್ದಪಂ

ಆಧ್ಯಾತ್ಮಿಕಂತು ಪ್ರಥಮಂ ದ್ವಿತೀಯಂ ಚಾದಿ ಭೌತಿಕಂ
ಆಧಿದೈವಿಕಮನ್ಯಶ್ಚ ದುಃಖತ್ರಯಮಿದಂ ಸ್ಮೃತಂ

ಆಧ್ಯಾತ್ಮಿಕಂ - ಅಧ್ಯಾತ್ಮಿಕ ತಾಪವು, ಪ್ರಥಮಂ - ಮೊದಲು, ಆಧಿಭೌತಿಕಂ - ಆಧಿಭೌತಿಕ ತಾಪವು, ದ್ವಿತೀಯಂ - ಎರಡನೆಯದು, ಆಧಿದೈವಿಕಂ - ಆಧಿ ದೈವಿಕ ತಾಪವು, ಅನ್ಯಸ್ಯ - ಮೂರನೆಯದು, ಇದಂ - ಇದೀಗ, ದುಃಖತ್ರಯಂ ಸ್ಮೃತಂ - ತಾಪತ್ರಯವೆನಿಸುವುದು ॥೬೯॥

ಆಧ್ಯಾತ್ಮಿಕಂ ದ್ವಿಧಾ ಪ್ರೋಕ್ತಂ ಬಾಹ್ಯಾಭ್ಯಂತರಭೇದತಃ
ವಾತಪಿತ್ತಾದಿಜಂ ದುಃಖಂ ಬಾಹ್ಯಮಾಧ್ಯಾತ್ಮಿಕಂ ಮತಂ

ರಾಗದ್ವೇಷಾದಿ ಸಂಪನ್ನಮಾಂತರಂ ಪರಿಕೀರ್ತ್ಯತೆ

ಆಧ್ಯಾತ್ಮಿಕಂ - ಆಧ್ಯಾತ್ಮಿಕ ತಾಪವು, ಬಾಹ್ಯಾಬಾಹ್ಯಾಂತರ ಭೇದತಃ - ಬಾಹ್ಯಾಬಾಹ್ಯಾಂತರವೆಂಬ ಭೇದದಿಂದ, ದ್ವಿಧಾ - ಎರಡು ಪ್ರಕಾರವೆಂದು, ಪ್ರೋಕ್ತಂ - ಹೇಳಲ್ಪಟ್ಟಿತು. ವಾತಪಿತ್ತಾದಿಜಂ - ವಾತಪಿತ್ತಾದಿಗಳಿಂದ ಹುಟ್ಟಿದಂಥಾ, ದುಃಖಂ - ದುಃಖವು, ಬಾಹ್ಯಮಾಧ್ಯಾತ್ಮಿಕಂ ಬಾಹ್ಯವಾಗಿದ್ದಂಥಾ ಆಧ್ಯಾತ್ಮಿಕ ತಾಪವೆಂದು, ಮತಂ - ಹೇಳಲ್ಪಟ್ಟಿತು. ರಾಗದ್ವೇಷಾದಿ ಸಂಪನ್ನಂ - ರಾಗದ್ವೇಷಾದಿಗಳಿಂದ ಹುಟ್ಟಿದಂಥಾ ದುಃಖವು, ಅಂತರಂ - ಅಭ್ಯಂತರವಾದ, ಆಧ್ಯಾತ್ಮಿಕವಾದುವೆಂದು, ಪರಿಕೀರ್ತ್ಯತೆ - ಹೇಳಲ್ಪಟ್ಟಿತು ॥೭೦॥

ಆಧಿಭೌತಿಕ ಮೇತದ್ಧಿ ದುಃಖಂ ರಾಜಾದಿ ಭೂತಜಂ
ಆಧಿದೈವಿಕಮಾಖ್ಯಾತಂ ಗ್ರಹಂ ಯಕ್ಷಾದಿ ಸಂಭವಂ

ರಾಜಾದಿ ಭೂತಜಂ - ರಾಜರು ಮೊದಲಾದವರಿಂದ ಹುಟ್ಟಿದಂಥಾ, ದುಃಖಂ - ದುಃಖವು, ಏತತ್ - ಇದಂ, ಆಧಿಭೌತಿಕಂ - ಆಧಿಭೌತಿಕವಲಾ, ಗ್ರಹಯಕ್ಷಾದಿ ಸಂಭವಂ - ಯಕ್ಷ ಮೊದಲಾದ ಗ್ರಹಗಳಿಂ ಹುಟ್ಟಿದಂಥಾದ್ದು. ದುಃಖವು ಆಧಿದೈವಿಕಂ - ಆಧಿದೈವಿಕತಾಪವು ಎಂದು, ಆಖ್ಯಾತಂ - ಹೇಳಲ್ಪಟ್ಟಿತು ॥೭೧॥

ದುಃಖೈರೇತೈರುಪೇತಸ್ಯ ಕರ್ಮಬದ್ಧಸ್ಯ ದೇಹಿನಃ
ಸ್ವರ್ಗೇ ವಾ ಯದಿ ವಾ ಭೂಮೌ ಸುಖಲೇಶೋ ನ ವಿದ್ಯತೇ

ಏತೈ ದುಃಖೈಃ - ಈ ದುಃಖಗಳಿಂದ, ಉಪೇತಸ್ಯ - ಕೂಡಲ್ಪಟ್ಟಂಥಾ, ಕರ್ಮಬದ್ಧಸ್ಯ - ಕರ್ಮದಿಂದ ಕಟ್ಟಲ್ಪಟ್ಟಂಥಾ, ದೇಹಿನಃ - ಪ್ರಾಣಿಗೆ, ಸ್ವರ್ಗೇವಾ - ಸ್ವರ್ಗದಲ್ಲಾದರೂ, ಯದಿವ - ಯತ್ತಲಾನು, ಭೂಮೌ - ಮರ್ತ್ಯಲೋಕದಲ್ಲಾದರೂ, ಸುಖಲೇಶಃ - ಸುಖವಪ್ಪಚ್ಚಿಯು, ನವಿದ್ಯತೇ - ಉಂಟಾಗುತ್ತಿರದು, ವಿದಸತ್ತಾಯಾಂ ॥೭೨॥

ಮಲಕೋಶೇ ಶರೀರೇಽಸ್ಮಿನ್ ಮಹಾದುಃಖವಿವರ್ಧನೇ
ತಟಿದಂಕುರ ಸಂಕಾಶೇ ಕೋ ವಾ ರುಚ್ಯೇತಪಂಡಿತಃ

ಮಲಕೋಶೇ - ಮಲಕ್ಕಾಶ್ರಯವಾಗಿರ್ದಂಥಾ, ಮಹಾದುಃಖ ವಿವರ್ಧನೆ - ಅನೇಕ ದುಃಖವನ್ನು ಹುಟ್ಟಿಸುವಂಥಾ, ತಟಿದಂಕುರಸಂಕಾಶೆ - ಮಿಂಚಿನ ಮೊಳಕೆಗೆ ಸಮಾನವಾಗಿರ್ದಂಥಾ, ಅಸ್ಮಿನ್ ಶರೀರೆ - ಈ ಶರೀರದಲ್ಲಿ, ಪಂಡಿತಃ - ನಿತ್ಯಾನಿತ್ಯ ವಿವೇಕವನ್ನುಳ್ಳಂಥಾ, ಕಃ - ಆವವನು, ರುಚೇತ - ಪ್ರೀತಿ ಮಾಡುವವನು, ಪ್ರೀತಿ ಮಾಡನೆಂಬುದರ್ಥ, ರುಚಿ ದೀಪ್ತಾ ॥೭೩॥

ತಟಿತ್ಸುವೀಚಿಮಾಲಾ ಸುಪ್ರದೀಪಸ್ಯ ಪ್ರಭಾಸು ಚ
ಸಂಪತ್ಸುಕರ್ಮಮಾಲಾಸು ಕಸ್ಯ ವಾ ಸ್ಥಿರತಾಮತಿಃ

ತಟಿತ್ಸು - ಮಿಂಚುಗಳಲ್ಲಿ, ವೀಚಿಮಾಲಾಸು - ತೆರೆಗಳ ಸಾಲುಗಳಲ್ಲಿ, ಪ್ರದೀಪಸ್ಯ ಪ್ರಭಾಸು - ದೀಪದ ಕಾಂತಿಗಳಲ್ಲಿ ಹ್ಯಾಂಗೆ ಹಾಗೆ, ಕರ್ಮಮಾಲಾಸು - ಕರ್ಮಜನ್ಯವಾದ

ಸಂಪತ್ಸುಖ ಐಶ್ವರ್ಯಗಳಲ್ಲಿ, ಕಸ್ಯವಾ - ಆರಿಗೆ ತಾನು, ಸ್ಥಿರತಾಮತಿಃ - ಸ್ಥಿರ ಬುದ್ಧಿಯು, ವಿವೇಕಿಗಳಿಲ್ಲವೆಂಬುದರ್ಥ ॥೭೪॥

ನಿತ್ಯಾನಂದಚಿದಾಕಾರಮಾತ್ಮತತ್ವಂ ವಿಹಾಯಕಃ
ವಿವೇಕೀ ರಮತೇ ದೇಹೇ ನಶ್ವರೇ ದುಃಖಭಾಜನೇ

ನಿತ್ಯಾನಂದ ಚಿದಾಕಾರಂ - ಸಚ್ಚಿದಾನಂದ ಸ್ವರೂಪ ನಾಗಿರ್ದಂಥ ಆತ್ಮತತ್ವಂ - ಪ್ರತ್ಯಾಗಾತ್ಮ ಸ್ವರೂಪನಂ, ವಿಹಾಯ - ಬಿಟ್ಟು, ವಿವೇಕಿ ವಿವೇಕಿಯಾಗಿರ್ದಂಥಾ, ಕಃ - ಆವವನು. ನಶ್ವರೇ - ಕೇಡನ್ನುಳ್ಳಂಥಾ, ದುಃಖ ಭಾಜನೇ - ದುಃಖಕ್ಕೆ ನೆಲವನೆಯಾಗಿರ್ದಂಥಾ, ದೇಹೇಶರೀರದಲ್ಲಿ ರಮತೇ - ಪ್ರೀತಿ ಮಾಡುವನು ಪ್ರೀತಿಮಾಡನೆಂಬುದರ್ಥಾ ॥೭೫॥

ವಿವೇಕೀ ಶುದ್ಧಹೃದಯೋ ನಿಶ್ಚಿತಾತ್ಮಸುಖೋದಯಃ
ದುಃಖಹೇತೌ ಶರೀರೇ ಸ್ಮಿನ್ ಕಳತ್ರೇಚ ಸುತೇಷು ಚ

ಸುಹೃತ್ಸುಬಂಧುವರ್ಗೇಷು ಧನೇಷುಕುಲಪದ್ಧತೌ
ಅನಿತ್ಯ ಬುಧ್ಯಾಸರ್ವತ್ರ ವೈರಾಗ್ಯಂ ಪರಮಶ್ನುತೇ

ಶುದ್ಧ ಹೃದಯಃ - ನಿತ್ಯಕರ್ಮಗಳಿಂದ ನಿರ್ಮಲ ಚಿತ್ತವಾಗಿರ್ದಂಥಾ ವಿವೇಕೀ - ನಿತ್ಯಾನಿತ್ಯ ವಿವೇಕವನ್ನುಳ್ಳಂಥಾ - ನಿಶ್ಚಿತಾತ್ಮಸುಖಾದಯಃ - ಶೃತಿ ಪ್ರಮಾಣಗಳಿಂದವು ಸ್ವಾನುಭಾವ ಪ್ರಮಾಣೆನಿಂದವು, ನಿಶ್ಚೈಸಲ್ಪಟ್ಟ ಸ್ವರೂಪ ಸುಖಾ ವಿರ್ಭಾನುವನ್ನುಳ್ಳಂಥಾ ಪುರುಷನು, ದುಃಖಹೆತೌ - ದುಃಖಕ್ಕೆ ಕಾರಣವಾದ, ಅಸ್ಮಿನ್‌ಶರೀರೇ - ಈ ಶರೀರದಲ್ಲಿ ಕಳತ್ತೇಷು - ಸ್ತ್ರೀಯರುಗಳಲ್ಲಿ ಸುತೇಷುಚ - ಮಕ್ಕಳುಗಳಲ್ಲಿಯೂ, ಸುಹೃತ್ಸು - ಮಿತ್ರರುಗಳಲ್ಲಿ, ಬಂಧುವರ್ಗೇಷು - ನಂಟರುಗಳಲ್ಲಿ, ಧನೇಷು ದ್ರವ್ಯಂಗಳಲ್ಲಿ, ಕುಲಪದ್ಧತೌ - ತನ್ನ ಕುಲಾಚಾರದಲ್ಲಿಯು, ಸರ್ವತ್ರ - ಎಲ್ಲ ಸ್ಥಳದಲ್ಲಿಯೂ, ಅನಿತ್ಯಬುಧ್ಯಾ - ಅನಿತ್ಯಬುದ್ಧಿಯಿಂದ, ಪರಂ - ವೆಗ್ಗಳವಾದ, ವೈರಾಗ್ಯಂ - ವಿರಕ್ತಿಯನ್ನು, ಅಶ್ನುತೆ - ಐದುತ್ತಿಹನು, ಅಶೂನ್ವಾವ್ಯಾಪ್ತಾ ॥೭೭॥

ವಿವೇಕಿಯಾಗಿದ್ಧಾತಂಗೆ ತನ್ನ ಮರೆಹೊಕ್ಕಂಥವರ ಸಂಸಾರಪಾಶಚ್ಚೇದನವೆ ನಿಮಿತ್ಯವಾಗುಳ್ಳ ಪರಮೇಶ್ವರನಲ್ಲಿ ಪ್ರಿಯುವನ್ನುಳ್ಳ ಬುದ್ಧಿ ಹುಟ್ಟುತ್ತಿಹುದೆಂದು ಹೇಳುತಿರ್ದಪಂ

ವಿವೇಕಿನೋ ವಿರಕ್ತಸ್ತ ವಿಷಯೇಷ್ವಾತ್ಮರಾಗಿಣಃ
ಸಂಸಾರ ದುಃಖವಿಚ್ಛೇದ ಹೇತೌ ಬುದ್ಧಿಃ ಪ್ರವರ್ತತೇ ॥

ವಿವೇಕಿನಃ - ವಿವೇಕಿಯಾದ, ವಿರಕ್ತಸ್ಯ - ವಿಷಯಾಭಿಲಾಷೆಕೆಟ್ಟಂಥಾ, ಆತ್ಮರಾಗಿಣಃ - ಪರಮಾತ್ಮ ಸ್ವರೂಪಪ್ರಾಪ್ತಿಯ ನಿಶ್ಚೈಸುವಂಥಾತನಿಗೆ ಸಂಸಾರ ದುಃಖವಿಚ್ಛೇದ ದೇತೌ - ಸಂಸಾರ ದುಃಖವ ಕೆಡಿಸುವುದಕ್ಕೆ ಕಾರಣವಾದ ಶಿವನಲ್ಲಿ, ಬುದ್ಧಿಃ - ಭಕ್ತಿ ಬುದ್ಧಿಯು, ಪ್ರವರ್ತತೆ - ಪ್ರವರ್ತಿಸುತ್ತಿಹುದು ವೃತು ವರ್ತತೊ ॥೭೮॥

ಸಂಸಾರ ಹೇಯಸ್ಥಲವನು ಸಂಹರಿಸುತಿರ್ದಪಂ

ನಿತ್ಯಾನಿತ್ಯ ವಿವೇಕಿನಸ್ಸುಕೃತಿನ ಶ್ಯುದ್ಧಾಶಯಸ್ಯಾತ್ಮನೋ
ಬ್ರಹ್ಮೋಪೇಂದ್ರ ಮಹೇಂದ್ರ ಮುಖ್ಯವಿಭವೇಷ್ವಸ್ಥಾಯಿತಾಂ ಪಶ್ಯತಃ
ನಿತ್ಯಾನಂದಪದೇ ನಿರಾಕೃತ ಜಗತ್ಸಂಸಾರದುಃಖೋದಯೇ
ಸಾಂಬೇ ಚಂದ್ರಶಿರೋಮಣೌ ಸಮುದಯೇದ್ಭಕ್ತಿರ್ಭವಧ್ವಂಸಿನೀ

ಸುಕೃತ್ತಿನಃ - ಪುಣ್ಯಕರ್ಮಗಳಿಂದ, ಶುದ್ಧಾಶಯಸ್ಯ - ನಿರ್ಮಲ ಚಿತ್ತನಾದಂಥಾ, ನಿತ್ಯಾನಿತ್ಯವಿವೇಕಿನಃ - ಆತ್ಮಾನಾತ್ಮ ವಿವೇಕವನುಳ್ಳಂಥಾ, ಬ್ರಹ್ಮೋಪೇಂದ್ರ ಮಹೇಂದ್ರಮುಖ್ಯ ವಿಭವೇಪಿ - ಬ್ರಹ್ಮವಿಷ್ಣು, ಇಂದ್ರ ಮೊದಲಾದವರ ಸಂಪತ್ತುಗಳಲ್ಲಿಯು, ಅಸ್ಥಾಇತಾಂ - ಅನಿತ್ಯತತ್ವವನು, ಪಶ್ಚತಃ - ಕಾಣುತಿರ್ದಂಥಾ, ಆತ್ಮನಃ - ವಿರಕ್ತಂಗೆ, ನಿತ್ಯಾನಂದಪದೆ - ನಿತ್ಯವಾದ ಸುಖಕ್ಕೆ ಆಶ್ರಯನಾಗಿರ್ದ ನಿರಾಕೃತ ಜಗತ್ಸಂಸಾರ ದುಃಖೋದಯೆ ಆವಾಗಲು ಸ್ವರೂಪ ನಿರ್ಭಾವದಿಂದ ನಿರಾಕರಿಸಲ್ಪಟ್ಟ ಜಗದ್ರೂಪ ಸಂಸಾರ ದುಃಖ ಸಂಬಂಧವನ್ನುಳ್ಳಂಥಾ, ಸಾಂಬೇ - ಉಮಾಸಮೇತನಾದ, ಚಂದ್ರಶಿಖಾಮಣೌ - ಚಂದ್ರಶೇಖರನಾದ ಶಿವನಲ್ಲಿ, ಭವಧ್ವಂಸಿನಿ - ಸಂಸಾರವನ್ನು ಕೆಡಿಸುವಂಥಾ, ಭಕ್ತಿಃ - ಸಹಜ ಭಕ್ತಿಯು, ಸಮುದಯೇತ್ - ಹುಟ್ಟುತ್ತಿಹುದು. ಅಯಪಯಗತೌ ॥೨೮॥

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ
ಪಿಂಡ ಪಿಂಡಜ್ಞಾನ ಸಂಸಾರಹೇಯ ಪ್ರಸಂಗೋನಾಮ ಪಂಚಮಪರಿಚ್ಛೇದಃ

ಷಷ್ಠಪರಿಚ್ಛೇದ

೪. ಗುರುಕಾರುಣ್ಯಸ್ಥಲ

ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಶುದ್ಧಚಿತ್ತನಾದಾತನಿಗೆ ನಿತ್ಯಾ ನಿತ್ಯ ವಸ್ತುವಿವೇಕದಿಂದ ಅನಿತ್ಯವಾಗಿರ್ದಂಥಾ ಸಂಸಾರ ವಿಷಯದಲ್ಲಿ ವೈರಾಗ್ಯವು ನಿತ್ಯವಾದ ತನ್ನ ಸ್ವರೂಪದಲ್ಲಿ ಪ್ರೀತಿಯು ಶಿವನಲ್ಲಿ ದೃಢವಾದ ಭಕ್ತಿಯು ಹುಟ್ಟುವುದೆಂದು ಪಂಚಮ ಪರಿಚ್ಛೇದದಲ್ಲಿ ನಿರೂಪಿಸಿದ ಬಳಿಕ ಷಷ್ಠ ಪರಿಚ್ಛೇದದಲ್ಲಿ ಗುರೋಪಾಸನೆಯ ಲಕ್ಷಣವನು ಹೇಳುತಿರ್ದಪಂ.

ರೇಣುಕಃ ಉವಾಚ

ತತೋ ವಿವೇಕಸಂಪನ್ನೋ ವಿರಾಗೀ ಶುದ್ಧಮಾನಸಃ
ಜಿಜ್ಞಾಸುಸ್ಸರ್ವಸಂಸಾರದೋಷಧ್ವಂಸಕರಂ ಶಿವಂ

ತತಃ - ಅನಂತರದಲ್ಲಿ, ಶುದ್ಧಮಾನಸಃ - ನಿರ್ಮಲಚಿತ್ತನಾದ, ವಿವೇಕ ಸಂಪನ್ನ - ನಿತ್ಯಾನಿತ್ಯ ವಸ್ತು ವಿವೇಕ ಸಂಪನ್ನನಾದ, ವಿರಾಗಿನಿಸ್ಪೃಹನಾದಾತನು, ಸರ್ವ ಸಂಸಾರ ದೋಷ ಧ್ವಂಸಿಕರಂ - ಸಮಸ್ತ ಸಂಸಾರ ದುಃಖವ ಕೆಡಿಸುವಂಥಾ ಶಿವಂ - ಶಿವನನ್ನು ಜಿಜ್ಞಾಸುಃ - ಅರಿವ ಇಚ್ಛೆಯನ್ನುಳ್ಳಂಥವನಾಗಿ ॥೧॥

ಉಪೈತಿ ಲೋಕವಿಖ್ಯಾತಂ ಲೋಭಮೋಹ ವಿವರ್ಜಿತಂ
ಆತ್ಮತತ್ವವಿಚಾರಜ್ಞಂ ವಿಮುಕ್ತವಿಷಯಭ್ರಮಂ

ಶಿವಸಿದ್ಧಾಂತತತ್ವಜ್ಞಂಚ್ಛಿನ್ನಸಂದೇಹವಿಭ್ರಮಂ
ಸರ್ವತಂತ್ರಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಂ

ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಂ
ಶಿವಧ್ಯಾನ ಪರಂ ಶಾಂತಂ ಶಿವತತ್ವ ವಿವೇಕಿನಂ

ಭಸ್ಮೋದ್ಧೂಲನ ನಿಷ್ಣಾತಂ ಭಸ್ಮತತ್ವವಿವೇಕಿನಂ
ತ್ರಿಪುಂಡ್ರಧಾರಣೋತ್ಕಂಠಂ ಧೃತರುದ್ರಾಕ್ಷಮಾಲಿಕಂ

ಲಿಂಗಧಾರಣಸಂಯುಕ್ತಂ ಲಿಂಗಪೂಜಾಪರಾಯಣಂ
ಲಿಂಗಾಂಗಯೋಗತತ್ವಜ್ಞಂ ನಿರೂಢಾದ್ವೈತವಾಸನಂ

ಲಿಂಗಾಂಗಸ್ಥಲ ಭೇದಜ್ಞಂ ಶ್ರೀ ಗುರುಂ ಶಿವವಾದಿನಂ ॥

ಲೋಕ ವಿಖ್ಯಾತಂ - ಜಗತ್ಪ್ರಸಿದ್ಧನಾಗಿದ್ದಂಥಾ, ಲೋಭಮೋಹ ವಿವರ್ಜಿತಂ - ಲೋಭಮೋಹಗಳಿಲ್ಲದಂಥಾ, ಆತ್ಮತತ್ವವಿಚಾರಜ್ಞಂ - ಆತ್ಮನ ಯಥಾರ್ಥವನು ಬಲ್ಲಂಥಾ, ವಿಮುಕ್ತ ವಿಷಯ ಭ್ರಮಂ - ಬಿಡಲ್ಪಟ್ಟ ದ್ವೈತ ಭ್ರಮೆಯನ್ನುಳ್ಳಂಥಾ, ಶಿವಸಿದ್ಧಾಂತತತ್ವಜ್ಞಂ - ಶಿವಾಗಮಂಗಳಲ್ಲಿ ಹೇಳಲ್ಪಟ್ಟ ತತ್ವಸ್ವರೂಪವನು ಬಲ್ಲಂಥಾ ಛಿನ್ನ ಸಂದೇಹ ವಿಭ್ರಮಂ - ನಿರಾಕರಿಸಲ್ಪಟ್ಟ ಸಂಶಯವನುಳ್ಳಂಥಾ, ಸರ್ವತಂತ್ರ ಪ್ರಯೋಗಜ್ಞಂ - ಸಮಸ್ತ ಶಾಸ್ತ್ರಾಂಗ

ಪ್ರಯೋಗಂಗಳ ಬಲ್ಲಂಥಾ, ಧಾರ್ಮಿಕ - ಧರ್ಮಿಷ್ಟನಾದಂಥಾ, ಸತ್ಯವಾದಿನಂ - ಸತ್ಯ ವಚನವನುಳ್ಳಂಥಾ, ಕುಲಕ್ರಮಗತಾಚಾರಂ - ಆಚಾರ್ಯ ವಂಶಾನುಕ್ರಮದಿಂದ ಬಂದಂಥಾ ಆಚಾರವನ್ನುಳ್ಳಂಥಾ, ಕುಮಾರ್ಗಾಚಾರವರ್ಜಿತಃ - ಕುಚಿತವಾದ ಸಮಯ ವರ್ತನವಿಲ್ಲದಂಥಾ, ಶಿವಧ್ಯಾನಪರಂ - ಶಿವಧ್ಯಾನ ತತ್ಪರನಾದಂಥಾ, ಶಾಂತಂ - ರಾಗದ್ವೇಷವಿಲ್ಲದಂಥಾ, ಶಿವತತ್ವವಿವೇಕಿನಂ ಶಿವಸ್ವರೂಪವನು ಬಲ್ಲಂಥಾ, ಭಸ್ಮೋದ್ಧೂಲನ ನಿಷ್ಣಾತಂ - ಭಸ್ಮಾನು ಲೇಪನ ವಿಧಿಯಲ್ಲಿ ಕುಶಲನಾದಂಥಾ, ಭಸ್ಮತತ್ವವಿವೇಕಿನಂ - ವಿಭೂತಿಯ ಸ್ವರೂಪವನು ಬಲ್ಲಂಥಾ, ತ್ರಿಪುಂಡಧಾರಣೋತ್ಕಂಠಂ - ತ್ರಿರೇಖಾರೂಪವಾದ ವಿಭೂತಿಯ ಧಾರಣದಲ್ಲಿ ಲವಲವಿಕೆಯನುಳ್ಳಂಥಾ, ಧೃತರುದ್ರಾಕ್ಷಾಮಾಲಿಕ - ಧರಿಸಲ್ಪಟ್ಟ ರುದ್ರಾಕ್ಷೆಯಮಾಲೆಯನುಳ್ಳಂಥಾ, ಲಿಂಗಧಾರಣ ಸಂಯುಕ್ತಂ - ಲಿಂಗಧಾರಣ ಸಮೇತನಾದಂಥಾ, ಲಿಂಗಪೂಜಾಪರಾಯಣಂ - ಶಿವಲಿಂಗಪೂಜೆಯಲ್ಲಿ ತತ್ಪರನಾದಂಥಾ, ಲಿಂಗಾಂಗಯೋಗ ತತ್ವಜ್ಞಂ - ಲಿಂಗ ಅಂಗವೆಂಬುಭಯ ಸಂಬಂಧವನು ಬಲ್ಲಂಥಾ, ನಿರೂಢಾದ್ವೈತವಾಸನಂ - ದೃಢವಾದ ಅದ್ವೈತಜ್ಞಾನವನುಳ್ಳಂಥಾ, ಲಿಂಗಾಂಗಸ್ಥಲ ಭೇದಜ್ಞಂ - ಲಿಂಗಸ್ಥಲ ಅಂಗಸ್ಥಲದ ಭೇದವನು ಬಲ್ಲಂಥಾ, ಶಿವವಾದಿನಂ - ಮಾಂಗಲ್ಯವನೆ ಹೇಳುವಂಥಾ ಶ್ರೀಗುರುಂ - ಶ್ರೀಮಾನ್ ಆದ ಗುರುವನೂ, ಉಪೈತಿ - ಪೂರ್ವೋಕ್ತನಾದ - ಅಧಿಕಾರಿಯೆಯ್ದುವನು, ಇಣಗತೌ ॥೬॥

ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿವಿಭಾವಿತಃ
ಷಣ್ಮಾಸಾನ್ವತ್ಸರಂ ವಾಪಿ ಯಾವದೇಷಃ ಪ್ರಸೀದತಿ

ಭಕ್ತಿ ವಿಭಾವಿತಃ - ಭಕ್ತಿಯುಕ್ತನಾಗಿದ್ದಂಥಾ ಶಿಷ್ಯಃ - ಶಿಷ್ಯನು ಪರಮಾಚಾರ್ಯಂ - ಪೂರ್ವೋಕ್ತನಾದ ಶ್ರೀ ಗುರುವನು, ಷಣ್ಮಾಸಾನ್ - ಆರು ತಿಂಗಳಾದರೂ, ವತ್ಸರಂ ವಾ - ವರುಷವಾದರೂ, ಸೇವ್ಯತಾಂ - ಸೇವಿಸಬೇಕು. ಸೇವ್ಯಶಿವಾಯಾಂ ಯೇಷಃ - ಈ ಗುರುವು, ಯಾವತ್ - ಎಷ್ಟು ದಿನಕ್ಕೆ, ಪ್ರಸೀದತಿ - ಪ್ರಸನ್ನನಹನು. ತಾವತ್ - ಅಷ್ಟು ದಿನ ಪರ್ಯಂತರ, ವಾಸ್ತೆಯ ಮಾಡಬೇಕು, ಪದಲ್ ವಿಸರಣಗತ್ಯಾವಸಾದನೇಷು

ಪ್ರಸನ್ನಂ ಪರಮಾಚಾರ್ಯಂ ಭಕ್ತ್ಯಾಮುಕ್ತಿಪ್ರದರ್ಶಕಂ
ಪ್ರಾರ್ಥಯೇದಗ್ರತಶ್ಶಿಷ್ಯಃ ಪ್ರಾಂಜಲಿರ್ವಿನಯಾನ್ವಿತಃ

ಪ್ರಸನ್ನಂ - ಪ್ರಸನ್ನನಾದಂಥಾ, ಮುಕ್ತಿ ಪ್ರದರ್ಶಿತಃ - ಮುಕ್ತಿಯನು ತೋರಿಸುವಂಥಾ, ಪರಮಾಚಾರ್ಯಂ - ಪರಮಗುರುವನು ಭಕ್ತ್ಯಾಭಕ್ತಿಯಿಂದ, ಪ್ರಾಂಜಲಿಃ - ಕೈಮುಗಿದುಕೊಂಡು, ಅಗ್ರತಃ - ಮುಂದುಗಡೆಯಲ್ಲಿ, ಪ್ರಾರ್ಥವತ್ - ಪ್ರಾರ್ಥಿಸಬೇಕು, ಅರ್ಥಯಾಚ್ಞಾಯಾಂ ॥೮॥

ಭೋ ಕಲ್ಯಾಣಮಹಾಭಾಗಶ್ಶಿವಜ್ಞಾನಮಹೋದಧೇ
ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷಮಾಂ ಭವರೋಗಿಣಂ

ಭೋ ಕಲ್ಯಾಣ - ಎಲೈ ಮಾಂಗಲ್ಯ ಸ್ವರೂಪನಾಗಿರ್ದಂಥಾ, ಮಹಾಭಾಗಃ - ಉತ್ತಮನಾಗಿರ್ದಂಥಾ, ಶಿವಜ್ಞಾನಮಹೋದಧೇಃ - ಶಿವಜ್ಞಾನವೆಂಬ ಸಮುದ್ರ

ವನುಳ್ಳಂಥಾ, ಆಚಾರ್ಯವರ್ಯ-ಗುರುಶ್ರೇಷ್ಠನೆ, ಸಂಪ್ರಾಪ್ತ - ಶರಣಾಗತನಾ ದಂಥಾ, ಭವರೋಗಿಣಂ - ಸಂಸಾರವೆಂಬ ರೋಗವನುಳ್ಳಂಥಾ, ಮಾಂ - ನನ್ನನ್ನು, ರಕ್ಷಕ - ರಕ್ಷಿಸು, ರಕ್ಷಪಾಲನೆ ॥೯॥

ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ

ಇತಿ - ಈ ಪ್ರಕಾರದಲ್ಲಿ, ಶುದ್ಧೇನ - ಶುದ್ಧನಾದ, ಶಿಷ್ಯೇಣ - ಶಿಷ್ಯನಿಂದ, ಪ್ರಾರ್ಥಿತಃ - ಉಪಾಸಿಸಲ್ಪಟ್ಟ, ಪರಮೋಗುರುಃ - ಗುರೋತ್ತಮನು, ಶಕ್ತಿಪಾತಃ - ಶಿಷ್ಯನ ಅಧಿಕಾರ ಸಂಪತ್ತಿಯನು, ಸಮಾ- ವಿಚಾರಿಸಿ ಅಮುಂ - ಈ ಶಿಷ್ಯನನ್ನು, ದೀಕ್ಷಯಾ - ಶಿವದೀಕ್ಷೆಯೊಡನೆ, ಯೋಜಯೇತ್ - ಕೂಡುವನು. ಯುಜುರ್ಯೋಗೆ ॥೧೦॥

ದೀಕ್ಷಾಶಬ್ದಕೆ ಅರ್ಥವನು ಹೇಳುತಿರ್ದಪಂ

ದೀಯ್ಯತೇ ಚ ಶಿವ ಜ್ಞಾನಂ ಕ್ಷೀಯತೇ ಪಾಶಬಂಧನಂ
ಯಸ್ಮಾದತಸ್ಸಮಖ್ಯಾತ ಸಾ ದೀಕ್ಷೇತಿ ವಿಚಕ್ಷಣೈಃ

ಯಸ್ಮಾತ್ - ಆವುದಾನೊಂದು ಕಾರಣ, ಶಿವಜ್ಞಾನಂ - ಶಿವಜ್ಞಾನವು, ದೀಯ್ಯತೆ - ಕೊಡಲ್ಪಡುವುದು, ಪಾಶಬಂಧನಂ - ಸಂಸಾರಪಾಶದ ಕಟ್ಟು, ಕ್ಷೀಯತೆ - ಹರಿಯಲ್ಪಡುವುದು, ತಸ್ಮಾತ್ - ಅದು ಕಾರಣ, ಸಾ - ಅಂಥಾ ಕ್ರೀಯು, ದೀಕ್ಷೇತಿ - ದೀಕ್ಷೆ ಎಂದು, ವಿಚಕ್ಷಣೈಃ - ಬಲ್ಲಂಥವರುಗಳಿಂದ, ಸಮಾಖ್ಯಾತ - ಹೇಳಲ್ಪಟ್ಟಿತು ॥೧೧॥

ದೀಕ್ಷಾಭೇದಂಗಳನ್ನು ಹೇಳುತಿರ್ದಪಂ

ದೀಕ್ಷಾ ಚ ತ್ರಿವಿಧಾ ಪ್ರೋಕ್ತಾಃ ಶಿವಾಗಮವಿಶಾರದೈಃ
ವೇಧರೂಪಾ ಕ್ರಿಯಾರೂಪಾ ಮಂತ್ರರೂಪಾ ಚ ತಾಪಸ

ತಾಪಸ - ಎಲೈ ಅಗಸ್ತ್ಯ ಮುನೀಶ್ವರನೇ, ದೀಕ್ಷಾ - ಶಿವದೀಕ್ಷೆಯು ಶಿವಾಗಮ ವಿಶಾರದೈಃ - ಶಿವಾಗಮಂಗಳಲ್ಲಿ ಕುಶಲರಾದವರಿಂದ, ವೇಧರೂಪ - ವೇಧದೀಕ್ಷೆ ಎಂದು, ಕ್ರಿಯಾರೂಪ - ಕ್ರಿಯಾದೀಕ್ಷೆ ಎಂದು, ಮಂತ್ರರೂಪ - ಮಂತ್ರ ದೀಕ್ಷೆ ಎಂದು, ತ್ರಿವಿಧಾ ಪ್ರೋಕ್ತಾಃ - ಮೂರು ಪ್ರಕಾರವಾಗಿ ಹೇಳಲ್ಪಟ್ಟಿತು ॥೧೨॥

ಗುರೋರಾಲೋಕಮಾತ್ರೇಣ ಹಸ್ತಮಸ್ತಕ ಯೋಗತಃ
ಯಶ್ಶಿವತ್ವ ಸಮಾದೇಶೌ ವೇಧದೀಕ್ಷಾ ಚ ಸಾ ಮತೊ

ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ
ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ

ಗುರೋಃ - ಗುರುವಿನ, ಆಲೋಕಮಾತ್ರೇಣ ಕೃಪಾವಲೋಕನ ಮಾತ್ರದಿಂದ, ಹಸ್ತಮಸ್ತಕ ಯೋಗತಃ - ಹಸ್ತಮಸ್ತಕ ಯೋಗದಿಂದ, ಯಃ ಶಿವತ್ವ, ಸಮಾದೇಶಃ - ಆವುದಾನೊಂದು ಶಿವತತ್ತ್ವೋಪದೇಶವುಂಟು, ಸಾ - ಅದು, ವೇದದೀಕ್ಷಾಮತಾ - ವೇಧದೀಕ್ಷೆ ಎನಿಸುವುದು. ಮಂತ್ರಮಾತ್ರೋಪದೇಶಿನಿ - ಮಂತ್ರಮಾತ್ರದ ಉಪದೇಶವು, ಮಂತ್ರದೀಕ್ಷಾಮತಾ - ಮಂತ್ರದೀಕ್ಷೆ ಎನಿಸುವುದು, ಕುಂಡಮಂಡಲಿಕೋಪೇತಾ - ಮಂಡಲಾಕಾರವಾದ ಅಗ್ನಿಕುಂಡದಿಂದ ಕೂಡಿದಂಥಾ ಕ್ರಿಯೋತ್ತರಾ - ಕ್ರಿಯಾಪ್ರಧಾನವಾದ ದೀಕ್ಷೆಯು, ಕ್ರಿಯಾದೀಕ್ಷಾ - ಕ್ರಿಯಾದೀಕ್ಷೆ ಎನಿಸುವುದು ।।೧೪।।

ಶುಭ ಮಾಸೇ ಶುಭಋತೌ ಶುಭಕಾಲೇ ಶುಭೇಽಹನಿ
ವಿಭೂತಿಂ ಶಿವಭಕ್ತೇಭ್ಯೋ ದತ್ವಾ ತಾಂಬೂಲ ಪೂರ್ವಕಂ

ಯಥಾವಿಧಿ ಯಥಾಯೋಗಂ ಶಿಷ್ಯಮಾನೀಯ ದೇಶಿಕಃ
ಸ್ನಾತಂ ಶುಕ್ಲಾಂಬರಧರಂ ದಂತಧಾವನಪೂರ್ವಕಂ

ಮಂಡಲೇಸ್ಥಾಪಯೇಚ್ಛಿಷ್ಯಂ ಪ್ರಾಙ್ಮುಖಂ ತಮುದಙ್ಮುಖಂ
ಶಿವಸ್ಯನಾಮಕೀರ್ತಿಂಚ ಚಿಂತಾಮಪಿ ಚ ಕಾರಯತ್

ಶುಭಋತೌ - ವಸಂತ ಮೊದಲಾದ, ಉತ್ತುಮಋತುಗಳಲ್ಲಿ, ಶುಭಮಾಸೇ - ಶುಭಮಾಸದಲ್ಲಿ, ಶುಭೇಹನೀ - ಶುಭದಿನದಲ್ಲಿ, ಶುಭಕಾಲೇ - ಶುಭಲಗ್ನದಲ್ಲಿ, ಶಿವಭಕ್ತೇಭ್ಯಃ - ಶಿವಭಕ್ತರಿಗೋಸ್ಕರ ತಾಂಬೂಲ ಪೂರ್ವಕಂ - ತಾಂಬೂಲ ಮುಂತಾಗಿ, ವಿಭೂತಿಂ - ವಿಭೂತಿಯನು, ದತ್ವಾ - ಕೊಟ್ಟು ಬಿಜಯಂಗೈಸಿತಂದು - ದೇಶಿಕಃ - ಆಚಾರ್ಯನು, ಪ್ರಾಙ್ಮುಖಂ - ಪೂರ್ವಾಭಿಮುಖವಾಗಿ ಗಣ ಸಮೂಹದಲ್ಲಿ ಮೂರ್ತಗೊಂಡು, ಯಥಾವಿಧಿಃ - ಶಾಸ್ತ್ರೋಕ್ತ ಪ್ರಕಾರದಲ್ಲಿ ಯಥಾ - ಹೇಂಗೆ, ತಥಾ - ಹಾಂಗೆ ಯೋಗ್ಯವಾಗಿ, ಸ್ನಾತಂ - ಸ್ನಾನವ ಮಾಡಿ, ಶುಕ್ಲಾಂಬರಧರಂ - ಶುಭ್ರವಸ್ತ್ರವನುಟ್ಟು, ದಂತಧಾವನ ಪೂರ್ವಕಂ - ದಂತಧಾವನಾದಿ ಕ್ರಿಯೆಗಳಿಂದ ಶುಚಿರ್ಭೂತನಾದ, ತಂಶಿಷ್ಯಂ - ಆ ಶಿಷ್ಯನನ್ನು, ಆನೀಯ್ಯ - ಸಮೀಪಕ್ಕೆ ಕರೆದು ಗಣಂಗಳಿಗೆ ನಮಸ್ಕಾರಾದಿ ಕೃತ್ಯಗಳಂ - ವಿಧಿವತ್ತಾಗಿ ಮಾಡಿಸಿ, ಮಂಡಲೇ ತನ್ನ ದಕ್ಷಿಣಭಾಗದ ಸ್ವಸ್ತಿಕಾ ಮಂಡಲದಲ್ಲಿ, ಉದಙ್ಮುಖಂ - ಉತ್ತರ ಮುಖವಾಗಿ, ಸ್ಥಾಪಯೇತ್ - ಕುಳ್ಳಿರಿಸಬೇಕು, ಶಿವಸ್ಯ - ಶಿವನ, ನಾಮಕೀರ್ತಿಂಚ - ನಾಮಸ್ಮರಣೆಯನು, ಚಿಂತಾಮಪಿ - ಶಿವಧ್ಯಾನವನು, ಚಕಾರಯೇತ್ - ಮಾಡಿಸಬೇಕು, ಡುಕುರುಂಕರಣೊ ।।೧೭।।

ವಿಭೂತಿಪಟ್ಟಂ ಕೃತ್ವಾಗ್ರೇ ಯಥಾಸ್ಥಾನಂ ಯಥಾವಿಧಿಃ
ಪಂಚಬ್ರಹ್ಮಮಯೈಸ್ತತ್ರ ಸ್ಥಾಪಿತೈಃಕಲಶೋದಕೈಃ

ಆಚಾರ್ಯಃ ಸಮುಮೃತ್ವಗ್ನಿಸ್ತಿ ಶಿಷ್ಯಮಭಿಷಿಂಚಯೇತ್

ಆಚಾರ್ಯಃ - ಆಚಾರ್ಯನು ಅಗ್ರೇ - ಮೊದಲು, ಯಥಾವಿಧಿಃ - ಶಾಸ್ತ್ರೋಕ್ತ ಪ್ರಕಾರದಿಂದಲಿ, ಯಥಾಸ್ಥಾನಂ - ಲಲಾಟಾದಿ ಸ್ಥಾನಂಗಳಲ್ಲಿ, ವಿಭೂತಿಪಟ್ಟಂ ಕೃತ್ವಾ -

ವಿಭೂತಿ ಧಾರಣವನು ಮಾಡಿ, ಮೃತ್ತಿವ್ಗಿಭಿಸ್ತ್ರಿ - ಪಂಚಕಲಶಗಳ ಮತ್ತಿವ್ಕ್ಕುಗಳ ಸಹವಾಗಿ, ಪಂಚಬ್ರಹ್ಮಮಯ್ಯೈಃ - ಸದ್ಯೋಜಾತಾದಿ ಪಂಚಬ್ರಹ್ಮ ಸ್ವರೂಪವಾಗಿ, ಸ್ಥಾಪಿತೈಃ - ಪ್ರತಿಷ್ಠಿಸಲ್ಪಟ್ಟಂಥಾ, ಕಲಶೋದಕೈಃ - ಕುಂಭೋದಕಗಳಿಂದ, ತ್ರಿ - ಮೂರು ಬಾರಿ, ಶಿಷ್ಯಂ - ಶಿಷ್ಯನನ್ನು, ಅಭಿಷಿಂಚಯೇತ್ - ಅಭಿಷೇಕ ಮಾಡಿಬೇಕು. ಪಿಚಿತ್‌ಕ್ಷರಣೆ ।।೧೯।।

ಅಭಿಷಿಚ್ಯಗುರುಃ ಶಿಷ್ಯಮಾಸೀನಂ ಪರಿತಃ ಶುಚಿಂ
ತತಃ ಪಂಚಾಕ್ಷರೀಂ ಶೈವೀಂ ಸಂಸಾರಭಯತಾರಿಣೀಂ

ತಸ್ಯ ದಕ್ಷಿಣ ಕರ್ಣೇಶು ನಿಗೂಢಮಪಿ ಕೀರ್ತಯೇತ್
ಛಂದೋರೂಪ ಮೃಷಿಂ ಚಾಸ್ಯ ದೇವತಾ ನ್ಯಾಸ ಪದ್ಧತಿಂ

ಗುರುಃ - ಆಚಾರ್ಯನು - ಪುರತಃ - ತನ್ನ ಮುಂದೆ, ಶುಚಿಂ - ಶುಚಿಯಾಗಿ, ಆಸೀನಂ - ಕುಳ್ಳಿರ್ದ, ಶಿಷ್ಯಂ - ಶಿಷ್ಯನನ್ನು, ಅಭಿಷಿಶ್ಚಾ - ಅಭಿಷೇಕವನು ಮಾಡಿಸಿ, ತಸ್ಯ - ಆ ಶಿಷ್ಯನ, ದಕ್ಷಿಣ ಕರ್ಣೇಶು - ಬಲದಕರ್ಣದಲ್ಲಾಯಿತ್ತಾದೊಡೆ, ನಿಗೂಢಮಪಿ - ಅತ್ಯಂತರಹಸ್ಯವಾಗಿದ್ದಂಥಾದರೂ, ಸಂಸಾರ ಭಯತಾರಿಣೀಂ - ಸಂಸಾರ ಭೀತಿಯನು ಬಿಡಿಸುವಂಥಾ, ಶೈವಂ - ಶಿವ ಸಂಬಂಧವಾಗಿರ್ದಂಥಾ, ಪಂಚಾಕ್ಷರೀಂ - ಪಂಚಾಕ್ಷರಿ ಮಂತ್ರವನು, ಛಂದಂ - ಅದರ ಛಂದಸ್ಸನ್ನೂ, ರೂಪಂ - ಸ್ವರೂಪವನು, ಋಷಿಂ - ಮಂತ್ರವನು ಕಂಡ ಋಷಿಯನು, ದೇವತಾಂ - ಮಂತ್ರದಿಂದ ಸೇವ್ಯವಾಗಿದ್ದಂಥಾ ದೇವತೆಯನು, ನ್ಯಾಸ ಪದ್ಧತಿಂ ಷಡಂಗನ್ಯಾಸ ಮೊದಲಾದವರ ಪದ್ಧತಿಯನು ಕೀರ್ತಯೇತ್ - ಉಪದೇಶಿಸಬೇಕು ।।೨೧।।

೫. ಲಿಂಗಧಾರಣಸ್ಥಲ

ಈ ಪ್ರಕಾರದಿಂದ ನಾಲ್ಕನೆಯ ಗುರುಕರುಣ ಸ್ಥಲವನು ನಿರೂಪಿಸಿದ ನಂತರದಲ್ಲಿ ಐದನೆಯಲ್ಲಿ ಲಿಂಗಧಾರಣ ಸ್ಥಲವನ್ನು ಹೇಳುತಿರ್ದಪಂ

ಸ್ಫಾಟಿಕಂ ಶೈಲಜಂ ವಾ ಪಿ ಚಂದ್ರಕಾಂತಮಯಂ ತು ವಾ
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್

ಸ್ಫಾಟಿಕಂ - ಸ್ಫಟಿಕಮಯವಾಗಿರ್ದಂಥದ್ದನಾದರೂ, ಶೈಲಜಂವಾಪಿ - ಶಿಲಾಮಯವಾಗಿದ್ದಂಥದನಾದರೂ, ಚಂದ್ರಕಾಂತಮಯಂತು ವಾ - ಚಂದ್ರಕಾಂತಮಯ ವಾಗಿರ್ದಂಥಾದವನಾದರೂ, ಬಾಣಂ ವಾ - ನರ್ಮದಾ ನದಿಯಲ್ಲಿ ಹುಟ್ಟಿದನಾದರೂ, ಸೂರ್ಯಕಾಂತಂ ವಾ - ಸೂರ್ಯಕಾಂತಮಯವಾದಂಥಾ, ಇವರೊಳಗೆ ಏಕಲಿಂಗಂ - ಒಂದು ಲಿಂಗವನು, ಸಮಾಹರೇತ್ - ಸ್ವೀಕರಿಸಿಕೊಂಡು ಹೃಹರಣೆ ।।೨೨।।

ಸರ್ವಲಕ್ಷಣಸಂಪನ್ನೇ ತಸ್ಮಿನ್ಲಿಂಗೇ ವಿಶೋಧಿತೇ
ಪೀಠಸ್ಥಿತೇಽಭಿಷೇಕಂ ಚ ಗಂಧಪುಷ್ಪಾದಿಪೂಜಿತೇ

ಮಂತ್ರಪೂತೇ ಕಲಾಂ ಶೈವೀಂ ಯೋಜಯೇದ್ವಿಧಿನಾ ಗುರುಃ

ಸರ್ವಲಕ್ಷಣ ಸಂಪನ್ನೇ - ಪಂಚ ಸೂತ್ರಾದೀ ಸಮಸ್ತ ಲಕ್ಷಣವುಳ್ಳಂಥಾದನಾಗಿ, ವಿಶೋಧಿತೇ - ಪರೀಕ್ಷಿಸಿ ನೋಡಿ, ಪೀಠಸ್ಥಿತೇ - ಪೀಠದಲ್ಲಿರಿಸಿ, ಅಭಿಷೇಕೇ - ಅಭಿಷೇಕವ ಮಾಡಬೇಕು. ಗಂಧಪುಷ್ಪಾದಿ ಪೂಜಿತೇ - ಗಂಧಪುಷ್ಪಾಕ್ಷತೆ ಧೂಪದೀಪ ನೈವೇದ್ಯ ತಾಂಬೂಲಾದಿಗಳಿಂದ ಪೂಜಿಸಲ್ಪಟ್ಟ, ಮಂತ್ರಪೂಜೆ - ಮಂತ್ರದಿಂದ ಪರಿಶುದ್ಧವಾದ, ತಸ್ಮಿನ್ಲಿಂಗೇ - ಆ ಲಿಂಗದಲ್ಲಿ, ಶೈವೀಂ - ಶಿವ ಸಂಬಂಧವಾದ, ಕಲಾಂ - ಅಂಶವನು, ವಿಧಿನಾ - ಶಾಸ್ತ್ರೋಕ್ತ ಪ್ರಕಾರದಿಂದ, ಯೋಜಯೇತ್ - ಆವಾಹವ ಮಾಡಿ ಸ್ಥಾಪಿಸಬೇಕು. ಯಜರ್ಯೋಗೆ ॥೨೩॥

ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್
ತಲ್ಲಿಂಗಂ ತಸ್ಯಂತು ಪ್ರಾಣೇ ಸ್ಥಾಪಯೇದೇಕಭಾವತಃ

ಗುರುಃ - ದೇಶಿಕನು, ಶಿಷ್ಯಸ್ಯ - ಶಿಷ್ಯನ, ಪ್ರಾಣಂ - ಪ್ರಾಣವನು, ಆದಾಯಾ - ತೆಗೆದುಕೊಂಡು, ತತ್ರಲ್ಲಿಂಗೇ - ಆ ಲಿಂಗದಲ್ಲಿ ನಿಧಾಪಯೇತ್ - ಪ್ರತಿಷ್ಠಿಸಬೇಕು. ವೃ ಧಾರಣ ಘೋಷಣ ವಯೋಃ, ತಲ್ಲಿಂಗಂ - ಆ ಲಿಂಗವನು, ತಸ್ಯಂ - ಆ ಶಿಷ್ಯನ, ಪ್ರಾಣೇ - ಪ್ರಾಣದಲ್ಲಿ, ಏಕಭಾವತಃ - ಅದ್ವೈತ ಭಾವದಿಂದ, ಸ್ಥಾಪಯೇತ್ - ಪ್ರತಿಷ್ಠಿಸಬೇಕು. ಪ್ಗಾಗತಿ ವೃತಾ ॥೨೪॥

ಏವಂಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್
ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ

ಕದಾಚಿತ್ಕುತ್ರ ಚಿದ್ವಾಪಿ ನವಿಯೋಜಯದೇಹತಃ
ಯದಿಪ್ರಮಾದಾತ್ಪತಿತೇ ಲಿಂಗ ದೇಹಾನ್ಮಹೀತಲೇ

ಪ್ರಾಣಾನ್ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷ ಸಂಪದಃ

ಇತಿ ಸಂಬೋಧಿತಃ ಶಿಷ್ಯೋ ಗುರುಣಾಃ ಶಾಸ್ತ್ರವೇದಿನಾ
ಧಾರಯೇಚ್ಛಾಂಕರಂ ಲಿಂಗಂ ಶರೀರೇ ಪ್ರಾಣಯೋಗತಃ

ಏವಂ - ಈ ಪ್ರಕಾರದಲ್ಲಿ, ಗುರುಃ - ಆಚಾರ್ಯನು ಐಕ್ಯಭಾವನೆಯನು ಮಾಡಿ, ಲಿಂಗಂ - ಲಿಂಗವನು, ಶಿಷ್ಯಹಸ್ತೇ - ಶಿಷ್ಯನ ಹಸ್ತದಲ್ಲಿ, ನಿಧಾಪಯೇತ್ - ಇರಿಸಬೇಕು, ತವ - ನಿನಗೆ, ಇದಂ ಪ್ರಾಣಲಿಂಗಂ - ಈ ಪ್ರಾಣಲಿಂಗವು, ಪ್ರಾಣವತ್ - ಈ ಪ್ರಾಣ ಲಿಂಗವನು ಪ್ರಾಣನ ಮರ್ಯಾದೆಯಲ್ಲಿ, ಧಾರಣೀಯ್ಯಂ - ಧರಿಸಲು ಯೋಗ್ಯವು, ಕದಾಚಿತ್ - ಒಂದು ಬಾರಿಯು, ಕುತ್ರಚಿತ್ - ಆವೆಡೆಯಲ್ಲಿಯು, ದೇಹದರ್ಶತಃ - ದೇಹದ ದೆಸೆಯಿಂದ, ನವಿಯೋಜಯೇತ್ - ಪೃಥಕ್ಕರಿಸಲಾಗದು. ಯದಿ - ಎತ್ತಲಾನು, ಪ್ರಮಾದಾತ್ - ಪ್ರಮಾದದಿಂದ, ಲಿಂಗೇ - ಲಿಂಗವು ದೇಹಾತ್ - ದೇಹದ ದೆಸೆಯಿಂದ, ಮಹೀತಲೆ - ಭೂಮಿಯಲ್ಲಿ, ಪತತಿನಾಶನಂ - ಬಿದ್ದುಬೌಗೆಯಾಗಿ ಕಾಣಿಸಿಕೊಳ್ಳದೆ ಹೋದುದುಂಟಾದರೆ, ಮೋಕ್ಷಸಂಪದಃ - ಮೋಕ್ಷ ಸಂಪತ್ತನ್ನು, ಪ್ರಾಪ್ತಯೇ - ಎಯ್ದಲೋಸ್ಕರವಾಗಿ, ಸಹಸಾ - ಶೀಘ್ರದಿಂದ, ಪ್ರಾಣಾನ್ - ಪ್ರಾಣಂಗಳನು, ವಿಮುಂಚ

- ಬಿಡು, ಮುಚಲ್ ಮೋಕ್ಷಣೆ, ಇತಿ - ಈ ಪ್ರಕಾರದಲ್ಲಿ, ಶಾಸ್ತ್ರವೇದಿನಾ - ಶಾಸ್ತ್ರವನು ಬಲ್ಲಂಥಾ, ಗುರುಣೋ - ಗುರುವಿನಿಂದ, ಸಂಬೋಧಿತಃ - ಅರುಹಿಸಲ್ಪಟ್ಟಂಥಾ, ಶಿಷ್ಯಃ - ಶಿಷ್ಯನು, ಶರೀರೇ - ಶರೀರದಲ್ಲಿ, ಪ್ರಾಣವಿಯೋಗತಃ - ಪ್ರಾಣವಿಯೋಗ ಪರ್ಯ್ಯಂತರವಾಗಿ, ಶಾಂಕರಂ - ಶಿವಸಂಬಂಧವಾಗಿರ್ದಂಥಾ ಲಿಂಗಂ - ಲಿಂಗವನು, ಧಾರಯೇತ್ ಧರಿಸಬೇಕು ॥೨೮॥

ಲಿಂಗಧಾರಣಸ್ಥಲವನು ಅನಾದಿಸಿದ್ಧವಾಗಿರ್ದಂಥಾ ಸಾಂಪ್ರದಾಯವನು ಹೇಳುತಿರ್ದಪಂ

ಲಿಂಗಸ್ಯಧಾರಣಂಪುಣ್ಯಂ ಸರ್ವಪಾಪ ಪ್ರಣಾಶನಂ
ಆದೃತಂ ಮುನಿಭಿಃ ಸರ್ವೈರಾಗಮಾರ್ಥ ವಿಶಾರದೈಃ

ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥ ಸಾಧಕಂ
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ

ಆಗಮಾರ್ಥ ವಿಶಾರದೈಃ - ಸರ್ವಾಗಮಾರ್ಥಂಗಳಲ್ಲಿ ನಿಪುಣರಾಗಿದ್ದಂಥಾ, ಮುನಿಭಿಃ - ನಾರದಾದಿ ಮುನಿಗಳಿಂದ, ಆಧೃತಂ - ಧರಿಸಲ್ಪಟ್ಟಂಥಾ, ಲಿಂಗಸ್ಯ ಧಾರಣಂ - ಲಿಂಗಧಾರಣವು, ಪುಣ್ಯಂ - ಅಭ್ಯುದಯವನು ಮಾಡುವುದು ಸರ್ವಪಾಪ ಪ್ರಣಾಶನಂ - ಸಮಸ್ತ ಪಾಪಗಳನ್ನು ಕೆಡಿಸುವುದು. ಲಿಂಗ ಧಾರಣ ಭೇದವನು ಹೇಳುತ್ತಲಿದ್ದರೂ, ಮೋಕ್ಷಕಾಂಕ್ಷಿಭಿಃ - ಮೋಕ್ಷವನು ಬಯಸುವಂಥಾ ಮುನಿಭಿಃ - ಮುನೀಶ್ವರರುಗಳಿಂದ, ಸರ್ವಾರ್ಥಸಾಧಕಂ - ಧರ್ಮಾರ್ಥಕಾಮಮೋಕ್ಷಂಗಳನು ಸಾಧಿಸಿಕೊಡುವಂಥಾ, ಲಿಂಗಧಾರಣಂ - ಲಿಂಗಧಾರಣವು, ಬಾಹ್ಯಂ - ಬಾಹ್ಯವೆಂದು ಅಭ್ಯಂತರಂ - ಅಭ್ಯಂತರವೆಂದು, ದ್ವಿಧಾ - ಎರಡು ಪ್ರಕಾರವಾಗಿ, ಆಖ್ಯಾತಂ - ಹೇಳಲ್ಪಟ್ಟಿತು ॥೩೦॥

ಅವರೊಳಗೆ ಪ್ರಧಾನವಾಗಿರ್ದಂಥಾ ಅಭ್ಯಂತರ ಲಿಂಗಧಾರಣಕೆ ಕ್ರಮದಿಂ ಲಕ್ಷಣವನು ಹೇಳುತಿರ್ದಪಂ

ಚಿದ್ರೂಪಂ ಪರಮಂಲಿಂಗಂ ಶಾಂಕರಂ ಸರ್ವಕಾರಣಂ
ಯತ್ತಸ್ಯ ಧಾರಣಂ ಚಿತ್ತೇ ತದಾಂತರಮುದಾಹೃತಂ

ಚಿದ್ರೂಪಂ - ಜ್ಞಾನಾತ್ಮಕವಾಗಿರ್ದ ಸರ್ವಕಾರಣಂ - ಸಮಸ್ತ ಜಗತ್ತಿಗೆ ಕಾರಣವಾದ, ಶಾಂಕರಂ - ಶಿವಸಂಬಂಧವಾದ, ಪರಮ - ಉತ್ತಮವಾದ, ಯಲ್ಲಿಂಗಂ - ಆವುದಾನೊಂದು ಸ್ವರೂಪವುಂಟು, ತಸ್ಯ - ಅದಕ್ಕೆ, ಚಿತ್ತೇ - ಚಿತ್ತದಲ್ಲಿಯ, ಧಾರಣಂ - ಆವುದಾನೊಂದು ಧಾರಣವುಂಟು, ತತ್ - ಅದು, ಅಭ್ಯಂತರಃ - ಅಭ್ಯಂತರ ಲಿಂಗಧಾರಣವೆಂದು, ಉದಾಹೃತಂ - ಹೇಳಲ್ಪಟ್ಟಿತು ॥೩೧॥

ಚಿದ್ರೂಪಂ ಹಿ ಪರಂತತ್ವಂ ಶಿವಾಖ್ಯಂ ವಿಶ್ವಕಾರಣಂ
ನಿರಸ್ತವಿಶ್ವಕಾಲುಷ್ಯಂ ನಿಷ್ಕಲಂ ನಿರ್ವಿಕಲ್ಪಕಂ

ಸತ್ತಾನಂದಪರಿಸ್ಫೂರ್ತಿ ಸಮುಲ್ಲಾಸ ಕಲಾಮಯಂ
ಅಪ್ರಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಂ

ಪರಂಬ್ರಹ್ಮಮಯಂ ಲಿಂಗಂ ಪ್ರಪಂಚಾತೀತಮವ್ಯಯಂ

ಅಂತರಲಿಂಗಧಾರಣಕ್ಕೆ ಪ್ರಧಾನನಿಮಿತ್ಯವನು ಹೇಳುತಿರ್ದಪಂ

ಚಿದ್ರೂಪಂ - ಜ್ಞಾನಾತ್ಮಕವಾಗಿರ್ದ ಪರಂ - ಉತ್ತಮನಾಗಿರ್ದ, ತತ್ವಂ - ಸತ್ಯವಾಗಿರ್ದ, ಶಿವಾಖ್ಯಂ - ಶಿವನೆಂಬ ಹೆಸರನ್ನುಳ್ಳಂಥಾ, ವಿಶ್ವಕಾರಣಂ - ಜಗತ್ತಿಗೆ ಕಾರಣವಾಗಿರ್ದ, ನಿರಸ್ತ ವಿಶ್ವ ಕಾಲುಷ್ಯಂ - ನಿರಾಕರಿಸಲ್ಪಟ್ಟ ಪಾಪ ಸಂಬಂಧವನ್ನುಳ್ಳಂಥಾ, ನಿಃಕಳಂ - ನಿರವಯವಾಗಿರ್ದಂಥಾ, ನಿರ್ವಿಕಲ್ಪಂ - ಭೇದರಹಿತವಾಗಿರ್ದಂಥಾ, ಸತ್ತಾನಂದ ಪರಿಸ್ಫೂರ್ತಿ ಸಮುಲ್ಲಾಸಿ - ಸತ್ಯರೂಪವಾಗಿ ಆನಂದಸ್ವರೂಪವಾಗಿ ಸ್ವಯಂ ಪ್ರಕಾಶಜ್ಞಾನ ಸ್ವರೂಪವಾಗಿರ್ದಂಥಾ, ಕಲಾಮಯಂ - ಪ್ರಣವ ಸ್ವರೂಪವಾಗಿರ್ದಂಥಾ, ಅಪ್ರಮೇಯಂ - ಪ್ರಮಾಣಗಳಿಂದ ಗೋಚರಿಸಲು ಶಕ್ಯವಲ್ಲದೆ ಇರ್ದಂಥಾ, ಅನಿರ್ದೇಶ್ಯಂ - ಇಂದು ಎಂದು ಹೇಳಲಶ್ಯಕವಾಗಿರ್ದಂಥಾ, ಮುಮುಕ್ಷುಭಿಃ - ಮೋಕ್ಷಾರ್ಥಿಗಳಿಂದ, ಉಪಾಸಿತಂ - ಸೇವಿಸಲ್ಪಡುವಂಥಾ, ಪ್ರಪಂಚಾತೀತಂ - ಜಗತ್ಸಂಬಂಧವಿಲ್ಲದಂಥಾ, ಲಿಂಗಂ - ಅಂತರ ಲಿಂಗವು, ಪರಬ್ರಹ್ಮಮಯಂ - ಪರಬ್ರಹ್ಮಸ್ವರೂಪವಾಗಿರ್ದಂಥಾದ್ದು ॥೩೪॥

ತದೇವ ಸರ್ವಭೂತಾನಾಮಂತಸ್ತ್ರಿಸ್ಥಾನ ಗೋಚರಂ

ಮೂಲಾಧಾರೇಚ ಹೃದಯೇ ಭ್ರೂಮಧ್ಯೇ ಸರ್ವದೇಹಿನಾಂ
ಜ್ಯೋತಿರ್ಲಿಂಗಂ ಸದಾ ಭಾತಿ ಯದ್ಬ್ರಹ್ಮೇತ್ಯಾಹುರಾಗಮಾಃ

ಅಂತರಲಿಂಗದ ಉಪಾಸನಾರ್ಥವಾಗಿ ಸ್ಥಾನತ್ರಯವನು ಹೇಳುತಿರ್ದಪಂ ತದೇವ - ಆ ಅಂತರಲಿಂಗವು, ಸರ್ವಭೂತಾನಾಂ - ಸಮಸ್ತಪ್ರಾಣಿಗಳ ಅಂತಃ - ಶರೀರಮಧ್ಯದಲ್ಲಿ, ತ್ರಿಸ್ಥಾನ ಗೋಚರಂ - ಮುಂದೆ ಹೇಳುವ ಸ್ಥಾನ ತ್ರಯದಲ್ಲಿ ಒಪ್ಪುತಿಹುದು, ಮೂಲಾಧಾರೆ - ಮೂಲಾಧಾರದಲ್ಲಿ, ಹೃದಯೇ - ಅನಾಹತಚಕ್ರದ ದ್ವಾದಶದಳಪದ್ಮದಲ್ಲಿ, ಭ್ರೂಮಧ್ಯೇ - ಹುಬ್ಬುಗಳ ಮಧ್ಯದಲ್ಲಿ, ಜ್ಯೋತಿರ್ಲಿಂಗ - ಜ್ಯೋತಿರ್ಮಯವಾದ ಲಿಂಗವು ಸದಾ - ಆವಾಗಲೂ ಭಾತಿ - ಒಪ್ಪುತಂ ಇಹುದು. ಯತ್ - ಆವುದಾನೊಂದು ಜೋತಿಷ್ಯನೂ, ಬ್ರಹ್ಮೇತಿ - ಪರಬ್ರಹ್ಮವೆಂದು ಆಗಮಾಃ - ವೇದಂಗಳು, ಆಹುಃ - ಹೇಳುತ್ತಲಿಹವು ॥೩೬॥

ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಂ
ಉಪಾಸನಾರ್ಥಮಂತಸ್ಥಂ ಪರಿಚ್ಛಿನ್ನಂ ಸ್ವಮಾಯಯಾ

ಪರಿಪೂರ್ಣನಾದ ಬ್ರಹ್ಮಕ್ಕೆ ಸ್ಥಾನತ್ರಯಾವಸ್ಥಾನಕ್ಕು ಅಭಾವವ್ಯಕ್ತಿಗೂ ನಿಮಿತ್ತವನು ಹೇಳುತಿರ್ದಪಂ

ಅಪರಿಚ್ಛಿನ್ನಂ - ಪರಿಪೂರ್ಣವಾದ, ಅವ್ಯಕ್ತಂ - ಸ್ಪಷ್ಟವಲ್ಲದೆ ಇದ್ದ, ಸನಾತನಂ - ಕೇಡಿಲ್ಲದೆ ಇದ್ದ, ಬ್ರಹ್ಮ- ಬ್ರಹ್ಮಸ್ವರೂಪವಾದ, ಲಿಂಗಂ - ಲಿಂಗವು, ಉಪಾಸನಾರ್ಥಂ

- ಭಕ್ತರಿಗೆ ಸೇವಿಸಲೋಸ್ಕರವಾಗಿ ಸ್ವಮಾಯಯಾ - ತನ್ನ ಮಾಯೆಯಿಂದ ಅಂತಸ್ಥಂ - ಶರೀರ ಮಧ್ಯಗತವಾಗಿ, ಪರಿಚ್ಛಿನ್ನವಾಗಿ ಪ್ರಕಾಶಿಸುತ್ತಿಹುದು ।।೩೭।।

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ
ಪುನಃ ಪುನಃ ಸಮುತ್ಪನ್ನಂ ತಲ್ಲಿಂಗಂ ಬ್ರಹ್ಮಶಾಶ್ವತಂ

ತಸ್ಮಾಲ್ಲಿಂಗಮಿತಿಖ್ಯಾತಂ ಸತ್ತಾನಂದ ಚಿದಾತ್ಮಕಂ
ಬೃಹತ್ವಾದಬೃಹಣತ್ವಾಚ್ಚ ಬ್ರಹ್ಮಶಬ್ದಾಭಿಧೇಯಕಂ

ಲಿಂಗಶಬ್ದವು ಬ್ರಹ್ಮಶಬ್ದವು ವ್ಯವಹಾರಗೋಚರವಲ್ಲದ ಬ್ರಹ್ಮದಲ್ಲಿ ವರ್ತಿಸುವುದಕ್ಕೆ ನಿಮಿತ್ತವನು ಹೇಳುತಿರ್ದಪಂ

ಚರಾಚರಂ - ಸ್ಥಾವರ ಜಂಗಮಾತ್ಮಕವಾಗಿರ್ದ, ಏತತ್‌ಜಗತ್ - ಈ ಜಗತ್ತು, ಯತ್ರೈವ - ಆವುದಾನೊಂದರಲ್ಲಿ, ಲಯಂ - ನಾಶವನು, ಗಚ್ಛತಿ - ಐದುತ್ತಿಹದು, ಪುನಃ ಪುನಃ - ಮರಳಿ ಮರಳಿ, ಸಮುತ್ಪನ್ನಂ - ಹುಟ್ಟುವುದು. ತಸ್ಮಾತ್ - ಅದು ಕಾರಣ, ಸತ್ತಾನಂದ ಚಿದಾತ್ಮಕಂ - ಸಚ್ಚಿದಾನಂದ ಸ್ವರೂಪವಾದ, ಶಾಶ್ವತಂ - ಕೇಡಿಲ್ಲದ, ಬ್ರಹ್ಮಾ - ಬ್ರಹ್ಮವು, ಲಿಂಗಮಿತಿ ಖ್ಯಾತಂ - ಲಿಂಗವೆನಿಸುವುದು, ಬ್ರಹ್ಮ - ಪರಬ್ರಹ್ಮಸ್ವರೂಪವಾದ, ತಲ್ಲಿಂಗಂ - ಆ ಲಿಂಗವು, ಬೃಹತ್ವಾತ್ - ಸರ್ವೋತ್ಕೃಷ್ಟವಾದ ಕಾರಣವಾಗಿಯೂ ಬೃಹಣ್ವತ್ವಾಚ - ಜೀವಸ್ವರೂಪದಿಂದ ಶರೀರಾದಿ ಪರಿಣಾಮಕ್ಕೆ ಕಾರಣವಾದ ಕಾರಣವಾಗಿಯೂ ಬ್ರಹ್ಮಶಬ್ದಭಿಧೇಯಕಂ - ವೇದಂಗಳಲ್ಲಿ ಬ್ರಹ್ಮಶಬ್ದವೆಂದು ಹೇಳಲ್ಪಟ್ಟಿತು ।।೩೯।।

ಆಧಾರೇ ಹೃದಯೇವಾಽಪಿ ಭ್ರೂಮಧ್ಯೇ ವಾ ನಿರಂತರಂ
ಜ್ಯೋತಿರ್ಲಿಂಗನುಸಂಧಾನಮಾಂತರಂ ಲಿಂಗಧಾರಣಂ

ಆಧಾರೇ - ಮೂಲಾಧಾರದಲ್ಲಿ ಇತ್ತಾದರೂ, ಹೃದಯೇವಾಪಿ - ಹೃತ್ಪದ್ಮದಲ್ಲಾಯಿತ್ತಾದರೂ, ಭ್ರೂಮಧ್ಯೇವ - ಹುಬ್ಬುಗಳ ಮಧ್ಯದಲ್ಲಾಯಿತ್ತಾದರೂ, ನಿರಂತರಂ - ಎಡಬಿಡವಿಲ್ಲದೆ, ಜ್ಯೋತಿರ್ಲಿಂಗಾನು ಸಂಧಾನಂ - ಜ್ಯೋತಿರ್ಮಯವಾದ ಲಿಂಗಧ್ಯಾನವು, ಅಂತರಂ - ಅಂತರಂಗವಾದ, ಲಿಂಗಧಾರಣಂ - ಲಿಂಗಧಾರಣವು ।।೪೦।।

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಂ
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗಿ ವಿಭಾವಯೇತ್

ಸ್ಥಾನಭೇದದಿಂದ ಧ್ಯಾನದಲ್ಲಿ ಗುಣಭೇದವನು ಹೇಳುತಿರ್ದಪಂ

ಯೋಗಿ - ಯೋಗೀಶ್ವರನು ಆಧಾರೇ ಮೂಲಾಧಾರದಲ್ಲಿ, ಲಿಂಗಂ - ಲಿಂಗವನು ಕನಕ ಪ್ರಖ್ಯಂ - ಹೊಂಬಣ್ಣವಾಗಿ, ವಿಭಾವಯೇತ್ - ಧ್ಯಾನ ಮಾಡಬೇಕು. ಹೃದಯ - ಹೃತ್ಪದ್ಮದಲ್ಲಿ, ವಿದ್ರುಮಪ್ರಭಂ - ಹವಳದ ಕಾಂತಿಯನ್ನುಳ್ಳಲಿಂಗವನು, ವಿಭಾವಯೇತ್

- ಧ್ಯಾನಮಾಡಬೇಕು. ಭ್ರೂಮಧ್ಯೇ - ತ್ರಿಪುಟಿ ಸ್ಥಾನದಲ್ಲಿ, ಸ್ಫಟಿಕಚ್ಛಾಯ - ಸ್ಫಟಿಕ ಪ್ರಕಾಶವುಳ್ಳ ಲಿಂಗವನು, ವಿಭಾವಯೇತ್ - ಧ್ಯಾನಿಸಬೇಕು ॥೪೧॥

ನಿರುಪಾಧಿಕಮಾಖ್ಯಾತಂ ಲಿಂಗಸ್ಯಾಂತರಧಾರಣಂ
ವಿಶಿಷ್ಟಂ ಕೋಟಿಗುಣಿತಂ ಬಾಹ್ಯಲಿಂಗಸ್ಯ ಧಾರಣಾತ್

ಬಾಹ್ಯಲಿಂಗಧಾರಣದಿಂದಲೂ ಅಂತರಲಿಂಗಧಾರಣಕ್ಕೆ ಅತಿಶಯುವನು ಹೇಳುತಿರ್ದಪಂ

ಲಿಂಗಸ್ಯ - ಲಿಂಗಕ್ಕೆ, ಅಂತರಧಾರಣಂ - ಅಭ್ಯಂತರ ಲಿಂಗಧಾರಣವು, ನಿರುಪಾಧಿಕಂ - ನಿರ್ಮಲವಾಗಿರ್ದಂಥಾದೆಂದು ಆಖ್ಯಾತಂ - ಹೇಳಲ್ಪಟ್ಟಿತು. ಬಾಹ್ಯಲಿಂಗಸ್ಯ - ಬಾಹ್ಯಲಿಂಗದ, ಧಾರಣಾತ್ - ಧಾರಣದ ದೆಸೆಯಿಂದಲೂ ಕೋಟಿಗುಣಿತಂ - ಲೆಕ್ಕವಿಲ್ಲದ, ವಿಶಿಷ್ಟಂ - ವಿಶೇಷ ಗುಣವು ॥೪೨॥

ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಂ
ನ ತೇಷಾಂ ಪುನರಾವೃತ್ತಿರ್ಘೋರ ಸಂಸಾರಮಂಡಲೇ ॥

ಯೇ - ಆರುಕೆಲಂಬರು, ಹೃದಯೇ - ಹೃದಯದಲ್ಲಿ, ಚಿದ್ರೂಪಂ - ಜ್ಞಾನಾತ್ಮಕವಾಗಿರ್ದಂಥಾ ಐಶ್ವರಂ - ಶಿವನ ಸಂಬಂಧವಾಗಿರ್ದಂಥಾ, ಲಿಂಗಂ - ಲಿಂಗವನು, ಧಾರಯಂತಿ - ಧರಿಸುತ್ತಂ ಇಹರು. ಧೃಧಾರಣೇ, ತೇಷಾಂ - ಅವರುಗಳಿಗೆ, ಘೋರ ಸಂಸಾರ ಮಂಡಲೇ - ಭಯಂಕರವಾದ ಸಂಸಾರ ಚಕ್ರದಲ್ಲಿ, ಪುನರಾವೃತ್ತಿಃ - ಮರಳಿ ಹುಟ್ಟುವತನವು, ನ - ಇಲ್ಲ ॥೪೩॥

ಅಂತರ್ಲಿಂಗಾನು ಸಂಧಾನಮಾತ್ಮವಿದ್ಯಾಪರಿಶ್ರಮಃ
ಗುರೂಪಾಸನ ಶಕ್ತಿಶ್ಚ ಕಾರಣಂ ಮೋಕ್ಷಸಂಪದಃ

ಅಂತರ್ಲಿಂಗಾನು ಸಂಧಾನಂ - ಅಂತರ್ಲಿಂಗಧಾರಣವು, ಆತ್ಮವಿದ್ಯಾ ಪರಿಶ್ರಮಃ - ವೇದಾಂತಶಾಸ್ತ್ರ ಶ್ರವಣವು, ಗುರೂಪಾಸನಶಕ್ತಿಶ್ಚ - ಗುರುಶುಶ್ರೂಷೆ ಗುರುಭಕ್ತಿ ಇವು, ಮೋಕ್ಷಸಂಪದಃ - ಮೋಕ್ಷಪ್ರಾಪ್ತಿಗೆ, ಕಾರಣಂ - ಕಾರಣವು ॥೪೪॥

ವೈರಾಗ್ಯಜ್ಞಾನ ಯುಕ್ತಾನಂ ಯೋಗಿನಾಂ ಸ್ಥಿರಚೇತಸಾಂ
ಅಂತರ್ಲಿಂಗಾನುಸಂಧಾನೇ ರುಚಿರ್ಬಾಹ್ಯೇನ ಜಾಯತೇ

ಅಂತರ್ಲಿಂಗಧಾರಣಕ್ಕೆ ಅಧಿಕಾರಗಳನ್ನು ಹೇಳುತಿರ್ದಪಂ

ವೈರಾಗ್ಯಜ್ಞಾನಯುಕ್ತಾನಾಂ - ಇಹಪರ ವೈರಾಗ್ಯ ಬ್ರಹ್ಮಜ್ಞಾನಂಗಳೊಡನೆ ಯುಕ್ತವಾಗಿರ್ದಂಥಾ, ಸ್ಥಿರಚೇತಸಾಂ - ಸ್ಥಿರಚಿತ್ತನಾಗಿರ್ದಂಥಾ, ಯೋಗಿನಾಂ - ಯೋಗೀಶ್ವರುರುಗಳಿಗೆ, ಅಂತರ್ಲಿಂಗಾನು ಸಂಧಾನೆ - ಅಂತರಲಿಂಗಧಾರಣದಲ್ಲಿ ರುಚಿ - ಪ್ರೀತಿಯು, ಜಾಯತೇ - ಹುಟ್ಟುತ್ತಿಹುದು, ನಬಾಹ್ಯೇ - ಬಾಹ್ಯಲಿಂಗ ಧಾರಣದಲ್ಲಿ ಇಲ್ಲ. ಜನಿಪ್ರಾದುರ್ಭವೆ ॥೪೫॥

ಬ್ರಹ್ಮವಿಷ್ಣುಶ್ಚರುದ್ರಶ್ಚ ವಾಸವಾದ್ಯಶ್ಚ ಲೋಕಪಾಃ
ಮುನಯಃ ಸಿದ್ಧಗಂಧರ್ವಾ ದಾನವಾ ಮಾನವಾಸ್ತಥಾ

ಸರ್ವೇ ಚ ಜ್ಞಾನಯೋಗೇನ ಸರ್ವಕಾರಣ ಕಾರಣಂ
ಪಶ್ಯಂತಿ ಹೃದಯೇ ಲಿಂಗಂ ಪರಮಾನಂದ ಲಕ್ಷಣಂ

ತಸ್ಮಾತ್ಸರ್ವ ಪ್ರಯತ್ನೇನ ಶಾಂಕರಂ ಲಿಂಗಮುತ್ತಮಂ
ಅಂತರ್ವಿಭಾವ ಯೇದ್ವಿದ್ವಾನಶೇಷ ಕ್ಲೇಶಮುಕ್ತಯೇ

ಅನಾದಿಶಿಷ್ಯಸಂಪ್ರದಾಯವನು ತೋರಿಸುತಿರ್ದಪಂ

ಬ್ರಹ್ಮ - ಬ್ರಹ್ಮನು, ವಿಷ್ಣುಶ್ಚ - ನಾರಾಯಣನು, ರುದ್ರಶ್ಚ - ಶಿವರುದ್ರನೂ ವಾಸವಾದ್ಯ - ಇಂದ್ರ ಮೊದಲಾದ, ಲೋಕಪಾಃ - ದಿಕ್ಪಾಲಕರೂ, ಮುನಯಃ - ನಾರದಾದಿ ಮುನಿಗಳು, ಸಿದ್ಧಾಃ - ಸಿದ್ಧರು, ಗಂಧರ್ವಾಃ - ಗಂಧರ್ವರೂ, ದಾನವಾಃ - ಅಸುರರೂ, ಮಾನವಾಃ - ಮನುಷ್ಯರೂ, ಸರ್ವೆ - ಸಮಸ್ತ ವೈದಿಕರು, ಜ್ಞಾನಯೋಗೇನ - ಜ್ಞಾನಮಾರ್ಗದಿಂದ, ಸರ್ವಕಾರಣಂ - ಸಮಸ್ತ ಜಗತ್ತಿಗೆ ಕಾರಣವಾದ ಬ್ರಹ್ಮಾದಿಗಳಿಗೆ ಕಾರಣವಾಗಿರ್ದಂಥಾ, ಪರಮಾನಂದ ಲಕ್ಷಣಂ - ಪರಮಾನಂದ ಸ್ವರೂಪರಾದ, ಲಿಂಗಂ - ಅಂತರಲಿಂಗವನು, ಪಶ್ಯಂತಿ - ಸಾಕ್ಷಾತ್ಕರಿಸುತ್ತಲಿಹರು. ದೃಶೀತ್ ಪ್ರೇಕ್ಷಣೆ. ತಸ್ಮಾತ್ - ಅದು ಕಾರಣ, ವಿದ್ವಾನ್ - ಬಲ್ಲಂಥವನು ಸರ್ವಪ್ರಯತ್ನೇನ - ಅವಶ್ಯವಾಗಿಯೂ, ಉತ್ತಮಂ - ಉತ್ತಮವಾಗಿರ್ದಂಥಾ ಶಾಂಕರಂ - ಶಿವಸಂಬಂಧವಾಗಿರ್ದಂಥಾ, ಲಿಂಗಂ - ಲಿಂಗವನು ಅಶೇಷ ಕ್ಲೇಶಮುಕ್ತಯೇ - ಸಮಸ್ತ ಸಂಸಾರ ದುಃಖದ ಬಿಡುಗಡೆಗೋಸ್ಕರವಾಗಿ, ವಿಭಾವಯತ್ - ಧ್ಯಾನವಮಾಡಬೇಕು ॥೪೮॥

ಅಂತರ್ಧಾರಯಿತುಂ ಲಿಂಗಮಶಕ್ತಶ್ಶಕ್ತ ಏವ ವಾ
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್

ಬಾಹ್ಯಲಿಂಗಧಾರಣದಲ್ಲಿ ಅಧಿಕಾರವನು ಹೇಳುತಿರ್ದಪಂ

ಲಿಂಗಂ - ಲಿಂಗವನು, ಅಂತಃ - ಹೃದಯದಲ್ಲಿ, ಧಾರಯಿತುಂ - ಧರಿಸಲು, ಅಶಕ್ತಃ - ಅಧಿಕಾರ ಇಲ್ಲದಾತನು, ಬಾಹ್ಯಲಿಂಗಂ - ಬಾಹ್ಯಲಿಂಗವನು, ಧಾರಯೇತ್ - ಧರಿಸಬೇಕು. ಅಂತರಲಿಂಗಾಧಿಕಾರಿಗೂ ಬಾಹ್ಯದಲ್ಲಿ ಲಿಂಗಧಾರಣವು ಬೇಕು ಎಂದು ಹೇಳುತಿರ್ದಪಂ. ಶಕ್ತಯೇವವಾ -

ಅಂತರ್ಲಿಂಗಧಾರಣದಲ್ಲಿ ಸಮರ್ಥನಾದರೂ, ತದ್ರೂಪಮಿತಿ - ಅದೇ ಇದು ಎಂಬ, ನಿಶ್ಚಯಾತ್ - ನಿಶ್ಚಯದಿಂದ, ಬಾಹ್ಯಲಿಂಗಂ - ಬಾಹ್ಯಲಿಂಗವನು, ಧಾರಯೇತ್ - ಧರಿಸಬೇಕು ॥೪೯॥

ಲಿಂಗಂತು ತ್ರಿವಿಧಂಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಂ
ಇಷ್ಟಲಿಂಗಯಿದಂ ಸ್ಥೂಲಂ ಯದ್ಬಾಹ್ಯೇಧಾರ್ಯ್ಯತೇತ್ತಸೌ

ಪ್ರಾಣಲಿಂಗಂತು ತತ್ಸೂಕ್ಷ್ಮಂ ಯದಂತರ್ಭಾವನಾಮಯಂ

ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿ ಲಿಂಗಂ ತದುಚ್ಯತೆ
ಭಾವನಾತೀತಮವ್ಯಕ್ತಂ ಪರಬ್ರಹ್ಮ ಶಿವಾಭಿದಂ

ಪ್ರಕಾರಾಂತರದಲ್ಲಿ ಲಿಂಗಭೇದವನು ಹೇಳುತ್ತಾ ಆ ಲಿಂಗಕ್ಕೆ ಲಕ್ಷಣವನು ಹೇಳುತಿರ್ದಾನು

ಲಿಂಗಂತು - ಲಿಂಗವಾಯಿತ್ತಾದರೆ, ಸ್ಥೂಲಂ - ಸ್ಥೂಲವೆಂದು, ಸೂಕ್ಷ್ಮಂ - ಸೂಕ್ಷ್ಮವೆಂದು, ಪರಾತ್ಪರಂ - ಪರಮಸೂಕ್ಷ್ಮವೆಂದು, ತ್ರಿವಿಧಂ - ಮೂರು ಪ್ರಕಾರವಾಗಿ, ಪ್ರೋಕ್ತಂ - ಹೇಳಲ್ಪಟ್ಟಿತು. ಯಲ್ಲಿಂಗಂ - ಆವುದಾನೊಂದು ಲಿಂಗವು, ಬಾಹ್ಯತನೌ - ಶರೀರದ ಮೇಲೆ, ಧಾರ್ಯತೇ - ಧರಿಸಲ್ಪಡುವಂಥಾ ತತ್ - ಅದು, ಸ್ಥೂಲಂ - ಸ್ಥೂಲ ಲಿಂಗವೆನಿಸುವುದು. ತತ್ - ಆ ಸ್ಥೂಲಲಿಂಗವು, ಇಷ್ಟಲಿಂಗಂ - ಇಷ್ಟಲಿಂಗವೆನಿಸುವುದು. ಅಂತಃ - ಹೃದಯುದಲ್ಲಿ, ಭಾವನಾಮಯಂ - ಧ್ಯಾನಾತ್ಮಕವಾಗಿರ್ದ, ಲಿಂಗಂ - ಲಿಂಗವು, ಸೂಕ್ಷ್ಮಂ - ಸೂಕ್ಷ್ಮವೆಂದು, ಉಚ್ಯತೆ - ಹೇಳಲ್ಪಡುವುದು, ತತ್ - ಆ ಸೂಕ್ಷ್ಮಲಿಂಗವು ಪ್ರಾಣಲಿಂಗವೆನಿಸುವುದು, ಯತ್ - ಆವುದಾನೊಂದು ಲಿಂಗವು, ಪ್ರೋಕ್ತಂ - ಉಪನಿಷತ್ತುಗಳಲ್ಲಿ ಬ್ರಹ್ಮವೆಂದು ಹೇಳಲ್ಪಟ್ಟಿತು, ತತ್ - ಅದು, ಪರಾತ್ಪರಂ - ಪರಮ ಸೂಕ್ಷ್ಮಲಿಂಗವೆನಿಸುವುದು, ತತ್ - ಅದು, ತೃಪ್ತಿಲಿಂಗಂ - ತೃಪ್ತಿಲಿಂಗವೆಂದು ಉಚ್ಯತೇ - ಹೇಳಲ್ಪಡುವುದು. ಭಾವನಾತೀತಂ - ಧ್ಯಾನಿಸಲು ಶಕ್ಯವಲ್ಲದ, ಅವ್ಯಕ್ತಂ - ವ್ಯಕ್ತವಲ್ಲದ, ಶಿವಾಭಿದಾನಂ - ಶಿವನೆಂಬ ಹೆಸರನ್ನುಳ್ಳಂಥಾ, ಪರಬ್ರಹ್ಮಂ - ಪರಬ್ರಹ್ಮವು ॥೫೨॥

ಇಷ್ಟಲಿಂಗಮಿದಂ ಸಾಕ್ಷಾದನಿಷ್ಟಪರಿಹಾರಕಂ
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ

ಇಷ್ಟಲಿಂಗಂ - ಇಷ್ಟಲಿಂಗವು, ಇದಂ - ಇದು, ಸಾಕ್ಷಾತ್ ಪ್ರತ್ಯಕ್ಷವಾಗಿರ್ದಂಥಾ ಅನಿಷ್ಟಪರಿಹಾರಕಂ - ಅನಿಷ್ಟವನು ಪರಿಹರಿಸುವಂಥಾದು, - ತತ್ - ಆಲಿಂಗವನು ಬುಧಃ - ಬಲ್ಲಂತಾಥನು, ಶರೀರೆ - ಶರೀರದಲ್ಲಿ, ಸರ್ವದಾ - ಆವಾಗಲೂ ಅವಧಾನೇನ - ಸಾವಧಾನವಾಗಿ ಧಾರಯೇತ್ - ಧರಿಸಬೇಕು ॥೫೩॥

ಮೂರ್ಧ್ನಿ ವಾ ಕಂಠ ದೇಶೇ ವಾ ಕಕ್ಷೇ ವಕ್ಷಃ ಸ್ಥಲೇಪಿ ವಾ
ಕುಕ್ಷೌ ಹಸ್ತತಲೇ ವಾ ಪಿ ಧಾರಯೇಲ್ಲಿಂಗಮೈಶ್ವರಂ

ಲಿಂಗವ ಧರಿಸುವಂಥಾ ಸ್ಥಲಂಗಳನು ಹೇಳುತ್ತಾಂ ಇದ್ದಾನು

ಮೂರ್ಧ್ನಿ ವಾ - ಶಿರಸ್ಸಿನಲ್ಲಿ, ಕಂಠದೇಶೆ ವಾ - ಕೊರಳಿನಲ್ಲಿ, ಕಕ್ಷೆ - ಕಂಕುಳಲ್ಲಿಯೂ ವಕ್ಷಸ್ಥಲೇಪಿ ವಾ - ವಕ್ಷಸ್ಥಲದಲ್ಲಿಯೂ, ಕುಕ್ಷೆ - ಕುಕ್ಷಿಯಲ್ಲಾದರೂ, ಹಸ್ತತಲೇಪಿ ವಾ - ಹಸ್ತದಲ್ಲಿಯಾದರೂ, ಐಶ್ವರ್ಯಲಿಂಗಂ - ಶಿವಲಿಂಗವನು ಧಾರಯತ್ - ಧರಿಸಬೇಕು ॥೫೪॥

ನಾಭೇರಧಸ್ತಾಲ್ಲಿಂಗಸ್ಯ ಧಾರಣಂ ಪಾಪಕಾರಣಂ
ಜಟಾಗ್ರೇ ತ್ರಿಕಭಾಗೇ ಚ ಮಲಸ್ಥಾನೇ ನ ಧಾರಯೇತ್

ನಿಷಿದ್ಧಪ್ರದೇಶಂಗಳನು ಹೇಳುತಿರ್ದಪಂ

ನಾಭಿ - ಹೊಕ್ಕುಳದ ದೆಸೆಯಿಂದ, ಅಧಸ್ತಾತ್ - ಕೆಳಗೆ, ಲಿಂಗಸ್ಯಧಾರಣಂ - ಲಿಂಗಧಾರಣವು, ಪಾಪಕಾರಣಂ - ಪಾಪಕ್ಕೆ ಕಾರಣವು, ಜಟಾಗ್ರೇ - ಜಡೆಯ ತುದಿಯಲ್ಲಿ ತ್ರಿಕಭಾಗೇಚ - ಹಿಂಭಾಗದಲ್ಲಿಯೂ, ಮಲಸ್ಥಾನೇ - ಮಲಸ್ಥಾನದಲ್ಲಿಯೂ, ನ ಧಾರಯೇತ್ - ಧರಿಸಲಾಗದು ।।೫೫।।

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಂ
ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ

ಬಾಹ್ಯಪೀಠಾರ್ಚನಾದೇತತ್ಕರಪೀಠಾರ್ಚನಂ ಪರಂ

ಸದಾ - ಆವಾಗಲೂ, ಶುದ್ಧಃ - ಪವಿತ್ರನಾಗಿರ್ದಂಥಾ, ಲಿಂಗಧಾರೀ - ಲಿಂಗಧಾರಿಯು, ಮನೋರಮಂ - ಮನೋಹರವಾಗಿರ್ದಂಥಾ, ನಿಜಲಿಂಗಂ - ತನ್ನ ಇಷ್ಟಲಿಂಗವನು ಕರಪೀಠೆ - ಕರಕಮಲವೆಂಬ ಸಿಂಹಾಸನದಲ್ಲಿ, ಸಮಾಹಿತಃ - ಏಕಾಗ್ರಚಿತ್ತನಾಗಿ, ಗಂಧಪುಷ್ಪಾದ್ಯೈಃ - ಗಂಧ ಪುಷ್ಪ ಮೊದಲಾದ ಉಪಚಾರಗಳಿಂದ ಅರ್ಚಯೇತ್ - ಪೂಜಿಸಬೇಕು. ಕರಪೀಠ ಪೂಜೆಗೆ ಉತ್ಕೃಷ್ಟವನು ಹೇಳುತ್ತಿದ್ದಾನು. ಬಾಹ್ಯಪೀಠಾರ್ಚನಾತ್ - ಬಾಹ್ಯದ ಪೀಠಾರ್ಚನೆಯಿಂದಲೂ ಏತತ್ಕರಪೀಠಾರ್ಚನಂ - ಈ ಕರಪೀಠ ಪೂಜೆಯು, ಪರಂ - ಉತ್ಕರ್ಷವು ।।೫೭।।

ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ

ಸರ್ವೇಷಾಂ - ಸಮಸ್ತರವಾದ, ಮುಮುಕ್ಷೂಣಾಂ - ಮೋಕ್ಷಾಪೇಕ್ಷಿತರಾದ, ವೀರಶೈವಾನಾಂ - ವೀರಶೈವರುಗಳಿಗೆ, ನಿರಂತರಂ - ಆವಾಗಲು, ಕರಪೀಠಾರ್ಚನೆಯೆ ಉತ್ತಮವು ।।೫೮।।

ಬ್ರಹ್ಮ ವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ

ಲಕ್ಷ್ಮ್ಯಾದಿಶಕ್ತಯಸ್ಸರ್ವಾಃ ಶಿವಭಕ್ತಿ ವಿಭಾವಿತಃ
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹನಿರ್ಶಂ

ಸ್ತ್ರೀ ಪುರುಷ ಭೇದದಿಂದ ಲಿಂಗಧಾರಣಕ್ಕೆ ಸ್ಥಾನಭೇದವನು ಹೇಳುತ್ತಾ ಅಲ್ಲಿ ಶಿಷ್ಟಾಚಾರವನು ತೋರಿಸುತಿರ್ದಪಂ

ಬ್ರಹ್ಮವಿಷ್ಣ್ವಾದಯಃ - ಬ್ರಹ್ಮವಿಷ್ಣುಮೊದಲಾಗಿರ್ದಂಥ, ದೇವಾಃ - ದೇವತೆಗಳು ಗೌತಮಾದಯಃ - ಗೌತಮ ಮೊದಲಾಗಿರ್ದಂಥಾ, ಮುನಯಃ - ಮುನೀಶ್ವರರೂ ಉತ್ತಮಾಂಗೆ - ಶಿರಸ್ಸಿನಲ್ಲಿ ವಿಶೇಷತಃ, ಅಧಿಕವೆಂದು, ಸದಾ - ಆವಾಗಲೂ ಲಿಂಗಂ -

ಲಿಂಗವನು, ಧಾರಯಂತಿ - ಧರಿಸುತ್ತಲಿಹರು, ಸರ್ವಂ - ಸಮಸ್ತವಾಗಿರ್ದಂಥಾ, ಲಕ್ಷ್ಮ್ಯಾದಿಶಕ್ತಯಃ - ಲಕ್ಷ್ಮಿ ಮೊದಲಾದ ಶಕ್ತಿದೇವತೆಗಳು, ಶಿವಭಕ್ತಿ ವಿಭಾವಿತಃ - ಶಿವಭಕ್ತಿಯಿಂದ ಸಂಪನ್ನರಾಗಿ, ಅಲಕಾಗ್ರೇಷು - ಅಳಿಕಾಗ್ರದಲ್ಲಿ, ಅಹರ್ನಿಷಂ - ದಿವಾರಾತ್ರೆಯಲ್ಲಿಯೂ, ಧಾರಯಂತಿ - ಧರಿಸುತ್ತಲಿಹರು ॥೬೦॥

ವೇದಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್

ಲಿಂಗಧಾರಣದಲ್ಲಿ ಮೂಲ ಪ್ರಮಾಣಗಳನ್ನು ಹೇಳುತಿರ್ದಪಂ

ವೇದಶಾಸ್ತ್ರ ಪುರಾಣೇಷು - ವೇದಗಳಲ್ಲಿಯೂ ಶಾಸ್ತ್ರಂಗಳಲ್ಲಿಯೂ ಪುರಾಣಂಗಳಲ್ಲಿಯೂ ಕಾಮಿಕಾದ್ಯಾಗಮೇಷು ಚ - ಕಾಮಿಕ ಮೊದಲಾದ ಶಿವಾಗಮಗಳಲ್ಲಿಯೂ ಲಿಂಗಧಾರಣಂ - ಲಿಂಗಧಾರಣವು ವೀರಶೈವಸ್ಯ - ವೀರಶೈವನಿಗೆ, ನಿಶ್ಚಯಾತ್ - ಸಂದೇಹವಿಲ್ಲದೆ, ಆಖ್ಯಾತಂ - ಹೇಳಲ್ಪಟ್ಟಿತು ॥೬೧॥

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃಪತಿರೀಶ್ವರಃ
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ
ತಸ್ಮಾತ್ ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಂ

ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ

ವೇದಂಗಳಲ್ಲಿ ವಿಸ್ತೃತವಾಗಿರ್ದಂಥಾ ಲಿಂಗಧಾರಣವನು ಸಂಕೋಚವಾಗಿ ಒಂದು ಋಕ್ಕಿನ ಅರ್ಥವನು ಪದವ್ಯಾಖ್ಯಾನವ ಮಾಡುತ್ತಂ ವಿಸ್ತರಿಸುತ್ತಂ ಇದ್ದಾನು. ಬ್ರಹ್ಮೇತಿ ಋಗ್ಮಂತ್ರದಲ್ಲಿ ಇರುತ್ತಂ - ಇದ್ದಂತಹ, ಬ್ರಹ್ಮಶಬ್ದದಿಂದ, ಲಿಂಗಂ - ಲಿಂಗವು, ಆಖ್ಯಾತಂ - ಹೇಳಲ್ಪಟ್ಟಿತು. ಬ್ರಹ್ಮಣಃ - ಆ ಲಿಂಗಕ್ಕೆ, ಈಶ್ವರಃ - ಪರಮೇಶ್ವರನು, ಪತಿಃ - ಪತಿಯು ಅತಃ - ಅದು ಕಾರಣ, ತತ್ - ಆ ಲಿಂಗವು, ಪವಿತ್ರಮಿತಿಖ್ಯಾತಂ - ಋಕ್ಕಿನಲ್ಲಿ ಇರ್ದಂಥಾ ಪವಿತ್ರ ಶಬ್ದದಿಂದ ಹೇಳಲ್ಪಟ್ಟಿತು. ತತ್ಸಂಪರ್ಕಾತ್ - ಆ ಲಿಂಗ ಸಂಬಂಧದ ದೆಸೆಯಿಂದ, ತನುಃ - ಶರೀರವು, ಶುಚಿಃ - ಶುದ್ಧವು, ಇತಿ - ಹೀಗೆಂದು, ಪವಿತ್ರಂತೆ ಎಂಬಂಥಾ ಋಕ್ - ಈ ಋಕ್ಕು, ಆಹ - ಸಾರುತ್ತಾ ಇದ್ದೀತು. ತಸ್ಮಾತ್ - ಅದು ಕಾರಣ, ಪವಿತ್ರಂ - ಪರಿಶುದ್ಧವಾಗಿರ್ದಂಥಾ, ಶೈವಂ - ಶಿವಸಂಬಂಧವಾಗಿರ್ದಂಥಾ, ಅನಾಮಯಂ - ನಿರ್ದುಷ್ಟವಾಗಿರ್ದಂಥಾ, ಲಿಂಗಂ - ಲಿಂಗವು, ಧಾರ್ಯಂ - ಧರಿಸಲು ಯೋಗ್ಯವು, ಅಜ್ಞಃ - ಅಜ್ಞಾನಿಯು, ಅತಪ್ತತನುಃ - ಮಂತ್ರದಲ್ಲಿ ಅತಪ್ತತನು ಎಂಬ ಪದದಿಂದ ಹೇಳಲ್ಪಡುವಂಥವನು, ಸಂಸ್ಕಾರ ವರ್ಜಿತಃ - ಪುಣ್ಯ ಸಂಸ್ಕಾರ ಹೀನನಾಗಿರ್ದಂಥಾ, ದೀಕ್ಷಯಾ - ಶಿವದೀಕ್ಷೆಯಿಂದ, ರಹಿತಃ - ಇಲ್ಲದೆ ಇದ್ದಂತಹ, ತನು ಆಮಃ - ಮಂತ್ರದ ಆಮ ಶಬ್ದದಿಂದ ಹೇಳಲ್ಪಡುವನು. ಸಃ - ಅಂಥಾ

ಪುರುಷನು ಉತ್ತಮಂ - ಉತ್ಕೃಷ್ಟವಾಗಿರ್ದಂಥಾ, ಸಾಕ್ಷಾತ್ - ಪ್ರತ್ಯಕ್ಷವಾಗಿರ್ದಂಥಾ, ಲಿಂಗಂ - ಲಿಂಗವನು, ನಾಮಜ್ಞಯಾತ್ - ಐಯ್ದನು. ಆಪ್ನುವ್ಯಾಪ್ತೌ ।।೬೪।।

ಅಘೋರಾಽ ಪಾಪಕಾಶೀತಿ ಯಾ ತೇ ರುದ್ರ ಶಿವಾ ತನುಃ
ಯಜುಷಾ ಗೀಯ್ಯತೇ ಯಸ್ಮಾ ತಸ್ಮಾಚ್ಛೈವೋಽಘವರ್ಜಿತಃ

ಶ್ರೀರುದ್ರಪ್ರಸನ್ನದವೊಂದು ಋಕ್ಕನು ಪ್ರಮಾಣವಾಗಿ ಹೇಳುತ್ತಿದ್ದಾನು.

ಭೋರುದ್ರ - ಎಲೈ ಒಡೆಯನೆ, ತೇ - ನಿನ್ನ, ಶಿವಾ - ಮಂಗಲವಾಗಿರ್ದಂಥಾ - ತನು - ಶರೀರವಾಗಿರ್ದಂಥಾ ಲಿಂಗವು, ಅಘೋರ - ಶಾಂತವಾಗಿರ್ದಂಥಾದು. ಆಪಾಪಕಾಶಿ - ಪಾಪ ರಹಿತವಾಗಿರ್ದಂಥ, ಇತಿ - ಹೀಗೆಂದು, ಯಸ್ಮಾತ್ - ಆವುದಾದನೊಂದು ಕಾರಣ, ಯಜುಷಾ - ಯಜುರ್ವೇದದ ಮಂತ್ರದಿಂದ, ಗೀಯ್ಯತೆ - ಹೇಳಲ್ಪಡುತ್ತಿದ್ದಿತು. ಕೈಗೈರೈ ಶಬ್ದೇ. ತಸ್ಮಾತ್ - ಅದು ಕಾರಣ. ಶೈವಃ - ಶಿವಭಕ್ತನು ಅಘವರ್ಜಿತಃ - ಪಾಪವಿಲ್ಲದೆ ಇದ್ದಂಥಾತನು ।।೬೫।।

ಯೋ ಲಿಂಗಧಾರೀ ನಿಯತಾಂತರಾತ್ಮ
ನಿತ್ಯಂ ಶಿವಾರಾಧನ ಬದ್ಧಚಿತ್ತಃ
ಸ ಧಾರಯೇತ್ಸರ್ವಮಲಾಪ ಹೃತ್ಯೈ
ಭಸ್ಮಾಮಲಂ ಚಾರು ಯಥಾ ಪ್ರಯೋಗಂ

ಯಃ - ಆವನಾನೊಬ್ಬ, ನಿಯತಂತಾರಾತ್ಮ - ಸ್ವಸ್ತ ಚಿತ್ತನಾಗಿರ್ದಂಥ, ನಿತ್ಯಂ - ಆವಾಗಲೂ, ಶಿವಾರಾಧನ ಬದ್ಧ ಚಿತ್ತಃ - ಶಿವಪೂಜೆಯಲ್ಲಿ ದೃಢವಾದ ಚಿತ್ತವನ್ನುಳ್ಳಂಥಾ, ಲಿಂಗಧಾರಿ - ಲಿಂಗವನು, ಧರಿಸುತ್ತಾ ಇದ್ದಂಥವನು. ಸರ್ವಮಲಾಪಹತ್ಯೈ - ಸರ್ವಪಾಪಂಗಳನು ಕೆಡಿಸಲೋಸ್ಕರವಾಗಿ, ಅಮಲಂ - ಸ್ವಚ್ಛವಾಗಿರ್ದಂಥಾ, ಚಾರು - ಮನೋಹರವಾಗಿರ್ದಂಥಾ, ಭಸ್ಮಾ - ವಿಭೂತಿಯನು, ಯಥಾ ಪ್ರಯೋಗಂ - ಶಾಸ್ತ್ರೋಕ್ತ ಪ್ರಕಾರದಿಂದ ಧಾರಯೇತ್ - ಧರಿಸಬೇಕು ।।೬೬।।

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ
ಭಕ್ತಸ್ಥಲೆ ಗುರುಕಾರುಣ್ಯ ಲಿಂಗಧಾರಣ ಪ್ರಸಂಗನಾಮ ಷಷ್ಠಪರಿಚ್ಛೇದಃ

ಸಪ್ತಮಪರಿಚ್ಛೇದ

೭. ವಿಭೂತಿಧಾರಣಸ್ಥಲ

ಭಸ್ಮಧಾರಣಸಂಯುಕ್ತಃ ಪವಿತ್ರೋನಿಯತಾಶಯಃ
ರೇಣುಕಃ ಪ್ರಾಹ ಧರ್ಮಜ್ಞಂ ಶುಶ್ರೂಷಂ ಮುನಿಪುಂಗವಂ.

ರೇಣುಕ ಉವಾಚ - ಈ ಪ್ರಕಾರದಲ್ಲಿ, ನಿತ್ಯನೈಮಿತ್ತಿಕ ವರ್ಣಾಶ್ರಮ ಧರ್ಮಗಳಿಂದ ಶುದ್ಧಚಿತ್ತನಾಗಿರ್ದಂಥಾತನಿಗೆ, ಚಿದ್ವಿಭಾಗಮೆಂಬ ನಿತ್ಯಾನಿತ್ಯ ವಸ್ತುವಿವೇಕದಿಂದ ಸಂಸಾರದಲ್ಲಿ ಜಿಗುಪ್ಸೆ ಹುಟ್ಟುತ್ತಾ ಇರಲಾಗಿ ಗುರುಸೇವೆಯಿಂದ ಶಿವದೀಕ್ಷಾಪೂರ್ವಕವಾಗಿ ಲಿಂಗಧಾರಣವನು ಮಾಡಬೇಕೆಂದು ಎರಡು ಪರಿಚ್ಛೇದದಿಂದ ಹೇಳಿ ಅನಂತರದಲ್ಲಿ ಏಳನೆ ಪರಿಚ್ಛೇದದಲ್ಲಿ ವಿಭೂತಿ ರುದ್ರಾಕ್ಷಿಯ ಧಾರಣವನು ಹೇಳುತ್ತಂ ಇದ್ದಾನು.

ಭಸ್ಮಧಾರಣ ಸಂಯುಕ್ತಾಃ - ವಿಭೂತಿ ಧಾರಣದಿಂದ ಕೂಡಲ್ಪಟ್ಟಂಥಾ, ಪವಿತ್ರಂ - ಶುದ್ಧನಾಗಿರ್ದಂಥಾ, ನಿಯತಾಶಯಃ - ಸ್ಥಿರಚಿತ್ತನಾಗಿರ್ದಂಥಾ, ರೇಣುಕಃ - ರೇಣುಕೇಶ್ವರನು, ಧರ್ಮಜ್ಞಃ - ಧರ್ಮಬಲ್ಲಂಥಾ, ಶುಶ್ರೂಷಂ - ವಿಭೂತಿಯ ಧಾರಣವನು ಕೇಳಲಿಚ್ಛೆಯನ್ನುಳ್ಳಂಥಾ ಮುನಿಪುಂಗವಂ ಅಗಸ್ತ್ಯಮುನೀಶ್ವರನನು ಕುರಿತು, ಪ್ರಾಹ - ಹೇಳುತ್ತಾ ಇದ್ದಾನು ॥೧॥

ಶಿವಾಭಿಧಾನಂ ಸಂಪ್ರೋಕ್ತಂ ಭಾಸನಾದ್ಭಸಿತಂ ಮತಂ

ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಂ
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ

ಮುಖ್ಯೌಪಾಧಿಭೇದದಿಂದ ಎರಡು ಪ್ರಕಾರವಾಗಿರ್ದಂಥಾ ಭಸ್ಮಧಾರಣದೊಳಗೆ ಮೊದಲು ಮುಖ್ಯ ಭಸ್ಮಧಾರಣವನು ಹೇಳುತಿರ್ದಪಂ.

ಶಿವಾಭಿದಾನ ಸಂಪ್ರೋಕ್ತಂ - ಶಿವ ಶಬ್ದದಿಂದ ಹೇಳಲ್ಪಟ್ಟಂಥಾ ಬ್ರಹ್ಮವು, ಭಾಸನಾತ್ - ಸ್ವಪ್ರಕಾಶವಾಗಿ ಒಪ್ಪುವುದರಿಂದ, ಭಸಿತಂ - ವಿಭೂತಿ ಎಂದು, ಮತಂ - ಸಮ್ಮತವು, ಪ್ರಭಾಮಯಂ - ಜ್ಯೋತಿಸ್ವರೂಪವಾಗಿರ್ದಂಥಾ, ಮಹಾದೇವಂ - ಶಿವನನ್ನು, ಮಹಾಭಸ್ಮೇತಿ - ಮಹಾ ವಿಭೂತಿ ಎಂದು, ಸಂಚಿಂತ್ಯ - ಭಾವಿಸುತ್ತಾ, ಏ - ಆರು ಕೆಲಂಬರು, ವರ್ತಂತೇ - ವರ್ತಿಸುತ್ತಂ ಇದ್ದಾರೂ, ಮಹಾಭಾಗಃ - ಉತ್ತಮವಾಗಿರ್ದಂಥಾ, ತೇ - ಅವರು, ಮುಖ್ಯಾ - ಮುಖ್ಯರಾಗಿರ್ದಂಥಾ, ಭಸ್ಮಧಾರಿಣಃ - ಭಸ್ಮಧಾರಿಗಳೆಂದು, ಉಚ್ಯತೆ - ಹೇಳಿಸಿಕೊಂಬುದು ॥೨॥

ಶಿವಾಗ್ನ್ಯಾದಿ ಸಮುತ್ಪನ್ನಂ ಮಂತ್ರನ್ಯಾಸಾದಿ ಯೋಗತಃ
ತದುಪಾಧಿಕಮಿತ್ಯಾಹುಭಸ್ಮತಂತ್ರ ವಿಶಾರದಾಃ

ಜಾಬಾಲಾದಿಕ ಭಸ್ಮಸ್ವರೂಪವನು ಹೇಳುತ್ತಿದ್ದಾನು.

ಶಿವಾಗ್ನ್ಯಾದಿ ಸಮುತ್ಪನ್ನಂ - ಶಾಸ್ತ್ರೋಕ್ತ ಪ್ರಕಾರದಲ್ಲಿ ಶಿವಾಗ್ನಿಯಿಂದ ಹುಟ್ಟಿದಂಥಾ, ಭಸ್ಮಂ - ಭಸ್ಮವನೂ, ಭಸ್ಮತಂತ್ರ ವಿಶಾರದಾಃ - ಭಸ್ಮತಂತ್ರದಲ್ಲಿ ನಿಪುಣರಾಗಿದ್ದಂಥವರನು, ಉಪಾಧಿಕಮಿತಿ - ಔಪಾಧಿಕವೆಂದು, ಆಹುಃ - ಹೇಳುತ್ತಂ ಇಹರು ॥೩॥

ಔಪಾಧಿಕಭಸ್ಮಕ್ಕೆ ನಾಮಂಗಳಂ ಹೇಳುತಿರ್ದಪಂ

ವಿಭೂತಿರ್ಭಸಿತಂ ಭಸ್ಮಾ ಕ್ಷಾರಂ ರಕ್ಷೇತಿಭಸ್ಮನಃ
ಏತಾನಿ ಪಂಚನಾಮಾನಿ ಹೇತು ಭಿಃ ಪಂಚಬಿರ್ಭೃಶಂ

ವಿಭೂತಿಃ - ವಿಭೂತಿ ಎಂದು, ಭಸಿತಂ - ಭಸಿತವೆಂದು, ಭಸ್ಮ - ಭಸ್ಮವೆಂದು ಕ್ಷಾರಂ - ಕ್ಷಾರವೆಂದು, ರಕ್ಷೇತಿ - ರಕ್ಷೆಯೆಂದು, ಪಂಚನಾಮಾನಿ - ಐದು ನಾಮಂಗಳು, ಪಂಚಹೇತುಭಿಃ - ಮುಂದೆ ಹೇಳುವ ಐದು ನಿಮಿತ್ತಗಳಿಂದ, ಭೃಶಂ - ಆದರಪೂರ್ವಕವಾಗಿ, ಆಹುಃ - ವೇದಂಗಳು ಹೇಳುತ್ತಿದ್ದವು ॥೪॥

ವಿಭೂತಿರ್ಭೂತಿ ಹೇತುತ್ವಾದ್ಭಸಿತಂ ತತ್ವ ಭಾಸನಾತ್
ಪಾಪಾನಾಂ ಭರ್ಜನಾದ್ಭಸ್ಮ ಕ್ಷಾರಣಾತ್ ಕ್ಷಾರಮಾಪದಂ

ರಕ್ಷಣಾತ್ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ

ನಾಮನಿಮಿತ್ತಗಳನು ಹೇಳುತಿರ್ದಪಂ

ಭೂತಿಹೇತುತ್ವಾತ್ - ಐಶ್ವರ್ಯ ನಿಮಿತ್ತವಾದ ಕಾರಣ, ವಿಭೂತಿ - ವಿಭೂತಿ ಎನಿಸುವುದು, ತತ್ವಭಾಸನಾತ್ - ಶಿವನ ಸ್ವರೂಪವನು ಪ್ರಕಾಶಿಸಿ ಕೊಡುವುದರಿಂದ, ಭಸಿತಂ - ಭಸಿತವೆನಿಸುವುದು, ಪಾಪಾನಾಂ - ಪಾಪಗಳನು, ಭರ್ಜನಾತ್ - ಕೆಡಿಸುವುದರಿಂದ, ಭಸ್ಮ - ಭಸ್ಮವೆಂದು ಹೇಳಲ್ಪಟ್ಟಿತು. ಆಪದಾಂ - ಆಪತ್ತುಗಳನ್ನು, ಕ್ಷಾರಣತ್ - ಕೆಡಿಸುವುದರಿಂದ ಕ್ಷಾರವೆನಿಸಿ ಕೊಂಬುದು, ಸರ್ವಭೂತೇಭ್ಯಃ - ಸಮಸ್ತಭೂತ ಗ್ರಹಾದಿಗಳ ಕಡೆಯಿಂದ, ರಕ್ಷಣಾತ್ - ರಕ್ಷಿಸುವುದರಿಂದ, ರಕ್ಷೇತಿ - ರಕ್ಷೆ ಎಂದು ಪರಿಗೀಯತೇ - ಹೇಳಲ್ಪಡುವುದು ॥೬॥

ನಂದಾ ಭದ್ರಾ ಚ ಸುರಭಿಸ್ಸುಶೀಲಾ ಸುಮನಾಸ್ತಥಾ
ಪಂಚಗಾವೋ ವಿಭೋರ್ಜಾತಾ ಸದ್ಯೋಜಾತಾದಿ ವಕ್ತ್ರತಃ

ವಿಭೂತಿಯ ಉತ್ಪತ್ತಿಯನು ಹೇಳಲೋಸ್ಕರ ಗೋವುಗಳ ಜನನಸ್ಥಾನವನ್ನು ಹೇಳುತಿರ್ದಪಂ

ನಂದಾ - ನಂದೆ ಎಂಬಂಥಾ, ಭದ್ರ ಭದ್ರೆ ಎಂಬಂಥದ್ದು, ಸುರಭಿಃ - ಸುರಭಿ ಎಂಬಂಥದು, ಸುಶೀಲ - ಸುಶೀಲೆ ಎಂಬಂಥದ್ದು. ಸುಮನಾ - ಸುಮನೆ ಎಂಬಂಥಾ, ಪಂಚಗಾವಃ - ಐದು ಗೋವುಗಳು, ವಿಭೋಃ - ಶಿವನ, ಸದ್ಯೋಜಾತಾದಿವಕ್ತ್ರತಃ - ಸದ್ಯೋಜಾತ ಮೊದಲಾದ ಮುಖಂಗಳಿಂದ, ಜಾತಃ ಹುಟ್ಟಿದವು ॥೭॥

ಕಪಿಲಾ ಕೃಷ್ಣ ಧವಲಾ ಧೂಮ್ರರಕಾಸ್ತಥೈವ ಚ
ನಂದಾದೀನಾಂ ಗವಾಂ ವರ್ಣಾಃ ಕ್ರಮೇಣ ಪರಿಕೀರ್ತಿತಾಃ

ಗೋವುಗಳ ವರ್ಣಗಳನು ಹೇಳುತ್ತಿದ್ದಾನು

ಕಪಿಲಾ - ಕಪಿಲೆ, ಕೃಷ್ಣ - ಕಾಳಿ, ಧವಲಾ - ಶುಭ್ರ, ಧೂಮ್ರ - ಬೂದುಬಣ್ಣ, ರಕ್ತಾ - ಕೆಂದೆ, ಇತಿ - ಈ ಪ್ರಕಾರದಲ್ಲಿ, ನಂದಾದೀನಾಂ - ನಂದೆ ಮೊದಲಾದ, ಗವಾಂ - ಗೋವುಗಳು, ವರ್ಣಃ - ವರ್ಣಂಗಳು, ಕ್ರಮೇಣ - ಕ್ರಮದಿಂದ, ಪರಿಕೀರ್ತಿತಾಃ, - ಹೇಳಲ್ಪಟ್ಟವು ॥೮॥

ಸದ್ಯೋಜಾತಾದ್ವಿಭೂತಿಶ್ಚ ವಾಮಾದ್ಭಸಿತಮೇವ ಚ
ಅಘೋರಾದಸ್ಮ ಸಂಜಾತಂ ಪುರುಷಾ ಕ್ಷಾರ ನಾಮ ಚ

ರಕ್ಷಾಚೇಶಾನ ವಕ್ತ್ರಾಚ್ಚ ನಂದಾದಿ ದ್ವಾರಕೋಽಭವಾನ್

ನಂದಾದಿ - ಗೋವುಗಳ ಮರ್ಯಾದೆಯಲ್ಲಿ ಹಿಂದೆ ಹೇಳಿದ ಐದು ಪ್ರಕಾರವಾದ ವಿಭೂತಿಯು ಸದ್ಯೋಜಾತಾದಿ ಪಂಚವಕ್ತ್ರಂಗಳಿಂದ ಹುಟ್ಟಿದವು ಎಂದು ಹೇಳುತಿರ್ದಪಂ.

ಸದ್ಯೋಜಾತ - ಸದ್ಯೋಜಾತವೆಂಬ ಶಿವನ ಮುಖದಿಂದ ಹುಟ್ಟಿದ ಗೋವಿನಿಂದ, ವಿಭೂತಿಃ - ವಿಭೂತಿಯು, ಸಂಜಾತಂ - ಹುಟ್ಟಿತು. ವಾಮಾತ್ - ವಾಮದೇವ ಮುಖದಿಂದ ಹುಟ್ಟಿದ ಗೋವಿನಿಂದ, ಭಸಿತಂ - ಭಸಿತ ಹುಟ್ಟಿತು, ಅಘೋರಾತ್ - ಅಘೋರ ಮುಖದ ದೆಸೆಯಿಂದ ಹುಟ್ಟಿದ ಗೋವಿನಿಂದ, ಭಸ್ಮಂ - ಭಸ್ಮವು, ಸಂಜಾತಂ - ಹುಟ್ಟಿತು, ತತ್ಪುರುಷಾತ್ - ತತ್ಪುರುಷ ಮುಖದ ದೆಸೆಯಿಂದ ಹುಟ್ಟಿದ ಗೋವಿನಿಂದ, ಕ್ಷಾರನಾಮಾಚ - ಕ್ಷಾರವೆಂಬ ಹೆಸರನ್ನುಳ್ಳಂಥಾ ವಿಭೂತಿ ಹುಟ್ಟಿತು. ಈಶಾನವಕ್ತ್ರಾತ್ - ಈಶಾನಮುಖದ ದೆಸೆಯಿಂದ ಹುಟ್ಟಿದ ಗೋವಿನಿಂದ, ರಕ್ಷಾ - ರಕ್ಷೆಯೆಂಬ ವಿಭೂತಿ ಹುಟ್ಟಿತು, ಯೇವಂ - ಈ ಪ್ರಕಾರದಲ್ಲಿ, ನಂದಾದಿ ದ್ವಾರಕಃ - ನಂದೆ ಮೊದಲಾದ ಗೋವುಗಳ ದ್ವಾರದಿಂದ, ಅಭವನ್ - ಹುಟ್ಟಿದವು ॥೧೦॥

ಧಾರಯೇನ್ನಿತ್ಯಕಾರ್ಯೇಷು ಪ್ರಯೋಕ್ತವ್ಯಂ ಸದಾಬುಧೈಃ
ನೈಮಿತ್ತಿಕೇಷು ಭಸಿತಂ ರಕ್ಷಾಂ ಕಾರ್ಯೇಷು ಸರ್ವದಾ

ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮನಾಮಯಥಾವಿಧಿ
ರಕ್ಷಾ ಚ ಮೋಕ್ಷಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ

ಐದು ಪ್ರಕಾರವಾದ ವಿಭೂತಿಧಾರಣಕ್ಕೆ ಕರ್ಮವಿಶೇಷಂಗಳಲ್ಲಿ ನಿಯೋಗವನು ಹೇಳುತಿರ್ದಪಂ

ನಿತ್ಯಕಾರ್ಯೇಷು - ನಿತ್ಯಕರ್ಮಂಗಳಲ್ಲಿ ವಿಭೂತಿಃ - ವಿಭೂತಿಯನು, ಪ್ರಯತ್ನತಃ - ಅವಶ್ಯವಾಗಿ, ಧಾರಯೇತ್ - ಧರಿಸಬೇಕು, ನೈಮಿತ್ತಿಕೇಷು - ಶ್ರಾದ್ಧಾದಿಕರ್ಮಗಳಲ್ಲಿ, ಭಸಿತಂ - ಭಸಿತವನು ಧರಿಸಬೇಕು. ಕಾಮ್ಯೇಷು - ಕಾಮ್ಯ ಕರ್ಮಂಗಳಲ್ಲಿ, ಸರ್ವದಾ

- ಯಾವಾಗಲೂ, ರಕ್ಷಾಂ - ರಕ್ಷೆಯನು ಧರಿಸಬೇಕು. ಸರ್ವೇಷು ಪ್ರಾಯಶ್ಚಿತ್ತೇಷು - ಚಾಂದ್ರಾಯಣ ಮೊದಲಾದ ಕರ್ಮಂಗಳಲ್ಲಿ, ಭಸ್ಮನಾಮ - ಭಸ್ಮವನು ಧರಿಸಬೇಕು. ಮೋಕ್ಷಕಾರ್ಯೇಷು - ಶಿವಪೂಜಾದಿ ಕರ್ಮಂಗಳಲ್ಲಿ, ಯಥಾವಿಧಿ - ಶಾಸ್ತ್ರೋಕ್ತ ಪ್ರಕಾರದಲ್ಲಿ, ಕ್ಷಾರಂ - ಕ್ಷಾರವನು, ಬುಧಃ ಪ್ರಯೋಕ್ತವ್ಯಂ - ಬಲ್ಲಂಥವರು ಅವಶ್ಯವಾಗಿ ಧರಿಸಬೇಕು ।।೧೧।।

ನಂದಾದೀನಾಂತು ಯೇ ವರ್ಣಾಃ ಕಪಿಲಾದ್ಯಾಃ ಪ್ರಕೀರ್ತಿತಾಃ
ತಯೇವವರ್ಣಾವಿಖ್ಯಾತಾಃ ಭೂತ್ಯಾದೀನಾಂ ಯಥಾ ಕ್ರಮಂ

ವಿಭೂತಿಧಾರಣ ಸಮಯದಲ್ಲಿ ನಂದಾದಿ ಗೋವುಗಳ ವರ್ಣವನು ವಿಭೂತಿಗಳಲ್ಲಿ ಭಾವಿಸಿ ಧರಿಸಬೇಕೆಂದು ವಿಧಿಸುತ್ತಂ ಇದ್ದಾನು.

ನಂದಾದೀನಾಂ - ನಂದಾದಿ ಮೊದಲಾದ ಗೋವುಗಳಿಗೆ, ಕಪಿಲಾದ್ಯಾಃ - ಕಪಿಲೆ ಮೊದಲಾದ, ಯೇವರ್ಣಾಃ - ಆವವು ಕೆಲವು ವರ್ಣಂಗಳು, ಪರಿಕೀರ್ತಿರ್ತಾಃ - ಹೇಳಲ್ಪಟ್ಟವು. ತಯೇವ ವರ್ಣಾಃ - ಆ ವರ್ಣಗಳೆ, ವಿಭೂತ್ಯಾದೀನಾಂ - ವಿಭೂತಿ, ಮೊದಲಾಗಿದ್ದಂಥಾವಕ್ಕೆ, ಯಥಾಕ್ರಮಂ - ಕ್ರಮತಪ್ಪದೆ, ವಿಖ್ಯಾತಾಃ - ಸ್ಮರಿಸಬೇಕೆಂದು ಹೇಳಲ್ಪಟ್ಟವು ।।೧೨।।

ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಥಾ ತಂತ್ರವೇದಿಭಿಃ
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಂ

ತೇಷಾಮಾದಿಮಮುತ್ಕೃಷ್ಟಮನ್ಯತ್ಸರ್ವಮಭಾವತಃ

ಭಸ್ಮದ ಉತ್ಪತ್ತಿಭೇದವನು ಹೇಳುತಿರ್ದಪಂ

ತತ್ಪವೇಧಿಭಿಃ - ಶಿವಾಗಮಗಳನು ಬಲ್ಲಂಥವರುಗಳಿಂದ, ಭಸ್ಮೋತ್ಪಾದನಂ ಭಸ್ಮದ ಉತ್ಪತ್ತಿಯ ಪ್ರಕಾರವನು, ಚತುರ್ಥ - ನಾಲ್ಕು ಪ್ರಕಾರವೆಂದು ಉದ್ದಿಷ್ಟ್ಯಂ - ಹೇಳಲ್ಪಟ್ಟಿತು. ಅವರ ಹೆಸರನು ಹೇಳುತಿರ್ದಪಂ

ಕಲ್ಪಂ - ಕಲ್ಪವೆಂದು, ಅನುಕಲ್ಪಂ - ಅನುಕಲ್ಪವೆಂದು, ಉಪಕಲ್ಪಂ - ಉಪಕಲ್ಪವೆಂದು, ಅಕಲ್ಪಂ - ಅಕಲ್ಪವೆಂದೂ ನಾಲ್ಕು ಪ್ರಕಾರವಾಗಿಹುದು. ತೇಷಾಂ - ಅವರೊಳಗೆ, ಆದಿ - ಮೊದಲು ಹೇಳಿದಂಥಾದ್ದು. ಉತ್ಕೃಷ್ಟಂ - ಉತ್ತಮವಾದ್ದು, ಅನ್ಯತ್ಸರ್ವಂ - ಉಳಿದ ಪ್ರಕಾರವು ಅಭಾವತಃ - ಮೊದಲು ಪ್ರಕಾರವಲ್ಲ ।।೧೩।।

ಯಥಾ ಶಾಸ್ತ್ರೋಕ್ತ ವಿಧಿನಾ ಗೃಹೀತ್ವಾ ಗೋಮಯಂ ನವಂ
ಸದ್ಯೇನ ವಾಮದೇವೇನ ಕುರ್ಯ್ಯಾತ್ಪಿಂಡಮನುತ್ತಮಂ

ಶೋಷತ್ವುರುಷೇಣೈವ ದಹೇದ್ಘೋರಾಚ್ಛಿವಾಗ್ನಿನಾ
ಕಲ್ಪಂ ತದ್ಭಸ್ಮ ವಿಜ್ಞೇಯಮನುಕಲ್ಪಮಥೋಚ್ಯತೇ

ಅವರ ಲಕ್ಷಣವನು ಹೇಳುತಿರ್ದಪಂ

ನವಂ - ಹೊಸತಾದ, ಗೋಮಯಂ - ಸಗಣೆಯನು, ಯಥಾಶಾಸ್ತ್ರೋಕ್ತ ವಿಧಿನಾ - ಶಾಸ್ತ್ರ ಹೇಳಿದ ಪ್ರಕಾರದಲ್ಲಿ, ಸದ್ಯೇನ - ಸದ್ಯೋಜಾತ ಮಂತ್ರದಿಂದ, ಗೃಹಿತ್ವಾ - ತೆಗೆದುಕೊಂಡು, ವಾಮೇನ - ವಾಮದೇವ ಮಂತ್ರದಿಂದ, ಅನುತ್ತಮಂ - ಉತ್ತಮವಾಗಿ, ಪಿಂಡಂ - ಮುದ್ದೆಯನು, ಕುರ್ಯಾತ್ - ಮಾಡುವುದು, ಪುರುಷೇಣ - ತತ್ಪುರುಷ ಮಂತ್ರದಿಂದ, ಶೋಷಯೇತ್ - ಒಣಗಿಸಬೇಕು, ಅಘೋರಾತ್ - ಅಘೋರ ಮಂತ್ರದಿಂದ, ಶಿವಾಗ್ನಿನಾ - ಶಿವಾಗ್ನಿಯಿಂದ, ದಹ್ಯತ್ - ದಹನವ ಮಾಡಬೇಕು. ದಹಭಸ್ಮೀಕರಣೆ - ಇದನು ಕಲ್ಪಭಸ್ಮವೆಂದು, ವಿಜ್ಞೇಯಂ - ಅರಿವುದು, ಅತಃ - ಅನಂತರದಲ್ಲಿ, ಅನುಕಲ್ಪಂ - ಅನುಕಲ್ಪ ಭಸ್ಮವನು, ಉಚ್ಯತೆ - ಹೇಳಿದನು ॥೧೫॥

ವನೇಷು ಗೋಮಯಂ ಯಚ್ಚ ಶುಷ್ಕಂ ಚೂರ್ಣೀಕೃತಂ ತಥಾ
ದಗ್ಧಂ ಚೈವಾನುಕಲ್ಪಾಖ್ಯಾಮಾಪಣಾದಿಗತಂತು ಯತ್

ವಸ್ತ್ರೇಣೋತ್ತಾರಿತಂ ಭಸ್ಮ ಗೋಮೂತ್ರಾಬದ್ಧ ಪಿಂಡಿತಂ
ದಗ್ಧಂ ಪ್ರಾಗುಕ್ತವಿಧಿನಾ ಭವೇದ್ಭಸ್ಮೋಪ ಕಲ್ಪಕಂ

ವನೇಷು - ಅಡವಿಯಲ್ಲಿ, ಶುಷ್ಕಂ - ಒಣಗಿರ್ದ - ಯದ್ಗೋಮಯಂ - ಆವುದಾ ನೊಂದು ಗೋಮಯವನು, ಚೂರ್ಣೀಕೃತಂ - ಚೂರ್ಣವ ಮಾಡಿ, ದಗ್ಧಂ - ಮಂತ್ರದಿಂದ ದಹಿಸ್ಪಟ್ಟಂಥ, ತದ್ಭಸ್ಮಂ - ಆ ಭಸ್ಮವು, ಅನುಕಲ್ಪಾಖ್ಯಾಂ - ಅನುಕಲ್ಪವೆನಿಸುವುದು, ಆಪಣಾದಿಗತಂತೂ - ಅಂಗಡಿಗೇರಿಯಲ್ಲಿ ಬಿದ್ದಿರ್ದಂಥಾ, ಭಸ್ಮ - ಗೋಮಯ ಭಸ್ಮವನು, ವಸ್ತ್ರೇಣಾ - ವಸ್ತ್ರದಿಂದ, ಉತ್ತಾರಿತಂ - ಗಾಲಿಸಿ, ಗೋಮೂತ್ರ ಬದ್ದ ಪಿಂಡಿತಂ - ಗೋಮೂತ್ರದಿಂದ ಕಲಸಿ ಪಿಂಡವ ಮಾಡಿ, ಪ್ರಾಗುಕ್ತಾ ವಿಧಿನಾ - ಮೊದಲು ಹೇಳಿದ ವಿಧಾನದಿಂದ, ದಗ್ಧಂ - ದಹಿಸಲ್ಪಟ್ಟಂಥಾ, ಭಸ್ಮಂ - ಭಸ್ಮವು, ಉಪಕಲ್ಪಕಂ - ಉಪಕಲ್ಪವೆಂದು, ಭವೇತ್ - ಅಹುದು. ಅನ್ಯೈರಾಪಾದಿತಃ ಭಸ್ಮಾಪ್ಯಕಲ್ಪಮಿತಿ ನಿಶ್ಚಿತಂ, ಅನ್ಯೈ - ಉಳಿದ ಪ್ರಕಾರಾಂತರಗಳಿಂದ, ಆಪಾದಿತಂ - ಮಾಡಲ್ಪಟ್ಟಂಥಾ, ಭಸ್ಮ- ಭಸ್ಮವು, ಅಕಲ್ಪಮಿತಿ - ಅಕಲ್ಪವೆಂದು, ಕಲ್ಪಿತಂ - ಹೇಳಲ್ಪಟ್ಟಿತು ॥೧೭॥

ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು
ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾಸಂಭವಮೇವವಾ

ನಾಲ್ಕು ಪ್ರಕಾರವಾದ ವಿಭೂತಿಯೊಳಗೆ ಏಕತಮಂ - ಒಂದು ಪ್ರಕಾರವಾದ ವಿಭೂತಿಯನು, ಕಲಶಾದಿಷು - ಕಲಶ ಮೊದಲಾದ, ಪಾತ್ರೇಷು - ಪಾತ್ರೆಗಳಲ್ಲಿ, ಆದಾಯ - ಇರಿಸಿಕೊಂಡು, ತ್ರಿಸಂಧ್ಯಾಂ - ತ್ರಿಸಂಧ್ಯಾ ಕಾಲದಲ್ಲಿಯು, ಯಥಾ ಸಂಭವಮೇವವಾ - ಒಂದು ಕಾಲದಲ್ಲಿಯಲ್ಲಾದರೂ, ಸ್ನಾನಂ - ಭಸ್ಮ ಸ್ನಾನವನು, ಆಚರೇತ್ - ಮಾಡಬೇಕು ॥೧೮॥

ಸ್ನಾನಕಾಲೇ ಕರೌ ಪಾದೌ ಪ್ರಕ್ಷಾಲ್ಯ ವಿಮಲಾಂಭಸಾ
ವಾಮಹಸ್ತತಳೇ ಭಸ್ಮಕ್ಷಿತ್ವಾ, ಚ್ಛಾದ್ಯಾನ್ಯ ಪಾಣಿನಾ

ಅಷ್ಟಕೃತ್ವಾಥ ಮೂಲೇನ ಮೌನಿಭಸ್ಮಾಭಿಮಂತ್ರ್ಯಚ
ಶಿರ ಈಶಾನ ಮಂತ್ರೇಣ ಪುರುಷೇಣ ಮುಖಂ ತಥಾ

ಹೃತ್ಪ್ರದೇಶ ಮಘೋರೇಣ ವಾಮದೇವೇನ ಗುಹ್ಯಕಂ
ಪಾದೌ ಸದ್ಯೇನ ಸರ್ವಾಂಗಂ ಪ್ರಣವೇನೈವಸೇಚಯೇತ್

ಸ್ನಾನಕಾಲೇ - ಭಸ್ಮಸ್ನಾನ ಕಾಲದಲ್ಲಿ, ಕರೌಪದೌ - ಹಸ್ತಪಾದಂಗಳನು ವಿಮಲಾಂಭಸಾ - ನಿರ್ಮಲೋದಕದಿಂದ, ಪ್ರಕ್ಷಾಲ್ಯ - ತೊಳೆದುಕೊಂಡು, ಮೌನಿ - ಮೌನಿಯಾಗಿ, ಅಷ್ಟಕೃತ್ವಾತ್ - ಎಂಟು ಬಾರಿ, ಮೂಲೇನ - ಮೂಲ ಪಂಚಾಕ್ಷರಿ ಮಂತ್ರದಿಂದ, ಭಸ್ಮಂ - ಭಸ್ಮವನು, ಅಭಿಮಂತ್ರಸ್ಯ - ಅಭಿಮಂತ್ರಿಸಿ, ಶಿರಃ - ಶಿರಸನ್ನು, ಈಶಾನಮಂತ್ರೇಣ - ಈಶಾನ ಮಂತ್ರದಿಂದ, ಮುಖಂ - ಮುಖವನು, ಹೃತ್ಪ್ರದೇಶಂ - ಹೃದಯ ಪ್ರದೇಶವನು, ಅಘೋರೇಣ - ಅಘೋರ ಮಂತ್ರ, ವಾಮದೇವೇನ - ವಾಮದೇವ ಮಂತ್ರದಿಂದ, ಗುಹ್ಯಕಂ - ಗುಹ್ಯ ಪ್ರದೇಶವನು, ಸದ್ಯೋಜಾತೇನ - ಸದ್ಯೋಜಾತ ಮಂತ್ರದಿಂದ, ಪುರುಷೇಣ - ತತ್ಪುರುಷ ಮಂತ್ರದಿಂದ, ಪಾದೌ - ಪಾದಗಳನು, ಸರ್ವಾಂಗಂ - ಸರ್ವಾಂಗವನು, ಪ್ರಣವೇನ - ಪ್ರಣವದಿಂದ, ಸೇಚಯೇತ್ - ಭಸ್ಮದಿಂದ ರಚಿಸಬೇಕು ॥೨೦॥ ಸಚಿಲೇಕ್ಷರಣೆ

ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಂ
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇ ತನ್ಮಲಾಪಹಂ

ದಶವಿಧ ಸ್ನಾನದಲ್ಲಿ ಭಸ್ಮಸ್ನಾನಕ್ಕೆ ಆಧಿಕ್ಯವನು ಹೇಳ್ದುತಿರ್ದಪಂ

ವಾರುಣೋದ್ಯೇಷು - ಗಂಗೆ ಮೊದಲಾದ ನಾನಾ ಜಲಸ್ನಾನಂಗಳೊಳಗೆ, ಮಲಾಪಹಂ - ಪಾಪವನು ಕೆಡಿಸುವಂಥಾ, ಮುಖ್ಯಂ - ಮುಖ್ಯವಾಗಿರ್ದಂಥಾ, ಭಸ್ಮಸ್ನಾನವಿಹಿತಂ - ವಿಭೂತಿಯಿಂದ ಮಾಡಲ್ಪಟ್ಟಂಥಾ, ಆಗ್ನೇಯಂ - ಆಗ್ನೇಯ ಸ್ನಾನವೆನಿಸುವಂಥ, ಇದಂ - ಈ ಭಸ್ಮಸ್ನಾನವು, ಉತ್ತಮಂ - ವಿಶಿಷ್ಟವು ॥೨೧॥

ಭಸ್ಮಸ್ನಾನವತಾಂ ಪುಂಸಾಂ ಯಥಾಯೋಗಂ ದಿನೇ ದಿನೇ
ವಾರಣೋದ್ಯೈರಲಂ ಸ್ನಾನೈರ್ಬಾಹ್ಯ ದೋಷಾಪಹಾರಿಭಿಃ

ದಿನೇ ದಿನೇ - ಪ್ರತಿದಿನದಲ್ಲಿಯೂ, ಯಥಾಯೋಗಂ - ಶಾಸ್ತ್ರೋಕ್ತ ಪ್ರಕಾರದಲ್ಲಿ, ಭಸ್ಮಸ್ನಾನವತಾಂ - ಭಸ್ಮಸ್ನಾನವನು ಮಾಡುವಂಥಾ, ಪುಂಸಾಂ - ಪುರುಷರುಗಳಿಗೆ, ಬಾಹ್ಯದೋಷಾಪಹಾರಿಭಿಃ - ಬಾಹ್ಯವಾದ ಶರೀರದ ಮಲಿನವನು ಕೆಡಿಸುವಂಥಾ, ವಾರಣಾದ್ಯೈಃ ಸ್ನಾನೈಃ - ಜಲಾದಿಸ್ನಾನಗಳಿಂದ, ಅಲಂ - ಸಾಕು.

ಆಗ್ನೇಯಂ ಭಸ್ಮನಾ ಸ್ನಾನಂ ಯತಿಭಿಸ್ತುವಿಧೀಯ್ಯತೇ

ಆಗ್ನೇಯಂ - ಅಗ್ನಿ ಸಂಬಂಧವಾದ ಭಸ್ಮ ಸ್ನಾನಂ - ಭಸ್ಮಸ್ನಾನವು ಯತಿಭಿಃ - ಯತಿಗಳಿಂದ, ವಿಧೀಯ್ಯತೇ - ಮಾಡಲ್ಪಡುತ್ತಿಹದು ॥೨೨॥

ಆರ್ದ್ರಸ್ನಾನಾತ್ಪರಂ ಭಸ್ಮತ್ವಾದ್ರೇ ಜಂತುವಧೋಧೃವಂ

ಆರ್ದ್ರಂತು ಪ್ರಕೃತಿಂ ವಿಂದ್ಯಾತ್ಪ್ರಕೃತಿಂ ಬಂಧನಂ ವಿಧುಃ
ಪ್ರಕೃತೇಸ್ತು ಪ್ರಹಾಣಾರ್ಥಂ ಭಸ್ಮನಾಸ್ನಾನಮೀಷ್ಯತೆ

ಭಸ್ಮ - ಭಸ್ಮ ಸ್ನಾನವು, ಆರ್ದ್ರಸ್ನಾನಾತ್ - ಜಲ ಸ್ನಾನದ ದೆಸೆಯಿಂದ, ಪರಂ - ಉತ್ಕೃಷ್ಟವು, ಆರ್ದ್ರ - ಜಲಸ್ನಾನದಲ್ಲಿ, ಧೃವಂ - ಅವಶ್ಯವಾಗಿಯೂ, ಜಂತುವಧಃ - ಪ್ರಾಣಿವಧಗಳುಂಟು. ಆರ್ದ್ರಂತು - ಜಲಸ್ನಾನವನು, ಪ್ರಕೃತಿಂ - ಪ್ರಕೃತಿಯೆಂದು, ವಿಂದ್ಯಾತ್ - ಅರಿಯಬೇಕು. ಪ್ರಕೃತಿ ಬಂಧನ - ಪ್ರಕೃತಿಯನು ಸಂಸಾರಮೂಲವೆಂದು, ವಿಂದ್ಯಾಃ - ವಿಂದ್ಯಾತ್ - ಅರಿವುದು, ಪ್ರಕೃತಿಂ - ಪ್ರಕೃತಿಯನು, ಬಂಧನಂ - ಆತ್ಮನ ಕಟ್ಟುವಂಥಾ ಹಗ್ಗವೆಂದು, ವಿದುಃ - ಹೇಳುತ್ತಿಹರು. ಪ್ರಕೃತೇಃ - ಸಂಸಾರಬೀಜ ವಾಗಿರ್ದಂಥಾ ಪ್ರಕೃತಿಯನು, ಪ್ರಹಾಣಾರ್ಥಂ - ಕೆಡಿಸಲೋಸ್ಕರವಾಗಿ, ಭಸ್ಮನಾಸ್ನಾನ - ಭಸ್ಮಸ್ನಾನವನು, ಈಷ್ಯತೆ - ಮಾಡಬೇಕು ॥೨೪॥

ಬ್ರಹ್ಮಾದ್ಯಾಃ ವಿಬುಧಾಸ್ಸರ್ವೇ ಮುನಯೋಃ ನಾರದಾದಯಃ
ಯೋಗಿನಸ್ಸನಕಾದ್ಯಾಶ್ಚ ಬಾಣಾದ್ಯದಾನವಾ ಅಪಿ

ಭಸ್ಮಸ್ನಾನರತಾಸ್ಸರ್ವೇ ಶಿವಭಕ್ತಿ ಪರಾಯಣಾಃ
ನಿರ್ಮುಕ್ತ ದೋಷಕಲಿಲಾ ನಿತ್ಯಶುದ್ಧಾ ಭವಂತಿ ಹಿ

ಬ್ರಹ್ಮಾದ್ಯಾಃ - ಬ್ರಹ್ಮ ಮೊದಲಾದ, ವಿಬುಧಾಸ್ಸರ್ವೇ - ಸಮಸ್ತ ದೇವತೆಗಳು, ನಾರದಾದಯಃ - ನಾರದ ಮೊದಲಾದ, ಮುನಯಃ - ಮುನೀಶ್ವರರುಗಳು, ಸನಕಾದ್ಯಾಃ - ಸನಕ ಮೊದಲಾದ, ಯೋಗಿನಃ - ಯೋಗಿಗಳು, ಬಾಣಾದ್ಯಃ - ಬಾಣಾಸುರ ಮೊದಲಾದ, ದಾನವಾ ಅಪಿ - ಅಸುರರು, ಭಸ್ಮಸ್ನಾನರತಾಃ - ಭಸ್ಮ ಸ್ನಾನದಲ್ಲಿ ತತ್ಪರರಾಗಿ, ಶಿವಭಕ್ತಿಪರಾಯಣಾಃ - ಶಿವಭಕ್ತಿಯಲ್ಲಿ ತತ್ಪರರಾಗಿ, ನಿರ್ಮುಕ್ತದೋಷ ಕಲಿಲಾಃ - ಹೋಗಲ್ಪಟ್ಟ ದೋಷವನ್ನುಳ್ಳವರಾಗಿ, ನಿತ್ಯಶುದ್ಧಾಭವಂತಿ - ಆವಾಗಲು ಶುದ್ಧರಾಗುತ್ತಿಹರು ॥೨೬॥

ನಮಶ್ಶಿವಾಯೇತಿ ಭಸ್ಮ ಕೃತ್ವಾಸಪ್ತಾಭಿಮಂತ್ರಿತಂ
ಉದ್ಧೂಲಯೇತೇನ ದೇಹಂ ತ್ರಿಪುಂಡ್ರಂ ಚಾಪಿಧಾರಯೇತ್

ಭಸ್ಮ- ವಿಭೂತಿಯನು, ನಮಃ ಶಿವಾಯೇಃ - ನಮಃ ಶಿವಾಯ ಎಂಬ ಪಂಚಾಕ್ಷರಿ ಮಂತ್ರದಿಂದ, ಸಪ್ತ - ಏಳುಬಾರಿ, ಅಭಿಮಂತ್ರಿತಂ ಕೃತ್ವಾ - ಅಭಿಮಂತ್ರಿಸಿ, ತೇನ - ಆ ವಿಭೂತಿಯಿಂದ, ದೇಹಂ - ಶರೀರವನು, ಉಧ್ಧೂಲಯೇತ್ - ಲೇಪಿಸಬೇಕು. ತ್ರಿಪುಂಡ್ರಂಚ - ಭಸ್ಮದಿಂದ ತ್ರಿಪುಂಡ್ರವನು, ಧಾರಯೇತ್ - ಧರಿಸಬೇಕು ॥೨೭॥

ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ
ತಸ್ಮಾತ್ರಿಪುಂಡಮೇವೈಕಂ ಲಿಖೇದುದ್ಧೂಲನಂ ವಿನಾ

ತ್ರಿಪುಂಡ್ರಕ್ಕೆ ಅವಶ್ಯಮೇಕತ್ವವನು ಹೇಳುತಿರ್ದಪಂ

ಸರ್ವಾಂಗೊದ್ಧೂಳನಂ - ಸರ್ವಾಂಗಕ್ಕು ಅನುಲೇಪನವು, ತ್ರಿಪುಂಡ್ರಕೈಃ - ತ್ರಿಪುಂಡ್ರಕ್ಕೆ, ನ ಸಮಾನಂ - ಸರಿಯಿಲ್ಲ, ತಸ್ಮಾತ್ - ಅದುಕಾರಣ, ಉದ್ಧೂಳನಂ ವಿನಾ - ಅಂಗಾನುಲೇಪವನುಳಿದಾದರು, ತ್ರಿಪುಂಡ್ರವೇಕಂ - ತ್ರಿಪುಂಡ್ರ ವಂದನೆ, ಲಿಖೇತ್ - ಧರಿಸಬೇಕು ॥೨೮॥

ತ್ರಿಪುಂಡ್ರಂಧಾರಯೇನ್ನಿತ್ಯಂ ಭಸ್ಮನಾ ಸಲಿಲೇನ ಚ
ಸ್ಥಾನೇಷು ಪಂಚದಶ ಸುಶರೀರೆ ಸಾಧಕೋತ್ತಮಃ

ಸಾಧಕೋತ್ತಮಃ - ಮೋಕ್ಷವ ಸಾಧಿಸುವಂಥವನು, ಶರೀರೆ - ದೇಹದಲ್ಲಿ ಪಂಚದಶಸುಸ್ಥಾನೇಷು - ಹದಿನೈದು ಸ್ಥಾನಗಳಲ್ಲಿ, ಸಜಲೇನ - ಜಲಮಿಶ್ರಿತವಾದ, ಭಸ್ಮನಾ - ಭಸ್ಮದಿಂದ, ತ್ರಿಪುಂಡ್ರಂ - ಮೂರು ರೇಖೆಯಾಗಿ, ಧಾರಯೇತ್ - ಧರಿಸಬೇಕು ॥೨೯॥

ಉತ್ತಮಾಂಗೇ ಲಲಾಟೇಚ ಶ್ರವಣ ದ್ವಿತಯೇ ತಥಾ
ಭುಜದ್ವಯೇ ಗಲೇ ಹೃದಿ ನಾಭೌ ಚ ಪೃಷ್ಠಕೇ

ಬಾಹುಯುಗ್ಮೇ ಕಕುದ್ದೇಶೇ ಮಣಿಬಂಧದ್ವಯೇತಥಾ
ತ್ರಿಪುಂಡ್ರಂ ಭಸ್ಮನಾ ಧಾರ್ಯಂ ಮೂಲಮಂತ್ರೇಣ ಸಾಧಕೈಃ

ವಿಭೂತಿಯಧಾರಣ ಸ್ಥಲಂಗಳನು ಹೇಳುತಿರ್ದಪಂ

ಉತ್ತಮಾಂಗೇ - ಶಿರಸ್ಸಿನಲ್ಲಿ, ಲಲಾಟೇ - ನೊಸಲಲ್ಲಿ, ಶ್ರವಣದ್ವಿತಯೇ - ಕರ್ಣದ್ವಯದಲ್ಲಿ, ಗಲೇ - ಕಂಠದಲ್ಲಿ, ಭುಜದ್ವಯೇ - ಭುಜಗಳೆರಡರಲ್ಲಿ, ಹೃದಿ - ವೃಕ್ಷಸ್ಥಲದಲ್ಲಿ, ನಾಭೌ - ನಾಭಿಯಲ್ಲಿ, ಪೃಷ್ಠಕೆ - ಬೆನ್ನಿನಲ್ಲಿ, ಬಾಹುಯುಗ್ಮೇ - ತೋಳುಗಳೆರಡರಲ್ಲಿ, ಕಕುದ್ದೇಶೇ - ಕಂಠದ ಹಿಂಭಾಗದಲ್ಲಿ, ಮಣಿಬಂಧದ್ವಯೇ - ಎರಡು ಮುಂಗೈಯಲ್ಲಿಯೂ, ಸಾಧಕೈಃ - ಮೋಕ್ಷಾರ್ಥಿಗಳಿಂದ, ಮೂಲಮಂತ್ರೇಣ - ಮೂಲ ಪಂಚಾಕ್ಷರ ಮಂತ್ರದಿಂದ, ಭಸ್ಮನಾ - ವಿಭೂತಿಯಿಂದ, ತ್ರಿಪುಂಡ್ರಂ - ಮೂರು ರೇಖೆಯಾಗಿ, ಧಾರ್ಯಂ - ಧರಿಸಬೇಕು ॥೩೧॥

ವಾಮಹಸ್ತತಲೇ ಭಸ್ಮ ಕ್ಷಿಪ್ತ್ವಾಽಚ್ಛಾದ್ಯಾನ್ಯಪಾಣಿನಾ
ಅಗ್ನಿರಿತ್ಯಾದಿ ಮಂತ್ರೇಣ ಸ್ಪೃಶನ್ದ್ವಾರಾಭಿಮಂತ್ರ್ಯ ಚ

ತ್ರಿಪುಂಡ್ರಮುಕ್ತ ಸ್ಥಾನೇಷು ಧಧ್ಯಾತ್ಸಜಲಭಸ್ಮನಾ
ಶಿವಂ ಶಿವಂ ಕರಂ ಶಾಂತಂ ಸ ಪ್ರಾಪ್ನೋತಿ ನ ಸಂಶಯಃ

ವಾಮಹಸ್ತತಲೇ - ಎಡದ ಅಂಗೈಯಲ್ಲಿ, ಭಸ್ಮ - ಭಸ್ಮವನು, ಕ್ಷಿಪ್ತ್ವಾ - ಇರಿಸಿಕೊಂಡು, ಅನ್ಯಪಾಣಿನಾ - ಬಲದ ಕೈಯಿಂದ, ಆಚ್ಛಾದ್ಯ - ಮುಚ್ಚಿಕೊಂಡು, ಅಗ್ನಿರಿತ್ಯಾದಿ ಮಂತ್ರೇಣ - ಅಗ್ನಿರಿತ್ಯಾ. ಭಸ್ಮ ಎಂಬುದು ಮೊದಲಾದ ಮಂತ್ರದಿಂದ, ಸ್ಪೃಶನ್ - ಸ್ಪುರಿಸುತ್ತಾ, ದ್ವಾರಾ - ಅಂಗುಲಿಯ ರಂಧ್ರದಿಂದ, ಅಭಿಮಂತ್ರ್ಯ ಚ - ನೋಡುತ್ತಾ ಮಂತ್ರಿಸಿ, ಉಕ್ತ ಸ್ಥಾನೇಷು - ಹಿಂದೆ ಹೇಳಿದ ಸ್ಥಾನಂಗಳಲ್ಲಿ, ಸಜಲ

ಭಸ್ಮನಾ - ಜಲಸಹಿತವಾದ ಭಸ್ಮದಿಂದ, ತ್ರಿಪುಂಡ್ರಂ - ತ್ರಿರೇಖೆಯನು, ದದ್ಯಾತ್ - ಧರಿಸಬೇಕು. ಸಃ - ಆ ಭಸ್ಮವ ಧರಿಸಿದವನು, ಶಿವಕರಂ - ಮಂಗಲವನು ಮಾಡುವಂಥಾ, ಶಾಂತಂ - ಶಾಂತನಾಗಿರ್ದಂಥಾ, ಶಿವಂ - ಶಿವನನ್ನು, ಪ್ರಾಪ್ನೋತಿ - ಐದುವನು, ನ ಸಂಶಯಃ - ಸಂದೇಹವಿಲ್ಲ ॥೩೩॥

ಮಧ್ಯಾಂಗುಲಿ ತ್ರಯೇಣೈವ ಸ್ವದಕ್ಷಿಣಕರಸ್ಯ ತು
ಷಡುಂಗುಲಾಯತಂ ಮಾನಮಪಿವಾಧಿಮಾನಕಂ

ನೇತ್ರಯುಗ್ಮಪ್ರಮಾಣೇನ ಭಾಲೇದಧ್ಯಾತ್ ತ್ರಿಪುಂಡ್ರಕಂ
ಮಧ್ಯಮಾನಾಮಿಕಾಂಗುಷ್ಠೈರನುಲೋಮ ವಿಲೋಮತಃ

ಧಾರಯೇದ್ಯಸ್ತ್ರಿಪುಂಡ್ರಾಂಕಂ ಸ ರುದ್ರೋ ನಾತ್ರ ಸಂಶಯಃ
ಋಜು ಶ್ವೇತಮನುವ್ಯಾಪ್ತಂ ಸ್ನಿಗ್ಧಂ ಶ್ರೋತ್ರಪ್ರಮಾಣಕಂ

ಸ್ವದಕ್ಷಿಣ ಕರಸ್ಯ - ತನ್ನ ಬಲದ ಕೈಯ, ಮಧ್ಯಾಂಗುಲಿ ತ್ರಯೇಣೈವ - ಮಧ್ಯದ ಮೂರು ಬೆರಳುಗಳಿಂದ, ಷಡಂಗುಲಾಯತಂ - ಆರಂಗುಲ ದೀರ್ಘವಾಗಿ, ಅಪಿವಾಧಿಕ ಮಾನಕಂ - ಅಲ್ಲದಿದ್ದರೆ ಅಧಿಕ ದೀರ್ಘವಾಗಿ ತಾನು, ನೇತ್ರಯುಗ್ಮ ಪ್ರಮಾಣೇನಾ - ಎರಡು ನೇತ್ರ ಪರ್ಯಂತವಾಗಿ, ಭಾಳೆ - ಹಣೆಯಲ್ಲಿ, ದಧ್ಯಾತ್ - ಧರಿಸಬೇಕು. ಅಂಗುಲಿಭೇದದಿಂದ ಫಲಭೇದವನು ಹೇಳುತಿರ್ದಪಂ. ಮಧ್ಯಮ - ನಡುವಣ ಬೆರಳು, ಅನಾಮಿಕಾ - ಕಡೆಯ ಎರಡನೆಯ ಬೆರಳು, ಅಂಗುಷ್ಠೈಃ - ಹೆಬ್ಬೆರಳುಗಳಿಂದ ಅನುಲೋಮ ವಿಲೋಮತಃ - ಅನುಕೂಲ ಪ್ರತಿಕೂಲವಾಗಿ, ಯಃ - ಆವವನು ತ್ರಿಪುಂಡ್ರಕಂ - ತ್ರಿಪುಂಡ್ರಕದ ಕುರುಹನು, ಧಾರಯೇತ್ - ಧರಿಸುತ್ತಿದ್ದಾನು. ಸಃ - ಆತನು, ರುದ್ರಃ - ಸಾಕ್ಷಾತ್ ಶಿವನು, ನಸಂಶಯಃ - ಸಂದೇಹವಿಲ್ಲ. ರುಜು - ವಕ್ರವಲ್ಲದೆ, ಶ್ವೇತಂ - ಶುಕ್ಲವಾಗಿರ್ದಂಥಾ, ಅನುವ್ಯಾಪ್ತಂ - ಎಡೆಬಿಡವಲ್ಲದೆ ಇದ್ದಂತಹ, ಸ್ನಿಗ್ಧಂ - ನುಣುಪಾಗಿರ್ದಂಥಾ, ಶ್ರೋತ್ರ ಪ್ರಮಾಣಕಂ - ಕರ್ಣಾಂತವಾಗಿ ತ್ರಿಪುಂಡ್ರವನು ಧರಿಸಬೇಕು. ಯೇ ತತ್ ಸಲ್ಲಕ್ಷಣೋಪೇತಂ - ಇಂಥ ಲಕ್ಷಣದಿಂದ ಕೂಡಲ್ಪಟ್ಟಂಥಾ, ತ್ರಿಪುಂಡ್ರಂ - ತ್ರಿಪುಂಡ್ರವು, ಸರ್ವಸಿದ್ಧಿದಂ - ಸಮಸ್ತ ಸಿದ್ಧಿಯನು ಕೊಡುವುದು ॥೩೬॥

ಪ್ರಾತಃಕಾಲೇ ಚ ಮಧ್ಯಾಹ್ನೇ ಸಾಯಾಹ್ನೇ ಚ ತ್ರಿಪುಂಡ್ರಕಂ
ಕದಾಚಿತ್ ಭಸ್ಮನಾಕುರ್ಯಾತ್ಸ ರುದ್ರೋ ನಾತ್ರ ಸಂಶಯಃ

ಕಾಲಭೇದವನು ಫಲವನು ಹೇಳುತಿರ್ದಪಂ

ಪ್ರಾತಃಕಾಲೇ - ಉದಯಕಾಲದಲ್ಲಿ, ಮಧ್ಯಾಹ್ನೇ - ಮಧ್ಯಾಹ್ನಕಾಲದಲ್ಲಿ, ಸಾಯಾಹ್ನೇಚ - ಅಸ್ತಮ ಕಾಲದಲ್ಲಿಯು, ತ್ರಿಪುಂಡ್ರಕಂ - ತ್ರಿಪುಂಡ್ರವನು. ಕದಾಚಿತ್ - ಒಂದು ಬಾರಿ, ಭಸ್ಮನಾ - ಭಸ್ಮವನು, ಕುರ್ಯಾತ್ - ಧರಿಸಬೇಕು. ಸಃ - ಆತನು, ರುದ್ರಃ - ರುದ್ರನು, ನ ಸಂಶಯಃ - ಸಂದೇಹವಿಲ್ಲ ॥೩೭॥

ಯೇವಂ ವಿಧಂ ವಿಭೂತ್ಯಾ ಚ ಕುರುತೇ ಯಸ್ತ್ರಿಪುಂಡ್ರಕಂ
ಸ ರೌದ್ರ ಧರ್ಮ ಸಂಯುಕ್ತ ಸ್ತ್ರಯೀಮಯ ಇತಿಶ್ರುತಿಃ

ಏವಂ ವಿಧಂ - ಈ ಪ್ರಕಾರದಲ್ಲಿ, ವಿಭೂತ್ಯಾ - ವಿಭೂತಿಯಿಂದ, ಯಃ - ಆವವನು, ತ್ರಿಪುಂಡ್ರಕಂ - ತ್ರಿರೇಖೆಯನು, ಕರೋತಿ - ಧರಿಸುತ್ತಂ ಇದ್ದಾನು. ಸಃ - ಆತನು, ರುದ್ರಧರ್ಮ ಸಂಯುಕ್ತಃ - ಶಿವಧರ್ಮದೊಡನೆ ಕೊಡಲ್ಪಟ್ಟಂಥಾ, ತ್ರಯೀಮಯ ಇತಿ - ಸಾಕ್ಷಾತ್ ವೇದ ಸ್ವರೂಪವೆಂದು ಶ್ರುತಿಃ - ವೇದವು ಹೇಳುತ್ತಿದ್ದಿತು ॥೩೮॥

ವಶಿಷ್ಠಾದ್ಯಾ ಮಹಾಭಾಗಾ ಮುನಯಶ್ರುತಿಕೋವಿದಾಃ
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಂ

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಃ ಶಕ್ರಪುರೋಗಮಾಃ
ತ್ರಿಪುಂಡ್ರಂಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಂ

ವಶಿಷ್ಠಾದ್ಯಾಃ - ವಶಿಷ್ಠ ಮೊದಲಾದ, ಮಹಾಭಾಗಾಃ - ಉತ್ತಮರಾದ, ಶೃತಿ ಕೋವಿದಾಃ - ವೇದಗಳನು ಬಲ್ಲಂಥಾ, ಮುನಯಃ - ಮುನೀಶ್ವರರು, ಸದಾಕಾಲಂ - ಆವಾಗಲೂ, ಭಸ್ಮನಾಕೃತಂ - ಭಸ್ಮದಿಂದ ಮಾಡಲ್ಪಟ್ಟಂಥಾ, ತ್ರಿಪುಂಡ್ರಂ - ತ್ರಿರೇಖೆಯನು, ಧಾರಯಂತಿ - ಧರಿಸುತ್ತಿಹರು, ಬ್ರಹ್ಮಾ - ಬ್ರಹ್ಮನು, ವಿಷ್ಣುಶ್ಚ - ವಿಷ್ಣುವು, ರುದ್ರಶ್ಚ - ರುದ್ರನು, ಶಕ್ರಪುರೋಗಮಾಃ - ಇಂದ್ರ ಮೊದಲಾಗಿರ್ದ, ದೇವಾಃ - ದೇವತೆಗಳು, ಭಸ್ಮನಾ - ವಿಭೂತಿಯಿಂದ, ಪರಿಕಲ್ಪಿತಂ - ಮಾಡಲ್ಪಟ್ಟಂಥಾ, ತ್ರಿಪುಂಡ್ರಂ - ತ್ರಿರೇಖೆಯನು, ಧಾರಯಂತ್ಯೇವ - ಧರಿಸುತ್ತಲಿಹರು ॥೪೦॥

ಶೈವಾಗಮೇಷು ವೇದೇಷು ಪುರಾಣೇಶ್ವಖಿಲೇಷು ಚ
ಸ್ಮತೀತಿಹಾಸ ಕಲ್ಪೇಷು ವಿಹಿತಂ ಭಸ್ಮಪುಂಡ್ರಕಂ

ಧಾರಣೇಯ್ಯಂ ಸಮಸ್ತಾನಾಂ ಶೈವನಾಂ ಚ ವಿಶೇಷತಃ

ಶೈವಾಗಮೇಷು - ಶಿವಾಗಮಂಗಳಲ್ಲಿ, ವೇದೇಷು - ವೇದಂಗಳಲ್ಲಿ, ಅಖಿಲೇಷು - ಸಮಸ್ತವಾಗಿರ್ದಂಥಾ, ಪುರಾಣೇಷು - ಪುರಾಣಗಳಲ್ಲಿ, ಸ್ಮೃತಿಃ - ಮನ್ವಾದಿ ಸ್ಮೃತಿಗಳಲ್ಲಿ; ಇತಿಹಾಸ - ಭಾರತಾದಿಗಳಲ್ಲಿ, ಕಲ್ಪೇಷು - ಬೋಧಾಯನಾದಿಕಲ್ಪ ಸೂತ್ರಂಗಳಲ್ಲಿ, ವಿಹಿತಂ - ವಿಧಿಸಲ್ಪಟ್ಟಂಥಾ, ಭಸ್ಮತ್ರಿಪುಂಡ್ರಕಂ - ವಿಭೂತಿಯ ತ್ರಿಪುಂಡ್ರವು, ಸಮಸ್ತಾನಾಂ - ಸರ್ವರಿಗೂ, ವಿಶೇಷತಃ - ಪ್ರೀತಿಯಿಂದ, ಶೈವಾನಾಂ - ಶಿವಭಕ್ತರುಗಳು, ಧಾರಣೇಯ್ಯಂ - ಧರಿಸಬೇಕು ॥೪೨॥

ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರ ಪರಾಯಣಃ
ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸೋಪಿ ಕಿಲ್ಬಿಷೈಃ

ತ್ರಿಪುಂಡ್ರಧಾರಣದಲ್ಲಿ ಸರ್ವರು ಅಧಿಕಾರಿಗಳೆಂದು ಹೇಳುತಿರ್ದಪಂ.

ನಾಸ್ತಿಕಃ - ಪಾಷಾಂಡಿಯು, ಭಿನ್ನ ಮರ್ಯಾದಃ - ಧರ್ಮವ ಕೆಡಿಸುವವನು, ದುರಾಚಾರ ಪರಾಯಣಃ - ಪಾಪದಲ್ಲಿ ತತ್ಪರನಾದವನು, ಭಸ್ಮತ್ರಿಪುಂಡ್ರ ಧಾರೀಚೇತ್

- ಭಸ್ಮದಿಂದ ತ್ರಿಪುಂಡ್ರವನು ಧರಿಸಿದನಾದರೆ, ಸೋಪಿ - ಆತನು, ಸರ್ವಕಿಲ್ಬಿಷೈಃ - ಸಮಸ್ತ ಪಾಪಗಳಿಂದ, ಮುಚ್ಯತೆ - ಬಿಡಲ್ಪಡುವನು ॥೪೩॥

ಭಸ್ಮನಾ ವಿಹಿತ ಸ್ನಾನ ಸ್ತ್ರಿಪುಂಡ್ರಾಂಕಿತ ಮಸ್ತಕಃ
ಶಿವಾರ್ಚನಪರೋ ನಿತ್ಯಂ ರುದ್ರಾಕ್ಷಮಪಿ ಧಾರಯೇತ್

ಈ ಪ್ರಕಾರದಲ್ಲಿ ಭಸ್ಮಧಾರಣದ ಮಹಾತ್ಮೆಯನು ವಿಸ್ತಾರವಾಗಿ ನಿರೂಪಿಸಿ ಶ್ರೀ ರುದ್ರಾಕ್ಷಧಾರಣವನು ನಿರೂಪಿಸಲೋಸ್ಕರವಾಗಿ ವಿಭೂತಿ ರುದ್ರಾಕ್ಷಧಾರಣದ ಕ್ರಮವನು ಹೇಳುತಿರ್ದಪಂ

ಭಸ್ಮನಾ - ವಿಭೂತಿಯಿಂದ, ವಿಹಿತಸ್ನಾನಂ - ಮಾಡಲ್ಪಟ್ಟ ಸ್ನಾನವನುಳ್ಳಂಥ, ತ್ರಿಪುಂಡ್ರಾಂಕಿತ ಮಸ್ತಕಃ - ತ್ರಿಪುಂಡ್ರದಿಂದ ಕುರುಹಾದ ಲಲಾಟವನ್ನುಳ್ಳಂಥಾ, ಶಿವಾರ್ಚನ ಪರಃ - ಶಿವಪೂಜೆಯಲ್ಲಿ ತತ್ಪರನಾಗಿರ್ದಂಥಾತನು, ನಿತ್ಯಾಂ - ಎಲ್ಲಾಗಳು, ರುದ್ರಾಕ್ಷಮಪಿ - ರುದ್ರಾಕ್ಷಿಯನು, ಧಾರಯೇತ್ - ಧರಿಸಬೇಕು ॥೪೪॥

೭. ರುದ್ರಾಕ್ಷಧಾರಣಸ್ಥಲ

ಸಂಕ್ಷೇಪವಾಗಿ ರುದ್ರಾಕ್ಷಧಾರಣದ ಮಹಾತ್ಮವನು ಹೇಳುತ್ತಿದ್ದಾನು.

ರುದ್ರಾಕ್ಷಧಾರಣಾದೇವಾ ಮುಚ್ಯಂತೇ ಸರ್ವಪಾತಕೈಃ
ದುಷ್ಟ ಚಿತ್ತಾ ದುರಾಚಾರಾ ದುಷ್ಪ್ರಜ್ಞಾಪಿ ಮಾನವಾಃ

ದುಷ್ಟಚಿತ್ತಂ - ದುಷ್ಟನಾದ ಚಿತ್ತವನುಳ್ಳಂಥಾ, ದುರಾಚಾರಃ - ಅನಾಚಾರಿಯಾಗಿರ್ದಂಥಾ, ದುಷ್ಪ್ರಜ್ಞಃ - ಮೂಢನಾಗಿರ್ದಂಥಾ, ಮಾನವಃ - ಮನುಷ್ಯನು, ರುದ್ರಾಕ್ಷಧಾರಣಾದೇವಾಃ - ರುದ್ರಾಕ್ಷಿಯ ಧರಿಸುವುದರಿಂದ, ಸರ್ವಪಾತಕೈಃ - ಸಮಸ್ತ ಪಾಪಗಳಿಂದ, ಮುಚ್ಯಂತೆ - ಬಿಡುಗಡೆಯನೈದುತ್ತಂ ಇಹನು ॥೪೫॥

ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜಗತಾಂ ಪತಿಃ
ಉದಪಶ್ಯತ್ಪುರಾನ್ ಯೋಗಮುನ್ಮಿಲೀತ ವಿಲೋಚನಃ

ನಿಪೇತುಸ್ತಸ್ಯನೇತ್ರೇಭ್ಯೋ ಬಹವೋ ಜಲಬಿಂದವಃ
ತೇಭ್ಯೋ ಜಾತ ಹಿ ರುದ್ರಾಕ್ಷಾ ರುದ್ರಾಕ್ಷ ಇತಿ ಕೀರ್ತಿತಾಃ

ರುದ್ರಾಕ್ಷಿಯಮಹತ್ವಕ್ಕೆ ನಿಮಿತ್ಯವನು ಹೇಳುತಿರ್ದಪಂ

ಪುರಾ - ಪೂರ್ವದಲ್ಲಿ, ತ್ರಿಪುರ ಸಂಹಾರೆ - ತ್ರಿಪುರವನು ಸಂಹರಿಸುವ ಸಮಯದಲ್ಲಿ, ಜಗತಾಂ ಪತಿಃ - ಜಗತ್ತಿಗೆ ಒಡೆಯನಾದಂಥಾ, ತ್ರಿನೇತ್ರಃ - ಶಿವನು, ಉನ್ಮಿಲಿತ ವಿಲೋಚನಃ - ಕಂಗಳ ಹಳಚದೆ, ಪುರಾ - ತ್ರಿಪುರಗಳನು, ಯೋಗಃ - ಕೂಟವನು, ಉಪದಶ್ಯತ್ - ನೋಡಿದನು, ತಸ್ಯ - ಆ ರುದ್ರನ, ನೇತ್ರೇಭ್ಯಃ - ಕಂಗಳ ದೆಸೆಯಿಂದ, ಬಹವ್ಯಃ - ಅನೇಕ ವಾಗಿರ್ದಂಥಾ, ಜಲಬಿಂದವಃ - ಕಂಬನಿಗಳು, ನಿಪೇತುಃ - ಬಿದ್ದವು. ತೇಭ್ಯಃ - ಆ ಕಂಬನಿಗಳಿಂದ, ರುದ್ರಾಕ್ಷಃ - ರುದ್ರಾಕ್ಷಿಗಳು, ಅಜಾತಾಃ -

ಆವುದಾನೊಂದು ಕಾರಣ ಹುಟ್ಟಿದವು, ಅತಃ - ಅದು ಕಾರಣವಾಗಿ, ರುದ್ರಾಕ್ಷ ಇತಿ - ರುದ್ರಾಕ್ಷಿಗಳೆಂದು, ಕೀರ್ತಿತಾಃ - ಹೇಳಲ್ಪಟ್ಟವು ॥೪೭॥

ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ
ಅಷ್ಟತ್ರಿಂಶತ್ಪ್ರಭೇದೇನ ಭವಂತ್ಯುತ್ಪತ್ತಿಭೇದತಃ

ರುದ್ರಾಕ್ಷಿಗೆ ಉತ್ಪತ್ತಿಸ್ಥಾನಭೇದದಿಂದ ಭೇದವನು ಹೇಳುತಿರ್ದಪಂ

ರುದ್ರನೇತ್ರ ಸಮುತ್ಪನ್ನ - ಶಿವನನೇತ್ರಗಳಿಂದ ಹುಟ್ಟಿದಂಥಾ, ಲೋಕಪಾವನಾಃ - ಜಗತ್ಪಾವನ ಮಾಡುವಂಥಾ, ರುದ್ರಾಕ್ಷಾಃ - ರುದ್ರಾಕ್ಷಿಗಳು, ಉತ್ಪತ್ತಿಭೇದತಃ - ಹುಟ್ಟುಸ್ಥಾನ ಭೇದದಿಂದ, ಅಷ್ಟತ್ರಿಂಶತ್ಪ್ರಭೇದೇನ - ಮೂವತ್ತೆಂಟು ಪ್ರಕಾರವಾಗಿ, ಭವಂತಿ - ಆಗುತ್ತಂ ಇಹವು ॥೪೮॥

ನೇತ್ರಾತ್ಸೂರ್ಯಾತ್ಮನಶ್ಶಂಭೋಃ ಕಪಿಲಾ ದ್ವಾದಶೋದಿತಾಃ
ಶ್ವೇತಾಷ್ಷೋಡಶ ಸಂಜಾತಾಸ್ಸೋಮರೂಪಾದ್ವಿಲೋಚನಾತ್

ಕೃಷ್ಣಾ ದಶವಿಧಾ ಜಾತಾ ವಹ್ನಿರೂಪದ್ವಿಲೋಚನಾತ್
ಏವಮುತ್ಪತ್ತಿಭೇದೇನ ರುದ್ರಾಕ್ಷಾ ಬಹುಧಾ ಸ್ಮೃತಾಃ

ಉತ್ಪತ್ತಿಸ್ಥಾನಭೇದಗಳನು ಆ ಸ್ಥಾನಗಳಿಂದ ವರ್ಣಭೇದಗಳನು ಹೇಳುತಿರ್ದಪಂ

ಶಂಭೋಃ - ಪರಮೇಶ್ವರನ, ಸೂರ್ಯಾತ್ಮನಃ - ಸೂರ್ಯಸ್ವರೂಪವಾದ ನೇತ್ರಾತ್ - ಬಲದ ನಯನದ ದೆಸೆಯಿಂದ, ಕಪಿಲಾಃ - ಕಪಿಲವರ್ಣವಾಗಿರ್ದಂಥಾ, ದ್ವಾದಶ - ಹನ್ನೆರಡು ವಿಧವಾದ ರುದ್ರಾಕ್ಷಿಗಳು, ಜಾತಾಃ - ಹುಟ್ಟಿದವು. ಸೋಮರೂಪಾತ್ - ಚಂದ್ರಸ್ವರೂಪನಾಗಿರ್ದ, ವಿಲೋಚನಾತ್ - ಎಡದ ನೇತ್ರದ ದೆಸೆಯಿಂದ, ಶ್ವೇತಾಃ - ಬಿಳಿದಾದ, ಷೋಡಶ - ಹದಿನಾರು ಪ್ರಕಾರವಾದ ರುದ್ರಾಕ್ಷಿಗಳು, ಜಾತಃ - ಹುಟ್ಟಿದವು, ವಹ್ನಿರೂಪಾತ್ - ಅಗ್ನಿರೂಪವಾದ, ವಿಲೋಚನಾತ್ - ನೇತ್ರದ ದೆಸೆಯಿಂದ, ಕೃಷ್ಣಾಃ - ಕಪ್ಪು ವರ್ಣವಾದ, ದಶವಿಧಾಃ - ಹತ್ತು ಪ್ರಕಾರವಾದ ರುದ್ರಾಕ್ಷಿಗಳು, ಜಾತಾಃ - ಹುಟ್ಟಿದವು. ಏವಂ - ಈ ಪ್ರಕಾರದಲ್ಲಿ, ಉತ್ಪತ್ತಿ ಭೇದೇನ - ಸ್ಥಾನ ಭೇದದಿಂದ, ರುದ್ರಾಕ್ಷಾಃ - ರುದ್ರಾಕ್ಷಿಗಳು, ಬಹುಧಾಃ - ಅನೇಕ ಪ್ರಕಾರವಾಗಿ, ಸ್ಮೃತಾಃ - ಹೇಳಲ್ಪಟ್ಟವು ॥೫೦॥

ಅಚ್ಛಿದ್ರಂ ಕನಕಂ ಪ್ರಖ್ಯಮನನ್ಯಧೃತಮುತ್ತಮಂ
ರುದ್ರಾಕ್ಷಂಧಾರಯೇತ್ಪ್ರಾಜ್ಞಶ್ಶಿವಪೂಜಾ ಪರಾಯಣಃ

ರುದ್ರಾಕ್ಷಿಯ ಗುಣವನು ಹೇಳುತಿರ್ದಪಂ

ಅಚ್ಛಿದ್ರಂ - ದುರ್ದರವಲ್ಲದ, ಕನಕಪ್ರಖ್ಯಂ - ಸುವರ್ಣದ ಕಾಂತಿಯನುಳ್ಳಂಥಾ, ಅನನ್ಯಧೃತಂ - ಮತ್ತೊಬ್ಬರು ಧರಿಸದೆ ಇರ್ದಂಥ, ಉತ್ತಮಂ - ಉತ್ತಮವಾಗಿರ್ದಂಥಾ, ರುದ್ರಾಕ್ಷಂ - ರುದ್ರಾಕ್ಷಿಯನು, ಶಿವಪೂಜಾ ಪರಾಯಣಃ - ಶಿವಪೂಜೆಯಲ್ಲಿ ತತ್ಪರನಾಗಿರ್ದಂಥಾ, ಪ್ರಾಜ್ಞಂ - ಬಲ್ಲಾತನು, ಧಾರಯೇತ್ - ಧರಿಸಬೇಕು ॥೫೧॥

ಯಥಾ ಸ್ಥಾನಂ ಯಥಾ ವಕ್ತ್ರಂ ಯಥಾ ಯೋಗಂ ಯಥಾ ವಿಧಿಃ
ರುದ್ರಾಕ್ಷಧಾರಣಂ ವಕ್ಷ್ಯೇ ರುದ್ರಸಾಯುಜ್ಯ ಸಿದ್ಧಯೇ

ರುದ್ರಾಕ್ಷಧಾರಣ ಪ್ರಕಾರವನು ಹೇಳುತಿರ್ದಾನು

ಯಥಾಸ್ಥಾನಂ - ಧಾರಣ ಸ್ಥಾನಂಗಳನು, ಯಥಾವಕ್ತ್ರಂ - ಏಕಮುಖ ಮೊದಲಾದ ಮುಖ ಭೇದಗಳನು, ಯಥಾಯೋಗಂ - ಯಥಾಕ್ರಮವಾಗಿ, ಯಥಾವಿಧಿ - ಶಾಸ್ತ್ರೋಕ್ತ ಪ್ರಕಾರವಾಗಿ, ರುದ್ರಾಕ್ಷಧಾರಣಂ - ರುದ್ರಾಕ್ಷಧಾರಣವನು, ಶಿವಸಾಯುಜ್ಯ ಸಿದ್ಧಯೇ - ಶಿವಸಾಯುಜ್ಯವನು ಪಡೆಯಲೋಸ್ಕರವಾಗಿ, ವಕ್ಷ್ಯೇ - ಹೇಳಿಹನು ।।೫೨।।

ಶಿಖಾಯಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ಬುಧಃ
ದ್ವಿತ್ರಿದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್

ಷಟ್ತ್ರಿಂಶಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾನನಾತ್
ದಶಸಪ್ತ ಪಂಚವಕ್ತ್ರಾನ್ ಷಟ್‌ಷಟ್ ಕರ್ಣದ್ವಯೇ ವಹೇತ್

ಷಡಷ್ಟವದನಾನ್ಕಂಠೇ ದ್ವಾತ್ರಿಂಶದ್ಧಾರಯೇತ್ಸದಾ
ಪಂಚಾಶತ್ ಧಾರಯೇದ್ಧೀಮಾನ್ ಚತುರ್ವಕ್ತ್ರಾಣಿ ವಕ್ಷಸಿ

ತ್ರಯೋದಶಮುಖಾನ್ವಾಹ್ವೋರ್ಧ್ವರೇತ್ ಷೋಡಶ ಷೋಡಶ
ಪ್ರತ್ಯೇಕಂ ದ್ವಾದಶವಹೇನ್ನವಾಸ್ಯಾನ್ಮಣಿಬಂಧಯೋಃ

ಚತುರ್ದಶ ಮುಖಂ ಯಜ್ಞಸೂತ್ರಮಷ್ಟೋತ್ತರಂ ಶತಂ
ಧಾರಯೇತ್ಸರ್ವಕಾಲಂತು ರುದ್ರಾಕ್ಷಂ ಶಿವಪೂಜಕಃ

ಬುಧಃ - ಬಲ್ಲವನಾದವನು, ಏಕಾಸ್ಯಂ - ಒಂದು ಮುಖವನ್ನುಳ್ಳಂಥಾ, ಏಕರುದ್ರಾಕ್ಷಂ - ಒಂದು ರುದ್ರಾಕ್ಷಿಯನು, ಶಿಖಾಯಾಂ - ಚಂಡಿಕೆಯಲ್ಲಿ, ಧಾರಯತ್ - ಧರಿಸಬೇಕು. ಶಿರಸಿ - ಶಿರಸ್ಸಿನಲ್ಲಿ, ದ್ವಿತ್ರಿದ್ವಾದಶವಕ್ತ್ರಾಣಿ - ಎರಡು ಮುಖ, ಮೂರು ಮುಖ, ಹನ್ನೆರಡು ಮುಖವನ್ನುಳ್ಳಂಥಾ ಮೂರು ರುದ್ರಾಕ್ಷಿಗಳನು, ಧಾರಯತ್ - ಧರಿಸಬೇಕು. ಏಕಾದಶಾನನವಾನ್ - ಹೊಸತಾದಂಥಾ, ಏಕಾದಶಾನ್ - ಹನ್ನೊಂದು ಮುಖವನ್ನುಳ್ಳಂಥಾ, ಪಟ್ತ್ರಿಶಂತ್ - ಮೂವತ್ತಾರನು, ಮೂರ್ಧ್ನಿ - ಮೂರ್ಧ್ನಿಯಲ್ಲಿ, ನಿತ್ಯಂ - ಆವಾಗಲೂ, ಧಾರಯೇತ್ - ಧರಿಸಬೇಕು. ದಶಸಪ್ತಪಂಚವದನಾನ್ - ಹತ್ತು, ಏಳು, ಐದು ಮುಖವನ್ನುಳ್ಳಂಥಾ, ಷಟ್ ಷಟ್ - ಆರಾರನು, ಕರ್ಣದ್ವಯ - ಎರಡು ಕಿವಿಯಲ್ಲಿ, ವಹೇತ್ - ಧರಿಸಬೇಕು. ಷಡಷ್ಟವದನಾನ್ - ಆರು ಎಂಟು ಮುಖವನುಳ್ಳಂಥಾ ದ್ವಾತ್ರಿಂಶತ್ - ಮೂವತ್ತೆರಡನು, ಕಂಠೆ - ಕೊರಳಿನಲ್ಲಿ, ಸದಾ - ಆವಾಗಲೂ, ಧಾರಯೇತ್ - ಧರಿಸಬೇಕು. ಧೀಮಾನ್ - ಬುದ್ಧಿಯನುಳ್ಳಂಥಾತನು, ಚತುರ್ವಕ್ತ್ರಾಣಿ - ನಾಲ್ಕು ಮುಖವನ್ನುಳ್ಳಂಥಾ, ಪಂಚಾಶತ್ - ಐವತ್ತನೂ, ವಕ್ಷಸಿ - ವಕ್ಷಸ್ಥಳದಲ್ಲಿ, ಧಾರಯೇತ್ - ಧರಿಸಬೇಕು. ನವಾಸ್ಯಾನ್ - ಒಂಬತ್ತು ಮುಖದ ಮಣಿ, ದ್ವಾದಶ - ಹನ್ನೆರಡು, ಪ್ರತ್ಯೇಕಂ - ಬೇರೆ ಬೇರೆ, ಮಣಿ ಬಂಧಯೋಃ - ಮುಂಗೈಗಳಲ್ಲಿ,

ವಹೇತ್ - ಧರಿಸಬೇಕು. ತ್ರಯೋದಶಮುಖಾನ್ - ಹದಿಮೂರು ಮುಖವನುಳ್ಳಂಥಾ, ಷೋಡಶ ಷೋಡಶ ಹದಿನಾರನು, ಬಾಹೊ - ಎರಡು ತೋಳುಗಳಲ್ಲಿ, ಧಾರಯೇತ್ - ಧರಿಸಬೇಕು. ಚತುರ್ದಶ ಮುಖಂ - ಹದಿನಾಲ್ಕು ಮುಖವನುಳ್ಳಂಥ, ರುದ್ರಾಕ್ಷಂ - ರುದ್ರಾಕ್ಷಿಗಳನು, ಯಜ್ಞಸೂತ್ರಂ - ಯಜ್ಞೋಪವೀತವಾಗಿ, ಅಷ್ಟೋತ್ತರ ಶತಂ - ನೂರೆಂಟನೂ, ಸರ್ವಕಾಲಂತು - ಆವ ಕಾಲದಲ್ಲಿಯೂ, ಶಿವಪೂಜಕಃ - ಶಿವಭಕ್ತನು, ಧಾರಯೇತ್ - ಧರಿಸಬೇಕು ।।೫೭।।

ಏವಂ ರುದ್ರಾಕ್ಷಧಾರೀಯಸ್ಸರ್ವಕಾಲೇತು ವರ್ತತೇ
ತಸ್ಯ ಪಾಪಕಥಾ ನಾಸ್ತಿ ಮೂಢಸ್ಯಾಪಿ ನ ಸಂಶಯಃ

ಏವಂ - ಈ ಪ್ರಕಾರದಿಂದ, ಯಃ - ಆವನಾನೊಬ್ಬನು, ರುದ್ರಾಕ್ಷಧಾರೀ - ರುದ್ರಾಕ್ಷಿಯನು ಧರಿಸುತ್ತಂ, ಸರ್ವಕಾಲಂ - ಆವಾಗಲು, ವರ್ತತೆ - ವರ್ತಿಸುತ್ತಂ ಇದ್ದಾನು. ತಸ್ಯ - ಆತಂಗೆ, ಮೂಢಸ್ಯಾಪಿ - ಮೂಢನಾದರೂ, ಪಾಪಕಥಾ - ಪಾಪಲೇಪವು, ನಾಸ್ತಿ - ಇಲ್ಲ. ನಸಂಶಯಃ - ಸಂದೇಹವಿಲ್ಲ ।।೫೮।।

ಬ್ರಹ್ಮಹಾ ಮದ್ಯ ಪಾಯೀಚ ಸ್ವರ್ಣಹೃದ್ಗುರು ತಲ್ಪಗಃ
ಮಾತೃಹಾ ಪಿತೃಹಾ ಚೈವಾ ಭ್ರೂಣಹಾ ಕೃತಘಾತಕಃ

ರುದ್ರಾಕ್ಷಧಾರಣಾದೇವಾ ಮುಚ್ಯತೇ ಸರ್ವಪಾತಕೈಃ

ಬ್ರಹ್ಮಹಾ - ಬ್ರಹ್ಮಹತ್ಯವ ಮಾಡಿದಾತನು, ಮದ್ಯಪಾಯೀಚ - ಸುರಾಪಾನ ಮಾಡಿದಾತನು, ಸ್ವರ್ಣಹೃತ್ - ಸುವರ್ಣಸ್ತೇಯವ ಮಾಡಿದಾತನು, ಗುರುತಲ್ಪಗಃ - ಗುರುವಿನ ಸ್ತ್ರೀಯನು ಗಮಿಸಿದಾತನು, ಮಾತೃಹಾ - ತಾಯ ಕೊಂದವನು, ಪಿತೃಹಾ - ತಂದೆಯ ಕೊಂದವನು, ಭ್ರೂಣಹಾ - ಶಿಶುವ ಕೊಂದವನು, ಕೃತ ಘಾತಕಃ - ಮಾಡಿದ ಲೇಸ ಮರೆದವನು, ರುದ್ರಾಕ್ಷಧಾರಣಾದೇವಾ - ರುದ್ರಾಕ್ಷ ಧಾರಣ ಮಾತ್ರದಿಂದ, ಸರ್ವಪಾತಕೈಃ - ಸಮಸ್ತ ಪಾಪಗಳಿಂದ, ಮುಚ್ಯತೆ - ಬಿಡಲ್ಪಡುತಿಹನು ।।೬೦।।

ದರ್ಶನಾತ್ಸ್ಪರ್ಶನಾಚ್ಚೈವಾ ಸ್ಮರಣಾದಪಿ ಪೂಜನಾತ್
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೆ ಪಾತಕೈರ್ಜನಾಃ

ಲೋಕೇ - ಲೋಕದಲ್ಲಿ, ರುದ್ರಾಕ್ಷಂ - ರುದ್ರಾಕ್ಷಿಯನು, ದರ್ಶನಾತ್ - ದರ್ಶನ ಮಾತ್ರದಿಂದ, ಸ್ಪರ್ಶನಾತ್ - ಮುಟ್ಟುವುದರಿಂದ, ಸ್ಮರಣಾತ್ - ಸ್ಮರಿಸುವುದರಿಂದ, ಪೂಜನಾತ್ - ಪೂಜಿಸುವುದರಿಂದ, ಧಾರಣಾತ್ - ಧರಿಸುವುದರಿಂದ, ಜನಾಃ - ಜನರುಗಳು, ಸರ್ವಪಾತಕೈಃ - ಸಮಸ್ತ ಪಾಪಗಳಿಂದ, ಮುಚ್ಯತೆ - ಬಿಡಲ್ಪಡುತ್ತಿಹರು ।।೬೧।।

ಗವಾಂಕೋಟಿ ಪ್ರದಾನಸ್ಯ ಯತ್ಫಲಂ ಭುವಿ ಲಭ್ಯತೇ
ತತ್ಫಲಂ ಲಭ್ಯತೇ ಮರ್ತ್ಯೋಃ ನಿತ್ಯಂ ರುದ್ರಾಕ್ಷ ಧಾರಣಾತ್

ಗವಾಂ - ಗೋವುಗಳು, ಕೋಟಿ ಪ್ರದಾನಸ್ಯ - ಕೋಟಿ ದಾನದಿಂದ, ಯತ್ಫಲಂ - ಆವುದಾನೊಂದು ಫಲ, ಈ ಭುವಿ - ಭೂಮಿಯಲ್ಲಿ, ಲಭತೇ - ಹಡೆಯಲ್ಪಡುತ್ತಿಹುದು. ತತ್ಫಲಂ - ಆ ಫಲವನು, ಮರ್ತ್ಯೋ - ಮರ್ತ್ಯದ ಮನುಷ್ಯನು, ನಿತ್ಯಂ - ಆವಾಗಲೂ, ರುದ್ರಾಕ್ಷಧಾರಣಾತ್ - ರುದ್ರಾಕ್ಷಿಯ ಧಾರಣದ ದೆಸೆಯಿಂದ, ಲಭ್ಯತೆ - ಪಡೆವನು ||೬೨||

ಬ್ರಾಹ್ಮಣೋವಾಂಽತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ

ಬ್ರಾಹ್ಮಣಃ - ಬ್ರಾಹ್ಮಣನಾದರೂ, ಅಂತ್ಯಜೋವಾ - ಚಂಡಾಲನಾದರೂ, ಮೂರ್ಖೋವಾ - ಮೂಢನಾದರೂ, ಪಂಡಿತೋಪಿವಾ - ಬಲ್ಲಾತನಾದರೂ, ರುದ್ರಾಕ್ಷಧಾರಣಾದೇವಾ - ರುದ್ರಾಕ್ಷಿಯ ಧಾರಣಮಾತ್ರದಿಂದಲೇ, ಸರ್ವಪಾತಕೈಃ - ಸರ್ವಪಾತಕಗಳಿಂದ, ಮುಚ್ಯತೆ - ಬಿಡಲ್ಪಡುವನು ||೬೩||

ಮೃತ್ಯುಕಾಲೇ ತು ರುದ್ರಾಕ್ಷಂ ನಿಷ್ಪೀಡ್ಯಸಹವಾರಿಣಾ
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಚ ಸ ಗಚ್ಛತಿ

ಮೃತ್ಯುಕಾಲೇ - ಮರಣಕಾಲದಲ್ಲಿ, ಯಃ - ಆವನಾನೊಬ್ಬನು, ರುದ್ರಾಕ್ಷಂ - ರುದ್ರಾಕ್ಷಿಯನು, ನಿಷ್ಪೀಡ್ಯ - ಚೂರ್ಣವ ಮಾಡಿ, ವಾರಿಣಾಸಹಾ - ಉದಕದಲ್ಲಿ ಕದಡಿ, ರುದ್ರಂ - ಶಿವನನು, ಚಿಂತಯಂ - ನೆನೆಹುತ್ತ, ಪಿಬೇತ್ - ಪಾನವ ಮಾಡುತ್ತಿದ್ದಾನು. ಸಃ - ಅವನು, ರುದ್ರಲೋಕಂ - ಕೈಲಾಸವನು, ಗಚ್ಛತಿ - ಐಯ್ದುವನು ||೬೪||

ಭಸ್ಮೋದ್ಧೂಲಿತಸರ್ವಾಂಗಾ ಧೃತರುದ್ರಾಕ್ಷಮಾಲಿಕಾಃ
ಯೇ ಭವಂತಿ ಮಹಾತ್ಮನಸ್ತೇ ರುದ್ರ ನಾತ್ರ ಸಂಶಯಃ

ವಿಭೂತಿ ರುದ್ರಾಕ್ಷಿಯ ಫಲವನು ಸಂಕೋಚವಾಗಿ ಹೇಳುತಿರ್ದಪಂ

ಭಸ್ಮೋದ್ಧೂಲಿತ ಸರ್ವಾಂಗಃ - ಭಸ್ಮದಿಂದ ಲಿಪ್ತವಾದ ಸರ್ವಾಂಗವನ್ನುಳ್ಳಂಥಾ, ಧೃತರುದ್ರಾಕ್ಷಮಾಲಿಕಾಃ - ಧರಿಸಲ್ಪಟ್ಟ ರುದ್ರಾಕ್ಷ ಮಾಲೆಗಳನುಳ್ಳಂಥಾ, ಯೇಮಹಾತ್ಮನಃ - ಆರುಕೆಲಂಬರು ಮಹಾಪುರುಷರು, ಭವಂತಿ - ವರ್ತಿಸುತ್ತಂ ಇಹರು. ತೆ - ಅವರುಗಳು, ರುದ್ರಾಃ - ಶಿವಸ್ವರೂಪರು ಎಂದು ತಿಳಿಯಬೇಕು. ಅತ್ರ - ಈ ಅರ್ಥದಲ್ಲಿ, ನ ಸಂಶಯಃ - ಸಂದೇಹವಿಲ್ಲ ||೬೫||

ನಿತ್ಯಾನಿ ಕಾಮ್ಯಾನಿ ನಿಮಿತ್ತಜಾನಿ
ಕರ್ಮಾಣಿ ಸರ್ವಾಣಿ ಸದಾಽಪಿ ಕುರ್ವನ್
ಅಭಸ್ಮ ರುದ್ರಾಕ್ಷ ಯದಿಸ್ಯಾತ್
ದ್ವಿಜೋಯ ನ ತಸ್ಯಾಸ್ತಿ ಫಲೋಪ ಪತ್ತಿಃ

ವಿಭೂತಿ ರುದ್ರಾಕ್ಷಿಯ ಧರಿಸದವರನು ನಿಂದಿಸುತ್ತಾ ಇದ್ದಾರು.

ನಿತ್ಯಾನಿ - ಸಂಧ್ಯಾವಂದನೆ ಮೊದಲಾದ ನಿತ್ಯಕರ್ಮಂಗಳನು, ಕಾಮ್ಯಾನಿ - ಐಹಿಕಾಮುಷ್ಮಿಕ ಫಲವನು ಕೊಡುವಂಥಾ ಪುತ್ರಕಾಮೇಷ್ಟಿ ಮೊದಲಾದ ಕಾಮ್ಯಕರ್ಮಂಗಳನು, ನಿಮಿತ್ಯಜಾನಿ - ಉಪರಾಗಸ್ನಾನ ಮೊದಲಾದ ನೈಮಿತ್ತಿಕ ಕರ್ಮಗಳನು, ಸರ್ವಾಣಿ - ಸಮಸ್ತವನು, ಸದಾಪಿ - ಎಲ್ಲ ಕಾಲದಲ್ಲಿಯೂ, ಕುರ್ವನ್ - ಮಾಡಲು, ದ್ವಿಜಃ - ಬ್ರಾಹ್ಮಣನು, ಯದಿ - ಎತ್ತಲಾನು, ಅಭಸ್ಮ ರುದ್ರಾಕ್ಷಧರಃ - ಭಸ್ಮರುದ್ರಾಕ್ಷಿಯ ಧರಿಸದೆ ಇದ್ದರೆ, ತಸ್ಯಾ - ಆತಂಗೆ, ಫಲೋಪಪತ್ತಿಃ - ಫಲಪ್ರಾಪ್ತವು, ನ - ಇಲ್ಲ ||೬೬||

ಸರ್ವೇಶು ವರ್ಣಾಶ್ರಮಸಂಗತೇಷು
ನಿತ್ಯಂ ಸದಾಚಾರಪರಾಯಣೇಷು
ಶ್ರುತಿ ಸ್ಮೃತಿಭ್ಯಾಮಿಹಚೋದ್ಯಮಾನೋ
ವಿಭೂತಿರುದ್ರಾಕ್ಷ ಧೃತಿ ಸಮಾನಃ

ವರ್ಣಾಶ್ರಮಸಂಗತೇಷು - ವರ್ಣಾಶ್ರಮಧರ್ಮಂಗಳಲ್ಲಿ ಅಧಿಕಾರಿಯಾಗಿರ್ದಂಥಾ, ನಿತ್ಯಂ - ಯಾವಾಗಲೂ, ಸದಾಚಾರ ಪರಾಯಣೇಷು - ಶಿಷ್ಟಾಚಾರದಲ್ಲಿ ತತ್ಪರನಾಗಿರ್ದಂಥಾ, ಸರ್ವೇಷು - ಸಮಸ್ತ ಜನರುಗಳಲ್ಲಿ, ಶ್ರುತಿಸ್ಮೃತಿಭ್ಯಾಂ - ವೇದಶ್ರುತಿಗಳಿಂದ, ಚೋದ್ಯಮಾನಃ - ಹೇಳಲ್ಪಡುತ್ತಂ ಇದ್ದಂಥಾ, ವಿಭೂತಿ ರುದ್ರಾಕ್ಷಿ ಧೃತಿಃ - ವಿಭೂತಿ ರುದ್ರಾಕ್ಷಿ ಧಾರಣವು, ಸಮಾನಾ - ಸರ್ವರಿಗೂ ಸಾಧಾರಣವೆಂದು ಅರಿಯಬೇಕು ||೬೭||

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ
ಭಕ್ತಸ್ಥಲೆ ವಿಭೂತಿರುದ್ರಾಕ್ಷಧಾರಣ ಪ್ರಸಂಗೋನಾಮ ಸಪ್ತಮಪರಿಚ್ಛೇದಃ

ಅಷ್ಟಮಪರಿಚ್ಛೇದ

೮. ಪಂಚಾಕ್ಷರೀಜಪಸ್ಥಲ

ರೇಣುಕಉವಾಚ

ಧೃತಶ್ರೀಭೂತಿ ರುದ್ರಾಕ್ಷಃ ಪ್ರಯತೋ ಲಿಂಗಧಾರಕಃ
ಜಪೇತ್ಪಂಚಾಕ್ಷರೀ ವಿದ್ಯಾಂ ಶಿವತತ್ವ ಪ್ರಬೋಧಿನೀ

ಪೂರ್ವೋಕ್ತ ಪ್ರಕಾರದಲ್ಲಿ ವಿಭೂತಿ ರುದ್ರಾಕ್ಷ ಧಾರಣವಿಲ್ಲದೆ ಜಪ ಯೋಗ್ಯತೆ ಇಲ್ಲದಾದ ಕಾರಣ ಮೊದಲು ವಿಭೂತಿ, ರುದ್ರಾಕ್ಷಧಾರಣ ವಿಧಾನವನು ಹೇಳಿ ಅನಂತರದಧ್ಯಾಯದಲ್ಲಿ ಪಂಚಾಕ್ಷರಿ ಜಪ ವಿಧಾನವನು ಹೇಳುತಿರ್ದನು.

ಧೃತಶ್ರೀಭೂತಿ ರುದ್ರಾಕ್ಷಃ - ಧರಿಸಲ್ಪಟ್ಟ ವಿಭೂತಿ ರುದ್ರಾಕ್ಷಿಯನುಳ್ಳಂಥ, ಪ್ರಯತಃ - ಪರಿಶುದ್ಧನಾದ, ಲಿಂಗಧಾರಕಃ - ಲಿಂಗಧಾರಿಯಾಗಿರ್ದಂಥಾತನು, ಶಿವತತ್ವ ಪ್ರಬೋಧಿನೀಂ - ಶಿವನ ಪರಮಾರ್ಥ ಸ್ವರೂಪವನು ತೋರಿಸುವಂಥಾ, ಪಂಚಾಕ್ಷರೀಂ - ಐದಕ್ಷರವನುಳ್ಳಂಥಾ, ವಿದ್ಯಾಂ - ಮಂತ್ರವನು, ಜಪೇತ್ - ಜಪಿಸಬೇಕು. ಜಪಜಲ್ಪವ್ಯಕ್ತಾಯಾಂ ವಾಚಿ ॥೧॥

ಶಿವತತ್ವಾತ್ಪರಂ ನಾಸ್ತಿ ಯಥಾತತ್ವಾಂತರಂ ಮಹತ್
ತಥಾ ಪಂಚಾಕ್ಷರೀ ಮಂತ್ರಾನ್ನಾಸ್ತಿ ಮಂತ್ರಾಂತರಂ ಮಹತ್

ದೃಷ್ಟಾಂತ ಪೂರ್ವಕವಾಗಿ ಮಂತ್ರಾಧಿಕ್ಯವನು ಹೇಳುತ್ತಂ ಇದ್ದಾನು

ಮಹತ್ - ಮಹಾತತ್ವ ಮೊದಲಾಗಿರ್ದಂಥಾ, ತತ್ವಾಂತರಂ - ವಸ್ತ್ವಂತರವು, ಯಥಾ - ಆವ ಪ್ರಕಾರದಲ್ಲಿ, ಶಿವತತ್ವಾತ್ - ಶಿವತತ್ವದ ದೆಸೆಯಿಂದ, ಪರಂನಾಸ್ತಿ - ಅಧಿಕವಲ್ಲ, ಶಿವನೊಬ್ಬನೆ ಸರ್ವೋತ್ತಮನಾಗಿರ್ದಂಥಾತನು, ತಥಾ - ಆ ಪ್ರಕಾರದಲ್ಲಿ, ಪಂಚಾಕ್ಷರಿ ಮಂತ್ರಾತ್ - ಪಂಚಾಕ್ಷರಿಯ ಮಂತ್ರದ ದೆಸೆಯಿಂದ, ಮಹತ್ - ಅಧಿಕವಾಗಿರ್ದಂಥಾ, ಮಂತ್ರಾಂತರಂ - ಮತ್ತೊಂದು ಮಂತ್ರವು, ನಾಸ್ತಿ - ಇಲ್ಲ ॥೨॥

ಜ್ಞಾತೇ ಪಂಚಾಕ್ಷರೀ ಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಂ
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ

ಮಂತ್ರಾಧಿಕ್ಯವನು ಸ್ಪಷ್ಟವಾಗಿ ಹೇಳುತಿರ್ದಪಂ

ಪಂಚಾಕ್ಷರೀ ಮಂತ್ರೇ - ಶಿವಪಂಚಾಕ್ಷರೀ ಮಂತ್ರವನು, ಜ್ಞಾತೇ - ಅರಿತದುಂಟಾದರೆ, ಮಂತ್ರಾಂತರೈಃ - ಉಳಿದ ಮಂತ್ರಗಳಿಂದ, ಕಿಂ ಫಲಂ - ಏನು ಪ್ರಯೋಜನವು, ಜಗನ್ಮೂಲೇ - ಜಗತ್ತಿಗೆ ಮೂಲಕಾರಣವಾಗಿರ್ದಂಥಾ, ಶಿವೆ - ಶಿವನನ್ನು, ಜ್ಞಾತೇ - ಅರಿದುದುಂಟಾದರೆ, ದೇವತಾಂತರೈಃ - ಮಿಕ್ಕಾದ ದೇವತೆಗಳಿಂದ, ಕಿಂ ಫಲಂ - ಏನು ಪ್ರಯೋಜನವು ॥೩॥

ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹತ್
ಬ್ರಹ್ಮ ವಿಷ್ಣ್ವಾದಿ ದೇವೇಷು ಯಥಾ ಶಂಭುರ್ಮಹತ್ತರಃ

ಬ್ರಹ್ಮವಿಷ್ಣ್ವಾದಿ ದೇವೇಷು - ಬ್ರಹ್ಮವಿಷ್ಣು ಮೊದಲಾದ ದೇವತೆಗಳ ಮಧ್ಯದಲ್ಲಿ, ಶಂಭುಃ - ಶಿವನು, ಯಥಾ - ಆವ ಪ್ರಕಾರದಲ್ಲಿ, ಮಹತ್ತರಃ - ಅತ್ಯಧಿಕನು, ತಥಾ - ಆ ಮರ್ಯಾದೆಯಲ್ಲಿ ಸಪ್ತಕೊಟಿಷು ಮಂತ್ರೇಷು - ಏಳುಕೋಟಿ ಮಂತ್ರಂಗಳ ಮಧ್ಯದಲ್ಲಿ, ಪಂಚಾಕ್ಷರೋ ಮಂತ್ರಃ - ಪಂಚಾಕ್ಷರಿ ಮಂತ್ರವು, ಮಹತ್ - ಅಧಿಕವು ॥೪॥

ಅಶೇಷಜಗತಾಂ ಹೇತುಃ ಪರಮಾತ್ಮ ಮಹೇಶ್ವರಃ
ತಸ್ಯವಾಚಕ ಮಂತ್ರೋऽಯಂ ಸರ್ವಮಂತ್ರೈಕಕಾರಣಂ

ಪರಮಾತ್ಮ - ಪರಬ್ರಹ್ಮ ಸ್ವರೂಪವಾಗಿರ್ದಂಥಾ, ಮಹೇಶ್ವರಃ - ಶಿವನು, ಯಥಾ - ಆವ ಪ್ರಕಾರದಲ್ಲಿ, ಜಗತಾಂ - ಸಮಸ್ತಜಗತ್ತುಗಳಿಗೆ, ಹೇತು - ಕಾರಣನು, ತಥಾ - ಆವ ಪ್ರಕಾರದಲ್ಲಿ, ತಸ್ಯ - ಆತನ, ವಾಚಕಮಂತ್ರೋऽಯಂ ಪ್ರಾರ್ಥಿಸುವಂಥಾ ಮಂತ್ರವು, ಸರ್ವಮಂತ್ರೈಕ ಕಾರಣಂ - ಸರ್ವಮಂತ್ರಗಳಿಗೆ, ಆದಿ - ಕಾರಣವಾಗಿರ್ದಂಥದ್ದು ॥೫॥

ತಸ್ಯಾಭಿಧಾನಂ ಮಂತ್ರೋऽಯಮಭಿದೇಯಶ್ಚ ಸಂಸ್ಮೃತಃ
ಅಭಿದಾನಾಭಿಧೇಯಯತ್ವಾನ್ಮಂತ್ರಾತ್ಸಿದ್ಧಪರಶ್ಶಿವಃ

ಮಂತ್ರಕ್ಕೂ ಶಿವನಿಗೂ ಸಂಬಂಧವ ಹೇಳುತಿರ್ದಪಂ

ಅಯಂ - ಈ ಪಂಚಾಕ್ಷರಿ ಮಂತ್ರವು, ತಸ್ಯ - ಆ ಪರಮೇಶ್ವರನ, ಅಭಿಧಾನ ಮಂತ್ರಃ - ಹೆಸರ ಹೇಳುವ ಮಂತ್ರವು, ಸಃ - ಆ ಶಿವನ, ಅಭಿಧೇಯ ಸ್ಮೃತಃ - ಹೆಸರ ಹೇಳಲು ಪಡುವಂಥಾತನು, ಅಭಿಧಾನಾಭಿಧೇಯತ್ವಾತ್ - ವಾಚ್ಯವಾಚಕ ಭಾವನ ಸಂಬಂಧದಿಂದ, ಪರಃಶಿವಃ - ಸರ್ವೋತ್ತಮನಾಗಿರ್ದಂಥಾ ಶಿವನು, ಮಂತ್ರಾತ್ - ಪಂಚಾಕ್ಷರಿ ಮಂತ್ರದಿಂದ, ಸಿದ್ಧಃ - ಸಿದ್ಧನಹನು ॥೬॥

ನಮಶ್ಶಬ್ದಂ ವದೇತ್ಪೂರ್ವಂ ಶಿವಾಯೇತಿ ತತಃ ಪರಂ
ಮಂತ್ರಃ ಪಂಚಾಕ್ಷರೋಪ್ಯೇಷಸ್ಸರ್ವಶ್ರುತಿಶಿರೋಗತಃ

ಮಂತ್ರ ಸ್ವರೂಪವನು ಹೇಳುತಿರ್ದಪಂ

ಪೂರ್ವಂ - ಮೊದಲು, ನಮಃಶಬ್ದಃ - ನಮಃ ಎಂಬ ಶಬ್ದವನು, ವದತ್ - ಆಚರಿಸಬೇಕು. ತತಃಪರಂ - ಅದರಿಂದ ಮೇಲೆ, ಶಿವಾಯೇತಿ - ಶಿವ ಎಂದು ಹೇಳಬೇಕು. ಪಂಚಾಕ್ಷರಃ - ಹಿಂಗೆ ಐದಕ್ಷರವನ್ನುಳ್ಳಂಥಾ, ಮಂತ್ರಃ - ಮಂತ್ರವು, ಸರ್ವಶ್ರುತಿ ಶಿರೋಗತಃ - ಜಾಬಾಲ ಮೊದಲಾದ ಶ್ರುತಿಗಳಲ್ಲಿ ಇರುತ್ತಂ ಇದ್ದೀತು ॥೭॥

ಆದಿತಃ ಪರಿಶುದ್ಧತ್ವಾನ್ಮಲತ್ರಯ ವಿಯೋಗತಃ
ಶಿವ ಇತ್ಯುಚ್ಯತೇ ಶಂಭುಃ ಚಿದಾನಂದ ಘನಃ ಪ್ರಭುಃ

ಮಂತ್ರದಲ್ಲಿ ಶಿವ ಶಬ್ದದ ಅರ್ಥವನು ಹೇಳುತಿರ್ದಪಂ

ಆದಿತಃ - ಮೊದಲು ತೊಡಗಿ, ಪರಿಶುದ್ಧತ್ವಾತ್ - ನಿರ್ಮಲವಾದ ಕಾರಣವಾಗಿ, ಮಲತ್ರಯ ವಿಯೋಗತಃ - ಸತ್ವರಜತಮಸ್ಸೆಂಬ ದೋಷತ್ರಯರಹಿತನಾದ ಕಾರಣವಾಗಿಯು, ಚಿದಾನಂದ ಘನಃ - ಜ್ಞಾನಾನಂದ ಸ್ವರೂಪನಾಗಿರ್ದಂಥಾ, ಶಂಭುಃ - ಶಿವನು, ಶಿವಯಿತಿ - ಶಿವನೆಂದು, ಉಚ್ಯತೆ - ಹೇಳಲ್ಪಡುವನು ॥೮॥

ಆಸ್ಪದತ್ವಾದಶೇಷಾಣಾಂ ಮಂಗಲಾನಾಂ ವಿಶೇಷತಃ
ಶಿವಶಬ್ದಾಭಿಧೇಯೋಹಿ ದೇವದೇವಸ್ತ್ರ್ಯಂಬಕಃ

ಮತ್ತೊಂದು ಪ್ರಕಾರವಾಗಿ ಶಿವಶಬ್ದಾರ್ಥವನು ಹೇಳುತಿರ್ದಪಂ

ದೇವದೇವಃ - ದೇವ ದೇವನಾಗಿರ್ದಂಥಾ, ತ್ರ್ಯಂಬಕಃ - ಶಿವನು, ಅಶೇಷಾಣಾಂ - ಸಮಸ್ತವಾಗಿರ್ದಂಥಾ, ಮಂಗಲಾನಾಂ - ಮಂಗಲಗಳಿಗೆ, ವಿಶೇಷತಃ - ವೆಗ್ಗಳವಾಗಿ, ಆಸ್ಪದತ್ವಾತ್ - ಆವಾಸವಾದ ಕಾರಣ, ಶಿವಶಬ್ದಾಭಿಧೇಯಃ - ಶಿವ ಶಬ್ದದಿಂದ ಹೇಳಲ್ಪಡುವನು ॥೯॥

ಶಿವ ಇತ್ಯಕ್ಷರ ದ್ವಂದ್ವಂ ಪರಬ್ರಹ್ಮ ಪ್ರಕಾಶಕಂ
ಮುಖ್ಯವೃತ್ಯಾತದನ್ಯೇಷಾಂ ಶಬ್ದಾನಾಂ ಗುಣವೃತ್ತಯಃ

ಅನಂತನಾಮವನ್ನುಳ್ಳ ಶಿವನಿಗೆ ಶಿವ ಶಬ್ದವೆ ಮುಖ್ಯವೆಂದು ಹೇಳುತಿರ್ದಪಂ

ಶಿವ ಇತಿ - ಶಿವ ಎಂಬಂಥಾ, ಅಕ್ಷರ ದ್ವಂದ್ವಂ - ಎರಡಕ್ಷರವು, ಮುಖ್ಯವೃತ್ಯಾ - ಸಿಂಹದಲ್ಲಿ ಸಿಂಹ ಶಬ್ದದ ಮರ್ಯಾದೆಯಲ್ಲಿ, ಪರಬ್ರಹ್ಮಪ್ರಕಾಶಕಂ - ಪರಬ್ರಹ್ಮವನು ಹೇಳುತ್ತಂ ಇದ್ದು, ತದನ್ಯೇಷಂ - ಹೇಳಿದಂಥಾ, ಶಬ್ದಾನಾಂ - ಶಬ್ದಗಳಿಗೆ, ಗೌಣವೃತ್ತಯಃ - ಬಾಲನಲ್ಲಿ ಸಿಂಹ ಶಬ್ದದ ಮರ್ಯಾದೆಯಲ್ಲಿ ಉಪಚಾರ ವೃತ್ತಿಗಳು ॥೧೦॥

ತಸ್ಮಾನ್ಮುಖ್ಯತರಂ ನಾಮ ಶಿವ ಇತ್ಯಕ್ಷರದ್ವಯಂ
ಸಚ್ಚಿದಾನಂದ ರೂಪಸ್ಯಾ ಶಂಭೋರಮಿತ ತೇಜಸಃ

ತಸ್ಮಾತ್ - ಅದು ಕಾರಣ, ಶಿವ ಇತಿ - ಶಿವ ಎಂಬಂಥಾ, ಅಕ್ಷರದ್ವಯಃ - ಎರಡಕ್ಷರವು, ಸಚ್ಚಿದಾನಂದ ರೂಪಸ್ಯ - ಸತ್ತು ಚಿತ್ತು ಆನಂದರೂಪವಾಗಿರ್ದಂಥ, ಅಮಿತತೇಜಸಃ - ಹವಣಿಸಬಾರದ ತೇಜಸ್ಸನ್ನುಳ್ಳಂಥಾ, ಶಂಭೂಃ - ಶಿವನು, ಮುಖ್ಯತರಂ - ಅತ್ಯಂತ ಮುಖ್ಯವಾಗಿರ್ದಂಥಾ, ನಾಮಾ - ಹೆಸರು ॥೧೧॥

ಏತನ್ನಾಮಾವಲಂಬೇನ ಮಂತ್ರಃ ಪಂಚಾಕ್ಷರ ಸ್ಮೃತಃ
ಯಸ್ಮಾದತಸ್ಸದಾಜಪ್ಯೋ ಮೋಕ್ಷಾಕಾಂಕ್ಷಿಭಿರಾದರಾತ್

ಶಿವ ಶಬ್ದದ ಸಂಬಂಧದಿಂದ ಪಂಚಾಕ್ಷರಿ ಮಂತ್ರವು ಉತ್ಕೃಷ್ಟವೆಂದು ಹೇಳುತ್ತಂ ಇದ್ದಾನು

ಯಸ್ಮಾತ್ - ಆವುದಾದನೊಂದು ಕಾರಣವಾಗಿ, ಪಂಚಾಕ್ಷರೋ ಮಂತ್ರಃ - ಶಿವಪಂಚಾಕ್ಷರಿ ಮಂತ್ರವು, ಏತನ್ನಾಮಾವಲಂಬೇನಾ - ಈ ಶಿವನ ಶಬ್ದವನು ಆಶ್ರಯಿಸಿ,

ಸ್ಮೃತಂ - ಪ್ರವರ್ತಿಸಿತು. ಅತಃ - ಅದು ಕಾರಣ, ಮೋಕ್ಷಾಕಾಂಕ್ಷಿಭಿಃ - ಮುಮುಕ್ಷುಗಳಿಂದ, ಆದಾರಾತ್ - ಭಕ್ತಿಯಿಂದ, ಸದಾ - ಆವಾಗಲೂ, ಜಪ್ಯಃ - ಜಪಿಸಲು ಪಡುತ್ತಂ ಇಹುದು ॥೧೨॥

ಯಥಾನಾಽದಿರ್ಮಹಾದೇವಸಿದ್ಧಸ್ಸಂಸಾರಮೋಚಕಃ
ತಥಾ ಪಂಚಾಕ್ಷರೋಮಂತ್ರಸ್ಸಂಸಾರ ಕ್ಷಯಕಾರಕಃ

ಅನಾದಿಃ - ಉತ್ಪತ್ತಿರಹಿತನಾಗಿರ್ದಂಥಾ, ಮಹಾದೇವಃ - ಶಿವನು, ಯಥಾ - ಆವ ಪ್ರಕಾರದಲ್ಲಿ, ಸಂಸಾರ ಮೋಚಕಃ - ಸಂಸಾರ ಪಾಶವನು ಛೇದಿಸುವಂಥಾತನೆಂದು, ಸಿದ್ಧಃ - ವೇದಂಗಳಲ್ಲಿ ಪ್ರಸಿದ್ಧನು. ತಥಾ - ಹಾಗೆ, ಪಂಚಾಕ್ಷರೋ ಮಂತ್ರಃ - ಶಿವಪಂಚಾಕ್ಷರಿ ಮಂತ್ರವು, ಸಂಸಾರಕ್ಷಯಕಾರಕಃ - ಸಂಸಾರಕ್ಷಯವನು ಮಾಡುವುದು ॥೧೩॥

ಓಂಕಾರಪೂರ್ವೋ ಮಂತ್ರೋಽಯಂ ಪಂಚಾಕ್ಷರಮಯಃ ಪರಃ
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ

ಈ ಷಡಕ್ಷರ ಮಂತ್ರವು ಪ್ರಣವ ಸಂಬಂಧದಿಂದ ಷಡಕ್ಷರವೆಂದು ಹೇಳುತಿರ್ದಪಂ

ಪಂಚಾಕ್ಷರ ಮಯಃ - ಐದು ವರ್ಣ ಸ್ವರೂಪವಾಗಿರ್ದಂಥಾ, ಅಯಂ - ಈ ಮಂತ್ರವು, ಓಂಕಾರ ಪೂರ್ವಃ - ಪ್ರಣವ ಪೂರ್ವಕವಾಗಿ, ಶಿವಾಗಮೇಷು - ಸಮಸ್ತ ಶಿವಾಗಮಂಗಳಲ್ಲಿ, ವೇದೇಷು - ವೇದಂಗಳಲ್ಲಿಯೂ, ಷಡಕ್ಷರ ಇತಿ - ಷಡಕ್ಷರಿ ಎಂದು, ಸ್ಮೃತಃ - ಹೇಳಲ್ಪಟ್ಟಿತು ॥೧೪॥

ಪಂಚಭೂತಾನಿ ಸರ್ವಾಣಿ ಪಂಚತನ್ಮಾತ್ರಕಾನಿ ಚ
ಜ್ಞಾನೇಂದ್ರಿಯಾಣಿ ಪಂಚಾಪಿ ಪಂಚಕರ್ಮೇಂದ್ರಿಯಾಣಿ ಚ

ಕೃತ್ಯಾನಿ ಸಹಕಾರಿಣ್ಯೈಃ ಪಂಚಬ್ರಹ್ಮಾಣಿ ಪಂಚಾಪಿ
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರ ಮಹಾಮನೋಃ

ಪಂಚಧಾಪಂಚಧಾ ಯಾನಿ ಪುಸಿದ್ಧಾನಿ ವಿಶೇಷತಃ
ತಾನಿ ಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿ ಹಿ

ಸರ್ವಾಣಿ ಪಂಚಭೂತಾನಿ - ಸಮಸ್ತ ಪಂಚಭೂತಗಳು, ಪಂಚತನ್ಮಾತ್ರತಾನಿ ಚ - ಪೃಥುವ್ಯಾಪ್ತೇಜೌ - ವಾಯು ಆಕಾಶವೆಂಬ ಪಂಚಮಹಾಭೂತಗಳಿಗೆ ಕಾರಣವಾದ ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಪಂಚತನ್ಮಾತ್ರೆಗಳು - ಪಂಚಜ್ಞಾನೇಂದ್ರಿಯಾಣಿ ಶ್ರೋತ್ರ, ತ್ವಕ್ಕು ಚಕ್ಷುರಸನ ಘ್ರಾಣವೆಂಬ ಐದು ಜ್ಞಾನೇಂದ್ರಿಯಂಗಳು, ಪಂಚಕರ್ಮೇಂದ್ರಿಯಾಣಿ - ವಾಕು ಪಾಣಿ ಪಾದ ವಾಯು ಗುಹ್ಯವೆಂಬ ಐದು ಕರ್ಮೇಂದ್ರಿಯಂಗಳು, ಪಂಚಬ್ರಹ್ಮಾಣಿ - ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯವೆಂಬ ಪಂಚಬ್ರಹ್ಮರೂ ಕೃತ್ಯಾನಿ ಸೃಷ್ಟ್ಯಾದಿ - ಪಂಚಕೃತ್ಯಂಗಳು, ಸಹಕಾರಿಣಿ - ಕೃತ್ಯಂಗಳ ಸಹಕಾರಿಗಳು, ಪಂಚಾಕ್ಷರ ಮಹಾಮನೋಃ - ಪಂಚಾಕ್ಷರಿ ಮಂತ್ರವು, ಪಂಚಭಿರ್ವರ್ಣೈಃ - ಐದಕ್ಷರಗಳಿಂದ, ಬೋಧ್ಯಾನಿ - ಹುಟ್ಟುವವೆಂದು

ಅರಿಯಬೇಕು, ಯಾನಿ - ಆವವುಕೆಲವು, ಭೂತಾನಿ - ಭೂತಾದಿಗಳು, ಪಂಚಧಾ - ಐದು ಬಗೆಯಾಗಿರ್ದಂಥಾ, ಪ್ರಸಿದ್ಧಾನಿ - ಲೋಕ ಪ್ರಸಿದ್ಧಂಗಳು, ಸರ್ವಾಣಿ - ಸಮಸ್ತವಾಗಿರ್ದಂಥಾ, ತಾನಿವಸ್ತೂನಿ ಆ ಪದಾರ್ಥಂಗಳು, ಪಂಚಾಕ್ಷರಿ ಮಯಾನಿ - ಪಂಚಾಕ್ಷರಿ ಮಂತ್ರ ಸ್ವರೂಪವಾಗಿರ್ದಂಥವೆಂದರಿಯಬೇಕು ॥೧೭॥

ಮಂತ್ರಸ್ಯಾಸ್ಯಾದಿಭೂತೇನ ಪ್ರಣವೇನ ಮಹಾಮನೋಃ
ಪ್ರಬೋಧ್ಯತೇ ಮಹಾದೇವಃ ಕೇವಲಶ್ಚಿತ್ಸುಖಾತ್ಮಕಃ

ಅಸ್ಯಮಂತ್ರಸ್ಯ - ಈ ಪಂಚಾಕ್ಷರಿ ಮಂತ್ರದ, ಆದಿಭೂತೇನ - ಮೊದಲಾಗಿರ್ದಂಥಾ, ಪ್ರಣವೇನ - ಓಂಕಾರದಿಂದ, ಕೇವಲಃ - ನಿತ್ಯಮುಕ್ತನಾಗಿದ್ದಂಥ, ಚಿತ್ಸುಖಾತ್ಮಕಃ - ಚಿದಾನಂದ ಸ್ವರೂಪನಾಗಿರ್ದಂಥ, ಮಹಾದೇವಃ - ಶಿವನು, ಪ್ರಬೋಧ್ಯತೆ - ಹೇಳಲ್ಪಡುವವನು, ಬುಧ ಅವಗಮನೆ ॥೧೮॥

ಪ್ರಣವೇನೈಕ ವರ್ಣೇನ ಪರಬ್ರಹ್ಮ ಪ್ರಕಾಶತೇ
ಅದ್ವಿತೀಯಂ ಪರಾನಂದಂ ಶಿವಾಖ್ಯಂ ನಿಷ್ಪ್ರಪಂಚಕಂ

ಭೇದರಹಿತ ಪರಮಾನಂದ ಸ್ವರೂಪನಾಗಿರ್ದಂಥಾ, ಶಿವಾಖ್ಯಂ - ಶಿವನೆಂಬ ಹೆಸರನುಳ್ಳಂಥಾ, ನಿಃ ಪ್ರಪಂಚಕಂ - ಸಂಸಾರರಹಿತನಾಗಿರ್ದಂಥಾ, ಪರಬ್ರಹ್ಮ - ಪರಬ್ರಹ್ಮವು, ಪ್ರಣವೇನ - ಪ್ರಣವಾತ್ಮಕವಾಗಿರ್ದಂಥಾ, ಏಕೇನ ವರ್ಣೇನ - ಒಂದು ವರ್ಣದಿಂದಲೇ, ಪ್ರಕಾಶ್ಯತೆ - ಹೇಳಲ್ಪಡುತ್ತಂ ಇದ್ದಿತು ॥೧೯॥

ಪರಮಾತ್ಮಪರಿಜ್ಞೇಯಃ ಸೋಹಂರೂಪಸ್ಸನಾತನಃ
ಜಾಯತೇಹಂಸಯೋರ್ಲೋಪಾದೋಮಿತ್ಯೇಕಾಕ್ಷರೋ ಮನುಃ

ಸೋಹಂ ರೂಪಃ ಪರಿಜ್ಞೇಯಃ - ಜೀವನಿಗೆ ಸೋಹಂ ಭಾವದಿಂದ ಅರಿಯಲ್ಪಡುವಂಥಾ, ಪರಮಾತ್ಮ- ಪರಬ್ರಹ್ಮವು, ಸಹಯೋರ್ಲೋ ಪಾತ್ - ಸೋಹಂ ಶಬ್ದದೊಳಗೆ ಸಕಾರವೂ ಹಕಾರವೂ ಲೋಪವಾಗುತ್ತಂ ಇರಲಾಗಿ ಓಮಿತಿ ಪ್ರಣವಾತ್ಮಕ ವಾದ, ಏಕಾಕ್ಷರೋಮನುಃ - ಒಂದಕ್ಷರವಾಗಿರ್ದಂಥ ಮಂತ್ರಸ್ವರೂಪವು, ಜಾಯತೇ - ಪ್ರಾದುರ್ಭವಿಸಿತ್ತು ॥೨೦॥

ಪ್ರಣವೇನೈಕ ಮಂತ್ರೇಣ ಬೋಧ್ಯತೇ ನಿಷ್ಕಲಶ್ಶಿವಃ
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ

ಪ್ರಣವೇನ - ಪ್ರಣವವೆಂಬಂಥ, ಏಕ ಮಂತ್ರೇಣ - ಒಂದು ವರ್ಣವನ್ನುಳ್ಳ ಮಂತ್ರದಿಂದ, ನಿಷ್ಕಲಂ - ನಿರ್ಗುಣನಾಗಿರ್ದಂಥಾ, ಶಿವಃ - ಶಿವನು, ಬೋದ್ಯತೇ - ಹೇಳಲ್ಪಡುತ್ತಂ ಇಹನು. ತಥಾ - ಅನಂತರದಲ್ಲಿ, ಪಂಚಾಕ್ಷರೇಣ ಮಂತ್ರೇಣ - ಐದಕ್ಷರವನುಳ್ಳ ಮಂತ್ರದಿಂದ ಪಂಚಬ್ರಹ್ಮ ಸ್ವರೂಪನಾದ ಶಿವನೂ, ಬೋಧ್ಯತೇ - ಹೇಳಲ್ಪಡುವನು ॥೨೧॥

ನಿಷ್ಕಲಸ್ಸಂವಿದಾಕಾರಸ್ಸಕಲೌ ವಿಶ್ವಮೂರ್ತಿಕಃ
ಉಭಯಾತ್ಮಾಸ್ಥಿತೋ ಮಂತ್ರೋ ಷಡಕ್ಷರಮಯಸ್ಥಿತಃ

ನಿರ್ಗುಣ ಸಗುಣ ಸ್ವರೂಪವನು ಹೇಳುತಿರ್ದಪಂ

ಸಂವಿದಾಕಾರಃ - ಜ್ಞಾನಾತ್ಮಕವಾಗಿರ್ದಂಥಾ, ಶಿವಃ - ಶಿವನು, ನಿರ್ಗುಣಃ - ನಿರ್ಗುಣ ಬ್ರಹ್ಮವೆಂದು ಹೇಳಲ್ಪಡುವನು. ವಿಶ್ವಮೂರ್ತಿಕಃ - ಜಗನ್ಮಯನಾದ ಶಿವನು, ಸಕಲಃ - ಸಗುಣ ಬ್ರಹ್ಮವೆಂದು ಹೇಳಲ್ಪಡುವನು, ಷಡಕ್ಷರಃ - ಆರಕ್ಷರವನುಳ್ಳ, ಮಂತ್ರಃ - ಮಂತ್ರವು, ಉಭಯಾಶ್ರಯಃ-ಸಗುಣ ನಿರ್ಗುಣ ಬ್ರಹ್ಮಸ್ವರೂಪವನು ಪ್ರತಿಪಾದಿಸುತ್ತಂ, ಸ್ಥಿತಃ - ಇರುತ್ತಿಹುದು ॥೨೨॥

ಮೂಲಂ ವಿದ್ಯಾ ಶಿವಶ್ಚೈವ ಸೂತ್ರಂ ಪಂಚಾಕ್ಷರಸ್ತಥಾ
ಏತಾನಿ ನಾಮಧೇಯಾನಿ ಕೀರ್ತಿತಾನಿ ಮಹಾಮನೋಃ

ಆಗಮಸಿದ್ಧವಾದ ಪಂಚಾಕ್ಷರಿ ಮಂತ್ರದ ನಾಮಗಳನ್ನು ಹೇಳುತಿರ್ದಪಂ

ಮೂಲಂ - ಮಂತ್ರಗಳಿಗೆ ಮೂಲಕಾರಣವಾದ ಕಾರಣವಾಗಿ ಮೂಲವೆನಿಸುವುದು, ವಿದ್ಯಾ - ಶಿವಜ್ಞಾನಕ್ಕೆ ಕಾರಣನಾದ ಕಾರಣ ವಿದ್ಯೆ ಎನಿಸುವುದು, ಶಿವಶ್ಚೈವ - ಶಿವನೇ ದೇವತೆಯಾದ ಕಾರಣ ಶಿವಮಂತ್ರವೆಂದು ಹೇಳಲ್ಪಡುವುದು. ಸೂತ್ರಂ-ಸಮಸ್ತ ಮಂತ್ರಗಳೆಂಬ ಮಾಲೆಗಳಿಗೆ ಸೂತ್ರವಾದಕಾರಣ ಸೂತ್ರವೆನಿಸುವುದು, ಪಂಚಾಕ್ಷರಃ - ಐದಕ್ಷರವಾದ ಕಾರಣ ಪಂಚಾಕ್ಷರಿ ಎನಿಸುವುದು, ಮಹಾಮನೋಃ - ಪಂಚಾಕ್ಷರಿ ಮಂತ್ರಕ್ಕೆ, ಏತಾನಿ ನಾಮಧೇಯಾನಿ - ಈ ಐದು ನಾಮಗಳು, ಕೀರ್ತಿತಾಃ - ಹೇಳಲ್ಪಟ್ಟವು ॥೨೩॥

ಪಂಚಾಕ್ಷರೀಮಿಮಾಂ ವಿದ್ಯಾಂ ಪ್ರಣವೇನ ಷಡಕ್ಷರೀಂ
ಜಪೇತ್ಸಮಾಹಿತೋಭೂತ್ವಾ ಶಿವಪೂಜಾಪರಾಯಣಃ

ಪಂಚಾಕ್ಷರಿ ಸ್ವರೂಪವನು ಹೇಳಿ ಜಪ ವಿಧಾನವನ್ನು ಹೇಳುತಿರ್ದಪಂ

ಶಿವಪೂಜಾ ಪರಾಯಣಃ - ಶಿವಪೂಜೆಯಲ್ಲಿ ತತ್ಪರನಾದಾತನು, ಸಮಾಹಿತ ಮನೋಭೂತ್ವಾ - ಏಕಾಗ್ರಚಿತ್ತನಾಗಿ, ಪ್ರಣವೇನ ಷಡಕ್ಷರಂ - ಪ್ರಣವ ಸಹವಾಗಿ ಆರಕ್ಷರವನುಳ್ಳಂಥಾ, ಇಮಾಂ ಪಂಚಾಕ್ಷರಿ ವಿದ್ಯಾಂ - ಈ ಪಂಚಾಕ್ಷರಿ ಮಂತ್ರವನು ಜಪೇತ್ - ಜಪಿಸುವುದು ॥೨೪॥

ಪ್ರಾಣಾಯಾಮತ್ರಯಂ ಕೃತ್ವಾ ಪ್ರಾಙ್ಮುಖೋದಙ್ಮುಖೋಽಪಿ ವಾ
ಚಿಂತಯನ್ ಹೃದಯಾಂಭೋಜೇ ದೇವದೇವಂ ತ್ರಯಂಬಕಂ

ಸರ್ವಾಲಂಕಾರಸಂಯುಕ್ತಂ ಸಾಂಬಂ ಚಂದ್ರಾರ್ಧಶೇಖರಂ
ಜಪೇದೇತಾಂ ಮಹಾವಿದ್ಯಾಂ ಶಿವರೂಪಾಮನನ್ಯಧೀಃ

ಪ್ರಾಙ್ಮುಖಃ - ಮೂಡಣ ಮುಖವಾದರೂ, ಉದಙ್ಮುಖೌವಾ - ಬಡಗ ಮುಖವಾದರೂ ಕುಳಿತು, ಪ್ರಾಣಾಯಾಮತ್ರಯಂ - ಪ್ರಾಣಾಯಾಮಾತ್ರಯವನ್ನು,

ಕೃತ್ವಾ - ಮಾಡಿ, ಸರ್ವಾಲಂಕಾರ ಸಂಯುಕ್ತಂ - ಸರ್ವಾಭರಣಭೂಷಿತನಾಗಿರ್ದಂಥಾ, ಸಾಂಬಂ - ಪಾರ್ವತಿ ಸಹಿತನಾದ, ಚಂದ್ರಾರ್ಧಶೇಖರಂ - ಚಂದ್ರಮೌಳಿಯಾಗಿರ್ದಂಥಾ, ದೇವದೇವಂ - ಬ್ರಹ್ಮಾದಿದೇವತೆಗಳಿಗೆ ದೇವನಾಗಿರ್ದಂಥಾ, ತ್ರಯಂಬಕಂ - ಮೂರು ಕಣ್ಣುಳ್ಳ ಶಿವನು, ಹೃದಯಾಂಭೋಜೆ - ಹೃತ್ಪದ್ಮದಲ್ಲಿ, ಚಿಂತಯನ್ - ಧ್ಯಾನಮಾಡುತ್ತಾ, ಅನನ್ಯಧೀಃ - ಮತ್ತೊಂದು ವಿಷಯಕ್ಕೆ ಮನಸ್ಸನು ಕಳುಹದೆ, ಶಿವರೂಪಂ - ಶಿವನ ಸ್ವರೂಪವಾಗಿರ್ದಂಥಾ, ಏತಾಂ ಮಹಾವಿದ್ಯಾಂ - ಈ ಪಂಚಾಕ್ಷರಿ ಮಹಾಮಂತ್ರವನು, ಜಪೇತ್ - ಜಪಿಸಬೇಕು ॥೨೬॥

ಜಪಸ್ತು ತ್ರಿವಿಧಃ ಪ್ರೋಕ್ತೋ ವಾಚಕೋಪಾಂಶುಮಾನಸಃ
ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾ ವರ್ಣಸಮನ್ವಯಂ

ವಾಚಕಸ್ಸತು ವಿಜ್ಞೇಯಃ ಸರ್ವಪಾಪಪ್ರಭಂಜನಃ
ಈಶತ್ಸೃಷ್ಟಾಧರ ಪುಟಂ ಯೋ ಮಂದಮಭಿಧೀಯತೇ

ಪಾರ್ಶ್ವಸ್ಥೈರಶ್ರುತಸ್ಸೋಽಯಮುಪಾಂಶು ಪರಿಕೀರ್ತಿತಃ
ಅಸ್ಪೃಷ್ಟಾಧರಮಸ್ಪಂ ರಾತ್ಮನಾ ಜಿಹ್ವಾಗ್ರಂ ಯೋಽಂತರಂ

ಭಾವ್ಯತೆ ವರ್ಣರೂಪೇಣ ಸಮಾನಸ ಇತಿ ಸ್ಮೃತಃ

ಜಪದ ಅವಾಂತರ ಭೇದವನು ಹೇಳುತಿರ್ದಪಂ

ಜಪಸ್ತು - ಜಪವಾಯಿತ್ತಾದರೆ, ವಾಚಿಕಃ - ವಾಚಕವೆಂದು, ಉಪಾಂಶು ಮಾನಸಃ - ಉಪಾಂಶುವೆಂದು ಮಾನಸವೆಂದು, ತ್ರಿವಿಧಪ್ರೋಕ್ತಃ - ಮೂರು ಪ್ರಕಾರವಾಗಿ ಹೇಳಲ್ಪಟ್ಟಿತ್ತು. ಅವರ ಲಕ್ಷಣವನು ಹೇಳುತಿರ್ದಪಂ. ಯಃ - ಆವುದಾನೊಂದು ಜಪವು, ಯಥಾವರ್ಣ ಸಮನ್ವಯಃ - ಅಕ್ಷರ ಮೂಲರೂಪವಾಗಿ, ಪಾರ್ಶ್ವಸ್ಥೈಃ - ಸಮೀಪದಲ್ಲಿ ಇಹರುಗಳಿಂದ, ಶ್ರೂಯತೇ - ಕೇಳಲ್ಪಡುವ ಹಾಗೆ ಮಾಡುವ ಜಪವು, ಅಸ್ತು - ಆವುದಾದನೊಂದುಂಟು, ಸಃ - ಅದು, ವಾಚಿಕಃ - ವಾಚಕ ಎನಿಸುವುದು. ಸರ್ವಪಾಪ ಪ್ರಭಂಜನಂ - ಅದು ಸಮಸ್ತಪಾಪಂಗಳ ಕೆಡಿಸುವುದು. ಯಃ - ಆವುದಾನೊಂದು ಜಪವು, ಪಾರ್ಶ್ವಸ್ಥೈಃ - ಸಮೀಪವರ್ತಿಗಳಿಂದ, ಅಶ್ರುತಃ - ಕೇಳಬಾರದ ಹಾಗೆ, ಅಧರ ಪಲ್ಲಟವು - ಎರಡು ಓಷ್ಠಗಳನು, ಈಷತ್ಸ್ಪೃಷ್ಟ್ವಾ - ಅಲ್ಪವಾಗಿ ಸ್ಪರ್ಶಿಸುತ್ತವು, ಮಂದಂ - ಮೆಲ್ಲನೆ - ಅಭಿದೀಯ್ಯತೆ - ಉಚ್ಚರಿಸಲ್ಪಡುವಂಥಾ, ಸೋಯಂ - ಆ ಜಪವು, ಉಪಾಂಶುಃ - ಉಪಾಂಶು ಜಪವೆಂದು, ಪರಿಕೀರ್ತಿತಃ - ಹೇಳಲ್ಪಟ್ಟಿತ್ತು. ಅಸ್ಪೃಷ್ಟಾಧರಃ - ಸೋಂಕದೆ ಇರ್ದ ತುಟಿಯನುಳ್ಳಂಥಾ, ಅಸ್ಪಂದಿ ಜಿಹ್ವಾಗ್ರಂ - ಚಲಿಸದೆ ಇರ್ದ ಜಿಹ್ವಾಗ್ರವನ್ನುಳ್ಳಂಥಾದಾಗಿ, ಯಃ - ಆವುದಾನೊಂದು ಜಪವು, ಅಂತರಂ - ಮನಸ್ಸಿನಲ್ಲಿ, ವರ್ಣರೂಪೇಣ - ವರ್ಣಮಾಲಾರೂಪವಾಗಿ, ಭಾವ್ಯತೇ - ಚಿಂತಿಸಲ್ಪಡುತ್ತಿಂ ಇದ್ದಿತು, ಸಃ - ಆ ಜಪವು, ಮಾನಸ ಇತಿ - ಮಾನಸ ಜಪವೆಂದು, ಸ್ಮೃತಃ - ಹೇಳಲ್ಪಟ್ಟಿತು ॥೩೦॥

ಯಾವಂತಃ ಕರ್ಮಯಜ್ಞಾದ್ಯಾ ವ್ರತದಾನ ತಪಾಂಸಿ ಚ
ಸರ್ವತೇ ಜಪಯಜ್ಞಸ್ಯ ಕಲಾನ್ನಾರ್ಹಂತಿ ಷೋಡಶೀಂ

ವಾಚಿಕಜಪದ ಮಹತ್ವವನು ಹೇಳುತಿರ್ದಪಂ

ಕರ್ಮಯಜ್ಞಾದ್ಯಾ - ಕರ್ಮಾತ್ಮಕ್ರವಾದ ಯಜ್ಞಂಗಳು, ಯಾವಂತಃ - ಎಷ್ಟುಂಟು, ವ್ರತದಾನತಪಾಂಸಿ ಚ - ವ್ರತಗಳು ದಾನಗಳು ತಪಸ್ಸುಗಳು, ಸರ್ವೇ - ಸಮಸ್ತವು, ಜಪಯಜ್ಞಸ್ಯ - ಜಪಯಜ್ಞದ, ಷೋಡಶಿಕಲಾಂ - ಹದಿನಾರು ಭಾಗೆಯೊಳಗೆ ಒಂದು ಭಾಗವನು, ನಾರ್ಹಂತಿ- ಹೋಲವು, ಅರ್ಹಪೂಜಾಯಾಂ ।।೩೧।।

ಮಾಹಾತ್ಮಂ ವಾಚಕಸ್ಯೇ ತತ್ ಜಪಯಜ್ಞಸ್ಯ ಕೀರ್ತಿತಂ
ತಸ್ಮಾಚ್ಛತಗುಣೋಪಾಂಶು ಸಹಸ್ರೋಮಾನಸ ಸ್ಮೃತಃ

ವಾಚಿಕಾತ್ತಪಾಂಶೋಶ್ಚ ಜಪಾದಸ್ಯ ಮಹಾಮನೋಃ
ಮಾನಸೋಹಿ ಜಪಶ್ರೈಷ್ಠೋ ಘೋರಸಂಸಾರ ನಾಶಕಃ

ಏತತ್ - ಹಿಂದೆ ಹೇಳಿದ, ಮಹಾತ್ಮ್ಯಂ - ಮಹಿಮೆಯು, ವಾಚಿಕಸ್ಯ - ವಾಚಕವಾಗಿರ್ದ, ಜಪಸ್ಯ ಯಜ್ಞಸ್ಯ - ಜಪ ಯಜ್ಞಕ್ಕೆ, ಕೀರ್ತಿತಂ - ಹೇಳಲ್ಪಟ್ಟಿತ್ತು. ತಸ್ಮಾತ್ - ಅದರ ದೆಸೆಯಿಂದ, ಉಪಾಂಶುಃ - ಉಪಾಂಶು ಜಪವು, ಶತಗುಣಃ - ನೂರುಮಡಿ ಅಧಿಕವೂ, ಮಾನಸಃ - ಮಾನಸ ಜಪವು, ಸಹಸ್ರಃ - ಸಾವಿರ ಮಡಿ ಅಧಿಕವು, ಅಸ್ಯ ಮಹಾಮನೋಃ - ಈ ಮಂತ್ರದ ವಾಚಿಕ ಜಪಾತ್ - ವಾಚಿಕ ಜಪದಿಂದಲೂ, ಉಪಾಂಶೋಃ - ಉಪಾಂಶು ಜಪದಿಂದಲೂ, ಮಾನಸೋ ಜಪಃ - ಮಾನಸಜಪವು. ಶ್ರೇಷ್ಠ - ಉತ್ತಮವು, ಘೋರ ಸಂಸಾರ ನಾಶಕಃ - ಭಯಂಕರವಾದ ಸಂಸಾರವನು ಕೆಡಿಸುವುದು ।।೩೩।।

ಏತೇಷ್ವೇತೇನ ವಿಧಿನಾ ಯಥಾ ಭಾಗಂ ಯಥಾಕ್ರಮಂ
ಜಪೇತ್ಪಂಚಾಕ್ಷರಿಮೇತಾ ವಿದ್ಯಾಂ ಪಾಶವಿಮುಕ್ತಯೇ

ಏತೇಷ್ವೇತೇನ ಹಿಂದೆ ಹೇಳಿದ ಪ್ರಕಾರದಿಂದ, ಏಕೇನವಿಧಾನೇನ - ಒಂದು ವಿಧಾನದಿಂದ, ಯಥಾಭಾಗಂ - ವರ್ಣ ಭಾಗವನು ಬಿಡದೆ, ಯಥಾ ಕ್ರಮಂ - ಕ್ರಮ ತಪ್ಪದೆ, ಏತಾಂ ಪಂಚಾಕ್ಷರಿಂ - ಈ ಪಂಚಾಕ್ಷರಿ ವಿದ್ಯೆಯನು, ಅವಿದ್ಯಾಪಾಶಮುಕ್ತಯೇ - ಮಾಯಾಪಾಶವನು ಛೇದಿಸಲೋಸ್ಕರವಾಗಿ, ಜಪೇತ್ - ಜಪಿಸಬೇಕು ।।೩೪।।

ಅನೇನಮೂಲ ಮಂತ್ರೇಣ ಶಿವಲಿಂಗಂ ಪ್ರಪೂಜಯೇತ್
ನಿತ್ಯಂ ನಿಯಮಸಂಪನ್ನಃ ಪ್ರಯತಾತ್ಮಾಶಿವಾತ್ಮಕಃ

ನಿಯಮಸಂಪನ್ನಃ - ನಿಯಮದಲ್ಲಿ ಇರುತ್ತಂ ಇರ್ದ್ದಂಥಾ, ಪ್ರಯತಾತ್ಮ - ಪರಿಶುದ್ಧವಾದ ಚಿತ್ತವನ್ನುಳ್ಳಂಥಾ, ಶಿವಾತ್ಮಕಃ - ಶಿವನಲ್ಲಿ ಇರಿಸಲ್ಪಟ್ಟ ಚಿತ್ತವನ್ನುಳ್ಳಂಥಾತನು, ಅನೇನ ಮೂಲ ಮಂತ್ರೇಣ - ಈ ಮೂಲ ಮಂತ್ರದಿಂದ, ನಿತ್ಯಂ - ಪ್ರತಿದಿನದಲ್ಲಿಯು ಶಿವಲಿಂಗಂ - ಶಿವಲಿಂಗವನು, ಪ್ರಪೂಜಯೇತ್ - ಪೂಜಿಸಬೇಕು ।।೩೫।।

ಅಬ್ ಭಕ್ಷಾ ವಾಯುಭಕ್ಷಾಶ್ಚಯೇಚಾನ್ಯೇ ವ್ರತಕರ್ಶಿತಾಃ
ತೇಷಾಮೇತ್ರೈರ್ವ್ರತ್ಯೈನಾಸ್ತಿ ಶಿವಲೋಕ ಸಮಾಗಮಃ

ಭಕ್ತ್ಯಾ ಪಂಚಾಕ್ಷರೇಣೈವ ಯಶ್ಶಿವಂ ಸಕೃದರ್ಚ್ಯಯೇತ್
ಸೋಪಿ ಗಚ್ಛೇಚ್ಛಿವಸ್ಥಾನಂ ಮಂತ್ರಸ್ಯಾಸ್ಯೈವ ಗೌರವಾತ್

ತಸ್ಮಾತ್ತಪಾಂಶಿ ಯಜ್ಞಾಶ್ಚ ವ್ರತಾನಿ ನಿಯಮಾಸ್ತಥಾ
ಪಂಚಾಕ್ಷರಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ

ಅಬ್‌ಭಕ್ಷಾ - ಉದಕಪಾನವ ಮಾಡಿಕೊಂಡಿಹನು, ವಾಯುಭಕ್ಷಃ - ವಾಯುವನೆ ಆಹಾರವ ಮಾಡಿಕೊಂಡಿಹನು, ಯಥಾನ್ಯೈ - ಮಿಕ್ಕಾದಂಥಾ, ಆರು ಕೆಲಂಬರು, ವ್ರತಕರ್ಶಿತಾಃ - ಕೃಚ್ಛ ಚಾಂದ್ರಾಯಣಾದಿಗಳಿಂದ ಕುಶಲರಾಗಿರ್ದಂಥವರುಗಳುಂಟು, ತೇಷಾಂ - ಅವರಿಗೆ, ಏತೈವ್ರತೈಃ - ಉದಕಪಾನ ಮೊದಲಾಗಿರ್ದಂಥಾ ವ್ರತಂಗಳಿಂದ, ಶಿವಲೋಕಸಮಾಗಮಃ - ಶಿವಲೋಕ ಪ್ರಾಪ್ತಿಯು, ನಾಸ್ತಿ - ಇಲ್ಲ. ಯಃ - ಆವನಾನೊಬ್ಬನು, ಭಕ್ತ್ಯಾ - ಭಕ್ತಿಯಿಂದ, ಪಂಚಾಕ್ಷರೇಣಾ - ಪಂಚಾಕ್ಷರಿಯಿಂದ, ಶಿವಂ - ಶಿವನನ್ನು, ಸಕೃತ್ - ಒಂದು ಬಾರಿ ಅರ್ಚಯೇತ್ - ಪೂಜಿಸುತ್ತಾ ಇದ್ದಾನು. ಅಸ್ಯಮಂತ್ರಸ್ಯ - ಈ ಮಂತ್ರದ, ಗೌರವಾತ್ - ಗುರುತ್ವ ದೆಸೆಯಿಂದ, ಶಿವಸ್ಥಾನಂ - ಕೈಲಾಸವನು, ಗಚ್ಛೇತ್ - ಐಯ್ದುವನು. ತಸ್ಮಾತ್ - ಅದು ಕಾರಣ, ತಪಾಂಶಿ - ತಪಸ್ಸುಗಳು, ಯಜ್ಞಾಶ್ಚ - ಯಜ್ಞಂಗಳು, ವ್ರತಾಂ - ವ್ರತಂಗಳು, ನಿಯಮಾಃ - ನಿತ್ಯಕರ್ಮಂಗಳು, ಏತೇ - ಇವು, ಪಂಚಾಕ್ಷರಾರ್ಚನಸ್ಯ - ಪಂಚಾಕ್ಷರಿ ಪೂಜೆಗೆ, ಕೋಟ್ಯಂಶೇನಾಪಿ - ಕೋಟಿಭಾಗೆಯೊಳಗೆ ಒಂದು ಭಾಗೆಯೊಡನೆ, ನೋಸಮಾಃ ಸರಿಯಿಲ್ಲಾ ।।೩೮।।

ಅಶುದ್ಧೋ ವಾ ವಿಶುದ್ಧೋ ವಾ ಸಕೃತ್ಪಂಚಾಕ್ಷರೇಣಯಃ
ಪೂಜಯೇತ್ಪತಿತೋವಾಪಿಮುಚ್ಯತೇ ನಾತ್ರ ಸಂಶಯಃ

ಅಶುದ್ಧೋ ವಾ - ಶುದ್ಧವಲ್ಲದಾತನಾದರೂ, ವಿಶುದ್ಧೋವಾ - ಶುದ್ಧವುಳ್ಳಾತ ನಾದರೂ, ಪತಿತೋವಾ - ಭ್ರಷ್ಟನಾದರೂ ಯಃ - ಆವನಾನೊಬ್ಬನು, ಪಂಚಾಕ್ಷರೇಣ - ಪಂಚಾಕ್ಷರಿ ಮಂತ್ರದಿಂದ, ಸಕೃತ್ - ಒಂದು ಬಾರಿ, ಪೂಜಯೇತ್ - ಶಿವನ ಪೂಜಿಸುತ್ತಂ ಇದ್ದಾನು, ಸಃ - ಆತನು, ಮುಚ್ಯತೆ - ಮುಕ್ತನಹನು. ನಸಂಶಯಃ - ಸಂಹೇದವಿಲ್ಲ ।।೩೯।।

ಸಕೃದುಚ್ಚಾರ ಮಾತ್ರೇಣ ಪಂಚಾಕ್ಷರ ಮಹಾಮನೋಃ
ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋ ಭವೇತ್

ಅನ್ಯೇಪಿ ಬಹವೋಮಂತ್ರಾವಿದ್ಯಂತೇ ಸಕಲಾಗಮೇ
ಭೂಯೋಭೂಯಃ ಸಮಾಭ್ಯಾಸಃ ಪುರುಷಾರ್ಥ ಪ್ರದಾಯಿನಃ

ಪಂಚಾಕ್ಷರ ಮಹಾಮನೋಃ - ಪಂಚಾಕ್ಷರ ಮಂತ್ರವನು, ಸಕೃದುಚ್ಚಾರ ಮಾತ್ರೇಣ - ಒಂದು ಬಾರಿ ಉಚ್ಚರಿಸಿದ ಮಾತ್ರದಿಂದ, ಸರ್ವೇಷಾಂ ಜಂತೂನಾಂ - ಸಮಸ್ತ

ಪ್ರಾಣಿಗಳಿಗೆ, ಸರ್ವಪಾಪಕ್ಷಯೋಭವೇತ್ - ಸಮಸ್ತ ಪಾಪಕ್ಷಯವಹುದು, ಅನ್ಯೇ - ಉಳಿದಂಥಾ, ಬಹವೋ ಮಂತ್ರಾಃ - ಅನೇಕ ಮಂತ್ರಂಗಳನು, ಸಕಲಾಗಮ - ಸಮಸ್ತಾಗಮಂಗಳಲ್ಲಿ, ವಿದ್ಯತೆ - ಇರುತ್ತಂ ಇರ್ದವು, ತೇಷಾಂ - ಆ ಮಂತ್ರಗಳ, ಭೂಯೋಭೂಯಃ - ಅಡಿಗಡಿಗೆ, ಸಮಭ್ಯಾಸಃ - ಮಾಡುವ ಜಪವು, ಪುರುಷಾರ್ಥಃ - ಪುರುಷಾರ್ಥವನು ಕೊಡುವುದು ಎಂದು ಪಂಚಾಕ್ಷರಿ ಮಂತ್ರಕ್ಕೂ ಉಳಿದ ಮಂತ್ರಗಳಿಗೂ ಅನೇಕ ಭೇದವುಂಟು ॥೪೧॥

ಏಷ ಮಂತ್ರೋ ಮಹಾಶಕ್ತಿರೀಶ್ವರಃ ಪ್ರತಿಪಾದಕಃ
ಸಕೃದುಚ್ಚಾರಣಾದೇವ ಸರ್ವಸಿದ್ಧಿ ಪ್ರದಾಯಕಃ

ಈಶ್ವರಃ ಪ್ರತಿಪಾದಕಃ - ಶಿವನನ್ನು ಹೇಳುವಂಥಾ, ಮಹಾಶಕ್ತಿಃ - ಶಿವ ವಿಷಯವಾದ ಮುಖ್ಯ ಶಕ್ತಿಯನುಳ್ಳಂಥಾ, ಏಷಮಂತ್ರಃ - ಈ ಮಂತ್ರವು, ಸಕೃದುಚ್ಚಾರಣಾ ದೇವಾ - ಒಂದು ಬಾರಿ ಉಚ್ಚರಿಸಿದ ಮಾತ್ರದಲ್ಲಿ, ಸರ್ವಸಿದ್ಧಿ ಪ್ರದಾಯಕಃ - ಸಮಸ್ತ ಸಿದ್ಧಿಯನು ಕೊಡುವುದು ॥೪೨॥

ಪಂಚಾಕ್ಷರೀಂ ಸಮುಚ್ಚಾರ್ಯ ಪುಷ್ಪಂ ಲಿಂಗೇವಿನಿಕ್ಷಿಪೇತ್
ಯಸ್ತಸ್ಯ ವಾಜಪೇಯಾನಾಂ ಸಹಸ್ರಫಲಮಿಷ್ಯತೇ

ಯಃ - ಆವನಾನೊಬ್ಬನು, ಪಂಚಾಕ್ಷರೀಂ - ಪಂಚಾಕ್ಷರಿ ಮಂತ್ರವನು, ಸಮುಚ್ಚಾರ್ಯ್ಯ - ಉಚ್ಚರಿಸಿ, ಪುಷ್ಪಂ - ಪುಷ್ಪವನು, ಲಿಂಗೇ - ಶಿವಲಿಂಗದಲ್ಲಿ, ವಿನಿಕ್ಷಿಪೇತ್ - ಸಮರ್ಪಿಸುತ್ತಿದ್ದನು. ತಸ್ಯ - ಆತಂಗೆ, ವಾಜಪೇಯಾನಾಂ - ವಾಜಪೇಯವೆಂಬ ಯಜ್ಞದ, ಸಹಸ್ರಫಲಂ ಸಾವಿರ ಯಜ್ಞಂಗಳ ಫಲವು, ಈಷ್ಯತೆ - ಉಂಟಹುದು ॥೪೩॥

ಅಗ್ನಿಹೋತ್ರಂ ತ್ರಯೋವೇದಾಃ ಯಜ್ಞಾಶ್ಚಬಹುದಕ್ಷಿಣಾಃ
ಪಂಚಾಕ್ಷರ ಜಪಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ

ಅಗ್ನಿಹೋತ್ರಂ - ಅಗ್ನಿಹೋತ್ರವು, ತ್ರಯೋವೇದಃ - ಮೂರು ವೇದಂಗಳು, ಬಹುದಕ್ಷಿಣಾಃ - ಅನೇಕ ದಕ್ಷಿಣೆಯನುಳ್ಳಂಥಾ, ಯಜ್ಞಶ್ಚ - ಯಜ್ಞಂಗಳು, ಪಂಚಾಕ್ಷರಿ ಜಪಸ್ಯ - ಶಿವಪಂಚಾಕ್ಷರಿ ಜಪದ, ಕೋಟ್ಯಂಶನಾಪಿ - ಕೋಟಿ ಭಾಗೆಯೊಳೊಂದು ಭಾಗೆಗೂ, ನೋಸಮಃ - ಸರಿಯಲ್ಲ ॥೪೪॥

ಪುರಾ ಸಾನಂದಯೋಗೀಂದ್ರಶ್ಶಿವಜ್ಞಾನಪರಾಯಣಃ
ಪಂಚಾಕ್ಷರಂ ಸಮುಚ್ಚಾರ್ಯ ನಾರಕಾನುದತಾರಯತ್

ಪಂಚಾಕ್ಷರಿ ಮಹತ್ತ್ವದ ಮಂತ್ರಕ್ಕೆ ಸಮ್ಮತ್ರಿಯನು ಹೇಳುತಿರ್ದಪಂ.

ಪುರಾ - ಪೂರ್ವದಲ್ಲಿ, ಸಾನಂದಯೋಗೀಂದ್ರಃ - ಸಾನಂದ ಮಹಾಮುನೀಶ್ವರನು, ಶಿವಜ್ಞಾನ ಪರಾಯಣಃ - ಶಿವಜ್ಞಾನ ತತ್ಪರನಾಗಿ, ಪಂಚಾಕ್ಷರಂ - ಪಂಚಾಕ್ಷರಿ ಮಂತ್ರವನು, ಸಮುಚ್ಚಾರ್ಯೇ - ಲೇಸಾಗಿ ಉಚ್ಚರಿಸಿ, ನಾರಕಾನೌ - ನರಕದಲ್ಲಿರ್ದಂಥವರುಗಳನು, ಉದತಾರಯತ್ - ಉದ್ಧರಿಸಿದನು, ತೃವೃ ವನಕರಣಯೋಃ ॥೪೫॥

ಸಿದ್ಧ್ಯಾ ಪಂಚಾಕ್ಷರಸ್ಯಾಸ್ಯ ಸದಾನಂದಃ ಪುರಾಮುನಿಃ
ನರಕಂ ಸ್ವರ್ಗಮಕರೋತ್ ಸಂಗಿರಸ್ಯಾಪಿ ಪಾಪಿನಃ

ಸದಾನಂದಃ - ಸದಾನಂದನೆಂಬ, ಮುನಿಃ - ಮುನೀಶ್ವರನು, ಪುರಾ - ಪೂರ್ವದಲ್ಲಿ, ಪಂಚಾಕ್ಷರಸ್ಯ - ಪಂಚಾಕ್ಷರಿ ಮಂತ್ರದ, ಸಿದ್ಧ್ಯಾ - ಸಿದ್ಧಿಯಿಂದ, ಪಾಪಿನಃ - ಪಾಪಿಷ್ಟನಾಗಿರ್ದಂಥಾ, ಸಂಗಿರಸ್ಯ - ಸಂಗಿರನ, ನರಕಂ - ನರಕವನು, ಸ್ವರ್ಗಮಕರೋತ್ - ಸ್ವರ್ಗವಾಗಿ ಮಾಡಿದನು ॥೪೬॥

ಉಪಮನ್ಯುಃ ಪುರಾಯೋಗೀ ಮಂತ್ರೇಣಾನೇನ ಸಿದ್ಧಿಮಾನ್
ಲಬ್ಧವಾನ್ಪರಮೇಶಾನಾತ್ ಶೈವಶಾಸ್ತ್ರ ಪ್ರವಕ್ತೃತಾಂ

ಪುರಾ - ಪೂರ್ವದಲ್ಲಿ, ಉಪಮನ್ಯುಃ - ಉಪಮನ್ಯುವೆಂಬಂಥಾ, ಮಹಾಯೋಗಿಃ - ಯೋಗೀಶ್ವರನು, ಅನೇನ ಮಂತ್ರೇಣ - ಈ ಮಂತ್ರದಿಂದ, ಸಿದ್ಧಿಮಾನ್ - ಸಿದ್ಧಿಯನ್ನುಳ್ಳಾತನಾಗಿ, ಪರಮೇಶಾನಾತ್ - ಪರಮೇಶ್ವರನ ದೆಸೆಯಿಂದ, ಶೈವಶಾಸ್ತ್ರ ಪ್ರವಕ್ತೃತಾಂ - ಶಿವಧರ್ಮಶಾಸ್ತ್ರ ಪ್ರವಕ್ತೃವನು, ಲಬ್ಧವಾನ್ - ಪಡೆದನು ॥೪೭॥

ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿಕರ್ಮಣಿ
ಮಂತ್ರಸ್ಯಾಸ್ಯೈವ ಮಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ

ಬ್ರಹ್ಮಾದೀನಾಂ - ಬ್ರಹ್ಮ ಮೊದಲಾದ, ದೇವಾನಾಂ - ದೇವತೆಗಳಿಗೆ, ಜಗತ್ಸೃಷ್ಟ್ಯಾದಿ ಕರ್ಮಣಿ - ಜಗತ್ತಿನ ಸೃಷ್ಟಿ ಮೊದಲಾದ ಕರ್ಮಂಗಳಲ್ಲಿ, ಸಾಮರ್ಥ್ಯಂ - ಶಕ್ತಿಯು, ಅಸ್ಯಮಂತ್ರಸ್ಯ - ಈ ಮಂತ್ರದ, ಮಹಾತ್ಮ್ಯಾತ್ - ಮಹಿಮೆಯಿಂದ, ಉಪಜಾಯತೇ - ಉಂಟಾಯಿತು ॥೪೮॥

ವಶಿಷ್ಠ ವಾಮದೇವಾದ್ಯಾಃ ಮುನಯೋ ಮುಕ್ತ ಕಿಲ್ಬಿಷಾಃ
ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋಽಭವೇತ್

ವಶಿಷ್ಠವಾಮದೇವಾದ್ಯಃ - ವಶಿಷ್ಠ ವಾಮದೇವ ಮೊದಲಾಗಿರ್ದಂಥಾ, ಮುಕ್ತ ಕಿಲ್ಬಿಷಃ - ನಿಷ್ಪಾಪರರಾಗಿರ್ದಂಥಾ, ಮುನಯಃ - ಮುನೀಶ್ವರರೂ, ಅನೇನ ಮಂತ್ರೇಣ - ಈ ಮಂತ್ರದಿಂದ, ಸಂಸಿದ್ಧಾಃ - ಸಿದ್ಧರಾಗಿ, ಮಹಾತೇಜಸ್ವಿನೋಽಭವೇತ್ - ಮಹಾತೇಜಸ್ಸುನ್ನಳ್ಳಂಥವರಾದರೂ ॥೪೯॥

ಕಿಮಿ ಹ ಬಹುಭಿರುಕ್ತೈರ್ಮಂತ್ರಮೇವಂ ಮಹಾತ್ಮಾ
ಪ್ರಣವ ಸಹಿತಮಾದೌಯುಸ್ತು ಪಂಚಾಕ್ಷರಾಖ್ಯಂ

ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸಗತದುರಿತಬಂಧೋ ಮೋಕ್ಷಲಕ್ಷ್ಮೀ ಪ್ರಯಾತಿ

ಪಂಚಾಕ್ಷರಿ ಮಹತ್ವವನು ಅಂತರವಾಗಿ ಹೇಳಿ ಕಡೆಗಾಣದೆ ಉಪಸಂಹರಿ ಸುತಿರ್ದಪಂ

ಬಹುಭಿಃ - ಅನೇಕವಾಗಿರ್ದಂಥಾ, ಉಕ್ತೈಃ - ವಾಕ್ಯಗಳಿಂದ, ಕಿಂ - ಏನು ಪ್ರಯೋಜನ, ಯಃ - ಅವನಾನೊಬ್ಬನು, ದೇವದೇವಂ, ಪರಮೇಶ್ವರನನು, ಪೂಜಯತ್ - ಪೂಜಿಸುತ್ತ, ಆದೌ - ಮೊದಲು, ಪ್ರಣವಸಹಿತಂ - ಪ್ರಣವ ಸಹಿತವಾಗಿರ್ದಂಥಾ, ಪಂಚಾಕ್ಷರಾಖ್ಯಂ - ಪಂಚಾಕ್ಷರಿ ಎಂದು ಹೆಸರನುಳ್ಳಂಥಾ, ಏವಂ ಮಂತ್ರಂ - ಈ ಮಂತ್ರವನು, ಪರಮಭಕ್ತ್ಯಾ - ಅತ್ಯಂತ ಭಕ್ತಿಯಿಂದ, ಜಪತೀ - ಜಪಿಸುತ್ತಿದ್ದನು. ಮಹಾತ್ಮ - ಮಹಾಪುರುಷನಾಗಿರ್ದಂಥಾ, ಸಃ - ಆತನು, ಗತದುರಿತ ಬಂಧಃ - ಕ್ಷೀಣವಾದ ಪಾಪವೆಂಬ ಬೋಧವನ್ನುಳ್ಳಂಥಾತನಾಗಿ, ಮೋಕ್ಷಲಕ್ಷ್ಮೀಂ - ಮೋಕ್ಷವೆಂಬ ಸಂಪತ್ತನ್ನು, ಪ್ರಯಾತಿ - ಎಯ್ದುತ್ತಂ ಇಹನು ॥೫೦॥

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ ಭಕ್ತಸ್ಥಲೆ ಪಂಚಾಕ್ಷರಿ ಪ್ರಸಂಗೋನಾಮ ಅಷ್ಟಮಪರಿಚ್ಛೇದಃ

ನವಮಪರಿಚ್ಛೇದ

೯. ಭಕ್ತಮಾರ್ಗಕ್ರಿಯಾಸ್ಥಲ

ರೇಣುಕಾ ಉವಾಚ

> **ಭೂತಿರುದ್ರಾಕ್ಷಸಂಯುಕ್ತೋ ಲಿಂಗಧಾರೀ ಸದಾ ಶುಚಿಃ**
> **ಪಂಚಾಕ್ಷರ ಜಪೋದ್ಯೋಗಿ ಶಿವಭಕ್ತಂ ಇತಿ ಸ್ಮೃತಃ**

ಭಕ್ತಿಯಿಂದ ಶಿವನ ಪೂಜಿಸಬೇಕೆಂದು ಹಿಂದಣ ಪರಿಚ್ಛೇದದ ಕಡೆಯಲ್ಲಿ ಹೇಳಿದನು. ಆ ಭಕ್ತಿ ಸ್ವರೂಪವನು ಈ ಪರಿಚ್ಛೇದದ ಮೊದಲಲ್ಲಿ ಹೇಳುತಿರ್ದಪಂ

ಭೂತಿರುದ್ರಾಕ್ಷ ಸಂಯುಕ್ತ - ವಿಭೂತಿ ರುದ್ರಾಕ್ಷಧಾರಣವನುಳ್ಳಂಥಾ, ಲಿಂಗಧಾರೀ - ಲಿಂಗಧಾರಣವನುಳ್ಳಂಥಾ, ಸದಾಶುಚಿಃ - ಆವಾಗಲೂ ಪವಿತ್ರನಾಗಿರ್ದಂಥಾ, ಪಂಚಾಕ್ಷರ ಜಪೋದ್ಯೋಗೀ - ಪಂಚಾಕ್ಷರ ಜಪದಲ್ಲಿ ಶಕ್ತನಾದಂಥಾತನು, ಶಿವಭಕ್ತ ಇತಿ - ಶಿವಭಕ್ತನೆಂದು, ಸ್ಮೃತಃ - ಹೇಳಲ್ಪಡುವನು ॥೧॥

> **ಶ್ರವಣಂ ಕೀರ್ತನಂ ಶಂಭೋಸ್ಸ್ಮರಣಂ ಪಾದಸೇವನಂ**
> **ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ**
>
> **ಏವಂ ನವವಿಧಾಭಕ್ತಿಃ ಪ್ರೋಕ್ತಾದೇವೇನ ಶಂಭುನಾ**
> **ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಂ**

ಭಕ್ತಿ ಭೇದಗಳನು ಹೇಳುತಿರ್ದಪಂ

ಶಂಭೋಃ - ಶಿವನ, ಶ್ರವಣಂ - ಶಿವಕಥಾಶ್ರವಣ, ಕೀರ್ತನಂ - ಶಿವನಾಮ ಕೀರ್ತನ, ಸ್ಮರಣಂ - ಶಿವಧ್ಯಾನ, ಪಾದಸೇವನಂ - ಶಿವನ ಶ್ರೀಪಾದ ಸೇವೆ, ಅರ್ಚನಂ - ಶಿವಪೂಜೆ, ವಂದನಂ - ನಮಸ್ಕಾರ, ದಾಸ್ಯಂ - ಭೃತ್ಯಭಾವನೆ, ಸಖ್ಯಂ - ಶಿವನೆ ತನಗೆ ಸಖೀಯನೆಂಬ ಭಾವನೆ, ಆತ್ಮನಿವೇದನಂ - ಶಿವನಿಗೆ ತನ್ನ ಸಮರ್ಪಿಸುವೆನೆಂಬ, ಏವಂ - ಈ ಪ್ರಕಾರದಲ್ಲಿ, ನವವಿಧಾ - ಒಂಬತ್ತು ಪ್ರಕಾರವಾಗಿರ್ದಂಥಾ, ಭಕ್ತಿಃ - ಭಕ್ತಿಯು, ಲೋಕೇ - ಲೋಕದಲ್ಲಿ, ಪಾಪಿನಾ - ಪಾಪಿಷ್ಟರಿಂದ, ದುರ್ಲಭ - ಪಡೆಯಲು ಶಕ್ಯವಿಲ್ಲದೆ ಇರ್ದಂಥಾದ್ದು, ಪುಣ್ಯ ಕರ್ಮಣಾ - ಧರ್ಮಿಷ್ಠನಿಂದ, ಸುಲಭ - ಪಡೆಯಲು ಶಕ್ಯವಾಗಿರ್ದಂಥಾದ್ದು, ಇತಿ - ಹೀಗೆಂದು, ದೇವದೇವೇನ - ದೇವತೆಗಳಿಗೆ ಒಡೆಯನಾಗಿರ್ದಂಥಾ, ಶಂಭುನಾ - ಶಿವನಿಂದ, ಪ್ರೋಕ್ತಂ - ಹೇಳಲ್ಪಟ್ಟಿತು ॥೩॥

> **ಅಧಮೇಚೋತ್ತಮೇವಾಪಿ ಯತ್ರಕುತ್ರ ಚಿದೂರ್ಜಿತಾ**
> **ವರ್ತ್ತತೆ ಶಾಂಕರೀಭಕ್ತಿಸ್ಸಧ್ಭಕ್ತ ಇತಿ ಗೀಯ್ಯತೇ**

ಅಧಮೇ - ನೀಚನಾದರೂ, ಉತ್ತಮೇವಾಪಿ - ಉತ್ತಮನಾದರೂ, ಯತ್ರಕುತ್ರಚಿತ್ - ಆವ ಪುರುಷರಲ್ಲಿ ಆದರೂ, ಊರ್ಜಿತಾಃ - ಉತ್ಕೃಷ್ಟವಾಗಿರ್ದಂಥಾ,

ಶಾಂಕರೀ - ಶಿವನ ವಿಷಯವಾಗಿರ್ದಂಥಾ, ಭಕ್ತಿಃ - ಭಕ್ತಿಯು, ವರ್ತತೆ - ವರ್ತಿಸುತ್ತಂ ಇದ್ದಿತು. ಸಃ - ಆತನು, ಭಕ್ತ ಇತಿ - ಭಕ್ತನೆಂದು, ಗೀಯ್ಯತೇ - ಹೇಳಲ್ಪಡುವನು ॥೪॥

ಭಕ್ತಿಸ್ಥಿರೀಕೃತಾಯಸ್ಮಿನ್ ಮ್ಲೇಚ್ಛಾದಿ ದ್ವಿಜಸತ್ತಮೇ
ಶಂಭೋಃ ಪ್ರಿಯಸ್ಸವಿಪ್ರಶ್ಚನಪ್ರಿಯೋ ಭಕ್ತಿವರ್ಜಿತಃ

ದ್ವಿಜಸತ್ತಮೇ - ಎಲೈಬ್ರಾಹ್ಮಣೋತ್ತಮನೆ, ಸ್ಥಿರೀಕೃತ - ಸ್ಥಿರವಾಗಿ ಮಾಡಲ್ಪಟ್ಟ, ಭಕ್ತಿಃ - ಭಕ್ತಿಯು, ಮ್ಲೇಚ್ಛೇತಿ - ಮ್ಲೇಚ್ಛನಾದರೂ, ಯಸ್ಮಿನ್ - ಆವನೋರ್ವನಲ್ಲಿ, ಇರುತ್ತಂ - ಇದ್ದಿತು, ಸಃ - ಆತನು, ಶಂಭೋಃ - ಶಿವನಿಗೆ, ಪ್ರಿಯಃ - ಇಷ್ಟನು, ವಿಪ್ರಶ್ಚ - ಬ್ರಾಹ್ಮಣನಾದರೂ, ಭಕ್ತಿವರ್ಜಿತಃ - ಭಕ್ತಿ ಇಲ್ಲದಿದ್ದರೆ, ನಪ್ರಿಯ - ಶಿವನಿಗೆ ಇಷ್ಟನಲ್ಲ ॥೫॥

ಸಾಭಕ್ತಿರ್ದ್ವಿವಿಧಾಜ್ಞೇಯಾ ಬಾಹ್ಯಾಭ್ಯಂತರ ಭೇದತಃ
ಬಾಹ್ಯಸ್ಥೂಲಾಂತರಾ ಸೂಕ್ಷ್ಮಾ ವೀರಮಾಹೇಶ್ವರಾದೃತಾ

ಆ ಭಕ್ತಿ ಉಭಯ ವಿಧವಾಗಿರುವುದೆಂದು ಹೇಳುತಿರ್ದಪಂ

ಸಾಭಕ್ತಿ - ಆ ಶಿವಭಕ್ತಿಯು, ಬಾಹ್ಯಾಭ್ಯಾಂತರ ಭೇದತಃ - ಬಾಹ್ಯ ಅಭ್ಯಂತರವೆಂಬ ಭೇದಕದಿಂದ, ದ್ವಿವಿಧಾಜ್ಞೇಯಾ - ಎರಡು ಪ್ರಕಾರವೆಂದು ಅರಿಯಬೇಕು. ಸ್ಥೂಲ - ಸ್ಥೂಲವಾದ ಭಕ್ತಿಯು, ಬಾಹ್ಯ - ಬಾಹ್ಯವೆನಿಸುವುದು ವೀರಮಾಹೇಶ್ವರಾರ್ಚಿತಾ - ವೀರಮಾಹೇಶ್ವರರೆಂಬ ಭಕ್ತರಿಗೆ, ಸಮ್ಮತವಾಗಿರ್ದಂಥಾ, ಸೂಕ್ಷ್ಮಂ - ಸೂಕ್ಷ್ಮ ಭಕ್ತಿಯು, ಅಂತರ - ಅಂತರವೆನಿಸುವುದು ॥೬॥

ಸಿಂಹಾಸನೇ ಶುದ್ಧದೇಶೇ ಸುರಮ್ಯೇ ರತ್ನ ಚಿತ್ರಿತೇ
ಶಿವಲಿಂಗಸ್ಯ ಪೂಜಾಯಾ ಸಾಬಾಹ್ಯಾ ಭಕ್ತಿರುಚ್ಯತೇ

ಬಾಹ್ಯಭಕ್ತಿ ಸ್ವರೂಪವನು ಹೇಳುತ್ತಿದ್ದನು.

ಸುರಮ್ಯೇ-ಸಮಸ್ಥಲವಾಗಿ ಒಪ್ಪುತ್ತಿರ್ದಂಥಾ, ಶುದ್ಧದೇಶೇ - ನಿರ್ಮಲ ಸ್ಥಲದಲ್ಲಿ, ರತ್ನಚಿತ್ರಿಕೇ - ರತ್ನಖಚಿತವಾಗಿರ್ದಂಥಾ ಸಿಂಹಾಸನದಲ್ಲಿ, ಶಿವಲಿಂಗಸ್ಯ - ಶಿವಲಿಂಗದ, ಪೂಜಾಯ - ಆವುದಾನೊಂದು ಪೂಜೆಯುಂಟು ಸಾ - ಅದು, ಬಾಹ್ಯಭಕ್ತಿ - ಬಾಹ್ಯ ಎಂದು, ಉಚ್ಯತೇ - ಹೇಳಲ್ಪಡುವುದು ॥೭॥

ಲಿಂಗೇಪ್ರಾಣಂ ಸಮಾಧಾಯಾೂ ಪ್ರಾಣೇಲಿಂಗಂತು ಶಾಂಭವಂ
ಸ್ವಸ್ಥ ಮನಸ್ತಥಾ ಕೃತ್ವಾ ನ ಕಿಂಚಿಚ್ಚಿಂತಯೇದ್ಯದಿ

ಸ್ವಾಭ್ಯಂತರಭಕ್ತಿರಿತಿ ಪ್ರೋಚ್ಯತೇ ಶಿವಯೋಗಿಭಿಃ
ಸಾಯಸ್ಮಿನ್ವರ್ತತೆ ತಸ್ಯಜೀವನಂ ಭೃಷ್ಟಬೀಜವತ್

ಸೂಕ್ಷ್ಮಭಕ್ತಿಯ ಲಕ್ಷಣವ ಹೇಳುತಿರ್ದಪಂ

ಲಿಂಗೇ - ಲಿಂಗದಲ್ಲಿ, ಪ್ರಾಣಂ - ಪ್ರಾಣವನು, ಸಮಾದಾಯಾ - ಭಾವಿಸಿ, ಪ್ರಾಣೇ - ತನ್ನ ಪ್ರಾಣದಲ್ಲಿ, ಶಾಂಭವಂ - ಶಿವನ ಸಂಬಂಧವಾಗಿರ್ದಂಥಾ, ಲಿಂಗಂ - ಲಿಂಗವನು, ಸಮಾದಾಯ - ಇರಿಸಿಕೊಂಡು, ತಥಾ ಮನಃ - ಆ ಮನುಷ್ಯನು, ಸ್ವಸ್ಥಂಕೃತ್ವಾ - ಸ್ಥಿರವಾಗಿ ಮಾಡಿ, ಯದೀ - ಎತ್ತಲಾನು, ಕಿಂಚಿತ್ - ಒಂದು ವಸ್ತುವನು, ನ ಚಿಂತಯೇತ್ - ವಿಚಾರಿಸದೆ ಇದ್ದರೆ, ಸಾಭಕ್ತಿ - ಆ ಭಕ್ತಿಯು, ಶಿವಯೋಗಿಭಿಃ - ಶಿವಯೋಗಿಗಳಿಂದ, ಅಭ್ಯಂತರ ಭಕ್ತಿರಿತಿ - ಅಭ್ಯಂತರ ಭಕ್ತಿ ಎಂದು, ಪ್ರೋಚ್ಯತೆ - ಹೇಳಲ್ಪಡುತ್ತಿಹುದು. ಸಾ - ಆ ಭಕ್ತಿಯು, ಯಸ್ಮಿನ್ - ಆವವನಲ್ಲಿ, ವರ್ತತೇ - ಇರುತ್ತಿದ್ದೀತು, ತಸ್ಯ - ಆತನ, ಜೀವನಂ - ಜೀವನವು, ಭೃಷ್ಟಬೀಜವತ್ - ಹುರಿದ ಬೀಜದ ಮರ್ಯಾದೆಯಲ್ಲಿ ಮರಳಿ ಹುಟ್ಟದೆಂಬುದರ್ಥಾ ॥೯॥

> ಬಹುನಾತ್ರಕಿಮುಕ್ತೇನ ಗುಹ್ಯಾದ್ಗುಹ್ಯತರಾ ಪರಂ
> ಶಿವಭಕ್ತಿರ್ನಸಂದೇಹಸ್ತಯಾ ಯುಕ್ತೋ ವಿಮುಚ್ಯತೇ

ಅತ್ರ - ಇಲ್ಲಿ, ಬಹುನಾತ್ರಕಿಮುಕ್ತೇನ-ಅನೇಕ ಮಾತಿನಿಂದ, ಕಿಂ - ಪ್ರಯೋಜನವೇನು, ಶಿವಭಕ್ತಿಃ - ಶಿವನಲ್ಲಿ ಭಕ್ತಿಯು, ಪರಂ - ವೆಗ್ಗಳವಾಗಿ, ಗುಹ್ಯಾತ್ - ರಹಸ್ಯದಿಂದಲೂ, ಗುಹ್ಯತರಂ - ಅತಿ ರಹಸ್ಯವಾಗಿರ್ದಂಥಾದು, ನ ಸಂಶಯಃ - ಸಂದೇಹವಿಲ್ಲ. ತಯಾ - ಆ ಭಕ್ತಿಯಿಂದ, ಯುಕ್ತಃ - ಕೂಡಿದವನು, ಮುಚ್ಯತೇ - ಮುಕ್ತನಹನು ॥೧೦॥

> ಪ್ರಸಾದಾದೇವ ಸಾಭಕ್ತಿಃ ಪ್ರಸಾದೋ ಭಕ್ತಿ ಸಂಭವಃ
> ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ

ಸಾಭಕ್ತಿಃ - ಆ ಭಕ್ತಿಯು, ಪ್ರಸಾದಾದೇವ - ಶಿವನ ಕೃಪೆಯಲ್ಲುಂಟಹದು, ಪ್ರಸಾದಃ - ಶಿವನ ಕೃಪೆಯು, ಭಕ್ತಿ ಸಂಭವಃ - ಆ ಭಕ್ತಿಯಿಂದಲೂ ಉಂಟಹುದು. ಅಲ್ಲಿ ದೃಷ್ಟಾಂತವನು ಹೇಳುತ್ತಂ ಇದ್ದನು. ಯಥಾ - ಆವ ಪ್ರಕಾರದಲ್ಲಿ, ಅಂಕುರತಃ - ಅಂಕುರದ ದೆಸೆಯಿಂದ, ಬೀಜಃ - ಬೀಜ ಹುಟ್ಟುವುದು, ಬೀಜತಃ - ಆ ಬೀಜದ ದೆಸೆಯಿಂದ, ಅಂಕುರಂ - ಅಂಕುರವು, ಯಥಾ - ಹೇಂಗೆ, ತಥಾ - ಹಾಂಗೆ ॥೧೧॥

> ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ
> ನೈವಸಾಶಕ್ಯತೇ ಪ್ರಾಪ್ತುಂ ನರೈರೇಕೇನ ಜನ್ಮನಾ

ಪ್ರಸಾದ ಪೂರ್ವಿಕಾ - ಶಿವನ ಕೃಪೆಯಿಂದ ಹುಟ್ಟುವಂಥಾ, ಮುಕ್ತಿದಾಯಿನೀ - ಮೋಕ್ಷವನು ಕೊಡುವಂಥಾ, ಯೇಯಂ ಭಕ್ತಿಃ - ಆವುದಾನೊಂದು ಭಕ್ತಿಯುಂಟು, ಸಾ - ಆ ಭಕ್ತಿಯು, ನರೈಃ - ಮನುಷ್ಯರಿಂದ, ಏಕೇನ ಜನ್ಮೇನಾ - ಒಂದು ಜನ್ಮದಿಂದ, ಪ್ರಾಪ್ತಂ - ಪಡೆಯಲು, ನೈವ ಶಕ್ಯತೆ - ಶಕ್ಯವಲ್ಲ ॥೧೨॥

> ಅನೇಕ ಜನ್ಮ ಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ
> ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರಃ
> ಪ್ರಸನ್ನೇ ಸತಿ ಮುಕ್ತೋಽಭೂತ್ ಮುಕ್ತಃ ಶಿವ ಸಮೋಭವೇತ್

ಅನೇಕ ಜನ್ಮ ಸಿದ್ಧಾನಾಂ - ಅನೇಕ ಜನ್ಮದ ಶಿವಪೂಜೆಯಿಂದ ಸಿದ್ಧರಾಗಿರ್ದಂಥಾ, ಪ್ರಬುದ್ಧಾನಾಂ - ವಿವೇಕಿಗಳಾಗಿರ್ದಂಥವರುಗಳಿಗೆ, ಶ್ರೌತಾಸ್ಮಾರ್ತಾನುವರ್ತಿನಾಂ - ಶ್ರುತಿ ಸ್ಮೃತಿ ವಿಹಿತವಾದ ಕರ್ಮಾನುಷ್ಠಾನದಿಂದ ತತ್ಪರರಾಗಿರ್ದಂಥಾ, ವಿರಕ್ತಾನಾಂ - ವಿಷಯದಲ್ಲಿ ವಿರಕ್ತರಾಗಿರ್ದಂಥಾ, ಪ್ರಬುದ್ಧಾನಾಂ - ವಿವೇಕಿಗಳಾಗಿರ್ದಂಥವರುಗಳಿಗೆ, ಮಹೇಶ್ವರಃ - ಪರಮೇಶ್ವರನು, ಪ್ರಸೀದತಿ - ಪ್ರಸನ್ನನಹನು. ಪ್ರಸನ್ನೇಸತಿ - ಶಿವನು ಪ್ರಸನ್ನನಾದರೆ, ಮುಕ್ತೋಭೂತ್ - ಮುಕ್ತನಹನು, ಮುಕ್ತಸ್ಯ - ಮುಕ್ತನಾದಂಥಾತನು, ಶಿವಸಮೋಭವೇತ್ - ಶಿವನಿಗೆ ಸರಿಯಾಗಿಹನು ॥೧೪॥

ಅಲ್ಪಭಕ್ತ್ಯಾಪಿಯೋಮರ್ತ್ಯಸ್ತಸ್ಯಜನ್ಮತ್ರಯಾತ್ಪರಂ
ನಯೋನಿಯಂತ್ರಪೀಡಾವೈಭವೇನ್ನೈವಾತ್ರ ಸಂಶಯಃ

ಯೋಮರ್ತ್ಯ - ಆವನಾನೊಬ್ಬ ಮನುಷ್ಯನು, ಅಲ್ಪಭಕ್ತ್ಯಾಪಿ - ಅಲ್ಪವಾದ ಶಿವಭಕ್ತಿಯನ್ನುಳ್ಳವನಾದರೂ, ತಸ್ಯ - ಆತನಿಗೆ, ಜನ್ಮತ್ರಯಾತ್ - ಮೂರು ಜನ್ಮದ ದೆಸೆಯಿಂದ, ಪರಂ - ಮೇಲೆ, ಯೋನಿಯಂತ್ರಪೀಡಾವೈ - ಯೋನಿದ್ವಾರ ಪೀಡೆಗಳಾದ, ಭವಃ - ಸಂಸಾರವು, ನ - ಇಲ್ಲ, ಅತ್ರ - ಈ ವಿಷಯದಲ್ಲಿ, ನಸಂಶಯಃ - ಸಂದೇಹವಿಲ್ಲ ॥೧೫॥

ಲಿಂಗಾನುಗಾ ಚ ಯಾ ಸೇವಾ ಸಾ ಭಕ್ತಿರಿತಿಕಥ್ಯತೇ
ಸಾ ಪುನರ್ಭಿದ್ಯತೇ ತ್ರಿಧಾ ಮನೋವಾಕ್ಕಾಯ ಸಾಧನೈಃ

ಲಿಂಗಾನುಗಾ - ಶಿವವಿಷಯವಾಗಿರ್ದಂಥಾ, ಯಃಸೇವಾ-ಆವುದಾನೊಂದು ಸೇವೆಯುಂಟು, ಸಾ - ಅದು, ಭಕ್ತಿರಿತಿ - ಭಕ್ತಿ ಎಂದು, ಕಥ್ಯತೇ - ಹೇಳಲ್ಪಡುವುದು, ಸಾ - ಆ ಭಕ್ತಿಯು, ಪುನಃ - ಮರಳಿ, ಮನೋವಾಕ್ಕಾಯ ಸಾಧನೈಃ - ಮಾನಸ, ವಾಚಕ, ಕಾಯಕವೆಂಬ ಭೇದದಿಂದ, ತ್ರಿಧಾ - ಮೂರು ಪ್ರಕಾರವಾಗಿ, ಭಿದ್ಯತೇ - ಭಿನ್ನವಹುದು ॥೧೬॥

ಶಿವರೂಪಾದಿ ಚಿಂತಾಯಾ ಸಾಸೇವಾ ಮಾನಸೀಸ್ಮೃತಾಃ
ಜಪಾದಿ ವಾಚಿಕೀ ಸೇವಾ ಕರ್ಮ ಪೂಜಾ ಚ ಕಾಯಕೀ

ಮೂರು ಪ್ರಕಾರವಾದ ಭಕ್ತಿ ಸ್ವರೂಪವನು ಹೇಳುತಿರ್ದಪಂ

ಶಿವರೂಪಾದಿ ಚಿಂತಯಾ - ಶಿವನ ಮೂರ್ತಿಗಳು ಮೊದಲಾದ ಧ್ಯಾನ ಸ್ವರೂಪವಾಗಿರ್ದಂಥಾ, ಯಾಸೇವಾ - ಆವುದಾನೊಂದು ಸೇವೆಯುಂಟು, ಅದು ಮಾನಸೀಸ್ಮೃತಾಃ - ಮಾನಸಭಕ್ತಿ ಎನಿಸುವುದು. ಜಪಾಧಿಃ - ಪಂಚಾಕ್ಷರಿ ಜಪ ಮೊದಲಾದ ಸೇವೆಯು, ವಾಚಿಕೀ - ವಾಚಿಕ ಭಕ್ತಿ ಎನಿಸುವುದು. ಕರ್ಮ ಪೂಜಾ - ಗಂಧ ಪುಷ್ಪಾದಿಗಳಿಂದ ಹಸ್ತಮುಟ್ಟಿ ಮಾಡುವ ಶಿವನ ಪೂಜೆಯು, ಕಾಯಕೀ - ಕಾಯಕ ಭಕ್ತಿ ಎನಿಸುವುದು ॥೧೭॥

ಬಾಹ್ಯಮಭ್ಯಂತರಂಚೈವಾ ಬಾಹ್ಯಾಭ್ಯಾಂತರಮೇವವಾ
ವಾಙ್ಮನಃ ಕಾಯಭೇದಾಶ್ಚ ತ್ರಿಧಾತದ್ಭಜನಂ ವಿದುಃ

ಪ್ರಕಾರಾಂತರದಿಂದ ಭಕ್ತಿಭೇದವನು ಹೇಳುತ್ತಾ ವಾಙ್ಮನಃ ಕಾಯ ಭೇದಗಳನು ಹೇಳುತಿರ್ದಪಂ

ಬಾಹ್ಯಂ - ಬಾಹ್ಯ ಪೂಜೆ, ಅಭ್ಯಂತರಂ - ಅಭ್ಯಂತರ ಪೂಜೆ, ಬಾಹ್ಯಾಭ್ಯಾಂತರ ಮೇವವಾ - ಬಾಹ್ಯಾಭ್ಯಾಂತರ ಪೂಜೆ ಎಂದು, ತ್ರಿಧಾ - ಮೂರು ಪ್ರಕಾರವಾಗಿ, ವಾಙ್ಮನಃ ಕಾಯಭೇದಾಶ್ಚ - ವಾಕು ಮನಸ್ಸು ಕಾಯಕಗಳ ಭೇದದಿಂದ, ತದ್ಭಜನಂ - ಆ ಪೂಜೆಯು ತ್ರಿಧಾ - ಮೂರು ಪ್ರಕಾರವೆಂದು, ವಿದುಃ - ಹೇಳುವರು ॥೧೮॥

ಅನ್ಯಾತ್ಮ ವಿದಿತಂಬಾಹ್ಯಂ ಶಂಭೋರಭ್ಯರ್ಚನಾದಿಕಂ
ತ ದೇವತುಸ್ವಸಂವೇದ್ಯಮಾಭ್ಯಂತರಮುದಾಹೃತಂ

ಮನೋ ಮಹೇಶ ಪ್ರವಣಂ ಬಾಹ್ಯಾಭ್ಯಾಂತರಮುಚ್ಯತೇ

ಬಾಹ್ಯಾದಿ ಭಕ್ತಿಗಳಿಗೆ ಲಕ್ಷಣವನು ಹೇಳುತಿರ್ದಪಂ

ಅನ್ಯಾತ್ಮಕ ವಿದಿತಂ - ಧ್ಯಾನರಹಿತವಾಗಿರ್ದಂಥಾ, ಶಂಭೋರಭ್ಯರ್ಚನಾದಿಕಂ ಶಿವ ಪೂಜಾದಿಗಳು, ಬಾಹ್ಯಂ - ಬಾಹ್ಯ ಭಜನೆ ಎನಿಸುವುದು. ಸ್ವಸಂವೇದ್ಯಂ - ಮನೋವೇದ್ಯವಾಗಿ ಮಾಡುವ ಧ್ಯಾನ ಪೂಜೆಯು, ತದೇವತ್ - ಅದಾಯಿತ್ತಾದೊಡೆ, ಅಭ್ಯಂತರಮುದಾಹೃತಂ - ಅಭ್ಯಂತರ ಭಕ್ತಿ ಎನಿಸುವುದು, ಮಹೇಶ ಪ್ರವಣಂ-ಶಿವಧ್ಯಾನ ಮಂತ್ರ ಸ್ಮರಣ ಪೂರ್ವಕವಾಗಿ ಮಾಡುವಂಥಾ ಭಜನೆಯು, ಬಾಹ್ಯಾಭ್ಯಾಂತರಂ - ಬಾಹ್ಯಾಭ್ಯಾಂತರ ಭಕ್ತಿ ಎಂದು, ಉಚ್ಯತೇ - ಹೇಳಲ್ಪಡುವುದು ॥೨೦॥

ಶಿವನಾಮರತಾ ವಾಣೀ ವಾಙ್ಮತಾ ಚೈವನೇತರಾ
ಲಿಂಗೈಃ ಶಿವಸ್ಯ ಚೋದ್ದಿಷ್ಟೈ ಸ್ತ್ರಿಪುಂಡ್ರಾದಿಭಿರಂಕಿತಃ

ಶಿವೋಪಚಾರ ನಿರತಃ ಕಾಯಃ ಕಾಯೋ ನ ಚೇತರಃ

ಶಿವನಾಮರತಾ - ಶಿವನಾಮ ಕೀರ್ತನದಲ್ಲಿ ತತ್ಪರನಾಗಿರ್ದಂಥಾ, ವಾಣೀ - ವಾಗಿಂದ್ರಿಯವೂ, ವಾಙ್ಮತಿ - ವಾಕ್ಕೆಂದು ಸಮ್ಮತವು, ಇತರಾ ನ - ಉಳಿದ ವಾಕ್ಕು ವಾಕ್ಕಲ್ಲ, ಯತ್ - ಆವುದಾನೊಂದು, ಮನಃ - ಮನಸ್ಸು, ಸರ್ವದಾ - ಆವಾಗಲೂ, ಲಿಂಗಾಂಗಸಂಗಿ - ಶಿವನಲ್ಲಿ ಪ್ರೀತಿಯುಳ್ಳಂಥಾದ್ದು. ತದೇವ ಮನಃ - ಅದೀಗ ಮನಸ್ಸು, ನಾನನ್ಯತ್ - ಉಳಿದ ಮನಸ್ಸು ಮನಸ್ಸಲ್ಲ. ಉದ್ದಿಷ್ಟೈಃ - ಹಿಂದೆ ಹೇಳಿದಂಥಾ, ಶಿವಸ್ಯ ಲಿಂಗೈಃ - ಶಿವನ ಕುರುಹುಗಳಿಂದ, ತ್ರಿಪುಂಡ್ರಾದಿಭಿಃ - ತ್ರಿಪುಂಡ್ರಾದಿಗಳಿಂದ, ಅಂಕಿತಃ - ಕೂಡಿದಂಥಾ ಶಿವೋಪಚಾರ ನಿರತಃ - ಶಿವನ ಉಪಚಾರದಲ್ಲಿ ತತ್ಪರನಾಗಿರ್ದಂಥಾ, ಕಾಯಃ - ಶರೀರವು, ಕಾಯಃ - ಕಾಯವೆನಿಸುವುದು. ನಚೇತರಃ - ಉಳಿದ ಕಾಯ ವ್ಯರ್ಥ ಕಾಯವೆನಿಸುವುದು. ಈ ಪ್ರಕಾರವಾದ ವಾಙ್ಮನಃ ಕಾಯಗಳಿಂದ ಮಾಡುವಂಥಾ ಪೂಜೆಯು ವಾಚಕ ಕಾಯಕ ಮಾನಸ ಪೂಜೆ ಎನಿಸುವುದು ॥೨೧॥

ತಪಃ ಕರ್ಮ ಜಪೋಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಂ
ಪಂಚಧಾಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ

ಆ ಭಜನೆಯು ಪ್ರಕಾರಾಂತರದಿಂದ ಐದು ಭೇದವಾಗಿಹುದೆಂದು ಹೇಳುತಿರ್ದಪಂ

ತದೇವ ಭಜನಂ - ಆ ಶಿವನ ಪೂಜೆಯು, ಪುನಃ - ಮರಳಿ, ತಪಃ - ತಪಸ್ಸೆಂದು, ಕರ್ಮ - ಕರ್ಮವೆಂದು, ಜಪಃ - ಜಪವೆಂದು, ಧ್ಯಾನಂ - ಧ್ಯಾನವೆಂದು, ಜ್ಞಾನಂ ಚ - ಜ್ಞಾನವೆಂದು, ಇತಿ - ಈ ಪ್ರಕಾರದಲ್ಲಿ, ಪಂಚಧಾ - ಐದು ಪ್ರಕಾರವಾಗಿ, ಸದ್ಭಿಃ - ಸತ್ಪುರುಷರುಗಳಿಂದ, ಕಥ್ಯತೇ - ಹೇಳಲ್ಪಡುವುದು ||೨೩||

ಶಿವಾರ್ಚಕರ್ಮ ವಿಜ್ಞೇಯಂ ಬಾಹ್ಯಯಾಗಾದಿನೋಚ್ಯತೇ
ಶಿವಾರ್ಥೇ ದೇಹ ಸಂಶೋಷಸ್ತಪಃಕೃಚ್ಛ್ರಾದಿನೋ ಮತಂ

ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ
ರುದ್ರಾಧ್ಯಾಯಾಧಿಕಾಭ್ಯಾಸೋ ನ ವೇದಾಧ್ಯಯನಾದಿಕಂ

ಧ್ಯಾನಂ ಶಿವಸ್ವರೂಪಾದಿ ಚಿಂತಾನಾನ್ಯಾತ್ಮ ಚಿಂತನಂ
ಶಿವಾಗಮಾರ್ಥ ವಿಜ್ಞಾನಂ ಜ್ಞಾನಂ ನಾನ್ಯಾರ್ಥ ವೇದನಂ

ಇತಿ ಪಂಚ ಪ್ರಕಾರೋಽಯಂ ಶಿವ ಯಜ್ಞಃ ಪ್ರಕೀರ್ತಿತಃ
ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಂ

ಭಕ್ತ್ಯಾ ಪರಮಯಾಯುಕ್ತಸ್ಸರ್ವೈರ್ಭಕ್ತ ಇತೀರಿತಃ

ಶಿವಯಜ್ಞಕ್ಕೆ ಲಕ್ಷಣವ ಹೇಳುತಿರ್ದಪಂ

ಶಿವಾರ್ಚಯ - ಶಿವಪೂಜೆಯು, ಕರ್ಮವಿಜ್ಞೇಯಂ - ವೇದೋಕ್ತವಾದ ಕರ್ಮವೆಂದು ಅರಿಯಬೇಕು. ಬಾಹ್ಯಾಂ ಯಾಗಾದಿ ನೋಚ್ಯತೇ - ಉಳಿದ ಯಜ್ಞಾದಿ ಕರ್ಮವು ಉಚಿತವಲ್ಲವೆಂದು ಹೇಳಲ್ಪಡುವುದು. ಶಿವಾರ್ಥೇ - ಶಿವಕಾರ್ಯಾರ್ಥವಾಗಿ ದೇಹಸಂಶೋಷಃ - ಕಾಯಕ್ಲೇಶವು, ತಪಃ - ತಪವೆನಿಸುವುದು. ಕೃಚ್ಛ್ರಾದಿ - ಕೃಚ್ಛ್ರಾ ಚಾಂದ್ರಾಯಣಾದಿಗಳು, ಮನೋಮತಃ - ತಪಸ್ಸೆಂದು ಹೇಳಲ್ಪಡುವದು, ಪಂಚಾಕ್ಷರಾಭ್ಯಾಸಃ - ಶಿವಪಂಚಾಕ್ಷರಿ ಜಪವು, ಪ್ರಣವಭ್ಯಾಸಯೇವವಾ - ಪ್ರಣವಜಪ ತಾನು ಜಪವೆಂದು ಹೇಳಲ್ಪಡುವುದು. ರುದ್ರಾಧ್ಯಾಯಾದಿಕಾಭ್ಯಾಸ - ಶ್ರೀ ರುದ್ರ ದೀಕ್ಷೆಗಳ ಅಭ್ಯಾಸವು ಜಪವೆನಿಸುವುದು, ವೇದಾಧ್ಯಯನಾದಿಕಂ - ವೇದಾಧ್ಯಯನಾದಿಗಳು ಜಪವಲ್ಲ. ಶಿವಸ್ಯರೂಪಾದಿ ಚಿಂತಾ - ಶಿವಮೂರ್ತಿ, ಧ್ಯಾನಂ - ಧ್ಯಾನವೆನಿಸುವುದು, ಅನಾತ್ಮಚಿಂತನಂ - ಉಳಿದ ದೇವತಾಂತರ ಚಿಂತೆಯು, ನ ಧ್ಯಾನಂ - ಧ್ಯಾಸವಲ್ಲ. ಶಿವಾಗಮಾರ್ಥ ವಿಜ್ಞಾನಂ - ಶಿವಾಗಮಾರ್ಥಂಗಳ ಅರ್ಥಜ್ಞಾನವು, ಜ್ಞಾನಂ - ಜ್ಞಾನವೆನಿಸುವುದು. ಅನ್ಯಾರ್ಥವೇದನಂ - ಉಳಿದರ್ಥವನರಿವುದು. ನ ಜ್ಞಾನಂ - ಜ್ಞಾನವಲ್ಲ. ಇತಿ - ಈ ಪ್ರಕಾರದಲ್ಲಿ ಅಯಂ ಶಿವಜ್ಞಃ - ಈ ಶಿವ ಪೂಜೆಯು, ಪಂಚಪ್ರಕಾರಃ - ಕರ್ಮ ಮೊದಲಾದ ಐದು ಪ್ರಕಾರವೆಂದು, ಪ್ರಕೀರ್ತಿತಃ - ಹೇಳಲ್ಪಟ್ಟಿತು. ಯಃ - ಆವನಾನೊಬ್ಬನು, ಅನೇನ

ಪಂಚಯಜ್ಞೇನ - ಈ ಪ್ರಕಾರದಲ್ಲಿ ಐದು ವಿಧವಾದ ಪೂಜೆಯಿಂದ, ಶಂಕರಂ - ಪಾರ್ವತಿ ಪತಿಯನ್ನು, ಪೂಜಯಂತಿ - ಪೂಜಿಸುತಲಿದ್ದಾನು. ಪರಯಾ - ತೀವ್ರವಾಗಿರ್ದಂಥಾ, ಭಕ್ತ್ಯಾ - ಭಕ್ತಿಯಿಂದ, ಯುಕ್ತ - ಕೂಡಿರ್ದಂಥ, ಸಃ - ಆತನನು, ಶಿವಭಕ್ತ ಇತಿ - ಶಿವಭಕ್ತನು ಎಂದು, ಈರಿತಃ - ಹೇಳಲ್ಪಟ್ಟನು ॥೨೮॥

ಪೂಜನಾಚ್ಛಿವಭಕ್ತಸ್ಯ ಪುಣ್ಯಾಗತಿರವಾಪ್ಯತೇ
ಅವಮಾನಾನ್ಮಹಾ ಘೋರೋ ನರಕೋ ನಾತ್ರ ಸಂಶಯಃ

ಈ ಪ್ರಕಾರದಲ್ಲಿ ಭಕ್ತಿಸ್ವರೂಪವನು ವಿಸ್ತಾರವಾಗಿ ನಿರೂಪಿಸಿದ ನಂತರದಲ್ಲಿ ಭಕ್ತರುಗಳಾಚಾರವನು ಹೇಳುತ್ತಂ ಇದ್ದಾನು.

ಶಿವಭಕ್ತಸ್ಯ - ಶಿವಭಕ್ತನ, ಪೂಜನಾತ್ - ಪೂಜಿಸುವುದರಿಂದ, ಪುಣ್ಯಾ ಗತಿಃ - ಪುಣ್ಯವು, ಅಪ್ರಾಪ್ಯತೆ - ಐದಲು ಪಡುವುದು, ಅವಮಾನಾತ್ - ಶಿವಭಕ್ತರ ಅವಮಾನದ ದೆಸೆಯಿಂದ, ಮಹಾಘೋರಃ - ಅತ್ಯಂತ ಭಯಂಕರವಾಗಿರ್ದಂತಹ, ನರಕಃ - ನರಕವುಂಟಹುದು, ಅತ್ರ ನ ಸಂಶಯಃ - ಈ ಅರ್ಥದಲ್ಲಿ ಸಂದೇಹವಿಲ್ಲ ॥೨೯॥

ಶಿವಭಕ್ತೋ ಮಹಾತೇಜಾಶ್ಶಿವಭಕ್ತಿ ಪರಾಙ್ಮುಖಾನ್
ನ ಸ್ಪೃಶೇನ್ನೈವ ವೀಕ್ಷೇತ ನತೈಃ ಸಹವಸೇತ್ಕ್ವಚಿತ್

ಮಹಾತೇಜಾಃ - ತೇಜಸ್ವಿಯಾಗಿರ್ದಂಥಾ, ಶಿವಭಕ್ತಃ - ಶಿವಭಕ್ತನು, ಶಿವಭಕ್ತಿ ಪರಾಙ್ಮುಖಾನ್ - ಶಿವಭಕ್ತಿ ಇಲ್ಲದೆ ಇದ್ದಂಥವರುಗಳನು, ನ ಸ್ಪೃಶೇತ್ - ಮುಟ್ಟಲಾಗದು. ನೈವ ವೀಕ್ಷೇತ - ನೋಡಲಾಗದು, ತೈಸಹ - ಅವರ ಕೂಡೆ, ನಸವಸೇತ್ - ಇರಲಾಗದು ॥೩೦॥

ಯದಾದೀಕ್ಷಾ ಪ್ರವೇಶಸ್ಯಲ್ಲಿಂಗಧಾರಣಪೂರ್ವಕಃ
ತದಾ ಪ್ರಭೃತಿ ಭಕ್ತೋಽಸೌ ಪೂಜಯೇತ್ಸ್ವಾಗಮಸ್ಥಿತಾನ್

ಸ್ವಮಾರ್ಗಾಚಾರ ನಿರತೈಃ ಸಹವಾಸಂ ಸಮಾಚರೇತ್
ತೇಷಾ ಗೃಹೇಷು ಭುಂಜೀತ ನೇತರೇಷಾ ಕದಾಚನ

ಯದಾ - ಎಂದು ತೊಡಗಿ, ಭಕ್ತಃ - ಶಿವಭಕ್ತನು, ಸ್ವಾಗಮಸ್ಥಿತಾನ್ - ತನ್ನ ದರ್ಶನವರಿತು ಬಂದಂಥವರುಗಳನು, ಪೂಜಯೇತ್ - ಪೂಜಿಸಬೇಕು, ಸ್ವಮಾರ್ಗಾಚಾರ ನಿರತೈಃ - ತನ್ನಾಚಾರ ಮಾರ್ಗದಲ್ಲಿರುತ್ತಂ ಇದ್ದವರುಗಳೊಡನೆ, ಸಹವಾಸಂ ಸಮಾಚಾರೇತ್ - ಕೂಡಿರಬೇಕು. ತೇಷಾಂ - ಆ ಶಿವಭಕ್ತರುಗಳ, ಗೃಹೇಷು - ಮನೆಗಳಲ್ಲಿ, ಭುಂಜಿತ್ವಾ - ಭೋಜನವ ಮಾಡಬೇಕು, ಇತರೇಷಾಂ - ಉಳಿದವರ ಗೃಹದಲ್ಲಿ, ಕದಾಚನ - ಒಂದು ಬಾರಿಯು, ನ - ಭೋಜನವ ಮಾಡಲಾಗದು ॥೩೨॥

ಸ್ವಮಾರ್ಗಾಚಾರ ವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್

ಸ್ವಮಾರ್ಗಾಚಾರ ವಿಮುಖೈಃ - ವೀರಶೈವಾಚಾರದಲ್ಲಿ ತತ್ಪರರಲ್ಲದೆ ಇರ್ದಂಥಾ, ಭವಿಭಿಃ - ಶಿವದೀಕ್ಷಿತರಲ್ಲದ, ಪ್ರಾಕೃತಾತ್ಮಭಿಃ - ವಿಷಯಾಸಕ್ತರುಗಳಾದ ಜೀವರುಗಳಿಂದ, ಪ್ರೇಷಿತಂ - ಕೊಡಲ್ಪಟ್ಟಂಥಾ, ಸಕಲಂ ದ್ರವ್ಯಂ - ಸಮಸ್ತ ವಸ್ತುವನು. ಆತ್ಮಲೀನಮಪಿ - ತನ್ನ ಸಂಬಂಧವುಳ್ಳಂಥಾದರೂ, ತ್ಯಜೇತ್ - ಬಿಡಬೇಕು. ತ್ಯಜಹಾಸೌ ||೩೩||

ನಾರ್ಚಯೇದನ್ಯದೇವಾಂಸ್ತು ನ ಸ್ಮರೇ ನ ಚ ಕೀರ್ತಯೇತ್
ನ ತನ್ನಿವೇದ್ಯಮಶ್ನೀಯಾಚ್ಛಿವಭಕ್ತೋ ದೃಢವ್ರತಃ

ದೃಢವ್ರತಃ - ಸ್ಥಿರವಾದ ವ್ರತವನ್ನುಳ್ಳಂಥಾ, ಶಿವಭಕ್ತಃ - ಶಿವಭಕ್ತನು, ಅನ್ಯದೇವತಾನ್ - ಉಳಿದ ದೇವತೆಗಳನು, ನಾರ್ಚಯೇತ್ - ಪೂಜಿಸಲಾಗದು, ನ ಸ್ಮರೇತ್ - ನೆನೆಯಲಾಗದು. ನ ಚ ಕೀರ್ತಯೇತ್ - ಕೊಂಡಾಡಲಾಗದು, ತನ್ನಿವೇದ್ಯಂ - ಅನ್ಯದೇವತೆಗಳ ನಿವೇದ್ಯವನು, ನಾಶ್ನಿಯಾತ್ - ಭುಂಜಿಸಲಾಗದು ||೩೪||

ಯದ್ಗೃಹೇಷ್ವನ್ಯದೇವೋsಸ್ತಿ ತದ್ಗೃಹಾಣಿ ಪರಿತ್ಯಜೇತ್
ನಾನ್ಯ ದೇವಾರ್ಚಕಾನರ್ತ್ಯಾನ್ಪೂಜಾಕಾಲೇ ನಿರೀಕ್ಷಯೇತ್

ಯದ್ಗೃಹೇಷು - ಆವವು ಕೆಲವು ಗೃಹಂಗಳಲ್ಲಿ, ಅನ್ಯದೇವತಾಃ - ಶಿವನಿಂದ ಅನ್ಯವಾದ ದೇವತೆಗಳು, ಅಸ್ತಿ - ಉಂಟು, ತದ್ಗೃಹಾಣಿ - ಆ ಗೃಹಂಗಳನು, ಪರಿತ್ಯಜೇತ್ - ಹೋಗುವುದು ಬಿಡಬೇಕು. ಅನ್ಯದೇವರ್ಚಕಾನ್ - ಉಳಿದ ದೇವತೆಗಳನು ಪೂಜಿಸುವಂಥವರನು, ಪೂಜಾಕಾಲೇ - ಶಿವಪೂಜಾ ಸಮಯದಲ್ಲಿ, ನ ನಿರೀಕ್ಷಯೇತ್ - ನೋಡಲಾಗದು ||೩೫||

ಸದಾಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಂ
ನ ಹಿ ಸ್ಥಾವರ ಲಿಂಗಾನಾಂ ನಿರ್ಮಾಲ್ಯಾದ್ಯುಪಯುಜ್ಯತೇ

ಸದಾ - ಆವಾಗಲೂ, ಶಿವೈಕನಿಷ್ಠಾನಾಂ - ತನ್ನ ಇಷ್ಟಲಿಂಗದಲ್ಲಿ ತತ್ಪರನಾಗಿರ್ದಂಥಾ, ವೀರಶೈವಾಧ್ವವರ್ತಿನಾಂ - ವೀರಶೈವ ಮಾರ್ಗದಲ್ಲಿ ವರ್ತಿಸುತ್ತಂ ಇರ್ದಂಥಾ ಭಕ್ತರುಗಳಿಗೆ, ಸ್ಥಾವರಲಿಂಗಾನಾಂ - ಸ್ಥಾವರ ಲಿಂಗಂಗಳ, ನಿರ್ಮಾಲ್ಯಾದಿ - ನಿರ್ಮಾಲ್ಯ ಪುಷ್ಪ ನೈವೇದ್ಯಗಳನು, ನೋಪಯುಜ್ಯತೆ - ಭೋಗಿಸಲಾಗದು. ತಾವು ಧರಿಸಿದ ಲಿಂಗದ ನಿರ್ಮಾಲ್ಯಾದಿಗಳಿಂದ ಸರ್ವಸಿದ್ಧಿಯಹುದು ||೩೬||

ಯತ್ರಸ್ಥಾವರಲಿಂಗಾನಾಮಪಾಯಃ ಪರಿವರ್ತತೇ
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರೀಣಾಂ

ತತ್ಪ್ರಾಣಾನ್ವಿಹಾಯಾಪಿ ಪರಿಹಾರಂ ಸಮಾಚರೇತ್
ಶಿವಾರ್ಥಂ ಮುಕ್ತ ಜೀವಶ್ಚೇಚ್ಛಿವ ಸಾಯುಜ್ಯಮಾಪ್ನುಯಾತ್

ಯತ್ರ - ಆವಸ್ಥಲದಲ್ಲಿ, ಸ್ಥಾವರಲಿಂಗಾನಾಂ - ಸ್ಥಾವರವಾದ ಲಿಂಗಗಳಿಗೆ, ಅಪಾಯಃ - ಉಪಹತಿಯು, ಪರಿವರ್ತತೆ - ಉಂಟಾಗುತ್ತಂ ಇದ್ದಿತು, ಅಥವಾ - ಅಲ್ಲದಿದ್ದರೆ, ಶಿವಲಾಂಛನ ಧಾರೀಣಾಂ - ಶಿವಲಾಂಛನವ ಧರಿಸಿದಂಥಾ, ಶಿವಭಕ್ತಾನಾಂ

- ಶಿವಭಕ್ತರಿಗಾದರೂ, ಅಪಾಯಃ - ಉಪಹತಿಯು ಆಗುತ್ತಂ ಇದ್ದಿತು, ತತ್ರ - ಅಲ್ಲಿ, ಪ್ರಾಣಾನ್ - ತನ್ನ ಪ್ರಾಣವನು, ವಿಹಾಯಾಪಿ - ಬಿಟ್ಟಾದರೂ, ಪರಿಹಾರಂ - ಪರಿಹಾರವನು, ಸಮಾಚರೇತ್ - ಮಾಡಬೇಕು. ಶಿವಾರ್ಥಂ - ಶಿವಕಾರ್ಯಾರ್ಥವಾಗಿ, ಮುಕ್ತಜೀವಶ್ಚೇತ್ - ಪ್ರಾಣವನು ಬಿಟ್ಟರೆ, ಶಿವಸಾಯುಜ್ಯಂ - ಶಿವನೊಡನೈಕ್ಯವನೂ, ಆಪ್ನುಯಾತ್ - ಐಯ್ದುವನು ।।೩೮।।

ಯತ್ರವಾಚಾರನಿಂದ್ಯಾಸ್ತಿ ಕದಾಚಿತ್ತತ್ರ ನ ವ್ರಜೇತ್
ಯದ್ಗೃಹೇ ಶಿವನಿಂದಾಽಸ್ತಿ ತದ್ಗೃಹಾಣಿ ಪರಿತ್ಯಜೇತ್

ಯತ್ರ - ಆವ ಸ್ಥಲದಲ್ಲಿ, ಆಚಾರನಿಂದ್ಯಾ - ಶಿವಾಚಾರ ನಿಂದ್ಯೆಯು, ಅಸ್ತಿ - ಉಂಟು, ತತ್ರ - ಅಲ್ಲಿ ಕದಾಚಿತ್ - ಒಂದು ವ್ಯಾಳೆಯು, ವ್ರಜೇತ್ - ಹೋಗಲಾಗದು. ಯದ್ಗ್ರುಹೇ - ಆವಗೃಹದಲ್ಲಿ, ಶಿವನಿಂದ್ಯಾಸ್ತು - ಶಿವನಿಂದೆಯು ಉಂಟಾಗಿದ್ದಿತು. ತದ್ಗ್ರುಹಾಣಿ - ಆ ಗೃಹಂಗಳನು, ಪರಿತ್ಯಜೇತ್ - ಬಿಡಬೇಕು ।।೩೯।।

ಯಸ್ಸರ್ವಭೂತಾಧಿಪತಿಂ ವಿಶೇಷೇಣ ವಿನಿಂದ್ಯತಿ
ನ ತಸ್ಯಾ ನಿಷ್ಕೃತಿಃ ಶಕ್ಯಾತ್ಕರ್ತುಂ ವರ್ಷಶತೈರಪಿ

ಯಃ - ಆವವನು, ಸರ್ವ ಭೂತಾಧಿಪತಿಂ - ಸಮಸ್ತ ಜಗತ್ತಿಗೊಡೆಯನಾರ್ಗಿದಂಥಾ ಶಿವನನು, ವಿಶೇಷೇನಾ - ಆವಾಗಲೂ, ನಿಂದ್ಯತಿ - ದೂಷಿಸುತ್ತಂ ಇದ್ದಾನು. ತಸ್ಯ - ಆ ಪಾಪಿಗೆ, ವರುಷಶತೈರಪಿ - ಅನೇಕ ವರುಷ ಪರಿಯಂತರವಾದರೂ, ನಿಷ್ಕೃತಿಃ - ಪ್ರಾಯಶ್ಚಿತ್ತವು, ಕರ್ತುಂ - ಮಾಡಲು, ನ ಶಕ್ಯ - ವಶವಲ್ಲ ।।೪೦।।

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥ ವಾ ಶಪೇತ್
ಸ್ಥಾನಂ ವಾ ತತ್ಪರಿತ್ಯಾಜ್ಯ ಗಚ್ಛೇದಥ್ಯಕ್ಷಯೋಭವೇತ್

ಶಿವನಿಂದೆಯನು ಮಾಡುವಂಥನಿಗೆ ಶಿಕ್ಷೆಯನು ಮಾಡಬೇಕೆಂದು ಹೇಳುತಿರ್ದಪಂ

ಶಿವನಿಂದ್ಯಾಕರಂ - ಶಿವನಿಂದ್ಯೆಯನು ಮಾಡುವಂಥಾವನನು, ದೃಷ್ಟ್ವಾ - ಕಾಣುತಲೆ, ಘಾತಯೇತ್ - ಕೊಲ್ಲಬೇಕು, ಅಥವಾ - ಅಲ್ಲದಿದ್ದರೆ, ಶಪೇತ್ - ಬೈಯಬೇಕು. ಯದಿ - ಯತ್ತಲಾನು, ಅಕ್ಷಯೋಭವೇತ್ - ಕೊಂದು ಬೈಯುವುದಕ್ಕೆ ಸಮರ್ಥನಲ್ಲದಿದ್ದರೆ, ತತ್ಸ್ಥಾನಂ - ನಿಂದ್ಯಾ ಸ್ಥಾನಗಳನು, ಪರಿತ್ಯಾಜ್ಯ - ಬಿಟ್ಟು, ಗಚ್ಛೇತ್ - ಹೋಗಬೇಕು ।।೪೧।।

ಶಿವಪೂಜಾಪರೋಭೂತ್ವಾ ಪೂರ್ವಕರ್ಮ ವಿವರ್ಜಯೇತ್
ಅಥವಾ ಪೂರ್ವಕರ್ಮಸ್ಯಾತ್ಸಾಪೂಜಾ ನಿಷ್ಫಲಾ ಭವೇತ್

ಶಿವಪೂಜಾಫಲಂ ಭೂತ್ವಾ - ಶಿವನಲ್ಲಿ ದೃಢವಾದ ಭಕ್ತಿಯುಳ್ಳಾತನು, ಪೂರ್ವಕರ್ಮ ವಿವರ್ಜಯತ್ - ತನ್ನ ವರ್ಣಾಶ್ರಮ ಧರ್ಮಗಳನು ಕರ್ಮವನು ಬಿಡಬೇಕು ಅಥವಾ ಪೂರ್ವಕರ್ಮಸ್ಯ, ಯದಿ- ಎತ್ತಲಾನು, ಪುನಃ - ಮತ್ತೆಯು ಪೂರ್ವ

ಕರ್ಮವ ಮಾಡಿದರೆ, ಸಾ ಪೂಜಾ - ಆ ಶಿವನ ಪೂಜೆಯು, ನಿಃಷ್ಫಲಂ ಭವೇತ್ - ವ್ಯರ್ಥವಹುದು ॥೪೨॥

ಉತ್ತಮಾಂ ವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ
ಆರೂಢಪತಿತೋಜ್ಞೇಯಸ್ಸರ್ವಕರ್ಮಬಹಿಷ್ಕೃತಃ

ನಿಂದ್ಯಾ ಪೂರ್ವಕವಾಗಿ ಅದನೆ ಸ್ಪಷ್ಟವಾಗಿ ಹೇಳುತ್ತಿಂ ಇದ್ದಾನು

ಉತ್ತಮಾಂ - ಉತ್ಕೃಷ್ಟವಾಗಿರ್ದಂಥಾ, ವೃತ್ತಿಂ - ವರ್ತನೆಯನು, ಆಶ್ರಿತ್ಯ - ಕೈಕೊಂಡು, ನೀಚಾಂವೃತ್ತಿಂ - ಅಧಮ ವರ್ತನವನು, ಸಮಾಶ್ರಿತಃ - ಆಶ್ರಯಿಸಿದವನು, ಆರೂಢ ಪತಿತಃ - ವ್ರತಭ್ರಷ್ಟನೆಂದು, ಜ್ಞೇಯಃ - ಅರಿಯಬೇಕು. ಸರ್ವಕರ್ಮ ಬಹಿಷ್ಕೃತಂ - ಸಮಸ್ತ ವೈದಿಕಕರ್ಮದಲ್ಲಿ ಯೋಗ್ಯವಲ್ಲ ॥೪೩॥

ಪಂಚಾಕ್ಷರೋಪ ದೇಶೇ ಚ ನರ ಸ್ತುತಿಕರೋಯದಿ
ಸೋಽಲಿಂಗೀ ಸದುರಾಚಾರೀ ಕುಕವಿಸ್ಸತು ವಿಶ್ರುತಃ

ಪಂಚಾಕ್ಷರೋಪ ದೇಶೇ ಚ - ಪಂಚಾಕ್ಷರೂಪ ದೇಶವನ್ನುಳ್ಳಂಥಾ ಶಿವಭಕ್ತನೂ, ನರಸ್ತುತಿ ಕರಃ - ಪ್ರಾಕೃತಾತ್ಮರ ಸ್ತೋತ್ರವ ಮಾಡುವನೆ, ಯದಿ - ಎತ್ತಲಾನು, ಸಃ ಆತನೂ, ಸಲಿಂಗಿ - ಅವನುಲೆಂಕನು, ಸದುರಾಚಾರಿ - ಅವನು ಅನಾಚಾರಿಯು, ಸತು - ಅವನು, ಕುಕವಿಃ - ನೀಚಕವಿ ಎಂದು, ವಿಶೃತಃ - ಲೋಕ ಪ್ರಸಿದ್ಧನು ॥೪೪॥

ಚರ್ಮಪಾತ್ರೇ ಜಲಂ ತೈಲಂ ನ ಗ್ರಾಹ್ಯಂ ಭಕ್ತಿತತ್ಪರೈಃ
ಗೃಹ್ಯತೇ ಯದಿ ಭಕ್ತೇನ ರೌರವಂನರಕಂ ವ್ರಜೇತ್

ಭಕ್ತಿತತ್ಪರೈಃ - ಶಿವಭಕ್ತಿ ನಿಷ್ಠರುಗಳಿಂದ, ಚರ್ಮಪಾತ್ರೆ - ತೊಗಲು ಪಾತ್ರದಲ್ಲಿ, ಜಲಂ - ಜಲವನು, ತೈಲಂ - ತೈಲವನು, ನ ಗ್ರಾಹ್ಯ - ಸ್ವೀಕರಿಸಲಾಗದು. ಯದಿ - ಎತ್ತಲಾನು, ಭಕ್ತೇನ - ಭಕ್ತನಿಂದ, ಗೃಹ್ಯತೇ - ಸ್ವೀಕರಿಸಲ್ಪಟ್ಟಿತಾದರೆ, ರೌರವಂ - ರೌರವವೆಂಬ, ನರಕಂ - ನರಕವನು, ವ್ರಜೇತ್ - ಐಯ್ದುವನು ॥೪೫॥

ನ ತಸ್ಯ ಸೂತಕಂ ಕಿಂಚಿತ್ಪ್ರಾಣಲಿಂಗಾಂಗಸಂಗಿನಃ
ಜನ್ಮನೋತ್ಥಂಮೃತೋತ್ಥಂ ವಿದ್ಯತೇ ಪರಮಾರ್ಥತಃ

ಪ್ರಾಣಲಿಂಗಾಂಗಸಂಗಿನಃ - ಪ್ರಾಣಲಿಂಗದೊಡನೆ ಸಂಗವನ್ನುಳ್ಳಂಥಾತನಿಗೆ, ಜನ್ಮನೋತ್ಥಂ - ಪುತ್ರಾದಿ ಜನನದಿಂದ ಹುಟ್ಟಿದಂಥಾ, ಮೃತೋತ್ಥಂಚ - ಮರಣದಿಂದ ಹುಟ್ಟಿದಂಥಾ, ಸೂತಕಂ - ಸೂತಕವು, ಪರಮಾರ್ಥತಃ - ನಿಶ್ಚಯವಾಗಿಯು, ನವಿದ್ಯತೆ - ಉಂಟಾಗುತ್ತಿರದು ॥೪೬॥

ಲಿಂಗಾರ್ಚನರತಾಯಾಶ್ಚ ರಜೋನಾರ್ಯಾ ನ ಸೂತಕಂ
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ

ಲಿಂಗಾರ್ಚನ ರತಾಯಾಶ್ಚ - ಶಿವಪೂಜೆಯಲ್ಲಿ ತತ್ಪರೆಯಾಗಿರ್ದಂಥಾ, ನಾರ್ಯ್ಯಾಃ - ಸ್ತ್ರೀಗೆ, ಸೂತಕಂ - ರಜಸ್ಸೂತಕವು, ನ- ಇಲ್ಲ, ತಥಾ - ಆ ಮರ್ಯಾದೆಯಲ್ಲಿ, ಪ್ರಸೂತಿಕಾಯಶ್ಚ - ಪ್ರಸವ ನಿಮಿತ್ಯವಾಗಿರ್ದಂಥಾ ಸೂತಕವು, ನ ವಿದ್ಯತೇ - ಉಂಟಾಗುತ್ತಿರದು ॥೪೭॥

ಗೃಹೇಯಸ್ಮಿನ್ಪ್ರಸೂತಾಸ್ತ್ರೀ ಸೂತಕಂ ನಾತ್ರ ವಿದ್ಯತೇ
ಶಿವಪಾದಾಂಬುಸಂಸ್ಪರ್ಶಾತ್ಸರ್ವ ಪಾಪಂ ಪ್ರಣಶ್ಯತಿ

ಯಸ್ಮಿನ್ಗೃಹೇ - ಆವ ಗೃಹದಲ್ಲಿ, ಪ್ರಸೂತಾಸ್ತ್ರೀ - ಹೆತ್ತವಳು ಇರುತ್ತಂ ಇದ್ದಾಳು, ತತ್ರ - ಆ ಗೃಹದಲ್ಲಿ, ಸೂತಕಂ - ಗೃಹ ಸೂತಕವು, ನ - ಇಲ್ಲ, ಶಿವಪಾದಾಂಬು ಸಂಸ್ಪರ್ಶಾತ್ - ಶಿವ ಪಾದೋದಕ ಸ್ಪರ್ಶನದಿಂದ, ಸರ್ವಪಾಪಂ - ಸಮಸ್ತ ದೋಷವು, ಪ್ರಣಶ್ಯತಿ - ನಷ್ಟವಹುದು ॥೪೮॥

ಶಿವಸ್ಥಾನಾನಿ ತೀರ್ಥಾನಿ ವಿಶಿಷ್ಟಾನಿ ಶಿವಾರ್ಚಕಃ
ಶಿವಯಾತ್ರೋತ್ಸವಂ ನಿತ್ಯಂ ಸೇವೇತ ಪರಯಾ ಮುದಾ

ಶಿವಾರ್ಚಕಃ - ಶಿವಪೂಜಕನು, ಶಿವಸ್ಥಾನಾನಿ - ಶಿವಾಲಯಗಳನ್ನು, ವಿಶಿಷ್ಟಾನಿ - ಉತ್ಕೃಷ್ಟವಾಗಿರ್ದಂಥಾ, ತೀರ್ಥಾನಿ - ತೀರ್ಥಂಗಳನು, ಶಿವಯಾತ್ರೋತ್ಸವಂ - ಶಿವನ ಜಾತ್ರೆ, ಶಿವೋತ್ಸವಂಗಳನು, ಪರಯಾಮುದಾ - ವ್ಯಗ್ಗಳವಾದ ಸಂತೋಷದಿಂದ, ಸೇವ್ಯತಾ - ಸೇವಿಸಬೇಕು, ಅಂಗದಲ್ಲಿ - ಇಷ್ಟಲಿಂಗ ಸಂಬಂಧಿಯಾದ ವೀರಶೈವನು ಸ್ಥಾವರಾದಿಗಳ ಸೇವಿಸಲಾಗದು ॥೪೯॥

ಶಿವಕ್ಷೇತ್ರೋತ್ಸವ ಮಹಾಯಾತ್ರಾದರ್ಶನಕಾಂಕ್ಷಿಣಾಂ
ಮಾರ್ಗೇನ್ನ ಪಾನದಾನಂ ಚ ಕುರ್ಯಾಮಾಹೇಶ್ವರೋಜನಾಃ

ಮಾಹೇಶ್ವರೋ ಜನಾಃ - ಮಾಹೇಶ್ವರನು, ಶಿವಕ್ಷೇತ್ರೋತ್ಸವ ಮಹಾಯಾತ್ರಾ ದರ್ಶನ ಕಾಂಕ್ಷಿಣಾಂ - ಶಿವಕ್ಷೇತ್ರೋತ್ಸವದ ಮಹಾ ಯಾತ್ರೆಯ ದರ್ಶನವ ಬಯಸು ತಿರ್ದಂಥವರುಗಳಿಗೆ, ಮಾರ್ಗೇ - ಮಾರ್ಗದಲ್ಲಿ, ಅನ್ನಪಾನದಾನಂ - ಅನ್ನಪಾನದಾನವನು, ಕುರ್ಯಾತ್ - ಮಾಡೂದು ॥೫೦॥

ನಾನ್ನತೋಯ ಸಮಂ ದಾನಂ ನ ಚಾ ಹಿಂಸಾ ಪರಂ ತಪಃ
ತಸ್ಮಾನ್ಮಹೇಶ್ವರೋ ನಿತ್ಯಮನ್ನತೋಯಪ್ರದೋ ಭವೇತ್

ಅನ್ನತೋಯಂ ಸಮಂ - ಅನ್ನೋದಕ ದಾನಕ್ಕೆ ಸರಿಯಾದ, ದಾನಂ - ದಾನವು ನ - ಇಲ್ಲ, ಅಹಿಂಸಾಪರಂ - ಅಹಿಂಸೆಯಿಂದ ಮೊದಲಾದ, ತಪಃ - ತಪಸ್ಸು. ನ - ಇಲ್ಲ, ತಸ್ಮಾತ್ - ಅದು ಕಾರಣ, ಮಹೇಶ್ವರಃ - ಶಿವಭಕ್ತನು, ನಿತ್ಯಂ - ಆವಾಗಲೂ, ಅನ್ನತೋಯ ಪ್ರದೋಭವೇತ್ - ಅನ್ನೋದಕ ದಾನವನು ಮಾಡಬೇಕು ॥೫೧॥

ಶ್ಲೋಕ ೫೦ ಮತ್ತು ಟೀಕನ್ನು ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾವ್ರತೀ
ದಧ್ಯಾತ್ತೇಭ್ಯಸಮಾದದ್ಯಂತ್ಕನ್ಯಾಂ ಕುಲಸಮುದ್ಭವಾಂ

ವ್ರತಿಃ - ಶಿವದೀಕ್ಷೆಯುಳ್ಳ ಭಕ್ತನು, ಸದಾ - ಎಲ್ಲಾಗಲು, ಸ್ವಮಾರ್ಗಾಚಾರ ವರ್ತಿಭ್ಯಃ - ತನ್ನ ದರ್ಶನದಾಚಾರ ಮಾರ್ಗದಲ್ಲಿ ವರ್ತಿಸುತ್ತಂ ಇದ್ದಂಥಾ, ಸ್ವಜಾತಿಭ್ಯಃ - ತನ್ನ ಜಾತಿಯಾಗಿರ್ದಂಥಾ, ತೇಭ್ಯಃ - ಅವರುಗಳಿಗೆ, ಕುಲೋದ್ಭವ - ಸತ್ಕುಲದಲ್ಲಿ ಹುಟ್ಟಿದಂಥಾ, ಕನ್ಯಾ - ಕನ್ನಿಕೆಯನು, ದದ್ಯಾತ್ - ಕೊಡಬೇಕು, ಸಃ - ಅವರ ಕುಲಂಗಳಲ್ಲಿ, ಆದದ್ಯಾತ್ - ತರಬೇಕು ॥೫೨॥

೧೦. ಉಭಯಸ್ಥಲ

ಏವಮಾಚಾರ ಸಂಯುಕ್ತೋ ವೀರಶೈವೋ ಮಹಾವ್ರತೀ
ಪೂಜಯೇತ್ಸತತಂ ಭಕ್ತ್ಯಾ ಗುರುಂ ಲಿಂಗಂ ಚ ಜಂಗಮ

ಭಕ್ತಸ್ಥಲದಲ್ಲಿ ಶಿವಾಚಾರವನು ನಿರೂಪಿಸಿ, ಆ ಆಚಾರಸಂಪನ್ನನಾಗಿರ್ದಂಥಾ ಭಕ್ತನಿಗೆ ಕರ್ತವ್ಯವನು ಹೇಳುತ್ತಂ ಇದ್ದಾನು.

ಏವಂ - ಈ ಪ್ರಕಾರದಲ್ಲಿ, ಆಚಾರ ಸಂಯುಕ್ತಃ - ಶಿವಾಚಾರದಲ್ಲಿ ಸಂಪನ್ನ ನಾಗಿರ್ದಂಥಾ, ವ್ರತಿಃ - ದೃಢವಾದ ವ್ರತವನುಳ್ಳಂಥ, ವೀರಶೈವಃ - ವೀರಶೈವನಾದ ಭಕ್ತನು. ಗುರುಃ - ತನ್ನ ಗುರುವನ್ನು, ಲಿಂಗಂ - ಲಿಂಗವನು, ಜಂಗಮಂ - ಜಂಗಮವನು, ಸತತಂ - ಆವಾಗಲೂ, ಭಕ್ತ್ಯಾ - ಭಕ್ತಿಯಿಂದ, ಪೂಜಯೇತ್ - ಪೂಜಿಸಬೇಕು ॥೫೩॥

ಏಕ ಏವ ಶಿವಃ ಸಾಕ್ಷಾತ್ಸರ್ವಾನುಗ್ರಾಹಕಃ ಪ್ರಭುಃ
ಗುರು ಜಂಗಮ ಲಿಂಗಾತ್ಮಾವರ್ತತೇ ಭುಕ್ತಿ ಮುಕ್ತಿದಃ

ಗುರು ಲಿಂಗ ಜಂಗಮದ ಪರಮಾರ್ಥ ರೂಪವನು ಭೇದ ಬುದ್ಧಿಯನು ಬಿಟ್ಟು ಪೂಜಿಸಲೋಸ್ಕರವಾಗಿ ನಿರೂಪಿಸುತಿರ್ದಪಂ

ಸರ್ವಾನುಗ್ರಾಹಕಃ - ಸರ್ವರಿಗೂ ಅನುಗ್ರಹವ ಮಾಡುವಂಥಾ, ಪ್ರಭುಃ - ಒಡೆಯನಾಗಿರ್ದಂಥಾ, ಭುಕ್ತಿಮುಕ್ತಿದಃ - ಭೋಗ ಮೋಕ್ಷಗಳ ಕೊಡುವಂಥಾ, ಏಕ ಏವ ಶಿವಃ - ಶಿವನೊಬ್ಬನೆ, ಸಾಕ್ಷಾತ್ - ಪ್ರತ್ಯಕ್ಷವಾಗಿ, ಗುರು ಜಂಗಮ ಲಿಂಗಾತ್ಮ- ಗುರು ಲಿಂಗ ಜಂಗಮ ಸ್ವರೂಪವಾಗಿ, ವರ್ತತೇ - ವರ್ತಿಸುತ್ತಂ ಇದ್ದಾನು ॥೫೪॥

ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಶ್ಶಿವಃ
ತಯೋರ್ನಾಸ್ತಿಭಿದಾಃ ಕಿಂಚಿದೇಕತ್ವಾ ತತ್ವರೂಪತಃ

ಗುರುಲಿಂಗದ್ವಯದ ಭಕ್ತಿಯು ಉಭಯಸ್ಥಲವೆಂದು ನಿರೂಪಿಸುತಿರ್ದಪಂ

ಗುರೋಃ - ಗುರುವಿನ, ಅಭ್ಯರ್ಚನೇನಾಪಿ - ಪೂಜೆಯಿಂದಲೂ, ಶಿವಃ - ಪರಮೇಶ್ವರನು, ಸಾಕ್ಷಾತ್ - ಪ್ರತ್ಯಕ್ಷವಾಗಿ, ಅಭ್ಯರ್ಚಿತಃ - ಪೂಜಿಸಲ್ಪಡುವನು, ತಯೋಃ

- ಆ ಶಿವಗುರುಗಳಿಬ್ಬರಿಗೆ, ತತ್ತ್ವರೂಪತಃ ಪರಮಾರ್ಥವಾಗಿ, ಏಕತ್ವಾತ್ - ಭೇದವಿಲ್ಲದೆ ಇದ್ದ ಕಾರಣ, ಕಿಂಚಿತ್ - ಅಲ್ಪವಾದರೂ, ಭಿದಾ - ಭೇದವು, ನಾಸ್ತಿ - ಇಲ್ಲ ।।೫೫।।

ಶಿವಜ್ಞಾನಂ ಮಹಾಘೋರ ಸಂಸಾರಾರ್ಣವತಾರಕಂ
ದೀಯ್ಯತೇಯೇನ ಸಗುರುಃ ಕಸ್ಯವಂದ್ಯೋ ನ ಜಾಯತೇ

ಮಹಾಘೋರ ಸಂಸಾರಾರ್ಣವತಾರಕಂ - ತಾಪತ್ರಯವೆಂಬ ತೆರೆಯನ್ನುಳ್ಳ ಭಯಂಕರವಾದ ಸಂಸಾರ ಸಮುದ್ರವನು ದಾಂಟಿಸುವಂಥ ಶಿವತತ್ವಜ್ಞಾನವು, ಯೇನ - ಆವನಾನೊಬ್ಬ ಗುರುವಿನಿಂದ, ದೀಯ್ಯತೇ - ಕೊಡಲ್ಪಡುತ್ತಂ ಇದ್ದೀತು. ಸ ಗುರುಃ - ಆ ಗುರುವು, ಕಸ್ಯ - ಆವಾತನಿಗೆ, ವಂದ್ಯೋ ನ ಜಾಯತೇ - ಪೂಜ್ಯನಲ್ಲ. ಸರ್ವರಿಂದಲೂ ಪೂಜ್ಯನೆಂಬುದರ್ಥ ।।೫೬।।

ಯತ್ಕಟಾಕ್ಷಕಲಾಮಾತ್ರಾತ್ಪರಮಾನಂದ ಲಕ್ಷಣಂ
ಲಭ್ಯತೇ ಶಿವರೂಪತ್ವಂ ಸ ಗುರುಃ ಕೇನನಾರ್ಚತೇ

ಯತ್ಕಟಾಕ್ಷ ಕಲಾಮಾತ್ರಾತ್ - ಆವನಾನೊಬ್ಬ ಗುರುವಿನ ಕೃಪಾಕಟಾಕ್ಷದಿಂದ, ಪರಮಾನಂದ ಲಕ್ಷಣಂ - ಪರಮಾನಂದ ಸ್ವರೂಪವಾದ, ಶಿವಸ್ವರೂಪತ್ವಂ - ಶಿವಸಾಯುಜ್ಯ ರೂಪವು, ಲಭ್ಯತೇ - ಹಡೆಯಲು ಪಡುತ್ತಿದ್ದೀತು. ಸ ಗುರುಃ - ಆ ಗುರು ಮುಖೇನ ಆವವನಿಂದ, ನಾರ್ಚ್ಯತೆ - ಪೂಜಿಸಲ್ಪಡನು ।।೫೭।।

ಯಥಾದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ
ತಥಾ ಗುರುವರೇ ಕುರ್ಯಾದುಪಚಾರಾನ್ದಿನೇದಿನೇ

ಜಗನ್ನಾಥೇ - ಜಗತ್ತಿಗೆ ಒಡೆಯನಾಗಿರ್ದಂಥಾ, ಸರ್ವಾನುಗ್ರಹಕಾರಕೇ - ಸರ್ವರಿಗೂ ಅನುಗ್ರಹ ಮಾಡುವಂಥ, ದೇವೇ - ಶಿವನಲ್ಲಿ, ಯಥಾ - ಹ್ಯಾಗೆ ಉಪಚಾರಗಳನು ಮಾಡುವನು, ತಥಾ - ಆ ಮರ್ಯಾದೆಯಲ್ಲಿ, ಗುರುವರೇ - ಗುರುಶ್ರೇಷ್ಠನಲ್ಲಿ, ಉಪಚಾರಾನ್ - ಪೂಜಾದ್ಯುಪಚಾರಗಳನು, ದಿನೇ ದಿನೇ - ಪ್ರತಿದಿನದಲ್ಲಿಯೂ, ಕುರ್ಯಾತ್ - ಮಾಡಲ್ಪಡುವದು ।।೫೮।।

ಅಪ್ರತ್ಯಕ್ಷೋಮಹಾದೇವಸ್ಸರ್ವೇಷಾಮಾತ್ಮಮಾಯಯಾ
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿ ಸಿದ್ಧಯೇ

ಮಹಾದೇವಃ - ಶಿವನು, ಆತ್ಮಮಾಯಯಾ - ತನ್ನ ಮಾಯೆಯಿಂದ ಸರ್ವೇಷಾಂ - ಎಲ್ಲರಿಗೂ, ಅಪ್ರತ್ಯಕ್ಷಃ - ಪ್ರತ್ಯಕ್ಷನಲ್ಲ, ಭಕ್ತಿಸಿದ್ಧಯೇ - ಭಕ್ತಿ ಸಿದ್ಧ್ಯರ್ಥನಾಗಿ, ಗುರುರೂಪೇಣಃ - ಗುರು ಸ್ವರೂಪನಾಗಿ, ವರ್ತತೇ - ವರ್ತಿಸುತ್ತಂ ಇಹನು ।।೫೯।।

ಗುರೋರಾಜ್ಞಾಂ ನ ಲಂಘೇತ ಸಿದ್ಧಿಕಾಮಿ ಮಹಾಮತಿಃ
ತದಾಜ್ಞಾಂ ಲಂಘನೇನಾಪಿ ಶಿವಾಜ್ಞಾಚ್ಛೇದಕೋ ಭವೇತ್

ಸಿದ್ಧಿಕಾಮಿ - ಸಿದ್ಧಿಯನು ಬಯಸುವಂಥಾ, ಮಹಾಮತಿಃ - ಬುದ್ಧಿಮಾನ್

ನಾಗಿರ್ದಂಥ, ಗುರೋಃ - ಗುರುವಿನ, ಆಜ್ಞಾಂ - ಆಜ್ಞೆಯನು, ನ ಲಂಘೇತ್ - ಅತಿಕ್ರಮಿಸಲಾಗದು. ತದಾಜ್ಞಾ ನ ಲಂಘೇನಾಪಿ - ಗುರುವಿನಾಜ್ಞೆಯನು ಮೀರಿದರೆ, ಶಿವಾಜ್ಞಾಚ್ಛೆದಕೋಭವೇತ್ - ಶಿವನ ಆಜ್ಞೆಯನು ಮೀರಿದವನಹನು ॥೬೦॥

ಹಿತಮೇವಚರೇನ್ನಿತ್ಯಂ ಶರೀರೇಣ ಧನೇ ಚ
ಆಚಾರ್ಯಸ್ಯೋಪಶಾಂತಸ್ಯ ಶಿವಜ್ಞಾನ ಮಹಾನಿಧೇಃ

ಉಪಶಾಂತಸ್ಯ - ಶಾಂತನಾಗಿರ್ದಂಥ, ಶಿವಜ್ಞಾನ ಮಹಾನಿಧೇಃ - ಶಿವ ತತ್ವಜ್ಞಾನವೆಂಬ ನಿಕ್ಷೇಪವನ್ನುಳ್ಳಂಥಾ, ಆಚಾರಸ್ಯ - ಗುರುವಿಗೆ, ನಿತ್ಯಂ - ಆವಾಗಲೂ, ಶರೀರೇಣ - ದೇಹದಿಂದ, ಧನೇನ ಚ - ದ್ರವ್ಯದಿಂದಲೂ, ಹಿತಮೇವಾ - ಹಿತವನೆ, ಚರೇತ್ - ಮಾಡಬೇಕು ॥೬೧॥

೧೧. ತ್ರಿವಿಧಸಂಪತ್ತಿಸ್ಥಲ

ಅಥಾ ತ್ರಿವಿಧಸಂಪತ್ತುಸ್ಥಲ ಮಹೆ - ಈ ಪ್ರಕಾರದಲ್ಲಿ ಉಭಯಸ್ಥಲದ ಲಕ್ಷಣವನು ನಿರೂಪಿಸಿದ ನಂತರದಲ್ಲಿ ತ್ರಿವಿಧಸಂಪತ್ತನುಳ್ಳಸ್ಥಲದ ಲಕ್ಷಣವನು ಹೇಳುತಿರ್ದಪಂ

ಯಥಾ ಗುರೌ ಯಥಾ ಲಿಂಗೇ ಭಕ್ತಿಮಾನ್ಪರಿವರ್ತತೇ
ಜಂಗಮೇ ಚ ತಥಾ ನಿತ್ಯಂ ಭಕ್ತಿಂ ಕುರ್ಯಾದ್ವಿಚಕ್ಷಣಃ

ಗುರೌ - ಗುರುವಿನಲ್ಲಿಯು, ಲಿಂಗೇ - ಲಿಂಗದಲ್ಲಿಯು, ಯಥಾ ಮರ್ಯಾದೆಯಲ್ಲಿ, ಭಕ್ತಿಮಾನ್ - ಭಕ್ತಿಯುಳ್ಳವನಾಗಿ, ಪರಿವರ್ತತೆ - ವರ್ತಿಸುತ್ತಂ ಇದ್ದಾನು. ತಥಾ - ಆ ಮರ್ಯಾದೆಯಲ್ಲಿ, ಜಂಗಮೇ - ಜಂಗಮದಲ್ಲಿಯು, ವಿಚಕ್ಷಣಃ - ಬಲ್ಲವನು, ಭಕ್ತಿಃ - ಭಕ್ತಿಯನು ನಿತ್ಯಂ - ಆವಾಗಲೂ, ಕುರ್ಯಾತ್ - ಮಾಡಬೇಕು ॥೬೨॥

ಲಿಂಗಂ ಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ
ಅಜಂಗಮೇ ಯಥಾ ಭಕ್ತಿಜಂಗಮೇ ಚ ತಥಾಸ್ಮೃತಾಃ

ಲಿಂಗ ಜಂಗಮವೆಂಬ ಉಭಯದಲ್ಲಿಯು ಭೇದ ಬುದ್ಧಿಯ ಮಾಡಬಾರದೆಂದು ನಿರೂಪಿಸುತಿರ್ದಪಂ

ಲಿಂಗಂ - ಲಿಂಗವು, ಜಂಗಮಾಜಂಗಮಾತ್ಮನಾ - ಜಂಗಮ ಅಜಂಗಮವೆಂಬ ಭೇದದಿಂದ, ದ್ವಿವಿಧಂ - ಎರಡು ಪ್ರಕಾರವೆಂದು, ಪ್ರೋಕ್ತಂ - ಹೇಳಲ್ಪಟ್ಟಿತು. ಯಥಾ - ಹ್ಯಾಂಗೆ, ಅಜಂಗಮೆ - ಸ್ಥಿರಲಿಂಗದಲ್ಲಿ , ಭಕ್ತಿಂ - ಭಕ್ತಿಯನು ಮಾಡುವನು, ತಥಾ - ಹ್ಯಾಂಗೆ, ಜಂಗಮೇ - ಚರಲಿಂಗದಲ್ಲಿಯೂ ಭಕ್ತಿಯ ಮಾಡಬೇಕು ಎಂದು, ಸ್ಮೃತಃ - ಹೇಳುವುದು ॥೬೩॥

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿ ವಿನಿರ್ಮಿತಂ
ತತ್ವರಂ ಜಗಮಂ ಲಿಂಗಂ ಶಿವಯೋಗೀತಿ ವಿಶ್ರುತಂ

ಯಲ್ಲಿಂಗಂ - ಆವುದಾನೊಂದು ಲಿಂಗವು, ಮೃಚ್ಛಿಲಾದಿವಿನಿರ್ಮಿತಂ - ಮೃತ್ತಿಕೆಯಿಂದ ಶಿಲೆಯಿಂದ ತಾನು ಮಾಡಲ್ಪಟ್ಟಂಥಾ, ತತ್ - ಅದು, ಜಂಗಮಂ - ಸ್ಥಿರಲಿಂಗವೆನಿಸುವುದು, ತೇ ವರಂ - ಆಶ್ರೇಷ್ಠವಾಗಿರ್ದಂಥ, ಶಿವಯೋಗೀತಿ - ಶಿವಯೋಗಿಯಾಗಿರ್ದಂಥ, ಜಂಗಮಂ - ಜಂಗಮವೆನಿಸುವನು ।।೬೮।।

ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ
ಸದಾಕಾಲಂ ವಸತ್ಯೇವಾ ಚರಲಿಂಗೇ ಮಹೇಶ್ವರಃ

ಚರಲಿಂಗಕ್ಕೆ ಆ ವಿಖ್ಯಾತಿ ನಿಮಿತ್ತವನು ಹೇಳುತ್ತಂ ಇದ್ದಾನು.

ಶಂಕರಃ - ಶಿವನು, ಅಚರೆ - ಲಿಂಗದಲ್ಲಿ, ಮಂತ್ರ ಸಂಸ್ಕಾರಾತ್ - ಮಂತ್ರದಿಂದ ಶುದ್ಧಿಯ ಮಾಡಿದರೆ, ವಸತಿ - ಇರುತ್ತಂ ಇಹನು, ಚರಲಿಂಗೇ - ಜಂಗಮಲಿಂಗದಲ್ಲಿ, ಸದಾಕಾಲಂ - ಎಲ್ಲಾ ಕಾಲವು, ಮಹೇಶ್ವರಃ - ಶಿವನು, ವಸತ್ಯೇವ - ಇರುವನೆ ಸಂದೇಹವಿಲ್ಲ ।।೬೫।।

ಶಿವಯೋಗಿನಿ ಯದ್ದತ್ತಂ ತದಕ್ಷಯ ಫಲಂ ಭವೇತ್
ತಸ್ಮಾತ್ಸರ್ವಪ್ರಯತ್ನೇನ ತಸ್ಮೈ ದೇಯಂ ಮಹಾತ್ಮನೇ

ಶಿವಯೋಗಿನಿ - ಶಿವಯೋಗಿನಿಯಲ್ಲಿ, ಯತ್ - ಆವುದಾನೊಂದು, ದತ್ತಂ - ಕೊಡಲ್ಪಟ್ಟಿತು. ತತ್ - ಅದು, ಅಕ್ಷಯಫಲಂ - ಅನಂತಫಲವು, ಭವೇತ್ - ಅಹುದು, ತಸ್ಮಾತ್ - ಅದು ಕಾರಣ, ಸರ್ವಪ್ರಯತ್ನೇನ - ಅವಶ್ಯವಾಗಿಯು, ಮಹಾತ್ಮನೆ - ಉತ್ತಮನಾಗಿರ್ದಂಥಾ, ತಸ್ಮೈ - ಆ ಶಿವಯೋಗಿಗೋಸ್ಕರ, ಧೇಯಂ - ದಾನವ ಮಾಡಬೇಕು ।।೬೬।।

ಯತ್ಫಲಂ ಲಭತೇ ಜಂತುಃ ಪೂಜಯಾ ಶಿವಯೋಗಿನಃ
ತದಕ್ಷಯಮಿತಿಪ್ರೋಕ್ತಂ ಸಕಲಾಗಮಪಾರಗೈಃ

ಜಂತುಃ - ಪ್ರಾಣಿಯು ಶಿವಯೋಗಿನಃ - ಶಿವಯೋಗೀಶ್ವರನ, ಪೂಜಯಾ - ಪೂಜೆಯಿಂದ, ಯತ್ಫಲಂ - ಆವ ಫಲವನು, ಲಭತೇ - ಪಡೆವನು, ತತ್ - ಅದು, ಅಕ್ಷಯಮಿತಿ - ಅಕ್ಷಯವಹುದೆಂದು, ಸಮಸ್ತಾಗಮ ಪಾರಗೈಃ - ಸಕಲಾಗಮದ ಕಡೆಯ ಕಂಡಂಥಾವರುಗಳಿಂದ, ಪ್ರೋಕ್ತಂ - ಹೇಳಲ್ಪಟ್ಟಿತು ।।೬೭।।

ನಾಮಮನ್ಯೇತಾ ಕುತ್ರಾಪಿ ಶಿವಯೋಗಿನಮಾಗತಂ
ಅವಮಾನದ್ಭವೇ ತಸ್ಯ ದುರ್ಗತಿಶ್ಚ ನ ಸಂಶಯಃ

ಆಗತಂ - ಬರುತ್ತಿರ್ದಂಥಾ, ಶಿವಯೋಗಿನಃ - ಶಿವಯೋಗಿಯು, ಕುತ್ರಾಪಿ - ಒಂದು ಬಾರಿಯು, ನಾವಮನ್ಯೇತಾ - ಉದಾಸೀನ ಮಾಡಬಾರದು. ತಸ್ಯ - ಆತನ,

ಅವಮಾನಾತ್ - ಉದಾಸೀನದ ದೆಸೆಯಿಂದ, ದುರ್ಗತಿಭವೇತ್ - ನರಕಪ್ರಾಪ್ತಿಯಹುದು, ನ ಸಂಶಯಃ - ಸಂದೇಹವಿಲ್ಲ ।।೬೮।।

ಶಿವಯೋಗೀ ಶಿವಸ್ಸಾಕ್ಷಾಚ್ಛಿವಕೈಂಕರ್ಯಭಾವತಃ
ಪೂಜಯೇದಾದರೇಣೈ ವಾ ಯಥಾಲಿಂಗಂ ಯಥಾಗುರುಃ

ಶಿವಯೋಗೀ - ಶಿವಯೋಗೀಶ್ವರನನು, ಸಾಕ್ಷಾಚ್ಛಿವಃ - ಪ್ರತ್ಯಕ್ಷನಾದಂಥ ಪರಮೇಶ್ವರನು, ಇತಿ - ಹೀಗೆಂದು, ಕೈಂಕರ್ಯ ಭಾವತಃ - ನಾನು ನಿನ್ನ ಭೃತ್ಯನು ಎಂಬ ಭಾವನೆಯಿಂದ, ಯಥಾಲಿಂಗಂ - ಹ್ಯಾಂಗೆ ಲಿಂಗದಲ್ಲಿ, ಯಥಾಗುರುಃ - ಹ್ಯಾಂಗೆ ಗುರುವಿನಲ್ಲಿ, ತಥಾ - ಆ ಮರ್ಯಾದೆಯಲ್ಲಿ, ಶಿವಯೋಗಿನಂ - ಶಿವಯೋಗಿಯನು, ಆದರೇಣ - ಪ್ರೀತಿಯಿಂದ, ಪೂಜಯೇತ್ - ಭಕ್ತಿ ಮಾಡಬೇಕು ।।೬೯।।

೧೨. ಚತುರ್ವಿಧಸಾರಾಯ ಸ್ಥಲ

ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ
ತಥಾ ಶಿವಾತ್ಮನೋನ್ನಿತ್ಯಂ ಗುರು ಜಂಗಮಯೋರಪಿ

ಮಹೇಶಿತುಃ - ಶಿವನ, ಪಾದೋದಕಂ - ಶ್ರೀಪಾದ ತೀರ್ಥವನು, ಯಥಾ - ಆ ಮರ್ಯಾದೆಯಲ್ಲಿ, ಭಕ್ತ್ಯಾ - ಭಕ್ತಿಯಿಂದ, ಸ್ವೀಕರೋತಿ - ಪಾನವ ಮಾಡುವನು, ತಥಾ - ಆ ಮರ್ಯಾದೆಯಲ್ಲಿ, ಶಿವಾತ್ಮನೋಃ - ಶಿವಸ್ವರೂಪವಾಗಿರ್ದಂಥಾ, ಗುರು ಜಂಗಮಯೋರಪಿ - ಗುರು ಜಂಗಮಪಾದೋದಕವನು, ನಿತ್ಯಂ - ಆವಾಗಲೂ, ಸ್ವೀಕರೋತಿ - ಪಾನವಮಾಡಬೇಕು ।।೭೦।।

ಅರ್ಪಯಿತ್ವಾ ನಿಜೇಲಿಂಗೇ ಪತ್ರಂ ಪುಷ್ಪಂ ಫಲಂ ಜಲಂ
ಅನ್ನಾದ್ಯಂ ಸರ್ವಭೋಜ್ಯಂ ಚ ಸ್ವೀಕುರ್ಯಾದ್ಭಕ್ತಿಮಾನ್ನರಃ

ಭಕ್ತಿಮಾನ್ - ಶಿವಭಕ್ತಿಯನ್ನುಳ್ಳಂಥಾ, ನರಃ - ಮನುಷ್ಯನು, ನಿಜೇ - ತನ್ನ ಸಂಬಂಧವಾಗಿರ್ದಂಥಾ, ಲಿಂಗೇ - ಇಷ್ಟಲಿಂಗದಲ್ಲಿ, ಪತ್ರಂ - ಪತ್ರೆಯನು, ಪುಷ್ಪಂ - ಪುಷ್ಪವನು, ಫಲಂ - ಫಲವನು, ಜಲಂ - ಉದಕವನು, ಅನ್ನಾದ್ಯಂ - ಅನ್ನ ಮೊದಲಾದ, ಸರ್ವಭೋಜ್ಯಂ ಚ - ಸಮಸ್ತಭೋಜ್ಯಾದಿ ವಸ್ತುಗಳು, ಅರ್ಪಯಿತ್ವಾ - ಸಮರ್ಪಿಸಿ, ಸ್ವೀಕೃಯಾತ್ - ಸ್ವೀಕರಿಸಬೇಕು ।।೭೧।।

ಸರ್ವಮಂಗಲಮಾಂಗಲ್ಯಂ ಸರ್ವಪಾವನಪಾವನಂ
ಸರ್ವಸಿದ್ಧಿಕರಂ ಪುಂಸಾಂ ಶಂಭೋಃಪಾದಾಂಬುಧಾರಣಂ

ಶಂಭೋಃ - ಶಿವನ, ಪಾದಾಂಬುಧಾರಣಂ - ಪಾದೋದಕವ ಸ್ವೀಕರಿಸಿದರೆ, ಸರ್ವಮಂಗಲ ಮಾಂಗಲ್ಯಂ - ಸಮಸ್ತ ಮಂಗಲ ಮಾಂಗಲ್ಯವ ಮಾಡವದು. ಸರ್ವಪಾವನ ಪಾವನಂ - ಸಮಸ್ತ ಪಾವನವ ಪರಿಶುದ್ಧಿಯ ಮಾಡವದು, ಸರ್ವಸಿದ್ಧಿಕರಂ ಪುಂಸಾಂ - ಪುಂಸಾಂ - ಪುರುಷರಿಗೆ, ಸರ್ವಸಿದ್ಧಿ - ಸಮಸ್ತ ಸಿದ್ಧಿಯನು, ಕರಂ - ಮಾಡಿಕೊಡುವುದು ।।೭೨।।

ಶಿರಸಾಧಾರಯೇದ್ಯಸ್ತು ಪತ್ರಂ ಪುಷ್ಪಂ ಶಿವಾರ್ಪಿತಂ
ಪ್ರತಿಕ್ಷಣಂ ಭವೇತ್ತಸ್ಯ ಪೌಂಡರೀಕ ಕ್ರಿಯಾಫಲಂ

ಯಃ - ಆವವನು, ಶಿವಾರ್ಪಿತಂ - ಶಿವನಿಗೆ ಸಮರ್ಪಿಸಿದಂಥಾ, ಪತ್ರಂ - ಪತ್ರೆಯನು, ಪುಷ್ಪಂ - ಪುಷ್ಪವನು, ಶಿರಸಾ - ಶಿರಸ್ಸಿನಿಂದ, ಧಾರಯೇತ್ - ಧರಿಸುತ್ತಂ ಇದ್ದಾನು. ತಸ್ಯ - ಆತನಿಗೆ, ತತ್‌ಕ್ಷಣಂ - ಆ ಕ್ಷಣದಲ್ಲಿಯೇ, ಪೌಂಡರೀಕ ಕ್ರಿಯಾಫಲಂ - ಪೌಂಡರೀಕವೆಂಬಂಥ ಯಜ್ಞದ ಫಲವು, ಭವೇತ್ - ಅಹುದು ॥೭೩॥

ಶಿವಭಕ್ತಿವಿಹೀನಾನಾಂ ಜಂತೂನಾಂ ಪಾಪಕರ್ಮಿಣಾಂ
ವಿಶುದ್ಧೇ ಶಿವನಿರ್ಮಾಲ್ಯೇನಾಧಿಕಾರೋಽಸ್ತಿ ಕುತ್ರಚಿತ್

ಶಿವಭಕ್ತಿ ವಿಹೀನಾನಾಂ - ಶಿವಭಕ್ತಿ ಇಲ್ಲದೆ ಇದ್ದಂಥಾ, ಪಾಪಕರ್ಮಿಣಾಂ - ಪಾಪಿಷ್ಟರಾದಂಥಾ, ಜಂತೂನಾಂ - ಪ್ರಾಣಿಗಳಿಗೆ, ವಿಶುದ್ಧೇ - ಪವಿತ್ರವಾಗಿರ್ದಂಥಾ, ಶಿವನಿರ್ಮಾಲ್ಯೇ - ಶಿವಪ್ರಸಾದದಲ್ಲಿ, ಕುತ್ರಚಿತ್ - ಒಂದು ಬಾರಿಯು, ನಾಧಿಕಾರೋಸ್ತಿ - ಯೋಗ್ಯನಲ್ಲ ॥೭೪॥

ಭುಂಜಿಯಾದ್ರುದ್ರಭುಕ್ತಾನ್ನಂ ರುದ್ರಪೀತ್ವಂ ಜಲಂ ಪಿಬೇತ್
ರುದ್ರಾಘ್ರಾತಂ ಸದಾಜಿಘ್ರೇದಿತಿ ಜಾಬಾಲಿಕೀಶ್ರುತಿಃ

ರುದ್ರಭುಕ್ತಾನ್ನಂ - ರುದ್ರನಿಗೆ ಸಮರ್ಪಿಸಿದನ್ನವನು. ಭುಂಜಿಯಾತ್ - ಭೋಗಿಸಬೇಕು. ರುದ್ರಪೀತ್ವಂ ಜಲಂಪಿಬೇತ್ - ರುದ್ರನಿಗೆ ಸಮರ್ಪಿಸಿದ ಉದಕಂಗಳನು ಪಾನವ ಮಾಡಬೇಕು. ಸದಾ - ಆವಾಗಲು, ರುದ್ರಾಘ್ರಾತಂ - ರುದ್ರನಿಗೆ ಸಮರ್ಪಿಸಿದ ಪರಿಮಳದ್ರವ್ಯವನು, ಜಿಘ್ರೇತ್ - ಆಘ್ರಾಣಿಸಬೇಕು. ಇತಿ - ಈ ಪ್ರಕಾರದಲ್ಲಿ, ಜಾಬಾಲಿಕಾ - ಜಾಬಾಲ ಸಂಬಂಧವಾದ, ಶ್ರುತಿಃ - ವೇದವು ಹೇಳುತ್ತಂ ಇದ್ದೀತು ॥೭೫॥

ಯೇ ಲಿಂಗಧಾರಿಣೋ ಲೋಕೇಯೇ ಶಿವೈಕ್ಯಪರಾಯಣಾಃ
ತೇಷಾಂತು ಶಿವ ನಿರ್ಮಾಲ್ಯಮುಚಿತನ್ನಾನ್ಯಜಂತುಷು

ಯೇ - ಆರು ಕೆಲಂಬರು, ಲಿಂಗಧಾರಿಣಃ - ಲಿಂಗವಂತರು. ಯೇ - ಆರು ಕೆಲಂಬರು, ಶಿವೈಕ್ಯ ಪರಾಯಣಃ - ಶಿವನೆ ಗತಿಯಾಗಿರ್ದವರುಗಳು, ತೇಷಾಂ - ಅವರಿಗೆ, ಶಿವನಿರ್ಮಾಲ್ಯಂ - ಶಿವನ ಪ್ರಸಾದವು, ಉಚಿತಃ - ಯೋಗ್ಯವು, ಅನ್ಯಜಂತುಷು - ಉಳಿದ ಜನರಿಗೆ, ನ - ಯೋಗ್ಯವಲ್ಲ ॥೭೬॥

ನಿರ್ಮಾಲ್ಯಂ ನಿರ್ಮಲಂ ಶುದ್ಧಂ ಶಿವೇನ ಸ್ವೀಕೃತಂ ಯತಃ
ನಿರ್ಮಲೈಃ ತತ್ಪರೈಃ ಧಾರ್ಯಂ ನಾನ್ಯೈಪ್ರಾಕೃತ ಜಂತುಭಿಃ

ಯತಃ - ಆವುದಾನೊಂದು ಕಾರಣ, ಶಿವೇನ - ಶಿವನಿಂದ, ಸ್ವೀಕೃತಂ - ಸ್ವೀಕರಿಸಲ್ಪಟ್ಟಂಥಾ, ನಿರ್ಮಾಲ್ಯಂ - ನಿರ್ಮಾಲ್ಯವು, ನಿರ್ಮಲಂ - ನಿರ್ದೋಷ ವಾಗಿರ್ದಂಥಾ, ಶುದ್ಧಂ - ಪರಿಶುದ್ಧಿಯ ಮಾಡುವಂಥಾದು, ಅತಃ - ಅದು ಕಾರಣ, ನಿರ್ಮಲೈಃ - ಪಾಪರಹಿತನಾಗಿರ್ದಂಥಾ, ತತ್ಪರೈಃ - ಶಿವನಲ್ಲಿ ತತ್ಪರರಾದ ಭಕ್ತರಿಂದ,

ಧಾರ್ಯಂ - ಸ್ವೀಕರಿಸಲು ಯೋಗ್ಯವು, ಅನ್ಯೈಃ - ಉಳಿದಂಥಾ, ಪ್ರಾಕೃತ ಜಂತುಭಿಃ - ಶಿವದೀಕ್ಷಾವಿಹೀನರಾದ ಮನುಷ್ಯರಿಂದ, ನ- ಧರಿಸಲು ಯೋಗ್ಯವಲ್ಲ ॥೭೭॥

ಗುರುತ್ವಾತ್ಸರ್ವಲೋಕಾನಾಂ ಶಂಭೋರಮಿತತೇಜಸಃ
ತಸ್ಮೈ ನಿವೇದಿತಂ ಸರ್ವಂ ಸ್ವೀಕಾರ್ಯ್ಯಂ ತತ್ಪರಾಯಣೈಃ

ಅಮಿತ ತೇಜಸಃ - ಅನೇಕ ಶಕ್ತಿಯನುಳ್ಳಂಥಾ, ಶಂಭೋಃ - ಶಿವನು ಸರ್ವಲೋಕಾನಾಂ - ಸಮಸ್ತ ಲೋಕಗಳಿಗೆ, ಗುರುತ್ವಾತ್ - ಗುರುವಾದಕಾರಣ, ತಸ್ಮೈ - ಆ ಶಿವಂಗೋಸ್ಕರ, ನಿದೇದಿತಂ - ಸಮರ್ಪಿಸಲ್ಪಟ್ಟಂಥಾ, ಸರ್ವಂ - ಸಮಸ್ತವು, ತತ್ಪರಾಯಣೈಃ - ಶಿವಭಕ್ತರುಗಳಿಂದ, ಸ್ವೀಕಾರ್ಯಂ - ಸ್ವೀಕರಿಸಲು ಯೋಗ್ಯವು ॥೭೮॥

ಅನ್ನಜಾತೇತು ಭಕ್ತೇ ನ ಭುಂಜಮಾನೇ ಶಿವಾರ್ಪಿತೇ
ಸಿಕ್ತೇಽಸಿಕ್ತೇಽಶ್ವಮೇಧಸ್ಯ ಯತ್ಫಲಂ ತದವಾಪ್ಯತೇ

ಶಿವಾರ್ಪಿತಂ - ಶಿವನಿಗೆ ಸಮರ್ಪಿಸಿದಂಥಾ, ಅನ್ನಜಾತೇ - ಅನ್ನಗಳ ಸಮೂಹವು, ಭಕ್ತೇನ - ಶಿವಭಕ್ತನಿಂದ, ಭುಂಜಮಾನೆ - ಭುಂಜಿಸಲ್ಪಡುತ್ತಂ ಇರಲಾಗಿ, ಅಶ್ವಮೇಧಸ್ಯ - ಅಶ್ವಮೇಧ ಯಾಗಕ್ಕೆ, ಯತ್ಫಲಂ - ಆವುದಾನೊಂದು ಫಲವುಂಟು, ತತ್ - ಆ ಫಲವು, ಸಿಕ್ತೇಸಿಕ್ತೇ - ಅಗುಳಗುಳಿಗಳಿಗೆಯು, ಅವಾಪ್ಯತೇ - ಪಡೆಯಲ್ಪಡುವುದು ॥೭೯॥

ಶಿವಲಿಂಗಪ್ರಸಾದಸ್ಯ ಸ್ವೀಕಾರಾದ್ಯತ್ಫಲಂ ಭವೇತ್
ತಥಾ ಪ್ರಸಾದಸ್ವೀಕಾರಾದ್ಗುರು ಜಂಗಮಯೋರಪಿ

ಶಿವಲಿಂಗಪ್ರಸಾದಸ್ಯ - ಶಿವಲಿಂಗ ಪ್ರಸಾದದ, ಸ್ವೀಕಾರಾತ್ - ಸ್ವೀಕಾರದಿಂದ, ಯತ್ಫಲಂ - ಆ ಫಲವು, ಭವೇತ್ - ಅಹುದು, ತಥಾ - ಹಾಂಗೆ, ಗುರುಜಂಗಮಯೋರಪಿ - ಗುರುಚರಮೂರ್ತಿಗಳ, ಪ್ರಸಾದಸ್ವಿಕಾರಾತ್ - ಪ್ರಸಾದ ಸ್ವೀಕರಿಸುವುದರಿಂದ ಆ ಫಲವಹುದು ॥೮೦॥

ತಸ್ಮಾದ್ಗುರುಂ ಮಹಾದೇವಂ ಶಿವಯೋಗಿನಮೇವ ಚ
ಪೂಜಯೇತ್ತತ್ಪ್ರಸಾದಾನ್ನಂ ಭುಂಜೀಯಾತ್ಪ್ರತಿವಾಸರಂ

ತಸ್ಮಾತ್ - ಅದುಕಾರಣ, ಗುರುಃ - ಗುರುವನು, ಮಹಾದೇವಂ - ಶಿವನನ್ನು, ಶಿವಯೋಗಿನ ಮೇವಚ - ಶಿವಯೋಗಿಯನು, ಪ್ರತಿವಾಸರಂ - ಪ್ರತಿದಿನದಲ್ಲಿಯೂ, ಪೂಜಯೇತ್ - ಪೂಜಿಸಬೇಕು. ತತ್ಪ್ರಸಾದಾನ್ನಂ - ಅವರ ಪ್ರಸಾದವನು, ಭುಂಜಯೇತ್ - ಭುಂಜಿಸಬೇಕು ॥೮೧॥

೧೩. ಉಪಾಧಿಮಾಟಸ್ಥಲ

ಶಿವಲಿಂಗೇ ಶಿವಾಚಾರ್ಯೇ ಶಿವಯೋಗಿನಿ ಭಕ್ತಿಮಾನ್
ದಾನಂಕುರ್ಯಾದ್ಯಥಾಶಕ್ತಿ ತತ್ಪ್ರಸಾದಯುತಃ ಸದಾ

ಈ ಪ್ರಕಾರದಲ್ಲಿ ಗುರು ಲಿಂಗ ಜಂಗಮದ ಪೂಜೆಯನು ಅವರ ಪಾದೋದಕ ಪ್ರಸಾದ ಸ್ವೀಕಾರವನು ನಿರೂಪಿಸಿ ಅವರಿಗೆ ದಾನವಿಧಿಯನು ಹೇಳುತಿರ್ದಪಂ

ಶಿವಲಿಂಗೇ - ಶಿವಲಿಂಗದಲ್ಲಿ, ಶಿವಚಾರ್ಯೇ - ಗುರುವಿನಲ್ಲಿ, ಶಿವಯೋಗಿನಿ - ಜಂಗಮದಲ್ಲಿಯು, ಭಕ್ತಿಮಾನ್ - ಭಕ್ತಿಯುಳ್ಳಂಥಾತನಾಗುತ್ತಲು, ತತ್ಪ್ರಾಸಾದಯುತಃ - ಆ ಪ್ರಸಾದ ಸ್ವೀಕಾರವನ್ನುಳ್ಳಂಥಾವನು. ಸದಾ - ಆವಾಗಲೂ, ಯಥಾಶಕ್ತಿಃ - ತನ್ನ ಶಕ್ತಿಯನು ಅತಿ ಕ್ರಮಿಸದೆ, ದಾನಂ - ಭಕ್ತಿಯನು, ಕುರ್ಯಾತ್ - ಮಾಡಬೇಕು ॥೮೨॥

ದಾನಂ ತು ತ್ರಿವಿಧಂ ಪ್ರೋಕ್ತಂ ಸೋಪಾಧಿ ನಿರುಪಾಧಿಕಂ
ಸಹಜಂ ಚೇತಿ ಸರ್ವೇಷಾಂ ಸರ್ವತಂತ್ರವಿಶಾರದೈಃ

ದಾನಭೇದವನು ಹೇಳುತ್ತಂ ಇದ್ದಾನು

ಸೋಪಾಧಿಕಃ - ಉಪಾಧಿಕವೆಂದು, ನಿರುಪಾಧಿಕಂ - ನಿರುಪಾಧಿಕವೆಂದು, ಸಹಜಂಚೇತಿ - ಸಹಜಮಾಟವೆಂದು, ಸರ್ವತ್ರಂತ್ರ ವಿಶಾರದೈಃ - ಸಮಸ್ತಾ ಗಮಗಳಲ್ಲಿ ಕುಶಲರಾದವರುಗಳೆಲ್ಲ, ಸರ್ವೇಷಾಂ - ಸಮಸ್ತರುಗಳಿಗೆ, ತ್ರಿವಿಧಂ - ಮೂರು ಪ್ರಕಾರವೆಂದು, ಪ್ರೋಕ್ತಂ - ಹೇಳಲ್ಪಟ್ಟಿತು ॥೮೩॥

ಫಲಾಭಿಸಂಧಿ ಸಂಯುಕ್ತಂ ದಾನಂ ಯದ್ವಿಹಿತಂ ಭವೇತ್
ತತ್ಸೋಪಾಧಿಕಮಾಖ್ಯಾತಂ ಮುಮುಕ್ಷುಭಿರನಾದೃತಂ

ಅವಕ್ಕೆ ಲಕ್ಷಣವನು ಹೇಳುತಿರ್ದಪಂ

ವಿಹಿತಂ - ವೇದೋಕ್ತವಾಗಿರ್ದಂಥ, ಯದ್ದಾನಂ - ಆವುದಾನೊಂದು ದಾನವು, ಫಲಾಭಿಸಂಧಿಸಂಯುಕ್ತಂ - ಫಲ ಪ್ರಾರ್ಥನೆಯಿಂದ ಕೂಡಿದಂಥಾದು, ತತ್ - ಆ ದಾನವು, ಸೋಽಪಾಧಿಮಾಖ್ಯಾತಂ - ಉಪಾಧಿಕ ದಾನವೆಂದು ಹೇಳಲ್ಪಡುವುದು, ಮುಮುಕ್ಷುಭಿಃ - ಮೋಕ್ಷಾಪೇಕ್ಷಿತದಿಂದ, ಅನಾದೃತಂ - ಸ್ವೀಕರಿಸಲ್ಪಟ್ಟುದಲ್ಲ ॥೮೪॥

೧೪. ನಿರುಪಾಧಿಮಾಟಸ್ಥಲ

ಫಲಾಭಿಸಂಧಿನಿರ್ಮುಕ್ತಾಮೀಶ್ವರಾರ್ಪಿತಕಾಂಕ್ಷಿತಂ
ನಿರುಪಾಧಿಕಮಾಖ್ಯಾತಂ ದಾನಂ ದಾನ ವಿಶಾರದೈಃ

ಫಲಾಭಿಸಂಧಿನಿಮುರ್ಕ್ತಂ - ಫಲಾಭಿಲಾಶೆ ಇಲ್ಲದೆ, ಈಶ್ವರಾರ್ಪಿತ ಕಾಂಕ್ಷಿತಂ - ಶಿವಾರ್ಪಿತವಾಗಬೇಕೆಂಬ ಪ್ರೀತಿಯನುಳ್ಳಂಥಾ, ದಾನಂ - ದಾನವು, ದಾನ ವಿಶಾರದೈಃ - ದಾನದಲ್ಲಿ ಕುಶಲರುಗಳಿಂದ, ನಿರುಪಾಧಿಕಂ - ನಿರುಪಾಧಿಕ ದಾನವೆಂದು, ಆಖ್ಯಾತಂ - ಹೇಳಲ್ಪಟ್ಟಿತು ॥೮೫॥

೧೫. ಸಹಜಮಾಟಸ್ಥಲ

ಗೃಹೀತ್ರ ದಾತೃ ದೇಯನಾಂ ಶಿವಭಾವಂ ವಿಚಿಂತಯೇತ್
ಆತ್ಮನೋಽಕರ್ತೃಭಾವಂ ಚ ಯದ್ದತ್ತಂ ಸಹಜಂಭವೇತ್

ಗೃಹೀತೃ - ದಾನವ ತೆಗೆದುಕೊಂಬಾತನು, ದಾತೃ - ಕೊಡುವಾತನು, ದೇಯಾನಾಂ - ದಾನ ದ್ರವ್ಯಕ್ಕು, ಶಿವಭಾವಂ - ಶಿವನೆಂಬ ಭಾವನೆಯನು, ವಿಚಿಂತಯನ್ - ಸ್ಮರಿಸುತ್ತವು, ಆತ್ಮನಃ - ತನಗೆ, ಅಕತೃಭಾವಂ ಚ - ಸ್ವಾತಂತ್ರ್ಯವಿಲ್ಲ, ಶಿವನೆ ಕೊಡುವಂಥವನೆಂದು ವಿಚಾರಿಸುತ್ತಂ ಇದ್ದಂಥ, ಯದ್ದತ್ತಂ - ಆವುದಾನೊಂದು ದಾನವುಂಟು, ಯೇತತ್ - ಆ ದಾನವು, ಸಹಜಂಭವೇತ್ - ಸಹಜದಾನವೆನಿಸುವುದು ॥೮೬॥

ಸಹಜಂದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಂ
ಶಿವಜ್ಞಾನಪ್ರದಂ ಪುಂಸಾಂ ಜನ್ಮರೋಗ ನಿವರ್ತಕಂ

ಮೂರುಪ್ರಕಾರವಾದ ದಾನದೊಳಗೆ ಸಹಜದಾನವೆ ಉತ್ತಮದಾನವೆಂದು ಹೇಳುತಿರ್ದಪಂ

ಸಹಜದಾನಂ - ಸಹಜದಾನವು, ಉತ್ಕೃಷ್ಟಂ - ಉತ್ತಮವು, ಸರ್ವದಾನೋತ್ತ ಮೋತ್ತಮಂ - ಸಮಸ್ತದಾನದಿಂದವು ಅತ್ಯಂತ ಉತ್ತಮವು, ಪುಂಸಾಂ - ಪುರುಷರುಗಳಿಗೆ, ಶಿವಜ್ಞಾನ ಪ್ರದಂ - ಶಿವಜ್ಞಾನವ ಕೊಡುವುದು, ಜನ್ಮರೋಗ ನಿವರ್ತಕಂ - ಜನನವೆಂಬ ರೋಗವನು ಕೆಡಿಸುವುದು ॥೮೭॥

ಶಿವಾಯ ಶಿವಭಕ್ತಾಯಾ ದೀಯ್ಯತೇಯದಿಕಿಂಚಿನ
ಭಕ್ತ್ಯಾತದಪಿ ವಿಖ್ಯಾತಂ ಸಹಜಂದಾನಮುತ್ತಮಂ

ಮತ್ತೊಂದು ಬಗೆಯಲ್ಲಿ ಸಹಜದಾನಕ್ಕೆ ಲಕ್ಷಣವನು ಹೇಳುತಿರ್ದಪಂ

ಯದಿ - ಎತ್ತಲಾನು, ಕಿಂಚಿನ - ಅಲ್ಪವನಾದರೂ, ಶಿವಾಯ - ಶಿವನಿಗೋಸ್ಕರ ಶಿವಭಕ್ತಾಯ - ಶಿವಭಕ್ತಿನಿಗೋಸ್ಕರ, ದೀಯ್ಯತೇ - ಕೊಡಲ್ಪಡುತ್ತಂ ಇದ್ದೀತು, ತದಪಿ - ಅದಾಯಿತ್ತಾದೊಡೆ, ಉತ್ತಮಂ - ಉತ್ಕೃಷ್ಟವಾದ, ಸಹಜದಾನಮಿತಿ - ಸಹಜದಾನವೆಂದು, ವಿಖ್ಯಾತಂ - ಆಗಮ ಪ್ರಸಿದ್ಧರು ಹೇಳುತ್ತಿಹರು ॥೮೮॥

ದಾನಾತ್ಸ್ವರ್ಣಸಹಸ್ರಸ್ಯಾ ಸತ್ಪಾತ್ರೇ ಯತ್ಫಲಂ ಭವೇತ್
ಏಕಪುಷ್ಪ ಪ್ರದಾನೇನ ಶಿವೇ ತತ್ಫಲಮೀಷ್ಯತೇ

ಸತ್ಪಾತ್ರೇ - ಸತ್ಪಾತ್ರದಲ್ಲಿ, ಸ್ವರ್ಣಸಹಸ್ರಸ್ಯ - ಸಾವಿರ ವರಹನ, ದಾನಾತ್ - ಫಲಾರ್ತಿಯಾಗಿ ಕೊಡುವುದರಿಂದ, ಯತ್ಫಲಂ - ಆವ ಫಲವು, ಭವೇತ್ - ಅಹುದು. ಶಿವೇ - ಶಿವನಲ್ಲಿ, ಏಕಪುಷ್ಪಪ್ರದಾನೇನ - ಸಹಜ ಭಕ್ತಿಯಿಂದ ಒಂದು ಪುಷ್ಪವನು ಸಮರ್ಪಿಸಿದರೆ, ತತ್ - ಆ ಫಲವು, ಈಷ್ಯತೆ - ಉಂಟಹುದು ॥೮೯॥

ಶಿವ ಯೇವ ಪರಂ ಪಾತ್ರ ಸರ್ವ ವಿದ್ಯಾನಿಧಿರ್ಗುರುಃ
ತಸ್ಮೈದತ್ತಂತು ಯತ್ಕಿಂಚಿದನಂತಫಲಂ ಭವೇತ್

ಸರ್ವವಿದ್ಯಾನಿಧಿಃ - ಸಮಸ್ತ ಜ್ಞಾನಂಗಳಿಗೆ ಆವಾಸವಾಗಿರ್ದಂಥ, ಗುರುಃ - ಗುರುರೂಪಾಗಿರ್ದಂಥ, ಶಿವಏವ - ಶಿವನೊಬ್ಬನೆ, ಪರಂ - ಉತ್ತಮವಾಗಿರ್ದಂಥ, ಪಾತ್ರಂ - ದಾನಪಾತ್ರವು, ತಸ್ಮೈ-ಅಂಥ ಗುರುವಿಗೋಸ್ಕರ, ದತ್ತಂ - ಕೊಡಲ್ಪಟ್ಟಂಥ, ಯತ್ಕಿಂಚಿತ್ - ಅಲ್ಪವಾದರು, ಅನಂತಫಲದಾ ಭವೇತ್ - ಅಕ್ಷಯಫಲವನು ಕೊಡುವುದು ॥೯೦॥

ಶಿವಯೋಗೀ ಶಿವಸ್ಸಾಕ್ಷಾತ್ ಶಿವಜ್ಞಾನಮಹೋದಧಿಃ
ಯತ್ಕಿಂಚದ್ದೀಯತೇ ತಸ್ಮೈ ತದ್ದಾನಂ ಪಾರಮಾರ್ಥಿಕಂ

ಶಿವಜ್ಞಾನ ಮಹೋದಧಿಃ - ಶಿವಜ್ಞಾನವೆಂಬ ಸಮುದ್ರವನುಳ್ಳಂಥ, ಶಿವಯೋಗೀ - ಶಿವಯೋಗಿಯು, ಸಾಕ್ಷಾತ್ಶಿವಃ - ಪ್ರತ್ಯಕ್ಷವಾದಂತಹ ಶಿವ ತಾನೆ, ತಸ್ಮೈ - ಆತನಿಗೋಸ್ಕರ, ಯತ್ಕಿಂಚಿತ್ - ಆವುದಾನೊಂದು ಅಲ್ಪವಾದರು, ದೀಯತೆ - ಕೊಡಲ್ಪಡುವುದು, ತದ್ದಾನಂ - ಆ ದಾನವು, ಪಾರಮಾರ್ಥಿಕಂ - ಕೇಡಿಲ್ಲದ ಫಲವನು ಕೊಡುವುದು ॥೯೧॥

ಭಿಕ್ಷಾಮಾತ್ರ ಪ್ರದಾನೇನ ಶಾಂತಾಯ ಶಿವಯೋಗಿನೇ
ಯತ್ಫಲಂ ಲಭ್ಯತೇನೈತದ್ಯಜ್ಞಕೋಟಿಶತೈರಪಿ

ಶಾಂತಾಯ - ಶಾಂತನಾಗಿರ್ದಂಥ, ಶಿವಯೋಗಿನೇ - ಶಿವಯೋಗಿಗೋಸ್ಕರ ಭಿಕ್ಷಾಮಾತ್ರ ಪ್ರದಾನೇನ - ಭಿಕ್ಷವ ನೀಡುವುದರಿಂದ, ಯತ್ಫಲಂ - ಆವಫಲವು, ಲಭ್ಯತೆ - ಉಂಟಹುದು. ಏತತ್ - ಈ ಫಲವು, ಯಜ್ಞ ಕೋಟಿಶತೈರಪಿ - ಅನೇಕ ಯಜ್ಞಗಳಿಂದವು, ನ - ಇಲ್ಲ ॥೯೨॥

ಶಿವಯೋಗೀ ಮಹಾಪಾತ್ರಂ ಸರ್ವೇಶಾಂ ದಾನ ಕರ್ಮಾಣಿ
ತಸ್ಮಾನ್ನಾಸ್ತಿ ಪರಂ ಕಿಂಚಿತ್ಪಾತ್ರಂ ಶಾಸ್ತ್ರವಿಚಾರತಃ

ಸರ್ವೇಷಾಂ - ಸಮಸ್ತರಿಗೂ, ದಾನಕರ್ಮಾಣಿ - ದಾನವಿಧಿಯಲ್ಲಿ, ಶಿವ ಯೋಗೀ - ಶಿವಯೋಗೀಶ್ವರನು, ಮಹಾಪಾತ್ರಂ - ಉತ್ತಮ ಪಾತ್ರವು, ತಸ್ಮಾತ್ - ಆ ಶಿವಯೋಗಿಯ ದೆಸೆಯಿಂದ, ಪರಂ - ಉತ್ತಮವಾಗಿರ್ದಂಥ, ಪಾತ್ರಂ - ಪಾತ್ರವು. ಶಾಸ್ತ್ರವಿಚಾರತಃ - ಶಾಸ್ತ್ರವನು ವಿಚಾರಿಸಿ ನೋಡಲಾಗಿ, ನಾಸ್ತಿ - ಇಲ್ಲ ॥೯೩॥

ಶಿವಯೋಗಿನಿ ಸಂತೃಪ್ತೇ ತೃಪ್ತೋಭವತಿ ಶಂಕರಃ
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಂ

ಶಿವಯೋಗಿನಿ - ಶಿವಯೋಗೀಂದ್ರನು, ಸಂತೃಪ್ತೆ - ಚೆನ್ನಾಗಿ ತೃಪ್ತನಾದರೆ, ಶಂಕರಃ - ಶಿವನು, ತೃಪ್ತೋಭವತಿ - ಸಂತೃಪ್ತನಹನು, ತತ್ತೃಪ್ತ್ಯಾ - ಶಿವನು ತೃಪ್ತನಾಗುತಂ ಇರಲಾಗಿ, ತನ್ಮಯಂ - ಆ ಶಿವಾತ್ಮಕವಾಗಿರ್ದಂಥ, ಚರಾಚರಂ - ಸ್ಥಾವರ ಜಂಗಮಾತ್ಮಕ

ವಾಗಿರ್ದಂಥಾ, ವಿಶ್ವಂ - ಲೋಕವು, ತೃಪ್ತಂ - ಸಂತೋಷವನು, ಯೇತಿ - ಐಯ್ದುತ್ತಂ ಇಹುದು ॥೯೪॥

ತಸ್ಮಾತ್ಸರ್ವ ಪ್ರಯತ್ನೇನ ಯೇನಕೇನಾಪಿ ಕರ್ಮಣಾ
ತೃಪ್ತಿಂ ಕುರ್ಯಾತ್ಸದಾಕಾಲಮನ್ನಾದ್ಯೈಶ್ಶಿವಯೋಗಿನಃ

ತಸ್ಮಾತ್ - ಅದು ಕಾರಣವಾಗಿ, ಸರ್ವಪ್ರಯತ್ನೇನ - ಸರ್ವ ಪ್ರಕಾರದಲ್ಲಿಯೂ ಏನಕೇ ನಾಪಿ ಕರ್ಮಣಾ - ಸರ್ವಕ್ರಿಯೆಗಳಿಂದಲೂ, ಸದಾಕಾಲಂ - ಎಲ್ಲಾಗಳು, ಶಿವಯೋಗಿನಃ - ಶಿವಯೋಗಿಶ್ವರರುಗಳಿಗೆ, ಅನ್ನಾದ್ಯೈಃ - ಅನ್ನ ಪಾನ ವಸ್ತ್ರಾಭರಣಾದ್ಯ ಲಂಕಾರಗಳಿಂದ, ತೃಪ್ತಿಂ - ಸಂತುಷ್ಟಿಯನು, ಕುರ್ಯಾತ್ - ಮಾಡಬೇಕು ॥೯೫॥

ನಿರುಪಾಧಿಕಚಿದ್ರೂಪ ಪರಾನಂದಾತ್ಮವಸ್ತುನಿ
ಸಮಾಪ್ತಂ ಸಕಲಂ ಯಸ್ಯಾ ಸ ದಾನೀ ಶಂಕರಸ್ಸ್ವಯಂ

ನಿರುಪಾಧಿಕ - ಉಪಾಧಿರಹಿತವಾಗಿರ್ದಂಥಾ, ಚಿದ್ರೂಪಂ - ಚಿತ್ಸ್ವರೂಪ ನಾರ್ಗಿದಂಥ, ಪರಾನಂದಂ - ಆನಂದಾತಿಶಯವನ್ನುಳ್ಳಂಥ, ವಸ್ತುನಿ - ಶಿವನಲ್ಲಿ, ಸಕಲಂ - ಸರ್ವವನು, ಸಮಾಪ್ತಂ - ಕೊಡಲ್ಪಟ್ಟಂಥ, ಯಸ್ಯ - ಆವನೊರ್ವನುಂಟು, ಸದಾನೀ - ಆ ಭಕ್ತನು, ಶಂಕರಸ್ಸ್ವಯಂ - ಶಿವನು ತಾನೆ ॥೯೬॥

ಉಕ್ತಾಖಿಲಾಚಾರ ಪರಾಯಣೋಽಸೌ
ಸದಾ ಏ ತನ್ವನ್ಸಹಜಂತುದಾನಂ
ಬ್ರಹ್ಮಾದಿ ಸಂಪತ್ಸುವಿರಕ್ತಚಿತ್ತೋಽ
ಭಕ್ತೋಹಿಮಾಹೇಶ್ವರತಾಮುಪೈತಿ

ಈ ಮರ್ಯಾದೆಯಲ್ಲಿ ಭಕ್ತಿಸ್ಥಲವನ್ನು ನಿರೂಪಿಸಿ ಮಹೇಶ್ವರ ಸ್ಥಲವನು ನಿರೂಪಿಸಲೋಸ್ಕರವಾಗಿ ಪ್ರಸಂಗವನು ಉಪಸಂಹರಿಸುತಿರ್ದಪಂ.

ಉಕ್ತಾಖಿಲಾಚಾರ ಪರಾಯಣಃ - ಹಿಂದೆ ಹೇಳಲ್ಪಟ್ಟ ಶಿವಾಚಾರದಲ್ಲಿ ತತ್ಪರನಾಗಿದ್ದಂಥ, ಸದಾ- ಆವಾಗಲೂ, ಸಹಜದಾನಂ - ಸಹಜ ಭಕ್ತಿಯನು, ಏತನ್ವನ್ - ಮಾಡುತ್ತಂ ಇದ್ದಂಥ, ಬ್ರಹ್ಮಾದಿ ಸಂಪತ್ಸು - ಬ್ರಹ್ಮಪದವಿ ಮೊದಲಾದ ಸಂಪತ್ತುಗಳಲ್ಲಿ, ವಿರಕ್ತ ಚಿತ್ತಃ - ನಿರಾಶವಾದ ಮನಸ್ಸನುಳ್ಳಂಥಾ, ಭಕ್ತಃ - ಶಿವಭಕ್ತನು, ಮಾಹೇಶ್ವರತಾಂ - ಮಾಹೇಶ್ವರತ್ವವನು, ಉಪೈತಿ - ಎಯ್ದುವನು ॥೯೭॥

ಇತಿ ಶ್ರೀವೀರಶೈವಧರ್ಮ ನಿರ್ಣಯೆ ಸಿದ್ಧಾಂತಶಿಖಾಮಣೌ
ಭಕ್ತಾದಿ ಪಂಚಾದಶಸ್ಥಲ ಪ್ರಸಂಗೋನಾಮ ನವಮಪರಿಚ್ಛೇದಃ

ದಶಮಪರಿಚ್ಛೇದ

ಮಹೇಶ್ವರಸ್ಥಲ

ಭಕ್ತನು ಮಾಹೇಶ್ವರನೆಂದು ಪೂರ್ವಪರಿಚ್ಛೇದದ ಕಡೆಯಲ್ಲಿ ಹೇಳಲಾಗಿ ಅಗಸ್ತ್ಯಮುನೀಶ್ವರನು ಪ್ರಶ್ನೆಯ ಮಾಡುತಿರ್ದಪಂ

ಅಗಸ್ತ್ಯ ಉವಾಚ

ಭಕ್ತಸ್ಥಲಂ ಸಮಾಖ್ಯಾತಂ ಭವತಾ ಗಣನಾಯಕ
ಕೇನ ವಾ ಧರ್ಮಭೇದೇನ ಭಕ್ತೋ ಮಾಹೇಶ್ವರೋ ಭವೇತ್

ಗಣನಾಯಕ - ಎಲೆ ಗಣೇಶ್ವರನೆ, ಭವತಾ - ನಿನ್ನಿಂದ, ಭಕ್ತಸ್ಥಲಂ - ಭಕ್ತಸ್ಥಲವು, ಸಮಾಖ್ಯಾತಂ - ಹೇಳಲ್ಪಟ್ಟಿತು. ಕೇನವಾಧರ್ಮಭೇದೇನ - ಆವ ಧರ್ಮ ವಿಶೇಷದಿಂದ ಭಕ್ತಃ - ಭಕ್ತನು, ಮಾಹೇಶ್ವರೋ ಭವೇತ್ - ಮಾಹೇಶ್ವರನಹನು ॥೧॥

ರೇಣುಕ ಉವಾಚ

ರೇಣುಕನು ಉತ್ತರವ ಕೊಡುತಿರ್ದಪಂ

ಕೇವಲೇ ಸಹಜೇದಾನೇ ನಿಷ್ಣಾತಃ ಶಿವತತ್ಪರಃ
ಬ್ರಹ್ಮಾದಿಸ್ಥಾನ ವಿಮುಖೋ ಭಕ್ತೋ ಮಾಹೇಶ್ವರೋ ಭವೇತ್

ಕೇವಲೇ ಸಹಜೇದಾನೇ - ಹಿಂದೆ ಹೇಳಿದ ಮೂರು ಪ್ರಕಾರವಾದ ದಾನದೊಳಗೆ ಸಹಜದಾನದಲ್ಲಿಯು, ನಿಷ್ಣಾತಃ - ಆರುವರ್ತಿಸುತ್ತಂ ಇದ್ದಂಥ, ಶಿವತತ್ಪರಃ - ಶಿವನಲ್ಲಿ ಭಕ್ತಿಯನ್ನುಳ್ಳಂಥ, ಬ್ರಹ್ಮಾದಿಸ್ಥಾನ ವಿಮುಖಂ - ಬ್ರಹ್ಮಾದಿ ಲೋಕಂಗಳಲ್ಲಿ ವಿರಕ್ತನಾಗಿದ್ದಂಥ ಭಕ್ತಃ - ಭಕ್ತನು. ಮಾಹೇಶ್ವರಃ - ಮಾಹೇಶ್ವರನು, ಭವೇತ್ - ಅಹುದು ॥೨॥

ಭಕ್ತೋರ್ಯಥಾ ಸಮುತ್ಕರ್ಷೋ ಭವೇದ್ವೈರಾಗ್ಯಗೌರವಾತ್
ತಥಾ ಮಾಹೇಶ್ವರಃ ಪ್ರೋಕ್ತೋ ಭಕ್ತಸ್ಥಿರವಿವೇಕವಾನ್

ಭಕ್ತಃ- ಶಿವಭಕ್ತನು, ವೈರಾಗ್ಯಗೌರವಾತ್ - ವಿಷಯ ವೈರಾಗ್ಯದ ಮಹಿಮೆಯಿಂದ, ಯಥಾ - ಹ್ಯಾಂಗೆ, ಸಮುತ್ಕರ್ಷಃ - ಅಧಿಕನು, ತಥಾ - ಹಾಂಗೆ, ಸ್ಥಿರ ವಿವೇಕವಾನ್ - ಸ್ಥಿರವಾದ ವಿವೇಕವನ್ನುಳ್ಳಂಥ, ಭಕ್ತಃ - ಭಕ್ತನು, ಮಾಹೇಶ್ವರಃ - ಮಾಹೇಶ್ವರನೆಂದು ಪ್ರೋಕ್ತಃ - ಹೇಳಲ್ಪಡುವನು ॥೩॥

ಮಾಹೇಶ್ವರ ಸ್ಥಲಂ ವಕ್ಷೇ ಯಥೋಕ್ತಂ ಶಂಭುನಾಪುರಾ
ಮಾಹೇಶ್ವರ ಪ್ರಶಂಸಾದೌ ಲಿಂಗನಿಷ್ಠಾ ತತಃಪರಂ

ಪೂರ್ವಾಶ್ರಯನಿರಾಸಶ್ಚ ತಥಾದ್ವೈತ ನಿರಾಕೃತಿಃ
ಆಹ್ವಾನ ವರ್ಜನಂ ಪಶ್ಚಾದಷ್ಟ ಮೂರ್ತಿನಿರಾಕೃತಿಃ

ಸರ್ವಗತ್ವ ನಿರಾಸಶ್ಚ ಶಿವತ್ವಂ ಭಕ್ತಿವಿಶ್ವಯೋಃ
ಏವಂ ನವವಿಧಂ ಪ್ರೋಕ್ತಂ ಮಾಹೇಶ್ವರಮಹಾಸ್ಥಲಂ

ಪುರಾ - ಪೂರ್ವದಲ್ಲಿ, ಶಂಭುನಾ - ಶಿವನಿಂದ, ಯಥೋಕ್ತಂ - ಹೆಂಗೆ ಹೇಳಲ್ಪಟ್ಟಿತು, ತಥಾ - ಆ ಪ್ರಕಾರದಲ್ಲಿ, ಮಾಹೇಶ್ವರ ಸ್ಥಲಂ - ಮಾಹೇಶ್ವರ ಸ್ಥಲವನು, ವಕ್ಷೆ - ಹೇಳಿಹೆನು. ಆದೌ - ಮೊದಲು, ಮಾಹೇಶ್ವರ - ಮಾಹೇಶ್ವರ ಪ್ರಸಂಗ ಸ್ಥಲ, ತತಃಪರಃ - ಅನಂತರದಲ್ಲಿ, ಲಿಂಗನಿಷ್ಠಾ - ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯ ನಿರಾಸಶ್ಚ - ಪೂರ್ವಾಶ್ರಯ ನಿರಾಕರಣ ಸ್ಥಲ, ತಥ - ಅನಂತರದಲ್ಲಿ, ಅದ್ವೈತ ನಿರಾಕೃತಿಃ - ಪ್ರಪಂಚಕ್ಕೂ ಶಿವನಿಗೂ, ಅಭೇದ ನಿರಸನ ಸ್ಥಲ, ಪಶ್ಚಾತ್ - ಬಳಿಕ ಆಹ್ವಾನವರ್ಜನಂ- ಆಹ್ವಾನ ನಿರಸನ ಸ್ಥಲ, ಪಶ್ಚಾತ್ - ಬಳಿಕ, ಅಷ್ಟಮೂರ್ತಿ ನಿರಾಕೃತಿಃ - ಅಷ್ಟಮೂರ್ತಿಗಳು ಶಿವನಲ್ಲವೆಂಬ ಸ್ಥಲ, ಅಥಾ - ಅನಂತರದಲ್ಲಿ, ಸರ್ವಗತಾ ನಿರಾಸಶ್ಚ - ಸರ್ವವ್ಯಾಪಕತ್ವ ನಿರಸನ ಸ್ಥಲ, ಪುನಃ - ಬಳಿಕ ಭಕ್ತ ವಿಶ್ವಯೋಃ, ಶಿವಜಗನ್ಮಯಃ - ಶಿವಜಗನ್ಮಯ ಸ್ಥಲ, ತತಃ - ತದನಂತರದಲ್ಲಿ, ಭಕ್ತ ದೇಹಿಕ ಲಿಂಗಃ - ಭಕ್ತದೇಹಿಕ ಲಿಂಗಸ್ಥಲ, ಏವಂ - ಈ ಪ್ರಕಾರದಲ್ಲಿ, ಮಾಹೇಶ್ವರ ಸ್ಥಲಂ - ಮಾಹೇಶ್ವರ ಸ್ಥಲವು, ಪ್ರಾಜ್ಞೇ - ಬಲ್ಲಂಥವರುಗಳಿಂದ, ನವವಿಧಂ - ಒಂಬತ್ತು ಪ್ರಕಾರವೆಂದು, ಪ್ರೋಕ್ತಂ - ಹೇಳಲ್ಪಟ್ಟಿತು ॥೬॥

ಈ ಪ್ರಕಾರದಿಂದ ಉದ್ದೇಶಿಸಿದನಂತರದಲ್ಲಿ ಲಕ್ಷಣವ ಹೇಳುತಿರ್ದಪಂ

ಆದಿತಃ ಕ್ರಮಶೋವಕ್ಷ್ಯೇ ಸ್ಥಲಭೇದಸ್ಯಲಕ್ಷಣಂ
ಸಮಾಹಿತೇನ ಮನಸಾ ಶ್ರೂಯತಾಂ ಭವತಾ ಮುನೇ

ಮುನೇ - ಎಲೆ ಮುನೀಶ್ವರನೆ, ಸ್ಥಲ ಭೇದಸ್ಯ - ಮಾಹೇಶ್ವರ ಸ್ಥಲಭೇದಂಗಳಿಗೆ, ಲಕ್ಷಣಂ - ಲಕ್ಷಣವನು, ಆದಿತಃ - ಮೊದಲು ತೊಡಗಿ, ಕ್ರಮಶಃ - ಕ್ರಮದಿಂದ, ವಕ್ಷ್ಯ-ಹೇಳಿಹನು, ಭವತಾ - ನಿನ್ನಿಂದ, ಸಮಾಹಿತೇನ - ಸಾವಧಾನವಾಗಿರ್ದಂಥಾ, ಮನಸಾ - ಮನಸ್ಸಿನಿಂದ, ಶ್ರೂಯತಾಂ - ಕೇಳಲ್ಪಡಲಿ ॥೭॥

೧೬. ಮಾಹೇಶ್ವರಪ್ರಶಂಸಾಸ್ಥಲ

ವಿಶ್ವಸ್ಮಾದಧಿಕೋರುದ್ರೋ ವಿಶ್ವಾನುಗ್ರಹಕಾರಕಃ
ಇತಿಯಸ್ಯ ಸ್ಥಿರಾಬುದ್ಧಿಃ ಸ ವೈ ಮಾಹೇಶ್ವರಂ ಸ್ಮೃತಃ

ಮಾಹೇಶ್ವರ ಪ್ರಶಂಸೆಯನು ಹೇಳುತ್ತಂ ಇದ್ದಾನು

ರುದ್ರಃ - ಶಿವನು, ವಿಶ್ವಾತ್ಮಾತ್ - ಸಮಸ್ತರ ದೆಸೆಯಿಂದ, ಅಧಿಕಃ - ಶ್ರೇಷ್ಠನು, ವಿಶ್ವಾನುಗ್ರಹಕಾರಕಃ - ಸರ್ವರಕ್ಷಕನು, ಇತಿ - ಹೀಗೆಂದು, ಯಸ್ಯಾ - ಆವವನಿಗೆ ಸ್ಥಿರಾಬುದ್ಧಿಃ - ನಿಶ್ಚಲವಾಗಿ ಬುದ್ಧಿಯುಂಟು, ಸ ವೈಃ - ಆತನು, ಮಾಹೇಶ್ವರ ಸ್ಮೃತಃ - ಮಾಹೇಶ್ವರನೆನಿಸುವನು ॥೮॥

ಬ್ರಹ್ಮಾದಿ ದೇವತಾಜಾಲಂ ಮೋಹಿತಂ ಮಾಯಯಾಸದಾ
ಅಶಕ್ತಂ ಮುಕ್ತಿದಾನೇತು ಕ್ಷಯಾತಿಶಯ ಸಂಯುತಂ

ಬ್ರಹ್ಮಾದಿದೇವತಾಜಾಲಂ - ಬ್ರಹ್ಮಾದಿದೇವತಾ ಸಮೂಹವು, ಕ್ಷಯಾತಿಶಯ ಸಂಯುತಂ - ಲಯದ ಅತಿಶಯದೊಡನೆ ಕೂಡಿದುದು, ತು - ವಿಶೇಷವಾಗಿ, ಮುಕ್ತಿದಾನೇ - ಮೋಕ್ಷವ ಕೊಡುವಲ್ಲಿ, ಅಶಕ್ತಂ - ಶಕ್ತಿಯಿಲ್ಲದುದು, ಸದಾ - ಆವಾಗವು, ಮಾಯೆಯಿಂದ, ಮೋಹಿತಂ - ಮೋಹಿಸಿದಂಥದು ॥೯॥*

ಅನಾದಿಮುಕ್ತೋಭಗವಾನೇಕ ಏವ ಮಹೇಶ್ವರಃ
ಮುಕ್ತಿದಶ್ವೇತಿ ಯೋ ವೇದ ಸ ವೈಮಾಹೇಶ್ವರಃ ಸ್ಮೃತಃ

ಮಾಹೇಶ್ವರಃ - ಶಿವನು, ಏಕಏವ - ಒಬ್ಬನೆ, ಭಗವಾನ್ - ಷಡ್ಗುಣೈಶ್ವರ್ಯ ಸಂಪನ್ನನಾಗಿ, ಅನಾದಿಮುಕ್ತಃ - ಮಾಯೆಯಿಂದ ಬಿಡಲು ಪಟ್ಟಾತನು, ಮುಕ್ತಿದಶ್ಚ - ಮೋಕ್ಷವ ಕೊಡುವಾತನು, ಇತಿ -ಹೀಗೆಂದು, ಯಃ - ಆವನಾನೊಬ್ಬನು, ವೇದ - ಅರಿವುತ್ತಿಹನು, ಸ ವೈ - ಆತನು, ಮಾಹೇಶ್ವರಃ - ಮಾಹೇಶ್ವರನೆಂದು, ಸ್ಮೃತಃ - ಹೇಳಲುಪಟ್ಟನು. ॥೧೦॥*

ಬ್ರಹ್ಮಾದ್ಯೈರ್ಮಲಿನ್ಯೈಃ ಪಾಪ್ಯೈಃ ನಿರ್ಮಲೇ ಪರಮೇಶ್ವರೇ
ಸಮೋಕ್ತಿ ಯೋನ ಸಹತೇ ಸ ವೈ ಮಾಹೇಶ್ವರಾಭಿದಃ

ನಿರ್ಮಲೇ - ಅವಿದ್ಯಾಕಾಮಾದಿಮಲವಿಲ್ಲದೆ ಇದ್ದಂಥಾ, ಪರಮೇಶ್ವರೇ - ಶಿವನಲ್ಲಿ, ಮಲಿನ್ಯೈಃ - ಅವಿದ್ಯಾದಿ ಮಲವನುಳ್ಳಂಥಾ, ಪಾಪ್ಯೈಃ - ಪಾಪಸಂಬಂಧ ವನ್ನುಳ್ಳಂಥಾ, ಬ್ರಹ್ಮಾದ್ಯೈಃ - ಬ್ರಹ್ಮಮೊದಲಾದ ದೇವತೆಗಳೊಡನೆ, ಸಮೋಕ್ತಿಃ - ಸಮಾನನು ಎಂಬ ವಾಜಾತ್ರವನು, ಏನ - ಆವವನು, ಸಹತೇ - ಸೈರಿಸನು, ಸವೈ - ಆತನು, ಮಾಹೇಶ್ವರಾಭಿದಃ - ಮಾಹೇಶ್ವರನೆನಿಸುವನು ॥೧೧॥

ಈಶ್ವರಃ ಸರ್ವಭೂತಾನಾಂ ಬ್ರಹ್ಮಾದೀನಾಂ ಮಹಾನಿತಿ
ಬುದ್ಧಿಯೋಗಾತ್ಸದಾ ಶುದ್ಧೋ ಭಕ್ತೋ ಮಾಹೇಶ್ವರಃ ಸ್ಮೃತಃ

ಬ್ರಹ್ಮಾದೀನಾಂ - ಬ್ರಹ್ಮಮೊದಲಾದ, ಸರ್ವಭೂತಾನಾಂ - ಸಮಸ್ತ ಪ್ರಾಣಿಗಳ ಮಧ್ಯದಲ್ಲಿ, ಈಶ್ವರಃ - ಶಿವನು, ಮಹಾನಿತಿ - ಅಧಿಕನೆಂಬ ಬುದ್ಧಿಯೋಗಾತ್ - ಬುದ್ಧಿ ಸಂಬಂಧದ ದೆಸೆಯಿಂದ, ಸದಾಶುದ್ಧಃ - ಆವಾಗಲೂ ಶುದ್ಧನಾಗಿರ್ದಂಥಾ, ಭಕ್ತಃ - ಭಕ್ತನು, ಮಾಹೇಶ್ವರಸ್ಮೃತಃ - ಮಾಹೇಶ್ವರನೆನಿಸುವನು. ॥೧೨॥

ಕ್ಷಯಾತಿಶಯಸಂಯುಕ್ತಾಃ ಬ್ರಹ್ಮವಿಷ್ಣ್ವಾದಿ ಸಂಪದಃ
ತೃಣವನ್ಮನ್ಯಯುಕ್ತ್ಯಾ ಚ ವೀರಮಾಹೇಶ್ವರಃ ಸದಾ

---

* ಶ್ಲೋಕ ೯-೧೦ನ್ನು ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆ ದಶಮ ಪರಿಚ್ಛೇದದಿಂದ ಸೇರಿಸಿದೆ.

ಕ್ಷಯಾತಿಶಯ ಸಂಯುಕ್ತಾಃ - ಕ್ಷಯಾಭಿವೃದ್ಧಿಗಳನುಳ್ಳಂಥಾ, ಬ್ರಹ್ಮ ವಿಷ್ಣ್ವಾದಿ ಸಂಪದಃ - ಬ್ರಹ್ಮ ವಿಷ್ಣು ಮೊದಲಾದವರುಗಳೈಶ್ವರ್ಯಗಳನು, ವೀರಮಾಹೇಶ್ವರಃ - ವೀರಶೈವನಾದ ಮಾಹೇಶ್ವರನು, ಸದಾ - ಆವಾಗಲೂ, ಯುಕ್ತ್ಯಾ - ಯುಕ್ತಿಯಿಂದ, ತೃಣವತ್ - ತೃಣದೋಪಾದಿಯಲ್ಲಿ ತುಚ್ಛವೆಂದು, ಮನ್ಯತೆ - ಬಗೆಯುತ್ತಿಹನು ॥೧೩॥

ಶಬ್ದ ಸ್ಪರ್ಶಾದಿ ಸಂಪನ್ನೇ ಸುಖಲೇಶೇ ತು ನಿಸ್ಪೃಹಃ
ಶಿವಾನಂದೇ ಸಮುತ್ಕಂಠೋ ವೀರಮಾಹೇಶ್ವರೋ ಭವೇತ್

ಶಬ್ದಸ್ಪರ್ಶಾದಿ ವಿಷಯಂಗಳಿಂದ ಹುಟ್ಟಿದಂಥಾ, ಸುಖಲೇಶೇ - ಸುಖಲೇಶದಲ್ಲಿ ನಿಸ್ಪೃಹಃ - ವಿರಕ್ತನಾಗಿರ್ದಂಥಾ, ವೀರಮಹೇಶ್ವರೋ ಜನಃ - ವೀರಮಾಹೇಶ್ವರ ಜನವು ನಿತ್ಯಂ - ಆವಾಗಲೂ, ಶಿವಾನಂದೇ - ಶಿವಸ್ವರೂಪನಾಗಿರ್ದಂಥ ಸುಖದಲ್ಲಿ, ಸಮುತ್ಕಂಠೋ ಭವೇತ್ - ಲವಲವಿಕೆಯನುಳ್ಳಂಥಾದ್ದು ॥೧೪॥

ಪರಸ್ತ್ರೀಸಂಗ ನಿರ್ಮುಕ್ತಃ ಪರದ್ರವ್ಯಪರಾಙ್ಮುಖಃ
ಶಿವಾರ್ಥಕಾರ್ಯಸಂಪನ್ನಶ್ಶಿವಾಗಮಪರಾಯಣಃ

ಶಿವಸ್ತುತಿರಸಾಸ್ವಾದಮೋದಮಾನಮನಾಃ ಶುಚಿಃ
ಶಿವೋತ್ಕರ್ಷಪ್ರಮಾಣಾನಾಂ ಸಂಪಾದನಸಮುದ್ಯತಃ

ನಿರ್ಮೋಹ ನಿರಹಂಕಾರೋ ನಿರಸ್ತಕ್ಲೇಶಪಂಜರಃ
ಅಸ್ಪೃಷ್ಟಮದಸಂಬಂಧೋ ಮೋಹ ಮಾತ್ಸರ್ಯ ವರ್ಜಿತಃ

ನಿರಸ್ತಲೋಭಮದನೋ ನಿರ್ಧೂತಕ್ರೋಧವಿಪ್ಲವಃ
ಸದಾ ಸಂತುಷ್ಟಹೃದಯಃ ಸರ್ವಪ್ರಾಣಿಹಿತೇ ರತಃ

ನಿವಾರಣಸಮುದ್ಯೋಗೀ ಶಿವಕಾರ್ಯ ವಿರೋಧಿನಾಂ
ಸಹಚಾರೀ ಸದಾಕಾಲಂ ಶಿವೋತ್ಕರ್ಷಾಭಿದಾಯಿಭಿಃ

ಶಿವಾಪಕರ್ಷ ಸಂಪ್ರಾಪ್ತೌ ಪ್ರಾಣತ್ಯಾಗಸ್ಯಶಂಕಿತಃ
ಶಿವೈಕನಿಷ್ಠಃ ಸರ್ವಾತ್ಮಭವೇನ್ಮಹೇಶ್ವರೋಜನಃ

ಪರಸ್ತ್ರೀಸಂಗ ನಿರ್ಮುಕ್ತಃ - ಪರಸ್ತ್ರೀಸಂಗರಹಿತನಾಗಿರ್ದಂಥ, ಪರದ್ರವ್ಯ ಪರಾಙ್ಮುಖಃ - ಪರದ್ರವ್ಯದಲ್ಲಿ ವಿಮುಖನಾಗಿರ್ದಂಥ, ಶಿವಾರ್ಥಕಾರ್ಯ ಸಂಪನ್ನಃ - ಶಿವನ ಊಳಿಗವನೆ ಮಾಡುವಂಥ, ಶಿವಾಗಮ ಪರಾಯಣಃ - ಶಿವಾಗಮಂಗಳಲ್ಲಿ ತತ್ಪರನಾಗಿರ್ದಂಥ, ಶಿವಸ್ತುತಿ ರಸಾಸ್ವಾದ ಮೋದಮಾನ ಮನಃ - ಶಿವಸ್ತುತಿ ರಸವನು ಆಸ್ವಾದಿಸಿ ಸಂತುಷ್ಟನಾದ ಮನಸ್ಸನುಳ್ಳಂಥ, ಶುಚಿಃ - ಶುದ್ಧನಾಗಿರ್ದಂಥ, ಶಿವೋತ್ಕರ್ಷ ಪ್ರಮಾಣಾನಾಂ - ಶಿವಾಧಿಕ್ಯವನು ಹೇಳುವಂಥ ಪುರಾಣಗಳನು, ಸಂಪಾದನ ಸಮುದ್ಯತಃ - ಸಂಪಾದಿಸುವಲ್ಲಿ ತತ್ಪರನಾಗಿರ್ದಂಥ, ನಿರ್ಮೋಹ - ತನ್ನದೆಂಬ ಮಮತೆ ಇಲ್ಲದಿರ್ದಂಥ, ನಿರಹಂಕಾರಃ - ತಾನು ಎಂಬ ಅಹಂಕಾರರಹಿತನಾಗಿರ್ದಂಥ, ನಿರಸ್ತಕ್ಲೇಶ ಪಂಜರಃ - ನಿರಾಕರಿಸಲ್ಪಟ್ಟ ಅವಿದ್ಯಾದಿ ಕ್ಲೇಶವೆಂಬ ಪಂಜರವನುಳ್ಳಂಥ, ಅಸ್ಪೃಷ್ಟಮದ

ಸಂಬಂಧಃ - ಅರಿಷ್ಷಡ್ವರ್ಗಗಳೊಳಗೆ ಮದದಿಂದ ಸ್ಫುರಿಸಲು ಪಡೆದಿರ್ದಂಥಾ, ಮೋಹಮಾತ್ಸರ್ಯ ವರ್ಜಿತಃ - ಮೋಹ ಮಾತ್ಸರ್ಯವಿಲ್ಲದೆ ಇರ್ದಂಥ, ನಿರಸ್ತಲೋಭ ಮದನಃ - ಲೋಭ ಕಾಮವನು ನಿರಾಕರಿಸಿದಂಥ, ನಿರಸ್ತಕ್ರೋಧವಿಪ್ಲವಃ - ನಿರಾಕರಿಸಲ್ಪಟ್ಟ ಕ್ರೋಧವನುಳ್ಳಂಥ, ಸದಾ - ಆವಾಗಲೂ, ಸಂತುಷ್ಟ ಹೃದಯಃ - ಸಂತೋಷವಾದ ಮನಸ್ಸನುಳ್ಳಂಥ, ಸರ್ವಪ್ರಾಣಿ ಹಿತೇರತಃ - ಸಮಸ್ತ ಪ್ರಾಣಿಗಳಿಗೆ ಹಿತವನ್ನೆಣಿಸುವಂಥ, ಶಿವಕಾರ್ಯ ವಿರೋಧಿನಾಂ - ಶಿವನ ಕಾರ್ಯವ ಕೆಡಿಸುವಂಥವರುಗಳನು, ನಿವಾರಣ - ತೊಲಗಿಸುವಂಥ, ಸಮುದ್ಯೋಗಿ - ಉದ್ಯೋಗವನುಳ್ಳಂಥ, ಸದಾ - ಆವಾಗಲೂ ಶಿವೋತ್ಕರ್ಷಾಭಿದಾಯಿಭಿಃ - ಶಿವಾಧಿಕ್ಯವನ್ನು ಹೇಳುವಂಥ, ಮಾಹೇಶ್ವರರೊಡನೆ, ಸಹಚಾರಿ - ಕೂಡಿ ವರ್ತಿಸುವಂಥ, ಶಿವಾಪಕರ್ಷಸಂಪ್ರಾಪ್ತೌ - ಶಿವನಿಗೆ ನ್ಯೂನತ್ವ ಪ್ರಸಂಗ ಬರಲಾಗಿ, ಪ್ರಾಣತ್ಯಾಗ - ಪ್ರಾಣ ಬಿಡುವಲ್ಲಿಯು, ಅಶಂಕಿತಃ - ಶಂಕೆ ಇಲ್ಲದೆ ಇರ್ದಂಥ, ಸರ್ವಾತ್ಮ - ಸರ್ವಾತ್ಮರುಗಳಲ್ಲಿ ಶಿವಭಾವನೆಯುಳ್ಳಂಥ, ಮಾಹೇಶ್ವರೋ ಜನಃ - ವೀರ ಮಾಹೇಶ್ವರನಾದ ಪುರುಷನು, ಶಿವೈಕನಿಷ್ಠೋಭವೇತ್ - ಏಕಲಿಂಗನಷ್ಟನಹನು ॥೨೦॥

೧೭. ಲಿಂಗನಿಷ್ಠಾಸ್ಥಲ

ಅಸ್ಯ ಮಾಹೇಶ್ವರಸ್ಯೋಕ್ತಂ ಲಿಂಗನಿಷ್ಠಾಮಹಾಸ್ಥಲಂ

ಹಿಂದೆ - ಹೇಳಿದ ವೀರಮಾಹೇಶ್ವರನಿಗೆ, ಲಿಂಗನಿಷ್ಠಾಸ್ಥಲಂ - ಲಿಂಗ ನಿಷ್ಠೆ ಎಂಬಂಥಾ ಉತ್ತಮ ಸ್ಥಲವು, ಉಕ್ತಂ - ಹೇಳಲ್ಪಟ್ಟಿತು ॥೨೧॥

ಪ್ರಾಣತ್ಯಾಗೇಽಪಿಸಂಪ್ರಾಪ್ತೌ ಯದತ್ಯಾಜ್ಯಂ ವಿಧೀಯತೇ
ಅಪಗಚ್ಛತು ಸರ್ವಸ್ವಂ ಶಿರಚ್ಛೇದನಮಸ್ತುವಾ

ಮಾಹೇಶ್ವರೋ ನ ಮುಂಚೇತ ಲಿಂಗಪೂಜಾ ಮಹಾವ್ರತಂ

ಪ್ರಾಣತ್ಯಾಗೇಪಿ - ಪ್ರಾಣತ್ಯಾಗವು, ಸಂಪ್ರಾಪ್ತೇ - ಬಂದದುಂಟಾದರೂ, ಸರ್ವಸ್ವಂ - ಸಮಸ್ತಸೊಮ್ಮು ಅಪಗಚ್ಛತ ವಾ - ಹೋದರೂ, ಶಿರಚ್ಛೇದನ ಮಸ್ತುವಾ - ತಲೆ ಹೋದರೂ, ಯತ್ - ಆವುದಾನೊಂದು ಲಿಂಗನಿಷ್ಠೆಯು, ಅತ್ಯಾಜ್ಯಂ - ಬಿಡಲು ಯೋಗ್ಯವಲ್ಲವೆಂದು, ವಿಧೀಯತೇ - ಆಗಮಗಳಲ್ಲಿ ಹೇಳಲ್ಪಟ್ಟಿತು. ಲಿಂಗಪೂಜಾ ಮಹಾವ್ರತಂ - ಲಿಂಗಪೂಜೆಯೆಂಬ ಮಹಾವ್ರತವನು, ಮಾಹೇಶ್ವರಃ - ಮಾಹೇಶ್ವರನು, ಸ ಮುಂಚತ - ಬಿಡಲಾಗದು ॥೨೨॥

ಚಿನ್ಮಯೇ ಶಾಂಕರೇ ಲಿಂಗೇ ಸ್ಥಿರಂ ಏಷಾಂ ಮನಸ್ಸದಾ
ನಿರ್ಮುಕ್ತೇತರ ಸರ್ವಾರ್ಥಂ ತೇ ಶಿವಾತ್ರುಸಂಶಯಃ

ಏಷಾಂ - ಆರು ಕೆಲಂಬರ, ಮನಃ - ಮನಸ್ಸು, ನಿರ್ಮುಕ್ತೇತರ ಸರ್ವಾರ್ಥಂ - ಉಳಿದ ವಿಷಯಗಳನು ಬಿಟ್ಟು, ಚಿನ್ಮಯೇ - ಚಿತ್ಸ್ವರೂಪನಾದ, ಶಾಂಕರೇಲಿಂಗೇ -

ಶಿವಲಿಂಗದಲ್ಲಿ, ಸ್ಥಿರಂ - ಸ್ಥಿರವಾಗಿದ್ದಿತು, ತೇ - ಅಂಥಾ ಮಹಾತ್ಮರು, ಶಿವಾಃ - ಶಿವಸ್ವರೂಪರು, ನಾತ್ರ ಸಂಶಯಃ - ಈ ಅರ್ಥದಲ್ಲಿ ಸಂದೇಹವಿಲ್ಲ ॥೨೩॥

ಲಿಂಗಪೂಜಾಮಕೃತ್ವಾ ತು ಯೇನ ಭುಂಜಂತಿ ಮಾನವಾಃ
ತೇಷಾಂ ಮಹಾತ್ಮನಾ ಹಸ್ತೇ ಮೋಕ್ಷಲಕ್ಷ್ಮೀರುಪಸ್ಥಿತಾ

ಯೇಮಾನವಾಃ - ಆರು ಕೆಲಂಬ ಮನುಷ್ಯರು, ಲಿಂಗಪೂಜಾಂ - ಲಿಂಗ ಪೂಜೆಯನು, ಅಕೃತ್ವಾ - ಮಾಡದೆ ನ ಭುಂಜಂತಿ - ಭೋಜನ ಮಾಡರು, ತೇಷಾಂ ಮಹಾತ್ಮಾನಾಂ - ಆ ಮಹಾ ಪುರುಷರ, ಹಸ್ತೇ - ಹಸ್ತದಲ್ಲಿ, ಮೋಕ್ಷಲಕ್ಷ್ಮೀ - ಮೋಕ್ಷ ಸಂಪತ್ತು, ಉಪಸ್ಥಿತಾ - ಸ್ಥಿರವಾಗಿಹುದು ॥೨೪॥

ಕಿಮನ್ಯೈ ಧರ್ಮಕಲಿಲೈಃ ಕೀಕಷಾರ್ಥ ಪ್ರದಾಯಿಭಿಃ
ಸಾಕ್ಷಾನ್ಮೋಕ್ಷಪ್ರದಃ ಶಂಭೋ ಧರ್ಮೋ ಲಿಂಗಾರ್ಚನಾತ್ಮಕಃ

ಕೀಕಷಾರ್ಥ ಪ್ರದಾಯಿಭಿಃ - ತುಚ್ಛ ಫಲಗಳನು ಕೊಡುವಂಥಾ, ಅನ್ಯೈಧರ್ಮ ಕಲಿಕೈಃ - ಮಿಕ್ಕಾದ ಧರ್ಮಕಲುಷಂಗಳಿಂದ, ಕಿಂ - ಪ್ರಯೋಜನವೇನು, ಶಂಭೋಃ - ಶಿವನ, ಲಿಂಗಾರ್ಚನಾತ್ಮಕಃ - ಲಿಂಗಪೂಜೆ ಎಂಬಂಥಾ, ಧರ್ಮಃ - ಧರ್ಮವು, ಸಾಕ್ಷಾನ್ಮೋಕ್ಷಪ್ರದಃ - ಪ್ರತ್ಯಕ್ಷವಾಗಿ ಮೋಕ್ಷವ ಕೊಡುವುದು ॥೨೫॥

ಲಿಂಗನಿಷ್ಠಸ್ಯ ಕಿಂ ತಸ್ಯ ಕರ್ಮಣಾತ್ಸರ್ಗ ಹೇತುನಾ
ನಿತ್ಯಾನಂದಶಿವಪ್ರಾಪ್ತಿರ್ಯಸ್ಯ ಶಾಸ್ತ್ರೇಷು ನಿಶ್ಚಿತಾ

ಲಿಂಗನಿಷ್ಠಸ್ಯ - ಲಿಂಗನಿಷ್ಠನಾಗಿದ್ದಂಥಾ, ಯಸ್ಯ - ಆವವಗೆ, ಶಾಸ್ತ್ರೇಷು - ಶಾಸ್ತ್ರಂಗಳಲ್ಲಿ, ನಿತ್ಯಾನಂದ ಶಿವಪ್ರಾಪ್ತಿಃ - ನಿತ್ಯಾನಂದ ಸ್ವರೂಪವಾಗಿರ್ದಂಥ, ಶಿವ ಸಾಯುಜ್ಯವು, ನಿಶ್ಚಿತಾ - ನಿಶ್ಚೈಸಲ್ಪಟ್ಟಿತು. ತಸ್ಯ - ಆತನಿಗೆ, ಸ್ವರ್ಗಹೇತುನಾ - ಸ್ವರ್ಗವನು ಸಾಧಿಸುವಂಥಾ, ಕರ್ಮಣಾ - ಕರ್ಮದಿಂದ, ಕಿಂ - ಪ್ರಯೋಜನವೇನು ॥೨೬॥

ಲಿಂಗೇ ಯಸ್ಯ ಮನೋಲೀನಂ ಲಿಂಗಸ್ತುತಿ ಪರಾ ಚ ವಾಕ್
ಲಿಂಗಾರ್ಚನಪರೌಹಸ್ತೌ ಸರುದ್ರೋನಾತ್ರ ಸಂಶಯಃ

ಯಸ್ಯ - ಆವನಾನೊಬ್ಬನ, ಮನಃ - ಮನಸ್ಸು, ಲಿಂಗೇ- ಲಿಂಗದಲ್ಲಿ, ಲೀನಂ - ಸ್ಥಿರವಾಗಿದ್ದಿತು, ವಾಕ್ - ವಾಕ್ಯವು, ಲಿಂಗಸ್ತುತಿಪರಾ - ಲಿಂಗಸ್ತೋತ್ರದಲ್ಲಿ ತತ್ಪರವಾಗಿರ್ದಂಥಾ, ಹಸ್ತೌ - ಕೈಗಳು, ಲಿಂಗಾರ್ಚನಪರೌ - ಲಿಂಗಪೂಜೆಯಲ್ಲಿ ತತ್ಪರನಾಗಿರ್ದಂಥಾವು. ಸಃ - ಆತ್ಮನು, ರುದ್ರಃ - ರುದ್ರನು, ನಾತ್ರಸಂಶಯಃ - ಈ ಅರ್ಥದಲ್ಲಿ ಸಂದೇಹವಿಲ್ಲ ॥೨೭॥

ಲಿಂಗನಿಷ್ಠಾಪರಂ ಶಾಂತಂ ಭೂತಿ ರುದ್ರಾಕ್ಷ ಸಂಯುತಂ
ಪ್ರಶಂಸಂತಿ ಸದಾಕಾಲಂ ಬ್ರಹ್ಮಾದ್ಯಾ ದೇವತಾ ಮುದಾ

ಲಿಂಗನಿಷ್ಠಾಪರಂ - ಲಿಂಗಪೂಜೆಯಲಿ ತತ್ಪರನಾಗಿರ್ದಂಥ, ಶಾಂತಂ -

ಜಿತೇಂದ್ರಿಯನಾಗಿರ್ದಂಥ, ಭೂತಿರುದ್ರಾಕ್ಷ ಸಂಯುತಂ - ವಿಭೂತಿರುದ್ರಾಕ್ಷ ಧಾರಣವನ್ನುಳ್ಳಂಥಾತನು, ಸದಾ ಕಾಲಂ - ಯಾವಾಗಲೂ, ಬ್ರಹ್ಮಾದ್ಯಾಃ - ಬ್ರಹ್ಮ ಮೊದಲಾಗಿರ್ದಂಥ, ದೇವತಾ - ದೇವತೆಗಳು, ಮುದಾ - ಸಂತೋಷದಿಂದ, ಪ್ರಶಂಸಂತಿ - ಕೊಂಡಾಡುತ್ತಂ ಇಹರು ॥೨೮॥

ಅರ್ಪಿತೇನಾನ್ನಪಾನೇನ ಲಿಂಗೇ ನಿಯಮ ಪೂಜಿತೇ
ಏದೇಹವೃತ್ತಿಂ ಕುರ್ವಂತಿ ಮಹಾಮಾಹೇಶ್ವರಾ ಹಿ ತೇ

ನಿಯಮ ಪೂಜಿತೇ - ನಿಯಮದಿಂದ ಪೂಜಿಸಲ್ಪಟ್ಟಂಥಾ, ಲಿಂಗೇ - ಲಿಂಗದಲ್ಲಿ, ಅರ್ಪಿತೇನ - ಸಮರ್ಪಿಸಲ್ಪಟ್ಟಂಥ, ಅನ್ನಪಾನೇನ - ಅನ್ನೋದಕದಿಂದ, ಯೇ - ಆರು ಕೆಲಂಬರು, ದೇಹವೃತ್ತಿಂ - ದೇಹಯಾತನೆಯನು, ಕುರ್ವಂತಿ - ಮಾಡುತ್ತಂ ಇದ್ದಾರು, ತೇ - ಅವರು, ಮಹಾಮಾಹೇಶ್ವರಃ - ವಿಶಿಷ್ಟ ವೀರಶೈವರೆನಿಸುವರು ॥೨೯॥

೧೮. ಪೂರ್ವಾಶ್ರಯನಿರಸನಸ್ಥಲ

ಲಿಂಗೈಕನಿಷ್ಠಹೃದಯಸ್ಸದಾ ಮಾಹೇಶ್ವರೋಜನಃ
ಪೂರ್ವಾಶ್ರಯಗತಾನ್ಧರ್ಮಾಂತ್ಯಜೇತ್ಸ್ವಾಚಾರರೋದಕಾನ್

ಲಿಂಗನಿಷ್ಠನಾಗಿರ್ದಂಥಾತನಿಗೆ ಪೂರ್ವಾಶ್ರಯ ನಿರಸನವನು ಹೇಳುತಿರ್ದಪಂ

ಸದಾ - ಆವಾಗಲೂ, ಲಿಂಗೈಕ್ಯನಿಷ್ಠಹೃದಯಃ - ಲಿಂಗದಲ್ಲಿ ತತ್ಪರನಾಗಿರ್ದಂಥ ಮನಸ್ಸನ್ನುಳ್ಳಂಥ, ಮಾಹೇಶ್ವರೋಜನಃ - ಮಾಹೇಶ್ವರ ಜನರು ನೀವು, ಸ್ವಾಚಾರ ರೋದಕಾನ್, ಲಿಂಗನಿಷ್ಠನಾಗಿರ್ದಂಥಾತನಿಗೆ, ಧರ್ಮಾನ್ - ವರ್ತನವನು, ತ್ಯಜೇತ್ - ಬಿಡಬೇಕು ॥೩೦॥

ಸ್ವಜಾತಿಕುಲಜಾನ್ಧರ್ಮಾನ್ಲಿಂಗನಿಷ್ಠಾ ವಿರೋಧಿನಃ
ತ್ಯಜೇನ್ಮಾಹೇಶ್ವರೋಜ್ಞೇಯಃ ಪೂರ್ವಾಶ್ರಯನಿರಾಸಕಃ

ಸ್ವಜಾತಿ ಕುಲಜಾನ್ - ತನ್ನ ಬ್ರಾಹ್ಮಣಾದಿ ಜಾತಿಯಾದರೂ ಅನುಚಿತ ವಾಗಿರ್ದಂಥ, ವಿರೋಧಿನಃ - ಲಿಂಗನಿಷ್ಠೆಗೆ ವಿರುದ್ಧವಾಗಿರ್ದಂಥ, ಧರ್ಮಾನ್ - ವರ್ತನೆಗಳನು, ತ್ಯಜೇತ್ - ಬಿಡುತ್ತಂ ಇದ್ದಂಥಾ, ಲಿಂಗನಿಷ್ಠಃ - ಲಿಂಗನಿಷ್ಠನಾಗಿರ್ದಂತಹ, ಮಾಹೇಶ್ವರಃ - ಮಾಹೇಶ್ವರನು, ಪೂರ್ವಾಶ್ರಯ ನಿರಾಸಕೋಜ್ಞೇಯಃ - ಪೂರ್ವಾಶ್ರಯ ನಿರಾಸಕನೆಂದರಿಯಬೇಕು ॥೩೧॥

ಶಿವಸಂಸ್ಕಾರಯೋಗೇನ ವಿಶುದ್ಧಾನಾಂ ಮಹಾತ್ಮನಾಂ
ಕಿಂ ಪೂರ್ವಕಾಲಿಕೈಃ ಧರ್ಮೈಃ ಪ್ರಾಕೃತಾನಾಂ ಹಿ ತೇ ಮತಾಃ

ಶಿವಸಂಸ್ಕಾರ ಯೋಗೇನ - ಶಿವದೀಕ್ಷಾ ಸಂಬಂಧದಿಂದ, ವಿಶುದ್ಧಾನಾಂ - ಪವಿತ್ರನಾಗಿರ್ದಂಥ, ಮಹಾತ್ಮನಾಂ - ಮಹಾಪುರುಷರುಗಳಿಗೆ, ಪೂರ್ವಕಾಲಿಕೈಃ - ಪೂರ್ವಾವಸ್ಥೆಯಲ್ಲಿ ಉಂಟಾಗಿರ್ದಂಥ, ಧರ್ಮೈಃ - ಧರ್ಮಗಳಿಂದ, ಕಿಂ -

ಪ್ರಯೋಜನವೇನು, ತೇ - ಆ ಧರ್ಮಗಳು, ಪ್ರಾಕೃತಾ - ಪ್ರಾಕೃತಾತ್ಮರುಗಳಿಗೆ, ಮತಂ - ಅನುಷ್ಠೇಯವೆಂದು ಸಮ್ಮತಂಗಳು ।।೩೨।।

ವಿಶುದ್ಧಾಃ ಪ್ರಾಕೃತಾಶ್ಚೇತಿ ದ್ವಿವಿಧಾ ಮಾನುಷಾ ಸ್ಮೃತಾಃ
ಶಿವಸಂಸ್ಕಾರಿಣಃ ಶುದ್ಧಾಃಪ್ರಾಕೃತಾಯಿತರೇಮತಾಃ

ಮಾನುಷಾಃ - ಮನುಷ್ಯರು, ವಿಶುದ್ಧಾ - ವಿಶುದ್ಧರೆಂದು, ಪ್ರಾಕೃತಾಃ - ಪ್ರಾಕೃತರೆಂದು, ದ್ವಿವಿಧಾಸ್ಮೃತಾಃ - ಎರಡು ಪ್ರಕಾರವೆನಿಸುವುದು. ಶಿವಸಂಸ್ಕಾರಿಣಃ - ಶಿವದೀಕ್ಷಿತರುಗಳು, ಶುದ್ಧಾಃ - ಶುದ್ಧವೆಂದು, ಇತರೇ ಮತಾಃ - ಉಳಿದ ಮತದವರುಗಳು, ಪ್ರಾಕೃತಾಃ - ಪ್ರಾಕೃತರೆಂದೆನಿಸುವರು ।।೩೩।।

ಶಿವಸಂಸ್ಕಾರಯೋಗೇ ನ ಶಿವಧರ್ಮಾನುಷಂಗಿನಾಂ
ಪ್ರಾಕೃತಾನಾಂ ನ ಧರ್ಮೇಷು ಪ್ರವೃತ್ತಿರುಪಪದ್ಯತೆ

ಶಿವಸಂಸ್ಕಾರಯೋಗೇನ - ಶಿವಸಂಸ್ಕಾರ ಸಂಬಂಧದಿಂದ, ಶಿವಧರ್ಮಾನುಷಂಗಿನಾಂ - ಶಿವಧರ್ಮದಲ್ಲಿ ಆಸಕ್ತರಾಗಿದ್ದಂಥಾವರುಗಳಿಗೆ, ಪ್ರಾಕೃತಾನಾಂ - ಪ್ರಾಕೃತ ಪುರುಷರುಗಳ, ಧರ್ಮಾ - ಧರ್ಮದಲ್ಲಿ, ಪ್ರವೃತ್ತಿಃ - ಪ್ರಯತ್ನವು, ನೋಪಪದ್ಯತೆ - ಯೋಗ್ಯವಲ್ಲ ।।೩೪।।

ವರ್ಣಾಶ್ರಮಸ್ಯ ಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾಮತಾಃ
ಏತಾ ಶಿವೇನ ನಿರ್ದಿಷ್ಟ ಬ್ರಹ್ಮಣಾಕಥಿತಾ ಪರಾ

ವರ್ಣಾಶ್ರಮಸ್ಯ - ಬ್ರಾಹ್ಮಣ ಮೊದಲಾದವರುಗಳಿಗೆ, ಬ್ರಹ್ಮಚರ್ಯ ಮೊದಲಾದ ಆಶ್ರಮಿಗಳಿಗೂ, ಧರ್ಮಾಣಾಂ - ಧರ್ಮಂಗಳ, ವ್ಯವಸ್ಥಾಕಟ್ಟಳೆಯು, ದ್ವಿಧಾ - ಎರಡು ಪ್ರಕಾರವಾಗಿ, ಕೃತಾ - ಮಾಡಲ್ಪಟ್ಟಿತು. ಏತಾ - ಅದರೊಳಗೊಂದು, ಶಿವೇನ - ಶಿವನಿಂದ, ನಿರ್ದಿಷ್ಟಾ - ಹೇಳಲ್ಪಟ್ಟಿತು. ಅಪರಾ - ಮತ್ತೊಂದು, ಬ್ರಹ್ಮಣಾ - ಬ್ರಹ್ಮನಿಂದ, ಗದಿತಾ - ಹೇಳಲ್ಪಟ್ಟಿತು ।।೩೫।।

ಶಿವೋಕ್ತಧರ್ಮನಿಷ್ಠಾತು ಶಿವಾಶ್ರಮ ನಿಷೇವಿಣಾಂ
ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಸ್ಸ್ಮೃತಃ

ಶಿವಾಶ್ರಮ ನಿಷೇವಿಣಾಂ - ಶಿವಾಶ್ರಮದಲ್ಲಿ ಇರುತ್ತಾ ಇದ್ದವರುಗಳಿಗೆ, ಶಿವೋಕ್ತ ಧರ್ಮನಿಷ್ಠಾ - ಶಿವನು ಹೇಳಿದ ಧರ್ಮವು, ಅನುಷ್ಠಿಸಲು ಯೋಗ್ಯವು, ಶಿವಸಂಸ್ಕಾರ ವಿಹೀನಾನಾಂ - ಶಿವಸಂಸ್ಕಾರ ವಿಹೀನರಾಗಿರ್ದಂಥವರುಗಳಿಗೆ, ಪೈತಾಮಹಃ - ಬ್ರಹ್ಮನು ಹೇಳಿದಂಥಾ, ಧರ್ಮ - ಧರ್ಮವು, ಸ್ಮೃತಃ - ಅನುಷ್ಠಿಸಲು ಯೋಗ್ಯವು ।।೩೬।।

ಶಿವಸಂಸ್ಕಾರಯುಕ್ತೇಷು ಜಾತಿಭೇದೋ ನ ವಿದ್ಯತೇ
ಕಾಷ್ಠೇಷು ವಹ್ನಿದಗ್ಧೇಷು ಯಥಾರೂಪಂ ನ ವಿದ್ಯತೇ

ಶಿವಸಂಸ್ಕಾರಯುಕ್ತೇಷು - ಶಿವಸಂಸ್ಕಾರ ಯುಕ್ತರುಗಳಲ್ಲಿ, ಜಾತಿಭೇದೋ ನ

ವಿದ್ಯತೆ - ಬ್ರಾಹ್ಮಣಾದಿ ಜಾತಿ ಭೇದವು ಇಲ್ಲ, ಈ ಅರ್ಥದಲ್ಲಿ ದೃಷ್ಟಾಂತ, ವಹ್ನಿದಗ್ಧೇಷು - ಅಗ್ನಿಯಿಂದ ದಗ್ಧವಾಗಿರ್ದಂಥ, ಕಾಷ್ಠೇಷು - ಕಟ್ಟಿಗೆಗಳಲ್ಲಿ, ರೂಪಂ - ಶುಕ್ಲಕೃಷ್ಣಾದಿರೂಪಭೇದವು, ಯಥಾ - ಹೆಂಗೆ, ನವಿದ್ಯತೇ ಇಲ್ಲ ॥೩೭॥

ತಸ್ಮಾತ್ಸರ್ವಪ್ರಯತ್ನೇನ ಶಿವಸಂಸ್ಕಾರ ಸಂಯುಕ್ತಃ
ಜಾತಿಭೇದಂ ನ ಕುರ್ವೀತ ಶಿವಭಕ್ತೇ ಕದಾಚನ

ತಸ್ಮಾತ್ - ಅದು ಕಾರಣ, ಸರ್ವಪ್ರಯತ್ನೇನ - ಸರ್ವಪ್ರಕಾರದಿಂದಲೂ, ಶಿವಸಂಸ್ಕಾರ ಸಂಯುಕ್ತಃ - ಶಿವಸಂಸ್ಕಾರವನ್ನುಳ್ಳಂಥಾತನು, ಶಿವಭಕ್ತೇ - ಶಿವಭಕ್ತರಲ್ಲಿ, ಕದಾಚಿತ್ - ಒಂದು ಬಾರಿಯು, ಜಾತಿಭೇದಂ - ಜಾತಿ ಭೇದವನು, ನಕುರ್ವೀತಾ - ಮಾಡಬಾರದು ॥೩೮॥

೧೯. ವಾಗದ್ವೈತನಿರಸನಸ್ಥಲ

ಪೂಜ್ಯಪೂಜಕಯೋರಾತ್ಮಲಿಂಗಯೋರ್ಭೇದವರ್ಜನೇ
ಪೂಜಾಕರ್ಮಾದ್ಯ ಸಂಪತ್ತೇ ಲಿಂಗನಿಷ್ಠಾ ವಿರೋಧತಃ

ಸರ್ವಾದ್ವೈತ ವಿಚಾರಸ್ಯ ಜ್ಞಾನಾಭಾವೇವ್ಯವಸ್ಥಿತೇಃ
ಭವೇನ್ಮಾಹೇಶ್ವರಃ ಕರ್ಮೀ ಸರ್ವಾದ್ವೈತನಿರಾಸಕಃ

ಜೀವೇಶ್ವರರಿಗೆ ಭೇದವಿಲ್ಲ ಎಂದು ಪೂರ್ವದಲ್ಲಿ ನಿರೂಪಿಸಲ್ಪಟ್ಟಿತ್ತು. ಅದುಕಾರಣ ಪೂಜ್ಯ ಪೂಜಕ ಭಾವವು ಘಟಿಸದು ಎಂಬನುಪತ್ತಿಯನು ಪರಿಹರಿಸುತಲಿರ್ದಪಂ

ಪೂಜ್ಯಪೂಜಕಯೋಃ - ಪೂಜ್ಯಪೂಜಕಸ್ವರೂಪನಾಗಿರ್ದಂಥಾ, ಆತ್ಮಲಿಂಗಯೋಃ - ಜೀವೇಶ್ವರರುಗಳಿಗೆ, ಭೇದವರ್ಜನೇ - ಭೇದವಿಲ್ಲದೆ ಇದ್ದರೆ, ಪೂಜಾಕರ್ಮಾದ್ಯ ಸಂಪತ್ತೇಃ - ಪೂಜೆ ಮೊದಲಾದ ಕರ್ಮಂಗಳು ಸಂಭವಿಸದಾದ ಕಾರಣ, ಲಿಂಗನಿಷ್ಠಾ ವಿರೋಧತಃ - ಲಿಂಗನಿಷ್ಠೆಯು ಅನುಪಪನ್ನವಾದ ಕಾರಣ, ಸರ್ವಾದ್ವೈತ ವಿಚಾರಸ್ಯ - ಸಮಸ್ತವು ಒಂದಲ್ಲದೆ ಭೇದವಿಲ್ಲ ಎಂಬ ವಿಚಾರವನು, ಜ್ಞಾನಾಭಾವವ್ಯವಸ್ಥಿತಾ - ಅರಿಯದೆ ಇರ್ದಂಥಾ ಅವಸ್ಥೆಯಲ್ಲಿ, ಕರ್ಮಿ - ಪೂಜಕನಾಗಿರ್ದಂಥಾ, ಮಾಹೇಶ್ವರಃ - ಮಾಹೇಶ್ವರನು, ಸರ್ವಾದ್ವೈತ ನಿರಾಸಕಃ - ಸರ್ವಕ್ಕೂ ಅಭೇದವನು ನಿರಾಕರಿಸುವಂಥವನು ಎಂದು ಹೇಳಲ್ಪಡುವನು ॥೪೦॥

ಸಾಕ್ಷಾತ್ಕೃತಂ ಪರಂ ತತ್ವಂ ಯದಾ ಭವತಿ ಭೋದತಃ
ತಥಾದ್ವೈತ ಸಮಾಪತ್ತಿರ್ಜ್ಞಾನಹೀನಸ್ಯ ನ ಕ್ವಚಿತ್

ದ್ವೈತಾದ್ವೈತಬುದ್ಧಿಗಳಿಗೆ ವ್ಯವಸ್ಥೆಯನು ಹೇಳುತ್ತಂ ಇದ್ದಾನು.

ಯದಾ - ಆವುದಾನೊಂದು ವೇಳೆಯಲಿ, ಭೋದತಃ - ಜ್ಞಾನದ ದೆಸೆಯಿಂದ, ಪರತತ್ವಂ - ಪರಬ್ರಹ್ಮವು, ಸಾಕ್ಷಾತ್ಕೃತಂ - ಪ್ರಕಾಶಿಸಲ್ಪಟ್ಟಂಥಾದು, ಭವತಿ - ಆಗುತ್ತಿಹುದು. ತದಾಃ - ಆವಾಗಲೂ, ಅದ್ವೈತ ಸಮಾಸತಃ - ಅದ್ವೈತ ಪ್ರಾಪ್ತಿಯು,

ಅದ್ವೈತ ಸಮಾಪತ್ತಿಃ - ಅದ್ವೈತ ಪ್ರಾಪ್ತಿಯುಂಟಹುದು, ಜ್ಞಾನಹೀನಸ್ಯ - ತತ್ವಜ್ಞಾನವಿಲ್ಲದೆ ಇದ್ದಂಥಾತನಿಗೆ, ಕ್ವಚಿತ್ - ಒಂದು ಬಾರಿಯು, ನ - ಅದ್ವೈತ ಪ್ರಾಪ್ತಿ ಇಲ್ಲ. ಅದು ಕಾರಣ ದ್ವೈತಾದ್ವೈತಾ ಬುದ್ಧಿಯನ್ನಾಶ್ರಯಿಸಿ ಪೂಜಾ ಪ್ರವೃತ್ತಿಯು ಸಂಭವಿಸುವುದು ॥೪೧॥

ಭೇದಸ್ಯ ಕರ್ಮ ಹೇತುತ್ವಾದ್ವ್ಯವಹಾರಃ ಪ್ರವರ್ತತೇ
ಲಿಂಗಪೂಜಾದಿಕರ್ಮಸ್ಥೋ ನ ಚಾ ದ್ವೈತಂ ಸಮಾಚರೇತ್

ಭೇದಸ್ಯ - ಭೇದವೆ, ಕರ್ಮಮೂಲತ್ವಾತ್ - ಪೂಜಾದಿ ಕರ್ಮಕ್ಕೆ ಮೂಲವಾದ ಕಾರಣವಾಗಿ, ವ್ಯವಹಾರಿ - ಕರ್ಮಫಲವ ಸಂಪಾದಿಸುವಂಥಾತನು, ಪ್ರವರ್ತತೇ - ಪ್ರವರ್ತಿಸುತ್ತಾ ಇದ್ದಾನು. ಅತಃ - ಅದು ಕಾರಣ, ಲಿಂಗಪೂಜಾದಿಕ ಮನಸ್ಥಃ - ಲಿಂಗಪೂಜೆ ಮೊದಲಾದ ಕರ್ಮವ ಮಾಡುವಂಥಾತನು, ಅದ್ವೈತಂ - ಅದ್ವೈತ ಬುದ್ಧಿಯನು, ನ ಸಮಾಚರೇತ್ - ಮಾಡಲಾಗದು ॥೪೨॥

ಪ್ರೇರಕಂ ಶಂಕರಂ ಬುಧ್ವಾ ಪ್ರೇರ್ಯ್ಯಮಾತ್ಮಾನ ಮೇವ ಚ
ಭೇದಾತ್ತಂ ಪೂಜಯೇನ್ನಿತ್ಯಂ ನ ಚಾದ್ವೈತಪರೋಭವೇತ್

ಶಂಕರಂ - ಶಿವನನು, ಪ್ರೇರಕಂ - ಅಂತರ್ಯಾಮಿಯಾಗಿ ಸರ್ವಪ್ರೇರಕನೆಂದು ಆತ್ಮಾನಂ - ತನ್ನನ್ನು, ಪ್ರೇರ್ಯ್ಯಂ - ನಿಯಮಿಸಿಕೊಳಲ್ಪಡುವನು ಎಂದು, ಭೇದಾತ್ - ಭೇದವಾಗಿ, ಬುಧ್ವಾ - ಅರಿತು, ನಿತ್ಯಂ - ಆವಾಗಲೂ, ತಂ - ಆ ಶಿವನನು, ಪೂಜಯೇತ್ - ಪೂಜಿಸಬೇಕು. ಅದ್ವೈತಪರೋ ನ ಭವೇತ್ - ಅಭೇದ ಬುದ್ಧಿಯಲ್ಲಿರಬಾರದು ॥೪೩॥

ಪತಿಃ ಸಾಕ್ಷಾನ್ಮಹಾದೇವಃ ಪಶುರೇಷಸ್ತದಾಶ್ರಯಃ
ಅನಯೋಃ ಸ್ವಾಮೀಭೃತ್ಯತ್ವಮಭೇದೇ ಕಥಮಿಷ್ಯತೇ

ಮಹಾದೇವಃ - ಶಿವನು, ಸಾಕ್ಷಾತ್ಪತಿಃ - ಸಾಕ್ಷಾತ್ಪತಿಯಾಗಿರ್ದಂಥಾತನು, ತದಾಶ್ರಯಃ - ಆತನ ಅಧೀನರಾಗಿರ್ದಂಥಾ, ಏಷಃ - ಈ ಜೀವನು, ಪಶುಃ - ಪಶುರೂಪರೆಂದು, ಅನಯೋಃ - ಈ ಜೀವೇಶ್ವರರಿಗೆ, ಸ್ವಾಮಿಭೃತ್ಯತ್ವಾತ್ - ಸ್ವಾಮಿ ಭೃತ್ಯ ಸಂಬಂಧವಾದ ಕಾರಣ, ತಥಾ - ಹಾಗೆ, ಅಭೇದಃ - ಅಭೇದವು, ಈಷ್ಯತೆ - ಸಮ್ಮತವು ॥೪೪॥

ಪೂಜಾದಿವ್ಯವಹಾರಸ್ಯಾದ್ಭೇದಾಶ್ರಯತಯಾ ಸದಾ
ಲಿಂಗಪೂಜಾಪರಸ್ತಾನಾದ್ವೈತೇ ನಿರತೋನಭವೇತ್

ಪೂಜಾದಿ ವ್ಯವಹಾರಸ್ಯ - ಪೂಜೆ ಮೊದಲಾದ ಪ್ರವೃತ್ತಿಯು, ಭೇದಾಶ್ರಯಂ - ಭೇದ ಬುದ್ಧಿಯ ಆಧೀನನಾದ ಕಾರಣ, ಲಿಂಗಪೂಜಾಪರಃ - ಲಿಂಗಪೂಜೆಯಲ್ಲಿ ತತ್ಪರನಾಗಿರ್ದಂಥಾತನು, ಅದ್ವೈತೆ - ಅಭೇದ ಬುದ್ಧಿಯಲ್ಲಿ, ನಿರತೋ ನ ಭವೇತ್ - ತತ್ಪರನಾಗಬಾರದು ॥೪೫॥

೨೦. ಆಹ್ವಾನನಿರಸನಸ್ಥಲ

ಲಿಂಗಾರ್ಚನಪರಃ ಶುದ್ಧಃ ಸರ್ವಾದ್ವೈತನಿರಾಸಕಃ
ಸ್ವೇಷ್ಟಲಿಂಗೇ ಶಿವಾಕಾರೇ ನ ತಮಾವಾಹಯೇಚ್ಛಿವಂ

ಲಿಂಗನಿಷ್ಠನಾಗಿರ್ದಂಥಾತನಿಗೆ - ಲಿಂಗಪೂಜೆಗೆ ಅಂಗವಾಗಿರ್ದಂಥಾ ಷೋಡಷೋಪಚಾರಂಗಳೊಳಗೆ ಆಹ್ವಾನ ವಿಸರ್ಜನವನು ಹೇಳುತ್ತಂ ಇದ್ದಾನು. ಸರ್ವಾದ್ವೈತ ನಿರಾಸಕಃ - ಸರ್ವಾದ್ವೈತ ಬುದ್ಧಿಯನು ಬಿಟ್ಟಂಥಾ, ಶುದ್ಧಃ - ಶುದ್ಧವಾಗಿರ್ದಂಥಾ, ಲಿಂಗಾರ್ಚನ ಪರಃ - ಲಿಂಗಪೂಜೆಯಲ್ಲಿ ತತ್ಪರನಾಗಿರ್ದಂಥ, ಸಃ - ಆತನು, ಶಿವಾಕಾರೆ - ಶಿವಸ್ವರೂಪನಾಗಿರ್ದಂಥ, ಸ್ವೇಷ್ಠ ಲಿಂಗೇ - ತನ್ನ ಇಷ್ಟಲಿಂಗದಲ್ಲಿ, ಶಿವಂ - ಶಿವನನು, ಆವಾಹಯೇತ್ - ಆವಾಹನವ ಮಾಡಲಾಗದು ॥೪೬॥

ಅದಕ್ಕೆ ಕಾರಣವನು ಹೇಳುತ್ತಂ ಇದ್ದಾನು

ಯದಾ ಶಿವಕಲಾಯುಕ್ತಂ ಲಿಂಗಂದದ್ಯಾನ್ಮಹಾಗುರುಃ
ತದಾರಭ್ಯ ಶಿವಸ್ತತ್ರತಿಷ್ಠತ್ಯಾಹ್ವಾನ ಮಂತ್ರ ಕಿಂ

ಯದಾ - ಆವಾಗ, ಮಹಾಗುರುಃ - ಉತ್ತಮನಾದ ತನ್ನ ಗುರುವು, ಶಿವಕಲಾ ಯುಕ್ತಂ - ಶಿವನ ಅಂಶದಿಂದ ಕೂಡಿರ್ದಂಥಾ, ಲಿಂಗಂ - ಲಿಂಗವನು, ದದ್ಯಾತ್ - ಕೊಟ್ಟನು, ತದಾರಭ್ಯ - ಅಂದು ತೊಡಗಿ, ಶಿವಃ - ಶಿವನು, ತತ್ರ - ಆ ಲಿಂಗದಲ್ಲಿ, ತಿಷ್ಠತಿ - ಆವಾಗಲೂ, ಸನ್ನಹಿತನಾಗಿಹನು. ಅತಃ - ಅದುಕಾರಣ, ಕಿಂ - ಏನು ಕಾರಣವಾಗಿ, ಆವಾಹನಂ - ಆವಾಹನವ ಮಾಡಬೇಕು ॥೪೭॥

ಸ್ವಸಂಸ್ಕಾರೇಣಯುಕ್ತೇಷು ಸದಾ ಸನ್ನಿಹಿತಃ ಶಿವಃ
ತತ್ರಾಹ್ವಾನ ನ ಕರ್ತವ್ಯಂ ಪ್ರತಿಪತ್ತಿ ವಿರೋಧಕಂ

ಸ್ವಸಂಸ್ಕಾರೇಣ - ಶಿವಸಂಸ್ಕಾರದಿಂದ, ಯುಕ್ತೇಷು - ಕೂಡಿರ್ದಂಥಾ ಲಿಂಗದಲ್ಲಿ, ನಿತ್ಯಂ - ಆವಾಗಲೂ, ಶಿವಃ - ಶಿವನು, ಸನ್ನಿಹಿತಂ - ಸನ್ನಿಹಿತನಾಗಿಹನು, ಪ್ರತಿರೋಧಕಃ - ಸನ್ನಿಧಿಗೆ ಪುನಃ ಸನ್ನಿಧಿ ವಿರುದ್ಧವಾದ ಕಾರಣ, ತತ್ರ - ಆ ಲಿಂಗದಲ್ಲಿ, ಆಹ್ವಾನಂ - ಆಹ್ವಾನವನು, ನ ಕರ್ತವ್ಯಂ - ಮಾಡಬಾರದು ॥೪೮॥

ನಾಹ್ವಾನಂ ನ ವಿಸರ್ಜಂಚ ಸ್ವೇಷ್ಟಲಿಂಗೇ ತು ಕಾರಯೇತ್
ಲಿಂಗನಿಷ್ಠಾಪರೋ ನಿತ್ಯಮಿತಿಶಾಸ್ತ್ರ ವಿನಿಶ್ಚಯಃ

ಲಿಂಗಾನಿಷ್ಠಾಪರಃ - ಲಿಂಗಪೂಜೆಯಲ್ಲಿ ತತ್ಪರನಾಗಿರ್ದಂಥಾತನು, ಆವಾಹನಂ - ಆವಾಹನವನು, ವಿಸರ್ಜಂಚ - ಕಡೆಯಲ್ಲಿ ವಿಸರ್ಜನವನು, ಸ್ವೇಷ್ಟಲಿಂಗೇ - ತನ್ನಿಷ್ಟಲಿಂಗದಲ್ಲಿ, ನ ಕಾರಯೇತ್ - ಮಾಡಲಾಗದು, ಇತಿ - ಹೀಗೆಂದು, ಶಾಸ್ತ್ರವಿನಿಶ್ಚಯಃ - ಶಾಸ್ತ್ರನಿರ್ಣಯವು ॥೪೯॥

೨೧. ಅಷ್ಟತನುಮೂರ್ತಿನಿರಸನಸ್ಥಲ

ಯಥಾಶಿವಾತ್ಮಯೋರೈಕ್ಯಂ ನ ಮತಂ ಕರ್ಮಸಂಗಿನಃ
ತಥಾ ಶಿವಾಪೃಥುವ್ಯಾದೆರದ್ವೈತಮಪಿ ನೇಷ್ಯತೇ

ಅಷ್ಟಮೂರ್ತಿ ನಿರಾಕರಣ ಸ್ಥಲದ ಲಕ್ಷಣವನು ಹೇಳುತಿರ್ದಪಂ

ಕರ್ಮಸಂಗಿನಃ - ಶಿವಪೂಜಾತತ್ಪರನಿಗೆ, ಯಥಾ - ಹೇಗೆ - ಆತ್ಮಶಿವಯೋಃ - ಜೀವೇಶ್ವರರುಗಳಿಗೆ, ಐಕ್ಯಂ - ಅಭೇದವು, ನ ಮತಂ - ಸಮ್ಮತವಲ್ಲ. ತಥಾ - ಹಾಗೆ, ಶಿವಾತ್ - ಶಿವನ ದೆಸೆಯಿಂದ, ಪೃಥುವ್ಯಾದಿ - ಭೂಮಿ ಮೊದಲಾದ ಅಷ್ಟಮೂರ್ತಿಗಳಿಗೆ, ಅದ್ವೈತಂ - ಅಭೇದವು, ನೇಷ್ಯತೇ - ಸಮ್ಮತವಲ್ಲ ॥೫೦॥

ಪೃಥಿವ್ಯಾದ್ಯಷ್ಟಮೂರ್ತಿತ್ವಾಮೀಶ್ವರಸ್ಯ ಪ್ರಕೀರ್ತಿತಂ
ತದಧಿಷ್ಠಾತೃಭಾವೇನ ನ ಸಾಕ್ಷಾದೇಕ ಭಾವತಃ

ಈಶ್ವರಸ್ಯ - ಶಿವನಿಗೆ, ಪೃಥಿವ್ಯಾದ್ಯಷ್ಟಮೂರ್ತಿತ್ವಾ - ಭೂಮಿ ಮೊದಲಾದ ಎಂಟು ಮೂರ್ತಿಯು, ಪ್ರಕೀರ್ತಿತಂ - ಹೇಳಲ್ಪಟ್ಟಿತು, ತತ್ - ಅದು, ಅಧಿಷ್ಠಾತೃ ಭಾವೇನ - ಪ್ರೇರಕಸ್ವರೂಪವಾಗಿ ಅಲ್ಲದೆ, ಸಾಕ್ಷಾದೇಕಭಾವತಃ - ಅತ್ಯಂತ ಅಭೇದ ಸ್ವರೂಪದಿಂದ, ನ - ಅಲ್ಲ ॥೫೧॥

ಪೃಥ್ವ್ಯಾದಿಕಮಿದಂ ಸರ್ವಂ ಕಾರ್ಯಂಕರ್ತಾ ಮಹೇಶ್ವರಃ
ನೈತತ್ಸಾಕ್ಷಾನ್ಮಹೇಶೋಽಯಂ ಕುಲಾಲೋಮೃತ್ತಿಕಾ ಯಥಾ

ಪೃಥುವ್ಯಾಧಿಕಂ - ಭೂಮಿ ಮೊದಲಾದ, ಇದಂ ಸರ್ವಂ - ಈ ಸಮಸ್ತ ಮೂರ್ತಿಗಳು, ಕಾರ್ಯಂ - ಶಿವನ ಕಾರ್ಯವು, ಮಹೇಶ್ವರಃ - ಶಿವನು, ಕರ್ತಾ - ಕರ್ತೃವು. ಯಥಾ - ಹ್ಯಾಂಗೆ, ಕುಲಾಲಮೃತ್ತಿಕಾ - ಕುಂಭ ಮೊದಲಾದ ಮೃತ್ಪಿಂಡದ ಮರ್ಯಾದೆಯಲ್ಲಿ ಕಾರ್ಯಕಾರಣಂಗಳು, ಅಯಂ - ಇದು, ಸಾಕ್ಷಾನ್ಮಹೇಶೋ ನ - ಸಾಕ್ಷಾತ್ಶಿವಸ್ವರೂಪವಲ್ಲ, ಪುರಾ - ಮೊದಲು, ತತ್ರ - ಅಲ್ಲಿ ಕುಲಾಲಾದಿಃ - ನದಿತೀರ ಮೊದಲಾದ ಕುಲಾಲಾದಿ ಕಾರ್ಯಗಳಿಗೆ, ಮೃತ್ತಿಕಾ ಯಥಾ - ಮೃತ್ತಿಕೆ ಹೇಗೆ ಭಿನ್ನವಲ್ಲ ॥೫೨॥

ಆ ಪ್ರಕಾರದಲ್ಲಿ ಶಿವನಿಂದ ಭಿನ್ನವಾಗಿರ್ದಂಥ ಪೃಥುವ್ಯಾದಿಗಳು ಘಟಪಟಗಳ ಮರ್ಯಾದೆಯಲ್ಲಿ ಸ್ವತಂತ್ರವಾಗಲಿ ಎಂಬ ಶಂಕೆಯನು ಶರೀರ ಸಂಬಂಧದಿಂದ ಪರಿಹರಿಸುತ್ತಂ ಇದ್ದಾನು

ಪೃಥ್ವ್ಯಾದ್ಯಾತ್ಮಪರ್ಯಂತ ಪ್ರಪಂಚೋಽಹೃಪಧಾ ಸ್ಥಿತಃ
ತನುರೀಶಸ್ಯತಥಾತ್ಮಾಯಂ ಸರ್ವತತ್ವ ನಿಯಾಮಕಃ

ಪೃಥ್ವ್ಯಾದಿರಾತ್ಮಪರ್ಯಂತಃ - ಭೂಮಿ ಮೊದಲಾಗಿ ಆತ್ಮಕಡೆಯಾಗಿರ್ದಂಥಾ, ಅನ್ಯಃ - ಶಿವನಿಂದ ಭಿನ್ನವಾಗಿರ್ದಂಥಾ, ತಥಾಶ್ರಿತಃ - ಶಿವನನ್ನೇ ಆಶ್ರಯಿಸಿ ಇರ್ದಂಥಾ,

ಪ್ರಪಂಚಃ - ಪ್ರಪಂಚವು, ತನುಃ - ಶಿವನ ಶರೀರ, ಅಯಂ ಈಶಃ - ಶಿವನು, ಸರ್ವತತ್ವನಿಯಾಮಕಃ - ಸಮಸ್ತ ತತ್ವಂಗಳ ಪ್ರೇರಿಸುವಂಥಾ, ತಥಾತ್ಮ - ಆ ಪೃಥ್ವ್ಯಾದಿ ಶರೀರಗಳ ಆತ್ಮನು ॥೫೩॥

ಶರೀರಭೂತಾದೇ ತಸ್ಮಾತ್ಪ್ರಪಂಚಾತ್ಪರಮೇಷ್ಠಿನಃ
ಆತ್ಮಭೂತಸ್ಯ ದೇವಸ್ಯ ನಾ ಭೇದೋ ನ ಪೃಥಕ್ ಸ್ಥಿತಿಃ

ಪರಮೇಷ್ಠಿನಃ - ಶಿವನ, ಶರೀರ ಭೂತಾತ್ - ಶರೀರವಾಗಿರ್ದಂಥ, ಏತಸ್ಮಾತ್ಪ್ರಪಂಚಾತ್ - ಈ ಪ್ರಪಂಚದ ದೆಸೆಯಿಂದ, ಆತ್ಮಭೂತಸ್ಯ - ಆತ್ಮನಾಗಿರ್ದಂಥ, ದೇವಸ್ಯ - ಶಿವನಿಗೆ, ನ ಭೇದತಃ - ಭೇದವಿಲ್ಲ, ನ ಪೃಥಕ್ ಸ್ಥಿತಿಃ - ಶಿವನ ಬಿಟ್ಟು ಬೇರೆ ಸ್ಥಿತಿ ಇಲ್ಲ ॥೫೪॥

ಅಚೇತನತ್ವಾತ್ಪೃಥ್ವ್ಯಾದೇರಜ್ಞತ್ವಾದಾತ್ಮನ ಸ್ತಥಾ
ಸರ್ವಜ್ಞಸ್ಯ ಮಹೇಶಸ್ಯ ನೈಕರೂಪತ್ವಮಿಷ್ಯತೇ

ಶರೀರ - ಶರೀರ ಭೇದದಲ್ಲಿ ಯುಕ್ತ್ಯಾಂತರವನು ಹೇಳುತಿರ್ದಪಂ.

ಪೃಥ್ವ್ಯಾದಿಃ - ಪೃಥುವ್ಯಾದಿಗಳು, ಅಚೇತನತ್ವಾತ್ - ಅಚೇತನವಾದ ಕಾರಣ, ಆತ್ಮನಃ - ಜೀವನು, ಅಜ್ಞಾತತ್ವಾತ್ - ಅಜ್ಞಾನಿಯಾದ ಕಾರಣ, ಸರ್ವಜ್ಞಸ್ಯ - ಸರ್ವಜ್ಞನಾಗಿರ್ದಂಥಾ, ಮಹೇಶಸ್ಯ - ಶಿವನಿಗೆ, ಏಕರೂಪತ್ವಂ - ಏಕರೂಪವಹತನವು, ನೇಷ್ಯತೇ - ಇಚ್ಛಯಿಸಲು ಪಡುತ್ತಿರದು ॥೫೫॥

ಇತಿ ಯಶ್ಚಿಂತಯೇನ್ನಿತ್ಯಂ ಪೃಥ್ವ್ಯಾದೇರಷ್ಟಮೂರ್ತಿತಃ
ವಿಲಕ್ಷಣಂ ಮಹಾದೇವಂ ಸೋಽಷ್ಟಮೂರ್ತಿನಿರಾಸಕಃ

ಪೃಥಿವ್ಯಾದಷ್ಟಮೂರ್ತಿತಃ - ಭೂಮ್ಯಾದಿ ಅಷ್ಟಮೂರ್ತಿಗಳ ದೆಸೆಯಿಂದ, ವಿಲಕ್ಷಣಂ - ಬೇರಾದ ಸ್ವರೂಪನೆಂದು, ಮಹಾದೇವಂ - ಶಿವನನು, ಇತಿ - ಈ ಪ್ರಕಾರದಲ್ಲಿ, ಯಃ - ಆವಾತನು, ನಿತ್ಯಂ - ಆವಾಗವು, ಚಿಂತಯನ್ - ನೆನೆವನು, ಸಃ - ಆತನು, ಅಷ್ಟಮೂರ್ತಿ ನಿರಾಸಕಃ - ಅಷ್ಟಮೂರ್ತಿಗಳ ನಿರಸನನೆನಿಸುವನು ॥೫೬॥*

೨೨. ಸರ್ವಗತ್ವನಿರಸನ ಸ್ಥಲ

ಸರ್ವಗತ್ವೇ ಮಹೇಶಸ್ಯ ಸರ್ವತ್ರಾರಾಧನಂ ಭವೇತ್
ನ ಲಿಂಗಮಾತ್ರೇ ತನ್ನಿಷ್ಠೋ ನ ಶಿವಂ ಸರ್ವಗಂ ಸ್ಮರೇತ್

ಮಹೇಶಸ್ಯ - ಶಿವಂಗೆ, ಸರ್ವಗತ್ವೇ - ವಿಶ್ವದಲ್ಲಿ ಇದ್ದಾತನೆಂಬಲ್ಲಿ, ಸರ್ವತ್ರ - ಎಲ್ಲಿಯೂ, ಆರಾಧನಂ - ಪೂಜೆಯು, ಭವೇತ್ - ಅಹುದು, ಲಿಂಗಮಾತ್ರೇ - ಲಿಂಗದಲ್ಲಿ,

---

* ಶ್ಲೋಕ ೫೬ ರಿಂದ ೬೭ರ ವರೆಗಿನ ಲುಪ್ತಭಾಗವನ್ನು ಉಜ್ಜನೀಶ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ತನ್ನಿಷ್ಠಃ, ಆಸರ್ವಗತತತ್ವನಿಷ್ಠೆಯುಳ್ಳವನಲ್ಲದಾತನು, ಶಿವಂ - ಶಿವನನು, ಸರ್ವಗಂ - ಸರ್ವಗಮಾತ್ರನಾಗಿ, ನ ಸ್ಮರೇತ್ - ನೆನೆಯಲಾಗದು ॥೫೭॥

ಸರ್ವಗೋಽಪಿ ಸ್ಥಿತಃ ಶಂಭುಃ ಸ್ವಾಧಾರೇ ಹಿ ವಿಶೇಷತಃ
ತಸ್ಮಾದನ್ಯತ್ರ ವಿಮುಖಃ ಸ್ವೇಷ್ಟಲಿಂಗೇ ಯಜೇಚ್ಛಿವಂ

ಶಂಭುಃ - ಶಿವನು, ಸರ್ವಗೋಽಪಿ, ವಿಶ್ವವನ್ನೈದಿದಾತನಾದರು, ಸ್ವಾಧಾರೇಹಿ - ತನ್ನ ಧರಿಸಿದಾತನಲ್ಲಿಯಾದೊಡೆ, ವಿಶೇಷತಃ - ವಿಶೇಷವಾಗಿ, ಸ್ಥಿತಃ - ಇರುತ್ತಿಹನು, ತಸ್ಮಾತ್ - ಅದು ಕಾರಣವಾಗಿ, ಅನ್ಯತ್ರವಿಮುಖಃ - ಉಳಿದ ಠಾವಿನಲ್ಲಿ ಮುಖದಿರುಹಿ ದಾತನಾಗಿ, ಸ್ವೇಷ್ಟಲಿಂಗೇ - ತನ್ನ ಇಷ್ಟಲಿಂಗದಲ್ಲಿ, ಶಿವಂ - ಶಿವನನು, ಯಜೇತ್ - ಪೂಜಿಸುವದು ॥೫೮॥

ಶಿವಃ ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇಧಿಕಂ
ಶಮೀಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ

ಶಿವಃ - ಶಿವನು, ಸರ್ವಗತಶ್ಚಾಪಿ - ಸರ್ವಗತನಾಗಿರ್ದು, ಸ್ವಾಧಾರೇ - ತನ್ನ ಆಧಾರವಾದ ಗುರುಚರಲಿಂಗದಲ್ಲಿ, ಅಧಿಕಂ - ವಿಶೇಷವಾಗಿ, ವ್ಯಜ್ಯತೇ - ವ್ಯಕ್ತವಾಗಿ ತೋರುತ್ತಿಹನು, ಯಥಾ - ಹೇಂಗೆ, ಶಮೀಗರ್ಭೇ - ಬನ್ನಿಯಮರನೊಳಗಳಲ್ಲಿಯ, ವಹ್ನಿಃ - ಅಗ್ನಿಯು, ವಿಶೇಷೇಣ - ವಿಶೇಷದಿಂದ, ವಿಭಾವ್ಯತೇ - ಭಾವಿಸಲುಪಡುತ್ತಿಹುದು ॥೫೯॥

ಸರ್ವಗತ್ವಂ ಮಹೇಶಸ್ಯ ಸರ್ವಶಾಸ್ತ್ರ ವಿನಿಶ್ಚಿತಂ
ತಥಾಪ್ಯಾಶ್ರಯಲಿಂಗಾದೌ ಪೂಜಾರ್ಥಮಧಿಕಾ ಸ್ಥಿತಿಃ

ಮಹೇಶಸ್ಯ - ಶಿವಂಗೆ, ಸರ್ವಗತ್ವಂ - ಸರ್ವಗತನಹ ತನವು, ಸರ್ವಶಾಸ್ತ್ರ ವಿನಿಶ್ಚಿತಂ - ಸಮಸ್ತ ಶಾಸ್ತ್ರಂಗಳಲ್ಲಿ ನಿಶ್ಚಯವಾದುದು. ತಥಾಪಿ - ಹಂಗಾಯಿತ್ತಾದರೆಯು, ಆಶ್ರಯ ಲಿಂಗಾದೌ - ಧಾರಣಾದಿಲಿಂಗದಲ್ಲಿ, ಪೂಜಾರ್ಥಂ - ಪೂಜೆಗೋಸ್ಕರ, ಸ್ಥಿತಿಃ - ಶಿವಸಾನ್ನಿಧ್ಯವು, ಅಧಿಕಾ - ವಿಶೇಷವಾದುದು ॥೬೦॥

ತಸ್ಮಾತ್ಸರ್ವ ಪ್ರಯತ್ನೇನ ಸರ್ವಸ್ಥಾನಪರಾಙ್ಮುಖಃ
ಸ್ವೇಷ್ಟಲಿಂಗೇ ಮಹಾದೇವಂ ಪೂಜಯೇತ್ಪೂಜಕೋತ್ತಮಃ

ತಸ್ಮಾತ್ - ಅದುಕಾರಣ, ಸರ್ವಸ್ಥಾನ ಪರಾಙ್ಮುಖಃ - ಸರ್ವಸ್ಥಾನಂಗಳಲ್ಲಿ ಮುಖದಿರುಹಿದಾತನಾಗಿ, ಪೂಜಕೋತ್ತಮಃ - ಶಿವಪೂಜಕೋತ್ತಮನು, ಸ್ವೇಷ್ಟಲಿಂಗೇ - ತನ್ನ ಇಷ್ಟಲಿಂಗದಲ್ಲಿ, ಮಹಾದೇವಂ - ಶಿವನನು, ಸರ್ವಪ್ರಯತ್ನೇನ - ಸಮಸ್ತ ಪ್ರಯತ್ನದಿಂದ, ಪೂಜಯೇತ್ - ಪೂಜಿಸೂದು ॥೬೧॥

ಶಿವಸ್ಯ ಸರ್ವಗತ್ವೇಽಪಿ ಸರ್ವತ್ರ ರತಿವರ್ಜಿತಃ
ಸ್ವೇಷ್ಟಲಿಂಗೇ ಯಜನ್ದೇವಂ ಸರ್ವಗತ್ವ ನಿರಾಸಕಃ

ಶಿವಸ್ಯ - ಶಿವಂಗೆ, ಸರ್ವಗತ್ವೇಪಿ - ಸರ್ವಗತನಹ ತನದಲ್ಲಿಯಾದೊಡೆಯು, ಸರ್ವತ್ರ - ಸರ್ವದಲ್ಲಿಯು, ರತಿ ವರ್ಜಿತಃ - ಪ್ರೀತಿಯಿಲ್ಲದವನಾಗಿ, ಸ್ವೇಷ್ಟಲಿಂಗೇ - ತನ್ನ ಇಷ್ಟಲಿಂಗದಲ್ಲಿ, ಏವಂ - ಈ ಪ್ರಕಾರದಲ್ಲಿ, ಯಜನ್ - ಪೂಜಿಸುತ್ತಿದ್ದಾತನು, ಸರ್ವಗತ್ವನಿರಾಸಕಃ - ಸರ್ವವ ಬಿಟ್ಟವನಹನು ।।೬೨।।

೨೩. ಶಿವಜಗನ್ಮಯಸ್ಥಲ

ಪೂಜಾವಿಧೌ ನಿಯಮತ್ವಾಲ್ಲಿಂಗಮಾತ್ರೇ ಸ್ಥಿತಂ ಶಿವಂ
ಪೂಜಯನ್ನಪ್ಪಿ ದೇವಸ್ಯ ಸರ್ವಗತ್ವಂ ವಿಭಾವಯೇತ್

ಪೂಜಾವಿಧೌ - ಪೂಜಾವಿಧಾನದಲ್ಲಿ, ಲಿಂಗಮಾತ್ರೇ - ಲಿಂಗಮಾತ್ರದಲ್ಲಿ, ಸ್ಥಿತಂ - ಇರುತ್ತಿರ್ದ, ಶಿವಂ - ಶಿವನನು, ನಿಯಮ್ಯತ್ವಾತ್ - ನಿಯಮಿಸುವುದರ ದೆಸೆಯಿಂದ, ದೇವಸ್ಯ - ಮಹಾದೇವನ, ಪೂಜಯನ್ - ಪೂಜಿಸುತ್ತವು, ಸರ್ವಗತ್ವಂ - ಸರ್ವದಲ್ಲಿ ಇದ್ದಾತನಹತನವನು, ವಿಭಾವಯೇತ್ - ಭಾವಿಸೂದು ।।೬೩।।

ಯಸ್ಮಾದೇ ತತ್ಸಮುತ್ಪನ್ನಂ ಮಹಾದೇವಾಚ್ಚರಾಚರಂ
ತಸ್ಮಾದೇತನ್ನಿಭಿದೇತ ಯಥಾ ಕುಂಭಾದಿಕಂ ಮೃದಃ

ಮೃದಃ - ಮೃತ್ತಿಕೆಯದೆಸೆಯಿಂದ, ಕುಂಭಾದಿಕಂ ಯಥಾ - ಘಟಮೊದಲಾಗಿದ್ದವು ಹೇಂಗೆ, ತಥಾ - ಹಾಂಗೆ, ಯಸ್ಮಾತ್ ಮಹಾದೇವಾತ್ - ಆವನಾನೊಬ್ಬ ಶಿವನ ದೆಸೆಯಿಂದ, ಏತತ್ ಚರಾಚರಂ - ಈ ಚರಾಚರಾತ್ಮಕವಾದ ವಿಶ್ವವು, ಉತ್ಪನ್ನಂ - ಹುಟ್ಟಿದಂಥಾದು. ತಸ್ಮಾತ್ - ಆ ಮಹಾದೇವನದೆಸೆಯಿಂದ, ಏತತ್ - ಈ ವಿಶ್ವವು, ನ ಭಿದ್ಯೇತ - ಭೇದವಾಗದು ।।೬೪।।

ಶಿವತತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ
ಫೇನೋರ್ಮಿ ಬುದ್ಬುದಾಕಾರಂ ಯಥಾ ಸಿಂಧೋರ್ನಭಿದ್ಯತೇ

ಫೇನೋರ್ಮಿಬುದ್ಬುದಾಕಾರಂ - ನೊರೆ ತೆರೆ ಬೊಬ್ಬುಳಿಕೆಯಾಕಾರವು, ಸಿಂಧೋಃ - ಸಮುದ್ರದದೆಸೆಯಿಂದ, ಯಥಾ - ಹ್ಯಾಂಗೆ, ನ ಭಿದ್ಯತೇ - ಭೇದವಾಗದಿದ್ದೀತು, ತಥಾ - ಹಾಂಗೆ, ಶಿವತತ್ವಾತ್ - ಶಿವತತ್ವದ ದೆಸೆಯಿಂದ, ಸಮುತ್ಪನ್ನ - ಹುಟ್ಟಿದ, ಜಗತ್ - ಜಗತ್ತು, ಅಸ್ಮಾತ್ - ಈ ಶಿವನ ದೆಸೆಯಿಂದ, ನ ಭಿದ್ಯತೇ - ಭೇದವಾಗದು ।।೬೫।।

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ

ಪತ್ರಶಾಖಾದಿ ರೂಪೇಣ - ಎಲೆ ಕೊಂಬೆಗಳ ರೂಪದಿಂದ, ಪಾದಪಃ - ವೃಕ್ಷವು, ಯಥಾ - ಹೇಂಗೆ, ತಿಷ್ಠತಿ - ಇರುತ್ತಿಹುದು, ತಥಾ - ಹಾಂಗೆ, ಭೂಮ್ಯಾದಿ ರೂಪೇಣ - ಭೂಮಿ ಮೊದಲಾದ ರೂಪದಿಂದ, ಶಿವ ಏಕಃ - ಶಿವನೊಬ್ಬನು, ವಿರಾಜತೇ - ಒಪ್ಪುತ್ತಿಹನು ।।೬೬।।

ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ
ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಂ

ತಂತುಭಿಃ - ನೂಲುಗಳಿಂದ, ಉತ್ಪನ್ನಃ - ಹುಟ್ಟಿದ, ಪಟಃ - ವಸ್ತ್ರವು, ತಂತುಮಯಃ - ನೂಲುಮಯವೆಂದು, ಯಥಾ - ಹೇಂಗೆ, ಸ್ಮೃತಃ - ಹೇಳಲುಪಟ್ಟಿತ್ತು, ಶಿವಾತ್ - ಮಹಾದೇವನ ದೆಸೆಯಿಂದ, ಸಮುತ್ಪನ್ನಂ - ಹುಟ್ಟಿದಂಥ, ಚರಾಚರಂ - ಜಂಗಮಸ್ಥಾವರವಾದ, ಏತಜ್ಜಗತ್ - ಈ ಜಗತ್ತು, ತಥಾ - ಹಾಂಗೆ, ಶಿವಯೇವ - ಶಿವಮಯವೂ ॥೬೭॥

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ
ಪೃಥಗ್ಭಾವಾ ತಯಾಭಾತಿ ಪೃಥಕ್ ಸ್ವಸ್ಯ ಪ್ರಸಾರಣಾತ್

ಆತ್ಮಶಕ್ತಿ ವಿಕಾಸೇನ - ತನ್ನ ಮಾಯಾಶಕ್ತಿ ವಿಕಾಸದಿಂದ, ವಿಶ್ವಾತ್ಮನಾ - ಸರ್ವಾತ್ಮನಾಗಿ, ಸ್ಥಿತಃ - ಇರುತ್ತಿದ್ದಂಥಾ, ಶಿವಃ - ಶಿವನು, ಸ್ವಸ್ಯ - ತಾನು, ಪೃಥಕ್ - ಬೇರೆ ಬೇರೆ, ಪ್ರಸಾರಾಣಾತ್ - ವರ್ತಿಸುವುದರ ದೆಸೆಯಿಂದ, ಪೃಥಗ್ಭಾವತಯಾ - ನಾನಾ ಪ್ರಕಾರವಾಗಿ, ಭಾತಿ - ಒಪ್ಪುತಂ ಇಹನು ॥೬೮॥

ತಸ್ಮಾಚ್ಛಿವಮಯಂ ವಿಶ್ವಂ ಜಗದೇತಚ್ಚರಾಚರಂ
ತದಭಿನ್ನತಯಾ ಭಾತಿ ಸರ್ಪತ್ವಮಿವ ರಜ್ಜುತಃ

ತಸ್ಮಾತ್ - ಅದು ಕಾರಣ, ಶಿವಮಯಂ - ಶಿವಾಕಾರವಾಗಿರ್ದಂಥಾ, ವಿಶ್ವಂ - ಸಮಸ್ತವಾಗಿರ್ದಂಥಾ, ಚರಾಚರಂ - ಚರ ಅಚರಾತ್ಮಕವಾಗಿರ್ದಂಥಾ, ಏತತ್ - ಈ ಜಗತ್ತು, ತದಭಿನ್ನತಯಾ - ಆ ಶಿವನಿಂದ ಭಿನ್ನವಲ್ಲದೆ, ಭಾತಿ - ಒಪ್ಪುತಂ ಇದ್ದೀತು. ಆ ಅರ್ಥದಲ್ಲಿ ದೃಷ್ಟಾಂತ. ರಜ್ಜುತಃ - ಹಗ್ಗದ ದೆಸೆಯಿಂದ, ಸರ್ಪತ್ವಮಿವ - ಆರೋಪಿಸಿದಂಥ ಸರ್ಪನು ಹ್ಯಾಂಗೆ ಭಿನ್ನವಲ್ಲ. ಹಾಂಗೆ ದೃಷ್ಟಾಂತವ ಸ್ಪಷ್ಟೀಕರಿಸುತಿರ್ದಪಂ ॥೬೯॥

ರಜ್ಜ್ವಾ ಸರ್ಪತ್ವವದ್ಭಾತಿ ಶುಕ್ತೌ ಚ ರಜತತ್ವವತ್
ಚೋರತ್ವವದಪಿ ಸ್ಥಾಣೌ ಮರೀಚ್ಯಾದೌ ಜಲತ್ವವತ್

ಗಂಧರ್ವಪುರವದ್ವ್ಯೋಮ್ನಿ ಸಚ್ಚಿದಾನಂದಲಕ್ಷಣೇ
ನಿರಸ್ತಭೇದತದ್ಭಾವೇ ಶಿವೇ ವಿಶ್ವಂ ವಿರಾಜತೇ

ರಜ್ಜ್ವಾ - ಹಗ್ಗದಲ್ಲಿ, ಸರ್ಪತ್ವವತ್ - ಆರೋಪಿಸಲ್ಪಟ್ಟಂಥಾ ಸರ್ಪನ ಮರ್ಯಾದೆಯಲ್ಲಿ, ಶುಕ್ತೌ - ಮುತ್ತಿನ ಚಿಪ್ಪಿನಲ್ಲಿ, ರಜತ್ವವತ್ - ಅಜ್ಞಾನದಿಂದ ಕಲ್ಪಿಸಲ್ಪಟ್ಟಂಥ ಬೆಳ್ಳಿಯ ಮರ್ಯಾದೆಯಲ್ಲಿ, ಸ್ಥಾಣೌ - ಊರ್ಧ್ವಕೊರಡುಗಳಲ್ಲಿ, ಚೋರತ್ವವತ್ - ದೂರದೃಷ್ಟಿದೋಷದಿಂದ ಕಲ್ಪಿತವಾದ ಕಳ್ಳನ ಮರ್ಯಾದೆಯಲ್ಲಿ, ಮರೀಚ್ಯಾದೌ ಮೃಗತೃಷ್ಣೆಯಿಂದ ಪ್ರಸಿದ್ಧವಾದ ಮರೀಚಿಕೆಯಲ್ಲಿ, ಜಲತ್ವವತ್ - ಮಧ್ಯಾಹ್ನ ಸೂರ್ಯನಿಂದ - ಸಂತೃಪ್ತನಾದ ಸೂರ್ಯನಿಗೆ ದೂರದೋಷದಿಂ ತೋರುವ ಜಲಮರ್ಯಾದೆಯಲ್ಲಿ, ಯೋಮ್ನಿ - ಆಕಾಶದಲ್ಲಿ, ಗಂಧರ್ವಪುರವತ್ - ಗಂಧರ್ವ

ಮಾಯೆಯಿಂದ ಕಲ್ಪಿಸಲ್ಪಟ್ಟಂಥ ಗಂಧರ್ವ ನಗರದ ಮರ್ಯಾದೆಯಲ್ಲಿಯು, ಸಚ್ಚಿದಾನಂದ ಲಕ್ಷಣೆ - ಸಚ್ಚಿದಾನಂದ ಸ್ವರೂಪನಾಗಿರ್ದಂಥ, ನಿರಸ್ತಭೇದ ತದ್ಭಾವೇ - ನಿರಾಕರಿಸಲ್ಪಟ್ಟದ್ವೈತಜಾಲವನ್ನುಳ್ಳಂಥಾ, ಶಿವೇ - ಶಿವನಲಿ, ವಿಶ್ವಂ - ಜಗತ್ತು, ವಿರಾಜತೇ - ಒಪ್ಪುತ್ತಂ ಇಹುದು ॥೭೧॥

೨೪. ಭಕ್ತದೇಹಿಕಲಿಂಗಸ್ಥಲ

ಈ ಪ್ರಕಾರದಿಂದ ಜಗತ್ತಿಗೆ ಶಿವಭಾವವನು ಹೇಳಿ ಬಳಿಕ ಭಕ್ತದೇಹಿಕ ಲಿಂಗಸ್ಥಲವನು ಹೇಳುತಿರ್ದಪಂ

ಸಮಸ್ತಜಗದಾತ್ಮಾಪಿ ಶಂಕರಃ ಪರಮೇಶ್ವರಃ
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ

ಸಮಸ್ತಜಗದಾತ್ಮಾಪಿ - ಸಮಸ್ತಜಗದಾತ್ಮಸ್ವರೂಪನಾದರೂ, ಶಂಕರಃ - ಸಮಸ್ತರಿಗೂ ಸುಖವನು ಮಾಡುವಂಥಾ, ಪರಮೇಶ್ವರಃ - ಶಿವನು, ಭಕ್ತಾನಾಂ - ಭಕ್ತರುಗಳ, ಹೃದಯಾಂಭೋಜೆ - ಹೃತ್ಪದ್ಮದಲ್ಲಿ, ವಿಶೇಷೇಣಾ - ಮಿಗಿಲಾಗಿ, ವಿರಾಜತೇ - ಒಪ್ಪುತ್ತಿಹನು ॥೭೨॥

ಕೈಲಾಸೇ ಮಂದರೇ ಚೈ ವಾ ಹಿಮಾದ್ರೌಕನಕಾಚಲೇ
ಹೃದಯೇಷು ಚ ಭಕ್ತಾನಾಂ ವಿಶೇಷೇಣ ವಿರಾಜತೇ

ಕೈಲಾಸೇ - ಕೈಲಾಸದಲ್ಲಿ, ಮಂದರೆ - ಮಂದರ ಪರ್ವತದಲ್ಲಿ, ಹಿಮಾದ್ರೌ - ಹಿಮವತ್ಪರ್ವತದಲ್ಲಿ, ಕನಾಕಚಲೆ - ಮಹಾಮೇರುವಿನಲ್ಲಿ, ಭಕ್ತಾನಾಂ - ಭಕ್ತರುಗಳ ಹೃದಯೇಷು ಚ - ಹೃದಯಂಗಳಲ್ಲಿಯು, ವಿಶೇಷೇಣ - ವೆಗ್ಗಳವಾಗಿ, ವಿರಾಜತೇ - ಒಪ್ಪುತಂ ಇಹನು ॥೭೩॥

ಸರ್ವಾತ್ಮಾಪಿ ಪರಿಚ್ಛಿನ್ನೋ ಯಥಾ ಬಿಂಬಂ ಪ್ರವರ್ತತೆ
ತಥಾ ಸ್ವಕೀಯ ಭಕ್ತೇಷು ಶಂಕರೋ ಭಾಸತೇ ಸದಾ

ಸರ್ವಾತ್ಮಾಪಿ - ಸರ್ವವ್ಯಾಪಕವಾಗಿರ್ದಂಥದ್ದಾದರೂ, ಬಿಂಬಂ - ಬಿಂಬರೂಪ ವಾಗಿದ್ದಂತಹ ಆಕಾಶವು, ಪರಿಚ್ಛಿನ್ನಂ - ಅಲ್ಪಮೂರ್ತಿಯಾಗಿ, ಯಥಾ ಪ್ರವರ್ತತೆ - ಹ್ಯಾಂಗೆ ಜಲದಲ್ಲಿ ವರ್ತಿಸುತ್ತಂ ಇದ್ದೀತು. ತಥಾ - ಹಾಂಗೆ, ಶಂಕರಃ - ಶಿವನು, ಸ್ವಕೀಯ್ಯ ಭಕ್ತೇಷು - ತನ್ನ ಭಕ್ತರುಗಳಲ್ಲಿ, ಭಾಸತೇ - ಒಪ್ಪುತಂ ಇಹನು ॥೭೪॥

ನಿತ್ಯಂ ತದೀಯ ಭಕ್ತೇಷು ಯಾತೇ ರುದ್ರಶಿವಾತನೂಃ
ಅಘೋರಾऽಪಾಪಕಾಶೀತಿ ಶ್ರುತಿರಾಹ ಸನಾತನೀ

ಯಾತೇ ರುದ್ರಾಶಿವಾತನೂಃ ಅಘೋರಪಾಪ ಕಾಶೀತಿ ಶ್ರುತಿಃ - ಈ ಶ್ರುತಿಯು ನಿತ್ಯಂ - ಆವಾಗಲೂ, ತದೀಯ ಭಕ್ತೇಷು - ಶಿವಭಕ್ತರುಗಳಲ್ಲಿಹುದೆಂದು, ಆಹಾ - ಹೇಳುತ್ತಂ ಇದ್ದಿತು ॥೭೫॥

ವಿಶುದ್ಧೇಷು ವಿರಕ್ತೇಷು ವಿವೇಕೇಷು ಮಹಾತ್ಮಸು
ಶಿವಸ್ತಿಷ್ಠತಿ ಸರ್ವಾತ್ಮಾ ಶಿವಲಾಂಛನಧಾರಿಷು

ವಿಶುದ್ಧೇಷು - ಶುದ್ಧರಾಗಿದ್ದಂಥಾ, ವಿರಕ್ತೇಷು - ವಿರಕ್ತರಾಗಿರ್ದಂಥಾ, ವಿವೇಕೇಷು ಶಿವ - ವಿವೇಕಿಗಳಾಗಿದ್ದಂಥಾ, ಶಿವಲಾಂಛನಧಾರಿಷು - ಶಿವನ ಕುರುಹ ತೊಟ್ಟಿರ್ದಂಥಾ, ಮಹಾತ್ಮಸು - ಮಹಾ ಪುರುಷರುಗಳಲ್ಲಿ, ಸರ್ವಾತ್ಮ - ಸರ್ವಾತ್ಮಕನಾಗಿರ್ದಂಥಾ, ಶಿವಃ - ಶಿವನು, ತಿಷ್ಠತಿ - ಇರುತ್ತಂ ಇಹನು ॥೭೬॥

ನಿತ್ಯಂ ಸಂತೋಷ ಯುಕ್ತಾನಾಂ ಜ್ಞಾನನಿರ್ದಗ್ಧಕರ್ಮಣಾಂ
ಮಾಹೇಶ್ವರಾಣಾಮಂತಸ್ಥೋ ವಿಭಾತಿಪರಮೇಶ್ವರಃ

ನಿತ್ಯಂ ಸಂತೋಷಯುಕ್ತಾನಾಂ - ನಿತ್ಯ ಸಂತುಷ್ಟರಾಗಿರ್ದಂಥಾ, ಜ್ಞಾನನಿರ್ದಗ್ಧ ಕರ್ಮಣಾಂ - ಜ್ಞಾನದಿಂದ ದಹಿಸಲ್ಪಟ್ಟ ಪಾಪ ಪುಣ್ಯಂಗಳನುಳ್ಳಂಥಾ, ಮಹೇಶ್ವರಾಣಾಂ - ಮಾಹೇಶ್ವರರುಗಳ, ಅಂತಸ್ಥಃ - ಹೃದಯದಲ್ಲಿ, ಪರಮೇಶ್ವರಃ - ಶಿವನು, ವಿಭಾತಿ - ಒಪ್ಪುತ್ತಿಹನು ॥೭೭॥

ಅನ್ಯತ್ರ ಶಂಭೋರತಿ ಮಾತ್ರಶೂನ್ಯೋ
ನಿಜೇಷ್ಟಲಿಂಗೇ ನಿಯತಾಂತರಾತ್ಮಾ
ಶಿವಾತ್ಮಕಂ ವಿಶ್ವಮಿದಂ ವಿಬುಧ್ವಾ
ಮಾಹೇಶ್ವರೋऽಸೌಭವತಿ ಪ್ರಸಾದೀ

ಈ ಪ್ರಕಾರದಲ್ಲಿ ಸವಿಶೇಷವಾಗಿ ಮಾಹೇಶ್ವರ ಸ್ವರೂಪವನು ನಿರೂಪಿಸಿದ ನಂತರದಲ್ಲಿ ಪ್ರಸಾದಿ ಸ್ವರೂಪವನು ಹೇಳಲೋಸ್ಕರವಾಗಿ ಪೂರ್ವೋಕ್ತ ಪರಿಚ್ಛೇದ ಸಂಗತಿಯ ಹೇಳುತಿರ್ದಪಂ

ಶಂಭೋಃ - ಶಿವನ ದೆಸೆಯಿಂದ, ಅನ್ಯತ್ರ - ಉಳಿದ ಸ್ಥಾನದಲ್ಲಿ, ಅತಿಮಾತ್ರ ಶೂನ್ಯಃ - ಅತ್ಯಂತ ತುಚ್ಛ ಬುದ್ಧಿಯನುಳ್ಳಂಥಾ, ನಿಜೇಷ್ಟಲಿಂಗೇ - ತನ್ನಿಷ್ಟ ಲಿಂಗದಲ್ಲಿ, ನಿಯತಾಂತರಾತ್ಮ - ದೃಢಚಿತ್ತನಾಗಿರ್ದಂಥಾ, ಮಾಹೇಶ್ವರಃ - ವೀರ ಮಾಹೇಶ್ವರನು, ಇದಂ ವಿಶ್ವಂ - ಈ ಜಗತ್ತನು, ಶಿವಾತ್ಮಕಂ - ಶಿವ ಸ್ವರೂಪವೆಂದು, ವಿಬುಧ್ವ - ಅರಿದು, ಪ್ರಸಾದಿ ಭವತಿ - ಶಿವಪ್ರಸಾದವನುಳ್ಳವನಹನು ॥೭೮॥

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ
ವಿತಾಯಾಂ ಮಾಹೇಶ್ವರಸ್ಥಲ ಪ್ರಸಂಗೋನಾಮದಶಮಪರಿಚ್ಛೇದಃ

ಏಕಾದಶಪರಿಚ್ಛೇದ

ಪ್ರಸಾದಿಸ್ಥಲ

ಅಗಸ್ತ್ಯ ಉವಾಚ

ಉಕ್ತೋಮಾಹೇಶ್ವರಸ್ಸಾಕ್ಷಾಲ್ಲಿಂಗನಿಷ್ಠಾದಿ ಧರ್ಮವಾನ್
ಕಥಮೇಷಃ ಪ್ರಸಾದೀತಿ ಕಥ್ಯತೆ ಗಣನಾಯಕ

ಪೂರ್ವ ಪರಿಚ್ಛೇದದ ಕಡೆಯಲ್ಲಿ ಮಾಹೇಶ್ವರನು ಪ್ರಸಾದಿಯಹನು ಎಂದು ಹೇಳಲಾಗಿ ಅಗಸ್ತ್ಯ ಮುನೀಶ್ವರನು ಪ್ರಶ್ನೆಯ ಮಾಡುತ್ತಂ ಇದ್ದಾನು.

ಭೋಗಣನಾಯಕ - ಎಲೆ ಗಣೇಶ್ವರನೆ, ಲಿಂಗನಿಷ್ಠಾದಿ ಧರ್ಮವಾನ್ - ಲಿಂಗನಿಷ್ಠೆ ಮೊದಲಾದ ಧರ್ಮವನುಳ್ಳಂಥ, ಮಾಹೇಶ್ವರಃ - ವೀರ ಮಾಹೇಶ್ವರನು, ಉಕ್ತಃ - ಹೇಳಲ್ಪಟ್ಟನು. ಯೇಷಃ - ಈತನು, ಪ್ರಸಾದೀತಿ - ಪ್ರಸಾದಿ ಎಂದು, ಕಥಂ - ಹ್ಯಾಗೆ ತಾನೆ, ಕಥ್ಯತೆ - ಹೇಳಲ್ಪಡುವನು ॥೧॥

ರೇಣುಕ ಉವಾಚ

ರೇಣುಕನು ಉತ್ತರವ ಹೇಳುತ್ತಿದ್ದಾನು

ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪ ನಿಬಂಧನಃ
ಮನಃಪ್ರಸಾದ ಯೋಗೇನ ಪ್ರಸಾದಿತ್ಯೇಷಕಥ್ಯತೇ

ಲಿಂಗನಿಷ್ಠಾದಿ ಭಾವೇನ - ಲಿಂಗನಿಷ್ಠೆ ಮೊದಲಾದ ಧರ್ಮದಿಂದ, ಧ್ವಸ್ತಪಾಪ ನಿಬಂಧನಃ - ಕೆಡಿಸಲ್ಪಟ್ಟ ಪಾಪ ಸಮೂಹವನುಳ್ಳಂಥಾ, ಏಷಃ - ಈ ಮಹೇಶ್ವರನು, ಮನಃ ಪ್ರಸಾದ ಯೋಗೇನ - ಮನಸ್ಸಿನ ನಿರ್ಮಲತ್ವ ಸಂಬಂಧದಿಂದ, ಪ್ರಸಾದಿತಿ - ಪ್ರಸಾದಿಯೆಂದು, ಕಥ್ಯತೆ - ಹೇಳಲ್ಪಡುವನು ॥೨॥

ಪ್ರಸಾದಿಸ್ಥಲಮಿತ್ಯೇತದಸ್ಯ ಮಾಹಾತ್ಮ್ಯಸೂಚಕಂ
ಅಂತರಸ್ಥಲ ಭೇದೇನ ಸಪ್ತಧಾ ಪರಿಕೀರ್ತಿತಂ

ಅಸ್ಯ - ಈ ಮಹೇಶ್ವರನ, ಮಾಹಾತ್ಮ್ಯ ಸೂಚಕಂ - ಮಹಿಮೆಯನು ಸೂಚಿಸುವಂಥಾ, ಪ್ರಸಾದಿ ಸ್ಥಲಂ - ಪ್ರಸಾದಿ ಸ್ಥಲವು, ಅಂತರ ಸ್ಥಲಭೇದೇನ - ಅವಾಂತರ ಸ್ಥಲದ ಭೇದದಿಂದ, ಸಪ್ತಧಾ - ಏಳು ಪ್ರಕಾರವಾಗಿ, ಪರಿಕೀರ್ತಿತಂ - ಹೇಳಲ್ಪಟ್ಟಿತು ॥೩॥

೨೫. ಪ್ರಸಾದಿ ಸ್ಥಲ

ಪ್ರಸಾದಿಸ್ಥಲಮಾದೌತು ಗುರುಮಾಹಾತ್ಮ್ಯಕಂ ತತಃ
ತತೋಲಿಂಗ ಪ್ರಶಂಸಾ ಚ ತತೋಜಂಗಮ ಗೌರವಂ

ತತೋಭಕ್ತಸ್ಯ ಮಾಹಾತ್ಮ್ಯಂ ತತಶ್ಶರಣ ಕೀರ್ತನಂ
ಶಿವ ಪ್ರಸಾದ ಮಾಹಾತ್ಮ್ಯಮಿತಿ ಸಪ್ತಪ್ರಕಾರತಾ

ಆದೌ - ಮೊದಲು, ಪ್ರಸಾದಿ ಸ್ಥಲಂ - ಪ್ರಸಾದಿ ಸ್ಥಲವು, ತತಃ - ಅನಂತರದಲ್ಲಿ ಗುರು ಮಾಹಾತ್ಮ್ಯಕಂ - ಗುರುಮಹಾತ್ಮೆಸ್ಥಲವು, ತತಃ - ಅನಂತರದಲ್ಲಿ, ಲಿಂಗಪ್ರಶಂಸಾ - ಲಿಂಗ ಮಹಾತ್ಮೆಸ್ಥಲವು, ತತಃ - ಅನಂತರದಲ್ಲಿ, ಜಂಗಮ ಗೌರವಂ - ಜಂಗಮ ಮಹಾತ್ಮೆಸ್ಥಲವು, ತತಃ - ಅನಂತರದಲ್ಲಿ, ಭಕ್ತಸ್ಯ ಮಹಾತ್ಮ್ಯಂ - ಭಕ್ತಮಹಾತ್ಮೆಸ್ಥಲವು, ತತಃ - ಅನಂತರದಲ್ಲಿ, ಶರಣ ಕೀರ್ತನಂ - ಶರಣ ಮಹಾತ್ಮೆಸ್ಥಲವು, ತತಃ - ಅನಂತರದಲ್ಲಿ, ಪ್ರಸಾದ ಮಹಾತ್ಮ್ಯಂ - ಶಿವ ಪ್ರಸಾದ ಮಾಹಾತ್ಮ್ಯಸ್ಥಲವು, ಇತಿ - ಹೀಗೆಂದು ಸಪ್ತಪ್ರಕಾರತಾ - ಏಳು ಪ್ರಕಾರವು ॥೫॥

ಕ್ರಮಾಲ್ಲಕ್ಷಣಮೇತೇಷಾಂ ಕಥಯಾಮಿ ಮಹಾಮುನೇ

ಮಹಾಮುನೇ - ಎಲೈ ಮುನೀಶ್ವರನೆ, ಯೇತೇಷಾಂ - ಈ ಏಳು ಪ್ರಕಾರವಾದ ಸ್ಥಲವನು, ಕ್ರಮಾತ್ - ತರುವಾಯಿಂದ, ಲಕ್ಷಣಂ - ಲಕ್ಷಣವನು, ಕಥಯಾಮಿ - ಹೇಳಿಹನು ಕೇಳು ॥೬॥

ನೈರ್ಮಲ್ಯಮನಸೋಲಿಂಗಪ್ರಸಾದ ಇತಿ ಕಥ್ಯತೇ
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇಷ ಸಿದ್ಧ್ಯತಿ

ನೈರ್ಮಲ್ಯ - ಪರಿಶುದ್ಧವಾದ, ಮನಸಃ - ಮನಸ್ಸಿನ, ಲಿಂಗಂ - ಕುರುಹು, ಪ್ರಸಾದ ಇತಿ-ಪ್ರಸಾದವೆಂದು, ಕಥ್ಯತೆ - ಹೇಳಲ್ಪಡುತ್ತಂ ಇಹುದು. ಲಿಂಗರೂಪಸ್ಯ - ಲಿಂಗರೂಪನಾಗಿರ್ದಂಥಾ ಶಿವನ, ಪ್ರಸಾದಾತ್ - ಪ್ರಸಾದದ ದೆಸೆಯಿಂದ, ಯೇಷಃ - ಈ ಮನಸ್ಸಿನ ನಿರ್ಮಲತ್ವವು, ಸಿದ್ಧ್ಯತಿ - ಸಿದ್ಧಿಸುವುದು ॥೭॥

ಶಿವಪ್ರಸಾದೋಯದ್ರವ್ಯಂ ಶಿವಾಯ ವಿನಿವೇದಿತಂ
ನಿರ್ಮಾಲ್ಯಂ ತತ ಸೇವಾನಾಂ ಮನೋನೈರ್ಮಲ್ಯ ಕಾರಣಂ

ಮನಃಪ್ರಸಾದ ಸಿದ್ಧ್ಯರ್ಥಂ ನಿರ್ಮಲಂ ಜ್ಞಾನ ಕಾರಣಂ
ಶಿವ ಪ್ರಸಾದಂ ಸ್ವೀಕುರ್ವನ್ ಪ್ರಸಾದಿತ್ಯೇಷ ಕಥ್ಯತೇ

ಶಿವಾಯ ಚ - ಶಿವನಿಗೋಸ್ಕರ, ವಿನಿವೇದಿತಂ - ಸಮರ್ಪಿಸಲ್ಪಟ್ಟಂಥಾ, ಶಿವ ಪ್ರಸಾದಂ - ಶಿವನ ಪ್ರಸಾದವಾಗಿರ್ದಂಥಾ, ಯದ್ರವ್ಯಂ - ಆವುದಾನೊಂದು ದ್ರವ್ಯವುಂಟು, ತಂ ನಿರ್ಮಾಲ್ಯಂ - ಆ ನಿರ್ಮಾಲ್ಯವು, ಶೈವಾನಾಂ - ಶಿವಭಕ್ತರಿಗೆ, ಮನೋನೈರ್ಮಲ್ಯ ಕಾರಣಂ - ಮನಃಶುದ್ಧಿಯನು ಮಾಡುವುದು, ನಿರ್ಮಲಂ - ನಿರ್ಮಲವಾಗಿರ್ದಂಥಾ, ಜ್ಞಾನಕಾರಣಂ - ಜ್ಞಾನಕ್ಕೆ ಕಾರಣವಾದ, ಶಿವಪ್ರಸಾದಂ - ಶಿವನ ಪ್ರಸಾದವನು, ಮನಃಪ್ರಸಾದ ಸಿದ್ಧ್ಯರ್ಥಂ - ಮನಃಶುದ್ಧಿನಿಮಿತ್ಯವಾಗಿ ಶಿವ ಪ್ರಸಾದಂ - ಶಿವನ ಪ್ರಸಾದವನು, ಸ್ವೀಕುರ್ವನ್ - ಸ್ವೀಕರಿಸುತ್ತಂ ಇದ್ದಂಥಾತನು, ಪ್ರಸಾದಿತಿ - ಪ್ರಸಾದಿ ಎಂದು, ಕಥ್ಯತೆ - ಹೇಳಲ್ಪಡುವನು ॥೯॥

ಅನ್ನಶುದ್ಧಾಹಿ ಸರ್ವೇಷಾಂ ಸತ್ವಶುದ್ಧಿರುದಾಹೃತಾ
ವಿಶುದ್ಧಮನ್ನಜಾತಂ ಹೀಯಚ್ಛಿವಾಯ ಸಮರ್ಪಿತಂ

ತದೇವ ಸರ್ವಕಾಲಂತು ಭುಂಜನಃ ಲಿಂಗತತ್ಪರಃ
ಮನಃಪ್ರಸಾದಮತುಲಂ ಲಭತೇ ಜ್ಞಾನಕಾರಣಂ

ಸರ್ವೇಷಾಂ - ಸಮಸ್ತರಿಗೂ, ಅನ್ನಶುದ್ಧ್ಯಾ - ಅನ್ನ ಶುದ್ಧಿಯಿಂದ, ಸತ್ವಶುದ್ಧಿಃ - ಮನಶ್ಶುದ್ಧಿಯು, ಉದಾಹೃತಾ - ಹೇಳಲ್ಪಟ್ಟಿತು. ಯೇದನ್ನಜಾತಂ - ಆವುದಾನೊಂದು ಅನ್ನ ಸಮೂಹವು, ಶಿವಾಯ - ಶಿವನಿಗೋಸ್ಕರ, ನಿವೇದಿತಂ - ಸಮರ್ಪಿಸಲ್ಪಟ್ಟಿತು. ತತ್ - ಅದು, ವಿಶುದ್ಧಂ - ನಿರ್ಮಲವಾದಂಥಾದು, ತದೇವ - ಅದನೆ, ಸರ್ವಕಾಲಃ - ಆವಾಗಲೂ, ಭುಂಜಾನಃ - ಭೋಗಿಸುತ್ತಂ ಇದ್ದಂಥಾ, ಲಿಂಗತತ್ಪರಃ - ಶಿವಭಕ್ತನಾಗಿರ್ದಂಥಾತನು, ಜ್ಞಾನ ಕಾರಣಂ - ಜ್ಞಾನಕ್ಕೆ ಕಾರಣವಾಗಿರ್ದಂಥಾ, ಅತುಲಂ - ಉತ್ತಮನಾಗಿರ್ದಂಥ, ಮನಃಪ್ರಸಾದಂ - ಮನಶ್ಶುದ್ಧಿಯನು, ಲಭತೇ - ಪಡೆವನು ||೧೧||

ಆತ್ಮಭೋಗಾಯ ನಿಯತಂ ಯದ್ಯದ್ದ್ರವ್ಯಂ ಸಮಾಹಿತಂ
ತತ್ತತ್ಸಮರ್ಪ್ಯದೇವಾಯ ಭುಂಜೀತಾತ್ಮ ವಿಶುದ್ಧಯೇ

ಯದ್ಯದ್ದ್ರವ್ಯಂ - ಆವಾವದ್ರವ್ಯವು, ಆತ್ಮಭೋಗಾಯ - ತನ್ನ ಭೋಗಾರ್ಥವಾಗಿ, ಸಮಾಹಿತಂ - ಪ್ರಾಪ್ತವಾಯಿತು. ತತ್ತತ್ - ಆಯಾಯ ದ್ರವ್ಯವನು, ದೇವಾಯ - ಶಿವನಿಗೆ, ಸಮರ್ಪ್ಯ - ಸಮರ್ಪಿಸಿ, ಆತ್ಮವಿಶುದ್ಧವು - ಮನಃ ಶುದ್ಧ್ಯರ್ಥವಾಗಿ, ಭುಂಜೀತ - ಸೇವಿಸಬೇಕು ||೧೨||

ನಿತ್ಯಸಿದ್ಧೇನ ದೇವೇನ ಭೇಷಜಾ ಜನ್ಮರೋಗಿಣಾಂ
ಯದ್ಯತ್ಪ್ರಸಾದಿತಂ ಭುಕ್ತ್ವಾ ತತ್ತಜ್ಜನ್ಮರಸಾಯನಂ

ಜನ್ಮರೋಗಿಣಾಂ - ಭವರೋಗವನುಳ್ಳಂಥಾವರಿಗೆ, ಭೇಷಜಂ - ವೈದ್ಯನಾಗಿದ್ದಂಥಾ, ನಿತ್ಯಸಿದ್ಧೇನ - ಆವಾಗಲೂ ಸಿದ್ಧವಾಗಿರ್ದ, ದೇವೇನ - ಶಿವನಿಂದ, ಯದ್ಯತ್ - ಆವಾವ ದ್ರವ್ಯವು, ಪ್ರಸಾದಿತಂ - ಪ್ರಸಾದಿಸಲ್ಪಟ್ಟಿತು. ತತ್ - ಅದನ್ನು, ಭುಕ್ತ್ವಾ - ಭುಂಜಿಸಲ್ಪಟ್ಟಂಥಾತನ, ಜನ್ಮರಸಾಯನಂ - ಜನ್ಮವ ಕೆಡಿಸುವಂಥಾ ಔಷಧಿಯು ||೧೩||

ಆರೋಗ್ಯ ಕಾರಣಂ ಪುಂಸಾಮಂತಃಕರಣ ಶುದ್ಧಿದಂ
ತಾಪತ್ರಯಮಹಾರೋಗಸಮುದ್ಧರಣಭೇಷಜಂ

ವಿದ್ಯಾ ವೈಶಿದ್ಧಿಕರಣಂ ವಿನಿಪಾತವಿಘಾತಕಂ
ದ್ವಾರಂ ಜ್ಞಾನಾವತಾರಸ್ಯ ಮೋಹೋಚ್ಛೇದಸ್ಯ ಕಾರಣಂ

ವೈರಾಗ್ಯಸಂಪದೋ ಮೂಲಂ ಮಹಾನಂದವಿವರ್ಧನಂ
ದುರ್ಲಭಂ ಪಾಪಚಿತ್ತಾನಾಂ ಸುಲಭಂ ಪುಣ್ಯ ಕರ್ಮಣಾಂ

ಆದೃತಂ ಬ್ರಹ್ಮವಿಷ್ಣ್ವಾದ್ಯೈರ್ವಶಿಷ್ಠಾದ್ಯಾಶ್ಚತಾಪಸೈಃ
ಶಿವಸ್ವೀಕೃತಮನ್ನಾದ್ಯಂ ಸ್ವೀಕಾರ್ಯಂ ಸಿದ್ಧಿಕಾಂಕ್ಷಿಭಿಃ

ಪುಂಸಾಂ - ಪುರುಷರುಗಳಿಗೆ, ಆರೋಗ್ಯಕಾರಣಂ - ರೋಗ ನಿವೃತ್ತಿಗೆ ಕಾರಣವಾಗಿರ್ದಂಥಾ, ಅಂತಃಕರಣ ಶುದ್ಧಿದಂ - ಮನಃ ಶುದ್ಧಿಯನು ಮಾಡುವಂಥಾ, ತಾಪತ್ರಯ ಮಹಾರೋಗ ಸಮುದ್ಧರಣಭೇಷಜಂ - ತಾಪತ್ರಯವೆಂಬ ಮಹಾರೋಗವನು ಪರಿಹರಿಸುವುದಕ್ಕೆ ಔಷಧವಾಗಿರ್ದಂಥ ವಿದ್ಯಾವೈಶಿದ್ಧಿಕರಣಂ - ವಿದ್ಯೆಗಳ ಸಿದ್ಧಿಯನು ಮಾಡುವಂಥಾ, ವಿನಿಪಾತ ಘಾತಕಂ - ಆಪತ್ತುಗಳನು ಪರಿಹರಿಸುವಂಥಾ, ಜ್ಞಾನಾವ ತಾರಸ್ಯ - ಜ್ಞಾನವವತರಿಸುವುದಕ್ಕೆ, ದ್ವಾರಂ - ಕಾರಣವಾಗಿರ್ದಂಥ, ಮೋಹಚ್ಛೇದಸ್ಯ - ಅಜ್ಞಾನವ ಕೆಡಿಸುವುದಕ್ಕೆ, ಕಾರಣಂ - ಕಾರಣವಾಗಿರ್ದಂಥ, ವೈರಾಗ್ಯ ಸಂಪದಂ - ವೈರಾಗ್ಯವೆಂಬ ಸಂಪತ್ತುಗಳಿಗೆ, ಮೂಲಂ - ಕಾರಣವಾಗಿರ್ದಂಥಾ, ಮಹಾನಂದ ವಿವರ್ಧನಂ - ಬ್ರಹ್ಮಾನಂದವನು ಹೆಚ್ಚಿಸುವಂಥಾ, ಪಾಪಚಿತ್ತಾನಾಂ - ಪಾಪಿಷ್ಠರಿಗೆ, ದುರ್ಲಭಂ - ಪಡೆಯಲು ಶಕ್ಯವಲ್ಲದೆ ಇರ್ದಂಥ, ಪುಣ್ಯಕರ್ಮಾಣಾಂ - ಧರ್ಮಿಷ್ಠರಿಗೆ, ಸುಲಭಂ - ಸುಲಭವಾಗಿರ್ದಂಥ, ಬ್ರಹ್ಮವಿಷ್ಣ್ವಾದ್ಯಾಃ - ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಂದಲೂ, ವಶಿಷ್ಠಾದ್ಯೈಃ - ವಶಿಷ್ಠ ಮೊದಲಾದ, ತಾಪಸೈಃ - ತಪಸ್ವಿಗಳಿಂದಲೂ, ಆದೃತಂ - ಆದರಿಸಲ್ಪಟ್ಟಂಥಾ, ಸಿದ್ಧಿಕಾಂಕ್ಷಿಭಿಃ - ಮೋಕ್ಷಾಪೇಕ್ಷಿತರು, ಶಿವಸ್ವೀಕೃತಂ - ಶಿವನಿಗೆ ಸಮರ್ಪಿಸಲ್ಪಟ್ಟಂಥ, ಅನ್ನಾದ್ಯಂ - ಅಶನ ಮೊದಲಾದವನು, ಸ್ವೀಕಾರ್ಯಂ - ಸ್ವೀಕರಿಸಬೇಕು ।।೧೭।।

ಪತ್ರಂ ಪುಷ್ಪಂ ಫಲಂ ತೋಯಂ ಯಚ್ಛಿವಾಯ ನಿವೇದಿತಂ
ತತ್ತತ್ ಸ್ವೀಕಾರ ಯೋಗೇನ ಸರ್ವಪಾಪಕ್ಷಯೋ ಭವೇತ್

ಪತ್ರಂ - ಪತ್ರೆಯನು, ಪುಷ್ಪಂ - ಪುಷ್ಪವನು ಫಲಂ - ಫಲವನು, ತೋಯಂ - ಉದಕವು, ಯತ್ - ಆವುದಾನೊಂದು, ಶಿವಾಯ - ಶಿವನಿಗೆ, ವಿನಿವೇದಿತಂ - ಸಮರ್ಪಿಸಲ್ಪಟ್ಟಿತು, ತತ್ತತ್ - ಆಪ್ರಸಾದವನು, ಸ್ವೀಕಾರಯೋಗೇನ - ಸ್ವೀಕರಿಸುವುದರಿಂದ, ಸರ್ವಪಾಪಕ್ಷಯೋ ಭವೇತ್ - ಸಮಸ್ತ ಪಾಪಕ್ಷಯವಹುದು ।।೧೮।।

೨೬. ಗುರುಮಾಹಾತ್ಮ್ಯಸ್ಥಲ

ಯಥಾ ಶಿವಪ್ರಸಾದಾನ್ನಂ ಸ್ವೀಕಾರ್ಯಂ ಲಿಂಗತತ್ಪರೈಃ
ತಥಾ ಗುರೋಃ ಪ್ರಸಾದಾನ್ನಂ ತಥೈವ ಶಿವಯೋಗಿನಾಂ

ಲಿಂಗ ತತ್ಪರೈಃ - ಶಿವಭಕ್ತರುಗಳಿಂದ, ಶಿವಪ್ರಸಾದಾನ್ನಂ - ಶಿವನ ಪ್ರಸಾದವು, ಯಥಾ - ಹ್ಯಾಂಗೆ, ಸ್ವೀಕಾರ್ಯಂ - ಸ್ವೀಕರಿಸಲು ಯೋಗ್ಯವು, ತಥಾ - ಹಾಂಗೆ ಗುರೋಃಪ್ರಸಾದಂ - ಗುರುವಿನ ಪ್ರಸಾದವು, ಶಿವಯೋಗಿನಃ - ಶಿವಯೋಗಿಯ ಪ್ರಸಾದವು, ಸ್ವೀಕಾರ್ಯಂ - ಸ್ವೀಕರಿಸಲು ಯೋಗ್ಯವು ।।೧೯।।

ಗುರುರೇವಾತ್ರ ಸರ್ವೇಷಾಂ ಕಾರಣಂ ಸಿದ್ಧಿಕರ್ಮಣಾಂ
ಗುರುರೂಪೋ ಮಹಾದೇವೋ ಯಥಾ ಸಾಕ್ಷಾದುಪಸ್ಥಿತಃ

ಸರ್ವೇಷಾಂ - ಸಮಸ್ತವಾಗಿರ್ದಂಥಾ, ಸಿದ್ಧಿಕರ್ಮಣಾಂ - ಸಿದ್ಧಿಕರ್ಮಗಳಿಗೆ, ಗುರುರೇವಂ - ಗುರುದೇವಂ, ಕಾರಣಂ - ಕಾರಣನು, ಮಹಾದೇವಃ - ಶಿವನು, ಗುರುರೂಪಃ - ಗುರು ಸ್ವರೂಪವನು ಆಶ್ರಯಿಸಿ, ಸಾಕ್ಷಾತ್ - ಪ್ರತ್ಯಕ್ಷವಾಗಿ, ಸ್ಥಿತಃ - ಇರುತ್ತಂ ಇಹನು ।।೨೦।।

ನಿಃಕಲೋಹಿ ಮಹಾದೇವೋ ನಿತ್ಯಜ್ಞಾನ ಮಹೋದಧಿಃ
ಸಕಲೋ ಗುರುರೂಪೇಣ ಸರ್ವಾನುಗ್ರಾಹಕೋಭವೇತ್

ನಿಃಕಲಃ - ನಿಃಪ್ರಪಂಚನಾಗಿರ್ದಂಥಾ, ಮಹಾದೇವಃ - ಶಿವನು, ನಿತ್ಯಜ್ಞಾನ ಮಹೋದಧಿಃ - ನಿತ್ಯಜ್ಞಾನ ಸಮುದ್ರನಾಗಿರ್ದಂಥಾತನು, ಸಕಲಃ - ಸಕಲ ಪ್ರಪಂಚನಾಗಿ, ಗುರುರೂಪೇಣ - ಗುರುವಿನ ಸ್ವರೂಪದಿಂದ, ಸರ್ವಾನುಗ್ರಾಹಕೋ ಭವೇತ್ - ಸರ್ವರಿಗೂ ಅನುಗ್ರಹವನು ಮಾಡುತ್ತಾ ಇಹನು ।।೨೧।।

ಯಶ್ಶಿವಃ ಸಗುರು ಜ್ಞೇಯೋ ಯೋಗುರುಸ್ಸಶಿವಃ ಸ್ಮೃತಃ
ನತಯೋರಂತರಂ ಕುರ್ಯಾತ್ ಜ್ಞಾನವಾಪ್ತ್ಯೈರ್ಮಹಾಮತಿಃ

ಯಶ್ಶಿವಃ - ಆವನಾನೊಬ್ಬ ಶಿವನುಂಟು. ಸಃ - ಆತನೆ, ಗುರುಜ್ಞೇಯಃ - ಗುರುವೆಂದರಿಯಬೇಕು, ಯೋಗುರುಃ- ಆವನಾನೊಬ್ಬ ಗುರುವುಂಟು. ಸ ಶಿವೋಜ್ಞೇಯಃ - ಆತನೆ ಶಿವಗುರುವೆಂದರಿಯಬೇಕು. ಮಹಾಮತಿಃ - ಬುದ್ಧಿವಾನ್ನನಾಗಿರ್ದಂಥಾತನು, ಜ್ಞಾನಪ್ರಾಪ್ತ್ಯೋಃ - ಜ್ಞಾನಕ್ಕೆ ನೆಲೆವನೆಯಾಗಿರ್ದಂಥ, ತಯೋಃ - ಅವರಿಬ್ಬರಿಗೆ, ಅಂತರಂ - ಭೇದವನು, ನಕುರ್ಯಾತ್ - ಮಾಡಬಾರದು ।।೨೨।।

ಹಸ್ತಪಾದಾದಿಸಾಮ್ಯೇನ ನೇತರೈಃ ಸದೃಶಂ ವದೇತ್
ಆಚಾರ್ಯಂ ಜ್ಞಾನದಂ ಶುದ್ಧಂ ಶಿವರೂಪತಯಾಸ್ಥಿತಂ

ಆಚಾರ್ಯಸ್ಯಾವಮಾನೇನ ಶ್ರೇಯಃ ಪ್ರಾಪ್ತಿರ್ವಿಹನ್ಯತೇ
ತಸ್ಮಾನ್ನಿಶ್ರೇಯಸಂ ಪ್ರಾಪ್ತ್ಯೈ ಪೂಜಯೇತ್ತಂ ಸಮಾಹಿತಃ

ಗುರುಭಕ್ತಿ ವಿಹೀನಸ್ಯ ಶಿವಭಕ್ತಿರ್ನಜಾಯತೇ
ತತಃ ಶಿವೇ ಯಥಾ ಭಕ್ತಿಸ್ತಥಾಭಕ್ತಿರ್ಗುರಾವಪಿ

ಜ್ಞಾನದಂ - ಶಿವಜ್ಞಾನವನು ಕೊಡುವಂಥಾ, ಶುದ್ಧಂ - ಶುದ್ಧನಾಗಿರ್ದಂಥ, ಶಿವರೂಪ ತಯಾಸ್ಥಿತಂ - ಶಿವಸ್ವರೂಪನಾಗಿರ್ದಂಥ, ಆಚಾರ್ಯಂ - ಶ್ರೀ ಗುರುವನು, ಹಸ್ತಪಾದಾದಿ ಸಾಮ್ಯೇನ - ಹಸ್ತಪಾದಾದಿ ಸಾದೃಶ್ಯದಿಂದ, ಇತರೈಃ - ಉಳಿದ ಮನುಷ್ಯರ ಕೂಡೆ, ಸದೃಶಂ ವದೇತ್ - ಸರಿಯೆಂದು ನುಡಿಯಬಾರದು. ಆಚಾರ್ಯಸ್ಯ - ಆಚಾರ್ಯನು, ಗುರೋರಪಿ - ಶ್ರೀಗುರುವನಾದರೂ, ಅವಮಾನೇನ - ಉದಾಸೀನವ ಮಾಡಿದರೆ, ಶ್ರೇಯಃ ಪ್ರಾಪ್ತಿಃ - ಮೋಕ್ಷಸಿದ್ಧಿಯು, ವಿಹನ್ಯತೆ - ಕೆಡುವುದು, ತಸ್ಮಾತ್ - ಅದು ಕಾರಣ, ನಿಶ್ರೇಯಸಪ್ರಾಪ್ತ್ಯೈ - ಮೋಕ್ಷಾರ್ಥವಾಗಿ, ಸಮಾಹಿತಃ - ಸಾವಧಾನನಾಗಿ, ತಂ - ಆ ಶ್ರೀಗುರುವನು, ಪೂಜಯೇತ್ - ಪೂಜಿಸಬೇಕು. ಗುರುಭಕ್ತಿವಿಹೀನಸ್ಯ -

ಗುರುಭಕ್ತಿ ಇಲ್ಲದಾಂಗೆ, ಶಿವಭಕ್ತಿಃ - ಶಿವಭಕ್ತಿಯು, ನ ಜಾಯತೇ - ಹುಟ್ಟದು, ತತಃ - ಅದು ಕಾರಣ, ಶಿವೇಯಥಾ ಭಕ್ತಿಃ, ಹೆಂಗೆ ಶಿವನಲ್ಲಿ ಭಕ್ತಿಯ ಮಾಡುತಿಹನು, ತಥಾ ಭಕ್ತಿಃ - ಹಾಂಗೆ ಗುರು ಭಕ್ತಿಯ ಮಾಡಬೇಕು ॥೨೫॥

೨೭. ಲಿಂಗಮಾಹಾತ್ಮ್ಯಸ್ಥಲ

ಗುರುಮಾಹಾತ್ಮ್ಯಯೋಗೇನ ನಿಜಜ್ಞಾನಾತಿರೇಕತಃ
ಲಿಂಗಸ್ಯಾಪಿ ಚ ಮಾಹಾತ್ಮ್ಯಂ ಸರ್ವೋತ್ಕೃಷ್ಟಂ ವಿಭಾವ್ಯತೇ

ಗುರುಮಾಹಾತ್ಮ್ಯಯೋಗೇನ - ಗುರು ಮಾಹಾತ್ಮ್ಯೆಯೋಗದಿಂದ, ನಿಜ ಜ್ಞಾನಾತಿರೇಕತಃ - ಸ್ವಭಾವವಾದ ಜ್ಞಾನಾತಿಶಯದಿಂದಲೂ, ಲಿಂಗಸ್ಯಾಪಿ ಚ ಮಾಹಾತ್ಮ್ಯಂ - ಲಿಂಗದ ಮಹತ್ತ್ವವು, ಸರ್ವೋತ್ಕೃಷ್ಟಂ - ಸರ್ವೋತ್ಕೃಷ್ಟವಾಗಿ, ವಿಭಾವ್ಯತೆ - ಅರಿಯಲ್ಪಡುತ್ತಂ ಇದ್ದಿತು ॥೨೬॥

ಶಿವಸ್ಯಬೋಧಯೇಲ್ಲಿಂಗಂ ಯದ್ಗುರುಬೋಧಚೇತಸಾ
ತದೇವ ಲಿಂಗವಿಜ್ಞೇಯಂ ಶಾಂಕರಂ ಸರ್ವಕಾರಣಂ

ಗುರುಬೋಧಿತ ಚೇತಸಾ - ಗುರುವಿನಿಂದ ತಿಳುಹಿಸಲ್ಪಟ್ಟ ಚಿತ್ತವನುಳ್ಳಂಥಾವರು ಗಳಿಗೆ, ಶಿವಸ್ಯ - ಶಿವನ, ಯದ್ಬೋಧಲಿಂಗಂ - ಆವುದಾನೊಂದು ಜ್ಞಾನಾತ್ಮಕವಾಗಿರ್ದಂಥಾ ಲಿಂಗವುಂಟು. ತದೇವ - ಅದೆ, ಸರ್ವಕಾರಣಂ - ಸಮಸ್ತಕ್ಕು ಕಾರಣವಾಗಿರ್ದಂಥಾ, ಶಾಂಕರಂಲಿಂಗಂ - ಶಿವಲಿಂಗವೆಂದು, ವಿಜ್ಞೇಯಂ - ಅರಿಯಬೇಕು ॥೨೭॥

ಪರಂ ಪವಿತ್ರಮಮಲಂ ಲಿಂಗಂ ಬ್ರಹ್ಮ ಸನಾತನಂ
ಶಿವಾಭಿಧಾನಂ ಚಿನ್ಮಾತ್ರಂ ಸತ್ಾನಂದ ನಿರಂಕುಶಂ

ಕಾರಣಂ ಸರ್ವಲೋಕಾನಾಂ ವೇದಾನಾಮಪಿ ಕಾರಣಂ
ಪೂರಣಂ ಸರ್ವತಂತ್ರಸ್ಯ ತಾರಣಂ ಜನ್ಮವಾರಿಧೇಃ

ಜ್ಯೋತಿರ್ಮಯಮನಿರ್ದೇಶ್ಯಂ ಯೋಗಿನಾಮಾತ್ಮನಿ ಸ್ಥಿತಂ
ಕಥಂ ವಿಜ್ಞಾಯತೇ ಲೋಕೇ ಮಹಾಗುರುದಯಾಂ ವಿನಾಂ

ಪರಂ - ಉತ್ಕೃಷ್ಟವಾಗಿರ್ದಂಥ, ಪವಿತ್ರಂ - ಪರಿಶುದ್ಧವಾಗಿರ್ದಂಥಾ, ಅಮಲಂ - ನಿರ್ಮಲವಾಗಿರ್ದಂಥಾ, ಬ್ರಹ್ಮ - ಪರಬ್ರಹ್ಮಸ್ವರೂಪನಾಗಿರ್ದಂಥಾ, ಶಾಶ್ವತಂ - ಶಾಶ್ವತನಾಗಿರ್ದಂಥ, ಶಿವಾಭಿಧಾನಂ - ಶಿವನೆಂಬ ಹೆಸರನುಳ್ಳಂಥಾ, ಚಿನ್ಮಾತ್ರಂ - ಜ್ಞಾನಾತ್ಮಕನಾಗಿರ್ದಂಥಾ, ಸತ್ತಾನಂದಂ - ಸತ್ಯಸ್ವರೂಪವಾಗಿ ಸುಖಸ್ವರೂಪವಾಗಿರ್ದಂಥಾ, ನಿರಂಕುಶಂ - ಎಲ್ಲಿಯೂ ತಡೆ ಇಲ್ಲದೆ ಇರ್ದಂಥಾ, ಸರ್ವಲೋಕಾನಾಂ ಸಮಸ್ತ ಲೋಕಂಗಳಿಗೆ, ಕಾರಣಂ - ಹೇತುವಾಗಿರ್ದಂಥಾ, ವೇದಾನಾಮಪಿಕಾರಣಂ - ವೇದಗಳಿಗೂ ಬೀಜವಾಗಿರ್ದಂಥಾ, ಸರ್ವತಂತ್ರಸ್ಯ - ಸಮಸ್ತ ಕರ್ಮಗಳನು, ಪೂರಣಂ - ಸ್ಮರಣಮಾತ್ರದಿಂದ ಸಂಪೂರ್ಣವಾಗಿ ಮಾಡುವಂಥ, ಜನ್ಮವಾರಿಧಿಃ - ಸಂಸಾರ ಸಮುದ್ರವನು, ತಾರಣಂ - ದಾಟಿಸುವಂಥಾ, ಜ್ಯೋತಿರ್ಮಯಂ - ಜ್ಯೋತಿ

ಸ್ವರೂಪವಾಗಿರ್ದಂಥಾ, ಅನಿರ್ದೇಶ್ಯಂ - ಅಪ್ರಮೇಯನಾಗಿರ್ದಂಥಾ, ಯೋಗಿನಾಂ - ಯೋಗಿಗಳ, ಆತ್ಮನಿ - ಮನಸ್ಸಿನಲ್ಲಿ, ಸ್ಥಿತಂ - ಇರುತ್ತಂ ಇರ್ದಂಥಾ, ಲಿಂಗಂ - ಲಿಂಗವು, ಮಹಾಗುರುದಯಾ - ಉತ್ತಮನಾದ ಗುರುವಿನ ಕೃಪೆಯನು, ವಿನಾ - ಬಿಟ್ಟು, ಕಥಂ - ಹೇಗೆ ತಾನೆ, ಲೋಕೆ - ಲೋಕದಲ್ಲಿ, ವಿಜ್ಞಾಯತೇ - ಅರಿಯಲ್ಪಡುತ್ತಂ ಇಹದು ॥೩೦॥

ಬ್ರಹ್ಮವಿಷ್ಣುನಾಪೂರ್ವಂ ಯಲ್ಲಿಂಗಂ ಜ್ಯೋತಿರಾತ್ಮಕಂ
ಅಪರಿಚ್ಛೇದ್ಯಮಭವೇನವಾಕ್ಯೇ ಪರಿಬೋಧ್ಯತೇ

ಪೂರ್ವಂ - ಮೊದಲಲ್ಲಿ ಲಿಂಗ ಪ್ರಾದುರ್ಭವ ಸಮಯದಲ್ಲಿ, ಬ್ರಹ್ಮಣಾ - ಬ್ರಹ್ಮನಿಂದ, ವಿಷ್ಣುನಾ - ವಿಷ್ಣುವಿನಿಂದಲೂ, ಜ್ಯೋತಿರಾತ್ಮಕಂ - ತೇಜೋರೂಪ ವಾಗಿರ್ದಂಥ, ಯಲ್ಲಿಂಗಂ - ಆವುದಾನೊಂದು ಲಿಂಗವು, ಅಪರಿಚ್ಛೇದ್ಯಮ ಭವೇತ್ - ಅರಿಯಲು ಶಕ್ಯವಿಲ್ಲದೆ ಇರ್ದಂಥಾಯಿತು, ತತ್ - ಆಲಿಂಗವು, ಕೇನ - ಉಳಿದಂಥವನಿಂದ ತಾನು, ಪರಿಬೋಧ್ಯತೆ - ನಿಶ್ಚೈಸಲ್ಪಡುತ್ತಂ ಇಹುದು ॥೩೧॥

ಬಹುನಾತ್ರಕಿಮುಕ್ತೇನ ಲಿಂಗಂ ಬ್ರಹ್ಮಸನಾತನಂ
ಯೋಗಿನೋಯತ್ರಲೀಯಂತೆ ಮುಕ್ತ ಪಾಶ ನಿಬಂಧನಃ

ಬಹುನಾತ್ರಕಿಮುಕ್ತೇನ - ಅನೇಕ ವಾರ್ತೆಯಿಂದ, ಕಿಂ - ಪ್ರಯೋಜನವೇನು, ಲಿಂಗಂ - ಲಿಂಗವು, ಸನಾತನಂ - ಕೇಡಿಲ್ಲದೆ ಇರ್ದಂಥಾ, ಬ್ರಹ್ಮ - ಪರಬ್ರಹ್ಮವು, ಮುಕ್ತಪಾಶ ನಿಬಂಧನಾ - ಬಿಡಲ್ಪಟ್ಟ ಸಂಸಾರಪಾಶವನುಳ್ಳಂಥಾ, ಯೋಗಿನಃ - ಯೋಗಿಯು, ಯತ್ರ - ಆವುದಾನೊಂದು ಲಿಂಗದಲ್ಲಿ, ಲೀಯಂತೆ - ಅಡಗುತ್ತಂ ಇಹರು ॥೩೨॥

ಪೀಠಿಕಾ ಪರಮಾಶಕ್ತಿರ್ಲಿಂಗಂ ಸಾಕ್ಷಾನ್ಮಹೇಶ್ವರಃ
ಶಿವಶಕ್ತಿ ಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ

ಪರಮಾಶಕ್ತಿಃ - ಉತ್ತಮವಾಗಿರ್ದಂಥ ಶಿವಶಕ್ತಿಯು, ಪೀಠಿಕಾ - ಪೀಠವೆಂದು, ಉಚ್ಯತೆ - ಹೇಳಲ್ಪಡುತ್ತಂ ಇಹದು, ಸಾಕ್ಷಾನ್ಮಹೇಶ್ವರಃ - ಸಾಕ್ಷಾತ್ಪರಶಿವನು, ಲಿಂಗಂ - ಲಿಂಗವೆಂದು, ಉಚ್ಯತೆ - ಹೇಳಲ್ಪಡುತ್ತಂ ಇಹನು, ಶಿವಶಕ್ತಿ ಸಮಾಯೋಗಃ - ಶಿವಶಕ್ತಿಗಳ ಸಂಬಂಧವು, ವಿಶ್ವಲಿಂಗಂ - ವಿಶ್ವಲಿಂಗವೆಂದು, ಉಚ್ಯತೆ - ಹೇಳಲ್ಪಡುತ್ತಂ ಇಹುದು ॥೩೩॥

ಬ್ರಹ್ಮಾದಯಃ ಸುರಾಃ ಸರ್ವೇ ಮುನಯಃ ಶೌನಕಾದಯಃ
ಶಿವಲಿಂಗಾರ್ಚನಾದೇವಾ ಸ್ವಂ ಸ್ವಂ ಸಂಪದಮಾಪ್ನುಯುಃ

ಬ್ರಹ್ಮಾದಯಃ - ಬ್ರಹ್ಮ ಮೊದಲಾಗಿರ್ದಂಥ, ಸರ್ವೇಸುರಾಃ - ಸಮಸ್ತ ದೇವತೆಗಳು, ಶೌನಕಾದಯಃ - ಶೌನಕ ಮೊದಲಾದ, ಮುನಯಃ - ಮುನೀಶ್ವರರುಗಳು, ಶಿವಲಿಂಗಾರ್ಚನಾ ದೇವ - ಶಿವಲಿಂಗ ಪೂಜೆಯಿಂದಲೆ, ಸ್ವಂ ಸ್ವಂ ಸಂಪದಂ - ತಮ್ಮ ತಮ್ಮ ಸಂಪತ್ತನು, ಆಪ್ನುಯಾತ್ - ಐಯ್ದಿದರು ॥೩೪॥

ವಿಶ್ವಾಧಿಕತ್ವಮೀಶಸ್ಯ ವಿಶ್ವಮೂರ್ತೇಶ್ಚಭಾವನಂ
ಅನನ್ಯದೇವ ಸಾದೃಶ್ಯಂ ಶ್ರುತಿರಾಹ ಸನಾತನೀ

ಈಶಸ್ಯ - ಶಿವನಿಗೆ, ವಿಶ್ವಾಧಿಕತ್ವಂ - ಸರ್ವಾಧಿಕ್ಯವನು, ವಿಶ್ವಮೂರ್ತೇಃ - ವಿಶ್ವರೂಪದ, ಭಾವನಂ - ಭಾವನೆಯನು, ಅನನ್ಯದೇವಸಾದೃಶ್ಯಂ - ದೇವತಾಂತರಕ್ಕೆ ಶಿವಸಾದೃಶ್ಯವಿಲ್ಲದೆ ಇಹತನವನು, ಸನಾತನೀ - ನಿತ್ಯವಾಗಿರ್ದಂಥಾ, ಶ್ರುತಿಃ - ವೇದವು, ಆಹಂ - ಹೇಳುತ್ತಂ ಇದ್ದಿತು ।।೩೫।।

೨೮. ಜಂಗಮಮಾಹಾತ್ಮ್ಯಸ್ಥಲ

ಗುರುಶಿಷ್ಯಸಮಾರೂಢಲಿಂಗಮಾಹಾತ್ಮ್ಯ ಸಂಪದಃ
ಸರ್ವಂ ಚಿದ್ರೂಪ ವಿಜ್ಞಾನಾಜ್ಜಂಗಮಾಧಿಕ್ಯ ಮುಚ್ಯತೆ

ಜಂಗಮದ ಮಹತ್ವವನು ಹೇಳುತ್ತಂ ಇದ್ದಾನು

ಗುರುಶಿಷ್ಯ ಸಮಾರೂಢ ಲಿಂಗಮಾಹಾತ್ಮಸಂಪದಃ - ಗುರುಶಿಷ್ಯ ಪರಂಪರೆಯಿಂದ ಪ್ರಾಪ್ತವಾದ ಲಿಂಗಮಹತ್ವ ಸಂಪತ್ತನುಳ್ಳಂಥಾತನಾದ ಕಾರಣ, ಸರ್ವಂ ಚಿದ್ರೂಪ ವಿಜ್ಞಾನಾತ್ - ಸಮಸ್ತವು ಜ್ಞಾನಾತ್ಮಕವಾಗಿರ್ದಂಥ ಶಿವರೂಪವೆಂಬ ಜ್ಞಾನದಿಂದಲೂ, ಜಂಗಮಾಧಿಕ್ಯಂ - ಜಂಗಮದ ಅಧಿಕತ್ವವು, ಉಚ್ಯತೇ - ಹೇಳಲ್ಪಡುವುದು ।।೩೬।।

ಜಾನಂತ್ಯತಿಶಯಾದ್ಯೇತು ಶಿವಂ ವಿಶ್ವಪ್ರಕಾಶಕಂ
ಸ್ವಸ್ವರೂಪತಯಾ ತೇತು ಜಂಗಮಾ ಇತಿಕೀರ್ತಿತಾಃ

ಯತ್ - ಆರು ಕೆಲಂಬರು, ವಿಶ್ವಪ್ರಕಾಶಕಂ - ಜಗತ್ತನು ಪ್ರಕಾಶಿಸುವಂಥ, ಶಿವಂ - ಶಿವನನ್ನು, ಸ್ವಸ್ವರೂಪತಯಾ - ತಮ್ಮ ಸ್ವರೂಪವಾಗಿ, ಜಾನಂತಿ - ಅರಿವುತ್ತಂ ಇದ್ದಾರು ಅವರು, ಜಂಗಮ ಇತಿ - ಜಂಗಮವೆಂದು, ಕೀರ್ತಿತಾಃ - ಹೇಳಲ್ಪಡುವರು ।।೩೭।।

ಘೋರಸಂಸಾರತಿಮಿರಪರಿಧ್ವಂಸನ ಕಾರಣಂ
ಯೇಷಾಮಸ್ತಿ ಶಿವಜ್ಞಾನಂ ತೇ ಮತಾಃ ಶಿವಯೋಗಿನಃ

ಘೋರ - ಭಯಂಕರವಾಗಿರ್ದಂಥ, ಸಂಸಾರ ತಿಮಿರ - ಸಂಸಾರವೆಂಬ ಕತ್ತಲೆಯನು, ಪರಿಧ್ವಂಸನ - ಕೆಡಿಸುವುದಕ್ಕೆ, ಕಾರಣಂ - ಕಾರಣವಾಗಿರ್ದಂಥ, ಶಿವಜ್ಞಾನಂ - ಶಿವಜ್ಞಾನವು, ಏಷಾಂ - ಆರು ಕೆಲಂಬರಿಗೆ, ಅಸ್ತಿ - ಉಂಟು. ತೇ - ಅವರೂ ಶಿವಯೋಗಿನೊ ಮತಾಃ - ಶಿವಯೋಗಿಗಳೆಂದು ಸಮ್ಮತ್ರವು ।।೩೮।।

ಯೇ ಪಶ್ಯಂತಿ ಜಗಜ್ಜಾಲಂ ಚಿದ್ರೂಪ ಶಿವರೂಪಕಂ
ನಿರ್ಧೂತಮಲಸಂಸ್ಪರ್ಶಾಃ ಸ್ಮೃತಾಸ್ತೇಶಿವಯೋಗಿನಃ

ಏ - ಆರು ಕೆಲಂಬರು, ಜಗಜ್ಜಾಲಂ - ಜಗತ್ತನು, ಚಿದ್ರೂಪ ಶಿವರೂಪಕಂ - ಜ್ಞಾನಾತ್ಮಕವಾಗಿರ್ದಂಥ ಶಿವಸ್ವರೂಪವೆಂದು, ಪಶ್ಯಂತಿ - ಅರಿವುತ್ತಂ ಇದ್ದಾರು,

ನಿರ್ಧೂತಮಲ ಸಂಸ್ಪರ್ಶಃ - ನೂಕಲ್ಪಟ್ಟ ಪಾಪಲೇಪವನುಳ್ಳಂಥ, ತೇ - ಅವರೂ, ಶಿವಯೋಗಿನಃ - ಶಿವಯೋಗಿಗಳೆಂದು, ಸ್ಮೃತಾಃ - ಹೇಳಲ್ಪಟ್ಟರು ॥೩೯॥

ಜಿತಕಾಮಾ ಜಿತಕ್ರೋಧಾ ಮೋಹಗ್ರಂಥಿವಿಭೇದನಾಃ
ಸಮಾಲೋಷ್ಟಾಶ್ಮಕನಕಾಸ್ಸಾಧವಶ್ಶಿವಯೋಗಿನಃ

ಜಿತಕಾಮಾ - ಕಾಮವನು ಜಯಿಸಿದಂಥಾ, ಜಿತಕ್ರೋಧಾ - ಕೋಪವನು ಜಯಿಸಿದಂಥಾ, ಮೋಕ್ಷಗ್ರಂಥಿ ವಿಭೇದನಾಃ - ಮೋಹವೆಂಬ ಕಟ್ಟನುಬಿಚ್ಚಿಸಿದಂಥಾ, ಸಮಾಲೋಷ್ಟಾಶ್ಮಕನಕಃ - ಮಣ್ಣಿನಲ್ಲಿ ಕಲ್ಲಿನಲ್ಲಿ ಹಂಚಿನಲ್ಲಿ ಚಿನ್ನಗಳಲ್ಲಿ ಸಮಬುದ್ಧಿಯನುಳ್ಳಂಥಾ, ಸಾಧವಃ - ಸತ್ಪುರುಷರುಗಳು, ಶಿವಯೋಗಿನಃ - ಶಿವಯೋಗಿಗಳೆನಿಸುವರು ॥೪೦॥

ಸಮಾಶ್ಶತ್ರೌ ಚ ಮಿತ್ರೇ ಚ ಸಾಕ್ಷಾತ್ಕೃತಶಿವಾತ್ಮಕಾಃ
ನಿಸ್ಪೃಹಾ ನಿರಂಹಕಾರಾ ವರ್ತಂತೇ ಶಿವಯೋಗಿನಃ

ಶತ್ರೌ - ಹಗೆಯಲ್ಲಿ, ಮಿತ್ರೇಚ - ಸ್ನೇಹಿತನಲ್ಲಿ, ಸಮಾಃ - ಸರಿಯಾಗಿರ್ದಂಥಾ, ಸಾಕ್ಷಾತ್ಕೃತ ಶಿವಾತ್ಮಕಃ - ಸಾಕ್ಷಾತ್ಕರಿಸಲ್ಪಟ್ಟ ಶಿವರೂಪವನುಳ್ಳಂಥ, ನಿಸ್ಪೃಹಃ - ವಿಷಯಾಭಿಲಾಷೆ ಇಲ್ಲದೆ ಇರ್ದಂಥಾ, ನಿರಹಂಕಾರಃ - ಅಹಂಕಾರವಿಲ್ಲದೆ ಇರ್ದಂಥವರುಗಳಾಗಿ, ಶಿವಯೋಗಿನಃ - ಶಿವಯೋಗಿಗಳು, ವರ್ತಂತೇ - ವರ್ತಿಸುತ್ತಂ ಇಹರು ॥೪೧॥

ಪಾದಾಗ್ರರೇಣವೋಯತ್ರ ಪತಂತಿ ಶಿವಯೋಗಿನಾಂ
ತದೇವ ಸದನಂ ಪುಣ್ಯಂ ಪಾವನಂ ಗೃಹ ಮೇಧಿನಾಂ

ಶಿವಯೋಗಿನಾಂ - ಶಿವಯೋಗಿಗಳ, ಪಾದಾಗ್ರರೇಣವಃ - ಪಾದದ ತುದಿಯ ಧೂಳಿಗಳು, ಯತ್ರ - ಆವಾನಾನೊಬ್ಬ ಗೃಹಸ್ಥನ, ಗೃಹಾದೀನಾಂ - ಗೃಹಗಳಲ್ಲಿ, ಪತಂತಿ - ಬೀಳುತ್ತಂ ಇದ್ದವು, ತದೇವ ಸದನಂ - ಆ ಗೃಹಗಳೆ,ಪುಣ್ಯಂ - ಪುಣ್ಯವಾಗಿರ್ದಂಥವು, ಪಾವನಂ - ಪರಿಶುದ್ಧವಾಗಿರ್ದಂಥವು ॥೪೨॥

ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಂ
ಸ್ಪರ್ಶನಂ ಪಾಪಶಮನಂ ಪೂಜನಂ ಮುಕ್ತಿ ಸಾಧನಂ

ಶಿವಯೋಗಿನಾಂ - ಶಿವಯೋಗಿಗಳ, ದರ್ಶನಂ - ದರ್ಶನವು, ಪುಂಸಾಂ - ಪುರುಷರುಗಳಿಗೆ, ಸರ್ವಸಿದ್ಧಿಕರಂ - ಸಮಸ್ತ ಸಿದ್ಧಿಯನು ಕೊಡುವುದು. ಸ್ಪರ್ಶನಾಂ - ಪಾದಸ್ಪರ್ಶನವು, ಪಾಪಶಮನಂ - ಪಾಪಗಳ ಕೆಡಿಸುವುದು, ಪೂಜನಂ - ಪೂಜೆಯು, ಮುಕ್ತಿಸಾಧನಂ - ಮೋಕ್ಷ ಸಾಧನೆಯು ॥೪೩॥

ಮಹತಾಂ ಶಿವತಾತ್ಪರ್ಯವೇದಿನಾಮನುಮೋದಿನಾಂ
ಕಿಂ ವಾ ಫಲಂ ನ ಸಿದ್ಧ್ಯೇತ ಸಂಪರ್ಕಾಚ್ಛಿವಯೋಗಿನಾಂ

ಮಹತಾಂ - ಮಹಾತ್ಮರಾಗಿರ್ದಂಥಾ, ಶಿವತಾತ್ಪರ್ಯವೇದಿನಾಂ - ಶಿವತಾತ್ಪರ್ಯವನು ಬಲ್ಲಂಥಾ, ಅನುಮೋದಿನಾಂ - ನಿತ್ಯಸಂತುಷ್ಟನಾಗಿರ್ದಂಥಾ, ಶಿವಯೋಗಿನಾಂ - ಶಿವಯೋಗಿಗಳ, ಸಂಪರ್ಕಾತ್ - ಸಂಬಂಧದ ದೆಸೆಯಿಂದ ಕಿಂ ವಾ ಫಲಂ - ಆವ ಫಲವು ತಾನು, ನ ಸಿದ್ಧ್ಯೇತ - ಸಿದ್ಧವಾಗದು. ಸರ್ವಸಿದ್ಧಿಯಹುದೆಂಬುದರ್ಥ ॥೪೪॥

ದುರ್ಲಭಂ ಹಿ ಶಿವಜ್ಞಾನಂ ದುರ್ಲಭಂ ಶಿವಚಿಂತನಂ
ಏಷಾಮೇತದ್ವಯಂ ಚಾಸ್ತಿತೇಹಿ ಸಾಕ್ಷಾಚ್ಛಿವಾತ್ಮಕಾಃ

ಶಿವಜ್ಞಾನಂ - ಶಿವಜ್ಞಾನವು, ದುರ್ಲಭಂ - ದುರ್ಲಭವಾಗಿರ್ದಂಥಾದು, ಶಿವ ಚಿಂತನಂ - ಶಿವಧ್ಯಾನವು, ದುರ್ಲಭಂ - ಹಡೆಯಲು ಬಾರದಿರ್ದಂಥಾದ್ದು, ಏತದ್ವಯಂ - ಈ ಎರಡು, ಏಷಾಂ - ಆರು ಕೆಲಂಬರಿಗೆ, ಅಸ್ತಿ - ಉಂಟು, ತೇ - ಅವರು ಸಾಕ್ಷಾಚ್ಛಿವಾತ್ಮಕಾಃ - ಪ್ರತ್ಯಕ್ಷ ಶಿವ ಸ್ವರೂಪರು ॥೪೫॥

೨೯. ಭಕ್ತಮಾಹಾತ್ಮ್ಯಸ್ಥಲ

ಗುರೋರ್ಲಿಂಗಸ್ಯ ಮಾಹಾತ್ಮ್ಯಂ ಕಥನಾಚ್ಛಿವಯೋಗಿನಾಂ
ಸಿದ್ಧಂ ಭಕ್ತಸ್ಯ ಮಾಹಾತ್ಮ್ಯಂ ತಥಾಪ್ಯೇಪ್ರಶಸ್ಯತೇ

ಶಿವಭಕ್ತ್ಯ ಮಾಹಾತ್ಮ್ಯ ಸ್ಥಲವನು ಹೇಳುತ್ತಂ ಇದ್ದಾನು

ಗುರೋಃ - ಗುರುವಿನ, ಲಿಂಗಸ್ಯ - ಲಿಂಗದ, ಶಿವಯೋಗಿನಾಂ - ಜಂಗಮದ ಮಾಹಾತ್ಮ್ಯ ಕಥನಾತ್ - ಮಹತ್ವವನು ಹೇಳುವುದರಿಂದ, ಭಕ್ತಸ್ಯ ಮಾಹಾತ್ಮ್ಯಂ - ಭಕ್ತನ ಮಹತ್ವವು, ಸಿದ್ಧಂ - ಸ್ಪಷ್ಟವಾಗಿತ್ತು, ತಥಾಪಿ - ಹೇಗಾದರೂ, ಏತತ್ - ಈ ಭಕ್ತ ಮಹತ್ತ್ವವು, ಪ್ರಶಂಸ್ಯತೇ - ಅಧಿಕವೆಂದು ಹೇಳಲ್ಪಡುವುದು ॥೪೬॥

ಭಜಂತಿಯೇ ಮಹಾದೇವಂ ಪರಮಾತ್ಮಾನಮವ್ಯಯಂ
ಕರ್ಮಣಾ ಮನಸಾ ವಾಚಾ ತೇ ಭಕ್ತ ಇತಿ ಕೀರ್ತಿತಾಃ

ಯೇ - ಆರು ಕೆಲಂಬರು, ಅವ್ಯಯಂ - ಕೇಡಿಲ್ಲದೆ ಇರ್ದಂಥ, ಪರಮಾತ್ಮಾನಂ - ಪರಬ್ರಹ್ಮಸ್ವರೂಪವಾಗಿರ್ದಂಥ, ಮಹಾದೇವಂ - ಶಿವನನು, ಕರ್ಮಣಾ - ಕರ್ಮದಿಂದಲಾದರೂ, ಮನಸಾ - ಮನಸ್ಸಿನಿಂದಲಾದರು, ವಾಚಾ - ವಾಕಿನಿಂದಲಾದರೂ, ಭಜಂತಿ - ಭಜಿಸುತ್ತಂ ಇದ್ದರು ಅವರು, ಭಕ್ತಾ ಇತಿ - ಭಕ್ತರೆಂದು, ಕೀರ್ತಿತಾಃ - ಹೇಳಲ್ಪಟ್ಟರು ॥೪೭॥

ದುರ್ಲಭಾ ಹಿ ಶಿವೇಭಕ್ತಿಸ್ಸಂಸಾರಭಯ ತಾರಿಣೀ
ಸಾ ಯತ್ರ ವರ್ತತೇ ಸಾಕ್ಷಾತ್ಸಭಕ್ತಃ ಇತಿ ಗೀಯತೇ

ಸಂಸಾರಭಯ ತಾರಿಣೀ - ಸಂಸಾರ ಭೀತಿಯನು ಬಿಡಿಸುವಂಥಾ, ದುರ್ಲಭಂ - ಹಡೆಯಲು ಬಾರದೆ ಇರ್ದಂಥಾ, ಶಿವಭಕ್ತಿಃ - ಶಿವನಲ್ಲಿಯ ಭಕ್ತಿಯು, ಯತ್ರವರ್ತತೇ - ಆವವನಲ್ಲಿ ಇದ್ದಿತು, ಸಃ - ಆತನು, ಭಕ್ತ - ಇತಿ ಭಕ್ತನೆಂದು, ಗೀಯತೆ - ಹೇಳಲ್ಪಡುವವನು ॥೪೮॥

ಕಿಂ ವೇದೈಃ ಕಿಂ ಜಪ್ಯೈಃ ಕಿಂ ಶಾಸ್ತ್ರೈಃ ಕಿಂ ಯಜ್ಞೈಃ ಕಿಂ ತಪೋವ್ರತೈಃ
ನಾಸ್ತಿಚೇಚ್ಛಾಂಕರಿಭಕ್ತಿರ್ದೇಹಿನಾಂ ಜನ್ಮರೋಗಿಣಾಂ

ಜನ್ಮರೋಗಿಣಾಂ - ಜನನವೆಂಬ ರೋಗವನುಳ್ಳಂಥಾ, ದೇಹಿನಾಂ - ಪ್ರಾಣಿಗಳಿಗೆ, ಶಾಂಕರಿ ಭಕ್ತಿಃ - ಶಿವಭಕ್ತಿಯು, ನಾಸ್ತಿಚೇತ್ - ಇಲ್ಲದೆ ಇದ್ದರೆ, ವೇದೈಃ - ವೇದಗಳಿಂದ, ಜಪ್ಯೈಃ - ಜಪಗಳಿಂದ, ಶಾಸ್ತ್ರೈಃ - ಶಾಸ್ತ್ರಗಳಿಂದ, ಯಜ್ಞೈಃ - ಯಜ್ಞಗಳಿಂದ, ತಪೋವ್ರತೈಃ - ತಪೋವ್ರತಗಳಿಂದ, ಕಿಂ - ಏನು ಪ್ರಯೋಜನವು ॥೪೯॥

ಶಿವಭಕ್ತಿವಿಹೀನಸ್ಯ ಸುಕೃತಂ ಚಾಪಿನಿಷ್ಫಲಂ
ವಿಪರೀತ ಫಲಂ ಚ ಸ್ಯಾ ದಕ್ಷಸ್ಯಾಪಿ ಮಹಾಧ್ವರೇ

ಶಿವಭಕ್ತಿ ವಿಹೀನಸ್ಯ - ಶಿವಭಕ್ತಿ ಇಲ್ಲದೆ ಇರ್ದಂಥಾತಗೆ, ಸುಕೃತಂಚಾಪಿ - ಪುಣ್ಯಕರ್ಮವಾದರೂ, ನಿಷ್ಫಲಂ - ವ್ಯರ್ಥವಹುದು. ವಿಪರೀತ ಫಲಸ್ಯಾತ್ - ಪಾಪವಹುದು, ಈ ಅರ್ಥದಲ್ಲಿ ದೃಷ್ಟಾಂತಂ, ದಕ್ಷಸ್ಯಾಪಿ - ದಕ್ಷ ಬ್ರಹ್ಮನಿಗೂ, ಮಹಾಧ್ವರೇ - ಉತ್ತಮವಾಗಿರ್ದಂಥ ಯಜ್ಞದಲ್ಲಿ ಹ್ಯಾಂಗೆ ಹಾಗೆ ॥೫೦॥

ಅತ್ಯಂತ ಪಾಪ ಕರ್ಮಾಪಿ ಶಿವಭಕ್ತ್ಯಾ ವಿಶುದ್ಧ್ಯತೇ
ಚಂಡೋ ಯಥಾ ಪುರಾಭಕ್ತ್ಯಾ ಪಿತೃಹಾಪಿ ಶಿವೋಽಭವತ್

ಶಿವಭಕ್ತ್ಯಾಃ - ಶಿವಭಕ್ತಿಯಿಂದ, ಅತ್ಯಂತ ಪಾಪಕರ್ಮಾಪಿ - ಅತ್ಯಂತ ಪಾಪವ ಮಾಡಿದನಾದರೂ, ವಿಶುದ್ಧತಿ - ಶುದ್ಧನಹನು. ಈ ಅರ್ಥದಲ್ಲಿ ಪುರಾಣ ಸಂಪಾದನವನು ಹೇಳುತಿರ್ದಪಂ, ಚಂಡಃ - ಚಂಡನೆಂಬವನು, ಶಿವಭಕ್ತ್ಯಾ - ಶಿವಭಕ್ತಿಯಿಂದ, ಪಿತೃಹಾಪಿ - ತಂದೆಯ ಕೊಂದವನಾದರೂ, ಯಥಾ ಶಿವೋಭವತ್ - ಆವ ಪ್ರಕಾರದಲ್ಲಿ ಶಿವನಾದನು ಹಾಂಗೆ ॥೫೧॥

ಸುಕೃತಂ ದುಷ್ಕೃತಂ ಚಾಪಿ ಶಿವಭಕ್ತಸ್ಯ ನಾಸ್ತಿ ಹಿ
ನಾಸ್ತಿ ನಾನಾವಿಧಂ ದುಃಖಂ ಕರ್ಮಪಾಶನಿಬಂಧನಂ

ಶಿವಭಕ್ತಸ್ಯ - ಶಿವಭಕ್ತನಿಗೆ, ಸುಕೃತಂ ದುಷ್ಕೃತಂ - ಪುಣ್ಯ ಪಾಪಂಗಳು, ನಾಸ್ತಿ - ಇಲ್ಲ, ಕರ್ಮಪಾಶ ನಿಬಂಧನಂ - ಕರ್ಮವೆಂಬ ಪಾಶದಿಂದ ಕಟ್ಟಲ್ಪಟ್ಟಂಥ, ನಾನಾವಿಧಂ - ನಾನಾ ಪ್ರಕಾರವಾಗಿರ್ದಂಥ, ದುಃಖಂ - ದುಃಖವು, ನಾಸ್ತಿ ಹಿ - ಇಲ್ಲವಲ್ಲ ॥೫೨॥

ಶಿವಾಶ್ರಿತಾನಾಂ ಜಂತೂನಾಂ ಕರ್ಮಣಾ ನಾಸ್ತಿ ಸಂಗಮಃ
ವಾಜಿನಾಂ ದಿನನಾಥಸ್ಯ ಕಥಂ ತಿಮಿರಜಂ ಭಯಂ

ಶಿವಾಶ್ರಿತಾನಾಂ ಜಂತೂನಾಂ - ಶಿವಭಕ್ತರಾದ ಪ್ರಾಣಿಗಳಿಗೆ, ಕರ್ಮಣಾಸಂಗಮಃ - ಕರ್ಮಸಂಬಂಧವು, ನಾಸ್ತಿ - ಇಲ್ಲ. ಅಲ್ಲಿ ದೃಷ್ಟಾಂತ. ದಿನನಾಥಸ್ಯ - ಸೂರ್ಯನ ರಥಕ್ಕೆ ಮೇಳೈಸಿದಂಥಾ, ವಾಜಿನಾಂ - ಕುದುರೆಗಳಿಗೆ, ತಿಮಿರಜಂ - ಅಂಧಕಾರದಿಂದ ಹುಟ್ಟಿದಂಥಾ, ಭಯಂ - ಭೀತಿಯು, ಕಥಂ - ಎತ್ತಣದು ॥೫೩॥

ನಿರೋದ್ಧುಂ ನಕ್ಷಮಂ ಕರ್ಮ ಶಿವಭಕ್ತಾನ್ವಿಶೃಂಖಲಾನ್
ಕಥಂ ಮತ್ತಗಜಾನ್ ರುಂದೇ ಶೃಂಖಲಾಬಿಸತಂತುಜಾ

ವಿಶೃಂಖಲಾನ್ - ಕಡೆ ಇಲ್ಲದೆ ಇರ್ದಂಥಾ, ಶಿವಭಕ್ತಾನ್ - ಶಿವಭಕ್ತರನು, ಕರ್ಮಾ - ಕರ್ಮವು, ನಿರೋದ್ಧುಂ - ಬಂಧಿಸಲು, ನಕ್ಷಮಂ - ಸಮರ್ಥವಲ್ಲ, ಅಲ್ಲಿ ದೃಷ್ಟಾಂತ - ಬಿಸತಂತುಜಾ - ತಾವರೆಯ ನೂಲಿನಿಂದ ಮಾಡಲ್ಪಟ್ಟಂಥ, ಶೃಂಖಲಾ - ಸಂಕೋಲೆಯು, ಮತ್ತಗಜಾನ್ - ಮದಸೊಕ್ಕಿದಾನೆಗಳನು, ತಥಂರುಂದೇ - ಹ್ಯಾಂಗೆ ತರಬುವುದು ।।೫೪।।

ಬ್ರಾಹ್ಮಣಃ ಕ್ಷತ್ರಿಯೋವಾಪಿ ವೈಶ್ಯಂ ಚ ಶೂದ್ರಮೇವವಾ
ಅಂತ್ಯಜೋ ವಾ ಶಿವೇಭಕ್ತಶ್ಶಿವೇವನ್ಮಾನ್ಯ ಏವ ಸಃ

ಬ್ರಾಹ್ಮಣಃ - ಬ್ರಾಹ್ಮಣನು, ಕ್ಷತ್ರಿಯಃ - ಕ್ಷತ್ರಿಯನು, ವೈಶ್ಯಃ - ವೈಶ್ಯನು, ಶೂದ್ರೋವಾ - ಶೂದ್ರನಾದರೂ, ಅಂತ್ಯಜೋವಾಪಿ - ಅಂತ್ಯಜನಾದರು, ಶಿವೇಭಕ್ತಃ - ಶಿವನಲ್ಲಿ ಭಕ್ತಿಯುಳ್ಳವನಾದರೆ, ಶಿವವತ್ - ಶಿವನ ಮರ್ಯಾದೆಯಲ್ಲಿ, ಮಾನ್ಯಏವ - ಪೂಜ್ಯನು ।।೫೫।।

ಶಿವಭಕ್ತಿಸಮಾವೇಶೇ ನ ಜಾತಿ ಪರಿಕಲ್ಪನಾಂ
ಇಂಧನೇಷ್ವಗ್ನಿಯುಕ್ತೇಷು ಕೋವಾ ಭೇದಃ ಪ್ರಕೀರ್ತ್ಯತೇ

ಶಿವಭಕ್ತಿ ಸಮಾವೇಶೇ - ಶಿವಭಕ್ತಿ ಸಂಬಂಧವಾದರೆ, ಜಾತಿ ಪರಿಕಲ್ಪನಾ - ಜಾತಿ ಭೇದಕಲ್ಪನೆಯು, ನ - ಇಲ್ಲ, ಅಲ್ಲಿ ದೃಷ್ಟಾಂತ, ಅಗ್ನಿಯುಕ್ತೇಷು - ಅಗ್ನಿ ಸಂಯುಕ್ತವಾಗಿರ್ದಂಥಾ, ಇಂಧನೇಷು - ಕಟ್ಟಿಗೆಗಳಲಿ, ಕೋ ವಾ ಭೇದಃ - ಆವಭೇದವು, ಪ್ರಕೀರ್ತ್ಯತೆ - ಹೇಳಲ್ಪಡುವುದು ।।೫೬।।

ಶುದ್ಧಾಃ ನಿಯಮಸಂಯುಕ್ತಾಶ್ಶಿವಾರ್ಪಿತ ಫಲಾಗಮಾಃ
ಯೇ ಭಜಂತಿ ಶಿವಂ ಲೋಕೇ ವಿಜ್ಞೇಯಾಸ್ತೇ ಗಣೇಶ್ವರಾಃ

ಶುದ್ಧಾಃ - ಶುದ್ಧರಾಗಿರ್ದಂಥಾ, ನಿಯಮ ಸಂಯುಕ್ತಾಃ - ಲಿಂಗ ಪೂಜಾ ನಿಯಮುವನುಳ್ಳಂಥಾ, ಶಿವಾರ್ಪಿತ ಫಲಾಗಮಃ - ಶಿವನಿಗೆ ಸಮರ್ಪಿಸಲ್ಪಟ್ಟ ಫಲಪ್ರಾಪ್ತಿಯನುಳ್ಳಂಥ, ಏ - ಆರು ಕೆಲಂಬರು, ಶಿವಂ - ಶಿವನನು, ಭಜಂತಿ - ಭಜಿಸುತ್ತಂ ಇದ್ದರು, ತೇ - ಅವರು, ಗಣೇಶ್ವರ ವಿಜ್ಞೇಯಃ - ಗಣೇಶ್ವರರೆಂದರಿಯಬೇಕು ।।೫೭।।

೩೦. ಶರಣಮಾಹಾತ್ಮ್ಯಸ್ಥಲ

ಗುರು ಲಿಂಗಾದಿ ಮಾಹಾತ್ಮ್ಯಂ ಬೋಧಾ ಧರ್ಮೇಷ್ವ ಸಂಗಿನಃ
ಸರ್ವಾತ್ಮನಾ ಶಿವಾಪತ್ತಿಃ ಶರಣಸ್ಥಲ ಮುಚ್ಚತೇ

ಶಿವಭಕ್ತನಿಗೆ ಶರಣಸ್ಥಲದ ಸ್ವರೂಪ ಪ್ರಾಪ್ತಿಯನು ಹೇಳುತ್ತಂ ಇದ್ದಾನು.

ಗುರು ಲಿಂಗಾದಿ ಮಾಹಾತ್ಮ್ಯ ಬೋಧಾತ್ - ಗುರು ಲಿಂಗ ಮೊದಲಾದ ಮಾಹಾತ್ಮ್ಯಜ್ಞಾನದಿಂದ, ಧರ್ಮೇಪ್ಯಸಂಗಿನಃ - ಪೂಜೆ ಮೊದಲಾದ ಧರ್ಮದಲ್ಲಿ ವಿರಕ್ತನಾಗಿರ್ದಂಥಾತನಿಗೆ, ಸರ್ವಾತ್ಮನಾ - ಸರ್ವಪ್ರಕಾರದಿಂದ, ಶಿವಾಪತ್ತಿಃ - ಶಿವಭಾವನೆಯು, ಶರಣಸ್ಥಲಂ - ಶರಣಸ್ಥಲವೆಂದು, ಉಚ್ಯತೇ - ಹೇಳಲ್ಪಡುವುದು ॥೫೮॥

ಬ್ರಹ್ಮಾದಿ ಬುಧ್ವಾ ಸರ್ವಾಣಿ ಮುಕ್ತ್ವಾ ಚ ಪ್ರಾಕೃತ ವೈಭವಾನ್
ಪ್ರಪದ್ಯತೇ ಶಿವಂ ಯತ್ತು ಶರಣಂ ತದುದಾಹೃತಂ

ಬ್ರಹ್ಮಾದಿ - ಬ್ರಹ್ಮ ಮೊದಲಾಗಿ, ಸರ್ವಾಣಿ - ಸಮಸ್ತ ಲೋಕವನು, ಬುಧ್ವಾ - ವಿಚಾರಿಸಿ, ಪ್ರಾಕೃತ ವೈಭವಾನ್ - ಪ್ರಾಕೃತ ಭೋಗಗಳನು, ಮುಕ್ತ್ವಾ - ಬಿಟ್ಟು, ಶಿವಂ - ಶಿವನನು, ಪ್ರಪದ್ಯತೆ ಇತಿಯಾತ್ - ಆವುದಾನೊಂದು ಕಾರಣ ಮೊರೆ ಹೋಗುವುದುಂಟು, ತತ್ - ಅದು, ಶರಣಂ - ಶರಣಸ್ಥಲವೆಂದು, ಉದಾಹೃತಂ - ಹೇಳಲ್ಪಟ್ಟಿತು ॥೫೯॥

ಶರಣ್ಯಸ್ಸರ್ವಭೂತಾನಾಂ ಶಂಕರಶ್ಶಶಿಶೇಖರಂ
ಸರ್ವಾತ್ಮಾನಾಪ್ರಪನ್ನಸ್ತಂ ಶರಣಾಗತ ಉಚ್ಯತೇ

ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೆ, ಶರಣ್ಯಂ - ಮೊರೆ ಹೋಗಲು ಯೋಗ್ಯವಾಗಿರ್ದಂಥ, ಶಶಿಶೇಖರಂ - ಚಂದ್ರಮೌಳಿಯಾಗಿರ್ದಂಥ, ಶಂಕರಂ - ಶಿವನನು, ಸರ್ವಾತ್ಮನಾ - ಮನೋವಾಕ್ಕಾಯಗಳಿಂದ, ಪ್ರಪನ್ನಃ - ಮೊರೆ ಹೊಕ್ಕಂಥಾತನು, ಶರಣಾಗತ ಉಚ್ಚತೆ - ಶರಣನೆನಿಸುವನು ॥೬೦॥

ವಿಮುಕ್ತಭೋಗಾಲಾಲಸ್ಯೋ ದೇವತಾಂತರನಿಸ್ಪೃಹಃ
ಶಿವಮಭ್ಯರ್ಥಯನ್ಮೋಕ್ಷಂ ಶರಣಾರ್ತೀತಿಗೀಯತೇ

ವಿಮುಕ್ತಭೋಗ ಲಾಲಸ್ಯ - ಭೋಗಾಸಕ್ತಿ ಇಲ್ಲದೆ ಇರ್ದಂಥ, ದೇವತಾಂತರ ನಿಸ್ಪೃಹಃ - ಮಿಕ್ಕಾದ ದೈವವನು ಅಪೇಕ್ಷಿಸದೆ ಇರ್ದಂಥಾತನು, ಮೋಕ್ಷಂ - ಮೋಕ್ಷರೂಪ ನಾಗಿರ್ದಂಥಾ, ಶಿವಂ - ಶಿವನನು, ಅಭ್ಯರ್ಥಂ - ಅಪೇಕ್ಷಿಸುತಂ ಇದ್ದಂಥಾತನು, ಶರಣಾರ್ಥೀತಿ - ಶರಣಾರ್ಥೀ ಎಂದು, ಗೀಯ್ಯತೆ - ಹೇಳಲ್ಪಡುವನು. ॥೬೧॥

ಯೇ ಪ್ರಪನ್ನಾ ಮಹಾದೇವಂ ಮನೋವಾಕ್ಕಾಯ ಕರ್ಮ ಭಿಃ
ತೇಷಾತು ಕರ್ಮಜಾತೇನ ಕಿಂ ವಾ ದೇವಾದಿತರ್ಪಣೈಃ

ಯೇ - ಆರು ಕೆಲಂಬರು, ಮಹಾದೇವಂ - ಶಿವನನು, ಮನೋವಾಕ್ಕಾಯಕರ್ಮ ಗಳಿಂದ, ಪ್ರಪನ್ನಾಃ - ಮೊರೆ ಹೊಕ್ಕರೂ, ತೇಷಾಂ - ಅವರಿಗೆ, ಕರ್ಮಜಾತೇನ - ಕರ್ಮ ಸಮೂಹದಿಂದ, ದೇವಾದಿ ತರ್ಪಣೈಃ - ದೇವತೆಗಳ ತೃಪ್ತಿಪಡಿಸುವದರಿಂದ, ಕಿಂ - ಪ್ರಯೋಜನವೇನು ॥೬೨॥

ಸರ್ವೇಷಾಮಪಿಯಜ್ಞಾನಾಂ ಕ್ಷಯಸ್ಸ್ವರ್ಗಃ ಫಲಾಯತೇ
ಅಕ್ಷಯಂ ಫಲಮಾಪ್ನೋತಿ ಪ್ರಪನ್ನಃ ಪರಮೇಶ್ವರಂ

ಸರ್ವೇಶಾಂ - ಸಮಸ್ತವಾಗಿರ್ದಂಥ, ಯಜ್ಞಾನಾಂ - ಯಜ್ಞಗಳಿಗೆ, ಕ್ಷಯಃ - ಕ್ಷಯಿಕ್ಷಣುವಾಗಿರ್ದಂಥ, ಸ್ವರ್ಗಂ - ಸ್ವರ್ಗವು, ಫಲಾಯತೇ - ಫಲವೆಂದು ಪ್ರಸಿದ್ಧವು, ಪರಮೇಶ್ವರಂ - ಶಿವನನ್ನು, ಪ್ರಪನ್ನಃ - ಮೊರೆ ಹೊಕ್ಕಂಥಾತನು, ಅಕ್ಷಯಂ - ಕೇಡಿಲ್ಲದೆ ಇರ್ದಂಥ, ಫಲಂ - ಫಲವನು, ಪ್ರಾಪ್ನೋತಿ - ಐಯ್ದುವನು ।।೬೩।।

ಪ್ರಪನ್ನಪಾರಿಜಾತಸ್ಯ ಶಿವಸ್ಯ ಪರಮಾತ್ಮನಃ
ಪ್ರತ್ಯಕ್ಷಂ ಕಿಂ ನ ಜಾಯೇತೆ ಪಾಪಿನಾಮಪಿ ದೇಹಿನಾಂ

ಪ್ರಪನ್ನಪಾರಿಜಾತಸ್ಯ - ಮೊರೆ ಹೊಕ್ಕಂಥವರಿಗೆ ಕಲ್ಪವೃಕ್ಷವಾಗಿರ್ದಂಥಾ, ಪರಮಾತ್ಮನಃ - ಪರಬ್ರಹ್ಮಸ್ವರೂಪನಾಗಿರ್ದಂಥಾ, ಶಿವಸ್ಯ - ಶಿವನ, ಪ್ರತ್ಯಕ್ಷಂ - ಪ್ರತ್ಯಕ್ಷವಾಗಿ ಐಯ್ದಲ್ಪಟ್ಟ, ಪಾಪಿನಾಮಪಿದೇಹಿನಾಂ - ಪಾಪಿಷ್ಟರಿಗೂ, ಕಿಂ ನ ಜಾಯೇತ - ಆವ ಫಲವಾಗದು ।।೬೪।।

ತತ್ಕುಲಂ ಹಿ ಸದಾಶುದ್ಧಂ ಸಫಲಂ ತಸ್ಯಜೀವಿತಂ
ಯಸ್ಯ ಚಿತ್ತಂ ಶಿವೇಸಾಕ್ಷಾದ್ವಿಲೀನಮಬಹಿರ್ಮುಖಂ

ಯಸ್ಯಚಿತ್ತಂ - ಆವಾವನ ಮನಸ್ಸು, ಸಾಕ್ಷಾತ್ - ಪ್ರತ್ಯಕ್ಷವಾಗಿರ್ದಂಥ, ಶಿವೇ - ಶಿವನಲ್ಲಿ, ಅಬಹಿರ್ಮುಖಂ - ಬಾಹ್ಯ ವ್ಯಾಪಾರವಿಲ್ಲದ್ದು. ವಿಲೀನಂ - ಅಡಗುವುದು. ತತ್ಕುಲಂ - ಆತನ ಕುಲವು, ಸದಾ - ಆವಾಗಲೂ, ಶುದ್ಧಂ - ಪರಿಶುದ್ಧಿಯನ್ನುಳ್ಳದ್ದು. ತಸ್ಯಜೀವಿತ - ಆತನ ಬದುಕು. ಸಫಲಂ - ಸಫಲವಹುದು ।।೬೫।।

ನಾಮ್ನೈವಜನ್ಮನಾರ್ಥೇನ ವೃಥಾಜನನ ಸಂಗಿನಾಂ
ದುರ್ಲಭಂ ಪ್ರಾಪ್ಯಮಾನುಷ್ಯಜನನಂ ಜ್ಞಾನ ಸಾಧನಂ

ಯೇನ ಜಾನಂತಿ ದೇವೇಶಂ ತೇಷಾಂ ಜನ್ಮ ನಿರರ್ಥಕಂ

ವೃಥಾ ಜನನ ಸಂಗಿನಾಂ - ವ್ಯರ್ಥವಾದ ಜನ್ಮವನುಳ್ಳಂಥವರುಗಳ, ಜನ್ಮ - ಜನ್ಮವು, ನಾಮ್ನೈವ - ಹೆಸರು ಮಾತ್ರವಲ್ಲದೆ, ನಾರ್ಥೇನ - ಪ್ರಯೋಜನವಿಲ್ಲ, ಯೇ - ಆರು ಕೆಲಂಬರು, ದುರ್ಲಭಂ - ಹಡೆಯಬಾರದ, ಜ್ಞಾನಸಾಧನಂ - ಜ್ಞಾನಕ್ಕೆ ಸಾಧನವಾಗಿರ್ದಂಥ, ಮಾನುಷ್ಯ ಜನನಂ - ಮನುಷ್ಯ ಜನ್ಮವನು, ಪ್ರಾಪ್ಯ- ಐಯ್ದಿ, ದೇವೇಶಂ - ಶಿವನನು, ನಜಾನಾತಿ - ಅರಿಯರು, ತೇಷಾಂ - ಅವರ, ಜನ್ಮ - ಜನನವು, ನಿರರ್ಥಕಂ - ವ್ಯರ್ಥವು ।।೬೬।।

೩೧. ಪ್ರಸಾದಮಾಹಾತ್ಮ್ಯಸ್ಥಲ

ಗುರುಲಿಂಗಾದಿ ಮಾಹಾತ್ಮ್ಯ ವಿಶೇಷಾನುಭವಸ್ಥಿತಿಃ
ಯಸ್ಮಾಚ್ಛಿವ ಪ್ರಸಾದಸ್ತ್ಯಾ ತದಸ್ಯ ಮಹಿಮೋಚ್ಯತೇ

ಶಿವಪ್ರಸಾದ ಮಹಿಮಾಸ್ಥಲವನು ಹೇಳುತಿರ್ದಪಂ

ಗುರುಲಿಂಗಾದಿ ಮಾಹಾತ್ಮ್ಯ ವಿಶೇಷಾನುಭವಸ್ಥಿತಿಃ - ಗುರುಲಿಂಗಾದಿ ಮಾಹಾತ್ಮ್ಯೆ ವಿಶೇಷಾನುಭವಜ್ಞಾನದಲ್ಲಿ ತತ್ಪರನಾಗಿರ್ದಂಥಾತನಲ್ಲಿ. ಯಸ್ಮಾತ್ - ಆವುದಾನೊಂದು ಕಾರಣ, ಶಿವಪ್ರಸಾದಸ್ಯಾತ್ - ಶಿವನ ಕೃಪೆಯುಂಟಹದು. ತತ್ - ಅದು ಕಾರಣ, ಅಸ್ಯಮಹಿಮಾ - ಆ ಶಿವನ ಪ್ರಸಾದ ಮಾಹಾತ್ಮೆಯು, ಉಚ್ಚತೆ - ಹೇಳಲ್ಪಡುತ್ತಂ ಇದ್ದಿತು ।।೬೭।।

ಸದಾ ಲಿಂಗೈಕನಿಷ್ಠಾನಾಂ ಗುರುಪೂಜಾನುಷಂಗಿಣಾಂ
ಪ್ರಪನ್ನಾನಾಂ ವಿಶುದ್ಧಾನಾಂ ಪ್ರಸೀದತಿ ಮಹೇಶ್ವರಃ

ಸದಾ - ಆವಾಗಲೂ, ಲಿಂಗೈಕನಿಷ್ಠಾನಾಂ - ಏಕಲಿಂಗ ನಿಷ್ಠನಾಗಿರ್ದಂಥ, ಗುರುಪೂಜಾನುಷಂಗಿಣಾಂ - ಗುರು ಪೂಜೆಯಲ್ಲಿ ತತ್ಪರನಾಗಿರ್ದಂಥ, ಪ್ರಪನ್ನಾನಾಂ - ಶರಣರಾಗಿರ್ದಂಥ, ವಿಶುದ್ಧಾನಾಂ - ಶುದ್ಧರಾಗಿರ್ದಂಥವರುಗಳಿಗೆ, ಮಹೇಶ್ವರಃ - ಶಿವನು, ಪ್ರಸೀದತಿ - ಪ್ರಸನ್ನನಹನು ।।೬೮।।

ಪ್ರಸಾದೋಪಿ ಮಹೇಶಸ್ಯ ದುರ್ಲಭಃ ಪರಿಕೀರ್ತ್ಯತೇ
ಘೋರಸಂಸಾರಸಂತಾಪ ನಿವೃತ್ತಿರ್ಯೇ ನ ಜಾಯತೇ

ಮಹೇಶಸ್ಯ - ಶಿವನ, ಪ್ರಸಾದಃ - ಕೃಪೆಯು, ದುರ್ಲಭಂ - ದುರ್ಲಭವೆಂದು ಕೀರ್ತ್ಯತೇ - ಹೇಳಲ್ಪಡುವುದು, ಏನ - ಈ ಶಿವಪ್ರಸಾದದಿಂದ, ಘೋರ ಸಂಸಾರ ಸಂತಾಪಂ - ಘೋರ, ಭಯಂಕರವಾದ, ಸಂಸಾರ - ಸಂಸಾರದ, ಸಂತಾಪಂ - ದುಃಖದ, ನಿವೃತ್ತಿಃ - ನಾಶವು, ಜಾಯತೇ - ಹುಟ್ಟುವುದು ।।೬೯।।

ಯಜ್ಞಾಸ್ತಪಾಂಸಿ ಮಂತ್ರಾಣಾಂ ಜಪಶ್ಚಿಂತಾ ಪ್ರಬೋಧನಂ
ಪ್ರಸಾದಾರ್ಥಂ ಮಹೇಶಸ್ಯ ಕೀರ್ತಿತಾನಿ ನ ಸಂಶಯಃ

ಯಜ್ಞಾಃ - ಯಜ್ಞಗಳು, ತಪಾಂಸಿ - ತಪಸ್ಸುಗಳು, ಮಂತ್ರಾಃ - ಮಂತ್ರಗಳು, ಜಪಃ - ಜಪವು, ಚಿಂತಾ - ಧ್ಯಾನವು, ಪ್ರಬೋಧನಃ - ಜ್ಞಾನವು, ಮಹೇಶಸ್ಯ - ಶಿವನ, ಪ್ರಸಾದಾರ್ಥಂ - ಪ್ರಸಾದಕ್ಕೋಸ್ಕರವೆಂದು, ಕೀರ್ತ್ಯತೆ - ಹೇಳಲ್ಪಡುವುದು, ನ ಸಂಶಯಃ - ಸಂದೇಹವಿಲ್ಲ ।।೭೦।।

ಗರ್ಭಸ್ಥೋಜಾಯಮಾನೋ ವಾ ಜಾತೋ ವಾ ಬ್ರಾಹ್ಮಣೋಽಥವಾ
ಅಂತ್ಯಜೋ ವಾಪಿ ಮುಚ್ಯೇತ ಪ್ರಸಾದೇ ಸತಿ ಶಾಂಕರೇ

ಗರ್ಭಸ್ಥ - ಗರ್ಭದಲ್ಲಿದ್ದವನು, ಜಾಯಮಾನೋವ - ಹುಟ್ಟಿದಂಥಾತನು, ಜಾತೋವಾ - ಹುಟ್ಟಿದಾತನು, ಬ್ರಾಹ್ಮಣೋವ - ಬ್ರಾಹ್ಮಣನಾದರೂ, ಅಂತ್ಯಜೋವಾ - ಚಾಂಡಾಲನಾದರೂ, ಶಾಂಕರೇ ಪ್ರಸಾದೇ - ಶಿವನ ಕೃಪೆಯಾದರೆ, ವಿಮುಚ್ಯೇತ - ಮುಕ್ತನಹನು ।।೭೧।।

ಪ್ರಸಾದಮೂಲ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ
ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿಧ್ಯತಿ

ಸರ್ವೇಶಾಂ - ಸಮಸ್ತರಿಗೂ, ಅವ್ಯಭಿಚಾರಿಣಿ - ದೃಢವಾಗಿರ್ದಂಥಾ, ಭಕ್ತಿಃ - ಶಿವಭಕ್ತಿಯು, ಪ್ರಸಾದ ಮೂಲ - ಪ್ರಸಾದವೆ ಮೂಲವಾಗಿ ಉಳ್ಳಂಥದು. ಶಿವಪ್ರಸಾದ ಹೀನಸ್ಯ - ಶಿವಪ್ರಸಾದವಿಲ್ಲದಾತಂಗೆ, ಭಕ್ತಿಶ್ಚಾಪಿ - ಶಿವಭಕ್ತಿಯು, ನ ಸಿದ್ಧತಿ - ಸಿದ್ಧವಾಗದು ॥೭೨॥

ಬ್ರಹ್ಮಾದ್ಯಾವಿಬುಧಾಸರ್ವೇಸ್ವಸ್ವಸ್ಥಾನ ನಿವಾಸಿನಃ
ನಿತ್ಯಸಿದ್ಧಾ ಭವಂತ್ಯೇವ ಪ್ರಸಾದಾತ್ಪಾರಮೇಶ್ವರಾತ್

ಬ್ರಹ್ಮಾದ್ಯಾಃ - ಬ್ರಹ್ಮ ಮೊದಲಾಗಿರ್ದಂಥ, ಸ್ವಸ್ವಸ್ಥಾನ ನಿವಾಸಿನಃ - ತಮ್ಮ ತಮ್ಮ ಸ್ಥಾನದಲ್ಲಿರುತಿರ್ದಂಥ, ವಿಬುಧಾಃ - ದೇವತೆಗಳೂ, ಪ್ರಸನ್ನಾತ್ - ಪ್ರಸನ್ನ ನಾಗಿರ್ದಂಥ, ಪರಮೇಶ್ವರಾತ್ - ಶಿವನ ದೆಸೆಯಿಂದ, ನಿತ್ಯಸಿದ್ಧಾಭವಂತಿ - ನಿತ್ಯ ಸಿದ್ಧರಾದರು ॥೭೩॥

ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದ ಕಾರಣೇ
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರಸಂಶಯಃ

ಪರಮಾನಂದ ಕಾರಣೇ-ಪರಮಾನಂದಕ್ಕೆ ಕಾರಣವಾದ, ಶಾಂಭವೇ - ಶಿವ ಸಂಬಂಧವಾದ, ಪ್ರಸಾದೇ - ಕೃಪೆಯು, ಸಿದ್ಧೇ - ಸಿದ್ಧವಾಗುತ್ತಿರಲಾಗಿ, ಸರ್ವಂ ವಿಶ್ವಂ - ಸಮಸ್ತಲೋಕ ಸಚರಾಚರವು, ಶಿವಮಯಂ - ಶಿವಮಯವಾಗಿ, ಕೇವಲಂ - ಬರಿಯ ದೃಶ್ಯತೆ -ಕಾಣಲ್ಪಡುವುದು ॥೭೪॥

ಸಂಸಾರಚಕ್ರನಿರ್ವಾಹನಿಮಿತ್ತಂ ಕರ್ಮಕೇವಲಂ
ಪ್ರಸಾದೇನವಿನಾ ಶಂಭೋರ್ನಕಸ್ಯಾಪಿ ನಿವರ್ತತೇ

ಸಂಸಾರ ಚಕ್ರ ನಿರ್ವಾಹ ನಿಮಿತ್ತಂ - ಸಂಸಾರ ಚಕ್ರದ ಪ್ರವೃತ್ತಿಗೆ ಕಾರಣವಾದ, ಕೇವಲಂ - ಬರಿಯ, ಕರ್ಮ - ಕರ್ಮವು, ಶಂಭೋಃ - ಶಿವನ, ಪ್ರಸಾದೇನ ವಿನಾ - ಪ್ರಸಾದವಿಲ್ಲದೆ, ಕಸ್ಯಾಪಿ - ಒಬ್ಬನಿಗೂ, ನಿವರ್ತತೇ - ನಿವೃತ್ತವಾಗದು ॥೭೫॥

ಬಹುನಾತ್ರ ಕಿಮುಕ್ತೇನ ನಾಸ್ತಿ ನಾಸ್ತಿ ಜಗತ್ರಯೇ
ಸಮಾನಮಧಿಕಂ ಚಾಪಿ ಪ್ರಸಾದಸ್ಯ ಮಹೇಶಿತುಃ

ಬಹುನೋಕ್ತೇನ - ಅನೇಕ ಮಾತಿನಿಂದ, ಕಿಂ - ಪ್ರಯೋಜನವೇನು, ಜಗತ್ರಯೆ - ಮೂರು ಲೋಕದಲ್ಲಿಯು, ಮಹೇಶಿತುಃ - ಶಿವನ, ಪ್ರಸಾದಸ್ಯ - ಕೃಪೆಗೆ, ಸಮಾನಂ - ಸರಿಯಾಗಿರ್ದಂಥದ್ದು, ಅಧಿಕಂ - ವೆಗ್ಗಳವಾಗಿರ್ದಂಥದ್ದು, ನಾಸ್ತಿ ನಾಸ್ತಿ - ಸರ್ವಥಾ ಇಲ್ಲ ॥೭೬॥

ಶಿವಪ್ರಸಾದೇ ಸತಿಯೋಗಭಾಜ
ಸರ್ವಂ ಶಿವೈಕಾತ್ಮತಯಾ ವಿಭಾತಿ
ಸ್ವಕರ್ಮಮುಕ್ತಶ್ಶಿವಭಾವಿತಾತ್ಮಾ
ಸಪ್ರಾಣಲಿಂಗೀತಿ ನಿಗದ್ಯತೇಽಸೌ

ಯೋಗಭಾಜ - ಯೋಗಿಯಾದವನಿಗೆ, ಶಿವಪ್ರಸಾದೇ ಸತಿ - ಶಿವನ ಕೃಪೆಯುಂಟಾದರೆ, ಸರ್ವಂ - ಸಮಸ್ತವು, ಶಿವಾತ್ಮಕಥಯಾ - ಶಿವ ಸ್ವರೂಪವಾಗಿ, ವಿಭಾತಿ - ಒಪ್ಪುವುದು. ಸ್ವಕರ್ಮಯುಕ್ತಂ - ತಮ್ಮ ಕರ್ಮದಿಂದ ಕೂಡಿದಂಥಾ, ಶಿವಭಾವಿತಾತ್ಮ - ಶಿವನ ಭಾವನೆಯೊಡನೆ ಕೂಡಲ್ಪಟ್ಟ ಪ್ರಸಾದಿಯು, ಪ್ರಾಣಲಿಂಗೀತಿ - ಪ್ರಾಣಲಿಂಗಿಯೆಂದು, ನಿಗದ್ಯತೆ - ಹೇಳಲ್ಪಡುವನು ॥೭೭॥

ಇತಿ ವೀರಶೈವ ಧರ್ಮನಿರ್ಣಯೌ ಸಿದ್ಧಾಂತಶಿಖಾಮಣೌ ಪ್ರಸಾದಿನಶ್ಚ ಸಪ್ತವಿಧಸ್ಥಲ ಪ್ರಸಂಗೋನಾಮ ಏಕಾದಶಪರಿಚ್ಛೇದಃ

ದ್ವಾದಶಪರಿಚ್ಛೇದ

ಪ್ರಾಣಲಿಂಗಿಸ್ಥಲ

ಅಗಸ್ತ್ಯ ಉವಾಚ - ಅಗಸ್ತ ಮುನೀಶ್ವರನು ಪ್ರಶ್ನೆಯನು ಮಾಡುತಿರ್ದಪಂ

ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀತಿ ನಿಬೋಧಿತಃ
ಏಷ ಏಕಏವ ಕಥಂ ಚ ಪ್ರಾಣಲಿಂಗೀತಿ ಕಥ್ಯತೇ

ಭಕ್ತಃ-ಭಕ್ತನೂ, ಮಾಹೇಶ್ವರಶ್ಚೇತಿ-ಮಾಹೇಶ್ವರನೆಂದು, ಪ್ರಸಾದೀತಿ-ಪ್ರಸಾದಿ ಎಂದು, ನಿಬೋಧಿತಃ-ಹೇಳಲ್ಪಟ್ಟನು ಏಷಏಕಏವ-ಈತನೊಬ್ಬನೆ, ಕಥಂ ಚ-ಆ ಪ್ರಕಾರದಿಂದ, ಪ್ರಾಣಲಿಂಗೀತಿ-ಪ್ರಾಣಲಿಂಗಿಯೆಂದು, ಕಥ್ಯತೇ-ಹೇಳಲ್ಪಡುವನು ॥೧॥

ರೇಣುಕ ಉವಾಚ- ರೇಣುಕನು ಉತ್ತರವ ಹೇಳುತ್ತಂ ಇದ್ದಾನು.

ಭಕ್ತೋ ಮಾಹೇಶ್ವರಶ್ಚೈಪ್ರಸಾ ಪ್ರಸಾದೀ ಪರಿಕೀರ್ತಿತಃ
ಕರ್ಮಪ್ರಾಧಾನ್ಯ ಯೋಗೇನ ಜ್ಞಾನಯೋಗೋಸ್ಯ ಕಥ್ಯತೆ

ಭಕ್ತಃ-ಭಕ್ತನು, ಮಾಹೇಶ್ವರಃ-ಮಾಹೇಶ್ವರನು, ಪ್ರಸಾದೀತಿ-ಪ್ರಸಾದಿ ಎಂದು, ಕರ್ಮಪ್ರಧಾನ ಯೋಗೇನ-ಕ್ರಿಯಾವಿಶೇಷದಿಂದ, ಪರಿಕೀರ್ತಿತಃ-ಹೇಳಲ್ಪಟ್ಟನು, ಜ್ಞಾನಯೋಗೇನ-ಜ್ಞಾನವಿಶೇಷದಿಂದ, ಪ್ರಾಣಲಿಂಗಿ ಎಂದು, ಕಥ್ಯತೆ-ಹೇಳಲ್ಪಡುತ್ತಿದ್ದನು ॥೨॥

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ
ತದ್ರೂಪ ಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ

ಚಿದಾತ್ಮಕಂ ಬ್ರಹ್ಮ-ಜ್ಞಾನಾತ್ಮಕವಾದ ಬ್ರಹ್ಮವು, ಲಿಂಗಂ-ಲಿಂಗವೆನಿಸುವುದು, ತಚ್ಛಕ್ತಿಃ-ಆ ಲಿಂಗಸ್ವರೂಪವಾದ ಶಿವನ ಶಕ್ತಿಯು, ಪ್ರಾಣರೂಪಿಣಿ-ಪ್ರಾಣ ಸ್ವರೂಪವೆನಿಸುವುದು, ತದ್ರೂಪ ಲಿಂಗವಿಜ್ಞಾನೀ-ಆ ಶಿವಶಕ್ತ್ಯಾತ್ಮಕವಾದ ಲಿಂಗವನು ಬಲ್ಲವನು, ಪ್ರಾಣಲಿಂಗೀತಿ-ಪ್ರಾಣಲಿಂಗಿ ಎಂದು, ಕಥ್ಯತೆ-ಹೇಳಲ್ಪಡುವನು ॥೩॥

ಪ್ರಾಣಲಿಂಗಿ ಸ್ಥಲಂ ಚಾದೌತ್ಪಂಚಸ್ಥಲ ಸಮನ್ವಿತಂ
ಪ್ರಾಣಲಿಂಗಿ ಸ್ಥಲಂ ಚಾದೌ ಪ್ರಾಣಲಿಂಗಾರ್ಚನಂ ತತಃ

ಶಿವಯೋಗ ಸಮಾಧಿಚ್ಛ ತತೋ ಲಿಂಗನಿಜಸ್ಥಲಂ
ಅಂಗ ಲಿಂಗಿಸ್ಥಲಂ ಚಾಥ ಕ್ರಮೋದೇಷಾಂ ಭದೋಚ್ಯತೇ

ಪ್ರಾಣಲಿಂಗಿಸ್ಥಲದ ಅವಾಂತರ ಸ್ಥಲದ ಭೇದವನುದ್ಧೇಶಿಸುತಿರ್ದಪಂ ಪ್ರಾಣ ಲಿಂಲಸ್ಥಲಂ-ಪ್ರಾಣಲಿಂಗ ಸ್ಥಲವು, ಪಂಚಸ್ಥಲ ಸಮನ್ವಿತಂ-ಐದು ಸ್ಥಲದೊಡನೆ ಕೂಡಿದಂಥಾದು, ಆದೌ-ಮೊದಲು, ಪ್ರಾಣಲಿಂಗಿಸ್ಥಲಂ-ಪ್ರಾಣಲಿಂಗಸ್ಥಲವು,

ತತಃ-ಅನಂತರದಲ್ಲಿ, ಪ್ರಾಣಲಿಂಗಾರ್ಚನಂ-ಪ್ರಾಣಲಿಂಗಾರ್ಚನೆಸ್ಥಲವು, ತತಃ-ಅನಂತರದಲ್ಲಿ, ಶಿವಯೋಗ ಸಮಾಧಿಃ-ಶಿವಯೋಗ ಸಮಾಧಿಸ್ಥಲವು, ತತಃ-ಅನಂತರದಲ್ಲಿ, ಲಿಂಗನಿಜಸ್ಥಲಂ-ಲಿಂಗನಿಜಸ್ಥಲವು, ಅಥ-ಅನಂತರದಲ್ಲಿ, ಅಂಗಲಿಂಗಸ್ಥಲಂ-ಅಂಗಲಿಂಗ ಸ್ಥಲವು, ಏಷಾಂ-ಇವಕ್ಕೆ, ಕ್ರಮಾತ್-ತರುವಾಯಿಂದ, ಭೇದಾಭೇದ ಲಕ್ಷಣವು, ಉಚ್ಯತೇ-ಹೇಳಲ್ಪಡುತ್ತಿದ್ದಿತು ॥೫॥

ಸತ್ತಾ ಪ್ರಾಣಮಯೀಶಕ್ತಿಸ್ಸದ್ರೂಪಂ ಪ್ರಾಣಲಿಂಗಕಂ
ತಸ್ಯಾಮಲಸ್ಯ ವಿಜ್ಞಾನಾತ್ಪ್ರಾಣಲಿಂಗೀತಿ ಕಥ್ಯತೇ

ಪ್ರಾಣಮಯೀ-ಪ್ರಾಣ ಸ್ವರೂಪವಾದ, ಶಕ್ತಿಃ-ಶಕ್ತಿಯು, ಸತ್ತಾ-ಪ್ರಸಿದ್ಧವು, ಸದ್ರೂಪಂ-ನಿತ್ಯ ಸ್ವರೂಪವಾಗಿರ್ದಂಥ, ಶಿವಸ್ವರೂಪವು,ಪ್ರಾಣಲಿಂಗಕಂ-ಪ್ರಾಣ ಲಿಂಗವೆನಿಸುವುದು, ಅಮಲಸ್ಯ-ನಿರ್ಮಲವಾಗಿರ್ದಂಥ, ತಸ್ಯ-ಅಂಥಾ ಲಿಂಗದ, ವಿಜ್ಞಾನಾತ್-ಅರಿವಿನ ದೆಸೆಯಿಂದ, ಪ್ರಾಣಲಿಂಗೀತಿ-ಪ್ರಾಣಲಿಂಗಿಯೆಂದು, ಕಥ್ಯತೇ-ಹೇಳಲ್ಪಡುತ್ತಂ ಇದ್ದನು ॥೬॥

ಅಂತಸ್ಥಿತಂ ಪರಂಲಿಂಗಂ ಜ್ಯೋತಿರೂಪಂ ಶಿವಾತ್ಮಕಂ
ವಿಹಾಯ ಬಾಹ್ಯ ಲಿಂಗಸ್ಥಾಃ ವಿಮೂಢಾ ಇತಿ ಕೀರ್ತಿತಃ

ಅಂತಸ್ಥಿತಂ-ಹೃದಯ ಮಧ್ಯದಲ್ಲಿರ್ದ ಜ್ಯೋತಿರೂಪಂ-ತೇಜೋ ರೂಪ ವಾಗಿರ್ದಂ, ಪರಂ-ಉತ್ಕೃಷ್ಟವಾದ, ಶಿವಾತ್ಮಕಂ-ಶಿವಸ್ವರೂಪವಾದ, ಲಿಂಗಂ-ಪ್ರಾಣ ಲಿಂಗವನು, ವಿಹಾಯ-ಬಿಟ್ಟು, ಬಾಹ್ಯಲಿಂಗಸ್ಥಾಃ-ಬಾಹ್ಯಲಿಂಗದಲ್ಲಿ ತತ್ಪರರಾದವರುಗಳು, ವಿಮೂಢಾ ಇತಿ-ಮೂಢರೆಂದು ಕೀರ್ತಿತಾಃ-ಹೇಳಲ್ಪಟ್ಟರು ॥೭॥

ಜ್ಞಾನಿನಾಂ ಯೋಗಯುಕ್ತಾನಾಮಂತಃ ಸ್ಫುರತಿ ದೀಪವತ್
ಚಿದಾಕಾರಂ ಪರಬ್ರಹ್ಮ ಲಿಂಗಮಜ್ಞೈರ್ನಭಾವ್ಯತೇ

ಜ್ಞಾನಿನಾಂ-ಜ್ಞಾನಿಗಳಾಗಿರ್ದಂಥ, ಯೋಗಯುಕ್ತಾನಾಂ-ಯೋಗಿಗಳಿಗೆ, ಯತ್-ಆವುದಾನೊಂದು, ಅಂತಃ-ಹೃದಯದಲ್ಲಿ, ದೀಪವತ್-ದೀಪದ ಮರ್ಯಾದೆಯಲ್ಲಿ, ಸ್ಫುರತಿ-ಪ್ರಕಾಶಿಸುತ್ತಂ ಇದ್ದಂಥಾ, ಚಿದಾಕಾರಂ-ಜ್ಞಾನಾತ್ಮಕವಾದ, ಪರಬ್ರಹ್ಮ-ಪರಬ್ರಹ್ಮ ವೆನಿಸುವ, ಲಿಂಗಂ-ಲಿಂಗವು, ಅಜ್ಞಾನ-ಮೂಢರುಗಳಿಂದ, ನ ಭಾವ್ಯತೇ-ಅರಿಯಲ್ಪಡು ತ್ತಿರದು ॥೮॥

೩.೨. ಪ್ರಾಣಲಿಂಗಿಸ್ಥಲ

ಪ್ರಾಣಾಪಾನ ಸಮಾಘಾತಾತ್ ಕಂದಮಧ್ಯಾದ್ಯದುತ್ಥಿತಂ
ಪ್ರಾಣಲಿಂಗಂ ತದಾಖ್ಯಾತಂ ಪ್ರಾಣಾಪಾನ ನಿರೋಧಿಭಿಃ

ಪ್ರಾಣಾಪಾನ ಸಮಾಘಾತಾತ್-ಪ್ರಾಣ ಅಪಾನ ವಾಯುಗಳ ಕೂಟದಿಂದ, ಕಂದ-ನಾಡಿ ಕಂದ ಮಧ್ಯದ ದೆಸೆಯಿಂದ, ಯತ್-ಆವುದಾನೊಂದು, ಉತ್ಥಿತಂ-ಹುಟ್ಟಿದಂಥಾದುಂಟು, ತತ್-ಅದು, ಪ್ರಾಣಲಿಂಗಂ-ಪ್ರಾಣಲಿಂಗವೆಂದು, ಪ್ರಾಣಾಪಾನ

ನಿರೋಧಿಭಿಃ-ಪ್ರಾಣಾಪಾನಗಳ ಗತಿಯನು ತರುಬಿದವರುಗಳಿಂದ, ಆಖ್ಯಾತಂ-ಹೇಳಲ್ಪಡುವುದು ॥೯॥

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇ ತುಹಿನಂ ಯಥಾ
ತತ್ಪ್ರಾಣಲಿಂಗಮುದ್ದಿಷ್ಟಂ ತದೀಶ್ವರ ಪರಾಕೃತಿಃ

ಭಾಸ್ಕರೇ-ಸೂರ್ಯನಲ್ಲಿ, ತುಹಿನಂ-ಹಿಮವು, ಯಥಾ-ಹೇಂಗೆ ಅಡಗುವುದು, ತಥಾ-ಹಾಂಗೆ, ಯತ್ರ-ಆವುದಾನೊಂದು ಲಿಂಗದಲ್ಲಿ, ಪ್ರಾಣಃ-ಜೀವನು, ಪ್ರಾಣಲಿಂಗಂ-ಪ್ರಾಣಲಿಂಗವೆಂದು, ಉದ್ದಿಷ್ಟಂ-ಹೇಳಲ್ಪಟ್ಟಿತು, ತತ್-ಆ ಲಿಂಗವು, ಈಶ್ವರ ಪರಾಕೃತಿಃ-ಶಿವನ ಉತ್ತಮವಾದ ಸ್ವರೂಪವೆನಿಸುವುದು ॥೧೦॥

ಸವಿಲ್ಲಿಂಗ ಪರಾಮರ್ಶೀ ಬಾಹ್ಯವಸ್ತು ಪರಾಙ್ಮುಖಃ
ಯಸ್ಸದಾ ವರ್ತತೇ ಯೋಗೀ ಪ್ರಾಣಲಿಂಗೀ ಸಮುಚ್ಯತೇ

ಸವಿಲ್ಲಿಂಗ-ಜ್ಞಾನ ಲಿಂಗವನು, ಪರಾಮರ್ಶೀ-ಅನುಸಂಧಾನಿಸಿ, ಬಾಹ್ಯವಸ್ತು ಪರಾಙ್ಮುಖಂ-ಬಾಹ್ಯವಸ್ತುಗಳಲ್ಲಿ ತಿರುಗಲ್ಪಟ್ಟ ಮುಖವನ್ನುಳ್ಳವರಾಗಿ, ಯಃ-ಆವಾತನು, ಸದಾ-ಆವಾಗಲೂ, ವರ್ತತೇ-ವರ್ತಿಸುತ್ತಂ ಇಹನು, ಸಃ-ಆತನು, ಪ್ರಾಣಲಿಂಗೀ-ಪ್ರಾಣ ಲಿಂಗೀ ಎಂದು ಉಚ್ಯತೇ ಹೇಳಲ್ಪಡುವನು ॥೧೧॥

ಮಾಯಾವಿಕಲ್ಪಜಂ ವಿಶ್ವಂ ಹೇಯಂ ಸಂಚಿಂತ್ಯ ನಿತ್ಯಶಃ
ಚಿದಾನಂದಮಯೇಲಿಂಗೇ ವಿಲೀನಃ ಪ್ರಾಣಲಿಂಗವಾನ್

ಮಾಯಾವಿಕಲ್ಪಜಂ-ಮಾಯಾವಿಲಾಸದಿಂದ ಹುಟ್ಟಿದಂಥ, ಹೇಯಂ-ಬಿಡಲು ಯೋಗ್ಯವಾಗಿರ್ದಂಥ, ವಿಶ್ವಃ-ಲೋಕವನು, ನಿತ್ಯಶಃ-ಆವಾಗಲೂ, ವಿಚಿಂತ್ಯಾ-ವಿಚಾರಿಸಿ, ಚಿದಾನಂದಮಯೇ-ಜ್ಞಾನಾನಂದ ಸ್ವರೂಪವಾಗಿರ್ದಂಥ, ಲಿಂಗೇ-ಲಿಂಗದಲ್ಲಿ, ವಿಲೀನಃ-ದೃಢವಾಗಿ ಇರಿಸಲ್ಪಟ್ಟಂಥ ಚಿತ್ತವನುಳ್ಳಂಥಾತನು, ಪ್ರಾಣಲಿಂಗವಾನ್-ಪ್ರಾಣ ಲಿಂಗಿ ಎನಿಸುವನು ॥೧೨॥

೩೩. ಪ್ರಾಣಲಿಂಗಾರ್ಚನ ಸ್ಥಲ

ಅಂತರ್ಗತಂ ಚಿದಾಕಾರಂ ಲಿಂಗಂ ಶಿವಮಯಂ ಪರಂ
ಪೂಜ್ಯತೇ ಭಾವಪುಷ್ಪಾದ್ಯೈಃ ಪ್ರಾಣಲಿಂಗಾರ್ಚನಂ ಹಿ ತತ್

ಅನಂತರದಲ್ಲಿ ಪ್ರಾಣಲಿಂಗಾರ್ಚನೆಯ ಸ್ಥಲವನು ಹೇಳುತಿರ್ದಪಂ

ಅಂತರ್ಗತಂ-ಹೃದಯ ಮಧ್ಯದಲ್ಲಿರ್ದಂಥ, ಚಿದಾಕಾರಂ-ಜ್ಞಾನಾತ್ಮಕವಾದ, ಶಿವಮಯಂ-ಶಿವಸ್ವರೂಪವಾಗಿರ್ದಂಥ, ಪರಂ-ಪರಬ್ರಹ್ಮಸ್ವರೂಪವಾಗಿರ್ದಂಥ ಲಿಂಗವು, ಭಾವಪುಷ್ಪಾದ್ಯೈಃ-ಮನೋಭಾವನಾತ್ಮಕವಾದ ಪುಷ್ಪಾದಿಗಳಿಂದ, ಪೂಜ್ಯತೇ-ಪೂಜಿಸಲ್ಪಡುವುದೆಂದು ಆವುದಾನೊಂದುಂಟು, ತತ್-ಅದು, ಪ್ರಾಣಲಿಂಗಾರ್ಚನಂ-ಪ್ರಾಣಲಿಂಗ ಪೂಜೆ ಎನಿಸುವುದು ॥೧೩॥

ಅಂತಃಪವನ ಸಂಸ್ಪೃಷ್ಟೇ ಸುಸೂಕ್ಷ್ಮಾಂಬರ ಶೋಭಿತೇ
ಮೂರ್ಧನ್ಯಚಂದ್ರವಿಗಲಸತ್ಸುಧಾ ಲೇಖಾತಿಶೀತಲೇ

ಬದ್ಧೇಂದ್ರಿಯ ನವದ್ವಾರೇ ಬೋಧದೀಪೇ ಹೃದಾಲಯೇ
ಪದ್ಮಪೀಠೇ ಸಮಾಸೀನಂ ಚಿಲ್ಲಿಂಗಂ ಶಿವ ವಿಗ್ರಹಂ
ಭಾವಯಿತ್ವಾ ಸದಾ ಕಾಲಂ ಪೂಜಯೇದ್ಭಾವ ವಸ್ತುಭಿಃ

ಪ್ರಾಣಲಿಂಗಾರ್ಚನೆಗೆ ಆಲಯವನು ಮನಸ್ಸಿಗೆ ಆಲಯ ಸಾದೃಶ್ಯವನು ಹೇಳುತಿರ್ದಪಂ

ಅಂತಃಪವನ ಸಂಸ್ಪೃಷ್ಟೇ ಸುಸೂಕ್ಷ್ಮಾಂಬರ ಶೋಭಿತೇ-ಅಂತರ್ಮುಖವಾಗಿರ್ದಂಥ ಪ್ರಾಣವಾಯುವೆಂಬ ಸ್ವಸ್ಥವಾದ ಸಣ್ಣದಾದ ವಸ್ತ್ರದಿಂದ ಶೋಭಿಸುತಿರ್ದಂಥಾ, ಮೂರ್ಧನ್ಯಚಂದ್ರ ವಿಲಸತ್ ಸುಧಾ ಲೇಖಾತಿ ಶೀತಲೆ-ಶಿರಸ್ಸಿನಲ್ಲಿ ಇರುತ್ತಂ ಇರ್ದಂಥ ಚಂದ್ರನ ದೆಸೆಯಿಂದ, ಸುರಿವುತ್ತಂ ಇರ್ದ ಅಮೃತದ ತುಂತುರ್ವನಿಯಿಂದ ಅತ್ಯಂತ ಶೈತ್ಯವಾದ, ಬದ್ಧೇಂದ್ರಿಯ ನವದ್ವಾರೇ-ಬಂಧಿಸಲ್ಪಟ್ಟ ಇಂದ್ರಿಯಂಗಳ ಒಂಬತ್ತು ಬಾಗಿಲನುಳ್ಳಂಥ, ಬೋಧ ದೀಪೇ-ಜ್ಞಾನವೆಂಬ ದೀಪವನುಳ್ಳಂಥ, ಹೃದಾಲಯೇ-ಹೃದಯವೆಂಬ ಆಲಯದಲ್ಲಿ, ಪದ್ಮಪೀಠಸಮಾಸೀನಂ-ಪದ್ಮವೆಂಬ ಪೀಠದಲ್ಲಿ ಮೂರ್ತಿಗೊಂಡಿರ್ದಂಥ, ಶಿವವಿಗ್ರಹಂ-ಶಿವನ ಸ್ವರೂಪವಾಗಿರ್ದಂಥ, ಚಿಲ್ಲಿಂಗಂ-ಜ್ಞಾನಾತ್ಮಕವಾಗಿರ್ದಂಥ ಲಿಂಗವನು, ಭಾವಯಿತ್ವಾ-ಧ್ಯಾನವ ಮಾಡಿ, ಸದಾಕಾಲಂ-ಆವಾಗಲೂ, ಭಾವವಸ್ತುಭಿಃ-ಮನೋಭಾವನೆ ಎಂಬ ಸಾಧನಂಗಳಿಂದ, ಪೂಜಯೇತ್-ಪೂಜಿಸಬೇಕು ॥೧೬॥

ಕ್ಷಮಾಭಿಷೇಕಸಲಿಲಂ ವಿವೇಕೋ ವಸ್ತ್ರಮುಚ್ಯತೇ
ಸತ್ಯಮಾಭರಣಂ ಪ್ರೋಕ್ತಂ ವೈರಾಗ್ಯಂ ಪುಷ್ಪಮಾಲಿಕಾ

ಗಂಧಸ್ಸಮಾಧಿ ಸಂಪತ್ತಿ ರಕ್ಷತಾಂ ನಿರಹಂಕೃತಿಃ
ಶ್ರದ್ಧಾ ಧೂಪೋ ಮಹಾಜ್ಞಾನಂ ಜಗತ್ ಭಾಸಿಪ್ರದೀಪಿಕಾ

ಭ್ರಾಂತಿಮೂಲ ಪ್ರಪಂಚಸ್ಯ ನಿವೇದ್ಯ ತನ್ನಿವೇದಿತಂ
ಮೌನಂ ಘಂಟಾಪರಿಸ್ಪಂದಸ್ತಾಂಬೂಲಂ ವಿಷಯಾರ್ಪಣಂ

ವಿಷಯಭ್ರಾಂತಿರಾಹಿತ್ಯಂ ತತ್ಪ್ರದಕ್ಷಿಣ ಕಲ್ಪನಾ
ಬುದ್ಧೇಸ್ತದಾತ್ಮಿಕಾ ವೃತ್ತಿರ್ನಮಸ್ಕಾರ ಕ್ರಿಯಾ ಮತಾ

ಏವಂ ವಿಧೈರ್ಭಾವಸಿದ್ಧೈರುಪಚಾರೈರದೂಷಿತೈಃ
ಪ್ರತ್ಯಙ್ಮುಖಮನಾ ಭೂತ್ವಾ ಪೂಜಯೇಲ್ಲಿಂಗಮಾಂತರಂ

ಭಾವಸ್ವರೂಪವಾದ ಉಪಚಾರಂಗಳನು ಹೇಳುತಿರ್ದಪಂ

ಕ್ಷಮಂ-ಸೈರಣೆಯು, ಅಭಿಷೇಕ ಸಲಿಲಂ-ಅಭಿಷೇಕೋದಕ, ವಿವೇಕಃ-ವಿವೇಕವು, ವಸ್ತ್ರಂ-ವಸ್ತ್ರವೆಂದು, ಉಚ್ಯತೇ-ಹೇಳಲ್ಪಡುವುದು, ಸತ್ಯಂ-ಸತ್ಯವಚನವು, ಆಭರಣಂ

ಪ್ರೋಕ್ತಂ-ಆಭರಣವೆನಿಸುವುದು, ವೈರಾಗ್ಯಂ-ವಿರಕ್ತಿಯು, ಪುಷ್ಪಮಾಲಿಕಾ-ಪುಷ್ಪಮಾಲೆಯು, ಸಮಾಧಿಸಂಪತ್ತಿಃ-ಧ್ಯಾನವು, ಗಂಧಃ-ಗಂಧವು, ನಿರಹಂಕೃತಿಃ-ನಿರಹಂಕಾರವು, ಅಕ್ಷತಾ-ಅಕ್ಷತೆಯು, ಶ್ರದ್ಧಾ-ವಿಶ್ವಾಸವು, ಧೂಪಂ-ಧೂಪವು, ಜಗತ್‌ಭಾಸಿ-ಜಗತ್ತನ್ನು ಪ್ರಕಾಶಿಸುವಂಥ, ಮಹಾಜ್ಞಾನಂ-ಉತ್ತಮವಾದ ಜ್ಞಾನವು, ಪ್ರದೀಪಿಕಾ-ದೀಪಾರತಿಯು, ಭ್ರಾಂತಿಮೂಲಃ-ಭ್ರಾಂತಿಯಾಕಾರವಾಗುಳ್ಳಂಥ, ಪ್ರಪಂಚಃ-ಪ್ರಪಂಚವು, ನಿವೇದಿತಂ-ಸಮರ್ಪಿಸಿದಂಥಾ, ನೈವೇದ್ಯಂ-ನೈವೇದ್ಯವು, ಮೌನಂ-ಪ್ರಾಕೃತ ಸಂಭಾಷಣೆ ಇಲ್ಲದಿಹುದೆ, ಘಂಟಾಪರಿಸ್ಪಂದಃ-ಘಂಟಾನಾದವು, ವಿಷಯಾರ್ಪಣಂ-ಶಬ್ದಾದಿ ವಿಷಯ ಸಮರ್ಪಣವು, ತಾಂಬೂಲಂ-ತಾಂಬೂಲವು, ವಿಷಯಭ್ರಾಂತಿರಾಹಿತ್ಯಂ-ವಿಷಯಭ್ರಾಂತಿ ಇಲ್ಲದಿಹ ತನವು, ತತ್ವದರ್ಕ್ಷಿಣ ಕಲ್ಪನಾಂ-ಶಿವಪ್ರದಕ್ಷಿಣವು, ಬುದ್ಧೇಃ-ಮನಸ್ಸಿಗೆ, ತದಾತ್ಮೇಕ ವೃತ್ತಿಃ-ಶಿವಾಕಾರವಾಗಿರ್ದಂಥ ವೃತ್ತಿಯು, ನಮಸ್ಕಾರಃ-ನಮಸ್ಕಾರವು, ಏವಂ ವಿಧೈಃ-ಈ ಪ್ರಕಾರವಾದ, ಭಾವಸಿದ್ಧೈಃ-ಮನಸ್ಸಿನಲ್ಲಿಯೆ ಸಿದ್ಧವಾಗಿರ್ದಂಥ, ಅದೂಷಿತೈಃ-ದೃಷ್ಟವಲ್ಲದೆ ಇರ್ದ, ಉಪಚಾರೈಃ-ಉಪಚಾರಗಳಿಂದ, ಪ್ರತ್ಯಙ್ಮುಖಮನಾಭೂತ್ವಾ-ಅಂತರ್ಮುಖವಾದ ಮನಸ್ಸನುಳ್ಳವನಾಗಿ, ಅಂತರಲಿಂಗಂ-ಪ್ರಾಣಲಿಂಗವನು, ಪೂಜಯೇತ್-ಪೂಜಿಸಬೇಕು ॥೨೧॥

೩೪. ಶಿವಯೋಗಸಮಾಧಿಸ್ಥಲ

ಅಂತಃಕ್ರಿಯಾರತಸ್ಯಾಸ್ಯ ಪ್ರಾಣಲಿಂಗಾರ್ಚನಕ್ರಮೈಃ
ಶಿವಾತ್ಮಧ್ಯಾನ ಸಂಪತ್ತಿಸ್ಸಮಾಧಿರಿತಿ ಕಥ್ಯತೆ

ಶಿವಯೋಗ ಸಮಾಧಿಸ್ಥಲವನು ನಿರೂಪಿಸುತಿರ್ದಪಂ

ಪ್ರಾಣಲಿಂಗಾರ್ಚನ ಕ್ರಮೈಃ-ಪ್ರಾಣಲಿಂಗಾರ್ಚನ ಪೂಜಾಕ್ರಮದಿಂದ, ಅಂತಃಕ್ರಿಯಾರತಸ್ಯಾ-ಮಾನಸ ಪೂಜೆಯಲ್ಲಿ ತತ್ಪರನಾಗಿರ್ದಂಥ, ಅಸ್ಯ-ಈ ಶಿವಭಕ್ತನಿಗೆ, ಶಿವಾತ್ಮಧ್ಯಾನ ಸಂಪತ್ತಿಃ-ಶಿವಾತ್ಮಧ್ಯಾನವು, ಸಮಾಧಿರಿತಿ-ಸಮಾಧಿಯೆಂದು, ಕಥ್ಯತೆ-ಹೇಳಲ್ಪಡುವುದು ॥೨೨॥

ಪರಬ್ರಹ್ಮ ಮಹಾಲಿಂಗಂ ಪ್ರಾಣೋಜೀವಃ ಪ್ರಕೀರ್ತಿತಃ
ತದೇಕಭಾವ ಮನನಾತ್ಸಮಾಧಿಸ್ಥಃ ಪ್ರಕೀರ್ತಿತಃ

ಪರಬ್ರಹ್ಮಮತಂ-ಪರಬ್ರಹ್ಮವೆಂದು ಸಮ್ಮತವಾಗಿರ್ದಂಥ, ಲಿಂಗಂ-ಲಿಂಗವು, ಪ್ರಾಣಃ-ಪ್ರಾಣನೆಂಬ ಉಪಾಧಿಯಿಂದ, ಜೀವಃ ಪ್ರಕೀರ್ತಿತಃ-ಜೀವನೆಂದು ಹೇಳಲ್ಪಡುವವನು, ತದೇಕಭಾವ ಮನನಾತ್-ಆ ಜೀವ ಬ್ರಹ್ಮರೇಕವೆಂಬ ಭಾವನೆ ಯನುಳ್ಳ ಮನಸ್ಸಿನ ದೆಸೆಯಿಂದ, ಸಮಾಧಿಸ್ಥಃ-ಶಿವಯೋಗ ಸಮಾಧಿಸ್ಥನೆಂದು, ಪ್ರಕೀರ್ತಿತಃ-ಹೇಳಲ್ಪಡುವವನು ॥೨೩॥

ಬಹಿರ್ವಾಸನಯಾ ವಿಶ್ವಂ ವಿಕಲ್ಪಾರ್ಥಂ ಪ್ರಕಾಶತೇ
ಅಂತರ್ವಾಸಿತಚಿತ್ತನಾಮಾತ್ಮಾನಂದಃ ಪ್ರಕಾಶ್ಯತೇ

ಬಹಿರ್ವಾಸನಯಾ- ಆಜೀವನಿಗೆ ವಿಷಯವಾಸನೆಯಿಂದ, ವಿಕಲ್ಪಾರ್ಥಂ-ನಾನಾ ಪ್ರಕಾರವಾಗಿರ್ದಂಥ, ವಿಶ್ವಂ-ಜಗತ್ತು, ಪ್ರಕಾಶತೇ-ತೋರುತ್ತಂ ಇಹುದು, ಅಂತರ್ವಾಸಿತ ಚಿತ್ತಾನಾಂ-ಅಂತರ್ಮುಖ ವಾಸನೆಯಾದ ಚಿತ್ತವನ್ನುಳ್ಳಂಥವರುಗಳಿಗೆ, ಆತ್ಮಾನಂದಃ-ಸ್ವಯಾನಂದವು, ಪ್ರಕಾಶತೇ-ತೋರುತ್ತಂ ಇಹುದು ॥೨೪॥

ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ
ಜ್ಞಾನಾಗ್ನಿನಾ ದಹೇತ್ಸರ್ವಂ ಪಾಶಜಾಲಂ ಜಗನ್ಮಯಂ

ಸುಧೀಃ-ಜ್ಞಾನಿಯು, ಪ್ರಮೋದಮಥನಾತ್-ಸಂತೋಷವೆಂಬ ಮಥನದಿಂದ ಆತ್ಮಾರಣಿ ಸಮುತ್ಥೇನ-ಆತ್ಮನೆಂಬ ಕಾಷ್ಠದಲ್ಲಿ ಹುಟ್ಟಿದಂಥಾ, ಜ್ಞಾನಾಗ್ನಿನಾ-ಜ್ಞಾನವೆಂಬ ಅಗ್ನಿಯಿಂದ, ಜಗನ್ಮಯಂ-ಜಗದ್ರೂಪವಾಗಿರ್ದಂಥ, ಪಾಶಜಾಲಂ-ಸಂಸಾರ ಪಾಶ ಸಮೂಹವನು, ದಹೇತ್-ಸುಡುವನು ॥೨೫॥

ಸಂಸಾರವಿಷವೃಕ್ಷಸ್ಯ ಪಂಚಕ್ಲೇಶಪಲಾಶಿನಃ
ಛೇದನೇ ಕರ್ಮಮೂಲಸ್ಯ ಪರಶುಶ್ಶಿವಭಾವನಾ

ಪಂಚಕ್ಲೇಶಪಲಾಶಿನಃ-ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನ್ನವೇಷವೆಂಬ ಪಂಚಕ್ಲೇಷ ಪತ್ರಗಳನುಳ್ಳಂಥ, ಕರ್ಮಮೂಲಸ್ಯ-ಕರ್ಮವೆಂಬ ಬೇರನುಳ್ಳಂಥಾ, ಸಂಸಾರ ವಿಷವೃಕ್ಷಸ್ಯ-ಸಂಸಾರವೆಂಬ ವಿಷ ವೃಕ್ಷವನು, ಛೇದನೆ-ಕಡಿವಲ್ಲಿ, ಶಿವಭಾವನಾ-ಶಿವ ಧ್ಯಾನವು, ಪರಶುಃ-ಕೊಡಲಿಯು ॥೨೬॥

ಅಜ್ಞಾನರಾಕ್ಷಸೋನ್ಮೇಷಕಾರಿಣಸ್ಸಂವೃತಾತ್ಮನಃ
ಶಿವಧ್ಯಾನಂತು ಸಂಸಾರ ತಮಸಶ್ಚಂಡಭಾಸ್ಕರಃ

ಅಜ್ಞಾನ-ಅಜ್ಞಾನವೆಂಬ, ರಾಕ್ಷಸಃ-ರಾಕ್ಷಸನ, ಉನ್ಮೇಷ-ಸಂಚಾರಕೆ, ಕಾರಿಣಃ-ಹೇತುವಾಗಿರ್ದಂಥ, ಸಂವೃತಾತ್ಮನಃ-ಮರೆಸಲ್ಪಟ್ಟ ಸ್ವರೂಪವನುಳ್ಳಂಥ, ಸಂಸಾರ ತಾಮಸಃ-ಸಂಸಾರವೆಂಬ ಅಂಧಕಾರಕ್ಕೆ, ಶಿವಧ್ಯಾನಂ-ಶಿವಧ್ಯಾನವು, ಚಂಡಭಾಸ್ಕರಃ-ಸೂರ್ಯನು ॥೨೭॥

ಅಂತಃ ಷಟ್ಚಕ್ರರೂಢಾನಿ ಪಂಕಜಾನಿ ವಿಭಾವಯೇತ್
ಬ್ರಹ್ಮಾದಿ ಸ್ಥಾನ ಭೂತಾನಿ ಭ್ರೂಮಧ್ಯಾಂತಾನಿ ಮೂಲತಃ

ಭ್ರೂಮಧ್ಯಾದೂರ್ಧ್ವಭಾಗೇತು ಸಹಸ್ರದಲಮಂಬುಜಂ
ಭಾವಯೇತ್ತತ್ರವಿಮಲಂ ಚಂದ್ರಬಿಂಬಂ ತದಂತರೇ

ಸೂಕ್ಷ್ಮರಂಧ್ರಂ ವಿಜಾನೀಯಾ ಕೈಲಾಸಸಂಪದಂ ವಿಧುಃ
ತತ್ರಸ್ಥಂ ಭಾವಯೇಚ್ಛಂಭುಂ ಸರ್ವಕಾರಣ ಕಾರಣಂ

ಸರ್ವತತ್ತ್ವೋಪರಿಗತಂ ಸಚ್ಚಿದಾನಂದ ವಿಗ್ರಹಂ
ಸ್ವಪ್ರಕಾಶಮನಿರ್ದೇಶ್ಯಮವಾಙ್ಮಾನಸಗೋಚರಂ

ಉಮಾಖ್ಯಯಾ ಮಹಾಶಕ್ತ್ಯಾ ದೀಪಿಕಂ ಚಿತ್ಸ್ವರೂಪಯಾ
ಹಂಸರೂಪಂ ಪರಾತ್ಮಾನಂ ಸೋಹಂ ಭಾವೇನ ಭಾವಯೇತ್

ತದೇಕತಾನತಾಸಿದ್ಧಿಃ ಸಮಾಧಿಃ ಪರಮೋಮತಃ

ಸಮಾಧಿ ಸ್ವರೂಪವನು ಹೇಳುತಿರ್ದಪಂ

ಅಂತಸ್ಥ ಚಕ್ರರೂಪಾಣಿ-ಶರೀರಮಧ್ಯದಲ್ಲಿ ಷಡ್ಚಕ್ರಸ್ವರೂಪವಾಗಿರ್ದಂಥ, ಬ್ರಹ್ಮಾದಿಷ್ಠಾನ ಭೂತಾನಿ-ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಬ್ರಹ್ಮಕ್ಕೆ ಆವಾಸವಾಗಿರ್ದಂಥ, ಮೂಲತಃ-ಮೂಲಾಧಾರ ತೊಡಗಿ ಭ್ರೂಮಧ್ಯಾಂತಾನಿ-ಭ್ರೂಮಧ್ಯಕಡೆಯಾಗಿರ್ದಂಥ, ಪಂಕಜಾನಿ-ಪದ್ಮಗಳನು, ವಿಭಾವಯೇತ್-ಭಾವಿಸಬೇಕು, ಭ್ರೂಮಧ್ಯಾತ್-ಭ್ರೂಮಧ್ಯದ ದೆಸೆಯಿಂದ, ಊರ್ಧ್ವಭಾಗೇ-ಮೇಲಣ ಭಾಗೆಯಲ್ಲಿ, ಸಹಸ್ರದಳಂ-ಸಾವಿರೆಸಳನುಳ್ಳಂಥ, ಅಂಬುಜಂ-ಪದ್ಮವನು, ಭಾವಯೇತ್-ಧ್ಯಾನಿಸುವುದು, ತತ್ರ-ಆ ಪದ್ಮದಲ್ಲಿ, ಚಂದ್ರಬಿಂಬಂ-ಚಂದ್ರಮಂಡಲವನೂ ಭಾವಿಸಬೇಕು, ತದಂತರೇ-ಚಂದ್ರಮಂಡದಲ್ಲಿ, ಸೂಕ್ಷ್ಮರಂಧ್ರಂ-ಸೂಕ್ಷ್ಮವಾಗಿರ್ದಂಥ ಆಕಾಶವನು, ವಿಜಾನಿಯಾತ್-ಭಾವಿಸಬೇಕು, ತತ್-ಅದನು, ಕೈಲಾಸಪದಂ-ಮೋಕ್ಷಪದವೆಂದು, ಪ್ರಜ್ಞಃ-ಬಲ್ಲವರುಗಳು ವಿದುಃ-ಹೇಳುತ್ತಂ ಇಹರು, ತತ್ರಸ್ಥಂ-ಆ ಬ್ರಹ್ಮರಂಧ್ರದಲ್ಲಿ, ಇರುತ್ತಂ-ಇರ್ದಂಥ, ಸರ್ವಕಾರಣ ಕಾರಣಂ-ಸಮಸ್ತ ಜಗತ್ತಿಗೂ ಕಾರಣವಾದ ಮಾಯಾಕಾರಣವಾಗಿರ್ದಂಥ, ಸರ್ವತತ್ತ್ವೋಪರಿಗತಂ-ಮಹಾದಾದಿಗಳಿಂದಲೂ ಭಿನ್ನವಾಗಿರ್ದಂಥ, ಸಚ್ಚಿದಾನಂದ ವಿಗ್ರಹಂ-ಸಚ್ಚಿದಾನಂದ ಸ್ವರೂಪವಾಗಿರ್ದಂಥ, ಸ್ವಪ್ರಕಾಶಂ-ಸ್ವಯಂ ಜ್ಯೋತಿ ಸ್ವರೂಪವಾಗಿರ್ದಂಥ, ಅನಿರ್ದೇಶ್ಯಂ-ಅಪ್ರಮೇಯವಾಗಿರ್ದಂಥ, ಅವಾಙ್ಮನಸಾ ಗೋಚರಂ-ವಾಙ್ಮನಸುಗಳಿಗೆ ದೂರವಾಗಿರ್ದಂಥ, ಉಮಾಖ್ಯಯಾ-ಉಮೆಯೆಂಬ ಹೆಸರನುಳ್ಳಂಥ, ಚಿತ್ಸ್ವರೂಪಯಾ-ಚಿನ್ಮಯವಾಗಿರ್ದಂಥ, ಮಹಾಶಕ್ತ್ಯಾ-ಮಹಾಶಕ್ತಿಯಿಂದ, ದೀಪಿಕಂ-ಪ್ರಕಾಶಿಸಲ್ಪಟ್ಟಂಥ, ಹಂಸರೂಪಂ-ಶುದ್ಧರೂಪವಾಗಿರ್ದಂಥ, ಪರಮಾತ್ಮಾನಂ-ಶಿವನನು, ಸೋಹಂ-ಭಾವೇನ-ಶಿವನೂ ತಾನೂ ಒಂದೇ ಎಂಬ ಭಾವನೆಯಿಂದ, ಭಾವಯೇತ್-ಭಾವಿಸಬೇಕು, ತದೇಕತಾನತಾ ಸಿದ್ಧಿಃ-ಧ್ಯಾನಾಭ್ಯಾಸವಶದಿಂದ ಮನಸ್ಸಿಗೆ ಏಕಾಗ್ರಸಂಪತ್ತಿಯು, ಪರಮ ಸಮಾಧಿಃ-ಉತ್ತಮ ಸಮಾಧಿಯೆಂದು, ಸಮ್ಮತಃ-ಶಾಸ್ತ್ರ ಸಿದ್ಧಾಂತವು ।।೩೩।।

೩೪. ಲಿಂಗನಿಜಸ್ಥಲ

ಸ್ವಾಂತಸ್ಥ ಶಿವಲಿಂಗಸ್ಯ ಪ್ರತ್ಯಕ್ಷಾನು ಭವಸ್ಥಿತಿಃ
ಭೂತ್ಯೇವ ಪರಲಿಂಗಸ್ಯ ನಿಜಮಿತ್ಯುಚ್ಯತೇ ಬುಧೈಃ

ಲಿಂಗನಿಜಸ್ಥಲವನು ನಿರೂಪಿಸುತಿರ್ದಪಂ

ಸ್ವಾಂತಸ್ಥ ಶಿವಲಿಂಗಸ್ಯ-ತನ್ನ ಹೃದಯಮಧ್ಯದೊಳಿರ್ದ ಶಿವಲಿಂಗದ, ಪ್ರತ್ಯಕ್ಷಾನು

ಭವಸ್ಥಿತಿಃ-ಆವುದಾನೊಂದು ಪ್ರತ್ಯಕ್ಷವಾಗಿರ್ದಂಥ ಅನುಭವದಾದ್ಯವುಂಟು ಸ-ಅದು, ಪರಲಿಂಗಸ್ಯ-ಪರವಾಗಿರ್ದ ಲಿಂಗದ, ನಿಜಮಿತಿ-ನಿಜಸ್ಥಲವೆಂದು, ಬುಧೈಃ-ಬಲ್ಲವರು ಗಳಿಂದ, ಉಚ್ಯತೇ- ಹೇಳಲ್ಪಡುವುದು ॥೩೪॥

ಬ್ರಹ್ಮ ವಿಷ್ಣ್ವಾದಯೋ ದೇವಾಸ್ಸರ್ವೇ ವೇದಾದಯ ಸ್ತಥಾ
ಲೀಯಂತೇ ಯತ್ರ ಗಮ್ಯಂತೇ ತಲ್ಲಿಂಗಂ ಬ್ರಹ್ಮ ಕೇವಲಂ*

ಬ್ರಹ್ಮವಿಷ್ಣ್ವಾದಯಃ-ಬ್ರಹ್ಮ ವಿಷ್ಣು ಮೊದಲಾದ, ದೇವಾಸ್ಸರ್ವೇ-ಸರ್ವದೇವತೆ ಗಳು, ತಥಾ-ಹಾಂಗೆ, ವೇದಾಃ-ವೇದಂಗಳು, ಯತ್ರ-ಆವ ಲಿಂಗದಲ್ಲಿ, ಗಮ್ಯಂತೇ-ಹುಟ್ಟು ತಿಹರು, ಲೀಯಂತೇ-ಲಯವನ್ನೆಯ್ದುತಿಹರು, ತತ್ಕೇವಲಂ ಬ್ರಹ್ಮ-ಆ ಕೇವಲ ಬ್ರಹ್ಮವು, ಲಿಂಗಂ-ಲಿಂಗವೆನಿಸಿಕೊಂಬುದು ॥೩೫॥

ಚಿದಾನಂದಮಯಸ್ಸಾಕ್ಷಾಚ್ಛಿವ ಏವ ನಿರಂಜನಃ
ಲಿಂಗಮಿತ್ಯುಚ್ಯತೇ ನಾನ್ಯದ್ಯತ್ಸ್ಯಾದ್ವಿಶ್ವಸಂಭವಃ

ಚಿದಾನಂದಮಯಃ-ಜ್ಞಾನಾನಂದಮಯವಾದ, ನಿರಂಜನಃ-ನಿತ್ಯವಾದ, ಸಾಕ್ಷಾಚ್ಛಿವ ಏವ-ಪ್ರತ್ಯಕ್ಷವಾದ ಶಿವನೆ, ಲಿಂಗಮಿತಿ-ಲಿಂಗವೆಂದು, ಉಚ್ಯತೇ-ಹೇಳಲು ಪಡುತ್ತಿಹನು, ಅನ್ಯದ್ಯದಿ-ಮತ್ತೊಂದು ಪ್ರಕಾರವು ಎತ್ತಲಾನು ಅಹುದೆ, ವಿಶ್ವಸಂಭವಃ-ವಿಶ್ವೋತ್ಪತ್ತಿಯು, ನ ಸ್ಯಾತ್-ಆಗದು ॥೩೬॥

ಬಹುನಾನ್ಯತ್ರಕಿಮುಕ್ತೇನ ಲಿಂಗಮಿತ್ಯುಚ್ಯತೇ ಬುಧೈಃ
ಶಿವಾಭಿದಂ ಪರಂಬ್ರಹ್ಮಚಿದ್ರೂಪಂ ಜಗದಾಸ್ಪದಂ

ಅತ್ರ-ಇಲ್ಲಿ, ಬಹುನಾ ಉಕ್ತೇನ-ಹಲವು ನುಡಿವುದರಿಂದ, ಕಿಂ-ಏನು ಪ್ರಯೋಜನವು, ಜಗದಾಸ್ಪದಂ-ಜಗತ್ತಿಗೆ ಆಶ್ರಯವಾದ, ಚಿದ್ರೂಪಂ-ಜ್ಞಾನರೂಪವಾದ, ಶಿವಾಭಿಧಂ-ಶಿವನೆಂಬ ಹೆಸರನುಳ್ಳ, ಪರಂಬ್ರಹ್ಮ-ಪರಬ್ರಹ್ಮವು, ಲಿಂಗಮಿತಿ ಲಿಂಗವೆಂದು, ಬುಧೈಃ-ಬಲ್ಲವರಿಂದ, ಉಚ್ಯತೇ-ಹೇಳಲು ಪಡುತ್ತಿಹುದು ॥೩೭॥

ಜ್ಯೋತಿರ್ಮಯಂ ಪರಂ ಲಿಂಗಂ ಶ್ರುತಿರಾಹ ಶಿವಾತ್ಮಕಂ
ತಸ್ಯ ಭಾಸಾ ಸರ್ವಮಿದಂ ಪ್ರತಿಭಾತಿ ನ ಸಂಶಯಃ

ಜ್ಯೋತಿರ್ಮಯಂ - ಜ್ಯೋತಿರ್ಮಯವಾದ, ಪರಂ-ಪರಮವಾದ, ಲಿಂಗಂ-ಲಿಂಗವನು, ಶಿವಾತ್ಮಕಂ-ಶಿವಸ್ವರೂಪವೆಂದು, ಶ್ರುತಿಃ-ವೇದವು, ಆಹ-ಹೇಳಿತ್ತು, ತಸ್ಯಭಾಸಾ-ಆ ಲಿಂಗದ ಜ್ಞಾನಪ್ರಕಾಶದಿಂದ, ಇದಂ ಸರ್ವಂ-ಈ ವಿಶ್ವವು, ಪ್ರತಿಭಾತಿ-ತೋರುತ್ತಿಹುದು, ನ ಸಂಶಯಃ-ಸಂದೇಹವಿಲ್ಲ ॥೩೮॥

---

* ೩೫ರಿಂದ ೩೮ ಶ್ಲೋಕಗಳು ಹಸ್ತಪ್ರತಿಯಲ್ಲಿ ಇಲ್ಲವಾದ ಕಾರಣ ಉಜ್ಜನೀಶ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಶಿವಾಭಿಧಂ ಪರಬ್ರಹ್ಮ ಚಿದ್ರೂಪಂ ಜಗದಾಸ್ಪದಂ
ಜ್ಯೋತಿರ್ಮಯಂ ಪರಂಲಿಂಗಂ ಶ್ರುತಿರಾಹ ಶಿವಾತ್ಮಕಂ

ಶಿವಾಭಿಧಂ-ಶಿವಶಬ್ದವಾಚ್ಯವಾದ, ಪರಬ್ರಹ್ಮ-ಪರಬ್ರಹ್ಮಸ್ವರೂಪ ವಾಗಿರ್ದಂಥ, ಚಿದ್ರೂಪ-ಜ್ಞಾನಾತ್ಮಕವಾಗಿರ್ದಂಥಾ, ಜಗದಾಸ್ಪದಂ-ಜಗತ್ತಿಗೆ ಆಶ್ರಯ ವಾಗಿರ್ದಂಥ, ಜ್ಯೋತಿರ್ಮಯಂ-ತೇಜೋಮಯವಾಗಿರ್ದಂಥ, ಶಿವಾತ್ಮಕಂ-ಶಿವಸ್ವರೂಪ ವಾಗಿರ್ದಂಥ, ಪರಂಲಿಂಗಂ-ಪರಮಲಿಂಗವನು, ಶ್ರುತಿಃ-ವೇದವು, ಆಹಾ-ಹೇಳುತ್ತಂ ಇದ್ದಿತು ॥೩೯॥

ತಸ್ಯಭಾಸಾದ್ವಿದಂ ಸರ್ವಂ ಪ್ರತಿಭಾತಿ ನ ಸಂಶಯಃ
ನ ಸೂರ್ಯೋಭಾತಿ ತತ್ರೇಂದುಂ ನ ವಿದ್ಯುನ್ನ ಚ ಪಾವಕಃ

ನ ತಾರಕಾ ಮಹಾಲಿಂಗೇ ದ್ಯೋತಮಾನೇ ಪರಾತ್ಮನಿ

ಇದಂ ಸರ್ವಂ-ಈ ಸಮಸ್ತ ಜಗತ್ತು, ತಸ್ಯ-ಆ ಶಿವನ, ಭಾಸಾ-ಕಾಂತಿಯಿಂದ, ಪ್ರತಿಭಾತಿ-ತೋರುತ್ತಂ ಇದ್ದಿತು, ನ ಸಂಶಯಃ-ಸಂದೇಹವಿಲ್ಲ, ಪರಾತ್ಮನಿ-ಪರಸ್ವರೂಪ ವಾಗಿರ್ದಂಥ, ಮಹಾಲಿಂಗೇ-ಮಹಾಲಿಂಗವು, ದ್ಯೋತಮಾನೇ-ಪ್ರಕಾಶಿಸುತ್ತಿರಲಾಗಿ, ಸೂರ್ಯಃ-ಸೂರ್ಯನು, ನ ಭಾತಿ-ಆ ವಿಷಯವನ್ನು ಪ್ರಕಾಶಿಸನು, ಇಂದುಃ-ಚಂದ್ರನು, ವಿದ್ಯುತ್-ಮಿಂಚು, ಪಾವಕಃ-ಅಗ್ನಿಯು, ತಾರಕಾಶ್ಚ-ನಕ್ಷತ್ರಂಗಳು, ನ-ಶಿವನನು ಪ್ರಕಾಶಿಸವು, ಆತನ ಚೈತನ್ಯದಿಂದ ಒಪ್ಪುವವಲ್ಲದೆ ತಾವುಸ್ವತಂತ್ರವುಳ್ಳವವಲ್ಲ, ಆತನ ಒಪ್ಪಿಸವು ॥೪೧॥

ಲಿಂಗಾನ್ನಾಸ್ತಿ ಪರಂ ತತ್ವಂ ಯದಸ್ಮಾಜ್ಜಾಯತೇ ಜಗತ್
ಯದೇ ತದ್ರೂಪತಾಂಧತ್ತೇಯದತ್ರ ಲಯಮಶ್ನುತೇ

ಯತ್-ಆವುದಾನೊಂದು ಕಾರಣವಾಗಿ, ಜಗತ್-ಜಗತ್ತು, ಅಸ್ಮಾತ್-ಆ ಲಿಂಗದ ದೆಸೆಯಿಂದ, ಜಾಯತೇ-ಹುಟ್ಟುವುದು, ಏತದ್ರೂಪತಾಂ-ಸ್ಥಿತಿಮಯದಲ್ಲಿ ತದ್ರೂಪವನೆ, ಧತ್ತೆ-ಧರಿಸುತ್ತಂ ಇಹುದು, ಯತ್ರೈವ-ಆ ಲಿಂಗದಲ್ಲಿಯೆ, ಲಯಂ-ಲಯವನು, ಅಶ್ನುತೆ-ಅಯ್ದುತ್ತಿಹದು, ತತ್-ಅದು ಕಾರಣ, ಲಿಂಗಾತ್-ಲಿಂಗದ ದೆಸೆಯಿಂದ, ಪರಂ-ಉತ್ಕೃಷ್ಟವಾಗಿರ್ದಂಥ, ತತ್ವಂ-ವಸ್ತುವು, ನಾಸ್ತಿ-ಇಲ್ಲ ॥೪೨॥

ತಸ್ಮಾಲ್ಲಿಂಗಂ ಪರಂಬ್ರಹ್ಮ ಸಚ್ಚಿದಾನಂದ ಲಕ್ಷಣಂ
ನಿಜರೂಪಮಿತಿಧ್ಯಾನಾ ತದವಸ್ಥಾ ಪ್ರಜಾಯತೇ

ತಸ್ಮಾತ್-ಅದು ಕಾರಣ, ಪರಮಾನಂದ ಲಕ್ಷಣಂ-ಸಚ್ಚಿದಾನಂದಾತ್ಮಕ ವಾಗಿರ್ದಂಥ, ಪರಬ್ರಹ್ಮ-ಪರಬ್ರಹ್ಮಸ್ವರೂಪವಾಗಿರ್ದಂಥ, ಲಿಂಗಂ-ಲಿಂಗವು, ನಿಜ ರೂಪಂ-ನಿಜವಾಗಿರ್ದಂಥ ತನ್ನ ಸ್ವರೂಪವೆಂದು, ಧ್ಯಾನಾತ್-ಅರಿತರೆ, ತದವಸ್ಥಾ-ನಿಜಸ್ವರೂಪ ಪ್ರಾಪ್ತಿಯು, ಪ್ರಜಾಯತೇ-ಉಂಟಹುದು ॥೪೩॥

೩೬. ಅಂಗಲಿಂಗಸ್ಥಲ

ಜ್ಞಾನಮಂಗಮಿತಿ ಪ್ರಾಹು ರ್ಜ್ಞೇಯಂ ಲಿಂಗಂ ಸನಾತನಂ
ವಿದ್ಯತೇ ತದ್ವಯಂ ಯಸ್ಯಾ ಸೋಂऽಗ ಲಿಂಗೀತಿ ಕಥ್ಯತೇ

ಅಂಗಲಿಂಗ ಸ್ಥಲವನು ನಿರೂಪಿಸುತಿರ್ದಪಂ

ಜ್ಞಾನಂ-ತತ್ವಜ್ಞಾನವನು, ಅಂಗಮಿತಿ-ಅಂಗವೆಂದು, ಪ್ರಾಹು-ಹೇಳುತ್ತಂ ಇಹರು, ಜ್ಞೇಯಂ-ಆ ಜ್ಞಾನಕ್ಕೆ ವಿಷಯವಾದುದು, ಸನಾತನ-ಕೇಡಿಲ್ಲದ, ಲಿಂಗಂ-ಲಿಂಗವೆಂದು, ಪ್ರಾಹು-ಹೇಳುತ್ತಂ ಇಹರು, ತದ್ವಯಂ-ಆ ಜ್ಞಾನ ಜ್ಞೇಯವೆಂಬೆರಡು, ಯಸ್ಯ-ಆವವಗೆ, ವಿದ್ಯತೆ-ಉಂಟು. ಸಃ-ಆತನು, ಅಂಗಲಿಂಗೀತಿ-ಅಂಗಲಿಂಗಿ ಎಂದು, ಕಥ್ಯತೇ-ಹೇಳಲ್ಪಡುವನು ॥೪೪॥

ಜ್ಞಾಯತೇ ಲಿಂಗಮೇವೈಕಂ ಸರ್ವಶಾಸ್ತ್ರ ಸನಾತನಂ
ಬ್ರಹ್ಮೇತಿ ವಿಶ್ವಧಾಮೇತಿ ವಿಮುಕ್ತಿ ಪದಮಿತ್ಯತೇ

ಸರ್ವಶಾಸ್ತ್ರ-ಸಕಲ ಶಾಸ್ತ್ರದಲ್ಲಿಯು, ಸನಾತನಂ-ಕೇಡಿಲ್ಲದೆ ಇರ್ದಂಥ, ಲಿಂಗಮೇಕ ಮೇವಾ-ಲಿಂಗ ಒಂದೇ, ಬ್ರಹ್ಮೇತಿ-ಬ್ರಹ್ಮವೆಂದು, ವಿಶ್ವಧಾಮಿತಿ-ವಿಶ್ವಧಾಮವೆಂದು, ವಿಮುಕ್ತಿ ಪದಮಿತಿ-ವಿಮುಕ್ತಿ ಪದವೆಂದು, ಜ್ಞಾಯತೇ-ಅರಿಯಲ್ಪಡುತ್ತಂ ಇದ್ದೀತು ॥೪೫॥

ಮುಕ್ತಿರೂಪಮಿದಂ ಲಿಂಗಮಿತಿ ಯಸ್ಯ ಮನಸ್ಥಿತಿಃ
ಸಮುಕ್ತೋ ದೇಹ ಯೋಗೇಪಿ ಸಜ್ಞಾನಿ ಸ ಮಹಾಗುರುಃ

ಲಿಂಗಂ-ಲಿಂಗವು, ಮುಕ್ತಿರೂಪಮಿತಿ-ಮೋಕ್ಷ ಸ್ವರೂಪವೆಂದು, ಯಸ್ಯ-ಆವವನು, ಮನಸ್ಥಿತಿಃ-ಮನಸ್ಸಿನಲ್ಲಿ ನಿಚ್ಚೈಸುತ್ತಂ ಇದ್ದಾನು, ಸಃ-ಆತನು, ದೇಹಯೋಗೇಪಿ-ದೇಹಿ ಯಾದರೂ, ಮುಕ್ತಃ-ಮುಕ್ತನೂ, ಜ್ಞಾನಿ-ಜ್ಞಾನಿಯು, ಮಹಾಗುರುಃ-ಮಹಾಗುರುವು ॥೪೬॥

ಅನಾದಿನಿಧನಂ ಲಿಂಗಂ ಕಾರಣಂ ಜಗತಾಮಿತಿ
ಯೇನ ಜಾನಂತಿ ಮೂಢಾಸ್ತಿ ಮೋಕ್ಷಮಾರ್ಗ ಬಹಿಷ್ಕೃತಾಃ

ಅನಾದಿನಿಧನಂ-ಆದ್ಯಂತ ಶೂನ್ಯವಾಗಿರ್ದಂಥ, ಲಿಂಗಂ-ಲಿಂಗವು, ಜಗತಾಂ-ಜಗತ್ತುಗಳಿಗೆ, ಕಾರಣಮಿತಿ-ಕಾರಣವೆಂದು, ಯೇ-ಆರು ಕೆಲಂಬರು, ನ ಜಾನಂತಿ-ಅರಿಯರು, ತೇ-ಅವರು, ಮೋಕ್ಷಮಾರ್ಗ ಬ್ರಹಿಷ್ಕೃತಾಃ-ಮುಕ್ತಿ ಮಾರ್ಗದಿಂದ ಬಹಿಷ್ಕೃತರು ॥೪೭॥

ಜ್ಞಾತ್ವಾಯಸ್ಸತತಂ ಲಿಂಗಂ ಸ್ವಾಂತಸ್ಥಂ ಜ್ಯೋತಿರಾತ್ಮಕಂ
ಪೂಜಯೇತ್ ಭಾವನ್ನಿತ್ಯಂ ತ್ವಂ ವಿದ್ಯಾದಂಗಂ ಚ ಲಿಂಗಿನಂ

ಸ್ವಾಂತಸ್ಥಂ-ತನ್ನ ಹೃದಯದಲ್ಲಿರುತ್ತಂ ಇದ್ದಂಥ, ಜ್ಯೋತಿರಾತ್ಮಕಂ-ತೇಜೋಮಯ ವಾದ, ಲಿಂಗಂ-ಲಿಂಗವನು, ಜ್ಞಾತ್ವಾ-ಅರಿದು, ಯಃ-ಆವವನು, ಸತತಂ-ಆವಾಗಲೂ, ಭಾವಜೈಃ-ಭಾವೋಪಚಾರಂಗಳಿಂದ, ಪೂಜಯೇತ್-ಪೂಜಿಸುತ್ತಂ ಇದ್ದಾನು,

ತಂ-ಆತನನೂ, ಅಂಗಲಿಂಗಿನಂ-ಅಂಗಲಿಂಗಿಯೆಂದು, ವಿದ್ಯಾತ್-ಅರಿಯಬೇಕು ॥೪೮॥

ಅಂಗೇಲಿಂಗಂ ಸಮಾರೂಢಂ ಲಿಂಗೇ ಚಾಂಗಮುಪಸ್ಥಿತಂ
ಏತದಸ್ತಿ ದ್ವಯಂ ಯಸ್ಯಾ ಸಭವೇದಂಗಲಿಂಗವಾನ್

ಅಂಗೇ-ಜ್ಞಾನವೆಂಬಂಗದಲ್ಲಿ, ಲಿಂಗಂ-ಲಿಂಗವೂ, ಸಮಾರೂಢಂ-ವಿಷಯವಾಗಿರುತ್ತಿಹನು, ಲಿಂಗೇ-ಲಿಂಗದಲ್ಲಿ, ಅಂಗಂ-ಅಂಗವು, ಉಪಸ್ಥಿತಂ-ಇಹುದು, ಏತದ್ವಯಂ-ಈ ಎರಡು, ಯಸ್ಯ-ಆವವನಿಗೆ, ಅಸ್ತಿ-ಉಂಟು, ಸಃ-ಆತನು, ಅಂಗಲಿಂಗವಾನ್-ಅಂಗಲಿಂಗವಾಗುಳ್ಳಾತನು, ಭವೇತ್-ಅಹುದು ॥೪೯॥

ಯಃ ಪ್ರಾಣಲಿಂಗಾರ್ಚನಭಾವ ಪೂರ್ವೈಃ
ಧರ್ಮೈರುಪೇತಶ್ಶಿವಭಾವಿತಾತ್ಮ
ಸ ಏವನಾನ್ಯಃ ಪರಿಕೀರ್ತಿತೋಽಸೌ
ಸಂವಿದ್ಧಿಪಾರಾತ್ಮರಣಾಭಧಾನಃ

ಪ್ರಾಣಲಿಂಗಾರ್ಚನಭಾವ ಪೂರ್ವೈಃ-ಪ್ರಾಣಲಿಂಗಾರ್ಚನೆ ಭಾವಸಾಧನೆ ಮೊದಲಾದ, ಧರ್ಮೈಃ-ಧರ್ಮಗಳಿಂದ, ಉಪೇತ-ಕೂಡಿದಂಥಾ, ಶಿವಭಾವಿತಾತ್ಮ-ಶಿವನಲ್ಲಿ ಇರಿಸಲ್ಪಟ್ಟ ಮನಸ್ಸನುಳ್ಳಂಥಾತನು, ಸಂವಿದ್ಧಿ ಪರಾತ್-ಜ್ಞಾನದ ಪರಿಪಕ್ವದ ದೆಸೆಯಿಂದ, ಶರಣಾಭಿಧಾನಃ-ಶರಣನೆಂಬ ನಾಮವನುಳ್ಳಾತನೆಂದು, ಪರಿಕೀರ್ತಿತಃ-ಹೇಳಲ್ಪಟ್ಟಿತು, ನಾನ್ಯ-ಮತ್ತೊಬ್ಬನಲ್ಲ ॥೫೦॥

ಇತಿ ಶ್ರೀ ವೀರಶೈವಧರ್ಮನಿರ್ಣಯೇ ಸಿದ್ಧಾಂತಶಿಖಾಮಣೌ
ಪ್ರಾಣಲಿಂಗಿನಃ ಪಂಚಮಸ್ಥಲ ಪ್ರಸಂಗೋನಾಮ ದ್ವಾದಶಪರಿಚ್ಛೇದಃ

ತ್ರಯೋದಶಪರಿಚ್ಛೇದ

ಶರಣಸ್ಥಲ

ಅಗಸ್ತ್ಯ ಉವಾಚ- ಅಗಸ್ತ್ಯ ಮುನೀಶ್ವರ ನುಡಿದನು

ಮಾಹೇಶ್ವರಸ್ತು ಕಥಿತಃ ಪ್ರಾಣಲಿಂಗೀ ನಿಜಾಧಿಕಃ
ಕಥಮೇಷು ಸಮಾಧಿಷ್ಠಃ ಪುನಶ್ಶರಣ ಸೌಜ್ಞಕಃ

ಮಾಹೇಶ್ವರಃ-ಮಾಹೇಶ್ವರನು, ಪ್ರಾಣಲಿಂಗೀ-ಪ್ರಾಣಲಿಂಗಿ ಎಂದು ಕಥಿತಃ-ಹೇಳಲ್ಪಟ್ಟನು, ಸಮಾಧಿಷ್ಠಃ-ಸಮಾಧಿಸ್ಥನಾಗಿರ್ದಂಥ, ಏಷಃ-ಈತನೂ, ಪುನಃ-ಮರಳಿ, ಕಥಂ-ಹ್ಯಾಂಗೆ, ಶರಣ ಸೌಜ್ಞಕಃ-ಶರಣೆಂದು, ಉಚ್ಯತೇ-ಹೇಳಲ್ಪಡುವನು ॥೧॥

ರೇಣುಕ ಉವಾಚ – ರೇಣುಕ ನುಡಿದನು

ಅಂಗಲಿಂಗೀ ಜ್ಞಾನರೂಪಸ್ಸತೀಜ್ಞೇಯಃ ಶಿವಪತಿಃ
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್

ಪ್ರತಿಪತ್ತಿ ಸ್ವರೂಪವಾಗಿರ್ದಂಥ ಪ್ರಾಣಲಿಂಗಿ ಸ್ವರೂಪವನು ನಿರೂಪಿಸಿ ಜ್ಞಾನ ಸುಖಾತ್ಮಕವಾಗಿರ್ದಂಥ ಶರಣಸ್ವರೂಪವನು ನಿರೂಪಿಸುತಿರ್ದಪಂ

ಅಂಗಲಿಂಗೀ-ಅಂಗಲಿಂಗ ಸಂಬಂಧವನುಳ್ಳಂಥಾ, ಜ್ಞಾನರೂಪಃ-ಜ್ಞಾನಾತ್ಮಕ ಸ್ವರೂಪವಾಗಿರ್ದಂಥ ಪ್ರಾಣಲಿಂಗಿಯು, ಸತಿಃ-ಸತಿ ಎಂದು, ಶಿವಃ-ಶಿವನು, ಪತಿಃ-ಪತಿ ಎಂದು, ಜ್ಞೇಯಃ-ಅರಿವುದು, ತತ್ಸಮಾವೇಶೇ-ಆ ಸತಿಪತಿ ಶಿವಜ್ಞಾನ ಸಂಬಂಧದಿಂದ, ಯತ್ಸೌಖ್ಯಂ-ಆವುದಾನೊಂದು ಸುಖವುಂಟು, ತದ್ವಾನ್-ಆ ಸುಖವನುಳ್ಳವನಾದರೆ, ಶರಣನಾಮವಾನ್-ಶರಣನೆಂಬ ಹೆಸರನುಳ್ಳವನು ॥೨॥

ಪ್ರತ್ಯುತ್ತರೆ

ಯೇತತ್ಸ್ಥಲ ಸಮಾಖ್ಯಾತಂ ಚತುರ್ಥಾಧರ್ಮ ಭೇದತಃ
ಆದೌ ಶರಣಮಾಖ್ಯಾತಂ ತತಸ್ತಾಮಸ ವರ್ಜನಂ

ತತೋ ನಿರ್ದೇಶಕಥನಂ ಶೀಲಸಂಪಾದನಂ ತತಃ
ಕ್ರಮಾಲ್ಲಕ್ಷಣಮೇತೇಷಾಂ ಕಥಯಾಮಿ ನಿಶಮ್ಯತಾಂ

ಏತತ್ಸ್ಥಲಂ-ಈ ಶರಣ ಸ್ಥಲವು, ಧರ್ಮಭೇದತಃ-ಧರ್ಮಭೇದದಿಂದ, ಚತುರ್ಥಾ-ನಾಲ್ಕು ಪ್ರಕಾರವಾಗಿ, ಸಮಾಖ್ಯಾತಂ-ಹೇಳಲ್ಪಟ್ಟಿತು, ಆದೌ-ಮೊದಲು, ಶರಣಂ-ಶರಣಸ್ಥಲವು, ಆಖ್ಯಾತಂ-ಹೇಳಲ್ಪಟ್ಟಿತು, ತತಃ-ಅನಂತರದಲ್ಲಿ, ತಾಮಸ ವರ್ಜನಂ-ತಾಮಸ ನಿರಸನ ಸ್ಥಲವು, ತತಃ-ಅನಂತರದಲ್ಲಿ, ನಿರ್ದೇಶಕಥನಂ-ಜ್ಞಾನ

ನಿರ್ದೇಶಸ್ಥಲವು, ತತಃ-ಅನಂತರದಲ್ಲಿ, ಶೀಲಸಂಪಾದನಂ-ಶೀಲ ಸಂಪಾದನಸ್ಥಲವು, ಯೇತೇಷಾಂ-ಇವಕ್ಕೆ, ಕ್ರಮಾತ್-ತರುವಾಯಿಂದ, ಲಕ್ಷಣಂ-ಲಕ್ಷಣವನು, ಕಥಯಾಮಿ-ಹೇಳಿಹೆನು, ನಿಶಮ್ಯತಾಂ-ಕೇಳು ॥೩॥

೩೭. ಶರಣಸ್ಥಲ

ಯಃ ಶಿವಚರಣೇ ಯಸ್ತು ಶಿವಭಕ್ತಿ ವಿಭಾವಯನ್
ತದನ್ಯ ವಿಮುಖಸ್ಸೋಽಯಂ ಜ್ಞಾತಃ ಶರಣವಾನಿತಿ

ಯಃ-ಆವನಾನೊಬ್ಬನು, ಶಿವಚರಣೇ-ಶಿವನ ಶ್ರೀಪಾದದಲ್ಲಿ, ಭಕ್ತಿಂ-ಭಕ್ತಿಯನು ವಿಭಾವಯನ್-ಪ್ರಕಟಿಸುತ್ತವು, ತದನ್ಯ ವಿಮುಖಃ-ಶಿವನಲ್ಲದೆ ಉಳಿದ ದೇವತಾಂತರದಲ್ಲಿ ಭಕ್ತಿ ಇಲ್ಲದೆ ಇರ್ದಂಥ, ಸೋಽಯಂ-ಅಂಥ ಪುರುಷನು, ಶರಣವಾನಿತಿ-ಶರಣನೆಂದು, ಜ್ಞಾತಃ-ಅರಿಯಲ್ಪಡುವನು ॥೪॥

ಪರಿಜ್ಞಾತೇ ಶಿವೇ ಸಾಕ್ಷಾತ್ಕೋವಾನ್ಯಮಭಿಕಾಂಕ್ಷತೆ
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇನ್ಯತಃ

ಪರಿಜ್ಞಾತೇ-ಅರಿವುತ್ತಂ ಇರಲು, ಶಿವೇ-ಶಿವನು, ಸಾಕ್ಷಾತ್-ಪ್ರತ್ಯಕ್ಷವಾಗಿರಲು, ಕಃ-ಆವವನು, ಅನ್ಯಂ-ಮತ್ತೊಬ್ಬರನು, ಅಭಿಕಾಂಕ್ಷತೆ-ಬಯಸುತ್ತಂ ಇಹನು, ಮಹತಿ-ದೊಡ್ಡಿತಾಗಿರ್ದ, ನಿಧಾನೆ-ನಿಕ್ಷೇಪವು, ಪ್ರಾಪ್ತೆ-ಲಭ್ಯವಾದರೆ, ಕಃ-ಆವವನು, ಅನ್ಯತಃ-ಮತ್ತೊಬ್ಬನ ದೆಸೆಯಿಂದ, ಕಾಚಂ-ಗಾಜಿನ ಮಣಿಯನ್ನು, ಯಾಚತೆ-ಬೇಡುತ್ತಂ ಇಹನು ॥೫॥

ಶಿವಯೇವ ಸಮಸ್ತಾನಾಂ ಶರಣ್ಯಶ್ಶರಣಾರ್ಥಿನಾಂ
ತಸ್ಮಾದನ್ಯತ್ಪರಿತ್ಯಾಜ್ಯ ತತ್ರೈವ ರಮತೇ ಸುಧೀಃ

ಶರಣಾರ್ಥಿನಾಂ-ಶರಣಾರ್ಥಿಗಳಿಗೆ, ಶಿವಯೇವ-ಪರಮೇಶ್ವರನೆ, ಶರಣ್ಯಃ-ಆಶ್ರಯಿಸಲು ಯೋಗ್ಯನಾಗಿರ್ದಂಥಾತನು, ತಸ್ಮಾತ್-ಅದು ಕಾರಣ, ಅನ್ಯತ್-ಮಿಕ್ಕಾದ ದೇವತೆಗಳನು, ಪರಿತ್ಯಾಜ್ಯ-ಬಿಟ್ಟು, ಸುಧೀಃ-ಬಲ್ಲವನು, ತತ್ರೈವ-ಆ ಶಿವನಲ್ಲಿಯೆ, ರಮತೇ-ಪ್ರೀತಿಯ ಮಾಡುತ್ತಂ ಇಹನು ॥೬॥

ಶಿವಾನಂದಂ ಸಮಾಸಾದ್ಯಾ ಕೋವಾಽನ್ಯಮುಪತಿಷ್ಠತೇ
ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇನ್ಮೃಗತೃಷ್ಣಿತಾಂ

ಶಿವಾನಂದಂ-ಆನಂದ ಸ್ವರೂಪವಾದ ಶಿವನನು, ಸಮಾಸಾದ್ಯಾ-ಯೆಯ್ದಿ ಕೋವಾ-ಆರುತಾನು, ಅನ್ಯಂ-ಮತ್ತೊಬ್ಬನನು, ಉಪತಿಷ್ಠತೇ-ಸೇವಿಸುವನು, ಆ ದೃಷ್ಟಾಂತ, ಗಂಗಾಮೃತಂ-ಗಂಗೋದಕವನು, ಪರಿತ್ಯಜ್ಯ-ಬಿಟ್ಟು, ಕಃ-ಆವವನು, ಮೃಗತೃಷ್ಣಿತಾಂ-ಮರೀಚಿಕಾ ಜಲವನು, ಕಾಂಕ್ಷೇತ್-ಬಯಸುವನು ॥೭॥

ಸಂಸಾರತಿಮಿರಚ್ಛೇದೇ ವಿನಾ ಶಂಕರ ಭಾಸ್ಕರಃ
ಪ್ರಭವಂತಿ ಕಥಂ ದೇವಾಃ ಖದ್ಯೋತಾ ಇವ ದೇಹಿನಾಂ

ದೇಹಿನಾಂ-ಪ್ರಾಣಿಗಳ, ಸಂಸಾರ ತಿಮಿರಚ್ಛೇದೇ-ಸಂಸಾರವೆಂಬ ಅಂಧಕಾರವನು ಕೆಡಿಸುವಲ್ಲಿ, ಶಂಕರ ಭಾಸ್ಕರಃ-ಶಿವನೆಂಬ ಸೂರ್ಯನನು, ವಿನಾ-ಬಿಟ್ಟು, ಖದ್ಯೋತಾ ಇವ-ಮಿಂಚುಬುಳುವಿನ ಮರ್ಯಾದೆಯಲ್ಲಿರ್ದ, ದೇವಾಃ-ಮಿಕ್ಕಾದ ದೇವತೆಗಳು, ಕಥಂ-ಹ್ಯಾಂಗೆ, ಪ್ರಭವಂತಿ-ಸಮರ್ಥರಹರು ॥೮॥

ಸಂಸಾರಾರ್ತಿ ವಿಪನ್ನಾನಾಂ ಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ
ಚಕೋರಸ್ತೃಷಿತ್ವ ಪಶ್ಯೇಚ್ಚಂದ್ರಂ ಕಿಂ ತಾರಕಾಮಪಿ

ಸಂಸಾರಾರ್ತಿ ವಿಪನ್ನಾನಾಂ-ಸಂಸಾರ ದುಃಖದಿಂದ ಕಂಗೆಟ್ಟಿರ್ದಂಥಾವರುಗಳಿಗೆ, ಬ್ರಹ್ಮಾದ್ಯೈಃ-ಬ್ರಹ್ಮಮೊದಲಾಗಿರ್ದಂಥಾ, ಸುರೈಃ-ದೇವತೆಗಳಿಂದ, ಕಿಂ-ಪ್ರಯೋಜನವೇನು, ಅಲ್ಲಿ ದೃಷ್ಟಾಂತಂ. ತೃಷಿತಂ-ಬಾಯಾರಿರ್ದಂಥ, ಚಕೋರಃ-ಚಕೋರ ಪಕ್ಷಿಯು, ಚಂದ್ರಂ-ಚಂದ್ರನನು, ಪಶ್ಯತ್-ನೋಡುವುದಲ್ಲದೆ, ತಾರಕಾಮಪಿ-ನಕ್ಷತ್ರವನು, ಪಶ್ಯತ್ಕಿಂ-ನೋಡುವುದೇನು ॥೯॥

ತಸ್ಮಾತ್ಸರ್ವ ಪ್ರಯತ್ನೇನ ಶಂಕರಂ ಶರಣಾಗತಃ
ತದನಂತ ಸುಖಂ ಪ್ರಾಪ್ಯ ಮೋದತೇ ನಾನ್ಯ ಚಿಂತಯಾ

ತಸ್ಮಾತ್-ಅದುಕಾರಣ, ಸರ್ವಪ್ರಯತ್ನೇನ-ಸರ್ವ ಪ್ರಕಾರದಲ್ಲಿಯು, ಶಂಕರಂ-ಶಿವನನು, ಶರಣಾಗತಃ-ಮೊರೆ ಹೊಕ್ಕವನು, ತದನಂತ ಸುಖಂ, ಶಿವನ ನಿತ್ಯಸುಖವನು, ಪ್ರಾಪ್ಯ-ಐಯ್ದಿ, ಮೋದತೆ-ಸಂತೋಷಪಡುವನು, ಅನ್ಯಚಿಂತಯಾ-ವಿಷಯ ಚಿಂತೆಯಿಂದ, ನ-ಸಂತೋಷಪಡನು ॥೧೦॥

೩೮. ತಾಮಸನಿರಸನಸ್ಥಲ

ಶಿವಭಕ್ತಿಪರಾನಂದಮೋದಿನಾಂ ಗುರುಣಾ ಯತಃ
ನಿರಸ್ಯಂತೇ ತಮೋಭಾವಾಸ್ಸತಾಮಸ ನಿರಾಸಕಃ

ಅನಂತರದಲ್ಲಿ ತಾಮಸವರ್ಜನ ಪ್ರಸಂಗವನು ಹೇಳುತಿರ್ದಪಂ

ಶಿವಭಕ್ತಿಪರಾನಂದ ಮೋದಿನಾಂ-ಶಿವಭಕ್ತಿಯಿಂದ ಉಂಟಾದ ನಿತ್ಯಾನಂದದಿಂದ ಸಂತುಷ್ಟನಾಗಿರ್ದಂಥ, ಗುರೂಣಾಂ-ಗುರುವಿನಿಂದ, ತಮೋಭಾವಃ-ತಮೋಗುಣದಿಂದ ಉಂಟಾದ ಮೋಹಾದಿಗಳು, ಯಃ-ಆವಾತನಿಂದ, ನಿರಾಸ್ಯತೆ-ನಿರಾಕರಿಸಲ್ಪಟ್ಟಿತು, ಸಃ-ಆತನು, ತಾಮಸವರ್ಜಕನೆಂದು, ಉಚ್ಯತೇ-ಹೇಳಲ್ಪಡುವನು ॥೧೧॥

ಯಸ್ಯ ಜ್ಞಾನಂ ತಮೋ ಮಿಶ್ರಂ ನ ತಸ್ಯ ಗತಿರೀಷ್ಯತೆ
ಸತ್ವಂ ಹಿ ಜ್ಞಾನಯೋಗಸ್ಯ ನಿರ್ಮಲಸ್ಯ ವಿದಾರಕಃ

ಯಸ್ಯ-ಆವವನ, ಜ್ಞಾನಂ-ಜ್ಞಾನವು, ತಮೋಮಿಶ್ರಂ-ತಮೋಗುಣದಿಂದ, ಸಂತೃಪ್ತವಾಗಿದ್ದಿತು, ತಸ್ಯ-ಆತಗೆ, ಗತಿಃ-ಪ್ರಯೋಜನವು, ಈಷ್ಯತೆ-ಇಲ್ಲ, ಸತ್ವಂ-ಸತ್ವ ಗುಣವು, ನಿರ್ಮಲಸ್ಯ-ಶುದ್ಧವಾಗಿರ್ದಂಥ, ಜ್ಞಾನಸ್ಯ-ಜ್ಞಾನಕ್ಕೆ, ವಿದಾರಕಃ-ಕಾರಣವು ॥೧೨॥

ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸನ್ನಿಭೇ
ಕುತಸ್ತಮೋವಿಕಾರಸ್ಸ್ಯುರ್ಮಹತಾಂ ಶಿವಯೋಗಿನಾಂ

ಸಹಸ್ರಾದಿತ್ಯಸನ್ನಿಭೇ-ಸಾವಿರ ಸೂರ್ಯರಿಗೆ ಸಮಾನವಾಗಿರ್ದಂಥ, ಶಿವಜ್ಞಾನೆ-ಶಿವಜ್ಞಾನವು, ಸಮುತ್ಪನ್ನೇ-ಹುಟ್ಟಿರುತ್ತಂ ಇರಾಲಾಗಿ, ಮಹತಾಂ-ಮಹಾತ್ಮರಾಗಿರ್ದಂಥ, ಶಿವಯೋಗಿನಾಂ-ಶಿವಯೋಗೀಶ್ವರರಿಗೆ, ತಮೋವಿಕಾರಃ-ತಮೋ ಗುಣದ ವಿಕಾರಗಳು, ಕುತಸ್ಯು-ಹೆಂಗೆ ಸಂಭವಿಸುವುವು ॥೧೩॥

ತಮೋಮೂಲಾ ಹಿ ಸಂಜಾತಾ ರಾಗದ್ವೇಷಾದಿಪಾದಪಾಃ
ಶಿವಜ್ಞಾನಕುಠಾರೇಣಚ್ಛೇದ್ಯಂತೇ ಹಿ ನಿರಂತರಂ

ತಮೋಮೂಲಾಹಿ ಸಂಜಾತಃ-ತಮೋಗುಣ ಮೂಲವಾಗಿ ಹುಟ್ಟುವಂಥ, ರಾಗದ್ವೇಷಾದಿ ಪಾದಪಾಃ-ರಾಗದ್ವೇಷಗಳೆಂಬ ವೃಕ್ಷಗಳು, ಶಿವಜ್ಞಾನ ಕುಠಾರೇಣ-ಶಿವಜ್ಞಾನವೆಂಬ ಕೊಡಲಿಯಿಂದ, ಛೇದ್ಯತೇ-ಛೇದಿಸಲು ಪಡುತ್ತಿಹವು ॥೧೪॥

ಶಮೋ ಧಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ
ಕ್ಷಾಂತಿಃ ಕಾರುಣ್ಯ ಸಂಪತ್ತಿಃ ಶ್ರದ್ಧಾ ಸತ್ಯಸಮುದ್ಭವಾ

ಶಿವಭಕ್ತಿಃ ಪರೋಧರ್ಮಶ್ಶಿವಜ್ಞಾನಸ್ಯ ಬಾಂಧವಾಃ
ಯತ್ಯೈರ್ಯುಕ್ತೋ ಮಹಾಯೋಗೀ ಸಾತ್ವಿಕಃ ಪರಿಕೀರ್ತಿತಃ

ಶಮಃ-ಮನಸ್ಸಿನ ಏಕಾಗ್ರತೆ, ಧರ್ಮಃ-ಜಿತೇಂದ್ರಿಯತ್ವ, ವಿವೇಕಸ್ಯ-ನಿತ್ಯಾನಿತ್ಯ ವಿವೇಕ, ವೈರಾಗ್ಯಂ-ವಿಷಯ ವಿರಕ್ತಿ, ಪೂರ್ಣಭಾವನಾ-ಶಿವಭಾವನೇ, ಕ್ಷಾಂತಿ-ಕ್ಷಮೆ, ಕಾರುಣ್ಯ ಸಂಪತ್ತಿ-ಸರ್ವಪ್ರಾಣಿಗಳ ಮೇಲಣ ದಯೆ, ಸತ್ಯ ಸಮುದ್ಭವ-ಸತ್ಯದಿಂದ ಹುಟ್ಟಿದಂಥ, ಶ್ರದ್ಧಾ-ವಿಶ್ವಾಸ, ಶಿವಭಕ್ತಿಪರಾ-ಶಿವಭಕ್ತಿಯನುಪಾದಿಸುವಂಥ, ಧರ್ಮಃ-ಪೂಜಾದಿಧರ್ಮವು, ಶಿವಜ್ಞಾನಸ್ಯ ಬಾಂಧವಾಃ-ಶಿವತತ್ವಜ್ಞಾನಕ್ಕೆ ಸಹಕಾರಿಗಳು, ಏತೈಃ-ಈ ಗುಣಗಳಿಂದ, ಯುಕ್ತಃ-ಕೂಡಿದಂಥ, ಮಹಾಯೋಗಿಃ-ಅಧಿಕವಾದ ಶಿವಯೋಗಿಯು, ಸಾತ್ವಿಕಃ-ಸಾತ್ವಿಕನೆಂದು, ಪರಿಕೀರ್ತಿತಾಃ-ಹೇಳಲ್ಪಟ್ಟನು ॥೧೬॥

ಕಾಮ ಕ್ರೋಧ ಮಹಾಮೋಹ ಮದ ಮಾತ್ಸರ್ಯವಾರಿಣಾಃ
ಶಿವಜ್ಞಾನಮೃಗೇಂದ್ರಸ್ಯ ಕಥಂ ತಿಷ್ಠಂತಿ ಸನ್ನಿಧೌ

ಕಾಮ ಕ್ರೋಧ ಮಹಾಮೋಹ ಮದ ಮಾತ್ಸರ್ಯವಾರಿಣಾಃ-ಕಾಮಕ್ರೋಧಾದಿಗಳೆಂಬ ಗಜಗಳು, ಶಿವಜ್ಞಾನ ಮೃಗೇಂದ್ರಸ್ಯ-ಶಿವಜ್ಞಾನವೆಂಬ ಸಿಂಹದ, ಸನ್ನಿಧೌ-ಸಮೀಪದಲ್ಲಿ, ಕಥಂ ತಿಷ್ಠಂತಿ-ಹ್ಯಾಂಗೆ ಇರುತ್ತಂ ಇಹವು ॥೧೭॥

ಯೋ ದ್ವೇಷ್ಟಿ ಸಕಲಾನ್ ಲೋಕಾನ್ಯೋವಾಹಂ ಕುರುತೇ ಸದಾ
ಯೋ ತಸ್ಯುಭಾವನಾಯುಕ್ತಸ್ಸತಾಮಸ ಇತಿಸ್ಮೃತಃ

ಯಃ-ಆವವನು, ಸಕಲಾನ್ ಲೋಕಾನ್-ಸಮಸ್ತ ಜಗವನು ದ್ವೇಷಿಸುತ್ತಂ ಇದ್ದಾತನು, ಸದಾ-ಆವಾಗಲೂ, ಅಹಂಕುರುತೇ-ಅಹಂಕಾರವನು ಮಾಡುತ್ತಂ ಇದ್ದಾನು.

ಯಃ-ಆವವನು, ಅಸತ್ಯಭಾವನಾಯುಕ್ತಃ-ಅಸತ್ಯವಾದ ವಿಷಯಗಳನು ಭಾವಿಸುತ್ತ ಇದ್ದಾನು, ಸಃ-ಆತನೂ, ತಾಮಸ ಇತಿ-ತಾಮಸನೆಂದು, ಸ್ಮೃತಾಃ-ಹೇಳಲ್ಪಟ್ಟನು ॥೧೮॥

ಯತ್ರಕುತ್ರಾಪಿವಾದ್ವೇಷ್ಟಿ ಪ್ರಪಂಚೇ ಶಿವರೂಪಿಣೇ
ಶಿವದ್ವೇಷೀ ಸವಿಜ್ಞೇಯೋ ರಜಸಾಽವಿಷ್ಟಮಾನಸಃ

ಶಿವರೂಪಿಣೇ-ಶಿವಸ್ವರೂಪವಾಗಿರ್ದಂಥ, ಪ್ರಪಂಚೇ-ಜಗತ್ತಿನಲ್ಲಿ, ಯತ್ರ ಕುತ್ರಾಪಿ-ಆವ ವಿಷಯದಲ್ಲಿಯಾದರೂ, ದ್ವೇಷಿ-ದ್ವೇಷವ ಮಾಡುತ್ತಂ ಇದ್ದಾನು, ರಜಸಾ-ರಜೋಗುಣದಿಂದ, ಆವಿಷ್ಟಮಾನಸಃ-ವ್ಯಾಪಿಸಲ್ಪಟ್ಟ ಮನಸ್ಸನುಳ್ಳಂಥಾ, ಸಃ-ಆತನು, ಶಿವದ್ವೇಷಿ-ಶಿವದ್ವೇಷಿ ಎಂದು, ವಿಜ್ಞೇಯಃ-ಹೇಳಲ್ಪಡುವನು ॥೧೯॥

೩೯. ನಿರ್ದೇಶಸ್ಥಲ

ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಂ
ನಿರ್ದೇಶ್ಯತೇತು ಯತ್ ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ

ಅನಂತರದಲ್ಲಿ ನಿರ್ದೇಶ ಸ್ಥಲವನು ನಿರೂಪಿಸುತಿರ್ದಪಂ

ಸಂಸಾರಸ್ಯ ಪ್ರವರ್ತಕಂ-ಸಂಸಾರ ಕಾರಣವಾಗಿರ್ದಂಥ, ತಮೋ ಭಾಗಂ-ರಜಸ್ತಮೋ ಗುಣಂಗಳನು, ನಿರಾಕೃತ್ಯ-ನಿರಾಕರಿಸಿ, ಯತ್ ಜ್ಞಾನಂ-ಆವುದಾ ನೊಂದು ಜ್ಞಾನವು, ನಿರ್ದೇಶ್ಯತೆ-ಇರುತ್ತಂ ಇದ್ದೀತು, ಸಃ-ಆ ಜ್ಞಾನವುಳ್ಳಂಥ ಪುರುಷನು, ನಿರ್ದೇಶ ಇತಿ-ನಿರ್ದೇಶವೆಂದು, ಸ್ಮೃತಃ-ಹೇಳಲ್ಪಟ್ಟನು ॥೨೦॥

ಗುರುರೇವ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಂ
ಕೋವಾ ಸೂರ್ಯಂ ವಿನಾ ಲೋಕೇ ತಮಸೋಽವಿನಿವರ್ತತೇ

ಜ್ಞಾನಕ್ಕೆ ಗುರುವೆ ನಿಮಿತ್ಯವೆಂದು ಹೇಳುತ್ತಂ ಇದ್ದಾನು.

ದೇಹಿನಾಂ-ಪ್ರಾಣಿಗಳಿಗೆ, ಗುರುರೇವ-ಗುರುವೆ, ಪರಂತತ್ವಂ-ಪರಬ್ರಹ್ಮವನು, ಪ್ರಕಾಶ ಇತಿ-ತೋರಿಸುತ್ತಂ ಇಹನು. ಅಲ್ಲಿ ದೃಷ್ಟಾಂತ. ಲೋಕೇ-ಲೋಕದಲ್ಲಿ, ಸೂರ್ಯಂ ವಿನಾ-ಸೂರ್ಯನಿಲ್ಲದೆ, ಕಃ-ಆವವನು, ತಾಮಸಃ-ಅಂಧಕಾರವನು, ನಿವಾರಕಃ-ಕೆಡಿಸುವಂಥಾತನು ॥೨೧॥

ಅಂತರೇಣ ಗುರುಂ ಸಿದ್ಧಂ ಕಥಂ ಸಂಸ್ಕಾರ ನಿಷ್ಕೃತಿಃ
ನಿದಾನಜ್ಞಂ ವಿನಾ ವೈದ್ಯಂ ಕಿಂ ವಾ ರೋಗೋ ನಿವರ್ತತೇ

ಸಿದ್ಧಂ-ಜ್ಞಾನಸಿದ್ಧನಾಗಿರ್ದಂಥ, ಗುರುಂ-ಗುರುವನು, ಅಂತರೇಣ-ಉಳಿದು, ಕಥಂ-ಹಾಗೆ, ಸಂಸಾರನಿಷ್ಕೃತಿಃ-ಸಂಸಾರ ನಿವೃತ್ತವು, ಅಲ್ಲಿ ದೃಷ್ಟಾಂತ, ನಿದಾನಜ್ಞಂ-ವ್ಯಾಧಿಯ ನಿದಾನವನು ಬಲ್ಲಂಥ, ವೈದ್ಯಂ-ವೈದ್ಯನನೂ, ವಿನಾ-ಬಿಟ್ಟು, ರೋಗ ನಿವರ್ತಕಃ-ವ್ಯಾಧಿಯ ತೊಲಗಿಸುವವರಾರು ॥೨೨॥

ಅಪರೋಕ್ಷಿತ ತತ್ವಸ್ಯ ಜೀವನ್ಮುಕ್ತ ಸ್ವಭಾವಿನಃ
ಗುರೋಃ ಕಟಾಕ್ಷಸಿದ್ಧಸ್ಯ ಕೋವಾ ಲೋಕೇಷು ದುರ್ಲಭಃ

ಅಪರೋಕ್ಷಿತ ತತ್ತ್ವಸ್ಯ-ಸಾಕ್ಷಾತ್ಕರಿಸಲ್ಪಟ್ಟ ಶಿವತತ್ವವನುಳ್ಳಂಥ, ಜೀವನ್ಮುಕ್ತ ಸ್ವಭಾವಿನಃ-ಶರೀರನಾಗಿ ಮುಕ್ತನಾಗಿರ್ದಂಥ, ಗುರೋಃ-ಗುರುವಿನ, ಕಟಾಕ್ಷ ಸಿದ್ಧಸ್ಯ-ಕೃಪೆಯಿಂದ, ಸಿದ್ಧನಾಗಿರ್ದಂಥಾತಂಗೆ, ಕೋವಾ-ಆವ ವಸ್ತುವು, ಲೋಕೇಷು-ಲೋಕದಲ್ಲಿ, ದುರ್ಲಭಃ-ಹಡೆಯಬಾರದು ॥೨೩॥

ಅಜ್ಞಾನಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್
ಪ್ರಜ್ಞಾವಿಭೂತಿಯೋಗೇನ ತಮಾಹುಗುರು ಸತ್ತಮಂ

ಅಜ್ಞಾನ ಮಲಿನಂ-ಅಜ್ಞಾನದಿಂದ ಮಲಿನವಾಗಿರ್ದಂಥ, ಚಿತ್ತದರ್ಪಣಂ-ಚಿತ್ತ ವೆಂಬ ಕನ್ನಡಿಯನು, ಪ್ರಜ್ಞಾವಿಭೂತಿಯೋಗೇನ-ಜ್ಞಾನವೆಂಬ ವಿಭೂತಿಯ ಸಂಬಂಧ ದಿಂದ, ಯಃ-ಆವವನು, ವಿಶೋಧಯೇತ್-ಶೋಧಿಸುತ್ತಂ ಇದ್ದಾನು, ತಂ-ಆತನನು, ಗುರುಸತ್ತಮ-ಉತ್ತಮ ಗುರುವೆಂದು, ಆಹು-ಹೇಳುತ್ತಂ ಇಹರು ॥೨೪॥

ಕೈವಲ್ಯಕಲ್ಪತರವೋ ಗುರವಃ ಕರುಣಾಲಯಾಃ
ದುರ್ಲಭಾಹಿ ಜಗತ್ಯಸ್ಮಿನ್ ಶಿವಾದ್ವೈತಪರಾಯಣಾಃ

ಕೈವಲ್ಯಕಲ್ಪತರವಃ-ಮೋಕ್ಷಕ್ಕೆ ಕಲ್ಪವೃಕ್ಷವಾಗಿರ್ದಂಥ, ಕರುಣಾಲಯಃ-ಕರುಣಾಕರ ರಾಗಿರ್ದಂಥ, ಶಿವಾದ್ವೈತ ಪರಾಯಣಃ-ಶಿವಾದ್ವೈತದಲ್ಲಿ ತತ್ಪರರಾಗಿರ್ದಂಥ, ಗುರವಃ-ಗುರುಗಳು, ಅಸ್ಮಿನ್ ಜಗತಿ-ಈ ಜಗತ್ತಿನಲ್ಲಿ, ದುರ್ಲಭಾಃ-ದೊರಕರು ॥೨೫॥

ಕ್ಷೀರಾಬ್ಧಿರಿವ ಸಿಂಧೂನಾಂ ಸುಮೇರುರಿವ ಭೂಭೃತಾಂ
ಗ್ರಹಾಣಾಮಿವ ತಿಗ್ಮಾಂಶುರ್ಮಣೀನಾಮಿವ ಕೌಸ್ತುಭಃ

ದ್ರುಮಾಣಾಮಿವ ಭದ್ರಶ್ರೀರ್ದೇವಾನಾಮಿವ ಶಂಕರಃ
ಗುರುಶ್ಶಿವಃ ಪರಿಶ್ಲಾಘ್ಯೋ ಗುರೂಣಾಂ ಪ್ರಾಕೃತಾತ್ಮನಾಂ

ಸಿಂಧೂನಾಂ-ಸಮುದ್ರಗಳೊಳಗೆ, ಕ್ಷೀರಾಬ್ಧಿರಿವ-ಕ್ಷೀರ ಸಮುದ್ರದ ಮರ್ಯಾದೆಯಲ್ಲಿ, ಭೂಭೃತಾಂ-ಪರ್ವತಂಗಳಿಗೆ, ಸುಮೇರುರಿವಾ-ಮಹಾಮೇರುವಿನ ಮರ್ಯಾದೆಯಲ್ಲಿ, ಗ್ರಹಾಣಾಂ-ನವಗ್ರಹಂಗಳೊಳಗೆ, ತಿಗ್ಮಾಂಶುರಿವ-ಸೂರ್ಯನ ಹಾಗೆ, ಮಣಿನಾಂ-ರತ್ನಂಗಳೊಳಗೆ, ಕೌಸ್ತುಭಯಿವ-ಕೌಸ್ತುಭರತ್ನದ ಮರ್ಯಾದೆಯಲ್ಲಿ, ದ್ರುಮಾಣಾಂ-ವೃಕ್ಷಗಳೊಳಗೆ, ಭದ್ರಶ್ರೀರಿವ-ಶ್ರೀಚಂದನ ಮರ್ಯಾದೆಯಲ್ಲಿ, ದೇವಾನಾಂ-ದೇವತೆಗಳೊಳಗೆ, ಶಂಕರಯಿವ-ಶಿವನ ಮರ್ಯಾದೆಯಲ್ಲಿ, ಶಿವಃ ಪರಃ-ಶಿವತತ್ಪರನಾಗಿರ್ದಂಥ, ಗುರುಃ-ಗುರುವು, ಪ್ರಾಕೃತಾತ್ಮನಾಂ-ಉಳಿದ ಮತಾಂತರಾಭಿಮಾನಿಗಳಾದ, ಗುರೂಣಾಂ-ಗುರುಗಳೊಳಗೆ,ಸ ಶ್ಲಾಘ್ಯಾಃ-ಉತ್ಕೃಷ್ಟನು ॥೨೭॥

೪೦. ಶೀಲಸಂಪಾದನಸ್ಥಲ

ಜಿಜ್ಞಾಸಾ ಶಿವ ತತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ
ನಿರ್ದೇಶ್ಯ ಯೋಗಧಾರ್ಯಾಣಾಂ ತದ್ವಾನ್ಶೀಲೀತಿ ಕಥ್ಯತೇ

ಅನಂತರದಲ್ಲಿ ಶೀಲಸ್ವರೂಪವನು ಹೇಳುತಿರ್ದಪಂ

ನಿರ್ದೇಶಯೋಗಧಾರ್ಯಾಣಾಂ-ನಿರ್ದೇಶಯೋಗದಲ್ಲಿ ತತ್ಪರರಾಗಿರ್ದಂಥವರುಗಳಿಗೆ, ಶಿವತತ್ವಸ್ಯ ಜಿಜ್ಞಾಸಾ-ಶಿವತತ್ವವನು ವಿಚಾರಿಸುವ ಇಚ್ಛೆಯು, ಬುಧೈಃ-ವಿದ್ವಾಂಸರುಗಳಿಂದ, ಶೀಲಮಿತಿ-ಶೀಲವೆಂದು, ಕಥ್ಯತೇ-ಹೇಳಲ್ಪಡುವುದು, ತದ್ವಾನ್-ಆ ಶೀಲವನುಳ್ಳವನು, ಶೀಲೀತಿ-ಶೀಲಿ ಎಂದು, ಕಥ್ಯತೆ-ಹೇಳಲ್ಪಡುವನು ॥೨೮॥

ಶಿವೈ ಶಿವೈಕವಿಜ್ಞಾನೇ ಶಿವಧ್ಯಾನೈಕತಾನತಾ
ಶಿವಪ್ರಾಪ್ತಿ ಸಮುತ್ಕಂಠ ತದ್ಯೋಗೀಶೀಲವಾನ್ಸ್ಮೃತಾಃ

ಶಿವೈಕ ವಿಜ್ಞಾನೇ-ಕೇವಲ ಶಿವಜ್ಞಾನ, ಶಿವಧ್ಯಾನೈಕತಾನತಾ-ಶಿವಧ್ಯಾನದಲ್ಲಿ ದೃಢ ತಾತ್ಪರ್ಯ, ಶಿವಪ್ರಾಪ್ತಿ ಸಮುತ್ಕಂಠ-ಶಿವಸಾಯುಜ್ಯದಲ್ಲಿ ಅಭಿಲಾಷೆಯು, ಶೀಲಿ-ಶೀಲವೆನಿಸುವುದು, ಶೀಲಿ-ಅಂಥ ಶೀಲವನುಳ್ಳವನು, ಶೀಲವಾನ್ಸ್ಮೃತಃ-ಶೀಲಿ ಎನಿಸುವನು ॥೨೯॥

ಶಿವಾದನ್ಯತ್ರ ವಿಜ್ಞಾನೇ ವೈಮುಖ್ಯಂ ಯಸ್ಯ ಸುಸ್ಥಿರಂ
ತಥಾಸಕ್ತಾ ಮನೋವೃತ್ತಿಸ್ಸಮಾಹಾಶ್ಶೀಲಭಾಜನಂ

ಯಸ್ಯ-ಆವವನಿಗೆ, ಶಿವಾದನ್ಯತ್ರ-ಶಿವ ವ್ಯತಿರಿಕ್ತ ವಿಷಯದಲ್ಲಿ, ಸುಸ್ಥಿರಂ-ಸ್ಥಿರವಾಗಿರ್ದಂಥ, ವೈಮುಖ್ಯ-ವಿಮುಖತ್ವವುಂಟು, ತಥಾಶಕ್ತಿ ಮನೋವೃತ್ತಿ-ಶಿವನಲ್ಲಿ ಆಸಕ್ತವಾದ ಮನೋವ್ಯಾಪಾರವನುಳ್ಳಂಥ, ತಮಾಹಾ-ಆವಾತನನು, ಶೀಲಭಾಜನಂ-ಶೀಲವನುಳ್ಳವನೆಂದು, ಆಹು-ಹೇಳುತ್ತಂ ಇಹರು ॥೩೦॥

ಪ್ರತಿವ್ರತಾಯಾ ಯಚ್ಚೀಲಂ ಪ್ರತಿರಾಗಾತ್ಪ್ರಶಸ್ಯತೇ
ತಥಾ ಶಿವಾನುರಾಗೇಣ ಸುಶೀಲ ಭಕ್ತ ಉಚ್ಯತೇ

ಪತಿವ್ರತಾಯಾಃ-ಪತಿವ್ರತೆಯಾದ ಸ್ತ್ರೀಯು, ಶೀಲಂ-ಸಚ್ಚರಿತ್ರವು, ಯತ್-ಆವ ಮರ್ಯಾದೆಯಲ್ಲಿ, ಪತಿರಾಗಾತ್-ಪತಿಯಲ್ಲಿ ಅನುರಾಗ ವಿಶೇಷದಿಂದ, ಪ್ರಶಸ್ಯತೆ-ಪ್ರಶಸ್ತವಾಗುತ್ತಂ ಇದ್ದಿತು, ತಥಾ-ಹಾಂಗೆ, ಶಿವಾನುರಾಗೀ-ಶಿವನಲ್ಲಿ ಪ್ರೀತಿಯನುಳ್ಳಂಥ, ಭಕ್ತಃ-ಭಕ್ತನು, ಸುಶೀಲ ಇತಿ-ಸುಶೀಲಿ ಎಂದು, ಉಚ್ಯತೇ-ಹೇಳಲ್ಪಡುವನು ॥೩೧॥

ಪ್ರಪನ್ನಾರ್ತಿಹರೇದೇವೇ ಪರಮಾತ್ಮನಿ ಶಂಕರೇ
ಭಾವಸ್ಯ ಸ್ಥಿರತಾಯೋಗಶ್ಶೀಲಮಿತ್ಯುಚ್ಯತೇ ಬುಧೈಃ

ಪ್ರಪನ್ನಾರ್ತಿಹರೆ-ಭಕ್ತರದುಃಖವನು ಕೆಡಿಸುವಂಥಾ, ಪರಮಾತ್ಮನಿ-ಪರಬ್ರಹ್ಮ ಸ್ವರೂಪವಾಗಿರ್ದಂಥ, ಶಂಕರೆ-ಶಿವನಲ್ಲಿ, ಭಾವಸ್ಯ-ಮನಸ್ಸಿಗೆ, ಸ್ಥಿರತಃ-ದೃಢವು,

ಶೀಲಮಿತಿ-ಶೀಲವೆಂದು, ಬುಧೈಃ-ವಿದ್ವಾಂಸರುಗಳಿಂದ, ಉಚ್ಯತೆ-ಹೇಳಲ್ಪಡುವುದು ॥೩೨॥

ಪತಿಂ ವಿನಾ ಯಥಾ ಸ್ತ್ರೀಣಾಂ ಸೇಽವಾನ್ಯೇಷಾಂ ವಿಗರ್ಹಿತಾ
ಶಿವಂ ವಿನಾ ತಥಾಽನ್ಯೇಷಾಂ ಸೇವಾ ನಿಂದ ಕೃತಾತ್ಮನಾಂ

ಸ್ತ್ರೀಣಾಂ-ಸ್ತ್ರೀಯರಿಗೆ, ಪತಿಂ ವಿನಾ-ಪುರುಷನಿಲ್ಲದೆ, ಅನ್ಯೇಷಾ-ಉಳಿದವರ, ಸೇವಾ-ಸೇವೆಯು, ವಿಗರ್ಹಿತಾ-ನಿಷಿದ್ಧ, ತಥಾ-ಹಾಂಗೆ, ಕೃತಾತ್ಮನಾಂ-ಬಲ್ಲಂಥವರಿಗೆ, ಶಿವಂ ವಿನಾ-ಶಿವನಲ್ಲದೆ, ಅನ್ಯೇಷಾಂ-ಉಳಿದವರ, ಸೇವಾ-ಸೇವೆಯು, ನಿಂದಾ-ನಿಷಿದ್ಧಮ್ ॥೩೩॥

ಬಹುನಾತ್ರ ಕಿಮುಕ್ತೇನ ಶಿವಜ್ಞಾನೈಕ ನಿಷ್ಠತಾ
ಶೀಲಮಿತ್ಯುಚ್ಯತೇ ಸದ್ಭಿಶ್ಶೀಲವಾಂಸ್ತತ್ಪರೋಮತಃ

ಅತ್ರ-ಇಲ್ಲಿ, ಬಹುನಾ ಉಕ್ತೇನಾ-ಅನೇಕ ಮಾತಿನಿಂದ, ಕಿಂ-ಪ್ರಯೋಜನವೇನು, ಶಿವಜ್ಞಾನೈಕ ನಿಷ್ಠತಾ-ಶಿವಜ್ಞಾನದಲ್ಲಿ ತಾತ್ಪರ್ಯವು, ಶೀಲಮಿತಿ-ಶೀಲವೆಂದು, ಸದ್ಭಿಃ-ಸತ್ಪುರುಷರಿಂದ, ಉಚ್ಯತೆ-ಹೇಳಲ್ಪಡುವುದು, ಶಿವತತ್ಪರಃ-ಶಿವನಲ್ಲಿ ತತ್ಪರನಾಗಿರ್ದಂಥಾತನು, ಶೀಲವಾನ್-ಶೀಲಿಯೆಂದು, ಮತಃ-ಹೇಳಲ್ಪಡುವನು ॥೩೪॥

ಶಿವಾತ್ಮಬೋಧ ನಿರತಃ ಸ್ಥಿರಾಶಯಃ
ಪರಃ ಶಿವಂ ಪ್ರಪನ್ನೋ ಜಗತಾಮಧೀಶ್ವರಂ
ಶಿವೈಕ ನಿಷ್ಠಾಗತ ಶೀಲ ಭೂಷಣಃ
ಶಿವೈಕ್ಯ ವಾನೇಷಹಿ ಕಥ್ಯತೇ ಬುಧೈಃ

ಈ ಪ್ರಕಾರದಲ್ಲಿ ಸವಿಶೇಷವಾಗಿ ಶರಣಸ್ಥಲವನು ನಿರೂಪಿಸಿ ಐಕ್ಯಸ್ಥಲ ಪ್ರಸಂಗವನು ಹೇಳುತ್ತಂ ಇದ್ದಾನು.

ಶಿವಾತ್ಮಕಬೋಧೇ-ಜೀವೇಶ್ವರಾದ್ವೈತದೃಷ್ಟಿಯಲ್ಲಿ, ನಿರತಃ-ತತ್ಪರನಾಗಿರ್ದಂಥ, ಸ್ಥಿರಾಶಯಃ-ಸ್ಥಿರಚಿತ್ತನಾಗಿರ್ದಂಥಾ, ಜಗತಾಂ-ಜಗತ್ತುಗಳಿಗೆ, ಅಧೀಶ್ವರಃ-ಒಡೆಯನಾಗಿರ್ದಂಥ, ಶಿವಂ-ಶಿವನನು, ಪ್ರಪನ್ನಂ-ಭಜಿಸುತ್ತಂ ಇದ್ದಂಥ, ಶಿವೈಕನಿಷ್ಠಾಗತ ಶೀಲಭೂಷಣಃ-ಲಿಂಗನಿಷ್ಠೆಯಿಂದ ಉಂಟಾದ ಶೀಲವನೆ ಭೂಷಣವಾಗುಳ್ಳಂಥ, ಏಷಃ-ಹಿಂದೆ ಹೇಳಿದ ಶರಣರು, ಶಿವೈಕ್ಯವಾನ್-ಶಿವೈಕ್ಯವನ್ನುಳ್ಳಂಥಾವನೆಂದು, ಕಥ್ಯತೆ-ಹೇಳಲ್ಪಡುವನು ॥೩೫॥

ಇತಿ ಶ್ರೀ ವೀರಶೈವ ಸಿದ್ಧಾಂತ ಧರ್ಮನಿರ್ಣಯೇ ಸಿದ್ಧಾಂತಶಿಖಾಮಣೌ
ಶರಣಸ್ಯ ಚತುರ್ವಿಧ ಸ್ಥಲ ಪ್ರಸಂಗೋನಾಮ ತ್ರಯೋದಶ ಪರಿಚ್ಛೇದಃ

ಚತುರ್ದಶಪರಿಚ್ಛೇದ

ಐಕ್ಯಸ್ಥಲ

ಅಗಸ್ತ್ಯ ಉವಾಚ

ತಾಮಸತ್ಯಾಗ ಸಂಬಂಧಾನ್ನಿರ್ದೇಶಚ್ಛೀಲಕಸ್ತಥಾ
ಶರಣಾಖ್ಯಸ್ಯ ಭೂಯೋಽಸ್ಯ ಕಥಮೈಕ್ಯ ನಿರೂಪಣಂ

ತಾಮಸತ್ಯಾಗ ಸಂಬಂಧಾತ್-ತಾಮಸ ವರ್ಜನದಿಂದ, ನಿರ್ದೇಶಃ-ನಿರ್ದೇಶವನು, ಶೀಲಕ-ಶೀಲವನ್ನುಳ್ಳನೆಂದು ನಿರೂಪಿಸಲ್ಪಟ್ಟನು, ಶರಣಾಖ್ಯಸ್ಯ-ಶರಣನೆಂಬ ಹೆಸರನ್ನುಳ್ಳಂಥಾತನು, ಶಿವೇನ-ಶಿವನೊಡನೆ, ಐಕ್ಯನಿರೂಪಣಂ-ಐಕ್ಯಪ್ರಾಪ್ತಿಯು, ಕಥಂ-ಹೆಂಗೆ ಉಂಟಹುದು ॥೧॥

ರೇಣುಕ ಉವಾಚ

ಪ್ರಾಣಲಿಂಗಾದಿ ಯೋಗೇನ ಸುಖಾತಿಶಯಮೇಯುವಾನ್
ಶರಣಾಖ್ಯಶ್ಶಿವೇನೈಕ್ಯ ಭಾವನೈದೈಕ್ಯವಾನ್ಭವೇತ್

ಪ್ರಾಣಲಿಂಗಾದಿ ಯೋಗೇನ-ಪ್ರಾಣಲಿಂಗ ಮೊದಲಾದ ಸಂಬಂಧದಿಂದ, ಸುಖಾತಿಶಯಃ-ಸುಖಾತಿಶಯುವನು, ಮೇಯುವಾನ್-ಐಯ್ದುತ್ತಂ ಇರ್ದಂಥಾ, ಶರಣಾಖ್ಯಃ-ಶರಣನೆಂಬ ಹೆಸರನುಳ್ಳಂಥಾತನೂ, ಶಿವೇನ-ಶಿವನೊಡನೆ, ಐಕ್ಯಭಾವನಾತ್-ಅದ್ವೈತಭಾವನೆಯಿಂದ, ಐಕ್ಯವಾನ್-ಐಕ್ಯವನುಳ್ಳಂಥವನೆಂದು ಹೇಳಲ್ಪಡುವನು ॥೨॥

ಐಕ್ಯ ಸ್ಥಲಮಿದಂ ಪ್ರೋಕ್ತಂ ಚತುರ್ಧಾ ಮುನಿ ಪುಂಗವಃ
ಐಕ್ಯಮಾಚಾರಸಂಪತ್ತಿರೇಕ ಭಾಜನ ಮೇವ ಚ

ಸಹಭೋಜನಮಿತ್ಯೇವಂ ಕ್ರಮಾಲ್ಲಕ್ಷಣ ಮುಚ್ಯತೇ

ಮುನಿಪುಂಗವ-ಎಲೈ ಅಗಸ್ತ್ಯ ಮುನೀಶ್ವರನೆ, ಇದಮೈಕ್ಯಸ್ಥಲಂ-ಐಕ್ಯಸ್ಥಲವು, ಆಚಾರ ಸಂಪತ್ತಿಃ-ಸರ್ವಾಚಾರ ಸಂಪತ್ತುಸ್ಥಲವು, ಏಕಭಾಜನಮೇವಚ-ಏಕ ಭಾಜನ ಸ್ಥಲವು, ಸಹಭೋಜನ ಮಿತಿ-ಸಹಭೋಜನಸ್ಥಲವು, ಯೇವಂ-ಈ ಪ್ರಕಾರದಿಂದ, ಚತುರ್ಧಾ-ನಾಲ್ಕು ಪ್ರಕಾರವಾಗಿ, ಪ್ರೋಕ್ತಂ-ಹೇಳಲ್ಪಟ್ಟಿತು. ಏಷಾಂ-ಇವಕ್ಕೆ, ಕ್ರಮಾತ್-ತರುವಾಯಿಂದ, ಲಕ್ಷಣಂ-ಲಕ್ಷಣವು, ಉಚ್ಯತೇ-ಹೇಳಲ್ಪಡುತ್ತಂ ಇದ್ದಿತು ॥೩॥

ನಿರ್ಧೂತಮಲ ಸಂಬಂಧೋ ನಿಷ್ಕಲಂಕಮನೋಗತಃ
ಶಿವೋಽಹಮಿತಿಭಾವೇನ ನಿರೂಢೋ ಹಿ ಶಿವೈಕ್ಯವಾನ್

ನಿರ್ಧೂತಮಲ ಸಂಬಂಧಃ-ನಿರಾಕರಿಸಲ್ಪಟ್ಟ ಪಾಪವನುಳ್ಳಂಥ, ನಿಷ್ಕಲಂಕ, ಮನೋಗತಿಃ-ಕಾಮಾದಿ ಶೂನ್ಯವಾದ ಮನೋವೃತ್ತಿಯನುಳ್ಳಂಥ, ಶಿವೋಹಮಿತಿ

ಭಾವೇನ-ತಾನೆ ಶಿವನು ಎಂಬ ಭಾವನೆಯುಳ್ಳಂಥಾ, ನಿರೂಢಃ-ದೃಢವಾದವನು, ಶಿವೈಕ್ಯವಾನ್-ಶಿವನಲ್ಲಿ ಐಕ್ಯವನ್ನುಳ್ಳಂಥಾತನು ।।೪।।

ಶಿವೇನೈಕ್ಯಂ ಸಮಾಪನ್ನಶ್ಚಿದಾನಂದ ಸ್ವರೂಪವಾನ್
ನಪಶ್ಯತಿ ಜಗಜ್ಜಾಲಂ ಮಾಯಾಕಲ್ಪಿತವೈಭವಂ

ಶಿವೇನ-ಶಿವನೊಡನೆ, ಐಕ್ಯ ಸಮಾಪನ್ನ ಚಿದಾನಂದ ಸ್ವರೂಪವಾನ್-ಐಕ್ಯ ಪ್ರಾಪ್ತಿಯಿಂದ ಪ್ರಾಪ್ತವಾದ ಚಿದಾನಂದ ಸ್ವರೂಪವನುಳ್ಳಂಥಾತನು, ಮಾಯಾಕಲ್ಪಿತ ವೈಭವಂ-ಮಾಯೆಯಿಂದ ಕಲ್ಪಿಸಲ್ಪಟ್ಟ ವಿಲಾಸವನುಳ್ಳಂಥ, ಜಗಜ್ಜಾಲಂ-ಜಗತ್ತನ್ನೂ, ನ ಪಶ್ಯತಿ-ಕಾಣನು ।।೫।।

ಮಾಯಾಶಕ್ತಿತಿರೋಧಾನಾಚ್ಛಿವೇಭೇದಪ್ರಕಲ್ಪನಾ
ಆತ್ಮನ ಸ್ತ ದ್ವಿನಾಶೇತು ನಾ ದ್ವೈತಾತ್ಕಿಂಚಿದೀಷ್ಯತೇ

ಮಾಯಾಶಕ್ತಿ ತಿರೋಧಾನಾತ್-ಅವಿದ್ಯಾ ಶಕ್ತಿಯಿಂದ ಆವೃತವಾದ ಕಾರಣ, ಶಿವೇ-ಶಿವನಲ್ಲಿ, ಭೇದಪ್ರಕಲ್ಪನಾ-ಪ್ರಪಂಚ ಭೇದವು ಕಲ್ಪಿಸಲ್ಪಟ್ಟಿತ್ತು, ತದ್ವಿಧಾನಾಶಿ-ಅಜ್ಞಾನ ನಾಶದಿಂದ, ಅದ್ವೈತೆ-ಅದ್ವೈತ ಪ್ರಾಪ್ತಿಯಾಗಿರುತ್ತಂ ಇರಲಾಗಿ, ಕಿಂಚಿದಪಿ-ಅಣುಮಾತ್ರ ಭೇದವು, ಈಶ್ಯತೆ-ಶಾಸ್ತ್ರಸಮ್ಮತವಲ್ಲ ।।೬।।

ಚಿತ್ತವೃತ್ತಿ ಸಮಾಲೀನ ಜಗತಶ್ಶಿವಯೋಗಿನಃ
ಚಿದಾನಂದ ಪರಿಸ್ಫೂರ್ತಿ ಮೂರ್ತಿರಿತ್ಯಭಿಧೀಯತೇ

ಜಾಗ್ರತಃ-ನಿದ್ರೆ ಇಲ್ಲದಿರ್ದಂಥ, ಶಿವಯೋಗಿನಃ-ಶಿವಯೋಗೀಶ್ವರನಿಗೆ, ಚಿತ್ತವೃತ್ತಿಃ-ಮನೋವೃತ್ತಿಯು, ಸಮಾಲೀನ-ನಿದ್ರೆಯ ಮಾಡುವನ ಮರ್ಯಾದೆಯಲ್ಲಿ ಲಯವನ್ನೈದುವನು, ಚಿದಾನಂದ ಪರಿಸ್ಫೂರ್ತಿಃ - ಜ್ಞಾನಾನಂದಂಗಳ ಸಂಪೂರ್ಣವು, ಮೂರ್ತಿಃ - ದೇಹವೆಂದು, ಅಭಿಧೀಯತೇ - ಹೇಳಲುಪಡುತ್ತಿಹುದು ।।೭।। *

೪೧. ಐಕ್ಯಸ್ಥಲ

ವಿಷಯಾನಂದ ಕಣಿಕಾನಿಃಸ್ಪೃಹೋ ನಿರ್ಮಲಾಶಯಃ
ಶಿವಾನಂದ ಮಹಾಸಿಂಧು ಮಜ್ಜನಾಧೈಕ್ಯ ಮುಚ್ಯತೇ

ವಿಷಯಾನಂದ ಕಣಿಕಾ ನಿಸ್ಪೃಹಃ-ವಿಷಯಾನಂದಗಳ ತುಂತುರುಗಳಲ್ಲಿ ನಿಸ್ಪೃಹನಾದ, ನಿರ್ಮಲಾಶಯಃ-ನಿರ್ಮಲವಾದ ಆಶಯವನುಳ್ಳಾತನು, ಶಿವಾನಂದ ಮಹಾಸಿಂಧು ಮಜ್ಜನಾತ್-ಶಿವಾನಂದವೆಂಬ ಮಹಾಸಮುದ್ರದಲ್ಲಿ ಮುಳುಗುವದರ ದೆಸೆಯಿಂದ, ಐಕ್ಯಂ-ಐಕ್ಯವೆಂದು, ಉಚ್ಯತೇ-ಹೇಳಲು ಪಡುತ್ತಿಹುದು ।।೮।।

---

* ೭ನೇಯ ಶ್ಲೋಕ ಮತ್ತು ಟೀಕನ್ನು ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ತುಂಬಿದೆ.

ಭೇದಬುದ್ಧಿ ಸಮುತ್ಪನ್ನ ಮೋಹಸಂಸಾರ ಸಾಗರಂ
ಅದ್ವೈತಬುದ್ಧಿ ಪೋತೇನ ಸಮುತ್ತರತಿ ದೇಶಿಕಃ

ಭೇದಬುದ್ಧಿ ಸಮುತ್ಪನ್ನಂ-ಭೇದ ಬುದ್ಧಿಯಿಂದ ಹುಟ್ಟಿದಂಥ, ಮೋಹ ಸಂಸಾರ ಸಾಗರಂ-ಮೋಹದಿಂದ ಪ್ರಾದುರ್ಭವಿಸಿದ ಸಂಸಾರವೆಂಬ ಸಮುದ್ರವನು, ಅದ್ವೈತ ಬುದ್ಧಿ ಪೋತೇನ-ಅಭೇದ ಬುದ್ಧಿಯೆಂಬ ಹರಿಗೋಲಿನಿಂದ, ದೇಶಿಕಃ-ತತ್ತ್ವಜ್ಞಾನಿಯು, ಸಮುತ್ತರತಿ-ದಾಟುವನು ॥೯॥

ಘೋರ ಸಂಸಾರ ಸರ್ಪಸ್ಯ ಭೇದವಲ್ಮೀಕಶಾಯಿನಃ
ಬಾಧಕಂ ಪರಮಾದ್ವೈತಭಾವನಾ ಪರಮೌಷಧಂ

ಭೇದ ವಲ್ಮೀಕ ಶಾಯಿನಃ-ಭೇದಬುದ್ಧಿಯೆಂಬ ಹುತ್ತದಲ್ಲಿ ಮಲಗುತ್ತಂ ಇದ್ದಂಥ, ಘೋರ ಸಂಸಾರ ಸರ್ಪಸ್ಯ-ಭಯಂಕರವಾದ ಸಂಸಾರ ರೋಗನಿಗೆ, ಪರಮಾದ್ವೈತ ಭಾವನಾ-ಶಿವಾದ್ವೈತ ಭಾವನೆಯು, ಬಾಧಕಂ-ಭಾದಕವಾಗಿರ್ದಂಥ, ಪರಮೌಷಧಂ-ಉತ್ತಮ ಔಷಧಿಯು ॥೧೦॥

ಅದ್ವೈತ ಭಾವನಾಜಾತಂ ಕ್ಷಣಮಾತ್ರೇ ಽಪಿ ಯತ್ಸುಖಂ
ತತ್ಸುಖಂ ಕೋಟಿವರ್ಷೇಣ ಪ್ರಾಪ್ಯತೇನೈವ ಭೋಗಿಭಿಃ

ಅದ್ವೈತ ಭಾವನಾಜಾತಂ-ಅದ್ವೈತ ಭಾವನೆಯಿಂದ ಹುಟ್ಟಿದಂಥ, ಯತ್ಸುಖಂ-ಆವುದಾನೊಂದು ಸುಖವು, ಕ್ಷಣಮಾತ್ರೇಣ-ಕ್ಷಣಮಾತ್ರವನುಭವಿಸಲ್ಪಟ್ಟಂಥ, ತತ್ಸುಖಂ-ಆ ಸುಖವು, ಕೋಟಿವರ್ಷೇಣ-ಕೋಟಿ ವರ್ಷದಿಂದ ಭೋಗಿಭಿಃ-ಭೋಗಿಗಳಿಂದ, ನೈವ ಪ್ರಾಪ್ಯತೆ-ಐಯ್ದಲ್ಪಡದು. ॥೧೧॥

ತಸ್ಮಾದದ್ವೈತ ಭಾವಸ್ಯ ಸದೃಶೋ ನಾಸ್ತಿ ಯೋಗಿನಾಂ
ಉಪಾಯೋ ಘೋರ ಸಂಸಾರಮಹಾತಾಪ ನಿವೃತ್ತಯೇ

ತಸ್ಮಾತ್-ಅದು ಕಾರಣ, ಯೋಗಿನಾಂ-ಯೋಗಿಗಳಿಗೆ, ಘೋರ ಸಂಸಾರ ಮಹಾತಾಪ ನಿವೃತ್ತಯೇ-ಭಯಂಕರವಾದ ಸಂಸಾರ ತಾಪವನು ನಿವರ್ತಿಸಲೋಸ್ಕರವಾಗಿ, ಅದ್ವೈತಭಾವಸ್ಯ-ಅದ್ವೈತ ಭಾವನೆಗೆ, ಸದೃಶಃ-ಸರಿಯಾಗಿರ್ದಂಥ, ಉಪಾಯಃ-ಉಪಾಯವು, ನಾಸ್ತಿ-ಇಲ್ಲ ॥೧೨॥

ಪಶುತ್ವಂ ಚ ಪತಿತ್ವಂ ಚ ಮಾಯಾಮೋಹ ವಿಕಲ್ಪಿತಃ
ತಸ್ಮಿನ್ಪ್ರಳಯಮಾಪನ್ನೇಕಃ ಪಶುಃ ಕೋನೋವಾಪತಿಃ

ಪಶುತ್ವಂ-ಸಂಸಾರಾತ್ಮಕವಾದ ಪಶುತ್ವವು, ಪತಿತ್ವಂ ಚ-ಸಂಸಾರ ಪ್ರವರ್ತಕತ್ವ ರೂಪವಾಗಿರ್ದಂಥ ಪತಿತ್ವವು, ಮಾಯಾಮೋಹವಿಕಲ್ಪಿತಂ-ಮಾಯಾ ವಿಲಾಸಾತ್ಮಕವಾಗಿರ್ದಂಥದ್ದಲ್ಲದೆ ಸತ್ಯವಲ್ಲ, ತಸ್ಮಿನ್-ಆ ಮಾಯಾ ಮೋಹವು, ಪ್ರಳಯಂ-ಪ್ರಳಯವನು, ಆಪನ್ನೇ-ಐಯ್ದುತ್ತಂ ಇರಲಾಗಿ, ಕಃ ಪಶುಃ-ಪಶುವಾರು, ಕೋನುವಾ-ಆರು ತಾನು, ಪತಿಃ-ಪತಿಯು ॥೧೩॥

ಬ್ರಹ್ಮಾಂಡಬುದ್ಬುದೋದ್ಭೋಧವಿಜೃಂಭೀ ತತ್ತ್ವ ವೀಚಿಮಾನ್
ಮಾಯಾಸಿಂಧುರ್ಲಯಂ ಯಾತಿ ಶಿವೈಕ್ಯ ವಡಬಾನಲೇ

ಬ್ರಹ್ಮಾಂಡ-ಬ್ರಹ್ಮಾಂಡವೆಂಬ, ಬುದ್ಬುದೋದ್ಭೋಧ-ಬುದ್ಬುದಜಾತಿ ಭೇದಗಳನ್ನುಳ್ಳಂಥ, ತತ್ತ್ವವೀಚಿಮಾನ್-ಚತುರ್ವಿಂಶತಿ ತತ್ವವೆಂಬ ತೆರೆಗಳನುಳ್ಳಂಥ, ಮಾಯಾಸಿಂಧುಃ-ಮಾಯೆಯೆಂಬ ಸಮುದ್ರವು, ಶಿವೈಕ್ಯವಡಬಾನಲೇ-ಶಿವೈಕ್ಯವೆಂಬ ವಡಬಾಗ್ನಿಯಲ್ಲಿ, ಲಯಂ-ಲಯವನು, ಯಾತಿ-ಐಯ್ದುತ್ತಂ ಇಹುದು ॥೧೪॥

ಅಜ್ಞಾನ ತಿಮಿರೋದ್ರಿಕ್ತಾ ಕಾಮರಕ್ಷಃ ಕ್ರಿಯಾಕರೀ
ಸಂಸಾರಕಾಲರಾತ್ರಿಸ್ತು ನಶ್ಯೇದದ್ವೈತಭಾನುನಾ

ಅಜ್ಞಾನ-ಅಜ್ಞಾನವೆಂಬ, ತಿಮಿರ-ಅಂಧಕಾರದಲ್ಲಿ, ಉದ್ರಿಕ್ತ-ವರ್ತಿಸುತ್ತಂ ಇದ್ದ ಕಾಮಾದಿಗಳೆಂಬ, ರಕ್ಷಃ-ರಾಕ್ಷಸರುಗಳ, ಕ್ರಿಯಾ-ಸಂಚಾರಕ್ಕೆ, ಆಕರಂ-ಆವಾಸ ವಾಗಿರ್ದಂಥ, ಸಂಸಾರಕಾಳರಾತ್ರಿಃ-ಸಂಸಾರವೆಂಬ ಕೃಷ್ಣಪಕ್ಷದ ರಾತ್ರೆಯು, ಅದ್ವೈತಭಾನುನಾ-ಅದ್ವೈತಬುದ್ಧಿಯೆಂಬ ಸೂರ್ಯನಿಂದ, ನಶ್ಯತಿ-ಕೆಡುವುದು ॥೧೫॥

೪೨. ಸರ್ವಾಚಾರಸಂಪತ್ತಿಸ್ಥಲ

ಶಿವೈಕ್ಯಭಾವನಾಪನ್ನ ಶಿವತ್ವೋ ದೇಹವಾನಪಿ
ದೇಶೀಕೋ ಹಿ ನ ಲಿಪ್ಯೇತ ಸ್ವಾಚಾರೈಸ್ಸೂತಕಾದಿಭಿಃ

ಶಿವೈಕ್ಯಭಾವನಾಪನ್ನ ಶಿವತ್ವಃ-ಶಿವೈಕ್ಯ ಭಾವನೆಯಿಂದ ಸಂಪನ್ನನಾದ ಶಿವತ್ವವನುಳ್ಳಂಥ, ದೇಶಿಕಃ-ಭಕ್ತನು, ದೇಹವಾನಪಿ-ದೇಹವುಳ್ಳವನಾದರೂ, ಸೂತಕಾದಿಭಿಃ-ಸೂತಕ ಮೊದಲಾಗಿರ್ದಂಥ, ಸ್ವಾಚಾರೈಃ-ತಮ್ಮ ಆಚಾರಗಳಿಂದ, ನ ಲಿಪ್ಯತ-ಲೇಪಿಸಲ್ಪಡನು ॥೧೬॥

ಶಂಭೋರೇಕತ್ವಭಾವೇನ ಸರ್ವತ್ರ ಸಮದರ್ಶನಃ
ಕುರ್ವನ್ನಪಿ ಮಹತ್ಕರ್ಮನ್ನತತ್ಫಲಮವಾಪ್ನುಯಾತ್

ಶಂಭೋರೇಕತ್ವಭಾವೇನ-ಶಿವನ ಅದ್ವೈತ ಭಾವನೆಯಿಂದ, ಸರ್ವತ್ರಸಮ ದರ್ಶನಃ-ಸಮಸ್ತ ವಸ್ತುಗಳಲ್ಲಿ ಸಮಸ್ತ ಬುದ್ಧಿಯನುಳ್ಳಂಥಾತನು ಮಹತ್ಕರ್ಮ-ಅನೇಕ ಕರ್ಮವನು, ಕುರ್ವನ್ನಪಿ-ಮಾಡುತ್ತಂ ಇರ್ದಂಥಾತನಾದರೂ, ತತ್ಫಲಂ-ಆ ಕರ್ಮಫಲವನು, ನಾಪ್ನುಯಾತ್-ಐಯ್ದನು ॥೧೭॥

ಶಿವಾದ್ವೈತಪರಿಜ್ಞಾನೇ ಸ್ಥಿರೇಸತಿಮನಸ್ವಿನಾಂ
ಕರ್ಮಣಾ ಕಿಂ ನು ಭಾವ್ಯಂಸ್ಯಾದಕೃತೇನ ಕೃತೇನ ವಾ

ಮನಸ್ವಿನಾಂ-ಜಿತೇಂದ್ರಿಯರಾಗಿರ್ದಂಥವರಿಗೆ, ಶಿವಾದ್ವೈತ ಪರಿಜ್ಞಾನೇ-ಶಿವಾದ್ವೈತ ಬುದ್ಧಿಯು, ಸ್ಥಿರೇಸತಿ-ಸ್ಥಿರವಾದರೆ, ಅಕೃತೇನ-ಮಾಡದೆ ಇಹುದರಿಂದ, ಕೃತೇನ-ಮಾಡುವುದರಿಂದ, ತಾನು, ಕಿಂಭಾವ್ಯೈಃ-ಆವ ಪ್ರಯೋಜನವುಂಟಹುದು ॥೧೮॥

ಶಿವಜ್ಞಾನಸಮುತ್ಪನ್ನಂ ಸ್ಥಿರವೈರಾಗ್ಯ ಲಕ್ಷಣಂ
ಸ್ವಕರ್ಮಣಾವಲಿಪ್ಯೇತ ಪದ್ಮಪತ್ರಮಿವಾಂಭಸಾ

ಸ್ಥಿರ ವೈರಾಗ್ಯ ಲಕ್ಷಣಂ-ದೃಢ ವಿರಕ್ತಿಯು ಕುರುಹಾಗುಳ್ಳಂಥ, ಶಿವಜ್ಞಾನಂ-ಶಿವ ಜ್ಞಾನವು ಸಮುತ್ಪನ್ನಂ-ಆವವನಿಗೆ ಹುಟ್ಟಿತ್ತು, ಸಃ-ಆತನು, ಸ್ವಕರ್ಮಣಾ-ತನ್ನ ಪಾಪ ಪುಣ್ಯಂಗಳಿಂದ, ನ ಲಿಪ್ಯತೇ-ಸೋಕಲ್ಪಡನು, ಅಲ್ಲಿ ದೃಷ್ಟಾಂತ, ಅಂಭಸಾ-ಉದಕ ದಿಂದ, ಪದ್ಮಪತ್ರಮಿವಾ-ಕಮಲ ಪತ್ರದ ಮರ್ಯಾದೆಯಲ್ಲಿ ॥೧೯॥

ಗಚ್ಛನ್ ತಿಷ್ಠನ್ ಸ್ವಪನ್ನಾ ಜಾಗ್ರದುಪನ್ಮಿಷಂ ನಪಿ
ಶಿವಜ್ಞಾನ ಸಮಾಯೋಗಾಚ್ಛಿವಪೂಜಾಪರಃ ಸದಾ

ಯದ್ಯಚ್ಚಿಂತಯತೇ ಯೋಗಿ ಮನಸಾ ಶುದ್ಧಭಾವನಃ
ತತ್ತಚ್ಛಿವಮಯತ್ವೇನ ಶಿವಜ್ಞಾನಮುದಾಹೃತಂ

ಗಚ್ಛಂ-ನಡೆವಂಥ, ತಿಷ್ಠನ್-ಕುಳ್ಳಿರುವಂಥ, ಸ್ವಪ್ನನ್-ಮಲಗಿರ್ದಂಥ, ಜಾಗ್ರತ್-ಎಚ್ಚತ್ತಿದ್ದಂಥ, ಉನ್ಮಿಷನ್-ಎವೆ ಹಳಚುತಿರ್ದಂಥ, ನಿಮಿಷನ್-ಕಣ್ಣು ಮುಚ್ಚುತಂ ಇರ್ದಂಥ, ಸಮಯೆ-ಸಮಯದಲ್ಲಿಯು, ಶಿವಜ್ಞಾನ ಸಮಾಯೋಗಿ-ಶಿವಜ್ಞಾನಯೋಗ ವನುಳ್ಳಂಥ, ಶಿವಪೂಜಾಪರಃ-ಶಿವ ಪೂಜೆಯಲ್ಲಿ ತತ್ಪರನಾಗಿರ್ದಂಥ, ಶುದ್ಧ ಭಾವನಃ-ಶುದ್ಧವಾದ ಭಾವನೆಯನುಳ್ಳಂಥ, ಯೋಗಿ-ಶಿವಯೋಗಿಯು, ಯದ್ಯತ್-ಆವಾವ ವಸ್ತುವನು, ಚಿಂತಯೇತ್ - ವಿಚಾರಿಸುತಂ ಇರ್ದಂಥವನು, ತತ್ತತ್-ಆಯಾಯಾ ವಸ್ತುವನು, ಶಿವಮಯತ್ವೇನ-ಶಿವಾತ್ಮಕವಾಗಿ ಅರಿದರೆ, ತತ್-ಆ ಜ್ಞಾನವು, ಶಿವಜ್ಞಾನಮುದಾಹೃತಂ-ಶಿವಜ್ಞಾನವೆಂದು ಹೇಳಲ್ಪಡುವುದು ॥೨೧॥

ಯತ್ಕಿಂಚಿದ್ಗದಿತಂ ಲೋಕೇ ಸ್ವೇಚ್ಛಯಾ ಶಿವಯೋಗಿನಾ
ಶಿವಸ್ತುತಿರಿದಂ ಸರ್ವಂ ಯಸ್ಮಾತ್ಸರ್ವಾತ್ಮಕಶ್ಶಿವಃ

ಶಿವಯೋಗಿನಾಂ-ಶಿವಯೋಗಿಗಳು, ಸ್ವೇಚ್ಛಯಾ-ತಮ್ಮಿಚ್ಛೆಯಿಂದ, ಯತ್ಕಿಂಚಿತ್-ಆವುದಾನೊಂದು ಕಾರಣ, ಗದಿತಂ-ನುಡಿಯಲ್ಪಟ್ಟ ವಾಕ್ಯವುಂಟು, ಇದಂ ಸರ್ವಂ-ಈ ಸಮಸ್ತವು, ಶಿವಸ್ತುತಿಃ-ಶಿವ ಸ್ತೋತ್ರವು, ಯಸ್ಮಾತ್-ಆವುದಾನೊಂದು ಕಾರಣ, ಶಿವಃ-ಶಂಕರನು, ಸರ್ವಾತ್ಮಕಃ-ಸರ್ವ ಸ್ವರೂಪನು ॥೨೨॥

ಯದ್ಯತ್ಪಶ್ಯತಿ ಸಾಮೋದಂ ವಸ್ತು ಲೋಕೇಷು ದೇಶಿಕಃ
ಶಿವದರ್ಶನ ಸಂಪತ್ತಿಸ್ತತ್ರತತ್ರ ಮಹಾತ್ಮನಃ

ದೇಶಿಕಃ-ಶಿವಯೋಗೀಶ್ವರನೂ, ಲೋಕೇಷು-ಲೋಕಂಗಳಲ್ಲಿ, ಯದ್ಯದ್ವಸ್ತು-ಆವಾವ ವಸ್ತುವನೂ, ಸಾಮೋದಂ-ಸಂತೋಷಪೂರ್ವಕವಾಗಿ, ಪಶ್ಯತಿ-ನೋಡುತ್ತಂ ಇದ್ದಾನು, ತತ್ರತತ್ರ-ಅಲ್ಲಿ ಅಲ್ಲಿ, ಮಹಾತ್ಮನಃ- ಮಹಾಪುರುಷರುಗಳಿಗೆ, ಶಿವದರ್ಶನಂ, ಸಂಪತ್ತಿಃ-ಶಿವದರ್ಶನವುಂಟಹುದು ॥೨೩॥

ಯಾಯಾ ಚೇಷ್ಟಾ ಸಮುತ್ಪನ್ನಾ ಜಾಯತೇ ಶಿವಯೋಗಿನಾಂ
ಸಾಸಾ ಪೂಜಾ ಮಹೇಶಸ್ಯ ಸರ್ವದಾ ತದ್ಗತಾತ್ಮನಾಂ ॥

ಶಿವಯೋಗಿನಾಂ-ಶಿವಲಿಂಗೈಕ್ಯರುಗಳಿಗೆ, ಯಾಯಾಚೇಷ್ಟಾ-ಆವಾವ ಶರೀರ ವ್ಯಾಪಾರವು, ಸಮುತ್ಪನ್ನಾ ಜಾಯತೇ-ಉಂಟಾಗುತ್ತಂ ಇದ್ದಿತು. ಸಾಸಾ-ಆ ಆ ಚೇಷ್ಟೆಯು, ಮಹೇಶಸ್ಯ-ಶಿವನ, ಪೂಜಾ-ಪೂಜೆಯೆನಿಸುವುದು ॥೨೪॥

ಸುಕೃತೀದುಃಕೃತೀವಾಪಿ ಬ್ರಾಹ್ಮಣೋವಾಂsತ್ಯಜೋsಪಿವಾ
ಶಿವೈಕಭಾವಯುಕ್ತಾನಾಂ ಸದೃಶೋಭವತಿಧೃವಂ

ಸುಕೃತೀ-ಸುಕೃತಿಯು, ದುಃಕೃತೀವಾ-ಪಾಪಿತಾನು, ಬ್ರಾಹ್ಮಣಃ-ಬ್ರಾಹ್ಮಣತಾನು, ಅಂತ್ಯಜೋ-ಚಾಂಡಾಲನಾದರೂ, ಶಿವೈಕ್ಯಭಾವಯುಕ್ತಾನಾಂ-ಶಿವಭಾವನೆಯೊಡನೆ ಕೂಡಲ್ಪಟ್ಟಂಥವರುಗಳಿಗೆ, ಸದೃಶೋಭವೇತ್-ಸಮಾನರಹರೆಂದು, ಧೃವಂ-ನಿಶ್ಚಯವು ॥೨೫॥

ವರ್ಣಾಶ್ರಮ ಸದಾಚಾರ್ಯೈರ್ಜ್ಞಾನಿನಾಂ ಕಿಂ ಪ್ರಯೋಜನಂ
ಲೌಕಿಕಸ್ತು ಸದಾಚಾರಃ ಫಲಾಭಾವೇಪಿ ಭಾವ್ಯತೇ

ಜ್ಞಾನಿನಾಂ-ಜ್ಞಾನಿಗಳಿಗೆ, ವರ್ಣಾಶ್ರಮ ಸದಾಚಾರಃ-ವರ್ಣಾಶ್ರಮಾಚಾರಂಗಳಿಂದ, ಕಿಂ-ಪ್ರಯೋಜನವೇನು, ಲೌಕಿಕಸ್ತುಸಮಾಚಾರ್ಯೈಃ-ಲೌಕಿಕ ಧರ್ಮಾಚಾರಗಳಿಂದ, ಫಲಂಭಾವೇಪಿ-ಫಲವ ಬಯಸುವವರಿಗೆ, ಭಾವ್ಯತೇ-ಆಚರಿಸಲ್ಪಡುತ್ತಿಹುದು ॥೨೬॥

ನಿರ್ದಗ್ಧಕರ್ಮಬೀಜಸ್ಯ ನಿರ್ಮಲಜ್ಞಾನ ವಹ್ನಿನಾ
ದೇಹಿವದ್ಭಾಸಮಾನಸ್ಯ ದೇಹಯಾತ್ರಾತು ಲೌಕಿಕೀ

ನಿರ್ಮಲಜ್ಞಾನವಹ್ನಿನಾ-ನಿರ್ಮಲವಾಗಿರ್ದಂಥ ಜ್ಞಾನಾಗ್ನಿಯಿಂದ, ನಿರ್ದಗ್ಧಕರ್ಮ ಬೀಜಸ್ಯ-ದಹಿಸಲ್ಪಟ್ಟ ಕರ್ಮಬೀಜವನುಳ್ಳಂಥ, ದೇಹಿವದ್ಭಾಸಮಾನಸ್ಯ-ಶರೀರಿಯ ಮರ್ಯಾದೆಯಲ್ಲಿ ಒಪ್ಪುತ್ತಂ ಇರ್ದಂಥಾತನ, ದೇಹಯಾತ್ರ-ಶರೀರ ಧಾರಣವು, ಲೌಕಿಕೀ-ಲೋಕಾನುಗ್ರಹಾರ್ಥವಹುದು ॥೨೭॥

೪೩. ಏಕಭಾಜನಸ್ಥಲ

ಸ್ವಸ್ಯ ಸರ್ವಸ್ಯ ಲೋಕಸ್ಯ ಶಿವಸ್ಯಾದ್ವೈತದರ್ಶನಾತ್
ಏಕಭಾಜನ ಯೋಗೇನ ಪ್ರಸಾದೈಕ್ಯಮಿತಿಸ್ಥಿತಿಃ

ಸ್ವಸ್ಯ-ತನಗೆ, ಸರ್ವಸ್ಯ ಲೋಕಸ್ಯ-ಸಮಸ್ತ ಜಗತ್ತಿಗೆ, ಶಿವಸ್ಯ-ಶಿವನಿಗೂ, ಅದ್ವೈತ ದರ್ಶನಾತ್-ಅದ್ವೈತ ಬುದ್ಧಿಯಿಂದ, ಏಕಭಾಜನ ಯೋಗೇನ-ಏಕಭಾಜನ ಯೋಗದಿಂದ, ಪ್ರಸಾದೈಕ್ಯಮಿತಿಸ್ಥಿತಿಃ-ಪ್ರಸಾದಯೋಗವಹುದು ॥೨೮॥

ವಿಶ್ವಂ ಶಿವಮಯಂಚೇತಿ ಸದಾ ಭಾವಯತೋಧಿಯಾ
ಶಿವೈಕಭಾಜನಾತ್ಮತ್ವಾದೇಕ ಭಾಜನಮುಚ್ಯತೇ

ವಿಶ್ವಂ-ಜಗತ್ತು, ಶಿವಮಯಂ-ಶಿವಾತ್ಮಕವೆಂದು, ಸದಾ-ಆವಾಗಲೂ ಧಿಯಾ-ಬುದ್ಧಿಯಿಂದ, ಭಾವಯುತಃ-ಭಾವಿಸುತ್ತಂ ಇದ್ದಂಥಾತನು, ಶಿವೈಕ್ಯ ಭಾಜನಾತ್ಮತ್ವಾತ್-ಶಿವನ ಕೂಡೆ ಏಕದಾರ ಸ್ವರೂಪವಾದ ಕಾರಣ, ಏಕಭಾಜನಃ-ಏಕಭಾಜನವೆಂದು, ಉಚ್ಯತೆ-ಹೇಳಲ್ಪಡುವನು ॥೨೯॥

ಶಿವೇ ವಿಶ್ವಮಿದಂ ಸರ್ವಂ ಶಿವಸ್ಸರ್ವತ್ರ ಭಾಸತೇ
ಆಧಾರಾಧೇಯ ಭಾವೇನ ಶಿವಸ್ಯ ಜಗತಸ್ಥಿತಿಃ

ಸರ್ವಂ-ಸಮಸ್ತವಾಗಿರ್ದಂಥ, ಇದಂ ವಿಶ್ವಂ-ಈ ಜಗತ್ತು, ಶಿವೆ-ಶಿವನಲ್ಲಿ ಭಾಸತಂ-ಒಪ್ಪುತಂ ಇಹುದು, ಶಿವಃ-ಶಿವನು, ಸರ್ವತ್ರ-ಜಗತ್ತಿನಲ್ಲಿ, ಅಧಿಷ್ಠಾನ-ಒಪ್ಪುತಂ ಇಹನು, ಆಧಾರಾಧೇಯಭಾವೇನ-ಅಧಿಷ್ಠಾನಾಧಿಷ್ಠೇಯ ಭಾವದಿಂದ, ಶಿವಸ್ಯ-ಶಿವನಿಗೂ, ಜಗತಃ-ಜಗತ್ತಿಗೂ, ಸ್ಥಿತಿಃ-ಅವಿನಾಭಾವಸಂಬಂಧ ॥೩೦॥

ಚಿದೇವಭಾವನಂ ಯಸ್ಯಾ ಚಿತ್ತವೃತ್ತೇ ಶಿವಾತ್ಮಕಂ
ನಾನ್ಯತ್ತಸ್ಯ ಕಿಮೇತೇನ ಮಾಯಾಮೂಲೇನ ವಸ್ತುನಾ

ಯಸ್ಯ-ಆವನಾನೊಬ್ಬನ, ಚಿತ್ತವೃತ್ತೇಃ-ಮನೋವರ್ತನೆಗೆ, ಚಿದೇವ-ಜ್ಞಾನವೆ, ಶಿವಾತ್ಮಕಂ-ಶಿವಸ್ವರೂಪವಾಗಿರ್ದಂಥ, ಭಾಜನಂ-ಭಾಜನವು, ನಾನ್ಯತ್-ಮತ್ತೊಂದು ವಿಷಯವಲ್ಲ, ತಸ್ಯಾ-ಆತನಿಗೆ, ಮಾಯಾಮೂಲೇನ-ಮಾಯಾಜನ್ಯವಾಗಿರ್ದಂಥ, ಏತೇನ ವಸ್ತುನಾ-ಈ ವಿಷಯಗಳಿಂದ, ಕಿಂ-ಏನು ಪ್ರಯೋಜನವು ॥೩೧॥

ಚಿತ್ಪ್ರಕಾಶಯತೇ ವಿಶ್ವಂ ತದ್ವಿನಾನಾಸ್ತಿ ವಸ್ತುತಃ
ಅತಚ್ಚಿದೇಕ ನಿಷ್ಠಾನಾಂ ಕಿಂ ಮಾಯಾ ಪರಿಕಲ್ಪಿತ್ಯೆಃ

ವಿಶ್ವಂ-ಜಗತ್ತು, ಚಿತ್-ಚೈತನ್ಯವು, ಪ್ರಕಾಶಯತೇ-ಬೆಳಗುತ್ತಂ ಇದ್ದಿತು, ಅತಃ-ಅದು ಕಾರಣ, ತದ್ವಿನಾ-ಆ ಚೈತನ್ಯವನು ಬಿಟ್ಟು, ವಸ್ತುತಃ-ಪರಮಾರ್ಥವಾಗಿ, ನಾಸ್ತಿ-ಇಲ್ಲ, ಅತಃ-ಅದು ಕಾರಣ, ಚಿದೇಕನಿಷ್ಠಾನಾಂ-ಚಿತ್ತಿನಲ್ಲಿ ಇರಿಸಲ್ಪಟ್ಟಂಥ ಚಿತ್ತವನುಳ್ಳಂಥಾ ವರುಗಳಿಗೆ, ಮಾಯಾಪರಿಕಲ್ಪಿತ್ಯೆಃ-ಮಾಯಾಕಲ್ಪಿತವಾಗಿರ್ದಂಥಾ ವಿಷಯಂಗಳಿಂದ, ಕಿಂ-ಪ್ರಯೋಜವೇನು ॥೩೨॥

ವೃತ್ತಿಶೂನ್ಯೇ ಸ್ವಹೃದಯೇ ಶಿವೇಲೀನೇ ನಿರಾಕುಲೇ
ಯಸ್ಸದಾ ವರ್ತತೇಯೋಗೀ ಸಮುಕ್ತೋನಾತ್ರ ಸಂಶಯಃ

ನಿಸ್ತರಂಗೇ-ಷಡೂರ್ಮೆ ರಹಿತವಾಗಿರ್ದಂಥಾ, ಚಿದಂಬೋಧೌ-ಜ್ಞಾನ ಸಾಗರದಲ್ಲಿ, ವಿಲೀನಸ್ಯ-ಏಕೀಭೂತನಾಗಿರ್ದಂಥ, ಮಹಾತ್ಮನಃ-ಮಹಾಶಿವಯೋಗಿಗೆ, ಕುತೋ ಭಾವಃ-ವಿಕಾರವೆತ್ತಣದು, ಕುತಶ್ಚಿತ್ತಂ - ಚಿತ್ತವೆತ್ತಣದು, ಕುತಃ ಸಂಕಲ್ಪವಾಸನಾ-ಸಂಕಲ್ಪ ವಾಸನೆ ಎತ್ತಣದು ॥೪೭॥

ಅಹಂಬ್ರಹ್ಮೇತಿ ಭಾವಸ್ಯ ವಸ್ತುದ್ವಯ ಸಮಾಶ್ರಯಃ
ಏಕೀಭೂತಸ್ಯ ಚಿದ್ವ್ಯೋಮ್ನಿ ತದಭಾವೋ ವಿನಿಶ್ಚಿತಃ

ಅಹಂಬ್ರಹ್ಮೇತಿ ಭಾವಸ್ಯ-ತಾನೆ ಬ್ರಹ್ಮವೆಂಬ ಭಾವನೆಯು, ವಸ್ತುದ್ವಯ ಸಮಾಶ್ರಯಃ-ಜೀವೇಶ್ವರರೆಂಬ ಎರಡು ವಸ್ತುವನು ಆಶ್ರಯಿಸುವುದು, ಚಿದ್ವ್ಯೋಮ್ನಿ-ಜ್ಞಾನಾಕಾಶದಲ್ಲಿ, ಏಕೀಭೂತಸ್ಯ-ಏಕವಾಗಿರ್ದಂಥಾತಂಗೆ, ತದಭಾವಂ-ಎರಡು ವಸ್ತುಗಳೆಂಬ ಭೇದ ಆವವು, ವಿನಿಶ್ಚಿತಃ-ಶಾಸ್ತ್ರಂಗಳಲ್ಲಿ ನಿಶ್ಚಿತವಾಯಿತ್ತು ॥೪೮॥

ಏಕ ಭಾವಸ್ಯ ರೂಢಸ್ಯ ನಿಃಕಳಂಕೇ ಚಿದಂಬರೇ
ಕ್ವಜಾತಿವಾಸನಾಯೋಗಃ ಕ್ವದೇಹಿತ್ವಂ ಪರಿಭ್ರಮಃ

ನಿಃಕಳಂಕ-ಕಳಂಕರಹಿತನಾಗಿರ್ದಂಥ, ಚಿದಂಬರೇ-ಜ್ಞಾನಾಕಾಶದಲ್ಲಿ, ರೂಢಸ್ಯ-ಸ್ಥಿರವಾಗಿರ್ದಂಥ, ಏಕಭಾವಸ್ಯ-ಐಕ್ಯ ಭಾವನೆಯುಳ್ಳಂಥಾತಂಗೆ, ಕ್ವಜಾತಿ ವಾಸನಾಯೋಗಃ-ಬ್ರಾಹ್ಮಣ್ಯಾದಿ ಜಾತಿಯೋಗವೆತ್ತಣದು, ಕ್ವದೇಹಿತ್ವ ಪರಿಭ್ರಮಃ-ದೇಹಿ ಎಂಬ ಭ್ರಮೆ ತಾನೆತ್ತಣದು ॥೪೯॥

ಅವಿಶುದ್ಧೇ ವಿಶುದ್ಧೇವಾ ಸ್ಥಲೇ ದೀಪ್ತಿರ್ಯಥಾ ರವೇಃ
ಪ್ರವರ್ತತೇ ತಥಾದ್ವೈತಿ ಸರ್ವತ್ರ ಸಮವೃತ್ತಿಮಾನ್

ರವೇರ್ದೀಪ್ತಿಃ - ಸೂರ್ಯನ ಕಾಂತಿಯು, ಅವಿಶುದ್ಧೇ - ಅಶುದ್ಧವಾದರು, ವಿಶುದ್ಧೇವಾ - ಶುದ್ಧವಾದರೂ, ಸ್ಥಲೇ - ಸ್ಥಲದಲ್ಲಿ, ಯಥಾ - ಹೆಂಗೆ, ಪ್ರವರ್ತತೇ - ಪ್ರವರ್ತಿಸುತ್ತಂ ಇಹುದು, ತಥಾ - ಹಾಂಗೆ, ಅದ್ವೈತಿ- ಬ್ರಹ್ಮಾದ್ವೈತವನ್ನುಳ್ಳಂಥಾತನು, ಸರ್ವತ್ರ - ಎಲ್ಲಿಯೂ, ಸಮವೃತ್ತಿಮಾನ್-ಸಮವಾಗಿ ವರ್ತಿಸುತ್ತಂ ಇಹನು ।।೫೦।।

ನ ಭಿಭೇತಿ ಜರಾ ಮೃತ್ಯುರ್ನಚಕ್ಷುಧೋ ಭಯಂ ವ್ರಜೇತ್
ಪರಿಪೂರ್ಣೋ ನಿಜಾನಂದ ಸಮಾಸ್ವಾದಾನ್ಮಹಾಸುಖಿಃ

ನಿಜಾನಂದ ಸಮಾಸ್ವಾದಾತ್ ಬ್ರಹ್ಮಾನಂದದ ರಸದ ಆಸ್ವಾದದ ದೆಸೆಯಿಂದ, ಪರಿಪೂರ್ಣಃ-ಪೂರ್ಣನಾಗಿರ್ದಂಥ ಮಹಾಸುಖಿಃ-ಅತ್ಯಂತ ಸುಖಿಯಾಗಿರ್ದಂಥಾತನು, ಜರಾಮೃತ್ಯೋಃ-ಜರೆ ಮರಣಗಳಿಂದ, ನ ಭಿಭೇತಿ-ಬೆದರನು, ಕ್ಷುಧೋಭಯಂ-ಕ್ಷುತ್ತಿಸ ಬಾಧೆಯನು, ನ ವ್ರಜೇತ್-ಐಯ್ದನು ।।೫೧।।

೩೩. ನಷ್ಟಾಗಮಸ್ಥಲ

ಭೇದಶೂನ್ಯೇ ಮಹಾಭೋದೇ ಜ್ಞಾತ್ರಾದಿತ್ರಯ ಹೀನತಃ
ಜ್ಞಾನಸ್ಯ ನಷ್ಟಭಾವೇನ ನಷ್ಟಾಗಮಮಿಹೋಚ್ಯತೇ

ನಷ್ಟಾಗಮಸ್ಥಲವನು ನಿರೂಪಿಸುತಂ ಇದ್ದಾನು.

ಭೇದಶೂನ್ಯ ಮಹಾಬೋಧೆ-ಭೇದಶೂನ್ಯವಾಗಿರ್ದಂಥ ತತ್ವಜ್ಞಾನವಾಗುತ್ತಂ ಇರಲಾಗಿ, ಜ್ಞಾತ್ರಾದಿತ್ರಯ ಹೀನತಃ-ಜ್ಞಾತೃ ಜ್ಞೇಯ ಜ್ಞಾನವೆಂಬ ಮೂರುಹೀನ ವಹುದರಿಂದ, ಜ್ಞಾನಸ್ಯ ನಷ್ಟ ಭಾವೇನ-ಜ್ಞಾನವೆ ನಿರಾಲಂಬನವಾಗಿ ನಷ್ಟವಹುದರಿಂದ, ನಷ್ಟಾಗಮಮಿಹೋಚ್ಯತೇ-ಇದು ನಷ್ಟಾಗಮಸ್ಥಲವೆಂದು ಹೇಳಲ್ಪಡುವುದು ।।೫೨।।

ಏಕೀಭೂತೇ ನಿಜಾಕಾರೇ ಸ್ವಸಿದ್ಧೇ ನಿಃಪ್ರಪಂಚಿತೇ
ಕೇನ ಕಿಂ ವೇದನೀಯಸ್ಯಾ ದ್ವೈ ಸಾಕಃ ಪ್ರತಿಭಾಸತೇ

ನಿಃಪ್ರಪಂಚಿತೇ-ಪ್ರಪಂಚ ಶೂನ್ಯನಾಗಿರ್ದಂಥಾ, ಸ್ವಸಿದ್ಧೇ-ಸ್ವಪ್ರಕಾಶವಾಗಿರ್ದಂಥಾ, ನಿಜಾಕಾರೇ-ತನ್ನ ಸ್ವರೂಪವು, ಏಕೀಭೂತೇ-ಒಂದಾಗಿ ಪ್ರಾಪ್ತವಾಗುತ್ತಂ ಇರಲಾಗಿ, ಕೇನ-ಆವುದರಿಂದ ಆವ ವಸ್ತುವು, ವೇದನೀಯಸ್ಯಾತ್-ಅರಿಯಲ್ಪಡುವುದು, ವೇತ್ತವಾ-ಅರಿವಂಥಾತನು, ಕಃ-ಆವವನು, ಪ್ರತಿಭಾಸತೇ-ಒಪ್ಪುತಂ ಇಹನು ।।೫೩।।

ಮಹಾಸತ್ತಾ ಮಹಾಸಂವಿದ್ವಿಶ್ವರೂಪಾ ಪ್ರಕಾಶತೇ
ತದ್ವಿನಾ ನಾಸ್ತಿ ವಸ್ತ್ವೇಕಂ ಭೇದ ಬುದ್ಧಿಂ ವಿಮುಂಚತಃ

ಮಹಾಸತ್ತಾ-ಪರಿಪೂರ್ಣ ಸತ್ಸ್ವರೂಪವಾಗಿರ್ದಂಥಾ ಮಹಾಸಂವಿತ್-ಬ್ರಹ್ಮಚೈತನ್ಯವು, ವಿಶ್ವರೂಪಪ್ರಕಾಶತೆ-ನಾನಾಪ್ರಕಾರವಾಗಿ ಒಪ್ಪುತಂ ಇಹುದು, ಭೇದ ಬುದ್ಧಿಂ ವಿಮುಂಚತಃ-ಭೇದ ಬುದ್ಧಿಯನು ಬಿಡುತ್ತಂ ಇದ್ದಂಥಾತಂಗೆ, ತದ್ವಿನಾ -

ನಾನತ್ವವಿಲ್ಲದಿಹುದರಿಂದ, ಏಕಂವಸ್ತು ನಾಸ್ತಿ-ಜ್ಞಾತೃ ಜ್ಞೇಯ ಜ್ಞಾನವೆಂಬ ಒಂದು ವಸ್ತುವು ಇಲ್ಲ ।।೫೪।।

ಅದ್ವೈತವಾಸನಾವಿಷ್ಟ ಚೇತಸಾಂ ಪರಯೋಗಿನಾಂ
ಪಶ್ಯತಾಮಂತರಾತ್ಮಾನಾಂ ಕಥಂ ಜ್ಞಾತೃತ್ವಮನ್ಯಥಾ

ಅದ್ವೈತವಾಸನಾವಿಷ್ಟೆಚೇತಸಾಂ-ಅದ್ವೈತವಾಸನೆಯಾದ ಚಿತ್ತವನುಳ್ಳಂಥ ಅಂತರಾತ್ಮಾನಾ ಪಶ್ಯತಾಂ-ಅಂತರಾತ್ಮನನು ಕಾಣುತ್ತಂ ಇರ್ದಂಥ, ಪರ ಯೋಗಿನಾಂ-ಮಹಾಶಿವಯೋಗಿಗಳಿಗೆ, ಕಥಂ ಜ್ಞಾತೃತ್ವಂ-ಜ್ಞಾತೃ ಜ್ಞೇಯ ಸಂಬಂಧವು ಹೆಂಗೆ ಸಂಭವಿಸುವುದು ।।೫೫।।

ಅಕರ್ತಾಹಮವೇತ್ತಾಹಮದೇಹೋऽಹಂ ನಿರಂಜನಃ
ಇತಿ ಚಿಂತಯತಸ್ಸಾಕ್ಷಾತ್ಸಂವಿದೇವ ಪ್ರಕಾಶತೇ

ಅಹಂ-ತಾನು, ಕರ್ತಾ-ಕರ್ತೃವಲ್ಲ, ಅವೇತ್ತಾ-ಜ್ಞಾತೃವಲ್ಲ, ಅದೇಹಃ-ದೇಹಿಯಲ್ಲ, ನಿರಂಜನಃ-ಗುಣಿಯಲ್ಲ, ಇತಿ ಚಿಂತಯತಃ-ಹಿಂಗೆ ವಿಚಾರಿಸುತ್ತಂ ಇರ್ದಂಥಾತಂಗೆ, ಸಾಕ್ಷಾತ್-ಪ್ರತ್ಯಕ್ಷವಾಗಿ, ಸದೇವಾ- ಆ ಬ್ರಹ್ಮಸತ್ತಯೆ, ಪ್ರಕಾಶತೆ-ಪ್ರಕಾಶಿಸುತ್ತಂ ಇಹುದು ।।೫೬।।

ನಿರಸ್ತಭೇದಜಾತಸ್ಯ ನಿರೀಹಸ್ಯ ಪ್ರಶಾಮ್ಯತಃ
ಸ್ವೇ ಮಹಿಮ್ನಿ ವಿಲೀನಸ್ಯ ಕಿಮನ್ಯತು ಜ್ಞೇಯ ಮುಚ್ಚತೇ

ನಿರಸ್ತಭೇದಜಾತಸ್ಯ-ನಿರಾಕರಿಸಲ್ಪಟ್ಟ ಭೇದ ಸಮೂಹವನುಳ್ಳಂಥ, ನಿರೀಹಸ್ಯ - ನಿಷ್ಕ್ರಿಯವಾಗಿರ್ದಂಥ, ಪ್ರಕಾಶತಃ-ಪ್ರಕಾಶಿಸುತಂ ಇರ್ದಂಥಾ, ಸ್ವೇಮಹಿಮ್ನಿ ವಿಲೀನಸ್ಯ-ತನ್ನ ಮಹಿಮೆಯಲ್ಲಿ ಸ್ಥಿರವಾಗಿರ್ದಂಥಾತಂಗೆ, ಕಿಮನ್ಯತ್-ಮತ್ತಾವುದು, ಜ್ಞೇಯಃ-ಅರಿಯಲು ಯೋಗ್ಯವಾಗಿರ್ದಂಥಾದು ಎಂದು, ಉಚ್ಚತೆ-ಹೇಳಲ್ಪಡುವುದು ।।೫೭।।

೩೪. ಆದಿಪ್ರಸಾದಿಸ್ಥಲ

ಸರ್ವಾಧಿಷ್ಠಾತೃಕಃ ಶಂಭುರಾದಿಸ್ತಸ್ಯ ಪ್ರಸಾದತಃ
ಆದಿಪ್ರಸಾದಿತ್ಯುಕ್ತೋಽಯಂ ನಿರ್ವಿಕಾರಪದೇಸ್ಥಿತಃ

ಆದಿಪ್ರಸಾದಿಸ್ಥಲವನು ನಿರೂಪಿಸುತಿರ್ದಪಂ

ಶಂಭುಃ-ಶಿವನು ಸರ್ವಾಧಿಷ್ಠಾತೃಕಃ-ಸಮಸ್ತಕ್ಕು ಪ್ರೇರಕನಾಗಿರ್ದಂಥಾ, ಆದಿ-ಆದಿಕಾರಣನಾಗಿರ್ದಂಥಾ, ತಸ್ಯ ಪ್ರಸಾದತಃ-ಆತನ ಪ್ರಸಾದದಿಂದ, ನಿರ್ವಿಕಾರಪದೇಸ್ಥಿತಃ-ಮೋಕ್ಷದಲ್ಲಿರುತ್ತಂ ಇರ್ದಂಥಾ, ಅಯಂ-ಈ ಶರಣನು, ಆದಿ ಪ್ರಸಾದಿತ್ಯುಕ್ತಃ-ಆದಿಪ್ರಸಾದಿ ಎನಿಸುವನು ।।೫೮।।

ಶಂಭೋಶ್ಶಿವಪ್ರಸಾದೇನ ಸಂಸಾರಚ್ಛೇದಕಾರಿಣಾ
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ

ಸಂಸಾರಚ್ಛೇದಕಾರಿಣ-ಸಂಸಾರವನು ಛೇದಿಸುವಂಥಾ, ಶಂಭೋಶ್ಶಿವ ಪ್ರಸಾದೇನ-ಶಿವ ಪ್ರಸಾದದಿಂದ, ಮೋಹಗ್ರಂಥಿಂ-ಅಜ್ಞಾನವೆಂಬ ಗ್ರಂಥಿಯನು, ವಿನಿರ್ಭೇದ್ಯ-ಭೇದಿಸಿ, ವಿವೇಕಿನಃ-ಪ್ರೌಢರು, ಮುಕ್ತಿಂ-ಮೋಕ್ಷವನು, ಯಾತಿ-ಐಯ್ದುತ್ತಂ ಇಹರು ।।೮೯।।

ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೆ
ವಿನಾ ಸೂರ್ಯೋದಯಂ ಲೋಕೇ ಕುತಸ್ಯಾತ್ತಮಸೋಲಯಃ

ಈಶಸ್ಯ-ಶಿವನ, ಪ್ರಸಾದವಿನಾ-ಪ್ರಸಾದವಿಲ್ಲದೆ, ಸಂಸಾರಃ-ಸಂಸಾರವು ನ ನಿವರ್ತತೆ-ನಿವೃತ್ತವಾಗದು, ಅಲ್ಲಿ ದೃಷ್ಟಾಂತ, ಲೋಕೇ-ಲೋಕದಲ್ಲಿ, ಸೂರ್ಯೋದಯಂ ವಿನಾ-ಸೂರ್ಯೋದಯವಿಲ್ಲದೆ, ತಮಸೋಲಯೋ ನ-ಅಂಧಕಾರಕ್ಕೆ ಲಯವಿಲ್ಲ ।।೯೦।।

ಅನೇಕಜನ್ಮಶುದ್ಧಸ್ಯ ನಿರಂಹಕಾರಭಾವಿನಃ
ಪ್ರಪನ್ನಸ್ಯಾ ಮಹಾದೇವಂ ಪ್ರಸೀದತಿ ವಿಮುಕ್ತಯೇ

ಅನೇಕಜನ್ಮಶುದ್ಧಸ್ಯ-ಬಹುಜನ್ಮದಿಂದ ಪವಿತ್ರನಾಗಿರ್ದಂಥಾ, ನಿರಹಂಕಾರ ಭಾವಿನಃ-ಅಹಂಕಾರರಹಿತವಾದ ಭಾವವನುಳ್ಳಂಥ ಮಹಾದೇವಂ, ಪ್ರಪನ್ನಸ್ಯ-ಶಿವನನು ಮರೆಹೊಕ್ಕಂಥಾತಂಗೆ, ವಿಮುಕ್ಷಯೇ-ಮೋಕ್ಷಾರ್ಥವಾಗಿ, ಪ್ರಸೀದತಿ-ಪ್ರಸನ್ನನಹನು ।।೯೧।।

ಸರ್ವಾನುಗ್ರಾಹತಶ್ಶಂಭುಃ ಕೇವಲಂ ಕೃಪಯಾ ವಿಭುಃ
ಮೋಚಯೇತ್ಸಕಲಾನ್ ಜಂತೂ ನ ಕಿಂಚಿದಿಹ ಕಾರಣಂ

ಸರ್ವಾನುಗ್ರಹತಃ-ಸಮಸ್ತವನು ಅನುಗ್ರಹಿಸುವಂಥಾ, ವಿಭುಃ-ವ್ಯಾಪಕ ನಾಗಿರ್ದಂಥಾ, ಶಂಭುಃ-ಶಿವನು, ಕೇವಲಂ ಕೃಪಯಾ-ಬಹಳ ಕೃಪೆಯಿಂದ, ಸಕಲ ಜಂತೂನ್-ಸಮಸ್ತ ಪ್ರಾಣಿಗಳನು, ಮೋಕ್ಷಯೇತ್-ಮೋಕ್ಷವನು ಐಯ್ದಿಸುವನು, ಇಹ-ಈ ಮೋಕ್ಷದಲ್ಲಿ, ನ ಕಿಂಚಿತ್ಕಾರಣಂ-ಈಶ್ವರನ ಕೃಪೆ ಇಲ್ಲದೆ ಮತ್ತಾವುದು ಕಾರಣವಲ್ಲ ।।೯೨।।

ಶಿವಪ್ರಸಾದಸಂಪತ್ತ್ಯಾ ಶಿವಭಾವಮುಪೇಯಿಷು
ಶಿವಾದನ್ಯಜ್ಜಗಜ್ಜಾಲಂ ದೃಶ್ಯತೇ ನ ಚ ದೃಶ್ಯತೇ

ಶಿವಪ್ರಸಾದಸಂಪತ್ತ್ಯಾ-ಶಿವಪ್ರಸಾದ ಪ್ರಾಪ್ತಿಯಿಂದ, ಶಿವಭಾವಮು ಪೇಯಿಷು-ಶಿವಭಾವವನು ಐಯ್ದುತ್ತಂ ಇರಲಾಗಿ, ಶಿವಾದನ್ಯಾತ್-ಶಿವವ್ಯತಿರಿಕ್ತವಾದಂಥಾ, ಜಗಜ್ಜಾಲಂ-ಜಗತ್ತುಗಳ ಸಮೂಹವು, ದೃಶ್ಯತೇ ನ ಚ ದೃಶ್ಯತೇ-ಕಾಣಲ್ಪಟ್ಟರು ಕಾಣಲ್ಪಟ್ಟುದಲ್ಲ ।।೯೩।।

೩೫. ಅಂತ್ಯಪ್ರಸಾದಿಸ್ಥಲ

ಲಯಸ್ಸರ್ವಪದಾರ್ಥಾನಾಮಂತ್ಯ ಇತ್ಯುಚ್ಯತೇ ಬುಧೈಃ
ಪ್ರಸಾದೋಽನುಭವಸ್ತಸ್ಯ ತದ್ವಾನಂತ್ಯ ಪ್ರಸಾದವಾನ್

ಅಂತ್ಯಪ್ರಸಾದಿಸ್ಥಲವನು ನಿರೂಪಿಸುತಂ ಇದ್ದಾನು

ಸರ್ವ ಪದಾರ್ಥಾನಾಂ-ಸಮಸ್ತಮಹದಾದಿ ಪದಾರ್ಥಗಳ, ಲಯಂ-ಲಯವು, ಅಂತ್ಯಇತಿ-ಅಂತ್ಯವೆಂದು, ಬುಧೈಃ-ವಿದ್ವಾಂಸರುಗಳಿಂದ, ಉಚ್ಯತೇ-ಹೇಳಲ್ಪಡುತ್ತಂ ಇಹುದು ಸಃ-ಆ ಲಯವು, ಪ್ರಸಾದವಾನ್ಭವೇನಸ್ಯಾತ್-ಪ್ರಸಾದಾನುಭವದಿಂದಲುಂಟಹುದು. ತದ್ವಾನ್-ಆ ಲಯವನುಳ್ಳಂಥಾತನು, ಅಂತ್ಯ ಪ್ರಸಾದವಾನ್ ಅಂತ್ಯ ಪ್ರಸಾದಿ ಎಂದು ಹೇಳಲ್ಪಡುವನು ॥೬೪॥

ಸಾಕ್ಷಾತ್ಕೃತೇ ಪರೇತತ್ವೆ ಸಚ್ಚಿದಾನಂದ ಲಕ್ಷಣೇ
ಕ್ವ ಪದಾರ್ಥ ಪರಿಜ್ಞಾನಂ ಕುತೋಜ್ಞಾತೃತ್ವಸಂಭವಃ

ಸಚ್ಚಿದಾನಂದ ಲಕ್ಷಣೇ-ಸಚ್ಚಿದಾನಂದ ಸ್ವರೂಪವನುಳ್ಳಂಥಾ, ಪರೇತತ್ವೆ-ಪರತತ್ವವು, ಸಾಕ್ಷಾತ್ಕೃತೇ-ಸಾಕ್ಷಾತ್ಕರಿಸಲ್ಪಡುತ್ತಂ ಇರಲಾಗಿ, ಕ್ವ ಪದಾರ್ಥ ಪರಿಜ್ಞಾನಂ-ಪದಾರ್ಥ ವೆಲ್ಲಿಯದು, ಕುತೋಜ್ಞಾತೃತ್ವ ಸಂಭವಃ-ಜ್ಞಾತೃತ್ವತಾನೆತ್ತಣದು ॥೬೫॥

ದೇವತಿರ್ಯಗ್ಮನುಷ್ಯಾದಿ ವ್ಯವಹಾರ ವಿಕಲ್ಪನಾ
ಮಾಯಾಕೃತಾ ಪರೇತತ್ವೇ ತಲ್ಲಯೇ ತತ್‌ಕ್ಷಯೋಭವೇತ್

ದೇವತಿರ್ಯಗ್ಮನುಷ್ಯಾದಿ ವ್ಯವಹಾರವಿಕಲ್ಪನಾ-ದೇವತಿರ್ಯಗ್ಮನುಷ್ಯರು ಮೊದಲಾದ ವ್ಯವಹಾರ ಭೇದವು,ಪರೇತತ್ವೇ-ಪರತತ್ವದಲ್ಲಿಯೂ, ಮಾಯಾಕೃತಾ-ಮಾಯಾಕೃತವಾಗಿರ್ದಂಥಾದ್ದು, ತಲ್ಲಯೇ-ಆ ಮಾಯೆಯು ಜ್ಞಾನದಿಂದ ನಷ್ಟವಾದರೆ, ತತ್‌ಕ್ಷಯೋಭವೇತ್-ಪದಾರ್ಥಭೇದಕ್ಕೆ ಕ್ಷಯವಹುದು ॥೬೬॥

ಸುಷುಪ್ತಸ್ಯ ಯಥಾ ವಸ್ತು ನ ಕಿಂಚಿದಪಿ ಭಾಸತೇ
ತಥಾ ಮುಕ್ತಸ್ಯ ಜೀವಸ್ಯ ನ ಕಿಂಚಿದಪಿ ದೃಶ್ಯತೇ

ಸುಷುಪ್ತಸ್ಯ-ಮಲಗಿರ್ದಂಥಾತಂಗೆ, ಕಿಂಚಿದ್ವಸ್ತು-ಒಂದು ವಸ್ತುವು, ಯಥಾ-ಹೆಂಗೆ, ನ ಭಾಸತೇ-ತೋರದು, ತಥಾ-ಹಾಂಗೆ, ಮುಕ್ತಸ್ಯ-ಮುಕ್ತನಿಗೆ, ಕಿಂಚಿದ ಪಿ ನ ದೃಶ್ಯತೇ-ಒಂದು ವಸ್ತುವೂ ಕಾಣಲ್ಪಡದು ॥೬೭॥

ಪದಾರ್ಥಾಃ ಸ್ವಪ್ನ ಸಂದೃಷ್ಟಾಃ ಯಥಾ ಬೋಧೇ ಲಯಂ ಗತಾಃ
ತಥಾ ಸಂಸಾರಜಾಃಭಾವಾಃ ಲೀಯಂತೇ ಬ್ರಹ್ಮಬೋಧತಃ

ಸ್ವಪ್ನಸಂದೃಷ್ಟಾ-ಸ್ವಪ್ನದಲ್ಲಿ ಕಾಣಲ್ಪಟ್ಟಂಥಾ, ಪದಾರ್ಥಾಃ-ಪದಾರ್ಥಗಳು, ಬೋಧೇ-ಜಾಗರದಲ್ಲಿ, ಯಥಾಲಯಂಗತಾಃ-ಹೆಂಗೆ ಲಯವನೆಯ್ದುವುದು, ತಥಾ-

ಹಾಂಗೆ, ಸಂಸಾರಜಾಭಾವಃ-ಸಂಸಾರದಲ್ಲಿ, ಉಂಟಾಗಿರ್ದಂಥಾ ಭಾವಗಳು, ಬ್ರಹ್ಮಬೋಧತಃ-ಬ್ರಹ್ಮಜ್ಞಾನದಿಂದ, ಲೀಯಂತೆ-ಲಯವನೈದುವದು ॥೬೮॥

ನ ಕಿಂಚಿದಪಿ ಮುಕ್ತಸ್ಯ ದೃಶ್ಯಂ ಕರ್ತವ್ಯಮೇವ ವಾ
ಸುಖಸ್ಫೂರ್ತಿಸ್ವರೂಪೇಣ ನಿಶ್ಚಲಾಸ್ಥಿತಿರುಚ್ಯತೇ

ಮುಕ್ತಸ್ಯ-ಮುಕ್ತಗೆ, ದೃಶ್ಯಂ-ಅರಿಯಲು ಯೋಗ್ಯವಾಗಿರ್ದಂಥಾದು, ಕರ್ತವ್ಯಮೇವವಾ-ಮಾಡಲು ಯೋಗ್ಯವಾಗಿರ್ದಂಥಾದು ತಾನು, ಕಿಂಚಿತ್-ಒಂದು, ನ-ಇಲ್ಲ, ಸುಖಸ್ಫೂರ್ತಿಸ್ವರೂಪೇಣ-ಸುಖಚೈತನ್ಯ ಸ್ವರೂಪಾವಿರ್ಭಾವದಿಂದ, ನಿಶ್ಚಲ-ಸ್ಥಿರನಾಗಿರ್ದಂಥಾ, ಸ್ಥಿತಿಃ-ಪ್ರಾಪ್ತಿಯು, ಉಚ್ಯತೇ-ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿತು ॥೬೯॥

ಯಥಾಕಾಶಮವಿಚ್ಛಿನ್ನಂ ನಿರ್ವಿಕಾರ ಸ್ವರೂಪತಃ
ತಥಾಽ ಮುಕ್ತಸ್ಯ ಜೀವಸ್ಯ ಸ್ವರೂಪಮಪಿ ತಿಷ್ಠತಿ

ಯಥಾ-ಹೆಂಗೆ, ಆಕಾಶಂ-ಆಕಾಶವು, ಅವಿಚ್ಛಿನ್ನಂ-ಎಡೆಬಿಡುವಿಲ್ಲದೆ, ನಿರ್ವಿಕಾರಂ-ನಿರ್ವಿಕಾರ ಶೂನ್ಯವಾಗಿರುತ್ತಂ ಇದ್ದಿತು. ತಥಾ-ಹಾಗೆ, ಮುಕ್ತಸ್ಯ-ಮುಕ್ತನ, ಸ್ವರೂಪಂ-ಸ್ವರೂಪವು, ತಿಷ್ಠತಿ-ಇರುತ್ತಂ ಇಹುದು ॥೭೦॥

ಶಿವಾದ್ವೈತಪರಿಜ್ಞಾನ ಶಿಥಿಲಾಶೇಷವಸ್ತುನಃ
ಕೇವಲಂ ಸಂವಿದುಲ್ಲಾಸದರ್ಶಿನಃ ಕೇನ ಕಿಂ ಭವತೇ

ಶಿವಾದ್ವೈತ ಪರಿಜ್ಞಾನಂ-ಶಿಥಿಲಾಶೇಷ ವಸ್ತುನಃ-ಶಿವಾದ್ವೈತಜ್ಞಾನದಿಂದ ನಷ್ಟವಾದ ಸಮಸ್ತ ಸಂಸಾರ ಧರ್ಮವನುಳ್ಳಂಥಾ, ಕೇವಲಂಸಂವಿದುಲ್ಲಾಸ ದರ್ಶಿನಃ-ಚಿದಾನಂದಾವಿರ್ಭಾವವನುಳ್ಳಂಥಾತಂಗೆ, ತೇನ-ಆವುದರಿಂದ, ಕಿಂಭವೇತ್-ಆವ ಬಾಧೆಯುಂಟಾದೀತು ॥೭೧॥

೩೬. ಸೇವ್ಯಪ್ರಸಾದಿಸ್ಥಲ

ಸೇವ್ಯೋ ಗುರುಃ ಸ್ಮೃತಿತೋಽಹಸ್ಯ ಪ್ರಸಾದೋನುಭವೋ ಮತಃ
ತದೇಕಾವೇಶರೂಪೇಣ ತದ್ವಾನ್ಸ್ಯೇವ್ಯ ಪ್ರಸಾದವಾನ್

ಸೇವ್ಯಪ್ರಸಾದಿಸ್ಥಲವನು ನಿರೂಪಿಸುತಿರ್ದಪಂ

ಅಸ್ಯ-ಈ ಅಂತ್ಯಪ್ರಸಾದಿಗೆ, ಗುರುಃಸೇವ್ಯಃ-ಗುರುವು ಸೇವಿಸಲು ಯೋಗ್ಯನು, ಪ್ರಸಾದೋನುಭವೋ ಮತಃ-ಗುರುಪ್ರಸಾದವು ಸ್ವೀಕರಿಸಲು ಯೋಗ್ಯವು, ತದೇಕಾವೇಶರೂಪೇಣ-ಶಿವಗುರುಗಳಿಗೆ ಏಕಸ್ವರೂಪದಿಂದ ಗುರುಸೇವ್ಯನಾದ ಕಾರಣ, ತದ್ವಾನ್-ಆ ಸೇವಾ ಭಾವವನುಳ್ಳಂಥಾತನು, ಸೇವ್ಯ ಪ್ರಸಾದವಾನ್-ಸೇವ್ಯಪ್ರಸಾದಿಯೆನಿಸುವನು ॥೭೨॥

ಸೇವ್ಯೋ ಗುರುಸ್ಸಮಸ್ತಾನಾಂ ಶಿವಯೇವ ನ ಸಂಶಯಂ
ಪ್ರಸಾದೋಽಸ್ಯ ಪರಾನಂದಪ್ರಕಾಶಃ ಪರಿಕೀರ್ತ್ಯತೇ

ಸಮಸ್ತಾನಾಂ-ಸರ್ವರಿಗೂ, ಸೇವ್ಯ-ಸೇವ್ಯನಾಗಿರ್ದಂಥಾ ಗುರುವು, ಶಿವಯೇವಂ-ಶಿವನೆ, ನ ಸಂಶಯಃ-ಸಂದೇವಿಲ್ಲ, ಅಸ್ಯಪ್ರಸಾದಃ-ಈ ಗುರುಪ್ರಸಾದವು, ಪರಾನಂದ ಪ್ರಕಾಶಃ-ಬ್ರಹ್ಮಾನಂದಾವಿರ್ಭಾವವೆಂದು, ಪರಿಕೀರ್ತ್ಯತೇ-ಹೇಳಲ್ಪಡುವುದು ॥೭೩॥

ಜ್ಞಾನಾಮೃತೇನ ತೃಪ್ತಸ್ಯ ಕಿಮನ್ಯೈರ್ಭೋಗ್ಯರಾಶಿಭಿಃ
ಜ್ಞಾನಮೇವ ಪರಾನಂದಂ ಪ್ರಕಾಶಯತಿ ಶೈವಕಂ

ಜ್ಞಾನಾಮೃತೇನ ತೃಪ್ತಸ್ಯ-ಜ್ಞಾನಾಮೃತದಿಂದ ತೃಪ್ತನಾಗಿರ್ದಂಥಾತಂಗೆ, ಅನ್ಯೈರ್ಭೋಗ್ಯರಾಶಿಭಿಃ-ಉಳಿದ ಭೋಗ್ಯವಸ್ತುಗಳ ಸಮೂಹಗಳಿಂದ, ಕಿಂ-ಪ್ರಯೋಜನವೇನು, ಜ್ಞಾನಮೇವ-ಜ್ಞಾನವೆ, ಶೈವಕಂ-ಶಿವಸಂಬಂಧವಾಗಿರ್ದಂಥ, ಪರಾನಂದಂ-ಪರಮಾನಂದವನು, ಪ್ರಕಾಶಯತಿ-ಪ್ರಕಾಶಿಸುತ್ತಂ ಇಹುದು ॥೭೪॥

ಅಪರಿಚ್ಛೇದ್ಯಮಾತ್ಮಸ್ಥಮವಾಙ್ಮನಸ ಗೋಚರಂ
ಆನಂದಂ ಪಶ್ಯತಾಂ ಪುಂಸಾಂ ರತಿರನ್ಯತ್ರ ಕಾ ಭವೇತ್

ಅಪರಿಚ್ಛೇದ್ಯಂ-ಹವಣಿಸಲು ಶಕ್ಯವಲ್ಲದೆ ಇರ್ದಂಥ, ಆತ್ಮಸ್ಥಂ-ತನ್ನ ಸ್ವರೂಪವಾಗಿರುತ್ತಂ ಇರ್ದಂಥ, ಅವಾಙ್ಮನಸ ಗೋಚರಂ-ವಾಙ್ಮನಸುಗಳಿಗೆ ಗೋಚರ ವಲ್ಲದೆ ಇರ್ದಂಥ, ಆನಂದಂ-ಆನಂದವನು, ಪಶ್ಯತಾಂ-ಕಾಣುತ್ತಂ ಇರ್ದಂಥಾ, ಪುಂಸಾಂ-ಪುರುಷರುಗಳಿಗೆ, ಅನ್ಯತ್ರ-ಮಿಕ್ಕಾದವಿಷಯದಲ್ಲಿ, ಕಾ ರತಿರ್ಭವೇತ್-ಆವ ಪ್ರೀತಿಯುಂಟಾದೀತು ॥೭೫॥

ಮುಕ್ತಿರೇವಾಪರಾತೃಪ್ತಿಃ ಪರಮಾನಂದಲಕ್ಷಣಾ
ನಿತ್ಯತೃಪ್ತಸ್ಯ ಮುಕ್ತಸ್ಯ ಕಿಮನ್ಯೇರ್ಭೋಗ ಸಾಧನೈಃ

ಪರಮಾನಂದಲಕ್ಷಣ-ಪರಮಾನಂದ ಸ್ವರೂಪವಾಗಿರ್ದಂಥ, ಮುಕ್ತಿರೇವಾ-ಮುಕ್ತಿಯು, ಪರಾತೃಪ್ತಿಃ- ಉತ್ತಮವಾದ ತೃಪ್ತಿಯು, ಮುಕ್ತಸ್ಯ-ಮುಕ್ತಂಗೆ, ಭೋಗ ಸಾಧನೈಃ-ಉಳಿದ ಭೋಗ ವಸ್ತುಗಳಿಂದ, ಕಿಂ-ಪ್ರಯೋಜವೇನು ॥೭೬॥

ಗುರುರೇವ ಪರಂತತ್ತ್ವಂ ಪರಂತತ್ವಂ ಗುರುಸ್ಮೃತಃ
ತದೇಕತ್ವಾನುಭಾವೇನಾ ನ ಕಿಂಚಿದವಶಿಷ್ಯತೇ

ಗುರುರೇವ-ಗುರುವೆ, ಪರಂತತ್ವಂ-ಪರತತ್ವವು, ಪರಂತತ್ವಂ-ಪರಂತತ್ವವೆ, ಗುರುಃ-ಗುರು ಸ್ವರೂಪವು, ತದೇಕತ್ವಾನುಭಾವೇನಾ-ಆ ಪರತತ್ವದ ಅದ್ವೈತಾನುಭಾವದಿಂದ, ನ ಕಿಂಚಿದವಶಿಷ್ಯತೇ-ಕೃತ್ಯವಾಗಿರ್ದಂಥದಿಲ್ಲ ॥೭೭॥

ನ ಬಾಹ್ಯಕರ್ಮ ತಸ್ಯಾಸ್ತಿ ನ ಚಾಂತರ್ನೈವರಿತಿ ಚಿತ್
ಶಿವೈಕಜ್ಞಾನ ರೂಢಸ್ಯ ದೇಹ ಭ್ರಾಂತಿ ವಿಮುಂಚತಃ

ಶಿವೈಕಜ್ಞಾನರೂಢಸ್ಯ-ಶಿವನಲ್ಲಿ, ಏಕವಾದ ಜ್ಞಾನವನುಳ್ಳಂಥ, ದೇಹಭ್ರಾಂತಿ ವಿಮುಂಚತಃ-ದೇಹಾಭಿಮಾನವನು ಬಿಡುತ್ತಂ ಇರ್ದಂಥಾತಂಗೆ, ಬಾಹ್ಯಂ-ಶರೀರ ಸಾಧ್ಯವಾಗಿರ್ದಂಥ, ಅಂತರಂ-ಮಾನಸವಾಗಿರ್ದಂಥಾ, ಕರ್ಮ - ಕೃತ್ಯವು, ನ - ಇಲ್ಲ ॥೭೮॥

ನ ಕರ್ಮಯೋಗೇ ನ ತಪೋವಿಶೇಷೇ
ನ ಮಂತ್ರಯೋಗಾಭ್ಯಸನೇ ತಥೈವ
ಧ್ಯಾನೇ ಚ ಬೋಧೇ ಚ ತಥಾತ್ಮ ತತ್ವೇ
ಮನಃ ಪ್ರವೃತ್ತಿಃ ಪರಯೋಗಭಾಜಾಂ

ಪರತತ್ವಭಾಜಾಂ-ಪರತತ್ವವನು ಭಜಿಸುತ್ತಂ ಇರ್ದಂಥಾವರುಗಳಿಗೆ, ಕರ್ಮಯೋಗೇ-ಕರ್ಮಯೋಗದಲ್ಲಿ, ತಪೋವಿಶೇಷ - ತಪೋವಿಶೇಷದಲ್ಲಿ, ಮಂತ್ರ ಯೋಗೇ-ಅಭ್ಯಾಸ ಮಂತ್ರಯೋಗದಲ್ಲಿ, ಧ್ಯಾನೇ-ಧ್ಯಾನದಲ್ಲಿ, ಬೋಧೇ-ಜ್ಞಾನಾಭ್ಯಾಸದಲ್ಲಿ, ತಥಾತ್ಮತತ್ವೇ-ಶಿವಸಮಾಧಿಯಲ್ಲಿಯು, ಮನಃಪ್ರವೃತ್ತಿ ನ-ಮನಸ್ಸಿಗೆ ವ್ಯಾಪಾರವಿಲ್ಲ ॥೭೯॥

ಇತಿ ಶ್ರೀ ವೀರಶೈವಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ ಟೀಕಾಯಾಂ ಪ್ರಾಣಲಿಂಗಿಸ್ಥಲ ವಿಷಯೇ ನವವಿಧಲಿಂಗಸ್ಥಲ ಪ್ರಸಂಗೋನಾಮ ಅಷ್ಟಾದಶ ಪರಿಚ್ಛೇದಃ

ಏಕೋನವಿಂಶತಿಪರಿಚ್ಛೇದ

ಶರಣಸ್ಥಲ

ಅಗಸ್ತ್ಯ ಉವಾಚ

> ಸ್ಥಲಭೇದಾಸ್ಸಮಾಖ್ಯಾತಃ ಪ್ರಾಣಲಿಂಗಿಸ್ಥಲಾಶ್ರಯಾಃ
> ಕಥಯಂ ಸ್ಥಲಭೇದಂ ಮೇ ಶರಣಸ್ಥಲ ಸಂಶ್ರಿತಂ

ಭೋ ನಾಥ-ಎಲೆ ಒಡೆಯನೆ, ಪ್ರಾಣಲಿಂಗಿ ಸ್ಥಲಾಶ್ರಯಾಃ-ಪ್ರಾಣಲಿಂಗಿ ಸ್ಥಲವನು ಆಶ್ರಯಿಸಿದಂಥಾ, ಸ್ಥಲಭೇದಾಃ-ಸ್ಥಲಭೇದಗಳು, ಸಮಾಖ್ಯಾತಂ-ಹೇಳಲ್ಪಟ್ಟವು, ಶರಣಸ್ಥಲ ಸಂಶ್ರಿತಂ-ಶರಣಸ್ಥಲವನು ಆಶ್ರಯಿಸಿದಂಥಾ, ಸ್ಥಲಭೇಧಾಃ-ಸ್ಥಲಭೇದವನು, ಮೇ-ಎನಗೆ, ಕಥಯಾ-ಹೇಳು ॥೧॥

ರೇಣುಕ ಉವಾಚ

> ಶರಣಸ್ಥಲಮಾಶ್ರಿತ್ಯ ಸ್ಥಲಂ ದ್ವಾದಶಕಂ ಮಯಾ
> ಉಚ್ಯತೇ ನಾಮಸರ್ವೇಷಾಂ ಸ್ಥಲಾನಾಂ ಶೃಣು ತಾಪಸಃ

ಭೋ ತಾಪಸ-ಎಲೆ ತಪಸ್ವಿಯಾಗಿರ್ದಂಥ ಅಗಸ್ತ್ಯನೆ, ಶರಣಸ್ಥಲಮಾಶ್ರಿತ್ಯ-ಶರಣಸ್ಥಲವನು ಆಶ್ರಯಿಸಿದಂಥಾ, ದ್ವಾದಶಕಂ ಸ್ಥಲಂ-ಹನ್ನೆರಡು ಸ್ಥಲವು, ಸರ್ವೇಷಾಂ ಸ್ಥಲಾನಾಂ-ಪರಮಸ್ಥಲಂಗಳ ನಾಮಗಳು, ಮಯ-ನನ್ನಿಂದ, ಉಚ್ಯತೇ-ಹೇಳಲ್ಪಡುತ್ತಂ ಇದ್ದಾವು, ಶೃಣು-ಕೇಳು ॥೨॥

> ದೀಕ್ಷಾಪಾದೋದಕಂ ಪೂರ್ವಂ ಶಿಕ್ಷಾಪಾದೋದಕಂ ತತಃ
> ಜ್ಞಾನಪಾದೋದಕಂ ಚಾಥ ಕ್ರಿಯಾನಿಷ್ಪತ್ತಿಕಂ ತತಃ
>
> ಭಾವನಿಷ್ಪತ್ತಿಕಂ ಚಾಥ ಜ್ಞಾನನಿಷ್ಪತ್ತಿಕಂ ತತಃ
> ಪಿಂಡಾಕಾಶಸ್ಥಲಂ ಚಾಥ ಬಿಂದ್ವಾಕಾಶಸ್ಥಲಂ ತತಃ
>
> ಮಹಾಕಾಶಸ್ಥಲಂ ಚಾಥ ಕ್ರಿಯಾಪ್ರಕಾಶನಂ ತತಃ
> ಭಾವಪ್ರಕಾಶನಂ ಪಶ್ಚಾತ್ ತತೋಜ್ಞಾನ ಪ್ರಕಾಶನಂ
>
> ಸ್ವರೂಪಂ ಪೃಥಗೇ ತೇಷಾಂ ಕಥಯಾಮಿ ಯಥಾಕ್ರಮಂ

ಪೂರ್ವಂ-ಮೊದಲು, ದೀಕ್ಷಾಪಾದೋದಕಂ-ದೀಕ್ಷಾಪಾದೋದಕ ಸ್ಥಲವು, ಅಥ-ಅನಂತರದಲ್ಲಿ, ಜ್ಞಾನಪಾದೋದಕಂ-ಜ್ಞಾನಪಾದೋದಕಸ್ಥಲವು, ತತಃ-ತದನಂತರದಲ್ಲಿ, ಮಹಾಕಾಶಸ್ಥಲಂ-ಮಹಾಕಾಶಸ್ಥಲವು, ಕ್ರಿಯಾಯಾಶ್ಚ ಪ್ರಕಾಶನಂ-ಕ್ರಿಯಾಪ್ರಕಾಶಸ್ಥಲವು, ಪಶ್ಚಾತ್-ಬಳಿಕ, ಭಾವಪ್ರಕಾಶನಂ-ಭಾವ ಪ್ರಕಾಶಸ್ಥಲವು, ತತಃ-ತದನಂತರದಲ್ಲಿ, ಜ್ಞಾನಪ್ರಕಾಶನಂ-ಜ್ಞಾನಪ್ರಕಾಶಸ್ಥಲವು, ಏತೇಷಾಂ

ಈ ಸ್ಥಲಗಳ, ಸ್ವರೂಪ-ಸ್ವರೂಪವನು, ಪೃಥಕ್-ಬೇರೆ ಬೇರೆ, ಯಥಾಕ್ರಮಂ-ಕ್ರಮದಪ್ಪದೆ, ಕಥಯಾಮಿ ಹೇಳಿಹೆನು* ॥೫॥

೩೭. ದೀಕ್ಷಾಪಾದೋದಕಸ್ಥಲ

ದೀಕ್ಷಯಾಽಪಗತ ದ್ವೈತಂ ಯದ್ ಜ್ಞಾನಂ ಗುರುಶಿಷ್ಯಯೋಃ
ಆನಂದಸ್ಯೈಕ್ಯಮೇತೇನ ದೀಕ್ಷಾಪಾದೋದಕಂ ಸ್ಮೃತಂ

ದೀಕ್ಷಯಾ-ಶಿವದೀಕ್ಷೆಯಿಂದ, ಅಪಗತದ್ವೈತಂ-ನಿರಾಕರಿಸಲ್ಪಟ್ಟ ದ್ವೈತವನುಳ್ಳಂಥಾ, ಗುರು ಶಿಷ್ಯಯೋಃ-ಗುರು ಶಿಷ್ಯರುಗಳಿಗೆ, ಯತ್ ಜ್ಞಾನಂ-ಆವುದಾನೊಂದು ಜ್ಞಾನವುಂಟು, ಏತೇವ-ಈ ಜ್ಞಾನದಿಂದ, ಏಕಾನಂದಂ-ಆವುದಾನೊಂದು ಪೂರ್ಣಾನಂದ ನಿರ್ಭಾವವುಂಟು, ಏತತ್-ಇದು, ದೀಕ್ಷಾಪಾದೋದಕಂ, ಸ್ಮೃತಂ-ದೀಕ್ಷಾ ಪಾದೋದಕ ವೆನಿಸುವುದು ॥೬॥

ಪರಮಾನಂದಮೇವೋಕ್ತಃ ಪಾದಶಬ್ದೇನ ನಿರ್ಮಲಂ
ಜ್ಞಾನಂ ಚೋದಕ ಶಬ್ದೇನ ಪಾದೋದಕಮಿತಿ ಸ್ಮೃತಂ

ನಿರ್ಮಲಂ-ನಿರ್ಮಲವಾಗಿರ್ದಂಥಾ, ಪರಮಾನಂದಮೇವ-ಪರಮಾನಂದವು, ಪಾದಶಬ್ದೇನೋಕ್ತಂ-ಪಾದಶಬ್ದದಿಂದ ಹೇಳಲ್ಪಟ್ಟಿತು, ಜ್ಞಾನಂಚ-ಜ್ಞಾನವು, ಉದಕ ಶಬ್ದದಿಂದ ಹೇಳಲ್ಪಟ್ಟಿತು, ಪಾದೋದಕಮಿತಿಸ್ಮೃತಂ-ಪರಮಾನಂದ ಜ್ಞಾನವೆ ಪಾದೋದಕವೆಂದು ಹೇಳಲ್ಪಟ್ಟಿತು ॥೭॥

ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ
ಶಿಷ್ಯೋದಕಶಬ್ದೇನ ತಯೋರ್ರೈಕ್ಯಂತು ದೀಕ್ಷಯಾ

ಪ್ರಕಾರಾಂತರವನು ಹೇಳುತ್ತಂ ಇದ್ದಾನು

ಗುರುರೇವ-ಗುರುವೆ, ಪಾದಶಬ್ದೇನ ನಿಗದ್ಯತೆ-ಪಾದಶಬ್ದದಿಂದ ಹೇಳಲ್ಪಡುವನು, ಶಿಷ್ಯಃ-ಶಿಷ್ಯನು, ಉದಕ ಶಬ್ದೇನ ನಿಗದ್ಯತೆ-ಉದಕ ಶಬ್ದದಿಂದ ಹೇಳಲ್ಪಡುವನು, ತಯೋರ್ರೈಕ್ಯಂ- ಆ ಗುರುಶಿಷ್ಯ ಸಂಬಂಧವು, ದೀಕ್ಷಯಾ-ಶಿವದೀಕ್ಷೆಯಿಂದಲಹುದು ॥೮॥

ಪರಸಂವಿತ್ಪ್ರಕಾಶಾತ್ಮಾ ಪರಮಾನಂದ ಭಾವನಾಂ
ಅಧಿಗಮ್ಯ ಮಹಾಯೋಗೀ ನ ಭಿದಂ ಕ್ವಾಪಿ ಪಶ್ಯತಿ

ಪರಸಂವಿತ್ ಪ್ರಕಾಶಾತ್ಮಾ ಪರಮಾನಂದ ಭಾವನಾಂ-ನಿತ್ಯ ಸ್ವಪ್ರಕಾಶ ಚೈತನ್ಯಾನಂದ ಭಾವನೆಯನು, ಮಹಾಯೋಗೀ-ಮಹಾಯೋಗಿಯು ಅಧಿಗಮ್ಯ - ಯಿಯ್ದಿ, ಕ್ವಾಪಿ-ಒಂದು ಸ್ಥಲದಲ್ಲಿ, ಭಿದಂ ನಪಶ್ಯತಿ -ಭೇದವನು ಕಾಣನು ॥೯॥

---

* ೨, ೪, ೫ ಈ ಶ್ಲೋಕಗಳ ಟೀಕನ್ನು ಉಜ್ಜನೀಶ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ತುಂಬಿದೆ.

ಜ್ಞಾನಾಮೃತಮತಿಸ್ವಚ್ಛಂ ಗುರುಕಾರುಣ್ಯ ಸಂಭವಂ
ಆಸ್ವಾದ್ಯ ರಮತೇ ಯೋಗೀ ಸಂಸಾರಾಮಯ ವರ್ಜಿತಃ

ಅತಿ ಸ್ವಚ್ಛಂ-ಅತ್ಯಂತ ಶುಚಿಯಾಗಿರ್ದಂಥ, ಗುರುಕಾರುಣ್ಯ ಸಂಭವಂ-ಗುರುಕೃಪೆಯಿಂದ ಹುಟ್ಟಿದಂಥಾ, ಜ್ಞಾನಾಮೃತೇ-ಜ್ಞಾನವೆಂಬ ನಿತ್ಯವನು, ಆಸ್ಥಾಯಾ-ಐಯ್ದಿ, ಸಂಸಾರಾಮಯ ವರ್ಜಿತಃ-ಸಂಸಾರವೆಂಬ ವ್ಯಾಧಿಯಿಂದ ತೊಲಗಲ್ಪಟ್ಟಂಥಾತನಾಗಿ, ರಮತೇ-ಸುಖಿಸುತ್ತಂ ಇಹನು ॥೧೦॥

ದೇಶಕಾಲಾದ್ಯವಚ್ಛೇದವಿಹೀನಂ ನಿತ್ಯನಿರ್ಮಲಂ
ಆನಂದಂ ಪ್ರಾಪ್ಯಬೋಧೇನ ನಾನ್ಯತ್ಕಾಂಕ್ಷತಿ ಸಂಯಮೀ

ದೇಶಕಾಲಾದ್ಯವಚ್ಛೇದ ವಿಹೀನಂ-ದೇಶ ಕಾಲ ಪರಿಚ್ಛೇದ ಶೂನ್ಯವಾಗಿರ್ದಂಥ, ನಿತ್ಯ ನಿರ್ಮಲಃ-ನಿತ್ಯ ನಿರ್ಮಲನು, ಆವಾಗವು-ಮಲವಿರಹಿತವಾಗಿರ್ದಂಥ, ಆನಂದಂ-ಸುಖವನು, ಪ್ರಾಪ್ಯ-ಐಯ್ದಿ, ಸಂಯಮೀ-ಶಿವಯೋಗಿಯು, ನಾನ್ಯತ್ಕಾಂಕ್ಷತಿ-ಮಿಕ್ಕಾದ ವಸ್ತುಗಳನು ಅಪೇಕ್ಷಿಸನು ॥೧೧॥

೩೮. ಶಿಕ್ಷಾಪಾದೋದಕಸ್ಥಲ

ಗುರುಶಿಷ್ಯಮಯಂ ಜ್ಞಾನಂ ಶಿಕ್ಷಾ ವಿಮಲಮೀರ್ಯತೇ
ತಯೋಶ್ರವಣ ಸತ್ವಂ ಹಿ ಶಿಕ್ಷಾಪಾದೋದಕಂ ಸ್ಮೃತಂ

ಶಿಕ್ಷಾಪಾದೋದಕ ಸ್ಥಲವನು ನಿರೂಪಿಸುತಂ ಇದ್ದಾನು.

ವಿಮಲಂ-ನಿರ್ಮಲವಾಗಿರ್ದಂಥಾ, ಗುರುಶಿಷ್ಯಮಯಂ ಜ್ಞಾನಂ-ಗುರುಶಿಷ್ಯನೆಂಬಂಥ ಜ್ಞಾನವನು, ಶಿಕ್ಷಾಯೀರ್ಯತೇ-ಶಿಕ್ಷೆ ಎನಿಸುವುದು, ತಯೋಃ-ಆ ಗುರುಶಿಷ್ಯರುಗಳ, ಶ್ರವಣ ಸತ್ವಂ-ಶಾಸ್ತ್ರಶ್ರವಣ ಸತ್ವವು, ಶಿಕ್ಷಾಪಾದೋದಕಂ ಸ್ಮೃತಂ-ಶಿಕ್ಷಾಪಾದೋದಕವೆನಿಸುವದು ॥೧೨॥

ಮಥಿತಾಚ್ಛಾಸ್ತ್ರಜಲಧೇರ್ಯ್ಯುಕ್ತಿಮಂಥಾ ವೈಭವಾತ್
ಗುರುಣಾಂ ಲಭ್ಯತೇ ಬೋಧಸುಧಾ ಸುಮನಸಾಂಗಣೈಃ

ಗುರುಣಾಂ-ಗುರುವಿನಿಂದ, ಮಥಿತಾತ್-ಮಥಿಸುವುದರಿಂದ, ಯುಕ್ತಿ ಸಂತಾನ ವೈಭವಾತ್-ಯುಕ್ತಿಗಳೆಂಬ ಕಲ್ಪವೃಕ್ಷಗಳ ಉತ್ಪತ್ತಿಯನುಳ್ಳಂಥ, ಶಾಸ್ತ್ರಜಲಧಿಃ - ಶಾಸ್ತ್ರೋಕ್ತವೆಂಬ ಸಮುದ್ರದ ದೆಸೆಯಿಂದ, ಬೋಧಸುಧಾ-ತತ್ವಜ್ಞಾನವೆಂಬ ಅಮೃತವು, ಸುಮನಸಾಂ-ವಿದ್ವಾಂಸರುಗಳೆಂಬ ದೇವತೆಗಳ, ಗುಣೈಃ-ಸಮೂಹಗಳಿಂದ, ಲಭ್ಯತೇ-ಹಡೆಯಲ್ಪಡುವುದು ॥೧೩॥

ಗುರುಪ್ರಸಾದ ಚಂದ್ರೇಣ ನಿಃಷ್ಕಳಂಕೇ ನ ಚಾರುಣಾ
ಯನ್ಮನಃಕುಮುದಂ ನಿತ್ಯಂ ಬೋಧಿತಂ ತಸ್ಯಕೋಭ್ರಮಃ

ಚಾರುಣಾ-ಮನೋಹರವಾಗಿರ್ದಂಥ, ನಿಷ್ಕಲಂಕೇನ-ಕಳಂಕರಹಿತನಾಗಿರ್ದಂಥ, ಗುರುಪ್ರಸಾದ ಚಂದ್ರೇಣ-ಗುರುಕೃಪೆ ಎಂಬ ಚಂದ್ರನಿಂದ, ಯನ್ಮನಃಕುಮುದಂ-ಆವನಾವನೊಬ್ಬನ ಮನಸ್ಸೆಂಬ ಕುಮುದವು, ಬೋಧಿತಂ-ವಿಕಸಿಸಲ್ಪಟ್ಟಿತು, ತಸ್ಯ-ಆ ಮಹಾತ್ಮನಿಗೆ, ಕೋ ಭ್ರಮಃ-ಭ್ರಮೆಯತ್ತಣದು ॥೧೪॥

ಯಸ್ತ್ವಪಾಸ್ತ ಕಲ್ಲೋಲೇ ಸುಖಸಿಂಧೌ ನಿಮಜ್ಯ ಚ
ಅಮೃತಸ್ಯನ್ಮಹಾಯೋಗೀ ತಸ್ಯ ಸೀಮಾ ಕುತೋ ಭವೇತ್

ಯಸ್ತು-ಆವವನು, ಅಪಾಸ್ತು ಕಲ್ಲೋಲೆ-ನಿರಾಕರಿಸಲ್ಪಟ್ಟ ಷಡೂರ್ಮೆಗಳನುಳ್ಳಂಥಾ, ಸುಖಸಿಂಧೌ-ಸುಖವೆಂಬ ಸಮುದ್ರದಲ್ಲಿ, ನಿಮಜ್ಯ-ಮುಳುಗಿ, ಅಮೃತಸ್ಯಾತ್-ಮುಕ್ತನಹನು, ತಸ್ಯ-ಆತಂಗೆ, ಸೀಮಾ-ಮರ್ಯಾದೆಯು, ಕುತೋಭವೇತ್-ಆವ ಕಾರಣದಿಂದ ಉಂಟಾಯಿತು ॥೧೫॥

ಜ್ಞಾನಚಂದ್ರ ಸಮುದ್ಭೂತಂ ಪರಮಾನಂದ ಚಂದ್ರಿಕಾಂ
ಪಶ್ಯಂತಿ ಪರಮಾಕಾಶೇ ಮುಕ್ತಿರಾತ್ರೌ ಮಹಾಧಿಯಃ

ಜ್ಞಾನಚಂದ್ರ ಸಮುದ್ಭೂತಂ-ಜ್ಞಾನಚಂದ್ರನಿಂದ ಹುಟ್ಟಿರ್ದಂಥಾ, ಪರಮಾನಂದ ಚಂದ್ರಿಕಾಃ-ಪರಮಾನಂದವೆಂಬ ಕಿರಣಗಳನು, ಪರಮಾಕಾಶೇ-ಪರಬ್ರಹ್ಮವೆಂಬ ಆಕಾಶದಲ್ಲಿ, ಮುಕ್ತಿರಾತ್ರೌ-ಮೋಕ್ಷವೆಂಬ ರಾತ್ರಿಯಲ್ಲಿ, ಮಹಾಧಿಯಃ-ತತ್ವಜ್ಞಾನಿಗಳು, ಪಶ್ಯಂತಿ-ಕಾಣುತ್ತಂ ಇಹರು, ॥೧೬॥

ನಿತ್ಯದೃಷ್ಟೇ ಪರಾನಂದೇ ದೇಶಕಾಲಾದಿ ವರ್ಜಿತೇ
ದ್ರಷ್ಟವ್ಯಂ ವಿದ್ಯತೇನಾನ್ಯ ಚೈತನ್ಯಂ ಜ್ಞಾನಮೇವವಾ

ದೇಶಕಾಲಾದಿವರ್ಜಿತೇ-ದೇಶಕಾಲಪರಿಚ್ಛೇದರಹಿತವಾಗಿರ್ದಂಥಾ, ಪರಾನಂದೇ-ಪರಮಾನಂದವು, ನಿತ್ಯದೃಷ್ಟೇ-ನಿತ್ಯದೃಷ್ಟವಾಗಿ, ಪ್ರತ್ಯಕ್ಷೀಕರಿಸಲ್ಪಡುತ್ತಂ ಇರಲಾಗಿ, ಅನ್ಯತ್-ಮತ್ತೊಂದು ವಸ್ತುವು, ದ್ರಷ್ಟವ್ಯಂ- ಕಾಣಲು ಯೋಗ್ಯವಾಗಿರ್ದಂಥ, ಜ್ಞೇಯಂ-ಪರೋಕ್ಷವಾಗಿ ಅರಿಯಲು ಯೋಗ್ಯವಾಗಿರ್ದಂಥಾತ್ಮನು, ನ-ಇಲ್ಲ ॥೧೭॥

ಆತ್ಮಾನಂದೇನ ತೃಪ್ತಸ್ಯ ಕಾಸ್ಪೃಹಾವಿಷಯೇ ಸುಖೇ
ಗಂಗಾಜಲೇನ ತೃಪ್ತಸ್ಯ ಕೂಪತೋಯೇ ಕುತೋರತಿಃ

ಆತ್ಮಾನಂದೇನ ತೃಪ್ತಸ್ಯ-ಸ್ವರೂಪಾನಂದದಿಂದ ತೃಪ್ತನಾಗಿರ್ದಂಥಾತಂಗೆ, ವಿಷಯೇ ಸುಖೇ-ವಿಷಯ ಸುಖದಲ್ಲಿ, ತಸ್ಪೃಹಾ-ಅಭಿಲಾಷೆಯು, ಅಲ್ಲಿ ದೃಷ್ಟಾಂತ-ಗಂಗಾಜಲೇನ ತೃಪ್ತಸ್ಯ-ಗಂಗೋದಕದಿಂ ತೃಪ್ತನಾಗಿರ್ದಂಥಾತಂಗೆ, ಕೂಪತೋಯೇ-ಬಾವಿ ನೀರಿನಲ್ಲಿ, ಕುತೋರತಿಃ-ಪ್ರೀತಿಯತ್ತಣದು ॥೧೮॥

೩೯. ಜ್ಞಾನಪಾದೋದಕಸ್ಥಲ

ಐಕ್ಯಸಂಪಾದಕಂ ಜ್ಞಾನಂ ಜ್ಞಾನದಾತಾ ಗುರುರ್ಮತಃ
ತತ್ಪ್ರಸಾದಸ್ಯ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ

ಜ್ಞಾನಪಾದೋದಕಸ್ಥಲವನು ನಿರೂಪಿಸುತಂ ಇದ್ದಾನು.

ಜ್ಞಾನಂ-ಜ್ಞಾನವು, ಐಕ್ಯಸಂಪಾದಕಂ-ಬ್ರಹ್ಮೈಕ್ಯವನು ಸಂಪಾದಿಸುವ, ಗುರುಃ-ಗುರುವು, ಜ್ಞಾನದಾತಾ-ಜ್ಞಾನವನು ಕೊಡುವನು, ತತ್ಪ್ರಸಾದಸ್ಯ ಶಿಷ್ಯಸ್ಯ-ಆ ಗುರುಪ್ರಸಾದವನುಳ್ಳ ಶಿಷ್ಯಂಗೆ, ತದನ್-ಆ ಪ್ರಸಾದಪೂರ್ವಕವಾಗಿರ್ದಂಥ ಜ್ಞಾನವು, ಜ್ಞಾನಪಾದೋದಕಂ ಮತಂ-ಜ್ಞಾನ ಪಾದೋದಕವೆನಿಸುವುದು ॥೧೯॥

ಯನ್ಮಾತ್ರಸಹಿತಂ ಲೋಕೇ ವಾಂಛಂತಿ ವಿಷಯಂ ನರಾಃ
ತಮಪ್ರಮೇಯಮಾನಂದಂ ಪರಮಂ ಕೋ ನ ವಾಂಛತಿ

ಲೋಕೇ-ಭುವನದಲ್ಲಿ, ನರಾಃ-ಮನುಷ್ಯರು, ಯನ್ಮಾತ್ರ ಸಹಿತಂ-ಆವುದಾನೊಂದು ಪರಮಾನಂದದ ಅಂಶದಿಂದ ಕೂಡಿರ್ದಂಥಾ ವಿಷಯವನು, ವಾಂಛಂತಿ-ಬಯಸುತ್ತಂ ಇಹರು, ಅಪ್ರಮೇಯಂ-ಪೂರ್ಣವಾಗಿರ್ದಂಥ, ತಂ ಪರಮಾನಂದಂ-ಆ ಪರಮಾನಂದವನು, ಕೋನವಾಂಛತಿ-ಆರು ತಾನೆ ಬಯಸುವರು ॥೨೦॥

ಜ್ಞಾನಚಂದ್ರೋದಯೇಜಾತೆ ಧ್ವಸ್ತ ಮೋಹತಮೋಭರಾಃ
ಪಶ್ಯಂತಿ ಪರಮಾಂಕಾಷ್ಠಾಂ ಯೋಗಿನಃ ಸುಖರೂಪಿಣೀ

ಜ್ಞಾನ ಚಂದ್ರೋದಯೇ ಜಾತೆ-ಜ್ಞಾನವೆಂಬ ಚಂದ್ರೋದಯವಾಗುತ್ತಂ ಇರಲಾಗಿ, ಧ್ವಸ್ತ ಮೋಹತಮೋಭರಾಃ-ಕೆಡಿಸಲ್ಪಟ್ಟ ಅಜ್ಞಾನವೆಂಬ ಕತ್ತಲೆಯ ಸಮೂಹವನುಳ್ಳಂಥಾ, ಯೋಗಿನಃ-ಶಿವಯೋಗಿಗಳು, ಸುಖರೂಪಿಣಿ-ಸುಖಸ್ವರೂಪವಾಗಿರ್ದಂಥ, ಪರಮಾಂ ಕಾಷ್ಠಂ-ಪರಮಕಾಷ್ಠೆಯನು, ಪಶ್ಯತಿ-ಕಾಂಬುತ್ತಂ ಇಹರು ॥೨೧॥

ನಿತ್ಯಾನಂದೇ ನಿಜಾಕಾರೇ ವಿಮಲೇ ಪರತೇಜಸಿ
ವಿಲೀನಚೇತಸಾಂ ಪುಂಸಾಂ ಕುತೋ ವಿಶ್ವಕಲ್ಪನಾ

ನಿಜಾಕಾರೇ-ತನ್ನ ಸ್ವರೂಪವಾಗಿರ್ದಂಥಾ, ವಿಮಲೇ-ನಿರ್ಮಲವಾಗಿರ್ದಂಥಾ, ನಿತ್ಯಾನಂದೇ-ನಿತ್ಯಾನಂದ ಸ್ವರೂಪವಾಗಿರ್ದಂಥ, ಪರತೇಜಸಿ-ಪರಬ್ರಹ್ಮದಲ್ಲಿ, ವಿಲೀನ ತೇಜಸಾಂ, ಸ್ಥಿರಚಿತ್ತರಾಗಿರ್ದಂಥಾ, ಪುಂಸಾಂ-ಪುರುಷರುಗಳಿಗೆ, ವಿಶ್ವಕಲ್ಪನಾ ಕುತಃ-ಜಗತ್ತಿನ ಕಲ್ಪನೆಯತ್ತಣದೊ ॥೨೨॥

ಅನಾದ್ಯವಿದ್ಯಾವಿಚ್ಛಿತ್ತಿ ವೇಲಾಯಾಂ ಪರಯೋಗಿನಃ
ಪ್ರಕಾಶ ತೇ ಪರಾನಂದಃ ಪ್ರಪಂಚೇನ ವಿನಾಕುತಃ

ಅನ್ಯಾದ್ಯವಿದ್ಯಾ ವಿಚ್ಛಿತ್ತಿ ವೇಲಾಯಾಂ-ಅನಾದಿಯಾಗಿರ್ದಂಥ ಅವಿದ್ಯೆಯ ನಾಶ ಸಮಯದಲ್ಲಿ, ಪರಯೋಗಿನಃ-ಪರಶಿವಯೋಗಿಗೆ, ಪ್ರಪಂಚೇನವಿನಾಕೃತಃ-ಪ್ರಪಂಚ ಶೂನ್ಯವಾಗಿರ್ದಂಥ, ಪರಾನಂದಃ-ಪರಮಾನಂದವು, ಪ್ರಕಾಶತೇ-ಪ್ರಕಾಶಿಸುವುದು ॥೨೩॥

ಅವಿದ್ಯಾರಾಹುನಿರ್ಮುಕ್ತೋ ಜೀವಚಂದ್ರಃ ಸುನಿರ್ಮಲಃ
ಪ್ರಕಾಶತೇ ಪರಕಾಶೇ ಪರಾನಂದಮಹಾದ್ಯುತಿಃ

ಅವಿದ್ಯಾರಾಹುನಿರ್ಮುಕ್ತಃ-ಅಜ್ಞಾನವೆಂಬ ರಾಹುವಿನಿಂದ ಬಿಡಲ್ಪಟ್ಟಂಥಾ, ಸುನಿರ್ಮಲಃ-ನಿರ್ಮಲನಾಗಿರ್ದಂಥಾ, ಜೀವಚಂದ್ರಂ-ಜೀವನೆಂಬ ಚಂದ್ರನು, ಪರಕಾಶೆ-ಪರಬ್ರಹ್ಮವೆಂಬ ಆಕಾಶದಲ್ಲಿ, ಪರಾನಂದ ಮಹಾದ್ಯುತಿಃ-ಪರಾನಂದವೆಂಬ ಕಿರಣವನುಳ್ಳಂಥಾತನಾಗಿ, ಪ್ರಕಾಶತೇ-ಒಪ್ಪುತ್ತಂ ಇಹನು ॥೨೪॥

ಅಪರೋಕ್ಷಪರಾನಂದ ವಿಲಾಸಸ್ಯ ಮಹಾತ್ಮನಃ
ಬ್ರಹ್ಮವಿಷ್ಣ್ವಾದಯೋದೇವಾ ವಿಶೇಷಾತ್ಸುಖಬಿಂದವಃ

ಅಪರೋಕ್ಷಪರಾನಂದ ವಿಲಾಸಸ್ಯ-ಪ್ರತ್ಯಕ್ಷೀಕರಿಸಲ್ಪಟ್ಟ ಪರಮಾನಂದದ ವಿಲಾಸ ವನುಳ್ಳಂಥ, ಮಹಾತ್ಮನಃ-ಮಹಾತ್ಮನಿಗೆ, ಬ್ರಹ್ಮವಿಷ್ಣ್ವಾದಯಃ-ಬ್ರಹ್ಮವಿಷ್ಣು ಮೊದಲಾದ ದೇವತಾ ವಿಶೇಷಂಗಳು, ಸುಖಬಿಂದವಃ-ಸುಖಲೇಶಗಳು ॥೨೫॥

ಮಾಯಾರಜನ್ಯಾವಿರಮೇ ಬೋಧ ಸೂರ್ಯೇ ಪ್ರಕಾಶಿತೇ
ನಿರಸ್ತಸ್ಸರ್ವವ್ಯಾಪಾರಶ್ಚಿತ್ರಂ ಸ್ವಪಿತಿಸಂಯಮೀ

ಬೋಧಸೂರ್ಯ ಪ್ರಕಾಶತೇ-ಜ್ಞಾನವೆಂಬ ಸೂರ್ಯನು ಉದಿಸುತ್ತಂ ಇರಲಾಗಿ, ಮಾಯಾರಜನ್ಯಾ ವಿರಮೇ-ಮಾಯೆಯೆಂಬ ರಾತ್ರಿಗೆ ಅವಸಾನವಾಗುತ್ತಂ ಇರಲಾಗಿ, ನಿರಸ್ತಸರ್ವ ವ್ಯಾಪಾರಃ-ನಿರಾಕರಿಸಲ್ಪಟ್ಟ ಸಮಸ್ತ ವ್ಯಾಪಾರವನುಳ್ಳಂಥಾ, ಸಂಯಮೀ-ಶಿವ ಯೋಗಿಯು, ಸ್ವಪತಿ-ಮಲಗುತ್ತಂ ಇಹನು, ಚಿತ್ರಂ-ರಾತ್ರೆಯಲ್ಲಿ ಅಂಧಕಾರದಿಂದ ಸಮಸ್ತ ವ್ಯಾಪಾರವನು ಬಿಟ್ಟು ಮಲಗುವದೀಗಲೆ ಸ್ವಭಾವ ಅದಕ್ಕೆ ವಿಪರೀತವಾದ ಕಾರಣ ಆಶ್ಚರ್ಯ ॥೨೬॥

ಅಜ್ಞಾನಮೇಘನಿರ್ಮುಕ್ತಃ ಪೂರ್ಣಜೀವ ಸುಧಾಕರಃ
ಆನಂದಜಲಧೇರ್ವೃದ್ಧಿಮನುಪಶ್ಯನ್ವಿಭಾಸತೇ

ಅಜ್ಞಾನಮೇಘನಿರ್ಮುಕ್ತಃ-ಅಜ್ಞಾನವೆಂಬ ಮೇಘ ಬಿಡಲ್ಪಟ್ಟಂಥ, ಪೂರ್ಣಃ-ಪೂರ್ಣವಾಗಿರ್ದಂಥ, ಜೀವಸುಧಾಕರಃ-ಜೀವನೆಂಬ ಚಂದ್ರನು, ಆನಂದ ಜಲಧೇಃ-ಆನಂದವೆಂಬ ಸಮುದ್ರವನು, ವೃದ್ಧಿ ಮನುಪಶ್ಯನ್-ವೃದ್ಧಿಯನು ಮಾಡುತ್ತ, ಭಾಸತೇ-ಒಪ್ಪುತಂ ಇಹನು ॥೨೭॥

ಕುತೋ ಬ್ರಹ್ಮಾ ಕುತೋವಿಷ್ಣುಃ ಕುತೋರುದ್ರಃ ಕುತೋ ರವಿಃ
ಸಾಕ್ಷಾತ್ಕೃತ ಪರಾನಂದ ಜ್ಯೋತಿಷಸ್ಸಾಮ್ಯಕಲ್ಪನೇ

ಸಾಕ್ಷಾತ್ಕೃತಪರಾನಂದಜ್ಯೋತಿಷಃ-ಸಾಕ್ಷಾತ್ಕರಿಸಲ್ಪಟ್ಟ ಪರಮಾನಂದ ಪ್ರಕಾಶವನುಳ್ಳಂಥಾತಂಗೆ, ಸಾಮ್ಯಕಲ್ಪನೇ-ಸರ್ವತ್ರಸಮಬುದ್ಧಿಯುಂಟಾದರೆ, ಬ್ರಹ್ಮ-ಬ್ರಹ್ಮನು, ವಿಷ್ಣುಃ-ವಿಷ್ಣುವು, ರುದ್ರಃ-ರುದ್ರನು, ರವಿಃ-ಸೂರ್ಯನು ಎಂಬ ಭೇದಗಳು ಕುತಃ-ಎತ್ತಣದೊ ॥೨೮॥

೪೦. ಕ್ರಿಯಾನಿಷ್ಪತ್ತಿಸ್ಥಲ

ಪರಕಾಯೇ ಕ್ರಿಯಾಪತ್ತಿಃ ಕಲ್ಪಿತೈವ ಪ್ರಕಾಶತೇ
ರಜ್ಜ್ವಾ ಭುಜಂಗವತ್ತಾಸ್ಮಾತ್ಕ್ರಿಯಾನಿಷ್ಪತ್ತಿಮಾನಯಂ

ನಿಷ್ಪತ್ತಿಸ್ಥಲವನು ನಿರೂಪಿಸುತಂ ಇದ್ದಾನು

ಪರಕಾಯೇ-ಪರಶರೀರದಲ್ಲಿ, ಕ್ರಿಯಾನಿಷ್ಪತ್ತಿಃ-ಕ್ರಿಯಾನಿಷ್ಪತ್ತಿಯು, ಕಲ್ಪಿತೈವ ಪ್ರಕಾಶತೇ-ಕಲ್ಪಿತವಾಗಿಯೆ ತೋರುತ್ತಂ ಇಹುದು, ರಜ್ಜ್ವಾ-ಹಗ್ಗದಲ್ಲಿ, ಭುಜಂಗವತ್-ಸರ್ಪನ ಮರ್ಯಾದೆಯಲ್ಲಿ, ತಸ್ಮಾತ್-ಅದು ಕಾರಣ, ಕ್ರಿಯಾನಿಷ್ಪತ್ತಿಮಾನ್-ಇದನರಿದಂಥಾತನು ಕ್ರಿಯಾನಿಷ್ಪತ್ತಿಯುಳ್ಳವನೆಂದು, ಹೇಳಲ್ಪಡುವನು ॥೨೯॥

ನಿರಸ್ತೋಪಾಧಿಸಂಬಂಧೇ ಜೀವೇ ಯಾಯಾ ಕ್ರಿಯಾಸ್ಥಿತಿಃ
ಸಾಸಾ ಪ್ರತೀತಿಮಾತ್ರೇಣ ನಿಷ್ಫಲಾ ತತ್ರಲೀಯತೇ

ನಿರಸ್ತೋಪಾಧಿ ಸಂಬಂಧೇ-ನಿರಾಕರಿಸಲ್ಪಟ್ಟ ಉಪಾಧಿ ಸಂಬಂಧವನುಳ್ಳಂಥ, ಜೀವೇ-ಜೀವನಲ್ಲಿ, ಯಾಯಾಕ್ರಿಯಾಸ್ಥಿತಿಃ-ಆವಾವ ಕ್ರಿಯೆಯುಂಟು, ಸಾಸಾ-ಆ ಕ್ರಿಯೆಯು, ಪ್ರತೀತಿಮಾತ್ರೇಣ-ತತ್ವಜ್ಞಾನ ಹುಟ್ಟಿದ ಮಾತ್ರದಲ್ಲಿ, ನಿಷ್ಫಲ-ವ್ಯರ್ಥವಾಗಿ, ತತ್ರ-ಆ ಜೀವನಲ್ಲಿ, ಲೀಯತೆ-ಅಡಗುವುದು ॥೩೦॥

ಚಂದ್ರಸ್ಯ ಮೇಘಸಂಬಂಧಾದ್ಯಥಾ ಗಮನ ಕಲ್ಪನಾಃ
ತಥಾ ದೇಹಸ್ಯ ಸಂಬಂಧಾದಾರೋಪ್ಯಸ್ಯಾಽತ್ಮಕ್ರಿಯಾಽತ್ಮನಃ

ಚಂದ್ರಸ್ಯ-ಚಂದ್ರನಿಗೆ, ಮೇಘಸಂಬಂಧಾತ್-ಮೇಘಸಂಬಂಧದಿಂದ, ಯಥಾಗಮನ ಕಲ್ಪನಾ-ಹಿಂಗೆ ಗಮನಭ್ರಮೆಯು, ತಥಾ-ಹಾಂಗೆ, ದೇಹಸ್ಯ ಸಂಬಂಧಾತ್-ದೇಹಸಂಬಂಧದಿಂದ, ಆತ್ಮನಃ-ಆತ್ಮನಲ್ಲಿ ಕ್ರಿಯಾ-ಕ್ರಿಯೆಯು, ಆರೋಪ್ಯ-ಆರೋಪಿಸಲ್ಪಡುವುದು ॥೩೧॥

ಗಚ್ಛನ್ ತಿಷ್ಠನ್ ಸ್ವಪನ್ನಾಪಿ ನನಿಷ್ಕರ್ಮಾಸ್ತಿ ಕಶ್ಚನ
ಸ್ವಭಾವೋ ದೇಹಿನಾಂ ಕರ್ಮಜ್ಞಾನಿನಾಂತತ್ತುನಿಷ್ಫಲಂ

ಗಚ್ಛನ್-ನಡವುತ್ತಾ, ತಿಷ್ಠನ್-ಇರುತ್ತಾ, ಸ್ವಪನ್-ಮಲಗುತ್ತಾ ಇರ್ದಂಥಾತನಾದರು, ಕಶ್ಚನಂ-ಒಬ್ಬನು, ನಿಷ್ಕರ್ಮನಾಸ್ತಿ-ಕರ್ಮರಹಿತನಲ್ಲ, ದೇಹಿನಾಂ-ಪ್ರಾಣಿಗಳಿಗೆ, ಕರ್ಮ-ಕರ್ಮವು, ಸ್ವಭಾವಃ-ಸ್ವಭಾವವು, ತತ್-ಆ ಕರ್ಮವು, ನಿಷ್ಫಲಂ-ತತ್ವಜ್ಞಾನಿಗೆ ವ್ಯರ್ಥ ॥೩೨॥

ಜ್ಞಾನೀ ಕರ್ಮನಿರೂಢೋಪಿ ಲಿಪ್ಯತೇ ನಾಸ್ತಿ ಲೇಪತಃ
ಘೃತಾದಿ ನಾ ಯಥಾ ಜಿಹ್ವಾ ಭೋಕ್ತ್ರೀ ಚಾಪಿ ನ ಲಿಪ್ಯತೇ

ಕರ್ಮನಿರೂಢೋಪಿ-ಕರ್ಮದಲ್ಲಿ ಆಸಕ್ತನಾದರೂ, ಜ್ಞಾನೀ-ತತ್ವಜ್ಞಾನಿಯು ಲೇಪತೋ ನ ಲಿಪ್ಯತೆ-ಪಾಪ ಪುಣ್ಯಂಗಳಿಂದ ಲೇಪಿಸಲ್ಪಡನು, ಅಲ್ಲಿ ದೃಷ್ಟಾಂತ-ಘೃತಾದಿನಾ-ತುಪ್ಪ ಮೊದಲಾದವನು, ಭೋಕ್ತೃ-ಭುಂಜಿಸುವಂಥಾ, ಜಿಹ್ವಾ-ನಾಲಿಗೆಯು, ಯಥಾ ನ ಲಿಪ್ಯತೇ-ಹೇಗೆ ಲೇಪಿಸಲ್ಪಡುವುದು ॥೩೩॥

ಕರ್ಮಣಾ ಕಿಂ ಕೃತೇನಾಪಿ ಜ್ಞಾನಿನೋ ನಿರಹಂಕೃತೇಃ
ವಿಕ್ರಿಯಾ ಪ್ರತಿಬಿಂಬಸ್ಥ ಕಿಂ ಕರೋತಿಹಿಮದ್ಯುತೇಃ

ನಿರಹಂಕೃತೇಃ-ಅಹಂಕಾರಶೂನ್ಯವಾಗಿರ್ದಂಥಾ, ಜ್ಞಾನಿನಃ-ಜ್ಞಾನಿಗೆ, ಕೃತೇನಾಪಿಕರ್ಮಣಾ-ಮಾಡಲ್ಪಟ್ಟ ಕರ್ಮಂಗಳಿಂದ, ಕಿಂ-ಪ್ರಯೋಜನವೇನು, ಅಲ್ಲಿ ದೃಷ್ಟಾಂತ ಪ್ರತಿಬಿಂಬಸ್ಥಃ-ಪ್ರತಿಬಿಂಬದಲ್ಲಿ ಇರುತ್ತಂ ಇರ್ದಂಥ, ವಿಕ್ರಿಯಾ-ನಿರಾಕಾರವು, ಹಿಮದ್ಯುತೇಃ-ಚಂದ್ರನಿಗೆ, ಕಿಂ ಕರೋತಿ-ಆವ ಬಾಧೆಯನು ಮಾಡುವದು ॥೩೪॥

ಪರಿಪೂರ್ಣಮಹಾನಂದಭಾವಿನಶ್ಶುದ್ಧ ಚೇತಸಃ
ನಭವೇತ್ಕರ್ಮ ಕಾರ್ಪಣ್ಯಂ ನಾನಾಭೋಗಫಲಪ್ರದಂ

ಪರಿಪೂರ್ಣಮಹಾನಂದಭಾವಿನಃ-ಪರಿಪೂರ್ಣಾನಂದವನು ಭಾವಿಸುತಂ ಇರ್ದಂಥಾ, ಶುದ್ಧಚೇತಸಃ-ಶುದ್ಧಚಿತ್ತನಾಗಿರ್ದಂಥ ಯೋಗಿಗೆ, ನಾನಾಭೋಗ ಫಲಪ್ರದಂ-ನಾನಾ ಪ್ರಕಾರವಾದ ಭೋಗಫಲವನು ಕೊಡುವಂಥಾ, ಕರ್ಮ ಕಾರ್ಪಣ್ಯಂ-ಕರ್ಮಕಾರ್ಪಣ್ಯವು, ನಭವೇತ್-ಸಂಭವಿಸದು ॥೩೫॥

ಜ್ಞಾನಿನೋ ಯಾನಿ ಕರ್ಮಾಣಿ ತಾನಿನೋ ಜನ್ಮಹೇತವಃ
ಅಗ್ನಿದಗ್ಧಾನಿ ಬೀಜಾನಿ ಯಥಾನಾಂಕುರ ಕಾರಣಂ

ಜ್ಞಾನಿನಃ-ಜ್ಞಾನಿಗೆ, ಯಾನಿ ಕರ್ಮಾಣಿ-ಆವವು ಕೆಲವು ಕರ್ಮಂಗಳುಂಟು, ತಾನಿ-ಅವು, ನೋ ಜನ್ಮ ಹೇತವಃ-ಜನ್ಮಕ್ಕೆ ಕಾರಣವಲ್ಲ, ಅಲ್ಲಿ ದೃಷ್ಟಾಂತ ಅಗ್ನಿದಗ್ಧಾ-ಅಗ್ನಿಯಿಂದ ದಹಿಸಲ್ಪಟ್ಟಂಥಾ, ಬೀಜಾನಿ-ಬೀಜಂಗಳು ಯಥಾನಾಂಕುರ ಕಾರಣಂ-ಹೆಂಗೆ ಅಂಕುರಕ್ಕೆ ಕಾರಣವಲ್ಲ ॥೩೬॥

೪೧. ಭಾವನಿಷ್ಪತ್ತಿಸ್ಥಲ

ಭಾವಃ ಪ್ರತೀಯಮಾನೋಽಪಿ ಪರಕಾಯೇತು ಕಲ್ಪಿತಃ
ಶುಕ್ತೌ ರಜತವದ್ಯಸ್ಮಾದ್ಭಾವ ನಿಷ್ಪತ್ತಿರಿತ್ಯತಃ

ಭಾವನಿಷ್ಪತ್ತಿಸ್ಥಲವನು ನಿರೂಪಿಸುತಂ ಇದ್ದಾನು

ಪ್ರತೀಯಮಾನೋಪಿ-ಪ್ರತ್ಯಕ್ಷವಾಗಿರ್ದಂಥದಾದರೂ, ಭಾವಃ-ಭಾವವು, ಶುಕ್ತೌರಜತವತ್-ಶುಕ್ತಿಯಲ್ಲಿ ರಜತ ಮರ್ಯಾದೆಯಲ್ಲಿ, ಪರಕಾಯೇ-ಪರಕಾಯದಲ್ಲಿ, ಕಲ್ಪಿತಃ-ಕಲ್ಪಿಸಲ್ಪಟ್ಟಿತ್ತು ಎಂಬ ಜ್ಞಾನವು, ಭಾವನಿಷ್ಪತ್ತಿಃ-ಭಾವನಿಷ್ಪತ್ತಿಯೆನಿಸುವ ಸ್ಥಲ ॥೩೭॥

ಪರಿಪೂರ್ಣ ಪ್ರಬೋಧೇನ ಭಾವಂ ಶಂಭೌ ನ ವರ್ಜಯೇತ್
ಭಾವೋಪನಿಹಿತ ತಸ್ಮಿನ್ ಭ್ರಾಂತಿಸಾಗರತಾರಕಃ

ಪರಿಪೂರ್ಣಪ್ರಬೋಧೇನ-ಪರಿಪೂರ್ಣ ಜ್ಞಾನ ಹುಟ್ಟಿದುದುಂಟಾದರೆ, ಶಂಭೌ-ಶಿವನಲ್ಲಿ, ಭಾವಂ-ಭಾವವನು, ನ ವರ್ಜಯೇತ್-ಬಿಡಲಾಗದು, ತಸ್ಮಿನ್-ಆ ಶಿವನಲ್ಲಿ, ನಿಹಿತಃ-ಇರಿಸಲ್ಪಟ್ಟಂಥ, ಭಾವಃ-ಭಾವವು, ಭ್ರಾಂತಿಸಾಗರ ತಾರಕಃ-ಭ್ರಾಂತಿ ಸಮುದ್ರವನು ದಾಟಿಸುವನು ॥೩೮॥

ಭಾವೇ ನ ನಾಸ್ತಿ ಸಂಬಂಧಃ ಕೇವಲಜ್ಞಾನಯೋಗಿನಃ
ತಥಾಪಿ ಭಾವಂ ಕುರ್ವೀತ ಶಿವೇ ಸಂಸಾರ ಮೋಚಕೇ

ಕೇವಲಜ್ಞಾನಯೋಗಿನಃ-ಕೇವಲಜ್ಞಾನಯೋಗವನುಳ್ಳಂಥಾತಂಗೆ, ಬಾವೇನ-ಭಾವದೊಡನೆ, ನಾಸ್ತಿ ಸಂಬಂಧಃ-ಸಂಬಂಧವಿಲ್ಲ, ತಥಾಪಿ-ಹಾಂಗಾದರೂ, ಸಂಸಾರಮೋಚಕೇ-ಸಂಸಾರವನು ಬಿಡಿಸುವಂಥಾ, ಶಿವೇ-ಶಿವನಲ್ಲಿ, ಭಾವಂಕುರ್ವೀತ-ಭಾವವನು ಇರಿಸಬೇಕು ॥೩೯॥

ನಿವರ್ತ್ಯ ಜನ್ಮಜಂ ದುಃಖಂ ಭಾವಶೇಷ ನಿವರ್ತತೇ
ಯಥಾಕಾಷ್ಠಾದಿಕಂ ದಗ್ಧ್ವಾ ಸ್ವಯಂ ಶಾಮ್ಯತಿ ಪಾವಕಃ

ಭಾವಶೇಷಃ-ಭಾವಶೇಷವು, ಭಾವಜಂ-ಭಾವಜನ್ಯವಾಗಿರ್ದಂಥಾ, ದುಃಖಂ-ದುಃಖವನು, ನಿವರ್ತ್ಯಾ-ನಿವರ್ತಿಸಿ, ಸ್ವಯನಿವರ್ತತೇ-ತನ್ನಿಂತಾನೆ ನಿವೃತ್ತವಾಗಿ ಹೋಗುತ್ತಂ ಇಹುದು, ಅಲ್ಲಿ ದೃಷ್ಟಾಂತ, ಕಾಷ್ಠಾದಿಕಂ ದಗ್ಧ್ವಾ-ಕಾಷ್ಠಾದಿಗಳನು ದಹಿಸಿ, ಪಾವಕಃ -ಅಗ್ನಿಯು, ಸ್ವಯಂಶಾಮ್ಯತಿ ತಾನು ಶಾಂತಿಯನು ಐಯ್ದುವುದು ॥೪೦॥

ಪ್ರಕಾಶಿತೇ ಪರಾನಂದೇ ತದ್ಭಾವೈಃ ಕಿಂ ಪ್ರಯೋಜನಂ
ಸಿದ್ಧೌ ಸಾಧ್ಯೇ ಚಿರೇಣಾಪಿ ಸಾಧನೈಃ ಕಿಂ ಪ್ರಯೋಜನಂ

ಪರಾನಂದೇ-ಪರಮಾನಂದವು ಪ್ರಕಾಶಿತೇ-ಸಾಕ್ಷಾತ್ಕರಿಸಲ್ಪಡುತ್ತಂ ಇರಲಾಗಿ, ತದ್ಭಾವೈಃ ಕಿಂ ಪ್ರಯೋಜನಂ-ಶಿವಭಾವಗಳಿಂದ ಪ್ರಯೋಜನವೇನು. ಅಲ್ಲಿ ದೃಷ್ಟಾಂತ, ಕಾರ್ಯೇ-ಕಾರ್ಯವು, ಸಿದ್ಧೌ-ಸಿದ್ಧವಾಗುತ್ತಂ ಇರಲಾಗಿ, ಸಾಧನೈಃ ಕಿಂ ಪ್ರಯೋಜನಂ-ಸಾಧನಗಳಿಂದ ಪ್ರಯೋಜನವೇನು ॥೪೧॥

ಏಕೀಭೂತೇ ಶಿವೇ ಭಾವೇ ಜ್ಞಾನೇನ ಸಹ ಸಂಯಮೀ
ವಿಸ್ಮೃತಾತ್ಮಸಮಾವೇಶಃಶಿವಭಾವೇ ವಿಭಾಸತೇ

ಭಾವೇ-ಭಾವವು, ಶಿವೇ-ಶಿವನಲ್ಲಿ, ಏಕಿಭೂತೇ-ಏಕವಾಗುತ್ತಂ ಇರಲಾಗಿ, ಸಂಯಮೀ-ಶಿವಯೋಗಿಯು, ಜ್ಞಾನೇನ ಸಹಾ-ಜ್ಞಾನದೊಡನೆ ಸಹಿತವಾಗಿ, ವಿಸ್ಮೃತಾತ್ಮ ಸಮಾವೇಶಃ-ಮರೆಯಲ್ಪಟ್ಟ ಆತ್ಮನ ಪೂರ್ಣಾವಸ್ಥೆಯನುಳ್ಳಂಥಾತನಾಗಿ, ಶಿವಭಾವೇ-ಶಿವಾದ್ವೈತದಲ್ಲಿ, ಭಾಸತೇ-ಒಪ್ಪುತಂ ಇಹನು ॥೪೨॥

ನ ಭಾವೇನ ವಿನಾಜ್ಞಾನಂ ನ ಭಾವೋ ಜ್ಞಾನಮಂತರಂ
ಮೋಕ್ಷಾಯ ಕಾರಣಪ್ರೋಕ್ತಂ ತಸ್ಮಾದುಭಯಮಾಶ್ರಯೇತ್

ಮೋಕ್ಷಾಯ-ಮೋಕ್ಷಕ್ಕೋಸ್ಕರ ಯತ್-ಆವುದಾನೊಂದು ಕಾರಣವಾಗಿ, ಭಾವೇನ ವಿನಾ ಭಾವದಿಂದ ಹೊರತಾಗಿ, ಜ್ಞಾನಂ ನ ಕಾರಣಂ-ಜ್ಞಾನವು ಕಾರಣವಲ್ಲ, ಜ್ಞಾನ ಮಂತರಂ-ಜ್ಞಾನವ ಬಿಟ್ಟು ಭಾವಕಾರಣವಲ್ಲ, ತಸ್ಮಾತ್-ಅದು ಕಾರಣ, ಉಭಯ ಮಾಚರೇತ್-ಎರಡನೂ ಆಚರಿಸುವುದು ॥೪೩॥*

೪೨. ಜ್ಞಾನನಿಷ್ಪತ್ತಿಸ್ಥಲ

ಜ್ಞಾನಸ್ಯವ್ಯವಹಾರೇಪಿ ಜ್ಞೇಯಾಭಾವಾತ್ಸ್ವಭಾವತಃ
ಸ್ವಪ್ನವದ್ಜ್ಞಾನ ನಿಷ್ಪತ್ಯಾಜ್ಞಾನನಿಷ್ಪನ್ನ ಇತ್ಯಸೌ

ಜ್ಞಾನಸ್ಯ - ಜ್ಞಾನದ, ವ್ಯವಹಾರೇಪಿ-ವ್ಯವಹಾರದಲ್ಲಿಯು, ಸ್ವಭಾವತಃ-ಸ್ವಭಾವದ ದೆಸೆಯಿಂದ, ಜ್ಞೇಯಾಭಾವಾತ್-ಜ್ಞೇಯವಿಲ್ಲದಿಹುದರ ದೆಸೆಯಿಂದ, ಸ್ವಪ್ನವತ್-ಸ್ವಪ್ನದ ಹಾಂಗೆ, ಜ್ಞಾನನಿಷ್ಪತ್ಯಾ-ಜ್ಞಾನ ಹುಟ್ಟುವ ಪ್ರಕಾರವರಿವುದರಿಂದ, ಜ್ಞಾನನಿಷ್ಪನ್ನ ಅಸೌ ಸೇವ್ಯ ಇತಿ-ಈ ಸೇವ್ಯನು ಜ್ಞಾನನಿಷ್ಪನ್ನನೆನಿಸುವನು ॥೪೪॥

ಸ್ವಪ್ನಜಾತಂ ಯಥಾಜ್ಞಾನಂ ಸಹಸ್ವಾರ್ಥೈಃ ನಿವರ್ತತೇ
ತಥಾತ್ಮನಿ ಪ್ರಕಾಶೇತು ಜ್ಞಾನಂ ಜ್ಞೇಯಾನ್ನಿವರ್ತತೇ

ಯಥಾ-ಹೆಂಗೆ, ಸ್ವಪ್ನಜಾತಂ-ಸ್ವಪ್ನದಲ್ಲಿ ಹುಟ್ಟಿದ ಜ್ಞಾನವು, ಸ್ವಾರ್ಥೈಃ-ತನ್ನ ವಿಷಯಂಗಳೊಡನೆ ಸಹವಾಗಿ, ನಿವರ್ತತೇ-ತಿರುಗುವುದು, ತಥಾ-ಹಾಗೆ, ಆತ್ಮನಿ-ಆತ್ಮ ನಲ್ಲಿ, ಪ್ರಕಾಶೇತು-ಪ್ರಕಾಶಿಸುತ್ತಿರಲಾಗಿ, ಜ್ಞಾನಂ-ಜ್ಞಾನವು, ಜ್ಞೇಯಂ-ಜ್ಞೇಯದ ದೆಸೆಯಿಂದ, ನಿವರ್ತತೇ-ನಿವರ್ತವಹುದು ॥೪೫॥

ಪರಿಪೂರ್ಣೇ ಮಹಾನಂದೇ ಪರಮಾಕಾಶಲಕ್ಷಣೇ
ಶಿವೇ ವಿಲೀನಚಿತ್ತಸ್ಯ ಕುತೋಜ್ಞೇಯಾಂತರೇ ತಥಾ

ಪರಮಾಕಾಶಲಕ್ಷಣೇ-ಪರಮಾಕಾಶಲಕ್ಷಣವನುಳ್ಳ, ಪರಿಪೂರ್ಣೇಮಹಾ ನಂದೇ-ಪರಿಪೂರ್ಣಮಹಾನಂದವನುಳ್ಳ, ಶಿವೇ-ಶಿವನಲ್ಲಿ, ವಿಲೀನಚಿತ್ತಸ್ಯ-ಅಡಗಿದ ಚಿತ್ತವನುಳ್ಳಾತಗೆ, ತಥಾ-ಹಾಂಗೆ, ಜ್ಞೇಯಾಂತರಂ-ಜ್ಞೇಯಾಂತರವು, ಕುತಃ-ಎಲ್ಲಿಯದು ॥೪೬॥

ಜ್ಞಾತಾಹಂ ಚ ಜ್ಞೇಯಮಿದಮಿತಿ ವ್ಯವಹೃತಿಃ ಕುತಃ
ಅಭೇದಬ್ರಹ್ಮಸಾರಸ್ಯೇ ನಿರಸ್ತಾಖಿಲ ವಸ್ತುನಿ

ನಿರಸ್ತಾಖಿಲವಸ್ತುನಿ-ತೊಲಗಿಸಲ್ಪಟ್ಟ ಸಮಸ್ತವನುಳ್ಳ, ಅಭೇದ್ಯಬ್ರಹ್ಮ ಸಾರಸ್ಯೇ-ಅದ್ವೈತಬ್ರಹ್ಮದ ಸಾರಸ್ಯದಲ್ಲಿ, ಅಹಂ-ನಾನು, ಜ್ಞಾತಾ-ಅರಿವಾತನು,

* ಹಸ್ತಪ್ರತಿಯು ಲುಪ್ತವಾಗಿದ್ದ ಕಾರಣ ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ೪೩-೫೮ ಶ್ಲೋಕಗಳನ್ನು ತುಂಬಿದೆ.

ಇದಂ-ಇದು, ಜ್ಞೇಯಮಪಿ-ಜ್ಞೇಯವು, ಇತಿ-ಹಿಂಗೆಂಬ, ವ್ಯವಹೃತಿಃ-ವ್ಯವಹಾರವು, ಕುತಃ-ಎಲ್ಲಿಯದು ॥೪೭॥

ಅಖಂಡಾನಂದ ಸಂವಿತ್ತಿಸ್ವರೂಪಂ ಬ್ರಹ್ಮಕೇವಲಂ
ಮಿಥ್ಯಾ ತದಸ್ಯಾ ವ್ಯಥಿತೇಷಾಂ ಸ್ಥಿತಿ ಜ್ಞಾನಮಿಹೋಚ್ಯತೇ

ಅಖಂಡಾನಂದಸಂವಿತ್ತಿಸ್ವರೂಪಂ-ಅಖಂಡಾನಂದ ಸ್ವರೂಪವಾದ ಅದ್ವೈತ ಜ್ಞಾನವನುಳ್ಳದು, ಕೇವಲಂ ಬ್ರಹ್ಮ-ಕೇವಲ ಬ್ರಹ್ಮವು, ತದಸ್ಯತ್-ಆ ಬ್ರಹ್ಮಕ್ಕಿಂದನ್ಯ ವಾದುದು, ಮಿಥ್ಯಾ-ಮಿಥ್ಯೆಯು, ಇತಿ-ಹಿಂಗೆಂಬ, ಏಷಾಂ ಸ್ಥಿತಿಃ- ಈ ಸ್ಥಿತಿಯು, ಇಹ-ಇಲ್ಲಿ, ಜ್ಞಾನಂ-ಜ್ಞಾನವೆಂದು, ಉಚ್ಯತೇ-ಹೇಳಲ್ಪಡುತ್ತಿಹುದು ॥೪೮॥

ಸತ್ತಾತ್ಮನಾನುವೃತ್ತಂ ಯತ್ ಘಟಾದಿಷು ಪರಂ ಹಿ ತತ್
ವ್ಯಾವರ್ತಮಾನಾಂ ಮಿಥ್ಯೇತಿ ಸ್ಥಿತಿರ್ಜ್ಞಾನಮಿಹೋಚ್ಯತೇ

ಸತ್ತಾತ್ಮನಾ-ಸದ್ರೂಪನಾದ ಪ್ರತ್ಯಗಾತ್ಮನೊಡನೆ, ಅನುವೃತ್ತಂ-ಬಳಿವಿಡಿದು ವರ್ತಿಸಿರ್ದ, ಘಟಾದಿಷು-ಘಟಾದಿಗಳಲ್ಲಿ, ಪರಂ-ಪರವಾದ, ಯತ್-ಆವುದಾನೊಂದು, ವ್ಯಾವರ್ತಮಾನಾ-ವರ್ತನೆಯುಂಟು, ತತ್-ಅದು, ಮಿಥ್ಯೇತಿ-ಮಿಥ್ಯೆಯೆಂಬ, ಸ್ಥಿತಿಃ-ಸ್ಥಿತಿಯು, ಇಹ-ಇಲ್ಲಿ, ಜ್ಞಾನಂ-ಜ್ಞಾನವೆಂಬ, ಸ್ಥಿತಿಃ-ಸ್ಥಿತಿಯು, ಉಚ್ಯತೇ-ಹೇಳಲ್ಪಡುತ್ತಿಹುದು ॥೪೯॥

ಅಕಾರಣಮಕಾರ್ಯಂ ಸಮಸ್ತೋಪಾಧಿವರ್ಜಿತಂ
ತದ್ಬ್ರಹ್ಮತದಹಂಚೇತಿ ನಿಷ್ಠಾಜ್ಞಾನಮುದೀರ್ಯತೇ

ಅಕಾರಣಂ-ಕಾರಣವಿಲ್ಲದೆ, ಅಕಾರ್ಯ-ಕಾರ್ಯವಿಲ್ಲದೆ, ಸಮಸ್ತೋಪಾಧಿ ವರ್ಜಿತಂ-ಸಮಸ್ತ ಉಪಾಧಿಗಳಿಲ್ಲದ, ಯತ್-ಆವುದಾನೊಂದುಂಟು, ತತ್-ಅದು, ಬ್ರಹ್ಮ-ಬ್ರಹ್ಮವೆನಿಸೂದು, ತತ್-ಆ ಬ್ರಹ್ಮವು, ಅಹಮಿತಿ-ನಾನೆಂಬ, ನಿಷ್ಠಾ-ನಿಷ್ಠೆಯು, ಜ್ಞಾನಂ-ಜ್ಞಾನವೆಂದು, ಉದೀರ್ಯತೇ-ಹೇಳಲ್ಪಡುತ್ತಿಹುದು ॥೫೦॥

೪೩. ಪಿಂಡಾಕಾಶಸ್ಥಲ

ಯಥಾ ಪಿಂಡಸ್ಥ ಆಕಾಶಸ್ತಥಾತ್ಮಾ ಪೂರ್ಣ ಉಚ್ಯತೇ
ಏತದರ್ಥ ವಿವೇಕೋಯಃ ಪಿಂಡಾಕಾಶಸ್ಥಲಂ ವಿದುಃ

ಪಿಂಡಸ್ಥಃ-ಪಿಂಡದಲ್ಲಿರ್ದ, ಆಕಾಶಃ-ಆಕಾಶವು, ಯಥಾ-ಹೆಂಗೆ, ಪೂರ್ಣಃ-ಪೂರ್ಣವು, ತಥಾ-ಹಾಂಗೆ, ಆತ್ಮಾ-ಆತ್ಮನು, ಪೂರ್ಣಃ-ಪೂರ್ಣವೆಂದು, ಉಚ್ಯತೇ-ಹೇಳಲ್ಪಡುತ್ತಿಹುದು, ಏತದರ್ಥವಿವೇಕೋಯಃ-ಈ ಅರ್ಥ ವಿವೇಕವಾದ ಆವುದೊಂದು ತಾತ್ಪರ್ಯವು, ಪಿಂಡಾಕಾಶಸ್ಥಲಂ ವಿದುಃ-ಪಿಂಡಾಕಾಶ ಸ್ಥಲವೆಂದು ಹೇಳಲ್ಪಡುತ್ತಿಹುದು ॥೫೧॥

ಘಟೋಪಾಧಿರ್ಯಥಾಕಾಶಃ ಪರಿಪೂರ್ಣಸ್ವರೂಪಕಃ
ತಥಾ ಪಿಂಡಸ್ಥಿತೋಪ್ಯಾತ್ಮಾ ಪರಿಪೂರ್ಣಃ ಪ್ರಕಾಶತೇ

ಘಟೋಪಾಧಿಃ-ಘಟೋಪಾಧಿಯಾದ, ಆಕಾಶಃ-ಆಕಾಶವು, ಯಥಾ-ಹೆಂಗೆ, ಪರಿಪೂರ್ಣಸ್ವರೂಪಕಃ-ಪರಿಪೂರ್ಣಸ್ವರೂಪವನುಳ್ಳದು, ತಥಾ-ಹಾಂಗೆ, ಆತ್ಮಾ-ಆತ್ಮನು, ಪಿಂಡಸ್ಥಿತೋಽಪಿ-ಶರೀರದಲ್ಲಿದ್ದವನಾದರೂ, ಪರಿಪೂರ್ಣಃ-ಪರಿಪೂರ್ಣನಾಗಿ, ಪ್ರಕಾಶತೇ-ಪ್ರಕಾಶಿಸುತ್ತಿಹನು ।।೫೨।।

ಅಂತಸ್ಥಿತಂ ಪರಾಕಾಶಂ ಶಿವಮದ್ವೈತ ಲಕ್ಷಣಂ
ಭಾವಯೇನ ಮನಸಾ ಸಪಿಂಡಾಕಾಶಃ ಉಚ್ಯತೇ

ಅಂತಸ್ಥಿತಂ-ಒಳಗಿದ್ದ, ಪರಾಕಾಶಂ-ಪರಮಾಕಾಶ ಸ್ವರೂಪವಾದ, ಅದ್ವೈತ ಲಕ್ಷಣಂ-ಅದ್ವೈತದ ಕುರುಹನುಳ್ಳ, ಶಿವಃ-ಶಿವನನು, ಏನಮನಸಾ-ಆವುದಾನೊಂದು ಮನಸ್ಸಿನಿಂದ, ಭಾವಯೇತ್-ಭಾವಿಸುತ್ತಿಹನು, ಸಃ-ಆತನು, ಪಿಂಡಕಾಶಃ-ಪಿಂಡಕಾಶನೆಂದು, ಉಚ್ಯತೇ-ಹೇಳಲ್ಪಡುತ್ತಿಹನು ।।೫೩।।

ಶಿವಾಗಾರಮಿದಂ ಪ್ರೋಕ್ತಂ ಶರೀರಂ ಬೋಧ ದೀಪಿತಂ
ಷಟ್ತ್ರಿಂಶತ್ತತ್ವಘಟಿತಂ ಸುಮನಃ ಪದ್ಮಪೀಠಿಕಂ

ಇದಂಶರೀರಂ-ಈ ಶರೀರವು, ಶಿವಾಗಾರಂ-ಶಿವಾಲಯವೆಂದು, ಪ್ರೋಕ್ತಂ-ಹೇಳಲ್ಪಟ್ಟಿತು, ಶರೀರಕ್ಕೆ ಆಲಯ ಸಾದೃಶ್ಯವನು ಹೇಳುತ್ತಿದ್ದಾನು. ಬೋಧ ದೀಪಿತಂ-ಜ್ಞಾನವೆಂಬದೀಪವುಳ್ಳಂಥಾದೂ, ಷಟ್ತ್ರಿಂಶ ತತ್ವಘಟಿತಂ-ಷಟ್ತ್ರಿಂಶ ತತ್ವವೆಂಬ ಸ್ತಂಭಕುಡ್ಯಾದಿಗಳಿಂದ ಮಾಡಲ್ಪಟ್ಟಂಥಾದು, ಸುಮನಃ ಪದ್ಮಪೀಠಿಕಂ-ಒಳ್ಳೆಯ ಮನಸ್ಸೆಂಬ ಪದ್ಮಾಸನವನುಳ್ಳಂಥಾದು ।।೫೪।।

ಪರಾಕಾಶ ಸ್ವರೂಪೋ ಹಿ ಪ್ರಕಾಶಃ ಪರಮೇಶ್ವರಃ
ಹೃದಾಕಾಶಗುಹಾಲೀನೋ ದೃಶ್ಯತೇಽಂತಃ ಶರೀರಿಣಾಂ

ಪರಾಕಾಶಸ್ವರೂಪಃ-ಪರಾಕಾಶಸ್ವರೂಪನಾದ, ಪ್ರಕಾಶಃ-ಪ್ರಕಾಶಿಸುತ್ತಿರ್ದ, ಪರಮೇಶ್ವರಃ-ಶಿವನು, ಶರೀರಿಣಾಂ-ಜೀವರುಗಳ, ಅಂತಃ-ಒಳಗೆ, ಹೃದಾಕಾಶ ಗುಹಾಲೀನಃ-ಹೃದಯಾಕಾಶವೆಂಬ ಗುಹೆಯಲ್ಲಿ ಅಡಗಿದಾತನಾಗಿ, ದೃಶ್ಯತೇ-ತೋರುತ್ತಿಹನು ।।೫೫।।

ಏತಚ್ಛಿವಪುರಂಪ್ರೋಕ್ತಂ ಸಪ್ತಧಾತು ಸಮಾವೃತಂ
ಅತ್ರ ಹೃತ್ಪಂಕಜಂ ವೇಶ್ಮಸೂಕ್ಷ್ಮಾಂಬರ ಮನೋಹರಂ

ಸಪ್ತಧಾತುಸಮಾವೃತಂ-ತ್ವಗಾದಿಸಪ್ತಧಾತುಗಳಿಂದ ಆಚ್ಛಾದಿಸಲ್ಪಟ್ಟಂಥಾ, ಏತತ್-ಈ ಶರೀರವು, ಶಿವಪುರಂ ಪ್ರೋಕ್ತಂ-ಶಿವಪುರವೆಂದು ಹೇಳಿಸಲ್ಪಡುವುದು, ಸೂಕ್ಷ್ಮಾಂಬರ ಮನೋಹರಂ-ಸೂಕ್ಷ್ಮಾಂಬರನಾಗಿರ್ದಂಥಾ ಆಕಾಶದಿಂದ ಮನೋಹರನಾಗಿರ್ದಂಥಾ, ಹೃತ್ಪಂಕಜ ವೇಶ್ಮ-ಹೃದಯ ಕಮಲವೆಂಬ ಮನೆಯು ।।೫೬।।

ತತ್ರ ಸನ್ನಿಹಿತಂ ಸಾಕ್ಷಾತ್ಸಚ್ಚಿದಾನಂದ ಲಕ್ಷಣಃ
ನಿತ್ಯಸಿದ್ಧಂ ಪ್ರಕಾಶಾತ್ಮಾ ಜಲಸ್ಥಾಕಾಶವಚ್ಚಿವಃ

ನಿತ್ಯಸಿದ್ಧಂ-ಎಲ್ಲಾಗಳು ಪ್ರಸಿದ್ಧನಾದ, ಪ್ರಕಾಶಾತ್ಮಕಃ-ಸ್ವಯಂ ಪ್ರಕಾಶಸ್ವರೂಪನಾದ, ವಿಭುಃ-ಈಶ್ವರನು, ಜಲಸ್ಥಾಕಾಶವತ್-ಜಲಮಧ್ಯದಲ್ಲಿ ಇರುತ್ತಂ ಇದ್ದಂಥಾ ಆಕಾಶದ ಮರ್ಯಾದೆಯಲ್ಲಿ, ಸನ್ನಿಹಿತಂ-ಸನ್ನಿಹಿತನಾಗಿ ಇರುತ್ತಂ ಇಹನು ॥೫೭॥

ಅಂತರಾಕಾಶ ಬಿಂಬಸ್ಥಮಶೇಷೋಪಾಧಿವರ್ಜಿತಂ
ಘಟಾಕಾಶಮಿವಾಚ್ಛಿನ್ನಂ ಭಾವಯೇಚ್ಚಿನ್ಮಯಂ ಶಿವಂ

ಅಂತರಾಕಾಶ ಬಿಂಬಸ್ಥಂ-ಹೃದಯಾಕಾಶದ ಮಧ್ಯದಲ್ಲಿ ಇರುತ್ತಂ ಇರ್ದಂಥಾ, ಅಶೇಷೋಪಾಧಿವರ್ಜಿತಂ-ಸರ್ವೋಪಾಧಿ ರಹಿತನಾಗಿರ್ದಂಥಾ, ಘಟಾಕಾಶಮಿವಾ ಚ್ಛಿನ್ನಂ-ಘಟಾಕಾಶ ಮರ್ಯಾದೆಯಲ್ಲಿ ಅವಿಚ್ಛಿನ್ನವಾಗಿರ್ದಂಥಾ, ಚಿನ್ಮಯಂಶಿವಂ-ಚಿದಾತ್ಮಕ ನಾಗಿರ್ದಂಥಾ ಶಿವನನು, ಭಾವಯೇತ್-ಧ್ಯಾನವನು ಮಾಡಬೇಕು, ಸರ್ವ ಪ್ರಾಣಿಭಿರಾಸ್ಥಿತಃ-ಸಮಸ್ತ ಪ್ರಾಣಿಗಳಿಂದ ಆಶ್ರಯಿಸಲ್ಪಟ್ಟಂಥಾ ॥೫೮॥

೪೪. ಬಿಂದ್ವಾಕಾಶಸ್ಥಲ

ಆಕಾಶವಿಭುರಾಜ್ಞೇಯಸ್ಸರ್ವಪ್ರಾಣಾದ್ಯದೀಕ್ಷಿತಃ
ತದಾತ್ಮೇತ್ಯುಪಮಾನಾರ್ಥಂ ಬಿಂದ್ವಾಕಾಶಸ್ಥಲಂ ವಿದುಃ

ಆಕಾಶಂ-ಆಕಾಶವು, ವಿಭುರಾಜ್ಞೇಯಃ-ವ್ಯಾಪಕವೆಂದರಿಯಬೇಕು, ಆತ್ಮಾ ತದೇತಿ-ಆತ್ಮನು ಆ ಪ್ರಕಾರದಲ್ಲಿ ವ್ಯಾಪಕನೆಂದು, ಉಪಮಾನಾರ್ಥಂ-ಉಪಮಾನಾರ್ಥ ರೂಪವಾಗಿರ್ದಂಥಾತನು, ಬಿಂದ್ವಾಕಾಶಸ್ಥಲಂ ವಿದುಃ-ಬಿಂದ್ವಾಕಾಶಸ್ಥಲವೆಂದು ಹೇಳುತ್ತಂ ಇಹರು ॥೫೯॥

ಸರ್ವೇಷಾಂ ದೇಹಿನಾಮಂತಶ್ಚಿತ್ತಾಕಾಶಃ ಪ್ರಕಾಶತೇ
ಯಸ್ಮಿನ್ಪ್ರತಿಫಲತ್ಯಾತ್ಮ ಶಿವೋ ದರ್ಪಣವದ್ವಿಭುಃ

ಸರ್ವೇಶಾಂ ದೇಹಿನಾಂ-ಸಮಸ್ತಪ್ರಾಣಿಗಳ, ಅಂತಃ-ಶರೀರದಲ್ಲಿ, ಚಿತ್ತಾಕಾಶಃ-ಹೃದಯಾಕಾಶವು, ಪ್ರಕಾಶತೇ-ಒಪ್ಪುತಂ ಇಹುದು, ಯಸ್ಮಿನ್-ಆವುದಾನೊಂದು ಚಿತ್ತದಲ್ಲಿ, ಆತ್ಮಾ-ಪ್ರತ್ಯಕ್ಷರೂಪವಾಗಿರ್ದಂಥಾ, ಶಿವಃ-ಶಿವನು, ದರ್ಪಣವತ್-ದರ್ಪಣದಲ್ಲಿ ತೋರ್ಪಮುಖದ ಮರ್ಯಾದೆಯಲ್ಲಿ, ಪ್ರತಿಫಲತಿ-ಪ್ರತಿಬಿಂಬಿಸುತ್ತಿಹನು ॥೬೦॥

ಏಕದೇಶೋಪಿ-ಸರ್ವಾತ್ಮ ಪ್ರಕಾಶಃ ಪರಮಾತ್ಮನಃ
ಸರ್ವ ಪ್ರಾಣಿಗತೋ ಭಾತಿ ತಥಾಪಿ ವಿಭುರುಚ್ಯತೇ

ಪರಮಾತ್ಮನಃ-ಪರಮಾತ್ಮನ, ಏಕದೇಶೋಪಿ-ಏಕದಲ್ಲಿಯು, ಸರ್ವಪ್ರಾಣಿ, ಗತಃ-ಸಮಸ್ತ ಪ್ರಾಣಿಗಳಲ್ಲಿರುತ್ತಂ ಇದ್ದಂಥಾದಾಗಿ, ಭಾತಿ-ಒಪ್ಪುತ್ತಂ ಇಹುದು, ತಥಾಪಿ-ಹಾಗಾದರೂ, ವಿಭುರುಚ್ಯತೇ-ವ್ಯಾಪಕವೆಂದು ಹೇಳಲ್ಪಡುವುದು ॥೬೧॥

ಯಥೈಕೋ ವಾಯುರಾಖ್ಯಾತಸ್ಸರ್ವಪ್ರಾಣಿಗತೋ ವಿಭುಃ
ತಥಾತ್ಮಾ ವ್ಯಾಪಕಸ್ಸಾಕ್ಷಾತ್ಸರ್ವಪ್ರಾಣಿ ಗತೋ ಸ್ವತಃ

ಏಕೋವಾಯುಃ-ಒಂದು ವಾಯುವು, ಸರ್ವಪ್ರಾಣಿಗತಃ-ಹೆಂಗೆ ಸಮಸ್ತ ಪ್ರಾಣಿಗಳನು ವ್ಯಾಪಿಸಿಹುದು, ತಥಾ-ಹಾಂಗೆ, ಆತ್ಮ-ಆತ್ಮನು, ಸರ್ವಪ್ರಾಣಿ ಗತಃ-ಸರ್ವವ್ಯಾಪಕವಾಗಿರ್ದಂಥಾದು ॥೬೨॥

ಯಥಾವಹ್ನಿರಮೇಯಾತ್ಮಾ ಸರ್ವತ್ರೈಕೋಪಿ ಭಾಸತೇ
ತಥಾ ವಿಭು ಸಮಸ್ತಾತ್ಮಾ ಪರಿಚ್ಛೇದ ವಿವರ್ಜಿತಃ

ಅಮೇಯಾತ್ಮಾ-ಅಪ್ರಮೇಯುವಾಗಿರ್ದಂಥಾ, ವಹ್ನಿಃ-ಅಗ್ನಿ ಪುರುಷನು, ಸರ್ವತ್ರ-ಎಲ್ಲಿಯು, ಯಥಾ ಏಕೋ ಭಾಸತೇ-ಹ್ಯಾಂಗೆ ಒಬ್ಬನೆ ಒಪ್ಪುತಂ ಇಹನು, ತಥಾ-ಹಾಂಗೆ, ವಿಭುಃ-ಆತ್ಮನು, ಪರಿಚ್ಛೇದಭಾವತಃ-ಪರಿಚ್ಛೇದ ರಹಿತನಾಗಿರ್ದಂಥಾತನು ॥೬೩॥

ಏಕಯೇವ ಯಥಾ ಸೂರ್ಯಸ್ತೇಜಸಾ ಭಾತಿ ಸರ್ವಗಃ
ತಥಾತ್ಮಾ ಶಕ್ತಿ ಭೇದನ ಶಿವಸ್ಸರ್ವಗತೋ ಭವೇತ್

ಏಕಯೇವ ಸೂರ್ಯಃ-ಒಬ್ಬ ಸೂರ್ಯನು, ತೇಜಸಾ-ತೇಜಸ್ಸಿನಿಂದ ಸರ್ವಗೋಯಥಾ ಭಾತಿ-ಸರ್ವತ್ರ ಹೆಂಗೆ ಒಪ್ಪುತಂ ಇಹನು, ತಥಾ-ಹಾಂಗೆ, ಶಿವಃ-ಶಿವನು, ಶಕ್ತಿ ಭೇದೇನ-ಶಕ್ತಿ ವಿಶೇಷದಿಂದ, ಸರ್ವಗತೋಭವೇತ್-ಸರ್ವಗತನಾಗಿ ಒಪ್ಪುವನು ॥೬೪॥

೪೫. ಮಹಾಕಾಶಸ್ಥಲ

ಪಿಂಡಾಂಡಸ್ಥಂ ಯಥಾ ವ್ಯೋಮಂ ನ ಭಿನ್ನಂಚ ತದಾತ್ಮನಃ
ಅಭಿನ್ನಃ ಪರಮಾತ್ಮೇತಿ ಮಹಾಕಾಶಸ್ಥಲಂ ವಿದುಃ

ಮಹದಾಕಾಶಸ್ಥಲವನು ನಿರೂಪಿಸುತಿರ್ದಪಂ

ಪಿಂಡಾಂಡಸ್ಥಂ-ಅಂಡಪಿಂಡ ಮಧ್ಯದಲ್ಲಿರುತ್ತಂ ಇರ್ದಂಥಾ, ವ್ಯೋಮ-ಆಕಾಶವು, ಯಥಾ ನ ಭಿನ್ನ-ಹೆಂಗೆ ಭಿನ್ನವಲ್ಲ, ತಥಾ-ಹಾಂಗೆ, ಆತ್ಮನಃ-ಆತ್ಮನ ದೆಸೆಯಿಂದ, ಪರಮಾತ್ಮತಃ-ಪರಮಾತ್ಮನು, ಅಭಿನ್ನಂ-ಭಿನ್ನವಲ್ಲ ಎಂಬ ಜ್ಞಾನವು, ಮಹಾಕಾಶಸ್ಥಲಂ ವಿದುಃ-ಮಹದಾಕಾಶಸ್ಥಲವೆಂದು ಹೇಳುವರು ॥೬೫॥

ಯಥಾ ನ ಭಿನ್ನಮಾಕಾಶಂ ಘಟೇಷು ಚ ಮಠೇಷು ಚ
ತಥಾಂಡೇಷು ಚ ಪಿಂಡೇಷು ಸ್ಥಿತೋಹ್ಯಾತ್ಮನಭಿದ್ಯತೇ

ಆಕಾಶಂ-ಆಕಾಶವು, ಘಟೇಷು-ಘಟಗಳಲ್ಲಿ, ಮಠೇಷು ಚ- ಮಠಗಳಲ್ಲಿ, ಯಥಾ ನ ಭಿನ್ನಂ-ಹೇಗೆ ಭಿನ್ನವಲ್ಲ, ತಥಾ-ಹಾಂಗೆ, ಅಂಡೇಷು-ಅಂಡಗಳಲ್ಲಿ, ಪಿಂಡೇಷು-ಪಿಂಡಗಳಲ್ಲಿಯು, ಸ್ಥಿತಂ-ಇರುತ್ತಂ ಇರ್ದಂಥಾ, ಆತ್ಮಾ-ಆತ್ಮನು, ನ ಭಿದ್ಯತೆ-ಭಿನ್ನವಲ್ಲ ॥೬೬॥

ನಿರಸ್ತೋಪಾಧಿ ಸಂಬಂಧಂ ನಿರ್ಮಲಂ ಸಂವಿದಾತ್ಮಕಂ
ಪರಾಕಾಶಂ ಜಗಚ್ಚಿತ್ರವಿಲಾಸಾಲಂಬ ಭಿತ್ತಿಕಂ

ನಿರಸ್ತೋಪಾಧಿ ಸಂಬಂಧಂ-ನಿರಾಕರಿಸಲ್ಪಟ್ಟ ಉಪಾಧಿ ಸಂಬಂಧವನುಳ್ಳಂಥಾ ನಿರ್ಮಲಂ-ನಿರ್ಮಲವಾಗಿರ್ದಂಥಾ, ಸಂವಿದಾತ್ಮಕಂ-ಜ್ಞಾನಾತ್ಮಕವಾಗಿರ್ದಂಥಾ, ಪರಾಕಾಶಂ-ಪರಮಾಕಾಶವು, ಜಗಚ್ಚಿತ್ರ ವಿಲಾಸಾಲಂಬ ಭಿತ್ತಿಕಂ-ಜಗತ್ತೆಂಬ ಚಿತ್ರ ವಿಲಾಸಕ್ಕೆ ಆಶ್ರಯ ಭಿತ್ತಿಯಾಗಿರ್ದಂಥಾದು ॥೬೭॥

ಸಂವಿದೇವ ಪರಾಕಾಷ್ಠಾ ಪರಾನಂದ ಸ್ವರೂಪಿಣೀ
ಯಾಪ್ರಾಹುಃ ಪರಮಾಕಾಶಂ ಮುನಯೋ ಮುಕ್ತಸಂಶಯಃ

ಪರಾನಂದ ಸ್ವರೂಪಿಣೀ-ಪರಮಾನಂದ ಸ್ವರೂಪವಾಗಿರ್ದಂಥಾ, ಪರಮಾ ಕಾಶಂ-ಪರಮಾಕಾಶವನು, ಜ್ಯೋತಿರ್ಮಯಲಿಂಗಂ ಪ್ರಾಹುಃ-ಜ್ಯೋತಿರ್ಲಿಂಗವೆಂದು ಹೇಳುವರು, ಸಂವಿದೇವ-ಚೈತನ್ಯವೆ, ಪರಾಕಾಷ್ಠ-ಪರಮಗತಿಯು, ಮುನಯಃ-ಮುನಿಗಳು, ಮುಕ್ತಸಂಶಯಃ-ಸಂಶಯವನು ಬಿಟ್ಟು, ಪರಮಾಕಾಶಂ ವಿದುಃ-ಪರಮಾಕಾಶವೆಂದು ಹೇಳುತ್ತಂ ಇಹರು ॥೬೮॥

ಪರಮಾಕಾಶಮವ್ಯಕ್ತಂ ಪ್ರಬೋಧಾನಂದಲಕ್ಷಣಂ
ಲಿಂಗಂಜ್ಯೋತಿರ್ಮಯಂ ಪ್ರಾಹುರ್ಲೀಯಂತೇ ಯತ್ರ ಯೋಗಿನಃ

ಅವ್ಯಕ್ತಂ-ಅಪ್ರಮೇಯವಾಗಿರ್ದಂಥಾ, ಪ್ರಬೋಧಾನಂದ ಲಕ್ಷಣಂ-ಜ್ಞಾನಾನಂದ ಸ್ವರೂಪವಾಗಿರ್ದಂಥ, ಪರಮಾಕಾಶಂ-ಪರಮಾಕಾಶವನು, ಜ್ಯೋತಿರ್ಮಲಯಲಿಂಗಂ ಪ್ರಾಹುಃ-ಜ್ಯೋತಿರ್ಲಿಂಗವೆಂದು ಹೇಳುತ್ತಂ ಇಹರು ॥೬೯॥

ಅನಿರ್ದೇಶ್ಯಮನೌಪಮ್ಯಮವಾಙ್ಮಾನಸ ಗೋಚರಂ
ಸರ್ವತೋಮುಖಸಂಪನ್ನಂ ಸತ್ತಾನಂದ ಚಿದಾತ್ಮಕಂ

ಕಾಲಾತೀತಂ ಕಲಾತೀತಂ ಕ್ರಮಯೋಗವಿವರ್ಜಿತಂ
ಸ್ವಾನುಭೂತಿ ಪ್ರಮಾಣಸ್ಥಂ ಜ್ಯೋತಿಷಾಮುದಯ ಸ್ಥಲಂ

ಶಿವಾಖ್ಯಂ ಪರಮಂ ಬ್ರಹ್ಮ ಪರಮಾನಂದ ಲಕ್ಷಣಂ
ಲಿಂಗಮಿತ್ಯುಚ್ಯತೇ ಸದ್ಭಿರ್ಯದ್ವಿನಾ ನಾ ಜಗತಸ್ಥಿತಿಃ

ಅನಿರ್ದೇಶ್ಯಂ-ಇಂಥಾದ್ದು ಎಂದು ನಿರ್ದೇಶಿಸಲು ಶಕ್ಯವಿಲ್ಲದೆ ಇರ್ದಂಥಾ, ಅನೌಪಮ್ಯಂ-ಉಪಮೆ ಇಲ್ಲದೆ ಇರ್ದಂಥಾ, ಅವಾಙ್ಮಾನಸಗೋಚರಂ-ವಾಙ್ಮನಸುಗಳಿಗೆ ಗೋಚರವಲ್ಲದೆ ಇರ್ದಂಥ, ಸರ್ವತೋಮುಖ ಸಂಪನ್ನಂ-ಸರ್ವತೋಮುಖವಾಗಿರ್ದಂಥ, ಕ್ರಮಯೋಗಾದಿ ವರ್ಜಿತಂ-ಉತ್ಪತ್ತ್ಯಾದಿ ಶೂನ್ಯವಾಗಿರ್ದಂಥಾ, ಶಿವಾಖ್ಯಂ-ಪರಬ್ರಹ್ಮ ಶಿವನೆಂದು ಹೇಳಲ್ಪಡುತ್ತಂ ಇರ್ದಂಥಾ ಪರಬ್ರಹ್ಮವು, ಲಿಂಗಮಿತಿ-ಲಿಂಗವೆಂದು, ಸದ್ಭಿಃ-ಸತ್ಪುರುಷರುಗಳಿಂದ ಉಚ್ಯತೆ-ಹೇಳಲ್ಪಡುವುದು, ಯದ್ವಿನಾ-ಆವುದಾನೊಂದು ಲಿಂಗ ಹೊರತಾಗಿ, ನ ಜಗಸ್ಥಿತಿಃ-ಜಗತ್ತಿಗೆ ಸ್ಥಿತಿ ಇಲ್ಲ ॥೭೨॥

ಯಥಾ ಜ್ಯೋತೀಂಷಿ ಭಾಸಂತೇ ಭೂತಾಕಾಶೇ ಪೃಥಕ್ ಪೃಥಕ್
ತಥಾ ಭಾಂತಿ ಪರಾಕಾಶೇ ಬ್ರಹ್ಮಾಂಡಾನಿ ವಿಶೇಷತಃ

ಭೂತಾಕಾಶೇ-ಮಹಾಭೂತವಾಗಿರ್ದಂಥಾ ಆಕಾಶದಲ್ಲಿ, ಪೃಥಕ್ ಪೃಥಕ್-ಬೇರೆ ಬೇರೆ, ಜ್ಯೋತೀಂಷಿ-ನಕ್ಷತ್ರಗಳು, ಯಥಾಭಾಂತಿ-ಹೆಂಗೆ ಒಪ್ಪುತಂ ಇಹವು, ತಥಾ-ಹಾಂಗೆ, ಪರಾಕಾಶೇ-ಪರಮಾಕಾಶದಲ್ಲಿ, ಬ್ರಹ್ಮಾಂಡನಿ-ಬ್ರಹ್ಮಾಂಡಗಳು, ಭಾಂತಿ-ಒಪ್ಪುತ್ತಂ ಇಹವು ॥೭೩॥

ತರಂಗಾದಿ ಯಥಾ ಸಿಂಧೌ ಸ್ವರೂಪಾನ್ನಿತಿರಿಚ್ಯತೇ
ತಥಾಶಿವಾಚ್ಚಿದಾಕಾಶಾದ್ವಿಶ್ವಮೇ ತನ್ನಭಿದ್ಯತೇ

ಸಿಂಧೌ-ಸಮುದ್ರದಲ್ಲಿ, ತರಂಗಾದಿ-ತೆರೆನೊರೆಬುದ್ಬುದಾವರ್ತ ಬಿಂದುಗಳು, ಯಥಾ-ಹೇಂಗೆ, ಸ್ವರೂಪಾನಾತಿರಿಚ್ಯತೆ-ಸ್ವರೂಪದಿಂದ ಭಿನ್ನವಲ್ಲ, ತಥಾ-ಹಾಂಗೆ, ಶಿವಚಿದಾಕಾಶಾತ್-ಶಿವಚೈತನ್ಯಾಕಾಶದಿಂದ, ವಿಶ್ವ ನ ಭಿದ್ಯತೇ-ಜಗತ್ತು ಭಿನ್ನವಲ್ಲ ॥೭೪॥

ಯಥಾ ಪುಷ್ಪಪಲಾಶಾದಿ ವೃಕ್ಷರೂಪಾನ್ನಭಿದ್ಯತೇ
ತಥಾ ಶಿವಾತ್ಪರಾಕಾಶಾಜ್ಜಗತೋ ನಾಸ್ತಿವೈ ಭಿದಾ

ಪುಷ್ಪ ಪಲಾಶಾದಿ-ಪುಷ್ಪ ಪಲಾಶ ಮೊದಲಾದ ಏಕದೇಶಗಳು, ಯಥಾವೃಕ್ಷ ರೂಪನಭಿದ್ಯತೇ-ಹೆಂಗೆ ವೃಕ್ಷರೂಪದಿಂದ ಭಿನ್ನವಲ್ಲ, ತಥಾ-ಹಾಂಗೆ ಶಿವಾತ್ಪರಾ ಕಾಶಾತ್-ಶಿವನೆಂಬ ಪರಮಾಕಾಶದ ದೆಶೆಯಿಂದ, ಜಗತಃ-ಜಗತ್ತಿಗೆ, ಭಿದಾ ನಾಸ್ತಿ-ಭೇದವಿಲ್ಲ ॥೭೫॥

೪೬. ಕ್ರಿಯಾಪ್ರಕಾಶಸ್ಥಲ

ಪರಾತ್ಮನಿ ಕ್ರಿಯಾಸರ್ವಾಃ ಗಂಧರ್ವನಗರೀವ ಖೇ
ಪ್ರಕಾಶಂತೇ ಇತಿ ಪ್ರೋಕ್ತಂ ಕ್ರಿಯಾಯಾಸ್ತು ಪ್ರಕಾಶನಂ

ಕ್ರಿಯಾಪ್ರಕಾಶಸ್ಥಲವನು ನಿರೂಪಿಸುತಂ ಇದ್ದಾನು.

ಖೇ-ಆಕಾಶದಲ್ಲಿ, ಗಂಧರ್ವ ನಗರೀವ-ಗಂಧರ್ವ ನಗರದ ಮರ್ಯಾದೆಯಲ್ಲಿ, ಪರಮಾತ್ಮನಿ-ಪರಬ್ರಹ್ಮದಲ್ಲಿ, ಸರ್ವಕ್ರಿಯಾಃ-ಸಮಸ್ತ ಕರ್ಮಗಳು, ಪ್ರಕಾಶಂತೇ ಇತಿ-ಪ್ರಕಾಶಿಸುತ್ತಿಹರು ಎಂಬುಭಯಕ್ರಿಯಾಯಾಸ್ತು, ಪ್ರಕಾಶನಂ ಪ್ರೋಕ್ತಂ-ಕ್ರಿಯಾ ಪ್ರಕಾಶನವೆನಿಸುವುದು ॥೭೬॥

ನಿಃಕಲಂಕೇ ನಿರಾಕಾರೇ ನಿತ್ಯೋಪರಮತೇಜಸೀ
ವಿಲೀನಚಿತ್ತವೃತ್ತಸ್ಯ ತದಾ ಶಕ್ತಿಃ ಕ್ರಿಯೋಚ್ಯತೇ

ನಿಃಕಲಂಕೇ-ನಿರ್ದುಷ್ಟವಾಗಿರ್ದಂಥಾ, ನಿರಾಕಾರೇ-ಆಕಾರಶೂನ್ಯವಾಗಿರ್ದಂಥ, ನಿತ್ಯೇ-ಕೇಡಿಲ್ಲದಿರ್ದಂಥಾ, ಪರಮ ತೇಜಸಿ-ಪರಂ ಜ್ಯೋತಿಸ್ಸಿನಲ್ಲಿ, ವಿಲೀನ ಚಿತ್ತ

ವೃತ್ತಸ್ಯ-ಸ್ಥಿರವಾದ ಮನಸ್ಸಿನ ವರ್ತನೆಯನುಳ್ಳಂಥಾತಂಗೆ, ಸಾ-ಆ ವೃತ್ತಿಯು, ಕ್ರಿಯೋಚ್ಯತೆ-ಕ್ರೀ ಎನಿಸುವುದು ॥೭೭॥

ನಿಷ್ಕಲಂಕ ಚಿದಾನಂದ ಗಗನೇ ಪರರೂಪಿಣಃ
ಶಿವಸ್ಯ ಪರಿಪೂರ್ಣಸ್ಯ ವೃತ್ತಿ ಚೈತನ್ಯ ರೂಪಿಣೀ

ನಿಷ್ಕಲಂಕ ಚಿದಾನಂದ ಗಗನೇ-ಕಳಂಕಿಲ್ಲದಿರ್ದಂಥಾ ಜ್ಞಾನಾನಂದವೆಂಬ ಗಗನದಲ್ಲಿ, ಪರರೂಪಿಣಃ- ಪರಸ್ವರೂಪವಾಗಿರ್ದಂಥಾ, ಪರಿಪೂರ್ಣಸ್ಯ-ಪರಿಪೂರ್ಣ ವಾಗಿರ್ದಂಥಾ, ಶಿವಸ್ಯ-ಶಿವನಿಗೆ, ಚೈತನ್ಯರೂಪಿಣೀ-ಚಿತ್ಸ್ವರೂಪವಾಗಿರ್ದಂಥಾ, ವೃತ್ತಿಃ-ಅದ್ವೈತ ವೃತ್ತಿಯು ಕ್ರಿಯೆಯೆನಿಸುವುದು ॥೭೮॥

ಸರ್ವಜ್ಞಃ ಸರ್ವಕರ್ತಾ ಚ ಸರ್ವಗಃ ಪರಮೇಶ್ವರಃ
ತದೈಕ್ಯ ಚಿಂತಯಾ ಯೋಗೀ ತಾ ದೃಶಾತ್ಮಾ ಪ್ರಕಾಶತೇ

ಪರಮೇಶ್ವರಃ-ಶಿವನು, ಸರ್ವಜ್ಞಃ-ಸರ್ವಜ್ಞನು, ಸರ್ವಕರ್ತಾ-ಸರ್ವಕರ್ತೃವು, ಸರ್ವಗಃ-ಸರ್ವವ್ಯಾಪಕನು, ತದೈಕ್ಯ ಚಿಂತಯಾ-ಆ ಶಿವನ ಕೂಡೆ ಐಕ್ಯ ಭಾವನೆಯಿಂದ, ಯೋಗೀ-ಶಿವಯೋಗಿಯು, ತಾದೃಶಾತ್ಮ-ತತ್ಸ್ವರೂಪವಾಗಿ, ಪ್ರಕಾಶತೇ-ಒಪ್ಪುತ್ತಂ ಇಹನು ॥೭೯॥

ಕೂಟಸ್ಥಮಚಲಂ ಪ್ರಾಜ್ಞಂ ಗುಣಾತೀತಂ ಗುಣೋತ್ತರಂ
ಶಿವತತ್ವಂ ಸ್ವರೂಪೇಣ ಪಶ್ಯನ್ಯೋಗೀ ಪ್ರಮೋದತೇ

ಕೂಟಸ್ಥಂ-ನಿರ್ವಿಕಾರವಾಗಿರ್ದಂಥಾ, ಅಚಲಂ-ನಿಶ್ಚಲವಾಗಿರ್ದಂಥಾ, ಗುಣಾತೀತಂ-ಗುಣಗಳನು ಅತಿಕ್ರಮಿಸಿರ್ದಂಥಾ, ಗುಣೋತ್ತರಂ-ಗುಣ ಪ್ರಧಾನ ವಾಗಿರ್ದಂಥ, ಪ್ರಾಜ್ಞಂ-ತನ್ನ ಸ್ವರೂಪವನು, ಶಿವತತ್ವ ಸ್ವರೂಪೇಣ-ಶಿವತತ್ವ ಸ್ವರೂಪವಾಗಿ ಪಶ್ಯನ್-ಕಾಣುತ್ತಂ ಇರ್ದಂಥಾ, ಯೋಗಿಃ-ಶಿವಯೋಗಿಯು, ಪ್ರಮೋದತೇ-ಸಂತುಷ್ಟ ನಹನು ॥೮೦॥

ಸರ್ವೇಂದ್ರಿಯಾಣಾಂ ವ್ಯಾಪಾರೇ ವಿದ್ಯಮಾನೇಽಪಿ ಸಂಯಮೀ
ಪ್ರತ್ಯಙ್ಮುಖೇನ ಮನಸಾ ಶಿವಂ ಪಶ್ಯನ್ಪ್ರಮೋದತೇ

ಸಂಯಮೀ-ಶಿವಯೋಗಿಯು, ಸರ್ವೇಂದ್ರಿಯಾಣಾಂ ವ್ಯಾಪಾರೇ-ಸರ್ವೇಂದ್ರಿಯ ಗಳ ವ್ಯಾಪಾರವು, ವಿದ್ಯಮಾನೇಪಿ-ಇರಲಾಗಿಯು, ಪ್ರತ್ಯಙ್ಮುಖೇನ ಮನಸಾ-ಅಂತರ್ಮುಖ ವಾದ ಮನಸ್ಸಿನಿಂದ, ಶಿವಂ ಪಶ್ಯನ್-ಶಿವನನು ಪ್ರತ್ಯಕ್ಷೀಕರಿಸುತಂ, ಪ್ರಮೋದತೇ-ಸಂತುಷ್ಟ ನಹನು ॥೮೧॥

ಶಿವಸ್ಯ ಪರಿಪೂರ್ಣಸ್ಯ ಚಿದಾಕಾಶಸ್ವರೂಪಿಣಃ
ಆತ್ಮತ್ವೇನಾನುಸಂಧಾನಾತ್ ಕ್ರಿಯಾದ್ಯೋತನ ಸಂಯಮೀ

ಪರಿಪೂರ್ಣಸ್ಯ-ಪರಿಪೂರ್ಣನಾಗಿರ್ದಂಥ, ಚಿದಾಕಾಶಸ್ವರೂಪಿಣಃ-ಚಿದಾಕಾಶ ಸ್ವರೂಪನಾಗಿರ್ದಂಥಾ, ಶಿವಸ್ಯ-ಶಿವನ, ಆತ್ಮತ್ವೇನಾನುಸಂಧಾನಾತ್-ಅದ್ವೈತವಾಗಿ

ವಿಚಾರಿಸುವುದರಿಂದ, ಸಂಯಮೀ-ಶಿವಯೋಗಿಯು, ಕ್ರಿಯಾಪ್ರದ್ಯೋತನವಾನ್-ಕ್ರಿಯಾ ಪ್ರಕಾಶವನುಳ್ಳವನೆಂದು ಹೇಳಲ್ಪಡುತ್ತಂ ಇಹನು ॥೮೨॥

೪೭. ಭಾವಪ್ರಕಾಶಸ್ಥಲ

ತರಂಗಾದ್ಯಾ ಯಥಾಸಿಂಧೌ ನ ಭಿದ್ಯಂತೆ ತಥಾತ್ಮನಿ
ಭಾವಬುಧ್ಯಾದಯಸ್ಸರ್ವೇಯತ್ತದ್ಭಾವ ಪ್ರಕಾಶನಂ

ಭಾವಪ್ರಕಾಶ ಸ್ಥಲವನು ನಿರೂಪಿಸುತಿರ್ದಾನು

ಸಿಂಧೌ-ಸಮುದ್ರದಲ್ಲಿ, ತರಂಗಾದ್ಯಾಃ-ತೆರೆ ಮೊದಲಾದವು, ಯಥಾನ ಭಿದ್ಯಂತೆ-ಹೆಂಗೆ ಭಿನ್ನವಲ್ಲ, ತಥಾ-ಹಾಂಗೆ, ಆತ್ಮನಿ-ಆತ್ಮನಲ್ಲಿ, ಬುದ್ಧಿರ್ಧ್ಯಾಯೋಭಾವಃ-ಬುದ್ಧಿ ಮೊದಲಾದ ಭಾವಗಳು ಭಿನ್ನವಲ್ಲ ಎಂಬ ಜ್ಞಾನವು, ಭಾವಪ್ರಕಾಶನಂ-ಭಾವಪ್ರಕಾಶವೆಂದು ಹೇಳಲ್ಪಡುವುದು ॥೮೩॥

ಅದ್ವಿತೀಯ ಶಿವಾಕಾರಭಾವನಾಧ್ವಸ್ಥಕರ್ಮಣಃ
ನ ಕಿಂಚಿದ್ಭಾವನಾ ಸಾಕ್ಷಾಚ್ಛಿವಾದನ್ಯತ್ಮಹಾತ್ಮನಃ

ಅದ್ವಿತೀಯ ಶಿವಾಕಾರಭಾವನಾಧ್ವಸ್ಥಕರ್ಮಣಃ-ಅದ್ವಿತೀಯವಾದ ಶಿವಭಾವನೆ ಯಿಂದ ನಷ್ಟವಾದ ಕರ್ಮವನುಳ್ಳಂಥಾತಂಗೆ, ಶಿವಾದನ್ಯತ್-ಶಿವನಿಂದ ವ್ಯತಿರಿಕ್ತ ವಾಗಿರ್ದಂಥಾ, ಕಿಂಚಿತ್-ಒಂದು ವಸ್ತುವು, ನ ಭಾವ್ಯತೇ-ತೋರದು ॥೮೪॥

ಗಲಿತಾಜ್ಞಾನಬಂಧಸ್ಯ ಕೇವಲಾತ್ಮಾನು ಭಾವಿನಃ
ಯತ್ರ ಯತ್ರೇಂದ್ರಿಯಾಸಕ್ತಿಸ್ತತ್ರ ತತ್ರ ಶಿವಾತ್ಮತಾ

ಗಲಿತಾಜ್ಞಾನಬಂಧಸ್ಯ-ಕಷ್ಟವಾದ ಅಜ್ಞಾನ ಬಂಧವನುಳ್ಳಂಥಾ, ಕೇವಲಾತ್ಮಾನು ಭಾವಿನಃ-ಬರಿಯ ಆತ್ಮನನೆ ಭಾವಿಸುತಂ ಇರ್ದಂಥಾತನಿಗೆ, ಯತ್ರಯತ್ರ-ಆವಾವ ವಿಷಯದಲ್ಲಿ, ಇಂದ್ರಿಯಾಸಕ್ತಿ-ಇಂದ್ರಿಯ ವ್ಯಾಪಾರವಿಲ್ಲ, ತತ್ರತತ್ರ-ಆವಾವ ವಿಷಯದಲ್ಲಿ, ಶಿವಾತ್ಮತಾ-ಶಿವೈಕ್ಯವುಂಟಹುದು ॥೮೫॥

ಯಥಾಸೂರ್ಯಸಮಾಕ್ರಾಂತೌ ನ ಶಕ್ನೋತಿ ತಮಸ್ಸದಾ
ತಥಾ ಪ್ರಕಾಶಮಾತ್ಮಾನಂ ನಾವಿದ್ಯಾऽಕ್ರಮತಿ ಸ್ವಯಂ

ತಮಃ-ಅಂಧಕಾರವು, ಸೂರ್ಯಸಮಾಕ್ರಾಂತೌ-ಸೂರ್ಯನನು ಮರಸುವಲ್ಲಿ, ನ ಶಕ್ನೋತಿ-ಸಮರ್ಥನಲ್ಲ, ತಥಾ-ಹಾಂಗೆ, ಪ್ರಕಾಶಮಾತ್ಮಾನಂ-ಪ್ರಕಾಶಿಸುತ್ತಂ ಇರ್ದಂಥಾತ್ಮನನು, ಅವಿದ್ಯಾ-ಅಜ್ಞಾನವು, ನಾಕ್ರಮತಿ-ಆಕ್ರಮಿಸದು ॥೮೬॥

ಶಿವಯೇವ ಜಗತ್ಸರ್ವಂ ಶಿವಯೇವಾಹಮಿತ್ಯಪಿ
ಭಾವಯನ್ಪರಮೋ ಯೋಗೀ ಭಾವದೋಷೈರ್ನ ಬಾಧ್ಯತೇ

ಶಿವಯೇವ-ಶಿವನೆ, ಜಗತ್ಸರ್ವಂ-ಸರ್ವಾತ್ಮಕನು, ಅಹಮಿತ್ಯಪಿ-ತಾನು ಶಿವನೆಯೆಂದು, ಭಾವಯನ್-ಭಾವಿಸುತಂ ಇರ್ದಂಥಾ, ಪರಮಯೋಗೀ-ಪರಮ ಶಿವಯೋಗಿಯು, ಭಾವದೋಷೈರ್ನಬಾಧ್ಯತೇ-ಮನ ದೋಷಂಗಳಿಂದ ಸ್ಪರ್ಶಿಸಲ್ಪಡನು ॥೮೭॥

ರಾಗದ್ವೇಷಾದಯೋ ಭಾವಾ ಸ್ಸಂಸಾರಕ್ಲೇಶ ಕಾರಣಂ
ತೇಷಾಮುಪರಮೋಯತ್ರ ತತ್ರಭಾವ ಶಿವಾತ್ಮಕಃ

ರಾಗದ್ವೇಷಾದಯಃ-ರಾಗ ದ್ವೇಷ ಮೊದಲಾದಂಥಾ, ಭಾವಾಃ-ವಸ್ತುಗಳು, ಸಂಸಾರಕ್ಲೇಶ ಕಾರಣಂ-ಸಂಸಾರವೆಂಬ ದುಃಖಕ್ಕೆ ಕಾರಣವು, ತೇಷಾಂ-ಅವಕ್ಕೆ ಯತ್ರೋಪರಮಃ-ಆವಾಗ ಶಾಂತಿಯುಂಟಹುದು, ತತ್ರ-ಆಗ, ಭಾವಃ-ಭಾವವು, ಶಿವಾತ್ಮಕಃ-ಶಿವಸ್ವರೂಪವು ॥೮೮॥

ಶಿವಭಾವಾ ಸ್ಥಿರೇ ಜಾತೇ ನಿರ್ಲೇಪಸ್ಯ ಮಹಾತ್ಮನಃ
ಯೇಯೇ ಭಾವಾಸ್ಸಮುತ್ಪನ್ನಾಂ ಸ್ತೇತೇ ಶಿವಮಯಾಸ್ಮೃತಾಃ

ಶಿವಭಾವಾಸ್ಥಿರೇಜಾತೇ-ಶಿವಭಾವವು ಸ್ಥಿರವಾಗುತ್ತಂ ಇರಲಾಗಿ, ನಿರ್ಲೇಪಸ್ಯ-ನಿರ್ಲೇಪನಾಗಿರ್ದಂಥಾ, ಮಹಾತ್ಮನಃ-ಮಹಾತ್ಮನಿಗೆ, ಯೇಯೇಭಾವ ಸಮುತ್ಪನ್ನಃ-ಆವಾವ ಭಾವ ಉದ್ಭವಿಸುವುದೋ, ತೇ-ಆ ಆ ಭಾವಗಳು, ಶಿವಮಯಾಮತಾಃ-ಶಿವಾತ್ಮಕವೆಂದು ಹೇಳಲ್ಪಡುವುದು ॥೮೯॥

೪೮. ಜ್ಞಾನಪ್ರಕಾಶಸ್ಥಲ

ಮುಖ್ಯಾರ್ಥೇಽಸಂಭವೇ ಜಾತೇ ಲಕ್ಷಣಾಯೋಗಸಂಶ್ರಯಾತ್
ತತ್ಯಾಗೇನ ಯತ್ ಜ್ಞಾನಂ ತತ್ತತ್ ಜ್ಞಾನಪ್ರಕಾಶನಂ

ಜ್ಞಾನಪ್ರಕಾಶಸ್ಥಲವನು ನಿರೂಪಿಸುತ್ತಂ ಇದ್ದಾನು.

ಮುಖ್ಯಾರ್ಥಂ ಸಂಭವೇಜಾತೇ-ಮುಖ್ಯಾರ್ಥದಲ್ಲಿ ಉತ್ಪನ್ನನಾಗಿರ್ದಂಥಾತಂಗೆ ಮುಖ್ಯಾತ್ಮಜ್ಞಾನವಾಗುತ್ತಂ ಇರಲಾಗಿ, ಲಕ್ಷಣಾಯೋಗ ಸಂಶ್ರಯಾತ್-ಲಕ್ಷಣಾವೃತ್ತಿಯನು ಆಶ್ರಯಿಸುವುದರಿಂದ, ತತ್ಯಾಗೇನ ಯತ್ ಜ್ಞಾನಂ-ಏಕಾಂತವನು ಬಿಟ್ಟು ಮತ್ತೊಂದು ಅಂಶವನು ಸ್ವೀಕರಿಸುವುದರಿಂದ ಆವುದಾನೊಂದು ಜ್ಞಾನವುಂಟು, ತತ್ತತ್‌ಜ್ಞಾನಂ ಪ್ರಕಾಶನಂ-ಅದು ಜ್ಞಾನಪ್ರಕಾಶವೆನಿಸುವುದು ॥೯೦॥

ಜ್ಞಾನಸ್ಯ ವಿಷಯೇ ತತ್ವೇ ಶಿವಾಖ್ಯೇ ಚಿತ್ಸುಖಾತ್ಮನಿ
ಆತ್ಮೈಕತ್ವಾನುಸಂಧಾನಂ ಜ್ಞಾನಮಿತ್ಯುಚತೇ ಬುಧೈಃ

ಜ್ಞಾನಸ್ಯವಿಷಯೇ-ಜ್ಞಾನಕ್ಕೆ ವಿಷಯವಾಗಿರ್ದಂಥ, ಶಿವಾಖ್ಯೇ-ಶಿವಸ್ವರೂಪ ವಾಗಿರ್ದಂಥಾ, ಚಿತ್ಸುಖಾತ್ಮನಿ-ಚಿದಾನಂದ ಸ್ವರೂಪವಾಗಿರ್ದಂಥಾ, ತತ್ವೇ-ವಸ್ತುವಿನಲ್ಲಿ,

ಆತ್ಮೈಕತ್ವಾನುಸಂಧಾನಂ-ಜೀವ ಪರಮರುಗಳಿಗೆ ಏಕತ್ವಾನು ಸಂಧಾನವು, ಜ್ಞಾನಮಿತ್ಯುಚ್ಯತೇ-ಜ್ಞಾನವೆಂದು ಹೇಳಲ್ಪಡುವುದು ॥೯೧॥

ಜ್ಞಾನಮಿತ್ಯುಚ್ಯತೇ ಸದ್ಭಿಃ ಪರಿಚ್ಛೇದೋ ಹಿ ವಸ್ತುನಃ
ಪರಾತ್ಮನ್ಯಪರಿಚ್ಛೇದೇ ಕುತೋಜ್ಞಾನಸ್ಯ ಸಂಭವಃ

ವಸ್ತುನಃಪರಿಚ್ಛೇದಃ-ವಸ್ತುಪರಿಚ್ಛೇದವು, ಜ್ಞಾನಮಿತ್ಯುಚ್ಯತೇ-ಜ್ಞಾನವೆಂದು ಹೇಳಲ್ಪಡುವುದು, ಪರಾತ್ಮನಃಪರಿಚ್ಛೇದೇ-ಪರಾತ್ಮಜ್ಞಾನವುಂಟಾದರೆ, ಕುತೋಜ್ಞಾನಸ್ಯ ಸಂಭವಃ-ಜ್ಞಾನಕ್ಕೆ ಸಂಭವವೆತ್ತಣದು ॥೯೨॥

ಅಪರಿಚ್ಛಿನ್ನಮಾನಂದಂ ಸತ್ತಾಕಾರಂ ಜಗನ್ಮಯಂ
ಬ್ರಹ್ಮೈತಿ ಲಕ್ಷಣಂ ಜ್ಞಾನಂ ಬ್ರಹ್ಮಜ್ಞಾನಮಿಹೋಚ್ಯತೆ

ಅಪರಿಚ್ಛಿನ್ನಂ-ಪರಿಚ್ಛೇದ ರಹಿತವಾಗಿರ್ದಂಥಾ, ಆನಂದ ಸತ್ತಕಂ-ಸಚ್ಚಿದಾನಂದ ಸ್ವರೂಪವಾಗಿರ್ದಂಥಾ, ಜಗನ್ಮಯಂ-ಜಗನ್ಮಯವಾಗಿರ್ದಂಥಾ, ಬ್ರಹ್ಮೈತಿ ಲಕ್ಷಣಂ-ಬ್ರಹ್ಮಾಕಾರವಾಗಿರ್ದಂಥಾ, ಜ್ಞಾನಂ-ಜ್ಞಾನವು, ಬ್ರಹ್ಮಜ್ಞಾನಮಿಹೋಚ್ಯತೇ-ಬ್ರಹ್ಮ ಜ್ಞಾನವೆಂದು ಹೇಳಲ್ಪಡುವುದು ॥೯೩॥

ಬ್ರಹ್ಮಜ್ಞಾನೇ ಸಮುತ್ಪನ್ನೇ ವಿಶೇಷೋಪಾಧಿವರ್ಜಿತೇ
ಸರ್ವಂ ಸಂವಿನ್ಮಯಂಭಾತಿ ತದನ್ಯನ್ನೈವ ದೃಶ್ಯತೇ

ವಿಶೇಷೋಪಾಧಿವರ್ಜಿತೇ-ವಿಶೇಷೋಪಾಧಿರಹಿತವಾಗಿರ್ದಂಥಾ, ಬ್ರಹ್ಮಜ್ಞಾನೇ ಸಮುತ್ಪನ್ನೇ-ಬ್ರಹ್ಮಜ್ಞಾನ ಹುಟ್ಟುತ್ತಂ ಇರಲಾಗಿ, ಸರ್ವಂ-ಸಮಸ್ತವು, ಸಂವಿನ್ಮಯಂ ಭಾತಿ-ಚಿದಾತ್ಮಕವಾಗಿ ಒಪ್ಪುತಂ ಇಹುದು. ತದನ್ಯನ್ನೈವ ದೃಶ್ಯತೇ-ಬ್ರಹ್ಮವ್ಯತಿರಿಕ್ತ ವಸ್ತುವು ಕಾಣಲ್ಪಡದು ॥೯೪॥

ನ ಮುಕ್ತಜ್ಞಾನ ಸಂಬಂಧೋ ಜ್ಞೇಯಾ ಭಾವಸ್ಸ್ವಭಾವತಃ
ಉಪಾಧಿ ಸಹಿತಂ ಜ್ಞಾನಂ ನ ಭೇದಮಿತಿ ವರ್ತತೇ

ಜ್ಞೇಯ ಭಾವಃ ಸ್ವಭಾವತಃ-ಜ್ಞೇಯ ವಸ್ತು ಸಂಬಂಧ ಸ್ವರೂಪವಾದ ಕಾರಣ, ಮುಕ್ತೇನ ಜ್ಞಾನ ಸಂಬಂಧೋ ನ-ಮುಕ್ತನಲ್ಲಿ ಜ್ಞಾನ ಸಂಬಂಧವಿಲ್ಲ, ಉಪಾಧಿಸಹಿತಂ ಜ್ಞಾನಂ-ಉಪಾಧಿ ಸಹಿತವಾಗಿರ್ದಂಥಾ, ಜ್ಞಾನವು, ಭೇದಂನಾತಿವರ್ತತೇ-ಭೇದವನು ಅತಿಕ್ರಮಿಸದು, ಅದ್ವಿತೀಯವಾಗಿರ್ದಂಥಾ ಬ್ರಹ್ಮದಲ್ಲಿ ಉಪಾಧಿರಹಿತವಾಗಿರ್ದಂಥ ಜ್ಞಾನವು ಸಂಭವಿಸದು ॥೯೫॥

ತಸ್ಮಾದದ್ವೈತವಿಜ್ಞಾನಮಪವರ್ಗಸ್ಯ ಕಾರಣಂ
ಭಾವಯನ್ಸತತಂ ಯೋಗೀ ಸಂಸಾರೇಣ ನ ಲಿಪ್ಯತೇ

ತಸ್ಮಾತ್-ಅದು ಕಾರಣ, ಅದ್ವೈತವಿಜ್ಞಾನಂ-ಅದ್ವೈತ ವಿಜ್ಞಾನವು, ಅಪವರ್ಗಸ್ಯ ಕಾರಣಂ-ಮೋಕ್ಷಕ್ಕೆ ಕಾರಣ. ಸತತಂ ಭಾವಯನ್-ಆವಾಗಲೂ ಭಾವಿಸುತ್ತಂ ಇರ್ದಂಥಾ,

ಯೋಗೀ-ಶಿವಯೋಗಿಯು, ಸಂಸಾರೇಣ ನ ಲಿಪ್ಯತೆ-ಸಂಸಾರದಿಂದ ಸೋಂಕಲ್ಪಡನು ॥೯೬॥

ನಿತ್ಯೇನಿರ್ಮಲಸತ್ವಯೋಗಿಷು ಪರೇ ನಿರ್ವಾಸನೇ ನಿಷ್ಕಲೇ
ಸರ್ವಾತೀತಪದೇ ಚರಾಚರ ಮಯೇ ಸತ್ತಾತ್ಮನಿ ಜ್ಯೋತಿಷಿ
ಸಂವಿದ್ವ್ಯೋಮ್ನಿ ಶಿವೇ ವಿಲೀನ ಹೃದಯೇ ತದ್ಭೇದ ವೈಮುಖ್ಯತಃ
ಸ್ವಾಕ್ಷಾತ್ಸರ್ವಗತೋ ವಿಭಾತಿ ವಿಗಲದ್ವಿಶ್ವೋಯತಃ ಸಂಯಮೀ

ನಿತ್ಯೇ-ಕೇಡಿಲ್ಲದೆ ಇರ್ದಂಥ, ನಿರ್ಮಲ ಸತ್ವಯೋಗಿನೀ-ರಜಸ್ತಮೋಗುಣಗಳಿಂದ ಅನಭಿಭೂತವಾದ ಸತ್ವಗುಣವನುಳ್ಳಂಥಾ, ಪರೇ-ಪರಬ್ರಹ್ಮ ಸ್ವರೂಪವಾಗಿರ್ದಂಥಾ, ನಿರ್ವಾಸನೆ-ಅಜ್ಞಾನವಾಸನಾರಹಿತನಾಗಿರ್ದಂಥಾ, ನಿಃಕಲೆ-ನಿರಂಶನಾಗಿರ್ದಂಥಾ, ಸರ್ವಾತೀತಪದೇ-ಪ್ರಪಂಚಾತೀತಪದ ಸ್ವರೂಪವಾಗಿರ್ದಂಥ-ಚರಾಚರ ಮಯೇ-ಚರಾಚರಸ್ವರೂಪನಾಗಿರ್ದಂಥ, ಸರ್ವಾತ್ಮನೀ-ಸರ್ವಾತ್ಮಕನಾಗಿರ್ದಂಥ, ಜ್ಯೋತಿಷಿ-ಜ್ಞಾನಾತ್ಮಕವಾಗಿರ್ದಂಥ, ಸಂವಿದ್ವ್ಯೋಮ್ನಿ-ಚಿದಾಕಾಶನಾಗಿರ್ದಂಥ, ಶಿವೇ-ಶಿವನಲ್ಲಿ, ವಿಲೀನಹೃದಯೇ-ಹೃದಯವು ಸ್ಥಿರವಾಗುತ್ತಂ ಇರಲಾಗಿ, ತದ್ಭೇದವೈಮುಖ್ಯತಃ-ದ್ವೈತದಲ್ಲಿ ಪರಾಙ್ಮುಖನಾದ ಕಾರಣ, ಸಾಕ್ಷಾತ್ಸರ್ವ ಗತಃ-ಅಪರೋಕ್ಷವಾಗಿ, ಸರ್ವತ್ರ-ಸನ್ನಹಿತವಾಗಿರ್ದಂಥಾ, ವಿಗಲದ್ವಿಶಃ-ಶಿವನಾದ ಜಗತ್ತನ್ನುಳ್ಳಂಥಾ, ಸಂಯಮೀಶಿವ-ಶಿವಯೋಗಿಯು, ಭಾತಿ-ಒಪ್ಪುತ್ತಂ ಇಹನು ॥೯೭॥

ಇತಿ ಶ್ರೀ ವೀರಶೈವಧರ್ಮ ನಿರ್ಣಯೆ ಸಿದ್ಧಾಂತಶಿಖಾಮಣೌ ಟೀಕಾಯಾಂ ಶರಣಸ್ಥಲಮಾಶ್ರಿತ್ಯ ದ್ವಾದಶಲಿಂಗಸ್ಥಲನಾಮ ಏಕೋನವಿಂಶತಿ ಪರಿಚ್ಛೇದಃ

ವಿಂಶತಿತಮಪರಿಚ್ಛೇದ

ಐಕ್ಯಸ್ಥಲ

ಅಗಸ್ತ್ಯ ಉವಾಚ

ಸ್ಥಲಭೇದಾಸ್ತ್ವಯಾ ಪ್ರೋಕ್ತಾ ಶರಣಸ್ಥಲಂ ಸಂಶ್ರಿತಾಃ
ಐಕ್ಯಸ್ಥಲಗತಾನ್ಬ್ರೂಹಿ ಸ್ಥಲಭೇದಾನ್ ಗಣೇಂದ್ರ ಮೇ

ಭೋ ಗಣೇಂದ್ರ-ಎಲೈ ಗಣಶ್ರೇಷ್ಠನಾದ ರೇಣುಕೇಶ್ವರ, ತ್ವಯಾ-ನಿನ್ನಿಂದ, ಶರಣಸ್ಥಲ ಸಂಶ್ರಿತಾಃ-ಶರಣ ಸ್ಥಲವನಾಶ್ರಯಿಸಿದ, ಸ್ಥಲಭೇದಾಃ-ದೀಕ್ಷಾಪಾದೋದಕ ಸ್ಥಲವಾದಿಯಾದ, ದ್ವಾದಶಸ್ಥಲ ಭೇದಂಗಳು, ಪ್ರೋಕ್ತಾಃ-ಚೆನ್ನಾಗಿ ರೂಪಿಸಲ್ಪಟ್ಟವು, ಐಕ್ಯಸ್ಥಲಗತಾನ್-ಐಕ್ಯಸ್ಥಲದಲ್ಲಿರ್ದ, ಸ್ಥಲಭೇದಾನ್-ಸ್ಥಲಭೇದಗಳನು, ಮೇ-ನನಗೆ, ಬ್ರೂಹಿ-ನಿರೂಪಿಸು ॥೧॥

ರೇಣುಕ ಉವಾಚ

ಸ್ಥಲಾನಾಂ ನವಕಂಚೈಕ್ಯಸ್ಥಲೇಽಸ್ಮಿನ್ಪರಿಕೀರ್ತ್ಯತೇ
ತತ್ಸ್ವೀಕೃತ ಪ್ರಸಾದಾಖ್ಯಂ ಸ್ಥಲಮಾದೌ ಪ್ರಕೀರ್ತಿತಂ

ಶಿಷ್ಟೌದನಸ್ಥಲಂ ಪಶ್ಚಾಚ್ಚರಾಚರಲಯಸ್ಥಲಂ
ಭಾಂಡಸ್ಥಲಂ ತತಃ ಪ್ರೋಕ್ತಂ ಭಾಜನಸ್ಥಲಮುತ್ತಮಂ

ಅಂಗಲೇಪಸ್ಥಲಂ ಪಶ್ಚಾತ್ಸ್ವಪರಾಜ್ಞಸ್ಥಲಂ ತತಃ
ತದೇಷಾಂ ಕ್ರಮಶೋ ವಕ್ಷ್ಯೇ ಶೃಣು ತಾಪಸ ಲಕ್ಷಣಂ

ಭೋ ತಾಪಸಾ, ಎಲೆ ಅಗಸ್ತ್ಯನೆ, ಅಸ್ಮಿನ್-ಈ ಕ್ರಮ ಪ್ರಾಪ್ತವಾದ, ಐಕ್ಯಸ್ಥಲೇ-ಐಕ್ಯಸ್ಥಲದಲ್ಲಿ, ಸ್ಥಲಾನಾಂ-ಅಂತರ್ಗತವಾದ ಸ್ಥಲಂಗಳ ಭೇದವು, ನವಕಂ-ಒಂಬತ್ತು ಪ್ರಕಾರವೆಂದು, ಪರಿಕೀರ್ತ್ಯತೆ-ಹೇಳಲ್ಪಡುತಿರ್ದಪುದು, ತತ್-ಆ ಸ್ಥಲವು, ಸ್ವೀಕೃತ ಪ್ರಸಾದಾಖ್ಯಸ್ಥಲಂ-ಕೊಂಡುದು ಪ್ರಸಾದಸ್ಥಲವು, ಆದೌ-ಮೊದಲಲ್ಲಿ, ಪ್ರಕೀರ್ತಿತಂ-ಹೇಳಲ್ಪಟ್ಟಿತು, ಪಶ್ಚಾತ್-ಅನಂತರದಲ್ಲಿ, ಶಿಷ್ಟೋದನಸ್ಥಲಂ-ನಿಂದುದೋಗರ ಸ್ಥಲವು, ಚರಾಚರಲಯ ಸ್ಥಲಂ-ಆಮೇಲೆ ಚರಾಚರನಾಸ್ತಿ ಸ್ಥಲವು, ತತಃ-ಅನಂತರದಲ್ಲಿ, ಭಾಂಡಸ್ಥಲಂ-ಭಾಂಡಸ್ಥಲವು, ಪ್ರೋಕ್ತಂ-ಹೇಳಲ್ಪಟ್ಟಿತು, ಆಮೇಲೆ, ಉತ್ತಮಂ-ಉತ್ತಮವಾದ, ಭಾಜನಸ್ಥಲಂ-ಭಾಜನಸ್ಥಲವು, ಪಶ್ಚಾತ್-ಅನಂತರದಲ್ಲಿ, ಅಂಗಲೇಪಸ್ಥಲಂ-ಅಂಗಲೇಪನಸ್ಥಲವು, ಆಮೇಲೆ ಸ್ವಪರಾಜ್ಞಸ್ಥಲಂ-ಸ್ವಯ ಪರವರಿಯದ ಸ್ಥಲವು, ತತಃ-ಅನಂತರದಲ್ಲಿ, ಭಾವಾಭಾವ ವಿನಾಶಂಚ-ಭಾವಾಭಾವನಷ್ಟಸ್ಥಲ-ತತಃ-ಅನಂತರದಲ್ಲಿ, ಜ್ಞಾನಶೂನ್ಯಸ್ಥಲಂ-ಜ್ಞಾನಶೂನ್ಯಸ್ಥಲವು, ತದೇಷಾಂ-ಆ ಈ ಸ್ಥಲಂಗಳ, ಲಕ್ಷಣಂ-ಸ್ವರೂಪವನು, ಕ್ರಮಶಃ-ಕ್ರಮದಿಂದೆ, ವಕ್ಷೇ-ಹೇಳಿಹೆನು, ಶ್ರುಣು-ಕೇಳು ॥೪॥

೪೯. ಸ್ವೀಕೃತಪ್ರಸಾದಸ್ಥಲ

ಮುಖ್ಯಾರ್ಥೋ ಲಕ್ಷಣಾರ್ಥಶ್ಚ ಯತ್ರನಾಸ್ತಿ ಚಿದಾತ್ಮನಿ
ವಿಶೃಂಖಲತಯಾ ತಸ್ಯ ಪ್ರಸಾದಸ್ವೀಕೃತೋ ಭವೇತ್

ಯತ್ರ-ಆವುದಾನೊಂದು, ಚಿದಾತ್ಮನಿ-ಸಂಪೂರ್ಣ ಚಿದಾಕಾರದಲ್ಲಿ, ಮುಖ್ಯಾರ್ಥ-ತತ್‌ಯೆಂಬ ಮುಖ್ಯಾರ್ಥವು, ಲಕ್ಷಣಾರ್ಥಂ ಚ-ತ್ವಂ ಎಂಬ ಲಕ್ಷಣಾರ್ಥವು, ನಾಸ್ತಿ-ಇಲ್ಲದೆ ಇದ್ದಿತು, ತಸ್ಯ-ಆತಂಗೆ, ವಿಶೃಂಖಲತಯಾ-ಜ್ಞಾತೃಜ್ಞೇಯುವೆಂಬ ತೊಡಕಿಲ್ಲದೆ ಇಹುದರಿಂದೆ, ಪ್ರಸಾದ ಸ್ವೀಕೃತಿಃ-ಮಹಾಪ್ರಸಾದವನೊಳಕೊಂಡುದು, ಸ್ವೀಕೃತ ಪ್ರಸಾದವೆಂಬ ಸ್ಥಲವು, ಭವೇತ್-ಅಹುದು ॥೫॥

ಅಂತರ್ಮುಖೇನ ಮನಸಾ ಸ್ವಾತ್ಮಜ್ಯೋತಿಷಿಚಿನ್ಮಯೇ
ಸರ್ವಾನ್ನಪ್ಯರ್ಥ ವಿಷಯಾನ್ ಜುಹ್ವಾನ್ಯೋಗೀ ಪ್ರಮೋದತೇ

ಯೋಗಿಃ-ಶಿವಯೋಗೀಶ್ವರನು, ಅಂತರ್ಮುಖೇನ-ನಾದಬಿಂದ್ವಾದಿಸಾಕ್ಷಾತ್ಕಾರ ದಿಂದಂತರ್ಮುಖವಾದ, ಮನಸಾ-ಶುದ್ಧ ಸಾತ್ವಿಕರೂಪವಾದ ಮನದಿಂದೆ, ಚಿನ್ಮಯೇ-ಅಖಂಡಜ್ಞಾನರೂಪವಾದ, ಸ್ವಾತ್ಮಜ್ಯೋತಿಷಿ-ಸ್ವಯಂಜ್ಯೋತಿ ಸ್ವರೂಪದಲ್ಲಿ, ಸರ್ವಾನ್-ಸಮಸ್ತವಾದ, ಅರ್ಥವಿಷಯಾನ್-ನಾದ ಬಿಂದ್ವಾದಿ ರೂಪದಿಂ, ವಿಚಿತ್ರ ವಿಷಯುವಾದ ಅರ್ಥಂಗಳನು, ಜುಹ್ವಾನ್-ಬೇಳುತ್ತಿದ್ದಾತನಾಗುತ್ತಮು, ಪ್ರಮೋದತೇ-ಪರಮಾನಂದ ರೂಪದಿಂದಿರುತಿರ್ದಪನು ॥

ತಾತ್ಪರ್ಯ : ಕ್ಷೀರಾಂಬುಧಿಯು ತನ್ನೊಳಗೆ ಆದಂಥಾ ತರಂಗಬುದ್ಬುದಾದಿಗಳ ತಾನೆ ಒಳಗೊಂಡಂತೆ ತನ್ನಿಂದಾದ ನಾದಬಿಂದ್ವಾದಿ ಸಕಲ ಪದಾರ್ಥವನೊಳಕೊಂಡ ಮಹಾಪ್ರಸಾದವೆ ನಿಜನಿವಾಸವಾಯಿತ್ತೆಂಬುದಭಿಪ್ರಾಯ ॥೬॥

ಸಚ್ಚಿದಾನಂದ ಜಲಧೌ ಶಿವೇಸ್ವಾತ್ಮನಿ ನಿರ್ಮಲಃ
ಸಮರ್ಪ್ಯಸಕಲಾನ್ಭುಙ್ತೇ ವಿಷಯಾನತ್ಪ್ರಸಾದತಃ

ನಿರ್ಮಲಃ-ಅಹಂಕಾರ ಮಮಕಾರಾದಿ ಕಾಲುಷ್ಯವಿಲ್ಲದ ಶಿವಯೋಗೀಶ್ವರನು, ಸಚ್ಚಿದಾನಂದ ಜಲಧೌ-ಸದ್ರೂಪವಾದ ಜ್ಞಾನಾನಂದ ಸಮುದ್ರ ಸ್ಥಾನವಾದ, ಶಿವೇ-ಪರಶಿವರೂಪನಾದ, ಸ್ವಾತ್ಮನಿ-ತನ್ನಲ್ಲಿ, ಸಕಲಾನ್-ಸಮಸ್ತವಾದ, ವಿಷಯಾನ್-ಶುದ್ಧ ಪದಾರ್ಥಗಳನು, ಸಮರ್ಪ್ಯ-ಮರಳಿ ತೋರದಂತೆ ಅರ್ಪಿಸಿ, ತತ್ಪ್ರಸಾದತಃ-ಆ ಪ್ರಸಾದ ರೂಪದಿಂದೆ, ಭುಂಜ್ತೇ-ಭೋಗಿಸುತಿರ್ದಪನು

ತಾತ್ಪರ್ಯ : ಪಂಚಭೂತಂಗಳೆ ಪಂಚಬ್ರಹ್ಮರೂಪವಾಗಲಾಗಿ ಪಂಚಬ್ರಹ್ಮವೆ ಪಂಚಾಕ್ಷರರೂಪವಾಗಲಾ ಪಂಚಾಕ್ಷರವೆ ಪ್ರಣವಾತ್ಮವಾಗಲಾ ಸಕಲ ಪದಾರ್ಥಗಳಂ ಮಹಾಪ್ರಸಾದರೂಪದಿಂ ಭೋಗಿಸಿ ಪರಿಣಮಿಸುತಿರ್ದಪನೆಂಬುದಭಿಪ್ರಾಯಂ ॥೭॥

ಚಿದಾತ್ಮನಿಶಿವೇನ್ಯಸ್ತಂ ಜಗದೇತಚ್ಚರಾಚರಂ
ಜ್ಞಾಯತೇ ತನ್ಮಯಂ ಸರ್ವಮಗ್ನೌಕಾಷ್ಟಾದಿಕಂ ಯಥಾ

ಚಿದಾತ್ಮನಿ-ಪರಮ ಚೈತನ್ಯರೂಪನಾದ, ಶಿವೇ-ಪರಶಿವನಲ್ಲಿ, ನ್ಯಸ್ತಂ - ಸಮರ್ಪಿಸಲ್ಪಟ್ಟ, ಏತತ್ - ಈ ಚರಾಚರಂ ಚೇತನಾಚೇತನರೂಪವಾದ, ಜಗತ್-ಸಕಲ ಪ್ರಪಂಚವು, ಅಗ್ನೌ-ಮಹಾಗ್ನಿಯಲ್ಲಿರಿಸಲ್ಪಟ್ಟ, ಸರ್ವಂ-ಸಮಸ್ತವಾದ, ಕಾಷ್ಠಾದಿಕಂ-ಮರ ಗಿಡ ಮೊದಲಾದವು, ಯಥಾ-ಹ್ಯಾಂಗೆ ಅಗ್ನಿರೂಪವಪ್ಪುದು, ತಥಾ-ಹಾಂಗೆ, ತನ್ಮಯಂ-ಶಿವಸ್ವರೂಪವಾಗಿ, ಜ್ಞೇಯತೇ-ಅರಿಯಲ್ಪಡುತಿರ್ಪುದು.

ತಾತ್ಪರ್ಯ : ಶಿವಯೋಗೀಶ್ವರಂಗೆ ಶಿವತತ್ವದಿಂದಾದ ಜಗತ್ತು ಶಿವತತ್ವ ರೂಪವಾಗಿಯೆ ತೋರುವುದೆಂಬುದಭಿಪ್ರಾಯಂ ॥೮॥

ನ ಭಾತಿ ಪೃಥ್ವೀ ನ ಜಲಂ ನ ತೇಜೋ ನೈವ ಮಾರುತಃ
ನಾಕಾಶೋನಪರಂತತ್ವಂ ಶಿವೇ ದೃಷ್ಟೇ ಚಿದಾತ್ಮನಿ

ಚಿದಾತ್ಮನಿ-ಪರಮ ಚೈತನ್ಯರೂಪನಾದ, ಶಿವೇ-ಪರಶಿವನು, ದೃಷ್ಟೇ-ಕಾಣಲ್ಪಡ ಲಾಗಿ ಆ ಕಾಣುವೆಡೆಯಲ್ಲಿ, ಪೃಥ್ವೀ-ಪೃಥ್ವಿತತ್ವವು, ನಭಾತಿ-ತೋರುತ್ತಿರದು, ನ ಜಲಂ-ಅಪ್ಪುತತ್ವವು ತೋರುತ್ತಿರದು, ನ ತೇಜಃ-ಅಗ್ನಿ ತತ್ವವು ತೋರುತ್ತಿರದು, ನೈವ ಮಾರುತಂ-ವಾಯುತತ್ವವು ತೋರುತ್ತಿರದು, ನಾಕಾಶ-ಆಕಾಶ ತತ್ವವು ತೋರುತ್ತಿರದು, ನಾಪರಂ-ಅನ್ಯವಾದ ವಿಷಯವೊಂದು ತೋರುತ್ತಿರದು,

ತಾತ್ಪರ್ಯ : ನಿರ್ವಿಕಲ್ಪಿತವಾದ ಮಹಾಚೈತನ್ಯ ಸಾಕ್ಷಾತ್ಕಾರದಲ್ಲಿ ವಿಕಲ್ಪರೂಪವಾದ ವಿಷಯಂಗಳೊಂದು ಕಾಣಿಸದೆಂಬುದಭಿಪ್ರಾಯಂ ॥೯॥

ಅದ್ವೈತಬೋಧ ನಿರ್ಧೂತಭೇದಾವೇಶಸ್ಯಯೋಗಿನಃ
ಸಾಕ್ಷಾತ್ಕೃತ ಮಹಾ ಸಂವಿತ್ಪ್ರಕಾಶಸ್ಯ ಕ್ವ ಬಂಧನಂ

ಅದ್ವೈತಬೋಧನಿರ್ಧೂತ ಭೇದಾವೇಶಸ್ಯ-ತ್ರಿಪುಟಿಯಳಿಯಲಾ ಪೂರ್ಣಾದ್ವೈತ ಜ್ಞಾನಾಭಿವ್ಯಕ್ತಿಯಿಂ ನಾನು ನೀನೆಂಬ ದ್ವೈತಭ್ರಾಂತಿಯನತಿಗಳೆದು, ಸಾಕ್ಷಾತ್ಕೃತ ಮಹಾಸಂವಿತ್ಪ್ರಕಾಶಸ್ಯ-ಅಖಂಡಿತಮಹಾಜ್ಞಾನಪ್ರಸಾದ ಸಾಕ್ಷಾತ್ಕಾರವುಳ್ಳ, ಯೋಗಿನಃ-ಶಿವ ಯೋಗೀಶ್ವರಂಗೆ, ಬಂಧನಂ-ಉಪಾಧಿಕೃತಮಾದ ಧ್ಯಾನಧಾರಣಾದಿ ಬಂಧನವು, ಕ್ವ-ಎತ್ತಣದು.

ತಾತ್ಪರ್ಯ : ಪೂರ್ವಜ್ಞಾನ ಸಿದ್ಧಂಗೆ ವಿಕಲ್ಪಭ್ರಮೆ ಇಲ್ಲವೆಂಬುದಭಿಪ್ರಾಯಂ ॥೧೦॥

ಜ್ಯೋತಿರ್ಲಿಂಗೇ ಚಿದಾಕಾರೇ ಜ್ವಲತ್ಯಂತರ್ನಿರಂತರಂ
ವಿಲೀನಂ ನಿಖಿಲಂ ತತ್ವಂ ಪಶ್ಯನ್ಯೋಗೀ ನ ಲಿಪ್ಯತೇ

ಚಿದಾಕಾರೇ-ನಾದಾದ್ಯುಪಾಧಿರಹಿತವಪ್ಪುದರಿಂ ಸಂವಿನ್ಮಾತ್ರರೂಪಮಾದ, ಜ್ಯೋತಿರ್ಲಿಂಗೇ-ಪರಂಜ್ಯೋತಿ ಸ್ವರೂಪವಾದ, ಲಿಂಗೇ-ಮಹಾಲಿಂಗವು, ಅಂತಃ-ಪರಮಾಂತರಂಗದಲ್ಲಿ, ನಿರಂತರಂ-ಹರಿಹಂಚಿಲ್ಲದೆ, ಜ್ವಲತಿ-ಬೆಳಗುತ್ತಿರಲಾಗಿ,

ನಿಖಿಲಂ-ಸಮಸ್ತವಾದ, ತತ್ವಂ-ನಾದ ಬಿಂದ್ವಾದಿ ತತ್ವವನು, ವಿಲೀನಂ ಮಹಾಪ್ರಸಾದ ರೂಪಾದಲ್ಲಿ ಅಡಗಲ್ಪಟ್ಟವನಾಗಿ, ಪಶ್ಯನ್-ಕಾಣುತಿರ್ದ ಯೋಗೀ-ಶಿವಯೋಗೀಶ್ವರನು, ನ ಲಿಪ್ಯತೇ-ನಿರ್ಲೇಪನಾಗಿಪ್ಪಹನು ॥೧೧॥

ಮಾತೃಮೇಯ ಪ್ರಮಾಣಾದಿ ವ್ಯವಹಾರ ವಿಹಾರಿಣೀಂ
ಸಂವಿತ್ಸಾಕ್ಷಾತ್ಕೃತಿಂ ಲಬ್ಧ್ವಾ ಯೋಗೀಸ್ವಾತ್ಮನಿ ತಿಷ್ಠತಿ

ಯೋಗೀ-ಶಿವಯೋಗೀಶ್ವರನು, ಮಾತೃಮೇಯ ಪ್ರಮಾಣಾದಿ ವ್ಯವಹಾರ ವಿಹಾರಿಣೀ-ಮಾಯೋಪಾಧಿಯಿಂದಾದ ಪ್ರಮಾತೃ ಪ್ರಮೇಯ ಪ್ರಮಾಣಾದಿ ಮುಂತಾದ ವ್ಯವಹಾರಮಂ ತೊಲಗಿಸಿ ನೂಂಕುವ, ಸಂವಿತ್‌ಸಾಕ್ಷಾತ್ಕೃತಿ-ಅಖಂಡಿತ ಜ್ಞಾನ ಸಾಕ್ಷಾತ್ಕರಮಂ, ಲಬ್ಧ್ವಾ-ಪಡೆದು, ಸ್ವಾತ್ಮನಿ-ಸ್ವಾತ್ಮಾರಾಮವಾದ ಸ್ವರೂಪಿನಲ್ಲಿ, ತಿಷ್ಠತಿ-ನಿಸ್ತರಂಗವಾಗಿರುವನು ॥೧೨॥

೫೦. ಶಿಷ್ಟೌದನಸ್ಥಲ

ಅನಂತರದಲ್ಲಿ ಶಿಷ್ಟೌದನ ಸ್ಥಲವನು ನಿರೂಪಿಸುತಿರ್ದಪನು

ಪ್ರಕಾಶತೇ ಯಾ ಸರ್ವೇಷಾಂ ಮಾಯಾಸೈವೋದನಾಕೃತಿಃ
ಲೀಯತೇ ಯತ್ರ ಚಿಲ್ಲಿಂಗೇ ಶಿಷ್ಟಂ ತತ್ಪರಿಕೀರ್ತಿತಂ

ಯಾ-ಆವುದಾನೊಂದು ಮಾಯಾಮೋಹರೂಪವಾದ ಮಾಯಾಶಕ್ತಿಯು, ಸರ್ವೇಷಾಂ-ಶಿವಯೋಗೀಶ್ವರನಿಂದನ್ಯವಾದ ಸಕಲ ಜೀವರ್ಗೆ ತ್ರಿಪುಟಿರೂಪದಿಂ ತೋರುತಿರ್ಪುದು, ಸೈವಾ-ಆ ಮಾಯೆಯೆ, ವೋದನಾಕೃತಿಃ-ಪದಾರ್ಥರೂಪವಪ್ಪುದರಿಂದೆ ಭೋಜ್ಯವೆಂಬುದರ್ಥ. ಆ ಮಾಯಾಂಶವೆ ಶಿವಯೋಗೀಶ್ವರಂಗೆ, ಯತ್ರ-ಆವುದಾನೊಂದು, ಚಿಲ್ಲಿಂಗೇ-ಪೂರ್ಣಜ್ಞಾನರೂಪವಾದ ಲಿಂಗದಲ್ಲಿ, ಲೀಯತೆ-ಪ್ರಸಾದ ರೂಪದಿಂದೆ, ಅಡಗುತ್ತಿರ್ಪುದು, ತತ್-ಆ ಒಳಕೊಂಡ ಮಹಾಲಿಂಗವೆ, ಶಿಷ್ಟಂ-ಉಳಿದ ಉಳುಮೆ ಎಂದು, ಪರಿಕೀರ್ತಿತಃ-ಹೇಳಲ್ಪಟ್ಟಿತು ॥೧೩॥

ಜ್ಯೋತಿರ್ಲಿಂಗೇ ಚಿದಾಕಾರೇ ನಿಮಗ್ನೇನ ಮಹಾತ್ಮನಾ
ಭೋಜ್ಯಮಾನಾ ಯಥಾಯೋಗಂ ನಶ್ಯಂತಿ ವಿಷಯಾಸ್ಸ್ವತಃ

ಚಿದಾಕಾರೇ-ಪೂರ್ಣಜ್ಞಾನರೂಪವಾದ, ಜ್ಯೋತಿರ್ಲಿಂಗೇ-ಪರಂಜ್ಯೋತಿ ಸ್ವರೂಪವಾದ ಲಿಂಗದಲ್ಲಿ, ನಿಮಗ್ನೇನ-ತಾನೆಂಬ ತೋರಿಕೆ ಇಲ್ಲದೆ ನಿಂದ, ಮಹಾತ್ಮನಾ-ಮಹಾಪುರುಷನಿಂದೆ, ಯಥಾಯೋಗಂ-ಯಥೋಚಿತವಾಗಿ, ಭೋಜ್ಯಮಾನಾ ಪ್ರಸಾದರೂಪದಿಂ ಭೋಗಿಸಲ್ಪಡುತಿರ್ದ, ವಿಷಯಾಃ-ಸಕಲ ವಿಷಯಂಗಳು, ಸ್ವತಃ-ತಮ್ಮಿಂದ ತಾವೆ, ನಶ್ಯಂತಿ-ನಾಶವನೈದುತಿರ್ದಪವು, ತಾತ್ಪರ್ಯಃ-ಹುರಿದ ಬೀಜದಂತೆ ಮುಂದೆ ಅಂಕುರಿಸದೆಂಬುದರ್ಥ ॥೧೪॥

ವಿಶ್ವಸಮ್ಮೋಹಿನೀ ಮಾಯಾ ಬಹುಶಕ್ತಿರ್ನಿರಂಕುಶಾ
ಶಿವೈಕತ್ವಮುಪೇತಸ್ಯ ನ ಪುನಸ್ಥಾತು ನೇಹತೇ

ವಿಶ್ವಸಮ್ಮೋಹಿನೀ-ಸಕಲ ಜೀವರನು ನಾನೆಂದು ನನ್ನದೆಂದು ಭ್ರಾಂತವಂ ಮಾಡುವದಾದ, ಬಹುಶಕ್ತಿಃ-ಅನೇಕ ವಿಚಿತ್ರ ಶಕ್ತಿಯುಳ್ಳದಾದ, ನಿರಂಕುಶಾ-ತಡೆಯಲಶಕ್ಯವಾದ, ಮಾಯಾ-ಮೋಹಿಕಾರೂಪಿಣಿಯಾದ ಮಾಯಾಶಕ್ತಿಯು, ಶಿವೈಕತ್ವಂ-ಶಿವನ ಏಕವನು, ಉಪೇತಸ್ಯ-ಐಯ್ದಿದ ಶಿವಯೋಗೀಶ್ವರಂಗೆ, ಪುನಃ-ಮರಳಿ, ಸ್ಥಾತುಂ-ಇರಲು, ನೇಹತೇ-ಇಚ್ಛೈಸುತ್ತಿರದು.

ತಾತ್ಪರ್ಯ : ಅಭಿಮಾನಿಗೆ ಪುನರ್ಜನ್ಮವಲ್ಲದೆ ನಿರಭಿಮಾನಿಗೆ ಜನ್ಮಾಂತರವಿಲ್ಲ ವೆಂಬುದರ್ಥ ॥೧೫॥

ಶಬ್ದಾದಯೋಪಿ ವಿಷಯಾ ಭೋಜ್ಯಮಾನಸ್ತದೇಂದ್ರಿಯೈಃ
ಆತ್ಮನ್ಯೆವ ಹಿ ಲೀಯಂತೇ ಸರಿತಃ ಸಾಗರೇ ಯಥಾ

ಶಬ್ದಾದಯಾಃ-ಶಬ್ದ ಸ್ಪರ್ಶ ರೂಪು ರಸ ಗಂಧಾದಿ ವಿಷಯಂಗಳು, ಹಿ-ಪ್ರಸಿದ್ಧವಾಗಿ, ತದಿಂದ್ರಿಯೈಃ-ಆಯಾ ಶ್ರೋತೃವೊದಲಾದಿಂದ್ರಿಯಗಳಿಂದೆ, ಭೋಜ್ಯಮಾನಾಃ-ಪ್ರಸಾದ ರೂಪಿಂದೆ ಭೋಗಿಸಲ್ಪಟ್ಟದಾಗುತ್ತವೆ, ಸಾಗರೇ-ಮಹಾ ಸಮುದ್ರದಲ್ಲಿ, ಸರಿತಃ-ನದಿಗಳು, ಯಥಾ-ಹೆಂಗೆ ಹಾಂಗೆ, ಆತ್ಮನ್ಯೈವಹಿ-ಪರಮಾತ್ಮ ರೂಪನಾದ ತನ್ನಲ್ಲಿಯೆ, ಲೀಯ್ಯಾಂತೆ-ಅಡಗಿ ಬೇರಿಲ್ಲದಿರ್ಪವು ॥

ತಾತ್ಪರ್ಯ : ಸಮುದ್ರದಲ್ಲಿ ಬೆರೆದ ನದಿಗಳು ಮರಳಿ ನದಿಯಾಗದಂತೆ ಮಹಾ ಲಿಂಗದಲ್ಲಿ ಕೂಡಿದ ವಸ್ತುಗಳಿಗೆ ಪುನರಾವೃತ್ತಿ ಇಲ್ಲವೆಂಬುದು ತಾತ್ಪರ್ಯ ॥೧೬॥

ಅರ್ಥಜಾತಮಶೇಷಂತು ಗ್ರಸನ್ಯೋಗೀ ಪ್ರಶಾಮ್ಯತಿ
ಸ್ವಾತ್ಮನ್ಯೈವಸ್ಥಿತೋಭಾನುಸ್ತೇಜೋಜಾಲಮಶೇಷತಃ

ಯೋಗಿಃ-ಪರಮಾತ್ಮ ರೂಪವಾದ ಶಿವಯೋಗೀಶ್ವರನು, ಅಶೇಷಂತು-ನಿಶ್ಶೇಷವಾದ, ಅರ್ಥಜಾತಂ-ಮಾಯಾ ಪ್ರಪಂಚನು, ಗ್ರಸನ್-ತನ್ನಲ್ಲಿಯೆ, ಲಯವನ್ನೈದಿಸಿದಾತನಾಗುತ್ತವು, ಪ್ರಶಾಮ್ಯತೆ-ನಿಸ್ತರಂಗ ರೂಪದಿಂ ಶಾಂತ ರೂಪವನಪ್ಪನು, ಅಲ್ಲಿ ದೃಷ್ಟಾಂತ, ಭಾನುಃ-ವ್ಯವಹಾರವಳಿದ ಸೂರ್ಯನು, ತೇಜೋಜಾಲಂ-ತನ್ನ ಕಿರಣ ಸಮೂಹವನು, ಅಶೇಷತಃ-ಉಳಿಯದೆ ತನ್ನಲ್ಲಿಯೆ ಅಡಗಿಸುವುದರಿಂದೆ, ಸ್ವಾತ್ಮನ್ಯೈವ-ತನ್ನಲ್ಲಿಯೆ, ಸ್ಥಿತಃ-ಇರಿಸಲ್ಪಟ್ಟಾತನಾಗಿ ಹೇಗೆ ಇರ್ಪನೊ, ಹಾಗೆ ಶಿವಯೋಗೀಶ್ವರನು ತನ್ನಿಂದನ್ಯವಾದ ಕೋರಿಕೆ ಇಲ್ಲದೆ ಆತ್ಮಾರಾಮನಾಗಿರ್ಪ ನೆಂಬುದರ್ಥ ॥೧೭॥

ಜಗದನ್ಯೇ ಪರಿಗ್ರಸ್ತೇ ಮಾಯಾಪಾಶವಿಜ್ರುಂಭತೇ
ಸ್ವಾತ್ಮಜ್ಯೋತಿಷಿ ಬೋಧೇನ ತದೇಕಮವಶಿಷ್ಯತೇ

ಸ್ವಾತ್ಮ ಜ್ಯೋತಿಷಿ-ಪರಮಾತ್ಮ ಜ್ಯೋತಿಯಲ್ಲಿ, ಬೋಧೇನ-ಪರಿಪೂರ್ಣ ಜ್ಞಾನದಿಂದ, ಮಾಯಪಾಶ ವಿಜೃಂಭಿತೇ-ಮಾಯೆ ಎಂಬ ಪಾಶದ ಹೊರಹೊಮ್ಮಿಕೆಯಿಂದ ವಿಚಿತ್ರರೂಪವಾದ, ಜಗದನ್ಯೇ-ಆತ್ಮನಿಂದನ್ಯವಾದ ಜಗತ್ತು, ಪರಿಗ್ರಸ್ತೇ-ನಿಶ್ಶೇಷದಿಂ ಲಯವನೆಯ್ದಿಸಲಾಗಿ, ತತ್-ಆ ಪೂರ್ಣಾನಂದ ರೂಪವಾದ, ಏಕಂ-ಅಖಂಡಿತ ಚೈತನ್ಯವೆ, ಅವಶಿಷ್ಯತೆ-ಉಳಿಮೆಯಾಗಿ ಇರುತ್ತಿರ್ಪುದು, ಪ್ರಪಂಚದ ತೋರಿಕೆಯಳಿದರೆ ಪರಬ್ರಹ್ಮವೆ ಉಳಿಯುವುದೆಂಬುದರ್ಥ ॥೧೮॥

೫೧. ಚರಾಚರಲಯಸ್ಥಲ

ಮುಂದೆ ಚರಾಚರನಾಸ್ತಿಸ್ಥಲವನು ನಿರೂಪಿಸುತಿರ್ದಪಂ

ಲಿಂಗೈಕ್ಯೇತುಸಮಾಪನ್ನೇ ಚರಣಾಚರಣಾಂಗತೇ
ನಿರ್ದೇಹೀ ಚ ಭವದ್ಯೋಗಿ ಚರಾಚರ ವಿನಾಶತಃ

ಲಿಂಗೈಕ್ಯೇತು-ಮಹಾಲಿಂಗದಲ್ಲಿಯೆ ತತ್ವವು, ಸಮಾಪನ್ನೆ-ಸಾಧ್ಯವಾಗಲಾಗಿ, ಚರಣಾಚರಣೆ-ಅರಿವ ಇಂದ್ರಿಯಗಳು ಅರುಹಿಸಿಕೊಂಬ ವಿಷಯಂಗಳು, ಗತೇ-ಲಯವನೆಯ್ದಲಾಗಿ, ಚರಾಚರ ವಿನಾಶತಃ-ಅರಿವ ಇಂದ್ರಿಯಗಳ, ಅರುಹಿಸಿಕೊಂಬ ವಿಷಯಂಗಳ ಲಯಸ್ಥಾನವನರಿದ, ಯೋಗಿಃ-ಶಿವಯೋಗೀಶ್ವರನು, ನಿರ್ದೇಹೀ ಚ-ದೇಹವಲ್ಲದಾತನು, ಭವೇತ್-ಆಗುವನು ॥೧೯॥

ನಾನ್ಯತ್ಪಶ್ಯತಿ ಯೋಗೀಂದ್ರೋ ನಾನ್ಯಜಾನಾತಿ ಕಿಂಚನಃ
ನಾನ್ಯ ಚ್ಛೃಣೋತಿ ಸಂದೃಷ್ಟೇ ಚಿದಾನಂದಮಯೇ ಶಿವೇ

ಚಿದಾನಂದಮಯೇ-ಜ್ಞಾನಾನಂದ ರೂಪವಾದ, ಶಿವೇ-ಪರಶಿವನು, ಸಂದೃಷ್ಟೇ-ಚೆನ್ನಾಗಿ ಕಾಣಲ್ಪಡಲಾಗಿ, ಯೋಗೀಂದ್ರಃ-ಶಿವಯೋಗೀಶ್ವರನು, ಅನ್ಯತ್-ಶಿವನಿಂದನ್ಯವನು, ನ ಪಶ್ಯತಿ-ಕಾಣುತ್ತಿರನು, ಅನ್ಯತ್-ಇತರವಾದ, ಕಿಂಚನ-ಏನನು, ನ ಜಾನಾತಿ-ಅರಿವುತ್ತಿರನು, ಅನ್ಯತ್-ಮತ್ತೊಂದನು, ನ ಶೃಣೋತಿ-ಕೇಳುತ್ತಿರನು ॥೨೦॥

ಅಸದೇವ ಜಗತ್ಸರ್ವಂ ಸದಿವ ಪ್ರತಿಭಾಸತೇ
ಜ್ಞಾತೇ ಶಿವೇ ತಥಾಜ್ಞಾನಸ್ವರೂಪಮುಪಪದ್ಯತೇ

ಅಸದೇವ-ಮಿಥ್ಯಾರೂಪವಾದ, ಸರ್ವಂ-ಸಮಸ್ತವಾದ, ಜಗತ್-ತನು ಕರಣ ಭುವನಭೋಗರೂಪವಾದ ಜಗತ್ತು, ಸದಿವ-ಅವಿದ್ಯಾ ಸಂಗದಿಂದ ಸದ್ರೂಪದಂತೆ, ಪ್ರತಿಭಾಸತೆ-ತೋರುತ್ತಿಹದು, ಶಿವೇ-ಪರಶಿವನು, ಜ್ಞಾತೇ-ಅರಿಯಲ್ಪಡಲಾಗಿ, ತಥಾ-ಆ ಕಾಲದಲ್ಲಿ, ಜ್ಞಾನಸ್ವರೂಪಂ-ಅವಿದ್ಯಾನಾಶಕವಾದ ನಿಜದರಿವು, ಉಪಪದ್ಯತೇ-ನೆಲೆಗೊಳುತಿರ್ಪುದು ॥೨೧॥

ಅನಾದ್ಯವಿದ್ಯಾಮೂಲಾಹಿ ಪ್ರತೀತಿ ಜಗತಾಮಿಯಂ
ಸ್ವಾತ್ಮೈಕ ಬೋಧಾತ್ತನ್ನಾಶೇ ಕುತೋಽವಿಶ್ವಪ್ರಕಾಶನಂ

ಇಯಂ-ಈ ದೃಶ್ಯಮಾನವಾದ, ಜಗತಾಂ-ಪೃಥ್ವಿ ಮುಂತಾದ ಜಗತ್ತುಗಳ, ಪ್ರತೀತಿ-ತೋರಿಕೆ, ಅನಾದ್ಯವಿದ್ಯಾಮೂಲಾ-ಅನಾದಿಯಾದ ಅವಿದ್ಯೆಯೆ ಕಾರಣವಾಗಿ ವುಳ್ಳದು, ಹಿ-ಪ್ರಸಿದ್ಧವಲಾ, ಸ್ವಾತ್ಮೈಕ ಬೋಧಾತ್-ತನ್ನಯ ನಿಜಸ್ವರೂಪವೊಂದರ ಪೂರ್ಣ ಜ್ಞಾನದತ್ತಣಿಂದೆ, ತನ್ನಾಶೆ-ಆ ಅವಿದ್ಯ ನಾಶವಾಗಲಾಗಿ, ವಿಶ್ವಪ್ರಕಾಶನಂ ಭ್ರಾಂತಿ-ಪ್ರಪಂಚದ ತೋರಿಕೆ, ಕುತಃ-ಎತ್ತಣದೊ, ನಿಜದರಿವಿನಿಂ ಭ್ರಾಂತಿ ನಾಶವಾದರೆ ನೋಡುವದು ಇಲ್ಲ ನೋಡಿಸಿಕೊಂಬುದು ಇಲ್ಲವೆಂದರ್ಥ ॥೨೨॥

ಯಥಾಮೇಘಾಸ್ಸಮುದ್ಭೂತಾ ವಿಲೀಯಂತೇ ನಭಸ್ಥಲೇ
ತಥಾತ್ಮನಿ ವಿಲೀಯಂತೇ ವಿಷಯಾಸ್ಸ್ವಾನುಭಾವಿನಃ

ಯಥಾ-ಹೆಂಗೆ, ಸಮುತ್ಪನ್ನಾಃ-ಆಗಸದಲ್ಲಿ ಹುಟ್ಟಿದ, ಮೇಘ-ಮುಗಿಲುಗಳು, ನಭಸ್ಥಲೇ-ಆಕಾಶದಲ್ಲಿಯೇ, ವಿಲೀಯಂತೇ-ಅಡಗುತಿರ್ಪವು, ಸ್ವಾನುಭಾವಿನಃ-ಸ್ವಾನುಭಾವ ಸಿದ್ಧನಾದಾತಂಗೆ, ವಿಷಯಾಃ-ಅಂತರಂಗ ಬಹಿರಂಗದಲ್ಲಿ ತೋರುವ ವಿಷಯಂಗಳು, ಆತ್ಮನಿ-ತನ್ನಲ್ಲಿಯೆ, ವಿಲೀಯಂತೇ-ಅಡಗುತಿರ್ಪವು, ಅವಿದ್ಯಾಭ್ರಾಂತಿಯಿಂ-ತನ್ನ ನಂಬಿ ತೋರಿದ ಜಗತ್ತು, ಭ್ರಾಂತಿ ನಾಶದಿಂ-ತನ್ನಲ್ಲಿಯೆ ಲಯವನೆಯ್ದುದೆಂಬುದರ್ಥ ॥೨೩॥

ಸ್ವಪ್ನೇದೃಷ್ಟಂ ಯಥಾವಸ್ತು ಪ್ರಬೋಧೇ ಲಯಮಶ್ನುತೇ
ತಥಾ ಸಾಂಸಾರಿಕಂ ಸರ್ವಮಾತ್ಮಜ್ಞಾನೇ ವಿನಶ್ಯತಿ

ಯಥಾ-ಹೇಂಗೆ, ಸ್ವಪ್ನೇ-ಸ್ವಪ್ನಾವಸ್ಥೆಯಲ್ಲಿ, ದೃಷ್ಟಂ-ಮಿಥ್ಯಾರೂಪದಿಂ ತೋರಿದ ವಸ್ತು ಪ್ರಪಂಚವು, ಪ್ರಬೋಧೇ-ಜಾಗ್ರಾವಸ್ಥೆಯಲ್ಲಿ, ಲಯಂ-ನಾಶವನು, ಅಶ್ನುತೆ - ಅನುಭವಿಸುತಿರ್ಪುದು, ತಥಾ-ಹಾಂಗೆ, ಸಾಂಸಾರಿಕಂ-ಸಂಸಾರಾವಸ್ಥೆಯಲ್ಲಿ ಅಹಂಕಾರ ಮಮಕಾರದಿಂ ತೋರಿದ, ಸರ್ವಂ-ಸಕಲ ಪ್ರಪಂಚವು, ಆತ್ಮಜ್ಞಾನೇ-ಸ್ವಾನುಭವ ಸಂವಿತ್ತಿನಲ್ಲಿ, ವಿನಶ್ಯತಿ-ಕೆಡುತಿರ್ಪುದು ॥೨೪॥

ಜಾಗ್ರತ್ಸ್ವಪ್ನ ಸುಷುಪ್ತಿಭ್ಯಃ ಪರಾವಸ್ಥಾಮುಪೇಯುಷಃ
ಕಿಂ ವಾ ಪ್ರಮಾಣಂ ಕಿಂ ಜ್ಞೇಯಂ ಕಿಂ ವಾ ಜ್ಞಾನಸ್ಯ ಸಾಧನಂ

ಜಾಗ್ರತ್ಸ್ವಪ್ನ ಸುಷುಪ್ತಿಭ್ಯಃ-ಬಾಹ್ಯೇಂದ್ರಿಯ ವ್ಯಾಪಾರವಾದ ಜಾಗ್ರಾವಸ್ಥೆ, ಯತ್ತಣಿಂದೆ ಮನೋವ್ಯಾಪಾರವಾದ ಸ್ವಪ್ನಾವಸ್ಥೆಯತ್ತಣಿಂದೆ, ಮನೋಲಯ ರೂಪವಾದ ಸುಷುಪ್ತಾವಸ್ಥೆಯತ್ತಣಿಂ ತೊಲಗಿ, ಪರಾವಸಾಸ್ಥ ಉತ್ತರವಾದ ತುರ್ಯಾವಸ್ಥೆಯನು, ಉಪೇಯುಷಃ-ಯೆಯ್ದುತಿರ್ದ ಯೋಗೀಶ್ವರಂಗೆ, ಕಿಂ ವಾ ಪ್ರಮಾಣಂ-ಪ್ರಮಾಣವಾವುದು, ಕಿಂ ಜ್ಞೇಯಂ-ಪ್ರಮೇಯವಾವುದು, ಜ್ಞಾನಸ್ಯ-ಜ್ಞಾನಕ್ಕೆ ಸಾಧನವಾದ ಕಾರಣದಲ್ಲಿ, ಕಿಂ-ಏನು, ಅವಸ್ಥಾತ್ರಯವ ದಾಂಟಿ ನಿಂದಾತಂಗೆ ತ್ರಿಪುಟಿಯ ವ್ಯವಹಾರವಿಲ್ಲೆಂಬುದು ತಾತ್ಪರ್ಯ ॥೨೫॥

ತುರ್ಯಾತೀತ ಪದಂ ಯತ್ತದ್ದೂರಂ ವಾಙ್ಮನಸಾಧ್ವನಃ
ಅನುಪ್ರವಿಶ್ಯತದ್ಯೋಗೀ ನ ಭೂಯೋ ವಿಶ್ವಮೀಕ್ಷತೇ

ಯತ್-ಆವುದಾನೊಂದು, ತುರ್ಯತೀತಪದಂ-ಚಿದಾಕಾಶರೂಪಮಾದ ತುರ್ಯಾತೀತಸ್ಥಾನವುಂಟು, ತತ್-ಆ ಸ್ಥಾನವು, ವಾಙ್ಮನಸಾಧ್ವನಃ-ವಾಙ್ಮನಸುಗಳ ಮಾರ್ಗಕ್ಕೆ, ದೂರಂ-ದೂರವಾಗಿಹುದು, ತತ್-ಆ ಸ್ಥಾನವನು, ಪ್ರವೇಶ್ಯ-ಹೊಕ್ಕು, ಯೋಗಿಃ-ಯೋಗೀಶ್ವರನು,ಭೂಯುಃ-ಮರಳಿ, ವಿಶ್ವಂ-ವಿಶ್ವ ಪ್ರಪಂಚನು, ನೇಕ್ಷತೆ-ಕಾಣುತ್ತಿರನು, ತುರ್ಯಾತೀತದಲ್ಲಿ ಸ್ವಾತ್ಮಾರಾಮನಾದ ಶಿವಯೋಗೀಶ್ವರಂಗೆ ಪ್ರಪಂಚದ ತೋರಿಕೆ ಇಲ್ಲವೆಂಬುದರ್ಥ ।।೨೬।।

೫೨. ಭಾಂಡಸ್ಥಲ

ಮುಂದೆ ಭಾಂಡಸ್ಥಲವನು ನಿರೂಪಿಸುತಿರ್ದಪಂ

ಬ್ರಹ್ಮಾಂಡ ಶತಕೋಟೀನಾಂ ಸರ್ಗಸ್ಥಿತಿ ಲಯಾತ್ ಪ್ರತಿ
ಸ್ಥಾನಭೂತೋ ವಿಮರ್ಶಾಯಸ್ತದ್ಭಾಂಡಸ್ಥಲಮುಚ್ಯತೇ

ಬ್ರಹ್ಮಾಂಡ ಶತಕೋಟೀನಾಂ-ಅನಂತ ಕೋಟಿ ಬ್ರಹ್ಮಾಂಡಗಳ, ಸ್ವರ್ಗ ಸ್ಥಿತಿಲಯಾನ್-ಪ್ರತಿ ಸೃಷ್ಟಿ ಸ್ಥಿತಿ ಸಂಹಾರಗಳ ಕುರಿತು, ಸ್ಥಾನಭೂತಃ-ಮೂಲಾಧಾರ ರೂಪವಾದ, ಯಃ-ಆವುದಾನೊಂದು, ವಿಮರ್ಶಃ-ಸ್ವರೂಪಾವಲೋಕನವೆನಿಪ ಪೂರ್ಣಜ್ಞಾನವುಂಟು, ತತ್-ಅದು, ಭಾಂಡಸ್ಥಲಂ-ಸರ್ವಾಚಾರ ಸಂಪತ್ತನೊಳಕೊಂಡ ಭಾಂಡಸ್ಥಲವೆಂದು ಉಚ್ಯತೇ-ಹೇಳಲ್ಪಡುತ್ತಿದ್ದಿತು ।।೨೭।।

ಪರಾಹಂತಾಮಸಾವೇಶ ಪರಿಪೂರ್ಣವಿಮರ್ಶತಃ
ಸರ್ವಜ್ಞಸ್ಸರ್ವಗಸ್ಸಾಕ್ಷೀ ಸರ್ವಕರ್ತಾ ಮಹೇಶ್ವರಃ

ಪರಾಹಂತಾ-ಮೂಲಾಹಂಕಾರದ, ಸಾವೇಶ-ಪ್ರವೇಶರೂಪವಾದ, ಪರಿಪೂರ್ಣ-ಅಖಂಡಿತ ರೂಪವಾದ, ವಿಮರ್ಶತಃ-ಸ್ವಾತ್ಮಾವಲೋಕನದತ್ತಣಿಂದೆ, ಸರ್ವಜ್ಞಃ-ಸರ್ವವನರಿವನೆಂದು, ಸರ್ವಗಃ-ಸರ್ವವ್ಯಾಪಕನೆಂದು, ಸಾಕ್ಷಿ-ಸರ್ವಸಾಕ್ಷಿಕ ನೆಂದು, ಸರ್ವಕರ್ತಾ-ಸರ್ವಕ್ಕು ಕರ್ತೃವೆಂದು, ಮಹೇಶ್ವರಃ-ಪರಮೇಶ್ವರನೆಂದು ಹೇಳಲ್ಪಡುವನು ।।೨೮।।

ವಿಶ್ವಾಧಾರಮಹಾಸಂವಿತ್ಪ್ರಕಾಶ ಪರಿಪೂರಿತಂ
ಪರಾಹಂತಾಮಯಂ ಪ್ರಾಹುರ್ವಿಮರ್ಶಂ ಪರಮಾತ್ಮನಃ

ವಿಶ್ವಾಧಾರಂ-ವಿಶ್ವಕ್ಕೆ ಆಧಾರವಾದ, ಮಹಾಸಂವಿತ್ಪ್ರಕಾಶಃ-ಮಹತ್ತಾದ ಪೂರ್ಣಜ್ಞಾನ ಪ್ರಕಾಶದಿಂದೆ, ಪರಿಪೂರಿತಂ-ತುಂಬಲ್ಪಟ್ಟದಾದ, ಪರಾಹಂತಾ ಮಯಂ-ಪ್ರಪಂಚಾತೀತವಾದ ಮೂಲಾಹಂಕಾರರೂಪವನೆ, ಪರಮಾತ್ಮನಃ-ಜೀವ

ಭ್ರಾಂತಿಯಳಿದ ಪರಮಾತ್ಮನ, ವಿಮರ್ಶಂ-ತನ್ನ ತಾನರಿದ ವಿಮರ್ಶರೂಪವನಾಗಿ, ಪ್ರಾಹುಃ-ಹೇಳುತಿರ್ಪರು ॥೨೯॥

ವಿಮರ್ಶಭಾಂಡವಿನ್ಯಸ್ತ ವಿಶ್ವತತ್ವವಿಜೃಂಭಣಃ
ಅನನ್ಯಮುಖಸಂಪ್ರೇಕ್ಷೀ ಮುಕ್ತಸ್ಸ್ವಾತ್ಮನಿ ತಿಷ್ಠತಿ

ವಿಮರ್ಶಃ-ಆತ್ಮಜ್ಞಾನವೆಂದು, ಭಾಂಡ-ಭಾಂಡದಲ್ಲಿ, ವಿನ್ಯಸ್ತ-ಅಡಗಿಸಿರಲ್ಪಟ್ಟ, ವಿಶ್ವ-ಸಮಸ್ತವಾದ, ತತ್ವ-ಪೃಥ್ವಿ ಮೊದಲಾದ ತತ್ವಂಗಳ, ವಿಜೃಂಭಣಃ-ಹೊರಹೊಮ್ಮಿಕೆಯುಳ್ಳ, ಅನನ್ಯಮುಖ ಸಂಪ್ರೇಕ್ಷೀ-ತನ್ನಿಂದನ್ಯ ವಸ್ತುವಿನ ಮುಖವಂ ಕಾಣದ, ಮುಕ್ತಃ-ಜೀವನ್ಮುಕ್ತನು, ಸ್ವಾತ್ಮನಿ-ಆತ್ಮರಾಮ ಸ್ವರೂಪದಲ್ಲಿ, ತಿಷ್ಠತಿ-ಇರುತ್ತಿಹನು ॥೩೦॥

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವೋದ್ಭಾಸನಕಾರಿಣೀ
ಸಾಕ್ಷಿಣೀ ಸರ್ವತತ್ವಾನಾಂ ಸಂವಿದೇ ಸರ್ವತೋಮುಖೀ

ವಿಮರ್ಶಾಖ್ಯ-ವಿಮರ್ಶವೆಂಬ ಹೆಸರನುಳ್ಳ, ಪರಾಶಕ್ತಿಃ-ಪರಾಶಕ್ತಿಯು, ವಿಶ್ವೋದ್ಭಾಸನಕಾರಿಣೀ-ಪ್ರಪಂಚ ಊರ್ಧ್ವಲಯವನು ಮಾಡುವದಾದ, ಸರ್ವತತ್ವಾನಾಂ-ಸಕಲ ತತ್ವಂಗಳಿಗೆ, ಸಾಕ್ಷಿಣೀ-ಸಾಕ್ಷೀಸ್ವರೂಪವಾದ, ಸಾ-ಆ ಪ್ರಕಾರವಾದ, ಸಂವಿತ್-ಅಖಂಡಿತಜ್ಞಾನವು, ಸರ್ವತೋಮುಖೀ-ವಿಕಲ್ಪರೂಪದಿಂದೇಕದೇಶವಲ್ಲದೆ ಇರ್ಪುದು ॥೩೧॥

ಭಾಂಡಸ್ಥಲವೆನಿಸುವ ವಿಮರ್ಶಕಲಾ ಸ್ವರೂಪವಂ ಪೇಳ್ದಪಂ.

ವಿಶ್ವಯತ್ರಲಯಂ ಯಾತಿ ವಿಭಾತ್ಯಾತ್ಮಾ ಚಿದಾಕೃತಿಃ
ಪರಾನಂದಮಯಸ್ಸಾಕ್ಷಾತ್ಸಾ ವಿಮರ್ಶಮಯೀಕಲಾ

ಯತ್ರ-ಆವುದಾನೊಂದು ವಿಮರ್ಶದಲ್ಲಿ, ವಿಶ್ವಂ-ಪ್ರಪಂಚವು, ಲಯಂ-ಲಯವನು, ಯಾತಿ-ಯೆಯ್ದುತಿರ್ದಪುದು, ಆತ್ಮಾ-ಆತ್ಮನು, ಚಿದಾಕೃತಿಃ-ಪೂರ್ಣಜ್ಞಾನಾಕಾರನಾಗಿ, ಪರಾನಂದಮಯಃ-ಪರಮಾನಂದ ರೂಪನಾಗಿ, ಸಾಕ್ಷಾತ್-ಪ್ರತ್ಯಕ್ಷವಾಗಿ, ಭಾತಿ-ಪ್ರಕಾಶಿಸುತಿರ್ಪನು, ಸಾ-ಆ ಪ್ರಕಾರವಾದುದೆ, ವಿಮರ್ಶಮಯೀ-ವಿಮರ್ಶರೂಪವಾದ, ಕಲಾ-ಕಲೆಯೆನಿಸಿಕೊಂಬುದು ॥೩೨॥

೫೩. ಭಾಜನಸ್ಥಲ

ಮುಂದೆ ಭಾಜನಸ್ಥಲಮಂ ಪೇಳ್ವಪಂ

ಸಮಸ್ತಜಗದಂಡಾನಾಂ ಸೃಷ್ಟಿಸ್ಥಿತ್ಯಂತ ಕಾರಣಂ
ವಿಮರ್ಶೋ ಭಾಸತೇ ಯತ್ರ ಸಭಾಜನಮಿಹೋಚ್ಯತೇ

ಸಮಸ್ತ ಜಗದಂಡನಾಂ-ಸಕಲ ಜಗತ್ತನೊಳಕೊಂಡ ಬ್ರಹ್ಮಾಂಡಗಳ, ಸೃಷ್ಟಿಸ್ಥಿತ್ಯಂತ ಕಾರಣಂ-ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣಮಾದ, ವಿಮರ್ಶಃ-ಆಚಾರಂಗಳನೊಳ

ಕೊಂಡಾತ್ಮಾರಾಮನಾದ ಮೂಲಚೈತನ್ಯವು, ಯತ್ರ-ಆವುದಾನೊಂದು ಪರಿಪೂರ್ಣ ಬ್ರಹ್ಮದಲ್ಲಿ, ಭಾಸತೇ-ನಿಜನಿವಾಸವಾಗಿರ್ದಿತ್ತು, ಸಃ-ಅದು, ಭಾಜನಂ-ಭಾಜನ ಸ್ಥಲವೆಂದು, ಇಹ-ಇಲ್ಲಿ, ಉಚ್ಯತೇ-ಹೇಳಲ್ಪಡುತ್ತಿದ್ದಿತು ॥೩೩॥

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ಯ ಕಾರಣಂ
ಯಸ್ಮಿನ್ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ

ವಿಶ್ವ-ಜಗತ್ತಿನ, ವೈಚಿತ್ರ್ಯ-ವಿಚಿತ್ರರೂಪಕ್ಕೆ, ಕಾರಣಂ-ಕಾರಣವಾದ, ವಿಮರ್ಶಾಖ್ಯ-ವಿಮರ್ಶವೆನಿಸಿಕೊಂಬ, ಪರಾ-ಲೋಕೋತ್ತರವಾದ, ಶಕ್ತಿಃ - ಮೂಲಾಹಂಕಾರರೂಪದಿಂದೆ ತೋರುವ ಶಕ್ತಿಯು, ಯಸ್ಮಿನ್-ಆವುದಾನೊಂದು ಬ್ರಹ್ಮದಲ್ಲಿ, ಪ್ರತಿಷ್ಠಿತಾ-ಇರಿಸಲ್ಪಟ್ಟಿತು, ತತ್-ಆ ಪ್ರಕಾರವಾದ, ಇದಂ-ಈ ಚಿದಹಂತೆ ಗಾಧಾರವಾದ ಬ್ರಹ್ಮ - ನಿತ್ಯಾನಂದ ಸ್ವರೂಪವಾದ ಬ್ರಹ್ಮವೆ, ವಿಶ್ವಭಾಜನಂ-ಸಕಲ ಪ್ರಪಂಚನೊಳಕೊಂಡು ಭಾಜನಸ್ಥಲವೆನಿಸುವುದು ॥೩೪॥

ಯಥಾ ಚಂದ್ರೇಸ್ಥಿರಾಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ
ತಥಾ ಶಕ್ತಿರ್ವಿಮರ್ಶಾತ್ಮಾ ಪ್ರಕಾಶೇ ಬ್ರಹ್ಮಣಿ ಸ್ಥಿತಾಃ

ಯಥಾ-ಹೆಂಗೆ, ಚಂದ್ರೇ-ಸ್ವಯಂಪ್ರಕಾಶರೂಪನಾದ ಚಂದ್ರನಲ್ಲಿ, ಸ್ಥಿರಾ-ಇರಲ್ಪಟ್ಟ, ಜ್ಯೋತ್ಸ್ನಾ-ಚಂದ್ರಿಕೆಯು, ವಿಶ್ವ-ಸಮಸ್ತವಾದ, ವಸ್ತು-ಬ್ರಹ್ಮಾಂಡ ವಸ್ತುಗಳನ್ನು, ಪ್ರಕಾಶಿನೀ-ತೋರಿಸುತಿರ್ದಪುದು, ತಥಾ-ಹಾಂಗೆ, ವಿಮರ್ಶಾತ್ಮಾ-ಅಹಂಕಾರರೂಪವಾದ, ಶಕ್ತಿಃ-ಶಕ್ತಿಯು, ಪ್ರಕಾಶತೇ-ಸ್ವಯಂ ಪ್ರಕಾಶರೂಪವಾದ, ಬ್ರಹ್ಮಣಿ-ಬ್ರಹ್ಮದಲ್ಲಿ, ಸ್ಥಿತಾ-ಇರಲ್ಪಟ್ಟಿತು, ಚಂದ್ರನೊಳಗಡಗಿದ ಚಂದ್ರಿಕೆಯಂತೆ ಮೂಲ ಚೈತನ್ಯವು ಬ್ರಹ್ಮದಲ್ಲಿ ನಿಜನಿವಾಸವಾಗಲದೆ ಭಾಜನಸ್ಥಲವೆಂಬುದರ್ಥ ॥೩೫॥

ಅಂತಃಕರಣರೂಪೇಣ ಜಗದಂಕುರರೂಪತಃ
ಯಸ್ಮಿನ್ವಿಭಾತಿ ಚಿಚ್ಛಕ್ತಿ ಬ್ರಹ್ಮಭೂತಸ್ಸಉಚ್ಯತೇ

ಅಂತಃಕರಣ ರೂಪೇಣ-ಪೂರ್ಣ ಬ್ರಹ್ಮದೊಳಗೆ ಕರಣ ರೂಪದಿಂದೆ, ಜಗದಂಕುರ ರೂಪತಃ-ಜಗದುತ್ಪತ್ತಿಗೆ ಮೂಲಾಂಕುರ ರೂಪದಿಂದೆ, ಯಸ್ಮಿನ್-ಆವುದಾನೊಂದು ಬ್ರಹ್ಮದಲ್ಲಿ, ಚಿಚ್ಛಕ್ತಿಃ-ಅಖಂಡಿತ ಚೈತನ್ಯವು, ವಿಭಾತಿ-ವಿಶ್ರಮಿಸಿ ತೋರುತಿರ್ಪುದು, ಸಃ-ಅದು, ಬ್ರಹ್ಮಭೂತಃ-ಬ್ರಹ್ಮಾಕಾರವಾಯಿತ್ತೆಂದು, ಉಚ್ಯತೆ-ಹೇಳಲ್ಪಡುತಿರ್ಪುದು ॥೩೬॥

ವೃಕ್ಷಸ್ಥಂ ಪತ್ರ ಪುಷ್ಪಾದಿ ವಟಬೀಜಸ್ಸ್ಥಿತಂ ಯಥಾ
ತಥಾ ಹೃದಯಬೀಜಸ್ಥಂ ವಿಶ್ವಮೇ ತತ್ಪರಾತ್ಮನಃ

ವೃಕ್ಷಸ್ಥ ಪತ್ರ ಪುಷ್ಪಾದಿ-ಮರದೊಳಗಿರ್ದು ತೋರುವ ಪರ್ಣ ಕುಸುಮಾದಿಗಳು, ಯಥಾ-ಹ್ಯಾಂಗೆ, ವಟಬೀಜಸ್ಥಿತಂ-ಸೂಕ್ಷ್ಮವಪ್ಪ ಆಲದ ಬೀಜದಲ್ಲಿ ಇರಲ್ಪಟ್ಟುದು, ತಥಾ-ಹಾಂಗೆ, ಏತತ್-ಈ ಪ್ರಕಾರವಾದ, ವಿಶ್ವಂ-ವಿಚಿತ್ರವಾದ ಪ್ರಪಂಚವು,

ಪರಾತ್ಮನಾ-ಪರಮಾತ್ಮನೆನಿಸುವ ಬ್ರಹ್ಮದ, ಹೃದಯ ಬೀಜಸ್ಥಂ-ಹೃದಯ ಬೀಜವೆನಿಸುವ ಮೂಲಚೈತನ್ಯದಲ್ಲಿ ಇರಲ್ಪಡುತ್ತಿದ್ದಿತು. ವಿಶ್ವವನೊಳಕೊಂಡ ಶರಣನ ಮೂಲಚೈತನ್ಯಕ್ಕೆ ಪರಬ್ರಹ್ಮವೆ ಭಾಜನವೆಂಬುದರ್ಥ ॥೩೭॥

ಅಕಾರಶ್ಶಿವ ಆಖ್ಯಾತೋಹಕಾರಶ್ಶಕ್ತಿರುಚ್ಯತೇ
ಶಿವಶಕ್ತಿಮಯಂ ಬ್ರಹ್ಮಾಸ್ಥಿತಮೇಕ ಮಹಂಪದೇ

ಅಕಾರಃ-ಅಕಾರವೆ, ಶಿವಃ-ಶಿವಸ್ವರೂಪವೆಂದು, ಆಖ್ಯಾತಃ-ಹೇಳಲ್ಪಟ್ಟಿತು, ಹಕಾರಃ-ಹಕಾರವೆ, ಶಕ್ತಿಃ-ಶಕ್ತಿ ಎಂದು, ಉಚ್ಯತೇ-ಹೇಳಲ್ಪಡುತ್ತಿದ್ದಿತು, ಶಿವಶಕ್ತಿಮಯಂ-ಶಿವಶಕ್ತಿರೂಪವಾದ, ಬ್ರಹ್ಮ-ಬ್ರಹ್ಮವು, ಅಹಂಪದೇ-ಚಿದಾಹಂತಾ ಸ್ವರೂಪವಾದ ಮೂಲಾಹಂಕಾರದಲ್ಲಿ, ಏಕಂ-ಒಂದು ರೂಪವಾಗಿ, ಸ್ಥಿತಂ-ಇರಲ್ಪಟ್ಟಿತು ॥೩೮॥

ಅಹಂತಾಂ ಪರಮಾಂ ಪ್ರಾಪ್ಯ ಶಿವಶಕ್ತಿಮಯೀಂ ಸ್ಥಿರಾಂ
ಬ್ರಹ್ಮಭೂಯಂ ಗತೋಯೋಗೀ ವಿಶ್ವಾತ್ಮಾ ಪ್ರತಿಭಾಸತೇ

ಶಿವಶಕ್ತಿಮಯಂ-ಶಿವಶಕ್ತಿರೂಪವಾದ, ಸ್ಥಿರಾಂ-ಸ್ಥಿರವಾದ, ಪರಮಾಂ-ಲೋಕೋತ್ತರವಾದ, ಅಹಂತಾಂ-ಚಿದಾಹಂತೆಯನು, ಪ್ರಾಪ್ಯ-ಯೆಯ್ದಿ, ಬ್ರಹ್ಮಭೂಯಂ-ಬ್ರಹ್ಮಸ್ವರೂಪವನು, ಗತಃ-ಯೆಯ್ದಿದ, ಯೋಗಿಃ-ಶಿವಯೋಗೀಶ್ವರನು, ವಿಶ್ವಾತ್ಮಾ-ವಿಶ್ವರೂಪನಾಗಿ, ಪ್ರತಿಭಾಸತೇ-ತೋರುತಿರ್ಪನು ॥೩೯॥

೫೪. ಅಂಗಾಲೇಪಸ್ಥಲ

ಮುಂದೆ ಅಂಗಾಲೇಪಸ್ಥಲವನು ನಿರೂಪಿಸುತಿರ್ದಪಂ

ದಿಕ್ಕಾಲಾದ್ಯನವಚ್ಛಿನ್ನಂ ಚಿದಾನಂದ ಮಯಂ ಮಹತ್
ಯಸ್ಯರೂಪಮಿದಂ ಖ್ಯಾತಂ ಸೋಽಙ್ಗಾಲೇಪಮಿಹೋಚ್ಯತೇ

ಯಸ್ಯ-ಆವ ಬ್ರಹ್ಮದಲ್ಲಿ, ಚಿದಹಂತೆಯಳಿದು-ತಾನೆಂಬ ಕೋರಿಕೆಯಿಲ್ಲದೆ ನಿಂದ, ಶಿವಯೋಗೀಶ್ವರನ, ಇದಂ-ಈ ಪ್ರಕಾರವಾದ, ರೂಪಂ-ಸ್ವರೂಪವು, ದಿಕ್ಕಾಲಾದ್ಯನವಚ್ಛಿನ್ನಂ-ದಿಕ್ಕಿನಿಂ ಕಾಲದಿಂ ಹವಣಿಸಿಕೊಳ್ಳದ ಅಖಂಡಿತ ಪರಿಪೂರ್ಣನೆಂದು, ಚಿದಾನಂದಮಯಂ-ಜ್ಞಾನಾನಂದ ಸ್ವರೂಪದಿಂದ, ಮಹತ್-ಮಹದ್ರೂಪವೆಂದು, ಖ್ಯಾತಂ-ಪ್ರಸಿದ್ಧಮಾಗಿರ್ಪುದು, ಸಃ-ಆಯಿರವು, ಅಂಗಾಲೇಪಂ-ಅಂಗಾಲೇಪಸ್ಥಲವೆಂದು ಉಚ್ಯತೇ-ಹೇಳಲ್ಪಡುವುದು ॥೪೦॥

ಅಖಂಡ ಸಂವಿದಾನಂದಪರಬ್ರಹ್ಮ ಸ್ವರೂಪಿಣಃ
ಜೀವನ್ಮುಕ್ತಸ್ಯ ಧೀರಸ್ಯ ಮಾಯಾ ಕೈಂಕರ್ಯವಾದಿನೀ

ಅಖಂಡ-ಪೂರ್ಣವಾದ, ಸಂವಿದಾನಂದ-ಜ್ಞಾನಾನಂದಮಯವಾದ, ಪರಬ್ರಹ್ಮಸ್ವರೂಪಿಣಃ-ಪರಬ್ರಹ್ಮ ಸ್ವರೂಪನಾದ, ಧೀರಸ್ಯ-ಧೀರೋದ್ಧಾರನಾದ,

ಜೀವನ್ಮುಕ್ತಸ್ಯ-ಜೀವನ್ಮುಕ್ತನಾದ ಲಿಂಗೈಕ್ಯಂಗೆ, ಮಾಯಾ-ಪ್ರಪಂಚಾಕಾರವಾದ ಮಾಯೆ, ಕೈಂಕರ್ಯವಾದಿನಿಃ-ಕಿಂಕರತ್ವವನೆ ಆಡುತಿರ್ಪುದು, ಆ ಜೀವನ್ಮುಕ್ತನಾದ ಲಿಂಗೈಕ್ಯಂಗೆ ಭ್ರಾಂತಿಯಂ ಹುಟ್ಟಿಸಲರಿಯದೆಂಬುದರ್ಥ ॥೪೧॥

ನ ವಿಧಿರ್ನನಿಷೇಧಶ್ಚ ನ ವಿಕಲ್ಪೋ ನ ವಾಸನಾ
ಕೇವಲಂ ಚಿತ್ಸ್ವರೂಪಸ್ಯ ಗಲಿತಾ ಪ್ರಾಕೃತಾತ್ಮನಃ

ಗಲಿತಾ ಪ್ರಾಕೃತಾತ್ಮನಃ-ಪ್ರಕೃತಿ ರೂಪಮಾದ ಭ್ರಾಂತಿಯಿಂ ತೊಲಗಿದ, ಕೇವಲಂ-ಬಚ್ಚಬರಿಯ, ಚಿತ್ಸ್ವರೂಪಸ್ಯ-ಪೂರ್ಣಜ್ಞಾನರೂಪನಾದ ಲಿಂಗೈಕ್ಯಂಗೆ, ನ ವಿಧಿಃ-ಪುಣ್ಯಮಂ ಹುಟ್ಟಿಸುವ ವಿಧಿ ಇಲ್ಲ, ನ ನಿಷೇಧಶ್ಚ-ಪಾಪಮಂ ಹುಟ್ಟಿಸುವ ನಿಷೇಧವಿಲ್ಲ, ನ ವಿಕಲ್ಪಃ-ಮನವಿಲ್ಲವಾಗಿ ಸಂಕಲ್ಪ ವಿಕಲ್ಪವಿಲ್ಲ, ನ ವಾಸನಾ-ಸಂಚಿತಪ್ರಾರಬ್ಧ ಆಗಾಮಿರೂಪವಾದ ವಾಸನೆ ಇಲ್ಲ, ನಿಸ್ತರಂಗಾಂಬುಧಿಯಂತೆ ಚಲನೆ ಇಲ್ಲದೆ ಅಖಂಡಿತಾನಂದವಾಗಿರ್ಪನೆಂಬುದರ್ಥ ॥೪೨॥

ನ ದೇವತ್ವಂ ನ ಮಾನುಷ್ಯ ನ ತಿರ್ಯಕ್ತ್ವಂ ನ ಚಾನ್ಯಥಾ
ಸರ್ವಾಕಾರತ್ವಮಾಖ್ಯಾತಂ ಜೀವನ್ಮುಕ್ತಸ್ಯ ಯೋಗಿನಃ

ಜೀವನ್ಮುಕ್ತಸ್ಯ-ಜೀವನ್ಮುಕ್ತನಾದ, ಯೋಗಿನಃ-ಶಿವಯೋಗಿಶ್ವರಂಗೆ, ನ ದೇವತ್ವಂ-ಮಹಾ ಪುಣ್ಯದಿಂದಲಾಗುವ ದೇವತ್ವವು ಇಲ್ಲ. ನ ಮಾನುಷ್ಯಂ-ಪುಣ್ಯಾಪಾಪೋಭಯ ಸಂಗದಿಂದಪ್ಪ ಮನುಷ್ಯತ್ವ ಇಲ್ಲ. ನ ತಿರ್ಯಕ್ತ್ವಂ-ಪಾಪ ಮಾತ್ರದಿಂದಾದ ಮೃಗ ಪಕ್ಷಿ ಜಲ ಚರಾದಿ ನಾನಾ ಜಾತಿ ರೂಪವು ಅಲ್ಲ. ಅನ್ಯಥಾ-ಇವರಿಂದನ್ಯವಾದ ಪ್ರಾಕೃತರೂಪವು, ನ-ಅಲ್ಲ, ಸರ್ವಾಕಾರತ್ವಂ-ಪೂರ್ಣನಪ್ಪುದರಿಂ ಸಕಲ ಜಗದಾಕಾರತ್ವವು, ಆಖ್ಯಾತಂ-ಹೇಳಲ್ಪಟ್ಟಿತ್ತು. ಅವಿರಳ ರೂಪದಿಂ-ಜಗದ್ಭರಿತನೆಂಬುದರ್ಥ ॥೪೩॥*

ಸಮಸ್ತ ಜಗದಾತ್ಮಾಪಿ ಸಂವಿದ್ರೂಪೋ ಮಹಾಮತಿಃ
ಲಿಪ್ಯತೇ ನೈವ ಸಂಸಾರೈಯಥಾ ಧೂಮಾಧಿಭಿರ್ನಭಃ

ಸಂವಿದ್ರೂಪಃ-ಅಖಂಡಿತ ಜ್ಞಾನರೂಪನಾದ, ಮಹಾಮತಿಃ-ಪೂರ್ಣಜ್ಞಾನಿಯಾದ ಲಿಂಗೈಕ್ಯನು, ಸಮಸ್ತ ಜಗದಾತ್ಮಾಪಿ-ಸಕಲ ಪ್ರಪಂಚರೂಪನಾಗಿರ್ದರು. ಸಂಸಾರೈಃ-ನಾನು ನೀನೆಂಬ ಸಂಸಾರ ಭ್ರಾಂತಿಗಳಿಂದ, ನೈವಲಿಪ್ಯತೇ- ಲೇಪಿಸಲ್ಪಡುತ್ತಿರನು. ಯಥಾ-ಹೆಂಗೆ, ನಭಃ-ಆಕಾಶವು, ಧೂಮಾದಿಭಿಃ-ಧೂಮಧೂಳು ಮೊದಲಾದವರಿಂದ ಲೇಪಿಸಲ್ಪಡು ತ್ತಿರದು, ತಥಾ-ಹಾಂಗೆ ಜೀವನ್ಮುಕ್ತನು ನಿರ್ಲೇಪನೆಂಬುದರ್ಥ ॥೪೪॥

ಅನಶ್ವರಮನಿರ್ದೇಶ್ಯಂ ಯಥಾ ವ್ಯೋಮ ಪ್ರಕಾಶತೇ
ತಥಾ ಬ್ರಹ್ಮಾಪಿ ಚೈತನ್ಯಮತ್ರ ವೈಶೇಷಿಕೀಕಲಾ

---

* ಹಸ್ತಪ್ರತಿಯು ಲುಪ್ತವಾಗಿದ್ದ ಕಾರಣ ಉಜ್ಜನೀಶ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ೪೩-೫೮ ಶ್ಲೋಕಗಳನ್ನು ತುಂಬಿದೆ.

ಯಥಾ-ಹೆಂಗೆ, ವ್ಯೋಮ-ಆಕಾಶವು, ಅನಶ್ವರಂ-ಕೇಡಿಲ್ಲದುದಾಗಿ, ಅನಿರ್ದೇಶ್ಯಂ-ಒಳಗೂ ಹೊರಗೂ ದೂರ ಸಮೀಪವೆಂದು, ನುಡಿಸಿಕೊಳ್ಳದೆ ಇರ್ದುದಾಗಿ, ಪ್ರಕಾಶತೇ-ತೋರುತಿರ್ಪುದು, ಬ್ರಹ್ಮಚೈತನ್ಯಾಪಿ-ಬ್ರಹ್ಮಚೈತನ್ಯವು, ತಥಾ-ಹಾಂಗೆ, ಅತ್ರ-ಈ ಷಟ್ಸ್ಥಲಬ್ರಹ್ಮಿಯಾದ, ಲಿಂಗೈಕ್ಯನಲ್ಲಿ, ವೈಶೇಷಿಕೀ-ಅವಿರಳ ಚಿದ್ರೂಪನೆಂಬ ವಿಶೇಷವಾದ ಕಲಾ ಸ್ವರೂಪವು, ಆಕಾಶವೆ ಜಡನು, ಪರಮಾತ್ಮನೆ ಅಜಡನೆಂಬುದರ್ಥ ॥೪೫॥

ಘಟಾದಿಷು ಪೃಥಗ್ಭೂತಂ ಯಥಾಕಾಶಂ ನ ಭಿದ್ಯತೇ
ತಥೋಪಾಧಿಗತಂ ಬ್ರಹ್ಮ ನಾನಾರೂಪನಭಿದ್ಯತೇ

ಘಟಾದಿಷು-ಘಟ ಮಠಾದಿಗಳಲ್ಲಿ, ಪೃಥಗ್ಭೂತಂ-ಭಿನ್ನ ಸ್ವರೂಪವಾದರು, ಆಕಾಶಃ-ಆಕಾಶವು, ಯಥಾ-ಹೆಂಗೆ, ನ ಭಿದ್ಯತೇ-ಭೇದವಾಗುತ್ತಿರದು, ತಥಾ-ಹಾಗೆ, ಉಪಾಧಿಗತಂ-ದೇಹಾದ್ಯುಪಾಧಿಯನೈದಿದ, ಬ್ರಹ್ಮನಾನಾರೂಪಂ ಅಖಂಡಿತ ಬ್ರಹ್ಮದ ವಿಚಿತ್ರ ಸ್ವರೂಪವು, ನಭಿದ್ಯತೇ-ಭೇದವಾಗುತ್ತಿರದು॥೪೬॥

೫೫. ಸ್ವಪರಾಜ್ಞಸ್ಥಲ

ಮುಂದೆ ಸ್ವಯಪರಜ್ಞಾನಸ್ಥಲವನು ನಿರೂಪಿಸುತಿರ್ದಪಂ

ದೇಶಕಾಲಾನವ ಚ್ಛಿನ್ನತೇಜೋರೂಪ ಸಮಾಶ್ರಯಾತ್
ಸ್ವಪರಜ್ಞಾನವಿರಹಾತ್ ಸ್ವಪರಜ್ಞಾನಸ್ಥಲಂ ವಿದುಃ

ಸಃ-ಆ ಮಹಾಲಿಂಗದಲ್ಲಿ ಭೇದವಳಿದು ಭಿನ್ನವಾದ ಪರಮಲಿಂಗೈಕ್ಯನು ದೇಶಕಾಲಾನವಚ್ಛಿನ್ನ-ದೇಶ ಕಾಲಂಗಳ ಹವಣೆಗೆ ಬಾರದ ತೇಜೋರೂಪ ಪರಿಪೂರ್ಣ ಪರಮಜ್ಞಾನ ಜ್ಯೋತಿಯ, ಸಮಾಶ್ರಯಾತ್-ಆಶ್ರಯಿಸಿ, ಭೇದವಳಿದತ್ತಣಿಂದೆ, ಸ್ವಪರಜ್ಞಾನ ವಿರಹಾತ್-ನಾನು ನೀನೆಂಬ ಭೇದಾಭೇದವನೆ ತಲೆದೋರದಾದ ಕಾರಣ, ಸ್ವಪರಜ್ಞಾನಸ್ಥಲಂ-ಸ್ವಪರಜ್ಞಾನಸ್ಥಲವೆಂದು, ವಿದುಃ-ಅರಿವುತ್ತಿಹುದು ॥೪೭॥

ಅಪ್ರಮೇಯೇ ಚಿದಾಕಾರೇ ಬ್ರಹ್ಮಣ್ಯದ್ವೈತ ವೈಭವೇ
ವಿಲೀನಃ ಕಿಂ ನ ಜಾನಾತಿ ಸ್ವಾತ್ಮಾನಂ ಪರಮೇವ ವಾ

ಅಪ್ರಮೇಯೇ-ಪ್ರಮಾಣಾತೀತನಾದ, ಚಿದಾಕಾರೇ-ಅಖಂಡಿತಜ್ಞಾನ ರೂಪವಾದ, ಅದ್ವೈತವೈಭವೇ-ತಾನಿದಿರೆಂಬ ದ್ವೈತ ಭ್ರಾಂತಿ ಇಲ್ಲದ, ಬ್ರಹ್ಮಣಿ-ಪೂರ್ಣ ಬ್ರಹ್ಮದಲ್ಲಿ, ವಿಲೀನಃ-ನಾನೆಂಬುದಳಿದು ತಾನೆಯಾಗಿನಿಂದ ಲಿಂಗೈಕ್ಯನು, ಸ್ವಾತ್ಮಾನಂ - ಬೇರಿಟ್ಟು ತನ್ನನು, ಪರಮೇವವಾ-ತನ್ನಿಂದನ್ಯನಾದರು, ಜಾನಾತಿ ಕಿಂ - ಅರಿವುತ್ತಿರುವನೆಯೇನು, ಆ ಲಿಂಗೈಕ್ಯಂಗೆ ನಾನು ನೀನೆಂಬ ತೋರಿಕೆ ಇಲ್ಲವೆಂಬುದರ್ಥ ॥೪೮॥

ಯತ್ರನಾಸ್ತಿಭಿದಾಯೋಗಾದಹಂ ತ್ವಮಿತಿ ವಿಭ್ರಮಃ
ನ ಸಂಯೋಗೋ ವಿಯೋಗಶ್ಚ ನ ಜ್ಞೇಯ ಜ್ಞಾತೃ ಕಲ್ಪನಾ

ಯತ್ರ-ಆವುದಾನೊಂದು ಐಕ್ಯಸ್ಥಲದಲ್ಲಿ, ಭಿದಾ-ಭಿನ್ನಭಾವದೊಡತನ, ಯೋಗಾತ್-ಕೂಟದತ್ತಣಿಂದೆ, ಅಹಂತ್ವಮಿತಿ-ನಾನು ನೀನೆಂಬ, ವಿಭ್ರಮಃ-ಭ್ರಾಂತಿಯು, ನಾಸ್ತಿ-ಇಲ್ಲ, ಸಂಯೋಗಃ-ಎರಡೆಂಬ ಭೇದವನ್ನುಂಟುಮಾಡುವ ಸಂಯೋಗವು, ನ-ಇಲ್ಲ, ವಿಯೋಗಸ್ಯ-ಅವಿರಳಬ್ರಹ್ಮವಪ್ಪುದರಿಂದ, ತೊಲಗಿಕೆಯು, ನ-ಇಲ್ಲ, ಜ್ಞೇಯ ಜ್ಞಾತೃ ಕಲ್ಪನಾ-ಜ್ಞೇಯವೆ ಶಿವನು, ಜ್ಞಾತೃವೆ ನಾನೆಂಬ ಭೇದ ಕಲ್ಪನೆಯು, ನ-ಇಲ್ಲ, ನಿಜನಿವಾಸಿಯಾದ ಮಹಾಲಿಂಗೈಕ್ಯಂಗೆ ಭೇದಭಾವನೆ ತಲೆದೋರದೆಂಬುದರ್ಥ ॥೪೯॥

ನ ಬಂಧೋ ನ ಚ ಮುಕ್ತಿಶ್ಚ ನ ದೇವಾದ್ಯಭಿಮಾನಿತಾ
ನ ಸುಖಂ ನೈವ ದುಃಖಂ ಚ ನಾ ಜ್ಞಾನಂ ಜ್ಞಾನಮೇವವಾ

ಬಂಧಂ-ದೇಹಾದಿಬಂಧವು, ನ-ಇಲ್ಲ, ಪದಫಲವಪ್ಪ ದುಃಖವು, ನ-ಇಲ್ಲ, ಮುಕ್ತಿಃ-ಇನ್ನು ಬೇರೆ ಮುಕ್ತಿಎಂಬುದು, ನ-ಇಲ್ಲ, ದೇವಾದ್ಯಭಿಮಾನಿತಾ-ಶಿವೋಹ ಎಂಬುದಾದಿಯಾದ, ದೇವತಾಭಿಮಾನವು, ನ-ಇಲ್ಲ, ಸುಖಂ-ಪುಣ್ಯಕರ್ಮ ಫಲಮಾದ ಸುಖವು, ನ-ಇಲ್ಲ, ದುಃಖಂ ಚ-ಪಾಪದ ಫಲವಪ್ಪ ದುಃಖವು, ನ-ಇಲ್ಲ, ಅಜ್ಞಾನಂ-ಮರವೆಯು, ನ-ಇಲ್ಲ, ಜ್ಞಾನಮೇವವಾ-ಅರಿವೆನೆಂದು, ನ-ಇಲ್ಲ, ಭ್ರಾಂತಿಯನುಳಿದು ಬ್ರಹ್ಮವಾದಾತಂಗೆ ಈ ಸಂಕಲ್ಪವಿಲ್ಲವೆಂಬುದರ್ಥ ॥೫೦॥

ನೋತ್ಕೃಷ್ಟತ್ವಂ ನ ಹೀನತ್ವಂ ನೋಪರಿಷ್ಟಾನ್ನ ಚಾಪ್ಯಧಃ
ನ ಪಶ್ಚಾನ್ನೈವ ಪುರತೋ ನ ದೂರಂ ಕಿಂಚಿದಂತರಂ

ಉತ್ಕೃಷ್ಟಂ ಚ-ತಾನೆ ವಿಶಿಷ್ಟನೆಂಬುದು, ನ-ಇಲ್ಲ, ಹೀನತ್ವಂ-ತಾನೆ ಹೀನನೆಂಬುದು, ನ-ಇಲ್ಲ, ಉಪರಿಷ್ಟಂ-ಎಲ್ಲಕ್ಕೆ ಮೇಲಿರ್ದನೆಂಬುದು, ನ-ಇಲ್ಲ, ಅಧೋಪಿ-ಕೆಳಗಿರ್ದ ನೆಂಬುದು, ನ-ಇಲ್ಲ, ಪಶ್ಚಾತ್-ಹಿಂದೆ ಇರ್ದವನೆಂಬುದು, ನ-ಇಲ್ಲ, ಪುರತಃ-ಮುಂದೆ ಇರ್ದನೆಂಬುದು, ನ-ಇಲ್ಲ, ದೂರ-ದೂರದಲ್ಲಿರ್ದವನೆಂಬುದು, ನ-ಇಲ್ಲ, ಕಿಂಚಿದಂತರೇ-ಅಲ್ಪವಾದಂತರದಲ್ಲಿರ್ದವನು, ನ-ಇಲ್ಲ, ನಿರುಪಾಧಿಕ ಪರಬ್ರಹ್ಮದಲ್ಲಿ ಏಕೀಕರಿಸಿದ ಲಿಂಗೈಕ್ಯಂಗೆ ಉಪಾಧಿಭ್ರಾಂತಿ ಇಲ್ಲವೆಂಬುದರ್ಥ ॥೫೧॥

ಸರ್ವಾಕಾರೇ ಚಿದಾನಂದೇ ಸತ್ಯರೂಪಿಣಿ ಶಾಶ್ವತೇ
ಪರಾಕಾಶಮಯೇ ತಸ್ಮಿನ್ ಪರೇಬ್ರಹ್ಮಣಿ ನಿರ್ಮಲೇ

ಸರ್ವಕಾರೇ-ಸಕಲ ಜಗದಾಕಾರನಾದ, ಚಿದಾನಂದೇ-ಜ್ಞಾನಾನಂದ ರೂಪನಾದ, ತಸ್ಯರೂಪಿಣಿ-ಸದ್ರೂಪನಾದ, ಶಾಶ್ವತೇ-ನಿತ್ಯವಾದ, ಪರಾಕಾಶಮಯೇ-ಚಿದಾಕಾಶ ರೂಪನಾದ, ನಿರ್ಮಲೇ-ಅವಿದ್ಯಾದಿ ದೋಷದೂರನಾದ, ತಸ್ಮಿನ್-ಆ ಪ್ರಸಿದ್ಧನಾದ, ಬ್ರಹ್ಮಣಿ-ಪರಬ್ರಹ್ಮದಲ್ಲಿ ॥೫೨॥

ಏಕೀಭಾವಮುಪೇತಾನಾಂ ಯೋಗಿನಾಂ ಪರಮಾತ್ಮನಾಂ
ಪರಾಪರ ಪರಿಜ್ಞಾನಂ ಪರಿಹಾಸಕಥ ಕುತಃ

ಏಕೀಭಾವಂ-ಏಕತ್ವವನು, ಉಪೇತಾನಾಂ-ಯೆಯ್ದಿರ್ದ್ದ, ಪರಮಾತ್ಮಾನಾಂ-ಪರಮಾತ್ಮರೂಪನಾದ, ಯೋಗಿನಾಂ-ಯೋಗೀಶ್ವರರುಗಳಿಗೆ, ಪರ-ಅನ್ಯನೆಂಬ, ಅಪರ-ಇತ್ತಣವನೆಂಬ ಪರಿಜ್ಞಾನ ಅರಿಕೆಯು, ಪರಿಹಾಸಕ-ಪರಿಹಾಸದ ನುಡಿ, ಕುತಃ-ಎತ್ತಣದು, ಪರಬ್ರಹ್ಮದಲ್ಲಿ ಏಕವಾದ ಯೋಗೀಶ್ವರರ್ಗೆ ಭಿನ್ನಭಾವ ನುಡಿಗೆಡಹುದೆಂಬುದರ್ಥ ॥೫೩॥

೫೬. ಭಾವಾಭಾವಲಯಸ್ಥಲ

ಮುಂದೆ ಭಾವಾಭಾವನಷ್ಟಸ್ಥಲವನು ನಿರೂಪಿಸುತಿರ್ದಪಂ

ಪ್ರತಿಮಾನೌ ವಿದ್ಯತೇ ಭಾವಾಭಾವೌ ನ ಕುತ್ರಚಿತ್
ಲಿಂಗೈಕ್ಯ ಸತಿಯತ್ತಸ್ಮಾದ್ಭಾವಾದ್ಭಾವಲಯಸ್ಥಲಂ

ಯತ್-ಆವುದಾನೊಂದು ಕಾರಣವಾಗಿ, ಲಿಂಗೈಕ್ಯ ಸತಿ-ಮಹಾಲಿಂಗದಲ್ಲಿ ಬೆರಸಿ, ಬೇರಿಲ್ಲದೆ ಐಕ್ಯವಾಗಲಾಗಿ, ಪ್ರತೀಯಮಾನೌ-ತೋರಲ್ಪಡುತಿರ್ದ, ಭಾವಾಭಾವೌ-ಶಿವತ್ವದ ಭಾವನೆಯು ಜೀವತ್ವದ ಅಭಾವವು, ಕುತ್ರಚಿತ್-ಒಂದೆಡೆಯಲ್ಲಿಯೂ, ನ ಪ್ರತೀಯತೆ-ತೋರುತ್ತಿರವು, ತಸ್ಮಾತ್-ಅದು ಕಾರಣವಾಗಿ, ಭಾವಾಭಾವ ಲಯಸ್ಥಲಂ-ಭಾವಾಭಾವ ಲಯಸ್ಥಲವೆನಿಸುವುದು, ಇಲ್ಲಿ ಜೀವಭಾವವಳಿದು ನಿಂದ ಶಿವೋಹಂ ಭಾವವು ಅಲ್ಲಿಯೆ ನಿಲ್ಲವೆಂಬುದರ್ಥ ॥೫೪॥

ಅಹಂಭಾವಸ್ಯ ಶೂನ್ಯತ್ವಾದಭಾವಸ್ಯ ತಥಾತ್ಮನಃ
ಭಾವಾಭಾವ ವಿನಿರ್ಮುಕ್ತೋ ಜೀವನ್ಮುಕ್ತಃ ಪ್ರಕಾಶತೇ

ಅಹಂಭಾವಸ್ಯ-ನಿತ್ಯಾನಿತ್ಯ ವಿವೇಕದಿಂ ಜೀವಭಾವಕ್ಕೆ, ಶೂನ್ಯತ್ವಾತ್-ಶೂನ್ಯತ್ವವಾ ಇತ್ತಾದ ಕಾರಣ, ತಥಾ-ಹಾಂಗೆ, ಆತ್ಮಾನಃಭಾವಸ್ಯ-ಪರಮಾತ್ಮಭಾವವಾದ ಶಿವೋಹಂ ಭಾವಕ್ಕು ತೋರಿಕೆಯಿಳಿಯಿತ್ತಾಗಿ, ಅಭಾವಸ್ಯ-ಉಭಯ ಭಾವರೂಪಂಗೆ, ಭಾವಾಭಾವ ವಿನಿರ್ಮುಕ್ತೇಃ-ಆ ಭಾವಾಭಾವಂಗಳ ಬಿಡುಗಡೆಯಿಂದ ಜೀವನ್ಮುಕ್ತಿಯು, ಪ್ರಕಾಶತೆ-ಪ್ರಕಾಶಿಸುತ್ತಿಹುದು ॥೫೫॥

ಸುಖ ದುಃಖಾದಿ ಯೋಗೇಷು ನಾ ಭಾವೋ ಭಾವ ಏವವಾ
ವಿದ್ಯುತೇ ಚಿತ್ಸ್ವರೂಪಸ್ಯ ನಿರ್ಲೇಪಸ್ಯ ಮಹಾತ್ಮನಃ

ಚಿತ್ಸ್ವರೂಪಸ್ಯ-ಪರಮಚಿದ್ರೂಪನಾದ, ನಿರ್ಲೇಪಸ್ಯ-ಭ್ರಾಂತಿಯ ಲೇಪ ವಿಲ್ಲದಾತನಾದ, ಮಹಾತ್ಮನಃ-ಮಹಾಪುರುಷನಾದ ಲಿಂಗೈಕ್ಯಂಗೆ, ಸುಖದುಃಖಾದಿ ಯೋಗೇಷು-ಸುಖದುಃಖಾದಿಗಳಿದಿರಷ್ಟು ತೋರಿದಲ್ಲಿ ಅವು, ಅಭಾವಃ-ಬೇಡವೆಂಬ ಅಭಾವವು, ಭಾವಯೇವವಾ-ಬೇಕೆಂಬ ಭಾವವು, ನ ವಿದ್ಯತೇ-ಉಂಟಾಗುತ್ತಿರದು, ಅದು ಭಾವಾಭಾವನಷ್ಟಸ್ಥಲವೆನಿಸುವುದು ॥೫೬॥

ಯಸ್ಯ ಕಾರ್ಯಾವಶಾ ನಾಸ್ತಿ ಕಾರಣತ್ವ ಯಥಾ ಪಿ ವಾ
ಶೇಷತ್ವಂ ನೈವಶೇಷಿತ್ವಂ ಸಮುಕ್ತಃ ಪ್ರಾಜ್ಞಃ ಉಚ್ಯತೇ

ಯಸ್ಯ-ಆವನಾನೊರ್ವ ಲಿಂಗೈಕ್ಯಂ, ಕಾರ್ಯವಶಾ-ಕಾರ್ಯರೂಪವಾದ ತನುಕರಣಾದಿಗಳ ಅವಸ್ಥೆಯು, ನಾಸ್ತಿ-ಉಂಟಾಗುತ್ತಿರದು, ಅಥಾಪಿ ವಾ-ಅದಲ್ಲದೆ ಇರ್ದೊಡೆ, ಕಾರಣತ್ವಂ-ನಿಮಿತ್ತಕಾರಣನೆಂಬ ಕತೃತ್ವಾವಸ್ಥೆಯು, ನ-ಇಲ್ಲ, ಶೇಷತ್ವಂ-ಪ್ರಪಂಚನತಿಗಳೆದುಳಿದನೆಂಬುದು, ನ-ಇಲ್ಲ, ಶೇಷಿತ್ವಂ-ಉಳಿಮೆಯುಳ್ಳಾತನೆಂಬ, ತೋರಿಕೆಯು, ನೈವ-ಇಲ್ಲ, ಸಃ-ಆ ತೋರಿಕೆಯಳಿದು ನಿಂದ, ಮುಕ್ತಃ-ಜೀವನ್ಮುಕ್ತನು, ಪ್ರಾಜ್ಞಃ-ಪರಿಪೂರ್ಣ ಜ್ಞಾನಿ ಎಂದು, ಉಚ್ಯತೇ-ಹೇಳಲ್ಪಡುತ್ತಿಹುದು ॥೫೭॥

ಯಸ್ಮಿನ್ಜ್ಯೋತಿಷಿ ಚಿದ್ರೂಪೇ ದೃಶ್ಯತೇನೈವ ಕಿಂಚನ
ಸದ್ರೂಪಂ ವಾಪ್ಯಸದ್ರೂಪಂ ಭಾವಾಭಾವಂ ವಿವರ್ಜಿತಃ

ಭಾವಾಭಾವವಿವರ್ಜಿತ-ಉಂಟು ಇಲ್ಲವೆಂಬ ತೋರಿಕೆ ಇಲ್ಲದ, ಜ್ಯೋತಿಷಿ-ಪರಮ ಪ್ರಕಾಶರೂಪವಾದ, ಚಿದ್ರೂಪೇ-ಅವಿರಳ ಚೈತನ್ಯರೂಪವಾದ, ಯಸ್ಮಿನ್-ಆವನಾನೊರ್ವ ಮಹಾಲಿಂಗೈಕ್ಯನಲ್ಲಿ, ಸದ್ರೂಪಂ-ಉಂಟೆಂಬುದು, ಅಸದಮಿವಾ-ಇಲ್ಲವೆಂಬುದು, ಕಿಂಚನ-ಒಂದರ ತೋರಿಕೆಯು, ನೈವದೃಶ್ಯತೇ-ಕಾಣಲ್ಪಡುತ್ತಿರದು, ಅಖಂಡಿತ ಜ್ಞಾನಿಗೆ-ಖಂಡಿತ ಪದಾರ್ಥಂಗಳ ತೋರಿಕೆ ಇಲ್ಲವೆಂಬುದರ್ಥ ॥೫೮॥

ತ್ವಂತಾಹಂತಾವಿನಿರ್ಮುಕ್ತೇ ಶೂನ್ಯಕಲ್ಪೇ ಚಿದಂಬರೇ
ಏಕೀಭೂತಸ್ಯ ಸಿದ್ಧಸ್ಯ ಭಾವಾಭಾವ ಕಥಾಕುತಃ

ತ್ವಂತಾ-ನೀನೆಂಬ, ಅಹಂತಾ ನಾನೆಂಬ ತೋರಿಕೆಯ, ವಿನಿರ್ಮುಕ್ತೇ-ತೊಲಗಿ ನಿಂದಾತನಾದ, ಶೂನ್ಯಕಲ್ಪೇ-ಪರಮಶೂನ್ಯಕ್ಕೆ ಸಮಾನನಾದ, ಚಿದಂಬರೇ-ಪರಬ್ರಹ್ಮವೆಂಬ ಚಿದಾಕಾಶದಲ್ಲಿ, ಏಕೀಭೂತಸ್ಯ-ಎರಡಳಿದೊಂದಾಗಿನಿಂದ, ಸಿದ್ಧಸ್ಯ-ನಿಜಸಿದ್ಧನಾದ ಶಿವಯೋಗೀಶ್ವರಂಗೆ, ಭಾವಾಭಾವಕಥಾ-ಉಂಟು ಇಲ್ಲವೆಂಬ ನುಡಿಯ ಗಡಣವು, ಕುತಃ-ಎತ್ತಣದು ॥೫೯॥

೫೭. ಜ್ಞಾನಶೂನ್ಯಸ್ಥಲ

ಮುಂದೆ ಜ್ಞಾನಶೂನ್ಯಸ್ಥಲವನು ನಿರೂಪಿಸುತಿರ್ದಪಂ

ಪರಸ್ಪರಂ ಸಮಾಪೇಕ್ಷ್ಯಾ ಭಾವಾಭಾವ ವಿಮೋಚನಂ
ಜ್ಞಾನಂ ಬ್ರಹ್ಮಣಿತನ್ನಾಸ್ತಿ ಜ್ಞಾನಶೂನ್ಯ ಸ್ಥಲಂ ವಿದುಃ

ಪರಸ್ಪರಂ-ಒಂದೊಂದನು, ಅಪೇಕ್ಷ್ಯಾ-ಬಯಸಿ, ಭಾವಾ-ಭಾವವಲ್ಲದುದು, ಅಭಾವ-ಅಭಾವವಲ್ಲದುದು ಭಾವವೆಂದು ಒಂದನು ಬಯಸಿ, ಭಾವಾಭಾವ ವಿಮೋಚನಂ-ಭಾವವು ತೊಲಗಿ, ಅಭಾವ ರೂಪವಾದ ಅಭಾವ ತೊಲಗಿ ಭಾವ ರೂಪವಾದ, ಯತ್-ಆವುದಾನೊಂದು, ಜ್ಞಾನಂ-ಭೇದಜ್ಞಾನವು, ಬ್ರಹ್ಮಣಿ-ಅಖಂಡಿತ ಬ್ರಹ್ಮದಲ್ಲಿ, ನಾಸ್ತಿ-ಇಲ್ಲ, ತದೇವ-ಅದನೆ, ಜ್ಞಾನಶೂನ್ಯಸ್ಥಲಂ-ಜ್ಞಾನ ಶೂನ್ಯಸ್ಥಲವೆಂದು, ವಿದುಃ-ತಿಳಿವುತ್ತಿಹರು ॥೬೦॥

ಸರ್ವಾತ್ಮನಿ ಪರೇತತ್ತ್ವೇ ಭೇದಶಂಕಾವಿವರ್ಜಿತೇ
ಜ್ಞಾತ್ರಾದಿವ್ಯವಹಾರೋತ್ಥಂ ಕುತೋಜ್ಞಾನಂ ವಿಭಾವ್ಯತೇ

ಭಾವಶಂಕಾವಿವರ್ಜಿತೇ-ನಾನು ನೀನೆಂಬ ಭೇದ ಶಂಕೆಯಿಂ ತೊಲಗಿರ್ದ, ಸರ್ವಾತ್ಮನಿ-ಸಕಲ ರೂಪನಾದ, ಪರೇತತ್ವೇ-ಪರಮ ತತ್ವರೂಪನಾದ ಶಿವಯೋಗೀಶ್ವರ ನಲ್ಲಿ, ಜ್ಞಾತ್ರಾದಿ ವ್ಯವಹಾರೋತ್ಥಂ-ಜ್ಞಾತೃಜ್ಞೇಯಾದಿ ವ್ಯವಹಾರದಿಂ ಹುಟ್ಟಿರ್ದ ಜ್ಞಾನಂ, ತ್ವಂ-ಅಹಂಯೆಂಬುದು ಮೊದಲಾದ ವಿಕಲ್ಪ ಜ್ಞಾನವು, ಕುತಃ-ಏನು ಕಾರಣದಿಂದೆ, ವಿಭಾವ್ಯತೆ-ಉಂಟಾಗುತ್ತಿಹುದು ॥೬೧॥

ನಿರ್ವಿಕಾರಂ ನಿರಾಕಾರಂ ನಿತ್ಯಸೀಮಾವಿವರ್ಜಿತಂ
ವ್ಯೋಮವತ್ಪರಮಂ ಬ್ರಹ್ಮ ನಿರ್ವಿಕಲ್ಪತಯಾಸ್ಥಿತಂ

ನಿರ್ವಿಕಾರಂ-ವಿಕಾರರಹಿತವಾಗಿ, ನಿರಾಕಾರಂ-ಆಕಾರರಹಿತವಾಗಿ, ನಿತ್ಯಂ-ಕೇಡಿಲ್ಲದುದಾಗಿ ಸೀಮಾವಿವರ್ಜಿತಂ-ಮೇರೆ ಇಲ್ಲದೆ ಇದ್ದುದಾಗಿ, ವ್ಯೋಮವತ್-ಮಹದಾಕಾಶದೋಪಾದಿಯಲ್ಲಿ, ಪರಮಂ-ಸರ್ವೋತ್ಕೃಷ್ಟಮಾಗಿ, ಬ್ರಹ್ಮ - ಪರಬ್ರಹ್ಮರೂಪವಾಗಿ, ನಿರ್ವಿಕಲ್ಪತಯಾ - ಸಕಲವಿಕಲ್ಪಕ್ಕೆತೀತನಾಗಿ, ಸ್ಥಿತಂ - ಇರಲ್ಪಟ್ಟಾತನು, ಎರಡಳಿದುಳಿದುನಿಂದ, ಶಿವಯೋಗಿಶ್ವರಂಗೆ ಬೇರೆ ತೋರಿಕೆ ಇಲ್ಲವೆಂಬುದರ್ಥ ॥೬೨॥

ನ ಪೃಥ್ವಾದೀನಿ ಭೂತಾನಿ ನ ಗ್ರಹಾ ನೈವತಾರಕಾಃ
ನ ದೇವಾ ನ ಮನುಷ್ಯಾಚ್ಛ ನ ತಿರ್ಯಂಚೋ ನ ಚಾಪರೇ

ಪಥ್ವ್ಯಾದೀನಿ-ಆ ಶಿವಯೋಗೀಶ್ವರಂಗೆ ಪೃಥ್ವಿ ಮೊದಲಾದ ಭೂತಂಗಳು, ನ-ಇಲ್ಲ, ಗ್ರಹ-ಆದಿತ್ಯಾದಿ ನವಗ್ರಹಗಳು, ನ-ಇಲ್ಲ, ತಾರಕಾಃ-ಅಶ್ವಿನ್ಯಾದಿ ನಕ್ಷತ್ರಂಗಳು, ನೈವ-ಇಲ್ಲವೆ, ದೇವಾಃ-ಬ್ರಹ್ಮಾದಿ ದೇವತೆಗಳು, ನ-ಇಲ್ಲ, ಮನುಷ್ಯಃ-ಮನುಷ್ಯನು, ನ-ಇಲ್ಲ, ತಿರ್ಯಂಚಃ-ತಿರ್ಯಗ್ಜಾತಿಗಳಾದ ಪಶು ಪಕ್ಷಿ ಮೃಗಂಗಳು, ನ-ಇಲ್ಲ, ಅಪರೇಚಾ-ಇವರಿಂದನ್ಯಮಾದ ಚೇತನಾಚೇತನ ವಸ್ತುಗಳು, ನ-ಇಲ್ಲ, ಈ ಪರಮ ಶಿವ ಯೋಗೀಶ್ವರನು ಸರ್ವಸಾಕ್ಷಿಕನಪ್ಪುದರಿಂದ ಆವ ಪದಾರ್ಥದಲ್ಲಿಯೂ ಅಭಿಮಾನವಿಲ್ಲ ವೆಂಬುದರ್ಥ ॥೬೩॥

ತಸ್ಮಿನ್ಕೇವಲ ಚಿನ್ಮಾತ್ರಸತ್ತಾನಂದೈಕಲಕ್ಷಣೇ
ತ್ವಂತಾಹಂತಾದಿ ಸಂರೂಢಂ ವಿಜ್ಞಾನಂ ಕೇನ ಜಾಯತೇ

ಸತ್ತಾನಂದೈಕ ಲಕ್ಷಣೇ-ಸದ್ರೂಪವು ಆನಂದರೂಪವು ಲಕ್ಷಣವಾಗುಳ್ಳ, ತಸ್ಮಿನ್-ಆ ಪ್ರಸಿದ್ಧವಾದ, ಕೇವಲ ಚಿನ್ಮಾತ್ರ-ನಿರುಪಾಧಿಕಮಾದ ನಿಜಚೈತನ್ಯದಲ್ಲಿ, ತ್ವಂತಾಹಂತಾದಿ ಸಂರೂಢಂ-ನೀನು ನಾನೆಂಬ ಭೇದಭ್ರಮೆಯಿಂ ಕೂಡಿರ್ದ, ವಿಜ್ಞಾನಂ-ವಿಕಲ್ಪ ಜ್ಞಾನವು, ಕೇನ-ಆವುದರಿಂದ, ಜಾಯತೇ-ಹುಟ್ಟುತ್ತಿದ್ದಿತು, ಪರಮನಿರ್ಮಲರೂಪವಾದ ಶಿವಯೋಗೀಶ್ವರಂಗೆ ವಿಕಲ್ಪಭ್ರಾಂತಿ ಇಲ್ಲವೆಂಬುದರ್ಥ ॥೬೪॥

ಶೂನ್ಯಜ್ಞಾನಾದಿ ಸಂಕಲ್ಪೇ ಶೂನ್ಯಸರ್ವಾರ್ಥಸಾಧನೇ
ಜ್ಯೋತಿರ್ಲಿಂಗೇ ಚಿದಾಕಾರೇ ಸ್ವಪ್ರಕಾಶೇ ನಿರುತ್ತರೇ

ಶೂನ್ಯಜ್ಞಾನಾದಿ ಸಂಕಲ್ಪೇ-ಜ್ಞಾನ ಜ್ಞೇಯಾದಿ ಸಂಕಲ್ಪರಹಿತನಾದ,ಶೂನ್ಯ ಸರ್ವಾರ್ಥ• ಸಾಧನೇ-ಧರ್ಮಾರ್ಥಕಾಮ ಮೋಕ್ಷಂಗಳಾದಿಯಾದ ಸಕಲ ಪ್ರಯೋಜನಂಗಳ ಸಾಧಿಸುವ ಬಯಕೆ ಇಲ್ಲದ, ಚಿದಾಕಾರೇ - ನಿತ್ಯಜ್ಞಾನ ರೂಪನಾದ, ಸ್ವಪ್ರಕಾಶೇ-ಸ್ವಯಂ ಪ್ರಕಾಶ ರೂಪನಾದ, ನಿರುತ್ತರೇ - ತನ್ನಿಂದಧಿಕ ವಸ್ತುವಿಲ್ಲದ, ಜ್ಯೋತಿರ್ಲಿಂಗೇ-ಪರಮಾತ್ಮ ಜ್ಯೋತಿರೂಪಮಾದ ಲಿಂಗದಲ್ಲಿ ॥೬೫॥

ಏಕೀಭಾವಮುಪೇತಸ್ಯ ಕಥಂ ವಾ ಜ್ಞಾನಸಂಭವಃ
ಜ್ಞೇಯಾಭಾವಾದ್ವಿಶೇಷೇಣ ಶೂನ್ಯಕಲ್ಪಂ ವಿಭಾವ್ಯತೇ

...ಭಾವ-ಎರಡಳಿದು ಒಂದೆನಿಸಿದ ಭಾವವನು, ಉಪೇತಸ್ಯ-ಎಯ್ದಿದ ಪರಶಿವ ಯೋಗೀಶ್ವರಂಗೆ, ಜ್ಞಾನಸಂಭವಃ-ನಾನು ನೀನೆಂಬ ಭೇದಾಭೇದ ಜ್ಞಾನದ ಉತ್ಪತ್ತಿಯು, ಕಥಂ ವಾ-ಹೇಗೆ ಉಂಟಹುದು, ಜ್ಞೇಯಾಭಾವಾತ್-ಇದಿರಿಟ್ಟು ಅರುಹಿಸಿಕೊಂಬುದಿಲ್ಲ ವಾದ ಕಾರಣ, ವಿಶೇಷೇಣ-ಮಿಗಿಲಾಗಿ, ಶೂನ್ಯಕಲ್ಪಂ-ಶೂನ್ಯಕ್ಕೆ ಸಮಾನವಾದ ಬಚ್ಚಬರಿಯರಿವೆಂದು, ವಿಭಾವ್ಯತೇ-ತಿಳಿಯಲ್ಪಡುತ್ತಿದ್ದಿತು ॥೬೬॥

ಜ್ಞಾತೃಜ್ಞೇಯಾದಿಭಿಶ್ಶೂನ್ಯಂ ಶೂನ್ಯಂ ಜ್ಞಾನಾದಿಭಿರ್ಗುಣೈಃ
ಆದಾವಂತೇ ಚ ಮಧ್ಯೇ ಚ ಶೂನ್ಯಂ ಸರ್ವತ್ರ ಸರ್ವದಾ

ಆ ಮಹಾಲಿಂಗೈಕ್ಯನ ಸ್ವರೂಪವು, ಜ್ಞಾತೃಜ್ಞೇಯಾದಿಭಿಃ-ಜ್ಞಾತೃಜ್ಞೇಯಾದಿ ವ್ಯವಹಾರಂಗಳಿಂದೆ, ಶೂನ್ಯಂ-ಶೂನ್ಯವಾಗಿರ್ದುದು, ಜ್ಞಾನಾದಿಭಿಃ-ಜ್ಞಾನ ಪ್ರಯತ್ನ ಸಂಸಾರಿಯಾದ, ಗುಣೈಃ-ಗುಣಗಳಿಂದೆ, ಶೂನ್ಯಂ-ಶೂನ್ಯವಾಗಿರ್ದುದು, ಆದೌ - ಆದಿಯಲ್ಲಿಯು, ಶೂನ್ಯಂ-ಶೂನ್ಯವಾಪುದು, ಸರ್ವತ್ರ-ಸರ್ವದೇಶದಲ್ಲಿ, ಸರ್ವದಾ - ಸರ್ವಕಾಲದಲ್ಲಿಯೂ, ಶೂನ್ಯಂ-ಶೂನ್ಯವಾಗಿರ್ದಂಥಾದು ॥೬೭॥

ದ್ವಿತೀಯೇನ ಪದಾರ್ಥೇನ ಶೂನ್ಯಂ ಶೂನ್ಯಂ ವಿಭಾವ್ಯತೇ
ಕೇವಲಂ ಸಚ್ಚಿದಾನಂದ ಪ್ರಕಾಶಾದ್ವಯ ಲಕ್ಷಣಂ

ದ್ವಿತೀಯೇನ ಪದಾರ್ಥೇನ-ಎರಡನೆಯದಾದ ಪದಾರ್ಥದಿಂದೆ, ಶೂನ್ಯಂ-ಶೂನ್ಯವಾದುದಾಗಿ, ಕೇವಲಂ-ಬಚ್ಚಬರಿಯ, ಸಚ್ಚಿದಾನಂದ ಪ್ರಕಾಶದ್ವಯ ಲಕ್ಷಣಂ-ಸತ್ತುಚಿತ್ತು ಆನಂದ ಪ್ರಕಾಶಂಗಳ ಬೆರೆಕೆಯಿಂ ಬೇರಿಲ್ಲದ ರೂಪವಾದ ಶಿವಯೋಗೀಶ್ವರನ ರೂಪವು, ಶೂನ್ಯಂ-ಜ್ಞಾನಶೂನ್ಯಸ್ಥಲವೆಂದು, ವಿಭಾವ್ಯತೆ-ತಿಳಿಯಲ್ಪಡುತ್ತಿದ್ದಿತು ॥೬೮॥

ಶೂನ್ಯಕಲ್ಪಂ ಪರಾಕಾಶಂ ಪರಬ್ರಹ್ಮ ಪ್ರಕಾಶತೇ

ಜಲೇಜಲಮಿವನ್ಯಸ್ತಂ ವಹ್ನೌವಹ್ನಿರಿವಾರ್ಪಿತಂ
ಪರೇಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ

ಏನು ಏನು ಇಲ್ಲದುದಾಗಿ, ಶೂನ್ಯಕಲ್ಪಂ-ಶೂನ್ಯಕ್ಕೆ ಸಮಾನನಾದ, ಪರಾಕಾಶಂ-ಮಹದಾಕಾಶಸ್ವರೂಪವಾದ, ಪರಬ್ರಹ್ಮ-ಪರಬ್ರಹ್ಮವೆ, ಪ್ರಕಾಶತೇ-ಬೆಳಗಿನೊಳಗಣ ಮಹಾಬೆಳಗಾಗಿರ್ಪುದು, ಜಲೇ-ಮಹಾಸಮುದ್ರದ ಜಲದಲ್ಲಿ, ನ್ಯಸ್ತಂ-ಬೆರಸಲ್ಪಟ್ಟ, ಜಲಮಿವಾ-ಮಹಾನದಿಯ ಜಲದಂತೆ, ವಹ್ನೌ-ಮಹಾಕಾಲಾಗ್ನಿಯಲ್ಲಿ, ಅರ್ಪಿತಂ-ಬೆರಸಲ್ಪಟ್ಟ, ವಹ್ನಿರಿವಾ-ಮಹದಗ್ನಿಯಂತೆ, ಪರಬ್ರಹ್ಮಣಿ-ಅವಿರಳ ಬ್ರಹ್ಮದಲ್ಲಿ, ಲೀನಾತ್ಮ-ಎರಡಳಿದುಳಿದ ಪರಮಶಿವಯೋಗೀಶ್ವರನು, ವಿಭಾಗೇನ-ಭೇದರೂಪದಿಂದೆ, ನ ದೃಶ್ಯತೆ-ಕಾಣಲ್ಪಡುತ್ತಿರನು ।।೬೯।।

ಯೇತಾವದುಕ್ತ್ವಾಪರಮಪ್ರಬೋಧಾ
ಮದ್ವೈತಮಾನಂದ ಶಿವಪ್ರಕಾಶಂ
ದೇವ್ಯೈಪುರಾಭಾಷಿತಮೀಶ್ವರೇಣ
ತೂಷ್ಣೀಮಭೂಧ್ಯಾನಪರೋ ಗಣೇಂದ್ರಃ

ಗಣೇಂದ್ರಃ-ರೇಣುಕ ಗಣೇಶ್ವರನು, ಯೇತಾವತ್-ಇಷ್ಟು ಪ್ರಕಾರವಾದ, ಪರಮ ಪ್ರಬೋಧಂ-ದಿವ್ಯಬೋಧ ಸ್ವರೂಪಮಾದ, ಅದ್ವೈತಂ-ದ್ವೈತ ಭಾವನೆ ಇಲ್ಲದ, ಆನಂದ ಶಿವಪ್ರಕಾಶಂ-ಪರಮಾನಂದ ಸ್ವರೂಪಮಪ್ಪ ಶಿವತತ್ವ ಪ್ರಕಾಶಕಮಾದ, ಪುರಾ-ಪೂರ್ವ ದಲ್ಲಿ, ದೇವ್ಯೈ-ಪಾರ್ವತಿ ದೇವಿಗೋಸ್ಕರ, ಈಶ್ವರೇಣ-ಪರಮೇಶ್ವರನಿಂದ, ಭಾಷಿತಂ-ರೂಪಿಸಲ್ಪಟ್ಟ ದಿವ್ಯಜ್ಞಾನಶಾಸ್ತ್ರವನು ಅಗಸ್ತ್ಯಮುನೀಶ್ವರಂಗೆ ಬೋಧಿಸಿ, ಧ್ಯಾನಪರಃ-ಶಿವಧ್ಯಾನದಲ್ಲಿ ಮುಳುಗಿದ ಚಿತ್ತವುಳ್ಳಾತನಾಗಿ, ತೂಷ್ಣೀಂ-ಪರಶಿವ ಭಾವದಿಂ ನುಡಿಯಡಗಿದ ಮೌನಿಯು, ಅಭೂತ್-ಆದನು ।।೭೦।।

ಏವಮುಕ್ತ್ವಾ ಸಮಾಸೀನಂ ಶಿವಯೋಗಪರಾಯಣಂ
ರೇಣುಕಂ ತಂ ಸಮಾಲೋಕ್ಯ ಬಭಾಷೇ ಪ್ರಾಂಜಲಿರ್ಮುನಿಃ

ಏವಂ-ಈ ಪ್ರಕಾರದಿಂದ, ಉಕ್ತ್ವಾ-ನುಡಿದು, ಸಮಾಸೀನಂ-ಮೌನದಿಂದಿರ್ದ, ಶಿವಯೋಗ ಪರಾಯಣಂ-ಶಿವಯೋಗದಲ್ಲಿ, ತತ್ಪರನಾದ, ರೇಣುಕಂ-ರೇವಣ ಸಿದ್ಧೇಶ್ವರನ, ಸಮಾಲೋಕ್ಯ-ಒಳಿತಾಗಿ ನೋಡಿ, ಮುನಿಃ-ಅಗಸ್ತ್ಯ ಮುನೀಶ್ವರನು, ಪ್ರಾಂಜಲಿಃ-ಕರಂಗಳ ಮುಗಿದಾತನಾಗಿ, ಬಭಾಷೇ-ನುಡಿದನು ।।೭೧।।

ಅಗಸ್ತ್ಯ ಉವಾಚ

ಶಿವಯೋಗವಿಶೇಷಜ್ಞ ಶಿವಜ್ಞಾನಮಹೋದಧೇ
ಸಮಸ್ತವೇದಶಾಸ್ತ್ರಾದಿವ್ಯವಹಾರಧುರಂಧರಂ

ಶಿವಯೋಗ ವಿಶೇಷಜ್ಞ-ಪರಶಿವಯೋಗದ ವಿಶೇಷಣಮಂ ಬಲ್ಲಾತನೆ, ಶಿವಜ್ಞಾನ ಮಹೋದಧೇ-ಶಿವಜ್ಞಾನಕ್ಕೆ ಸಮುದ್ರಸ್ಥಾನನಾದಾತನೆ, ಸಮಸ್ತ-ಸಕಲ ಸ್ವರೂಪಮಾದ, ವೇದ-ಚತುರ್ವೇದಂಗಳು, ಶಾಸ್ತ್ರ-ವೈದಿಕ ಅವೈದಿಕ ರೂಪಮಾದ ಶಾಸ್ತ್ರಂಗಳ, ವ್ಯವಹಾರ ಉಪಕ್ರಮ-ಉಪಸಂಹಾರ ಮುಂತಾದ ವ್ಯವಹಾರಂಗಳ, ಧುರಂಧರಂ-ಹೊರೆಯ ಹೊರಲು ಹೊರಗೆ ಒಳಗಾದಾತನೆ ।।೭೨।।

ಆಲೋಕಮಾತ್ರನಿರ್ಧೂತಸರ್ವಸಂಸಾರ ಬಂಧನ
ಸ್ವಚ್ಛಂದಚರಿತೋಲ್ಲಾಸ ಸ್ವಪ್ರಕಾಶಾತ್ಮವಚ್ಛಿವ

ಆಲೋಕಮಾತ್ರ-ನೋಡಿದ ಮಾತ್ರದಿಂದೆ, ನಿರ್ಧೂತ-ಕೊಡಹಲ್ಪಟ್ಟ ಸರ್ವ-ಸಮಸ್ತವಾದ, ಸಂಸಾರಬಂಧನಂ-ಸಂಸಾರಬಂಧನ ಉಳ್ಳಾತನೆ, ವೇಧಾ ದೀಕ್ಷೆಯಿಂ ಬಂಧನವಂ ಹರಿದನೆಂಬುದರ್ಥ, ಸ್ವಚ್ಛಂದಚರಿತೋಲ್ಲಾಸಂ-ಪರಮ ಸ್ವತಂತ್ರಮಾದ ಚಾರಿತ್ರದ ವಿಲಾಸ ಉಳ್ಳಾತನೆ, ಸ್ವಪ್ರಕಾಶಾತ್ಮವಚ್ಛಿವ-ಸ್ವಯಂಪ್ರಕಾಶ ರೂಪವುಳ್ಳ ಪರಶಿವ ಸ್ವರೂಪನೆ ॥೭೩॥

ಅನವದ್ಯಮಿದಂ ಶಾಸ್ತ್ರಮನವದ್ಯಂ ತ್ವದಾನನಾತ್
ಶ್ರುತ್ವಾ ಮೇ ಮೋದತೆ ಚಿತ್ತಂ ಜ್ಯೋತಿಃ ಪಶ್ಯ ಶಿವಾಭಿದಂ

ಅನವದ್ಯಂ-ನಿರ್ದೋಷಮಾದ, ಇದಂ-ಈ ಪ್ರಕಾರಮಾದ, ಶಾಸ್ತ್ರ-ಮೋಕ್ಷ ಶಾಸ್ತ್ರವು, ತ್ವದಾನನಾತ್-ನಿನ್ನಯ ಮುಖದತ್ತಣಿಂದೆ, ಅವತೀರ್ಣಂ-ಅವತರಿಸಲ್ಪಟ್ಟಿತು, ಈ ಶಾಸ್ತ್ರವನು, ಶೃತ್ವಾ-ಕೇಳಿ, ಮೇ-ನನ್ನ, ಚಿತ್ತಂ-ಚಿತ್ತವು, ಮೋದತೆ-ಸಂತೋಷಿಸು ತಿರ್ದಪುದು, ಶಿವಾಭಿದಂ-ಶಿವನೆಂದೆನಿಸಿಕೊಂಬ, ಜ್ಯೋತಿಃ-ಪರಮಜ್ಯೋತಿಯನು, ಪಶ್ಯ-ಕಾಣುತ್ತಿರ್ದ್ದೇನೆ ॥೭೪॥

ಅದ್ಯ ಮೇ ಸಫಲಂ ಜನ್ಮಗತೋ ಮೇ ಚಿತ್ತವಿಭ್ರಮಃ
ಸಂಜಾತಾ ಪಾಶವಿಚ್ಛಿತ್ತಿಸ್ತಪಾಂಸಿ ಫಲಿತಾನಿ ಮೇ

ಅದ್ಯ-ಈಗ, ಮೇ-ಎನ್ನ, ತಪಾಂಸಿ-ತಪಸ್ಸುಗಳ, ಫಲಿತಾನಿ-ಫಲಿಸಲ್ಪಟ್ಟ, ಮೇ-ಎನ್ನ, ಜನ್ಮ-ಜನನವು, ಸಫಲಂ-ಸಫಲವಾಯಿತು, ಮೇ-ಎನ್ನ, ಚಿತ್ತವಿಭ್ರಮಃ ಚಿತ್ತ ಭ್ರಾಂತಿಯು, ಗತಃ-ತೊಲಗಿತು, ಪಾಶವಿಚ್ಛಿತ್ತಿಃ-ಪಾಶಂಗಳ ತೊಲಗಿಕೆಯು, ಸಂಜಾತ-ಆಯಿತು ॥೭೫॥

ಇದಾನೀಮೇವ ಮೇ ಜಾತಾಮಾನಂದಂ ಮುನಿಸತ್ತಮಃ
ಅತಃಪರಂ ಮಯಾ ನಾಸ್ತಿ ಸದೃಶೋ ಭುವನತ್ರಯೇ

ಭೋ ಗಣನಾಯಕ-ಎಲೆ ಗಣಶ್ರೇಷ್ಠನೆ, ಇದಾನೀಮೇವ-ಈಗಲೆ ಎನಗೆ, ಆನಂದಂ-ಶಿವಾನಂದವು, ಜಾತಂ-ಹುಟ್ಟಿಸಲ್ಪಟ್ಟಿತು, ಅತಃಪರಂ-ಇದರಿಂದಂ ಮೇಲೆ, ಮಯಾ-ಎನ್ನೊಡನೆ, ಸದೃಶಃ-ಸಮಾನವನು, ಭುವನತ್ರಯೆ-ಮೂರು ಲೋಕದಲ್ಲಿಯು, ನಾಸ್ತಿ-ಇಲ್ಲ ॥೭೬॥

ಶಾಸ್ತ್ರಾಂತರದಲ್ಲಿ

ಶಾಸ್ತ್ರಂ ತವಮುಖೋದ್ಗೀರ್ಣಂ ಶಿವಾದ್ವೈತಪರಂ ವರಂ
ಮಾಂ ವಿನಾಕಸ್ಯ ಲೋಕೇಷು ಶ್ರೋತುಮಸ್ತಿ ತಪಃ ಫಲಂ

ಶಿವಾದ್ವೈತಪರಂ-ಶಿವಾದ್ವೈತದಲ್ಲಿ ತಾತ್ಪರ್ಯವುಳ್ಳ, ವರ-ಶ್ರೇಷ್ಠವಾದ, ತವ-ನಿನ್ನ ಮುಖೋದ್ಗೀರ್ಣಂ-ಮುಖದಿಂದ ಹುಟ್ಟಿದ, ಶಾಸ್ತ್ರಂ-ಶಿವ ಶಾಸ್ತ್ರವನು, ಶ್ರೋತ್ರುಂ-ಕೇಳಲು,

ಮಾಂ ವಿನಾ-ನಾನು ಹೊರತಾಗಿ, ಕಸ್ಯ-ಆವಾತಂಗೆ, ಲೋಕೇಷು-ಲೋಕಂಗಳಲ್ಲಿ, ತಪಃಫಲಂ-ತಪಸ್ಸಿನ ಫಲವು, ಅಸ್ತಿ-ಉಂಟು ॥೭೭॥

ತಪಸಾಂ ಪರಿಪಾಕೇನ ಶಂಕರಸ್ಯ ಪ್ರಸಾದತಃ
ಆಗತಸ್ತ್ವಂ ಮಹಾಭಾಗ ಮಾಂ ಕೃತಾರ್ಥಯಿತುಂ ಗಿರಾ

ತಪಸಾಂ-ತಪಸ್ಸುಗಳ, ಪರಿಪಾಕೇನ-ಪರಿಪಕ್ವದಿಂದೆ, ಶಂಕರ-ಪರಮೇಶ್ವರನ, ಪ್ರಸಾದತಃ-ಪ್ರಸನ್ನತೆಯತ್ತಣಿಂದೆ, ಮಹಾಭಾಗ-ಮಹಾಭಾಗ್ಯಸಂಪನ್ನನಾದ, ಗಣೇಶ್ವರಃ-ಎಲೆ ರೇಣುಕೇಶ್ವರನೆ, ತವಾ-ನಿನ್ನ, ಗಿರಾ-ನುಡಿಯಿಂದೆ, ಮಾಂ-ಎನ್ನನು, ಕೃತಾರ್ಥಯಿತು-ಕೃತಾರ್ಥನಂ ಮಾಡಲು, ಆಗತಃ-ಬರಲ್ಪಟ್ಟಾತನು ॥೭೮॥

ಇತಿ ಸ್ತುವಂತಂ ವಿನಯಾದಗಸ್ತ್ಯಂ ಮುನಿಪುಂಗವಂ
ಆಲೋಕ್ಯ ಕರುಣಾದೃಷ್ಟ್ಯಾ ಬಭಾಷ್ಯಾ ಸಗಣೇಶ್ವರಃ

ಇತಿ, ಈ ಪ್ರಕಾರದಲ್ಲಿ, ವಿನಯಾತ್-ವಿನಯದತ್ತಣಿಂ, ಸ್ತುವಂತಂ-ಸ್ತೋತ್ರವಂ ಮಾಡುತ್ತಿರ್ದ, ಮುನಿಪುಂಗವಂ-ಮುನಿಶ್ರೇಷ್ಠನಾದ, ಅಗಸ್ತ್ಯಂ-ಅಗಸ್ತ್ಯನನು, ಕರುಣಾದೃಷ್ಟ್ಯಾ-ಕೃಪಾದೃಷ್ಟಿಯಿಂದೆ, ಸಃ-ಆ ಪ್ರಸಿದ್ಧನಾದ, ಗಣೇಶ್ವರಃ-ರೇಣುಕ ಗಣೇಶ್ವರನು, ಆಲೋಕ್ಯ-ನೋಡಿ, ಬಭಾಷಾ-ನುಡಿದನು ॥೭೯॥

ರೇಣುಕ ಉವಾಚ

ಆಗಸ್ತ್ಯಮುನಿಶಾರ್ದೂಲ ತಪಸ್ಸಿದ್ಧಮನೋರಥಂ
ತ್ವಾಂ ವಿನಾ ಶಿವಶಾಸ್ತ್ರಸ್ಯ ಕಶ್ಯ್ರೋತೃಮಧಿಕಾರವಾನ್

ಮುನಿಶಾರ್ದೂಲ-ಮುನಿಶ್ರೇಷ್ಠನಾದ, ತಪಸ್ಸಿದ್ಧ ಮನೋರಥಂ-ತಪಸ್ಸಿನಿಂ ಸಿದ್ಧಿಸಲ್ಪಟ್ಟ ಬಯಕೆಯುಳ್ಳಾತನಾದ, ಅಗಸ್ತ್ಯ-ಎಲೆ ಅಗಸ್ತ್ಯನೆ, ತ್ವಾಂ-ನೀನು ಹೊರತಾಗಿ, ಶಿವಶಾಸ್ತ್ರಸ್ಯ-ಶಿವಶಾಸ್ತ್ರವ, ಶ್ರೋತೃಂ-ಕೇಳಲು, ಕಃ-ಆವಾತನು, ಅಧಿಕಾರವಾನ್-ಯೋಗ್ಯತೆಯುಳ್ಳಾತನು ॥೮೦॥

ಪಾತ್ರಂ ಶಿವಪ್ರಸಾದಸ್ಯ ಭವಾನೇಕೋ ನ ಚಾಪರಃ
ಇತಿ ನಿಶ್ಚಿತ್ಯಕಥಿತಂ ಮಯಾ ತೇ ತಂತ್ರಮೀದೃಶಂ ॥

ಭವಾನ್-ನೀನು, ಏಕಃ-ಓರ್ವನೆ, ಶಿವಪ್ರಸಾದಸ್ಯ-ಶಿವನ ಪ್ರಸಾದಕ್ಕೆ, ಪಾತ್ರಂ-ಆಶ್ರಯನು, ಅಪರಂ ಚ-ಮತ್ತೋರ್ವನು, ನ-ಇಲ್ಲ, ಇತಿ-ಹೀಗೆಂದು, ನಿಶ್ಚಿತ್ಯಾ-ನಿಶ್ಚೈಸಿ, ಮಯಾ-ಎನ್ನಿಂದೆ, ತೇ-ನಿನಗೆ, ಈದೃಶಂ-ಈ ಪ್ರಕಾರಮಾದ ತಂತ್ರಂ-ಶಿವಜ್ಞಾನಶಾಸ್ತ್ರವುಹೇಳಲ್ಪಟ್ಟಿತು ॥೮೧॥

ಸ್ಥಾಪ್ಯತಾಂ ಸರ್ವಲೋಕೇಷು ತಂತ್ರ ಮೇ ತತ್ ತ್ವಯಾ ಮುನೇ
ಈದೃಶಂ ಶಿವಬೋಧಸ್ಯ ಸಾಧನಂ ನಾಸ್ತಿ ಕುತ್ರಚಿತ್

ಏತತ್-ಈ ಪ್ರಕಾರಮಾದ, ತಂತ್ರಂ-ಶಾಸ್ತ್ರವು, ಮುನೇ-ಎಲೆ ಅಗಸ್ತ್ಯ ಮುನೀಶ್ವರನೆ, ತ್ವಯಾ-ನಿನ್ನಿಂದೆ, ಸರ್ವಲೋಕೇಷು-ಸಮಸ್ತ ಲೋಕಂಗಳಲ್ಲಿ,

ಸ್ಥಾಪ್ಯತಾಂ-ಸ್ಥಾಪಿಸಲ್ಪಡಲಿ, ಶಿವಬೋಧಸ್ಯ-ಶಿವಜ್ಞಾನಕ್ಕೆ, ಈ ದೃಶಂ-ಈ ಪ್ರಕಾರಮಾದ, ಸಾಧನಂ-ಸಾಧನವು, ಕುತ್ರ-ಆವ ಸ್ಥಲದಲ್ಲಿಯು, ನಾಸ್ತಿ-ಇಲ್ಲ ॥೮೨॥

ರಹಸ್ಯಮೇತತ್ಸರ್ವಜ್ಞ ಸರ್ವಾನುಗ್ರಾಹಕಶ್ಶಿವಃ
ಅವಾದೀತ್ಸರ್ವಲೋಕಾನಾಂ ಸಿದ್ಧಯೇ ಪಾರ್ವತೀ ಪತಿಃ

ರಹಸ್ಯಂ-ಅತ್ಯಂತ ಗೋಪ್ಯಮಾದ, ಏತತ್-ಈ ಶಾಸ್ತ್ರವನು, ಸರ್ವಜ್ಞಃ-ಸರ್ವವನು ಬಲ್ಲಾತನಾದ, ಸರ್ವಾನುಗ್ರಾಹಕಃ-ಸರ್ವಕ್ಕೆ ಅನುಗ್ರಾಹಕನಾದ, ಶಿವಾದೀತ್ಸರ್ವ ಲೋಕಾನಾಂ-ಪರಮ ನಿರ್ಮಲರೂಪನಾದ, ಪಾರ್ವತೀಪತಿಃ-ಪಾರ್ವತಿ ಪ್ರಾಣಕಾಂತನು, ಸರ್ವಲೋಕಾನಾಂ-ಸಮಸ್ತಲೋಕಂಗಳ, ಸಿದ್ಧಯೇ-ಮೋಕ್ಷಸಿದ್ಧಿಗೋಸ್ಕರ, ಅವಾದೀತ್-ನಿರೂಪಿಸಿದನು ॥೮೩॥

ತದಿದಂ ಸರ್ವಸಿದ್ಧಾಂತಸಾರಾಣಾಮುತ್ತಮೋತ್ತಮಂ
ವೇದ ವೇದಾಂತ ಸರ್ವಸ್ವಂ ವಿದ್ಯಾಚಾರ ಪ್ರಕಾಶಕಂ

ತದಿದಂ-ಈ ಶಾಸ್ತ್ರವು, ಸರ್ವಸಿದ್ಧಾಂತಸಾರಾಣಾಂ-ಸಮಸ್ತಸಿದ್ಧಾಂತಶಾಸ್ತ್ರದ ಸಾರಂಗಳಿಗೆ, ಉತ್ತಮೋತ್ತಮಂ-ಅತ್ಯಂತ ವಿಶಿಷ್ಟವಾಗಿರ್ದುದು, ವೇದವೇದಾಂತ ಸರ್ವಸ್ವಂ-ನಾಲ್ಕುವೇದಗಳ, ಮೂವತ್ತೆರಡುಉಪನಿಷತ್ತುಗಳ ಸರ್ವಾರ್ಥಸಾರ ರೂಪಮಾದುದು, ವಿದ್ಯಾಚಾರಪ್ರಕಾಶಕಂ-ವೀರ ಮಾಹೇಶ್ವರರ್ಗೆ ಜ್ಞಾನಾಚಾರಂಗಳ ಅರುಹಿಸಿಕೊಡುವುದು ॥೮೪॥

ವೀರಮಾಹೇಶ್ವರಗ್ರಾಹ್ಯಂ ಶಿವಾದ್ವೈತಪ್ರಕಾಶಕಂ
ಪರೀಕ್ಷಿತೇಭ್ಯೋ ದಾತವ್ಯಂ ಶಿಷ್ಯೇಭ್ಯೋ ನಾನ್ಯಥಾ ಕ್ವಚಿತ್

ಈ ಶಾಸ್ತ್ರವು, ವೀರಮಾಹೇಶ್ವರ ಗ್ರಾಹ್ಯಂ-ವೀರ ಮಾಹೇಶ್ವರರಿಂದ ಅಂಗೀಕರಿಸಲು ಯೋಗ್ಯವಾಗಿರ್ದುದು, ಶಿವಾದ್ವೈತ ಪ್ರಕಾಶಕಂ-ಶಿವಾದ್ವೈತವನರುಹಿಸುವ ಸಾಮರ್ಥ್ಯವುಳ್ಳದು, ಪರೀಕ್ಷಿತೇಭ್ಯಃ-ಆತ್ಮಾನಾತ್ಮ ವಿಚಾರವುಳ್ಳವರಾದ, ಶಿಷ್ಯೇಭ್ಯಃ-ಅನುಗ್ರಹಮಂ ಪಡೆದ ಶಿಷ್ಯರುಗಳಿಗೋಸ್ಕರ, ದಾತವ್ಯಂ-ಕೊಡಲು ಯೋಗ್ಯಮಾಗಿರ್ದುದು, ಅನ್ಯಥಾ-ಹಾಗಲ್ಲದೆ ಇರ್ದಡೆ, ಕ್ವಚಿತ್-ಮತ್ತೆಲ್ಲಿಯು, ನ ದಾತವ್ಯಂ-ಕೊಡಲು ಯೋಗ್ಯಮಾದುದಲ್ಲ ॥೮೫॥

ಏತಚ್ಛ್ರವಣಮಾತ್ರೇಣ ಸರ್ವೇಷಾಂ ಪಾಪಸಂಕ್ಷಯಃ
ಅವತೀರ್ಣಂ ಮಯಾ ಭೂಮೌ ಶಾಸ್ತ್ರಸ್ಯಾಸ್ಯ ಪ್ರವೃತ್ತಯೇ

ಏತಚ್ಛ್ರವಣ ಮಾತ್ರೇಣ-ಈ ಜ್ಞಾನ ಶಾಸ್ತ್ರವ ಕೇಳಿದ ಮಾತ್ರದಿಂದವೆ, ಸರ್ವೇಷಾಂ-ಸಮಸ್ತರಿಗು, ಪಾಪಸಂಕ್ಷಯಃ-ಪಾಪಂಗಳು ನಾಶವಪ್ಪುದು, ಅಸ್ಯ-ಈ ಲೋಕೋತ್ತರಮಾದ, ಶಾಸ್ತ್ರಸ್ಯ-ಶಾಸ್ತ್ರದ, ಪ್ರವೃತ್ತಯೆ-ಪ್ರವರ್ತನಕ್ಕೋಸ್ಕರ, ಮಯಾ-ಎನ್ನಿಂದೆ, ಭೂಮೌ-ಭೂಲೋಕದಲ್ಲಿ, ಅವತೀರ್ಣಂ-ಅವತರಿಸಲ್ಪಟ್ಟಿತು ॥೮೬॥

ಪ್ರವರ್ತಯ ಶಿವಾದೇಶತ್ತ್ವಮಪಿ ಜ್ಞಾನಮೀದೃಶಂ

ತ್ವಮಪಿ-ನೀನು, ಶಿವಾದೇಶಾತ್-ಶಿವನನುಜ್ಞೆಯತ್ತಣಿಂದೆ, ಈ ದೃಶಂ-ಈ ಪ್ರಕಾರವಾದ, ಜ್ಞಾನಂ-ಜ್ಞಾನ ಶಾಸ್ತ್ರವನು, ಪ್ರವರ್ತಯಾ-ಶಿಷ್ಯಪ್ರಶಿಷ್ಯ ಪರಂಪರೆಯಿಂ ಪ್ರವರ್ತನಂ ಮಾಡಿಸು ॥೮೭॥

ಇತ್ಯುಕ್ತ್ವಾ ಪಶ್ಯತಸ್ತಸ್ಯ ಪರಸ್ತಾದೇವ ರೇಣುಕಃ
ಅಂತರ್ದಧೇ ಮಹಾದೇವಂ ಚಿಂತಯನ್ನಂತರಾತ್ಮನಾ

ಇತ್ಯುಕ್ತ್ವಾ-ಹೀಗೆಂದು ನುಡಿದು, ಪಶ್ಯತಃ-ನೋಡುತಿರ್ದ, ತಸ್ಯ-ಆ ಅಗಸ್ತ್ಯ ಮುನೀಶ್ವರನ, ಪುರಸ್ತಾದೇವಃ-ಮುಂದೆಯೆ, ರೇಣುಕಃ-ರೇಣುಕ ಗಣೇಶ್ವರನು, ಅಂತರಾತ್ಮನಾ-ಮನಸ್ಸಿನಿಂದೆ, ಮಹಾದೇವಂ-ಪರಮೇಶ್ವರನನು, ಚಿಂತಯನ್-ಧ್ಯಾನಿಸುತ್ತವು, ಅಂತರ್ದಧೇ-ಅಂತರ್ಧಾನದಿಂ ಬಯಲಾದನು ॥೮೮॥

ಅಂತರ್ಹಿತೇ ತದಾ ತಸ್ಮಿನ್ಮುನಿರಾಶ್ಚರ್ಯ ಸಂಕುಲಃ
ತಚ್ಛಾಸ್ತ್ರ ಪ್ರವಣೆ ಭೂತ್ವಾ ಸಮವರ್ತತ ಸಂಯಮೀ

ತದಾ-ಆ ಕಾಲದಲ್ಲಿ, ತಸ್ಮಿನ್-ಆ ರೇಣುಕ ಗಣೇಶ್ವರನು, ಅಂತರ್ಹಿತೆ ಸತಿ-ಬಯಲಾಗಲಾಗಿ, ಸಂಯಮಿ-ಜಿತೇಂದ್ರಿಯನಾದ, ಮುನಿಃ-ಅಗಸ್ತ್ಯ ಮುನೀಶ್ವರನು, ಆಶ್ಚರ್ಯಸಂಕುಲಃ-ಆಶ್ಚರ್ಯದಿಂದಿಟ್ಟಣಿಸಿದ, ಮನವನುಳ್ಳಾತನಾಗಿ, ತಚ್ಛಾಸ್ತ್ರಪ್ರವಣಃ-ಆ ಜ್ಞಾನಶಾಸ್ತ್ರದಲ್ಲಿ ಪ್ರೀತಿಯುಳ್ಳಾತನು, ಭೂತ್ವಾ-ಆಗಿ, ಸಮವರ್ತತ-ಆನಂದದಿಂದಿರುತಿರ್ದನು ॥೮೯॥

ಯಃ ಇದಂ ಶಿವಸಿದ್ಧಾಂತಂ ವೀರಶೈವಮತಂ ಪರಂ
ಶೃಣೋತಿ ಶುದ್ಧಮನಸಾ ಸ ಯಾತಿ ಪರಮಾಂ ಗತಿಃ

ಯಃ-ಆವಾತನು, ಇದಂ-ಈ ಪ್ರಕಾರಮಾದ, ವೀರಶೈವಮತಂ-ವೀರಶೈವ ಮಾರ್ಗಕ್ಕೆ ಸಮ್ಮತವಾದ, ಪರಂ-ಲೋಕೋತ್ತರಮಾದ, ಗತಿಂ-ಮೋಕ್ಷ ಗತಿಯನು, ಯಾತಿ-ಯೆಯ್ದುತಿರ್ದನು ॥೯೦॥

ಇತಿ ಶ್ರೀವೀರಶೈವ ಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ
ಐಕ್ಯಸ್ಥಲ ವಿಷಯ ನವಲಿಂಗಸ್ಥಲಪ್ರಸಂಗೋನಾಮ ವಿಂಶತಿತಮಪರಿಚ್ಛೇದಃ

ಅನುಬಂಧ

೧. ಸಮ್ಮತಿಶ್ಲೋಕಗಳು

ಪರಿಚ್ಛೇದ ೬ ಶ್ಲೋಕ ೬೬ ರ ಅನಂತರ-

ಲಿಂಗಧಾರಣಮಾಹಾತ್ಮ್ಯಂ ಮುನಿಭಿಃಗೌತಮಾದಿಭಿಃ
ಪುರಾಸರಸ್ವತೀತೀರೆ ಸಮಾಖ್ಯಾತಂ ಮುಮುಕ್ಷುಭಿಃ ॥೧॥

ಲಿಂಗಾತ್ಸರ್ವಂ ಜಗಜ್ಜಾಲಂ ಲಿಂಗೆ ಸರ್ವ ಪ್ರತಿಷ್ಠಿತಂ
ತಥೈವಾಪ್ನೋತಿ ವಿಲಯಂ ತಸ್ಮಾಲ್ಲಿಂಗಮಿತಿಸ್ಮೃತಂ ॥೨॥

ಬ್ರಹ್ಮವಿಷ್ಣೋಃ ಪರಮಾನಂ ಭಂಗಾಯೋದ್ಭೂತಮೈಶ್ವರಂ
ಪವಿತ್ರಂ ತತ್ವವಿತ್ರಾಣಾಂ ಮಂಗಳಸ್ಯಾಪಿಮಂಗಳಂ ॥೩॥

ದೈವತಾದೇವತಾನಾಂ ಚ ಗತಿಂ ಪರಮಂಗತಿಂ
ಧಾರಣೀಯಂ ಪ್ರಯತ್ನೇನ ಜ್ಯೋತಿರ್ಲಿಂಗಮನಾಮಾಯಾ ॥೪॥

ಲಿಂಗಧಾರಣ ಮಾತ್ರೇಣ ಪೂತೋಭವತಿ ಮಾನವಃ
ತಸ್ಮಾತ್ಸರ್ವ ಪ್ರಯತ್ನೇನ ವಿವೇಕಿಚ್ಛಿನ್ನ ಸಂಶಯಃ ॥೫॥

ಸಂಸಾರಾನ್ಮೋಕ್ಷಮಾಪ್ನೋತಿ ಲಿಂಗಂಧಾರಯೇ ಲಿಂಗಮೈಶ್ವರಂ
ಲಿಂಗಧಾರಣ ಮಹಾತ್ಮ್ಯಂ ಪೂಜಾಕಾಲೇತು ಯಃ ಪಠೇತ್ ॥೬॥

ಪ್ರಸೀದತಿ ಶಿವಸ್ತಸ್ಯ ತತ್ಪ್ರಸಾದಾದ್ವಿಮುಚ್ಯತೆ
ಏವಂ ಶೃತಿ ಸ್ಮೃತಿ ಪುರಾಣ ಶಿವಾಗಮೋಕ್ತಂ ಪುಣ್ಯಂ ॥೭॥

ಪವಿತ್ರಮಪಿಪಾಪಹರಂ ಶಿವಂ ಚ ಯೋಲಿಂಗಧಾರಣಮಿದಂ
ಶೃಣಯಾದ್ವೇದಾದಿ ನೈವಂ ಪರಂಪರಮವಾಪ್ನೋದರೇಣಯಾಯಾತ್ (?) ॥೮॥

ಪರಿಚ್ಛೇದ ೭ ಶ್ಲೋಕ ೪೩ ರ ಅನಂತರ

ರಮೇತೀಹಪುರಾಣಾನಿ ಭೂಯೋ ಭೂಯೋ ವರಾನನೆ
ನಿತ್ಯಂ ಮುಮುಕ್ಷುಭಿಃ ಸದಾ ಧಾರಣೀಯಂ ತ್ರಿಪುಂಡ್ರಕಂ ॥೯॥

ತ್ರಿಪುಂಡ್ರಧಾರಣಾತ್ಸದ್ಯಃ ಭೂತೋಭವತಿ ಮಾನವಃ
ಸರ್ವಸಂಸಾರ ನಿರ್ಮುಕ್ತೋ ಶಿವಸಾಯುಜ್ಯಮಾಪ್ನೋತಿ ॥೧೦॥

ಧರ್ಮಾರ್ಥಕಾಮಮೋಕ್ಷಾಣಾಂ ಕಾರಣಂ ಚ ತ್ರಿಪುಂಡ್ರಕಂ
ಅನೇಕ ವೇದವಿಹಿತಂ ಧಾರಣೀಯಂ ದ್ವಿಜೋತ್ತಮೈಃ ॥೧೧॥

ಅಗ್ನಿಹೋತ್ರಂ ಚ ಯಜ್ಞಂ ಚ ಭಸ್ಮಧಾರಣಪೂರ್ವಕಂ
ಕುರ್ವೀತಕರ್ಮ ಸಿದ್ಧ್ಯರ್ಥಮನ್ಯಥಾ ನಿಃಫಲಂ ಭವೇತ್ ॥೧೨॥

ಸತ್ಯಂಗಚ್ಛಿತಂ ವಚ್ಮಿರುಜುಪಾಯಂ ಪುನಃ ಪುನಃ
ಅನಾಯಾಸೇನ ಸಿದ್ಧ್ಯರ್ಥಂ ಧಾರ್ಯಂ ಭಸ್ಮತ್ರಿಪುಂಡ್ರಕಂ ॥೧೩॥

ಭಸ್ಮತ್ರಿಪುಂಡ್ರ ಹೀನಸ್ಯ ಕರ್ಮ ಸರ್ವ ನಿರರ್ಥಕಂ
ತುಪಾವಘಾತಿನೋಯದ್ವತ್ಕೇಶಮಂತ್ರಂ ವಿಶಿಷ್ಯತೇ ॥೧೪॥

ಭಸ್ಮಧಾರಣ ಮಹಾತ್ಮ್ಯಂ ಜಾಬಾಲಶೃತಿರಾಹತೆ
ತಸ್ಮಾತ್ಸರ್ವ ಪ್ರಯತ್ನೇನ ಭಸ್ಮಧಾರ್ಯಂ ದ್ವಿಜೋತ್ತಮೈಃ ॥೧೫॥

ಪರಿಚ್ಛೇದ ೭ ಶ್ಲೋಕ ೬೭ ರ ಅನಂತರ

ರುದ್ರನೇತ್ರ ಸಮುತ್ಪನ್ನಂ ರುದ್ರಾಕ್ಷಮತಿ ಪಾವನಂ
ಯೋಧಾರಯಂತಿ ಶುದ್ಧಾತ್ಮ ಶಿವಭಕ್ತಸ್ಸಮುಚ್ಯತೇ ॥೧೬॥

ರುದ್ರಾಕ್ಷಮಾಲಾಂ ಕಂಠೇಶು ಯೋ ಧಾರಯಂತಿಸರ್ವದಾ
ನ ತಸ್ಯಸ್ತು ನರಾವೃತ್ತಿಃ ಘೋರಸಂಸಾರವರ್ತ್ಮನಿ ॥೧೭॥

ರುದ್ರಾಕ್ಷೇಣ ಜಪಂ ನಿತ್ಯಃ ಜಪಸ್ಯಾನಂತ್ಯಮಾಶ್ರುತೇ
ಮುಮುಕ್ಷುಸ್ಸಪ್ತವಿಂಶತ್ಯಾ ಜಪನ್ರುದ್ರಾಕ್ಷಮಾಲಯಾ ॥೧೮॥

ಶಿವಸಾಯುಜ್ಯ ಮಾಪ್ನೋತಿತ್ಯನೇಕ ಶೃತಿ ಶಾಸನಂ
ವಶಿಷ್ಠಾದ್ಯಾಶ್ಚಮುನಯೋ ನಾರದಾದ್ಯಾಶ್ಚಯೋಗಿನಃ ॥೧೯॥

ಧಾರಯಂತಿ ಸದಾಕಂಠೇ ರುದ್ರಾಕ್ಷಂ ರುದ್ರನೇತ್ರಜಂ
ಶೃತಿಸ್ಮೃತೀತಿಹಾಸೇಷು ಘೋರಾಣಿಷ್ವಖಿಲೇಷು ಚ ॥೨೦॥

ರುದ್ರಾಕ್ಷಧಾರಣಂ ನಿತ್ಯಂ ವಿಹಿತಂ ಮೋಕ್ಷಸಿದ್ಧಯೇ
ಕರ್ಣಿಯಸ್ಯಾಸ್ತಿರುದ್ರಾಕ್ಷಂ ಮೃತ್ಯುಕಾಲೇ ವಿಶೇಷತಃ ॥೨೧॥

ನತಸ್ಯ ಪುನರಾವೃತ್ತಿರಿತಿರ್ವೇದೇಷು ನಿರ್ಣಯಃ
ರುದ್ರಾಕ್ಷಂ ಶಿವನಿರ್ಮಾಲ್ಯಂ ಮಸ್ತಕೇ ಯಸ್ಯವರ್ತತೇ ॥೨೨॥

ಯಕ್ಷ ರಾಕ್ಷಃ ಪಿಶಾಚಾದ್ಯಸ್ತಸ್ಯಾದಿಭಿರ್ಚ್ಯತ್ಸರ್ವದಾ ॥೨೩॥

ಪರಿಚ್ಛೇದ ೮ ಶ್ಲೋಕ ೫೦ ರ ಅನಂತರ

ಉಕ್ತತ್ರಿಪುಂಡ್ರ ಮಹಾತ್ಮ್ಯಂ ರುದ್ರಾಕ್ಷಸ್ಯ ತಥಾ ಮುನೆ
ಅಧುನಾ ಸಂಪ್ರವಕ್ಷ್ಯಾಮಿ ಶಿವಪಂಚಾಕ್ಷರಂ ಶೃಣು ॥೨೪॥

ನಕಾರಂ ಪ್ರಥಮಃ ಪಶ್ಚನ್ಮಕಾರಸ್ತುವಿಸರ್ಗವಾನ್
ಶಿವಶಬ್ದತೃತೀಯಸ್ಯದ್ವಾಕಾರಾಸ್ತು ಚತುರ್ಥತಃ ॥೨೫॥

ಯಕಾರಂ ಪಂಚಮಂ ಪ್ರೋಕ್ತಂ ಆದೌ ಪ್ರಣವ ಇಷ್ಯತೆ ॥೨೬॥

ಸರ್ವವರ್ಣಾಧಿಕಾರೋಯಂ ಮಾತ್ರಃ ಪ್ರಣವವರ್ಜಿತಃ
ಮುಮುಕ್ಷುಭಿರ್ದ್ವಿಚೈರ್ಜಪ್ಯೋಮಂತ್ರಃ ಪ್ರಣವಸಂಯುತಃ ॥೨೭॥

ಸರ್ವಾಧಿಕಾರೋಮಂತ್ರೋಯಂ ಪ್ರಣವೇನ ಮಹಾಮುನೆ
ದ್ವಿಜೈರೋಂಕಾರ ಸಂಯುಕ್ತೋ ಜಪ್ಯೋ ಮಂತ್ರಂ ಶಿವಾತ್ಮಕಂ ||೨೮||

ಸರ್ವೇಶ್ವರಸ್ಯ ಭರ್ಗಸ್ಯ ಸರ್ವಜ್ಞಸ್ಯ ಭವತ್ಯಿವಃ
ಪಾಪತತ್ವಾದಯಂ ಮಂತ್ರಂ ಸರ್ವಮಂತ್ರಾಧಿಕೋ ಮತಃ ||೨೯||

ನಿತ್ಯಂ ಜಪ್ಯೋಮಹಾ ಮಂತ್ರಃ ಶಿವಭಕ್ತೇನ ಧೀಮತಃ
ತ್ರಿಕಾಲಮೇಕಕಾಲಂ ವಾ ಸಹಸ್ರಂ ವರ್ಣಸಂಖ್ಯಯಾ ||೩೦||

ಧರ್ಮಮರ್ಥಂ ಚ ಕಾಮಂ ಚ ಮಾಪ್ನೋತಿ ಸಾಪ್ರಯತ್ನತಃ
ನಿಃಕಾಮೇನ ಕುತೋ ನಿತ್ಯಂ ಪ್ರಸೂತೆ ಮೋಕ್ಷಸಂಪದಂ ||೩೧||

ಮಂತ್ರಸ್ಯಾಸ್ಯ ಪ್ರಭಾವೇನ ಬ್ರಹ್ಮ ವಿಷ್ಣುಶ್ಚಪತಿಃ
ಸರ್ವದೇವಾ ಕುಬೇರಾದ್ಯಾಋಷಯೊ ನಾರದಾದಯಃ ||೩೨||

ವಶಿಷ್ಠಾದ್ಯಾಸ್ತಥಾ ವಿಪ್ರೋಸಂಸಿದ್ಧಾಲೋಕ ಪೂಜಿತಃ
ಸೃಷ್ಟಿಸ್ಥಿತ್ಯಾದಿ ಕರ್ಮಾಣಿ ಕುರ್ವಂತಿ ಶಿವಧರ್ಮಿಣಂ ||೩೩||

ಯೋಜಪೇದಿದಂ ಮಧ್ಯಾಯಾಂ ಜಪಾಂತೆ ಪ್ರಯತೋದ್ವಿಜಃ
ಪ್ರಸೀದತಿ ಶಿವಸ್ತಸ್ಯ ಭಕ್ತಿವಶ್ಯೋಜಗತ್ಪತಿಃ ||೩೪||

ಕರ್ಮಾಂತೇ ಯಸ್ಮರೇನ್ನಿತ್ಯಂ ಸ್ತೋತ್ರಮೇತನ್ಮಹಾಮುನೇ
ಕರ್ಮಸಿದ್ಧಿರ್ಭವೇತ್ತಸ್ಯ ದದಾತಿ ಸ್ವಗುಣಂ ಫಲಂ ||೩೫||

ಪರಿಚ್ಛೇದ ೧೦ ಶ್ಲೋಕ ೨೦ ರ ಅನಂತರ -

ಮಾಹೇಶ್ವರಂ ಪ್ರಶಂಸಾಂತು ಶೃಣುಯಾವಚ್ಛಾ ್ರವಯೇಚ್ಛಯಃ
ಸರ್ವಕಲ್ಮಶ ನಿರ್ಮುಕ್ತೋ ವೀರಮಾಹೇಶ್ವರೋ ಭವೇತ್ ||೩೬||

ಪರಿಚ್ಛೇದ ೧೦ ಶ್ಲೋಕ ೨೯ ರ ಅನಂತರ

ಮಹಾತ್ಮಂ ಲಿಂಗನಿಷ್ಠಾಯಾಂ ವಿಪ್ರೋವೇತ್ತಿ ತತ್ವರಃ
ಸ ಲಿಂಗನಿಷ್ಠಹೃದಯಶ್ಶಿವಲೋಕೇ ಮಹೀಯತೇ ||೩೭||

ಪರಿಚ್ಛೇದ ೧೦ ಶ್ಲೋಕ ೩೮ ರ ಅನಂತರ -

ಪೂರ್ವಾಶ್ರಯ ನಿರಾಸಸ್ಯ ವ್ಯವಸ್ಥಯಸ್ತು ತತ್ವತಃ
ಗುರುಪ್ರಸಾದತೋ ವೇತ್ತಿ ಶಿವ ಭಕ್ತಿಂ ಸವಿಂದತಿ ||೩೮||

ಪರಿಚ್ಛೇದ ೧೦ ಶ್ಲೋಕ ೪೬ ರ ಅನಂತರ -

ಸರ್ವಾದ್ವೈತ ನಿರಾಸೌ ಯಃ ಸಮ್ಯಜ್ಞಾನಮವಾಪ್ನುಯಾತ್
ಪ್ರಸೀದತಿ ಶಿವಸ್ತಸ್ಯ ತತ್ಪ್ರಸಾದಾದ್ವಿಮುಚ್ಯತೇ ||೩೯||

ಪರಿಚ್ಛೇದ ೧೦ ಶ್ಲೋಕ ೫೦ ರ ಅನಂತರ

ಆವಾಹನೋದ್ವಾಸನೇ ಚ ಅರ್ಚಯಾನ್ಯೈವ ತಾರಯತ್
ಆಸನಾದೀನಿ ಕುರ್ವೀತ ಶಿವಭಕ್ತೋಹ್ಯಹರ್ನಿಶಂ ||೪೦||

ಪರಿಚ್ಛೇದ ೧೦ ಶ್ಲೋಕ ೭೯ ರ ಅನಂತರ

ಸರ್ವಜ್ಞತ್ವ ನಿರಾಸಂ ಚ ಶಿವತ್ವಂ ಭಕ್ತ ವಿಶ್ವಯೋಃ
ಯೇವೇತ್ತಿ ತತ್ವ ತಸ್ತಸ್ಯ ಪ್ರಸೀದತಿ ಮಹೇಶ್ವರಃ ॥೪೧॥

ಮಾಹೇಶ್ವರಸ್ಥಲಮಿದಂ ಪರಮಂ ಪವಿತ್ರಂ ಪುಣ್ಯಂ
ಸಮಸ್ತ ದುರಿತೌಘಹರಂ ಹರಸ್ಯ ಉಕ್ತಾಯ ಯಃ ॥೪೨॥

ಪ್ರತಿದಿನಂ ಜಪತಿ ಪ್ರಭಾತೆ ಭಕ್ತಿಃ ಶಿವೇಶು ಲಭತೇ
ಭವಪಾಶಹರ್ತಿಂ ? ॥೪೩॥

ಪರಿಚ್ಛೇದ ೧೧ ಶ್ಲೋಕ ೨೫ ರ ಅನಂತರ -

ಲಭ್ಯತೆ ಗುರುಭಕ್ತೈವ ಪುರುಷಾರ್ಥಂ ಚತುಷ್ಟಯಂ
ಗುರುಭಕ್ತಿ ವಿಹೀನಸ್ಯ ಸಂಸೃತಿರ್ನನಿವರ್ತತೇ ॥೪೪॥

ತಸ್ಮಾತ್ಸರ್ವ ಪ್ರಯತ್ನೇನ ಗುರೌಭಕ್ತಿಂ ಸಮಾಚರೇತ್ ॥೪೫॥

ಪರಿಚ್ಛೇದ ೧೧ ಶ್ಲೋಕ ೩೫ ರ ಅನಂತರ -

ಯೋ ಲಿಂಗ ವೈಭವ ಭಕ್ತ್ಯಾ ಶೃಣೋತಿ ಶ್ರದ್ಧಯತ್ತುಯಃ
ಸರ್ವಸಂಸಾರ ನಿರ್ಮುಕ್ತಃ ಶಿವಲೋಕೆ ಮಹೀಯತೇ ॥೪೬॥

ಪರಿಚ್ಛೇದ ೧೨ ಶ್ಲೋಕ ೧೨ ರ ಅನಂತರ -

ಯಃ ಪ್ರಾಣಲಿಂಗ ಮಹಿಮಾಮಿಮಂತು ಭಕ್ತ್ಯಾ
ಪುಣ್ಯಂ ಪವಿತ್ರಂ ಸಂಹಾರಣೆ ಸಮರ್ಥ ಸರ್ವೇಶ್ರುತಿ ಸ್ಮೃತಿ -
ಪುರಾಣ ರಹಸ್ಯ ಮಂತ್ರಂ ॥೪೭॥ ?

ಪರಿಚ್ಛೇದ ೧೨ ಶ್ಲೋಕ ೨೧ ರ ಅನಂತರ -

ಪ್ರಾಣಲಿಂಗಾರ್ಚನ ವಿಧಿಂ ಯೋದದ್ಯಾದ್ಗುರುಸೇವಯಾ
ರಾಜಯೋಗ ಬಲಂ ಪ್ರಾಪ್ಯ ಶಿವೇನ ಸಹಮೋದಿತೇ ॥೪೮॥

ಪರಿಚ್ಛೇಧ ೧೨ ಶ್ಲೋಕ ೫೦ ರ ಅನಂತರ -

ಯೋಗಲ್ಲಿಂಗಸ್ಯಮಾಹಾತ್ಮಂ ತತ್ವತೋವ್ಯಕ್ತಿ ಮಾನವಃ
ಸಃ ಪ್ರಾಣಲಿಂಗ ನಿರತ ಇಹಾಮೃತ ಸುಖೀಭವೇತ್ ॥೪೯॥

ಪರಿಚ್ಛೇದ ೧೩ ಶ್ಲೋಕ ೧೦ ರ ಅನಂತರ -

ಶ್ರೀಮದ್ಗುರುಪದಾಂಭೋಜ ಕೃಪಾಲೋಕಾನುಭಾವತಃ
ವಿದ್ಯಾತ್ಯರಣಮಹಾತ್ಮಂ ಸಂಸಾರಭಯನಾಶನಂ ॥೫೦॥

ಪರಿಚ್ಛೇದ ೧೩ ಶ್ಲೋಕ ೧೯ ರ ಅನಂತರ-

ಯಸ್ತಾಮಸ ನಿರಾಸಸ್ಯ ವಿಧಿಂ ವ್ಯಕ್ತಿ ಗುರುಪ್ರಿಯಃ
ತಸ್ಯ ತುಷ್ಟೋದ್ಭವೇತ್ಯಂಭುಃ ಸಂಸಾರಾಂಬೋಧಿ ನಾವಿಕಂ ॥೫೧॥

ಪರಿಚ್ಛೇದ ೧೩ ಶ್ಲೋಕ ೨೭ ರ ಅನಂತರ

ನಿರ್ದೇಶ ಮಹಿಮಾಲೋಕೆ ನಿರ್ದಿಷ್ಟಂ ಶೈವ ಶಕ್ಯತೇ
ತಥಾಪಿ ಗುರುಕಾರುಣ್ಯದ್ಯೋವೇತ್ತಿ ಸ ಶಿವೋಧಿಕಂ ॥೫೨॥

ಪರಿಚ್ಛೇದ ೧೩ ಶ್ಲೋಕ ೩೫ ರ ಅನಂತರ -

ಇತಿ ಶರಣಮಹತ್ವಂ ಶೈವಂತು ತಂ ಪ್ರಸಿದ್ಧಂ ಪರಮಪುರುಷ
ನಿರ್ಣೀತಂ ಧರ್ಮ ಮೋಕ್ಷಾರ್ಥಹೇತುಂ ತರತಿ ಶಿವಪದಾಬ್ಜಾ
ಸಕ್ತಸರ್ವಾಕ್ಷ ವೃತ್ತಿ ಇಹಪರಮ ಶಾಂತಿಂಸ್ನೋಶ್ನತೆ ಮುಕ್ತಿ ಸಂಜ್ಞಾಂ (?) ॥೫೩॥

ಪರಿಚ್ಛೇದ ೧೪ ಶ್ಲೋಕ ೧೫ ರ ಅನಂತರ

ಐಕ್ಯಸ್ಥಲಸ್ಯ ಸಮಾಹಿತಮಾನಮಿಮಂ ಪ್ರಭಾತೇ
ಯಃಪಾಠಂ ಯತ್ಪಠತಿವಾಹರಮೋದತೇವಾ ॥೫೪॥

ಜ್ಞಾನಪ್ರಭಾವಮಧುನಾಖಿಲಕರ್ಮ ಬಂಧಃ
ಶಾಂತಿಂ ಪರಾಂ ತ್ರಿಣಯನೈಕ್ಯಮಸೌಪ್ರಯಾತಿ ॥೫೫॥

ಪರಿಚ್ಛೇದ ೧೪ ಶ್ಲೋಕ ೨೭ ರ ಅನಂತರ -

ನಿರ್ಲೇಪಾಚಾರ ಸಂಪತ್ತಿರ್ಮಾಹಾತ್ಮ್ಯಯಸ್ತು ತತ್ವತಃ
ವೇತ್ತಿ ಕುರ್ವಾನ್ ಸಪಾಪೇನ ಕರ್ಮಣ್ಯೈವ ನ ಲಿಪ್ಯತೆ ॥೫೬॥

ಪರಿಚ್ಛೇದ ೧೪ ಶ್ಲೋಕ ೩೩ ರ ಅನಂತರ -

ಏಕಭಾಜನಮಹಾತ್ಮ್ಯಂ ಯಃ ಶ್ರದ್ಧಾಭಕ್ತಿ ಸಂಯುತಃ
ಯೋ ವೇತ್ತಿ ಶಿವಲೀನಾತ್ಮಾಮುಚ್ಯತೆ ಜ್ಞಾನ ಬಂಧನಾತ್ ॥೫೭॥

ಪರಿಚ್ಛೇದ ೧೪ ಶ್ಲೋಕ ೪೪ ರ ಅನಂತರ

ಯೋ ವಿಶ್ವಭೋಜನಮಹತ್ವ ಮಿದಂ ರಹಸ್ಯಂ
ಪುಣ್ಯಂ ಪರಾತ್ಪರಂ ಅಘೌಘಹರಂ ಪವಿತ್ರಂ
ಶ್ರೋತುರ್ಮನಃ ಶ್ರವಣಯೋರಮೃತಾಯಮಾನಂ
ಭಕ್ತ್ಯಾ ಶೃಣೋತಿ ಶಿವೇಷ್ಟತಮೋಮಹಾನ್ಸ್ಯಾತ್ ॥೫೯॥

ಶ್ರೀರೇಣುಕೋಷ್ಟಪುಟ ನಿಸ್ಸೃತಮಪ್ರಮೇಯಂ
ಧನ್ಯಂ ಯಶಸ್ಸಮತಿದುರ್ಲಭಮಾಪವರ್ಗಂ
ಸಂಸಾರಕೂಪಪತಿತೋತ್ತರಣಾವಲಂಬಂ
ಶೃತ್ಯೈವ ಮೃತ್ಯುಮುಖತೋಭವತಿ ಪ್ರಮುಕ್ತಃ ॥೬೦॥

ಕೃತಡನ್ವವಾಹಮಮೃತಾತ್ಮ ಸದುಸ್ತರಂತಂ
ಮಾಯಾಮಯಂ ಪರಮಗಾಧಮನಾದ್ಯನಂತಂ
ಶೈವಾಗಮಾಕಾರಶಿಖಾಮಣಿ ನಾಮಗ್ರೂಮಾ
ರೂಹ್ಯ ವತ್ಸಪದವತ್ಪವತಿ ಪ್ರಸನ್ನಕೆ ॥೬೧॥

ಪರಿಚ್ಛೇದ ೧೫ ಶ್ಲೋಕ ೨೦ ರ ಅನಂತರ

ಶಿಕ್ಷಾಗುರುಸ್ಥಲಸಾಸ್ಯಸ್ವರೂಪಂ ಯಸ್ತು ತತ್ವತಃ
ವ್ಯಕ್ತಿ ಶಿಷ್ಯಃ ಪ್ರಸಾದೇನ ಗುರೋಃ ಶೀಕ್ಷಾಂ ಪ್ರಪದ್ಯತೇ ॥೬೨॥

ಪರಿಚ್ಛೇದ ೧೫ ಶ್ಲೋಕ ೨೯ ರ ಅನಂತರ -

ಪ್ರಜ್ಞಾಗುರುರಯಂ ಸರ್ವಶಾಸ್ತ್ರೇಷು ಪರಿಕೀರ್ತಿತಃ
ನ ಕುರ್ಯಾತ್ತತ್ರಮಾನುಷ್ಯಬುದ್ಧಿ ಶಾಂತೆ ಶಿವಾತ್ಮಕೆ ॥೬೩॥

ಪರಿಚ್ಛೇದ ೧೫ರ ಶ್ಲೋಕ ೩೬ ರ ಅನಂತರ

ಕ್ರಿಯಾಲಿಂಗಾಖ್ಯ ಮಹಾತ್ಮಂ ಪುರಾಣಂ ಶೃತಿ ಸಮ್ಮತಂ
ಯಃ ಪಠೇಚ್ಛೃಣುಯಾದ್ಭಕ್ತ್ಯಾಸೋ ಚಿರೇಣೈವಮುಚ್ಯತೇ ॥೬೪॥

ಪರಿಚ್ಛೇದ ೧೫ ಶ್ಲೋಕ ೪೩ ರ ಅನಂತರ -

ಯಃ ಶ್ರಾವಯತಿ ಮಹಾತ್ಮಂ ಭಾವಲಿಂಗಸ್ಯಮಾನಸಃ
ಸಜೀವನೇವ ಮುಕ್ತಸ್ಯಾತ್ಸಯೋಗಿ ಸ ಚ ಪಂಡಿತಃ ॥೬೫॥

ಪರಿಚ್ಛೇದ ೧೫ ಶ್ಲೋಕ ೫೧ ರ ಅನಂತರ-

ವರ್ಷಕೋಟಿ ಸಹಸ್ರೇಣ ವರ್ಷಕೋಟಿ ಶತೇನ ಚ
ಜ್ಞಾನಲಿಂಗಸ್ಯಮಹಾತ್ಮ್ಯಂ ಸುದುರ್ಜ್ಞೇಯಂ ಸುರೈರಪಿ ॥೬೬॥

ಪರಿಚ್ಛೇದ ೧೫ ಶ್ಲೋಕ ೫೭ ರ ಅನಂತರ -

ಯಃ ಪಠೇತ್ಸ್ವಯ ಮಹಾತ್ಮ್ಯಂ ಭುಕ್ತಿ ಮುಕ್ತಿ ಫಲಪ್ರದಂ
ಸೋಚಿರೇಣೈವ ಕಾಲೇನ ಸ್ವಾಭಿಧಾನಂ ಪ್ರಪದ್ಯತೇ ॥೬೭॥

ಪರಿಚ್ಛೇದ ೧೫ ಶ್ಲೋಕ ೭೨ ರ ಅನಂತರ -

ಭಕ್ತಸ್ಥಾನಸಮಾಶ್ರಿತಂ ನವವಿಧಂ ಲಿಂಗಸ್ಥಲಂ ಪಾವನಂ
ಪುಣ್ಯಂ ಪಾಪಹರಂ ಸಮಸ್ತಜಗತಾಂ ಸೇವ್ಯಂ ವಿಮುಕ್ತಿಪ್ರದಂ
ಭಕ್ತಿಜ್ಞಾನ ವಿರಕ್ತಿದಂ ಶಮ ದಮ ಶ್ರದ್ಧಾ ತಿತಿಕ್ಷಾಪ್ರದಂ
ಶೃತ್ವ ಸಂಸ್ತುತಿ ಬಂಧನಾದ್ವಿಜವರೂರುಕ್ತಃ ಶಿವೈಕ್ಯ ವ್ರಜೇತ್ ॥೬೮॥

ಈ ಪ್ರಕಾರದಲ್ಲಿ ಭಕ್ತ ಸ್ಥಲ ವಿಷಯವಾಗಿರ್ದಂಥ ನವಲಿಂಗಸ್ಥಲವ ನಿರೂಪಿಸಲಾಗಿ ಅಗಸ್ತ್ಯಮುನೀಶ್ವರನು ಪ್ರಶ್ನೆಯನು ಮಾಡಿ ಕೇಳುತಿರ್ದಪಂ.

ಪರಿಚ್ಛೇದ ೧೬ ಶ್ಲೋಕ ೧೪ ರ ಅನಂತರ -

ಕ್ರಿಯಾಗಮ ಸ್ಥಲಸ್ಯಾಸ್ಯ ವೇತ್ತಿನಾವೇದವಿತ್ತುಮಾನ್
ವೇದವಿತ್ತತ್ತ್ವವೇತ್ತಿ ಮಹಾತ್ಮ್ಯಂ ವೇದ ವಿಶೃತಂ ॥೬೯॥

ಪರಿಚ್ಛೇದ ೧೬ ಶ್ಲೋಕ ೨೩ ರ ಅನಂತರ -

ಭಾವಾಗಮಸ್ಯ ಮಹಿಮಾನರುಮಾಚಭಕ್ತ್ಯಾ
ಯಃ ಪಠೇತ್ ಪಠತಿ ಸಂಶೃಣೋತಿ ತಸ್ಯಾ
ಪ್ರಸೀದತಿ ಶಿವಮಸ್ತು ಪರಾವರೇಶೌ
ದಿವ್ಯ ಪ್ರಯಚ್ಛತಿ ಸದುರ್ಲಭೋಗ ಜಾತಂ (?) ॥೭೦॥

ಪರಿಚ್ಛೇದ ೧೬ ಶ್ಲೋಕ ೩೩ರ ಅನಂತರ -

ಜ್ಞಾನಾಗಮಸ್ಯ ಮಾಹಾತ್ಮ್ಯಂ ಸರ್ವವೇದ ವಿನಿಶ್ಚಿತಂ
ಶೃಣೋತಿ ಶ್ರಾವಯೇದ್ಯೋಮ ಸ ಮತ್ತೋನಾತ್ರ ಸಂಶಯಃ ॥೭೧॥

ಪರಿಚ್ಛೇದ ೧೬ ಶ್ಲೋಕ ೪೭ರ ಅನಂತರ -

ಸಕಾಯೊಕಾಯ ಇತ್ಯಾತಿ ಶ್ರುತಿ ಸಿದ್ಧಂ ಸ್ಥಲಂ ದ್ವಯಂ
ವಿಪ್ರಾವೇದಾಂತ ನಿಷ್ಠಾಂತೋ ಜಾನಿತೇನೇತರೊ ಜನಾಃ ॥೭೨॥

ಪರಿಚ್ಛೇದ ೧೬ ಶ್ಲೋಕ ೬೬ರ ಅನಂತರ -

ಧರ್ಮಾಚಾರಸ್ಯ ಮಾಹಾತ್ಮ್ಯಂ ರಹಸ್ಯಂ ವೇದ ಬೋಧಿಕಂ
ಯೋವೇತ್ತಿ ತತ್ವ ತೋ ಭಕ್ತಃ ಸ ಶಿವಸ್ಯ ಮಮೋಭವೇತ್ ॥೭೩॥

ಪರಿಚ್ಛೇದ ೧೭ ಶ್ಲೋಕ ೧೩ರ ಅನಂತರ

ಕಾಯಾನುಗ್ರಹ ಮಾಹಾತ್ಮ್ಯಂ ದುರ್ಲಭಂ ಕರ್ಮಿಣಾಂ ನೃಣಾಂ
ಯೇ ವೇತ್ತಿ ತತ್ವತಃ ಸೋಯಂ ಶಿವಸಾಯುಜ್ಯಮಾಪ್ನುಯಾತ್ ॥೭೪॥

ಪರಿಚ್ಛೇದ ೧೭ ಶ್ಲೋಕ ೨೩ರ ಅನಂತರ -

ಇಂದ್ರಿಯಾನುಗ್ರಹಸ್ಯಾಸ್ಯ ಮಹಾತ್ಮ್ಯಮತಿ ದುರ್ಲಭಂ
ಪುಣ್ಯಂ ಸ ಚಕ್ಷುರಿತ್ಯಾದಿ ಶ್ರುತಿಸಿದ್ಧಂ ಸನಾತನಂ ॥೭೫॥

ಪರಿಚ್ಛೇದ ೧೭ ಶ್ಲೋಕ ೩೩ರ ಅನಂತರ -

ಪ್ರಾಣಾನುಗ್ರಹಣಂ ತ್ವೇಕದ್ಯೋಗಿನಾಂ ಸುಲಭಂ ಮಹತ್
ಜ್ಞಾತ್ವಾ ಪುಮಾನ್ವಿಮುಚ್ಯೇತ ಜನ್ಮ ಸಂಸಾರ ಬಂಧನಾತ್ ॥೭೬॥

ಪರಿಚ್ಛೇದ ೧೭ ಶ್ಲೋಕ ೬೪ರ ಅನಂತರ -

ಶಿಷ್ಯಸ್ಥಲಮಿದಂ ಗುಹ್ಯಂ ಯಃ ಪಠೇಚ್ಛೃಣುಯಾದಪಿ
ಸತಾಂಗತ್ವಾ ಶಿವೇ ಭಕ್ತಿಂ ಶಿವೇನ ಸಹ ಮೋದತೇ ॥೭೭॥

ಪರಿಚ್ಛೇದ ೧೭ ಶ್ಲೋಕ ೭೮ರ ಅನಂತರ -

ಶುಶ್ರೂಷಸ್ಥಲ ಮಾಹಾತ್ಮ್ಯಂ ವೇದಗುಹ್ಯಂ ಸನಾತನಂ
ಸ್ವರ್ಗಾಪವರ್ಗ ಯೋರ್ಹೇತುಶ್ಶೃತ್ವಾ ಗುರುಃ ಪರೋಭವೇತ್ ॥೭೮॥

೨. ಗ್ರಂಥಕಾರನ ಅರ್ಥಕೋಶ

೩. ಗ್ರಂಥ ಪ್ರಮಾಣ

ಪರಿಚ್ಛೇದ ೯ ಶ್ಲೋಕ ೯೭ ರ ಅನಂತರ

೧. ಇತಿ ಭಕ್ತ ಸ್ಥಲ೧೫ ಕ್ಕಂ ವಿವರ -

ಪಿಂಡಪಿಂಡಜ್ಞಾನ ಸ್ಥಲಕ್ಕೆ ಸೇರಿದ ಗ್ರಂಥ ೭೮ ಗುರುಕರುಣಲಿಂಗಧಾರಣಸ್ಥಲಕ್ಕೆ ಸೇರಿದ ಗ್ರಂಥ ೬೨ ವಿಭೂತಿ ರುದ್ರಾಕ್ಷಿಯ ಸ್ಥಲಕ್ಕೆ ಸೇರಿದ ಗ್ರಂಥ ೬೮ ಪಂಚಾಕ್ಷರಿ ಸ್ಥಲಕ್ಕೆ ಸೇರಿದ ಗ್ರಂಥ ೫೦ ಭಕ್ತಿಸ್ಥಲವೇಳರಿಂದ ಸೇರಿದ ಗ್ರಂಥ ೬೫ ಅಂತೂ ೩೫೩ಕ್ಕಂ ಮಂಗಳ ಮಹಾಶ್ರೀ

೨. ಪರಿಚ್ಛೇದ ೧೮ ಶ್ಲೋಕ ೪೪ರ ಅನಂತರ

ಭಕ್ತ ಸ್ಥಲ ೧೫ಕ್ಕೆ ಗ್ರಂಥ ೩೫೩ ಮಾಹೇಶ್ವರ ಸ್ಥಲ ೯ ಕ್ಕೆ ೭೦ ಪ್ರಸಾದಿ ಸ್ಥಲ ೭ಕ್ಕೆ ೭೮ ಪ್ರಾಣಲಿಂಗಿಸ್ಥಲ ೫ ಕ್ಕೆ ೪೩ ಶರಣಸ್ಥಲ ೪ಕ್ಕೆ ೩೬ ಐಕ್ಯಸ್ಥಲ ೪ಕ್ಕೆ ೪೩ ಅಂತೂ ಅಂಗಸ್ಥಲ ೪೪ಕ್ಕೆ ಗ್ರಂಥ ೬೨೩ಕ್ಕಂ ಮಂಗಳಂ

೩. ಪರಿಚ್ಛೇದ ೨೦ ಶ್ಲೋಕ ೮೯ರ ಅನಂತರ -

ಅಂಗಸ್ಥಲಕ್ಕೆ ಸೇರಿದ ಗ್ರಂಥ ಭಕ್ತ ಸ್ಥಲ ೧೫ಕ್ಕೆ ಸೇರಿದ ಗ್ರಂಥ ೩೫೩ ಮಾಹೇಶ್ವರ ಸ್ಥಲಕ್ಕೆ ಸೇರಿದ ೭೦ ಪ್ರಸಾದಿ ಸ್ಥಲ ೬ಕ್ಕೆ ಸೇರಿದ ಗ್ರಂಥ ೭೮ ಪ್ರಾಣಲಿಂಗಿಸ್ಥಲ ೫ ಕ್ಕೆ ಸೇರಿದ ಗ್ರಂಥ ೪೩ ಶರಣಸ್ಥಲ ೪ಕ್ಕೆ ಸೇರಿದ ಗ್ರಂಥ ೩೬ ಐಕ್ಯಸ್ಥಲಕ್ಕೆ ಸೇರಿದ ಗ್ರಂಥ ೪೩ ಅಂಗಸ್ಥಲ ೪೪ಕ್ಕೆ ಸೇರಿದ ಗ್ರಂಥ ೬೨೩ ಲಿಂಗಸ್ಥಲಕ್ಕೆ ಸೇರಿದ ಗ್ರಂಥ ಭಕ್ತನ ಆಚಾರ ಲಿಂಗ ಸ್ಥಲಕ್ಕೆ ಸೇರಿದ ಗ್ರಂಥ ೭೧ ಮಾಹೇಶ್ವರನ ಗುರುಲಿಂಗಸ್ಥಲ ೯ಕ್ಕೆ ಸೇರಿದ ಗ್ರಂಥ ೮೧ ಪ್ರಸಾದಿಯ ಶಿವಲಿಂಗ ಸ್ಥಲಕ್ಕೆ ಸೇರಿದ ಗ್ರಂಥ ೮೪ ಪ್ರಾಣಲಿಂಗಿಯ ಜಂಗಮ ಸ್ಥಲಕ್ಕೆ ಸೇರಿದ ಗ್ರಂಥ ೭೯ ಶರಣನ ಪ್ರಸಾದ ಲಿಂಗಸ್ಥಲ ೧೨ಕ್ಕೆ ಸೇರಿದ ಗ್ರಂಥ ೯೧ ಐಕ್ಯನ ಮಹಾಲಿಂಗಸ್ಥಲ ೯ ಕ್ಕೆ ಸೇರಿದ ಗ್ರಂಥ ೮೯ ಅಂತು ಲಿಂಗಸ್ಥಲ ೫೭ಕ್ಕೆ ಸೇರಿದ ಗ್ರಂಥ ೪೯೫ ಉಭಯಂ ಅಂಗಸ್ಥಲ ಲಿಂಗಸ್ಥಲ ೧೦೧ ಕ್ಕೆ ಸೇರಿದ ಗ್ರಂಥ ೧೧೧೮ ಸಮ್ಮತಿ ಸೂತ್ರ ಗ್ರಂಥ ಸಹ ೧೨೦೦ ಗ್ರಂಥ ಏಕೋತ್ತರಂ [illegible] ಸ್ಥಲ ಸಮಾಪ್ತಂ

೪. ಶ್ಲೋಕಗಳ ಅಕಾರಾದಿ

ಗ್ರಂಥಸೂಚಿ

೧. ಸಿದ್ಧಾಂತಶಿಖಾಮಣಿಃ (ಮರಿತೋಂಟದಾರ್ಯನ ತತ್ವಪ್ರದೀಪಿಕ ವ್ಯಾಖ್ಯಾನದೊಡನೆ) ಸಂಪಾದಕರು : ಡಾ. ಹೆಚ್. ಪಿ. ಮಲ್ಲೇದೇವರು, ಓರಿಯಂಟಲ್ ರಿಸರ್ಚ್ ಇನ್ಸಿಟ್ಯೂಟ್, ಮೈಸೂರು - ೧೯೯೫.

೨. ಸಿದ್ಧಾಂತಶಿಖಾಮಣಿ (ತತ್ತ್ವಪ್ರದೀಪಿಕ ವ್ಯಾಖ್ಯಾನದೊಡನೆ) ಸಂಪಾದಕರು: ಕರಿಬಸವಶಾಸ್ತ್ರಿ, ವಾಣಿವಿಲಾಸ ಪ್ರೆಸ್, ತೆಲುಗು ಲಿಪಿ.

೩. ಸಿದ್ಧಾಂತಶಿಖಾಮಣಿ - ತತ್ವಪ್ರದೀಪಿಕ ಮತ್ತು ಮರಾಠಿ ಅನುವಾದ, ನಿರ್ಣಯಸಾಗರ ಪ್ರೆಸ್, ಬಾಂಬೆ. ದೇವನಾಗಿರಿ ಲಿಪಿ. ೧೯೦೫

೪. ಸಿದ್ಧಾಂತ ಶಿಖಾಮಣಿ : ಪ್ರಕಟಣೆ - ಕಾಶಿವೀರಶೈವ ವಿದ್ವತ್ ಸಭ, ತೆಲುಗು ಲಿಪಿ.

೫. ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣಿಯು (ತಾತ್ಪರ್ಯದೀಪಿಕೆ ಎಂಬ ಕರ್ಣಾಟಕ ಟಿಪ್ಪಣದೊಡನೆ), ಆಸ್ಥಾನವಿದ್ವಾನ್ ವೇ. ಎನ್. ಆರ್. ಕರಿಬಸವಶಾಸ್ತ್ರಿ, ಮೈಸೂರು ೧೯೨೧.

೬. ಸಿದ್ಧಾಂತ ಶಿಖಾಮಣಿ - ನಾಗನೂರು ಮಠಾಧ್ಯಕ್ಷ ಪಂಡಿತಕಾಶಿನಾಥ ಶಾಸ್ತ್ರಿ ವಿರಚಿತ ಭಾವಪ್ರಕಾಶ ವ್ಯಾಖ್ಯಾನ ಸಹಿತ, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು - ೧೯೩೩.

೭. ಸಿದ್ಧಾಂತಶಿಖಾಮಣಿ ಸಂಗ್ರಹ - ಸಂಗ್ರಹಾನುವಾದ : ಡಾ. ಮಲ್ಲಿಕಾರ್ಜುನ ಪರಡ್ಡಿ, ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನಮಠ ಸಂಸ್ಥಾನಪೀಠ, ಬಾಳೆಹೊನ್ನೂರು.

೮. ಸಿದ್ಧಾಂತಶಿಖಾಮಣಿ (ಮೂರು ಉಪನ್ಯಾಸಗಳು) - ಡಾ. ಎಂ. ಶಿವಕುಮಾರಸ್ವಾಮಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೮೭.

೯. ಶಿವತತ್ವಚಿಂತಾಮಣಿ, ಸಂಪಾದಕರು : ಎಸ್. ಬಸಪ್ಪ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು - ೧೯೬೦.

೧೦. ಶಿವದಾಸಗೀತಾಂಜಲಿ, ಸಂಪಾದಕರು : ಎಲ್. ಬಸವರಾಜು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು - ೧೯೯೬.

೧೧. ಶಿವಾನುಭವ (೨೫ ವರ್ಷಗಳ ವರದಿಯು ೨೫-೧೨) ಸಂಪಾದಕರು ಫ.ಗು. ಹಳಕಟ್ಟಿ ೧೯೫೧.

೧೨. ರೇವಣಸಿದ್ಧರು - ಮಲ್ಲಿಕಾರ್ಜುನ, ಸದ್ಧರ್ಮದೀಪಿಕೆಯ ಪ್ರಕಾಶಕ, ಮೈಸೂರು - ೧೯೫೮.

೧೩. ಪ್ರಸಾದ - ಸಂಪಾದಕರು : ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು - ೧೯೬೪.

೧೪. ಸಿದ್ಧಾಂತಶಿಖಾಮಣಿ ಪೂಜ್ಯ ಶ್ರೀಮಲ್ಲಿಕಾರ್ಜುನ ಶಿವಯೋಗಿಗಳ ಪ್ರವಚನ ಸಾರ ಸಂಗ್ರಹ - ಶ್ರೀ ಸಿದ್ಧೇಶ್ವರ ಸ್ವಾಮಿಗಳು. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೯೯.

ಕನ್ನಡ ಸಾಹಿತ್ಯ ಪರಿಷತ್ತು ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ, ಮಹತ್ವಪೂರ್ಣವಾದ ಗ್ರಂಥಗಳನ್ನು ಕುರಿತು ಬಂದಿರುವ ಟೀಕುಗಳನ್ನು ಕೂಡ ಪ್ರಕಟಿಸುತ್ತ ಬಂದಿದೆ. ಹೀಗೆ ಪ್ರಕಟಿಸಿರುವ ಅನೇಕ ಕೃತಿಗಳಲ್ಲಿ ಸಿದ್ಧಾಂತ ಶಿಖಾಮಣಿಯನ್ನು ಕುರಿತು ವ್ಯಾಖ್ಯೆಗಳೂ ಸೇರಿವೆ. ಸಿದ್ಧಾಂತ ಶಿಖಾಮಣಿಯ ಕರ್ತೃ, ಕಾಲ, ದೇಶಗಳ ಬಗೆಗೆ ಸಾಕಷ್ಟು ದೀರ್ಘವಾದ ಚರ್ಚೆ ನಡೆದಿದೆ, ಇನ್ನೂ ನಡೆಯುತ್ತಿದೆ. ಇಷ್ಟೊಂದು ವ್ಯಾಪಕವಾದ ಚರ್ಚೆ ವಾಗ್ವಾದಗಳಿಗೆ ಕಾರಣವಾಗಬಹುದಾದ ಈ ಗ್ರಂಥ ಮಹತ್ವವಾದದ್ದೆಂಬುದರಲ್ಲಿ ಅನುಮಾನವಿಲ್ಲ. ವೀರಶೈವರ ಆಚಾರಸಂಹಿತೆಯಾದ ಈ ಕೃತಿಯನ್ನು ಕುರಿತು ಅನೇಕ ವಿದ್ವಾಂಸರು ತಮ್ಮ ದೃಷ್ಟಿಕೋನದಿಂದ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ತುಂಬಾ ಅಪರೂಪವಾದ ವ್ಯಾಖ್ಯಾನವನ್ನು ರಚಿಸಿದ ಕರ್ತೃ ಯಾರೆಂದು ಹೇಳಲಾಗದ ಈ ಕೃತಿಯೂ ಕೂಡ ಸಿದ್ಧಾಂತಶಿಖಾಮಣಿಯ ಅಭ್ಯಾಸಕ್ಕೆ ನೆರವಾಗಬಲ್ಲುದೆಂದು ನಾನು ಭಾವಿಸಿದ್ದೇನೆ.

ಎನ್. ಬಸವಾರಾಧ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು